ಡಾ. ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು : ಒಂದು ಅಧ್ಯಯನ

ಸಂಶೋಧಕರು
ಸತೀಶ ಪಾಟೀಲ
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಮಾರ್ಗದರ್ಶಕರು
ಡಾ. ಎ. ಎಸ್. ಆನಿಕಿವಿ
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ಅಭಿವೃದ್ಧಿ ಅಧ್ಯಯನ (ರಾಜ್ಯಶಾಸ್ತ್ರ) ವಿಷಯದಲ್ಲಿ
ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೧

ಡಾ. ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು : ಒಂದು ಅಧ್ಯಯನ

ಸಂಶೋಧಕರು

ಸತೀಶ ಪಾಟೀಲ

ಶ್ರೀ ಬಿ. ಆರ್. ದರೂರ

ಸಂಶೋಧನ ಕೇಂದ್ರ, ಹಾರೂಗೇರಿ

ಮಾರ್ಗದರ್ಶಕರು

ಡಾ. ಎ. ಎಸ್. ಆನಿಕಿವಿ

ಶ್ರೀ ಬಿ. ಆರ್. ದರೂರ

ಸಂಶೋಧನಾ ಕೇಂದ್ರ, ಹಾರೂಗೇರಿ

ಅಭಿವೃದ್ಧಿ ಅಧ್ಯಯನ (ರಾಜ್ಯಶಾಸ್ತ್ರ) ವಿಷಯದಲ್ಲಿ

ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೧

ಪ್ರಮಾಣ ಪತ್ರ

ಶ್ರೀ ಸತೀಶ ಪಾಟೀಲ ಅವರು ಪಿಎಚ್.ಡಿ. ಪದವಿಗಾಗಿ ಬರೆದು ಸಾದರಪಡಿಸಿದ **"ಡಾ. ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು : ಒಂದು ಅಧ್ಯಯನ"** ಎಂಬ ಮಹಾಪ್ರಬಂಧವು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಒಂದು ಮೂಲ ಸಂಶೋಧನ ಮಹಾಪ್ರಬಂಧವಾಗಿದೆ.

ಈ ಮಹಾಪ್ರಬಂಧವು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತಿದ್ದೇನೆ.

ಸ್ಥಳ : ಹಾರೂಗೇರಿ

ದಿನಾಂಕ: 10–01–2011

(ಡಾ. ಎ.ಎಸ್. ಆನಿಕಿವಿ)
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ.

ನಿರ್ದೇಶಕರು
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ
ಸಂಯೋಜನೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ

ಘೋಷಣಾ ಪತ್ರ

"ಡಾ. ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ. ಎ.ಎಸ್. ಆನಿಕಿವಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದ್ದು, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ (ರಾಜ್ಯಶಾಸ್ತ್ರ) ವಿಭಾಗದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸಲಾಗಿದೆ.

ಈ ಮಹಾಪ್ರಬಂಧ ಇಡಿಯಾಗಿಯಾಗಲಿ ಇಲ್ಲವೆ ಇದರಲ್ಲಿನ ಯಾವುದೇ ಭಾಗವಾಗಲಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 10-01-2011

(ಶ್ರೀ ಸತೀಶ ಕೆ. ಪಾಟೀಲ)
ಸಂಶೋಧಕರು
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ, ಹಾರೂಗೇರಿ.

ಪರಿವಿಡಿ

ಅಧ್ಯಾಯ : ಒಂದು

ಪ್ರವೇಶ

ಅಧ್ಯಾಯ : ಒಂದು

ಪ್ರವೇಶ

ಭಾರತ ದೇಶವು ಸ್ವಾತಂತ್ರ್ಯ ನಂತರ ಲಭ್ಯವಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ವ್ಯವಸ್ಥೆಯನ್ನು ಪುನರ್ ರೂಪಿಸುವ ನಿಟ್ಟಿನಲ್ಲಿ ಅವಿರತವಾದ ಪ್ರಯತ್ನ ಮಾಡುತ್ತಾ ಬಂದಿದೆ. ಅದರ ಪ್ರತಿಫಲವಾಗಿ ದೇಶದ ಬಡತನ, ಅನಕ್ಷರತೆ ಹಾಗೂ ನಿರುದ್ಯೋಗ ಸಮಸ್ಯೆಗಳನ್ನು ಕೊನೆಗೊಳಿಸಲು ಸಾಧ್ಯವಾಗಿದೆ.

ಆರಂಭದಿಂದಲೂ ಮಾನವನ ಬದುಕು ಹೋರಾಟಮಯವಾದದ್ದು ಅದು ಮೂಲತಃ ರಕ್ಷಣೆ ಹಾಗೂ ಸುರಕ್ಷಿತ ಜೀವನಕ್ಕಾಗಿ ನಡೆದ ಹೋರಾಟ. ಕಾಲಾನಂತರದಲ್ಲಿ ಆಸ್ತಿ ಪಾಸ್ತಿಗಳ ರಕ್ಷಣೆಗೆ ನಡೆದು, ಇಂದು ಸಮಾಜದಲ್ಲಿ ದೊಡ್ಡ ಸ್ಥಾನ ಪಡೆಯಲು ಹಾಗೂ ರಾಜಕೀಯ ಅಧಿಕಾರ ಸಂಪಾದಿಸಲು ನಿರಂತರವಾಗಿ ಮುಂದುವರೆದಿದೆ. ಹೋರಾಟ ಪ್ರಕ್ರಿಯೆ ಆರಂಭದಿಂದ ಕೊನೆಯವರೆಗೂ ನಡೆಯುತ್ತಲೇ ಇರುತ್ತದೆ. 'ಬದುಕಿಗಾಗಿ ಹೋರಾಟ' ಎಂಬ ವೈಜ್ಞಾನಿಕ ತತ್ವವು ಜನಸಾಮಾನ್ಯರಿಗೆ ಅನ್ವಯಿಸುವಂತೆ, ನಾಯಕರಿಗೂ ಸಹ ಅನ್ವಯಿಸುತ್ತದೆ. ಸಮಾಜದಲ್ಲಿ ಹಲವಾರು ಅವ್ಯವಸ್ಥೆಗಳು ಕಂಡು ಬಂದಾಗ ಅವುಗಳನ್ನು ಸುವ್ಯವಸ್ಥೆಯನ್ನಾಗಿ ಮಾರ್ಪಡಿಸಿಕೊಂಡು, ದೇಶವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಲು ರಾಜಕೀಯ ನಾಯಕರ ಅವಶ್ಯಕತೆ ಅನಿವಾರ್ಯ ಎನಿಸುತ್ತದೆ.

ತೀವ್ರಗತಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆ, ನಗರೀಕರಣಗಳ ಪ್ರಭಾವಗಳಿಂದಾಗಿ ನಕಾರಾತ್ಮಕ 'ಪೊಲೀಸ್' ರಾಜ್ಯದ ಪರಿಕಲ್ಪನೆಯ ಬದಲಾಗಿ 'ಕಲ್ಯಾಣ ರಾಜ್ಯ'ದ ಪರಿಕಲ್ಪನೆಯು ಅಸ್ತಿತ್ವಕ್ಕೆ ಬಂದಿದೆ. ಜನತೆಗೆ ನೆಮ್ಮದಿಯ ಬದುಕನ್ನು ಒದಗಿಸಿ, ಅವರ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವುದು ಕಲ್ಯಾಣ ರಾಜ್ಯವು ಹೊಂದಿರುವ ಧ್ಯೇಯವಾಗಿದೆ. ಭಾರತದ ಮಹಾನ್ ನಾಯಕರು ಕಲ್ಯಾಣ ರಾಜ್ಯದ ಅನುಷ್ಠಾನಕ್ಕಾಗಿ ಅರಸೊತ್ತಿಗೆಯ ಬದಲಾಗಿ ಪ್ರಜಾಪ್ರಭುತ್ವವನ್ನು ವ್ಯವಸ್ಥೆಗೊಳಿಸುವಲ್ಲಿ ಯಶಸ್ಸು ಕಂಡಿದ್ದಾರೆ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯ ಯಶಸ್ಸು. ಇಂದು ಜನರು ಸರ್ಕಾರದ ಜೊತೆ ನಿಕಟವಾದ ಸಂಪರ್ಕವನ್ನು ಹೊಂದಿ, ಸರ್ಕಾರದ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಹಾಗೂ ರಾಜಕೀಯ ನಾಯಕರು ವಹಿಸುವ ಪಾತ್ರದ ಮೇಲೆ ಅವಲಂಬಿತವಾಗಿರುವುದನ್ನು ಗಮನಿಸಬಹುದು.

ಹಲವಾರು ಸಂದರ್ಭಗಳಲ್ಲಿ ಜನರು ದೇಶದ ರಾಜಕೀಯ ವ್ಯವಸ್ಥೆ, ರಾಜಕೀಯ ನಾಯಕರು, ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ತಮ್ಮ ಸ್ಪಷ್ಟ ನಿರ್ಧಾರಗಳನ್ನು ತಿಳಿಸುವುದನ್ನು ಅಪೇಕ್ಷಿಸಲಾಗಿದೆ. ಪ್ರಜಾಪ್ರಭುತ್ವ ಸಂಸ್ಥೆಗಳಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವಲ್ಲಿ ಜನರಿಗೆ ಗುರುತರವಾದ ಜವಾಬ್ದಾರಿ ಇರುತ್ತದೆ.

ಈ ವಿಚಾರವನ್ನು ರಾಬರ್ಟ್ ಈ ಗೋಸ್ಟರ್ ಅವರು ಸಮರ್ಥಿಸುತ್ತಾ "ನಾಯಕರ ನಿಜವಾದ ವರ್ಚಸ್ಸು ಜನರು ನಾಯಕರ ಆಯ್ಕೆಯಲ್ಲಿ ತೋರ್ಪಡಿಸುವ ಜವಾಬ್ದಾರಿತನದ ಮೇಲೆ ನಿರ್ಧಾರವಾಗುತ್ತದೆ ಎನ್ನುತ್ತಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಜನರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಹಕ್ಕುಗಳನ್ನು ಅನುಭವಿಸುವ ಅವಕಾಶವಿದ್ದು, ತನ್ಮೂಲಕ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ದೇಶದ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಯತ್ನಿಸುತ್ತಾರೆ".[೧]

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ 'ಅಧಿಕಾರ ವಿಕೇಂದ್ರೀಕರಣ' ತತ್ವವು ಜನರಿಗೆ ಫಲಪ್ರದವಾಗಿ ಸರ್ಕಾರದ ಸಾಮಿಪ್ಯವನ್ನು ಹೊಂದಿ, ವಿವಿಧ ಹಂತಗಳಲ್ಲಿ ರಾಜಕೀಯ ಅಧಿಕಾರವನ್ನು ಅನುಭವಿಸಲು ಪೂರಕವಾಗಿದೆ. ಬ್ರಿಟಿಷರ ಆಳ್ವಿಕೆ ಕೊನೆಗೊಂಡ ಬಳಿಕ, ದೇಶದ ಯೋಜನೆಗಳ ತಯಾರಕರು, ಆಡಳಿತಗಾರರು, ರಾಜಕೀಯ ನಾಯಕರು ಪ್ರಾದೇಶಿಕ ಅಭಿವೃದ್ಧಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ ಫಲವಾಗಿ, ಪ್ರಾದೇಶಿಕ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ಹರಿಸುವುದು ಸಾಧ್ಯವಾಯಿತು. ಆದ್ದರಿಂದ ಪ್ರಭಾವಿ ನಾಯಕರು ತಮ್ಮ ರಾಜಕೀಯ ಹಾಗೂ ಶೈಕ್ಷಣಿಕ ಕೊಡುಗೆಗಳ ಮೂಲಕ, ಸಾಮಾಜಿಕ ವ್ಯವಸ್ಥೆಯನ್ನು ಸಶಕ್ತಗೊಳಿಸುವಲ್ಲಿ ಪ್ರಯತ್ನಿಸಿದರು. ಈ ನಿಟ್ಟಿನಲ್ಲಿ ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಹೇಳಿಕೆಯನ್ನು ಗಮನಿಸಬಹುದು. "ರಾಷ್ಟ್ರ ನಿರ್ಮಾಣವು ಮಹಾನ್ ನಾಯಕರ ಕಲ್ಪನೆ, ಪ್ರಾಮಾಣಿಕ ಪ್ರಯತ್ನ ಹಾಗೂ ಉತ್ಸಾಹಗಳ ಮೇಲೆ ಆಧಾರಿತವಾಗಿದೆ".[೨]

ಇದಕ್ಕೆ ಅನುಗುಣವಾಗಿ ನಾಯಕರು ಉತ್ತಮ ಆಡಳಿತವನ್ನು ಸ್ಥಾಪಿಸಲು ಹೋರಾಟ ಮಾಡುವುದರ ಜೊತೆಗೆ, ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯಲ್ಲಿ ಹಾಗೂ ತಮ್ಮ ಪ್ರದೇಶದ ಅಭಿವೃದ್ಧಿಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಅವಶ್ಯವಾಗಿದೆ. ಈ ವಿಷಯವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದು ಕೈಗೊಂಡಿರುವ ಈ ಅಧ್ಯಯನದ ಮೂಲ ಉದ್ದೇಶವಾಗಿದೆ.

ಸಂಶೋಧನೆಯ ವಿಷಯ ವಸ್ತು

ಜಾಗತಿಕ ಇತಿಹಾಸದಲ್ಲಿ ನಾಯಕರಿಗೆ ವಿಶಿಷ್ಟವಾದ ಸ್ಥಾನವಿದೆ. ರಾಷ್ಟ್ರದ ಪ್ರಗತಿ ಹಾಗೂ ಹಿಂದುಳಿಯುವಿಕೆ ನಾಯಕರ ಮೇಲೆ ಅವಲಂಬಿಸಿರುತ್ತದೆ. ನಾಯಕರಿಲ್ಲದ ರಾಷ್ಟ್ರ ವ್ಯವಸ್ಥೆಯನ್ನು ಊಹಿಸುವುದೂ ಸಾಧ್ಯವಿಲ್ಲ. ಅಂತೆಯೇ ಒಂದು ರಾಷ್ಟ್ರವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಲು ನಾಯಕತ್ವ ಅವಶ್ಯವಾಗಿ ಬೇಕು.

ಸ್ವತಂತ್ರ ಭಾರತವು ರಾಜಕೀಯ ಹಾಗೂ ಸಾಮಾಜಿಕ ನಾಯಕರ, ರಾಜನಿಪುಣರ, ಸುಧಾರಕರ ಕೊರತೆಯನ್ನು ಅನುಭವಿಸಿಲ್ಲ. ಕಾಲಕಾಲಕ್ಕೆ ಹಲವಾರು ವ್ಯಕ್ತಿಗಳು ನಾಯಕರಾಗಿ ಹೊರಹೊಮ್ಮಿದ್ದಾರೆ. ಆದರೆ ರಾಜಕೀಯ ರಂಗದಲ್ಲಿದ್ದವರೆಲ್ಲರೂ ನಾಯಕರಾಗಿಲ್ಲ. ಕೆಲವೇ ಕೆಲವು ರಾಜಕೀಯ ನಾಯಕರು ಜನತೆಗೆ ಸಲ್ಲಿಸಿದ ಅಮೂಲ್ಯ ಸೇವೆಯಿಂದಾಗಿ ಜನಮನದಲ್ಲಿ ಉಳಿದಿದ್ದಾರೆ. "ಹಲವಾರು ರಾಜಕಾರಣಿಗಳು ರಾಜಕೀಯ ಅಧಿಕಾರಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿ, ಉನ್ನತ ಸ್ಥಾನಗಳನ್ನು ಪಡೆಯಲು, ಸಂಪತ್ತನ್ನು ಸಂಗ್ರಹಿಸಲು ಹಾಗೂ ಸ್ವಾರ್ಥ ಸಾಧನೆಗಾಗಿ ದೂರದೃಷ್ಟಿತ್ವ ಇಲ್ಲದೆ ಕಾರ್ಯ ಮಾಡುತ್ತಾ ಬಂದಿದ್ದಾರೆ".[೩]

"ತಮ್ಮ ಪ್ರದೇಶದ ಜನರ ಬೇಡಿಕೆಗಳನ್ನು ಪೂರೈಸಲು, ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಯಾವ ಬಗೆಯ ಅಧಿಕಾರವನ್ನು ಹಾಗೂ ಪ್ರಚಾರವನ್ನು ಅಪೇಕ್ಷಿಸದೇ, ತಮ್ಮ ಅಮೂಲ್ಯವಾದ ಜೀವನವನ್ನು ಸಮಾಜಕ್ಕಾಗಿ, ಅದರ

ಒಳಿತಿಗಾಗಿಯೇ ಮುಡುಪಾಗಿಟ್ಟಿರುವ ರಾಜಕೀಯ, ಸಾಮಾಜಿಕ ನಾಯಕರ ಕೊಡುಗೆಗಳನ್ನು ಅರಿತುಕೊಳ್ಳುವಲ್ಲಿ, ಮೆಚ್ಚುಗೆ ವ್ಯಕ್ತಪಡಿಸುವುದರಲ್ಲಿ ಹಾಗೂ ಮೌಲ್ಯಮಾಪನ ಮಾಡುವುದರಲ್ಲಿ ಕರ್ನಾಟಕವು ತನ್ನ ಪ್ರಾಮಾಣಿಕ ಪ್ರಯತ್ನ ಮಾಡದಿರುವುದು ಬೇಸರವನ್ನುಂಟುಮಾಡುವ ಸಂಗತಿಯಾಗಿದೆ".[೪] ಕನ್ನಡಿಗರು ಐತಿಹಾಸಿಕ ಪ್ರಜ್ಞೆ ಬೆಳೆಸಿಕೊಳ್ಳದಿರುವುದು ಇದಕ್ಕೆ ಕಾರಣವಾಗಿದೆ. ಈ ಬಗೆಯ ನಿರ್ಲಕ್ಷಕ್ಕೆ ಒಳಗಾದವರಲ್ಲಿ ಡಾ. ಪ್ರಭಾಕರ ಕೋರೆಯವರು ಒಬ್ಬರಾಗಿದ್ದಾರೆ. ಡಾ. ಪ್ರಭಾಕರ ಕೋರೆ ಅವರು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಭಾಗದ ಶ್ರೇಷ್ಠ ನಾಯಕರು.

ಕರ್ನಾಟಕ ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಕೆ. ಎಲ್. ಇ. ಸಂಸ್ಥೆಯು ಇಂದು ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಒಂದು. ಇದು ಪ್ರಭಾಕರ ಕೋರೆ ಅವರಿಗೆ ರಾಜಕೀಯವಾಗಿ ಬೆಳೆಯಲು ವೇದಿಕೆ ಒದಗಿಸಿದೆ. ಪ್ರಥಮ ಬಾರಿ ೧೯೮೩ರಲ್ಲಿ ಸದಲಗಾ ವಿಧಾನಸಭೆಯಿಂದ ಸ್ಪರ್ಧಿಸಿದ ಇವರು ಅಲ್ಲಿ ಅಲ್ಪ ಮತಗಳಿಂದ ಸೋಲು ಕಂಡರು. ಮುಂದೆ ೧೯೯೧ರಲ್ಲಿ ರಾಜ್ಯಸಭಾ ಸದಸ್ಯರಾದರು. ನಂತರ ೨೦೦೨ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡರು. ಪುನಃ ೨೦೦೮ರಲ್ಲಿ ರಾಜ್ಯಸಭಾ ಸದಸ್ಯರಾದರು.

ರಾಜಕೀಯ ನಾಯಕರ ಬಗ್ಗೆ ಹಲವಾರು ಅಧ್ಯಯನಗಳು ಆಗಿವೆ. ಆದರೆ ಡಾ. ಪ್ರಭಾಕರ ಕೋರೆ ಅವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳ ಕುರಿತು ಸಮಗ್ರವಾಗಿ ಯಾವ ಸಂಶೋಧನಾತ್ಮಕವಾದ ಅಧ್ಯಯನಗಳು ಆಗಿರಲಿಲ್ಲ. ಇದು ಆ ಕೊರತೆಯನ್ನು ನೀಗಿಸುವ ಒಂದು ಪ್ರಯತ್ನ.

ಪ್ರಭಾಕರ ಕೋರೆಯವರು ಬಹುಮುಖ ವ್ಯಕ್ತಿತ್ವದ ವಿಶಿಷ್ಠವಾದ ರಾಜಕೀಯ ನಾಯಕರು. ಅವರ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಹಕಾರ, ಆರೋಗ್ಯ, ಸಾಹಿತ್ಯ ಕ್ಷೇತ್ರಗಳಲ್ಲಿನ ಕೊಡುಗೆಗಳು ಅಪಾರ, ಅವರ ಸಂಘಟನಾತ್ಮಕ ನಾಯಕತ್ವದ ಗುಣಗಳು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿವೆ. ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ಅಧ್ಯಯನ ಮಾಡುವುದು ಈ ಸಂಶೋಧನೆಯ ಆಶಯ.

ಅಧ್ಯಯನದ ಉದ್ದೇಶಗಳು

ಈ ಸಂಶೋಧನೆಯ ಅಧ್ಯಯನವು ಕೆಳಗಿನ ಉದ್ದೇಶಗಳಿಂದ ಕೂಡಿದೆ

೧. ರಾಜಕೀಯ ನಾಯಕರ ಬೆಳವಣಿಗೆಯಲ್ಲಿ ಪರಿಸರ ಮತ್ತು ಸಾಂಪ್ರದಾಯಿಕ ಸಮಾಜವು ವಹಿಸಿದ ಪಾತ್ರವನ್ನು ಪರಿಶೀಲಿಸುವುದು.

೨. ಪ್ರಾದೇಶಿಕ ಅಭಿವೃದ್ಧಿಯಲ್ಲಿ ರಾಜಕೀಯ ನಾಯಕರು ತಾಳುವ ದೃಢ ಸಂಕಲ್ಪವನ್ನು ಅರಿತುಕೊಳ್ಳುವುದು.

೩. ತಮ್ಮ ರಾಜಕೀಯ ಸಂಕಲ್ಪವನ್ನು ಸಶಕ್ತಗೊಳಿಸಿಕೊಳ್ಳುವಲ್ಲಿ ರಾಜಕೀಯ ನಾಯಕರು, ಸಾಮಾಜಿಕ ರಂಗದ ಪ್ರಗತಿಯಲ್ಲಿ ಪಾಲ್ಗೊಳ್ಳುವುದನ್ನು ಕಂಡುಕೊಳ್ಳುವುದು.

೪. ತಮ್ಮ ಪ್ರದೇಶದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ವಹಿಸುವ ಪಾತ್ರವನ್ನು ಗಮನಿಸುವುದು.

೫. ಅವರ ಆದರ್ಶ ಮತ್ತು ಅವರ ನಡಾವಳಿಯ ಪ್ರಭಾವದಿಂದ ಜನ ಸಮೂಹದ ಸಂಚಲನವನ್ನು ಗುರುತಿಸುವುದು.

ಊಹೆಗಳು :

೧. ಆದರ್ಶ ರಾಜಕೀಯ ನಾಯಕತ್ವವು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯನ್ನು ಉತ್ತೇಜಿಸುವಲ್ಲಿ ಪ್ರಮುಖಪಾತ್ರವಹಿಸುತ್ತದೆ. ಪ್ರಬಲ ರಾಜಕೀಯ ನಾಯಕತ್ವವು ತಮ್ಮ ಪ್ರದೇಶದ ಅಭಿವೃದ್ಧಿಗಾಗಿ ಪ್ರಭಾವವನ್ನು ಬೀರಿ, ಹೊಸ ಆಯಾಮ ಒದಗಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ.

೨. ರಾಜಕೀಯ ನಾಯಕರ ವ್ಯಕ್ತಿತ್ವ ಹಾಗೂ ಪ್ರವೃತ್ತಿಗಳು ಉತ್ತಮ ಆಡಳಿತಕ್ಕೆ ಹಾಗೂ ದ್ವಿತೀಯ ಹಂತದ ನಾಯಕತ್ವ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತವೆ. ರಾಜಕೀಯ ನಾಯಕರ ಜಾತ್ಯತೀತ ನಿಲುವುಗಳು ಇತರರನ್ನು ಪ್ರಭಾವಿಸುತ್ತವೆ, ಹೊಸ ಬದಲಾವಣೆ ಉಂಟಾಗಲು ಕಾರಣವಾಗುತ್ತದೆ.

೩. ಶೈಕ್ಷಣಿಕ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ರಾಜಕೀಯ ನಾಯಕರು ತೋರುವ ಧೃಡಸಂಕಲ್ಪ ಜನಸಮುದಾಯದ ಸಮಗ್ರ ಅಭಿವೃದ್ಧಿಗೆ ಚಾಲನೆ ನೀಡುತ್ತದೆ. ಸಾಮಾಜಿಕ, ಸಾಹಿತ್ಯಕ, ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸಲು ಕಾರಣರಾಗುತ್ತಾರೆ.

ಪ್ರಸ್ತುತ ಸಾಹಿತ್ಯ ವಿಮರ್ಶೆ :

ರಾಷ್ಟ್ರ ಮಟ್ಟದಲ್ಲಿ ರಾಜಕೀಯ ನಾಯಕರನ್ನು ಕುರಿತು ರಚಿತವಾದ ಗ್ರಂಥಗಳು, ಲೇಖನಗಳು ಹಲವು. ಇವು ಈ ಅಧ್ಯಯನಕ್ಕೆ ಮಾದರಿ ಒದಗಿಸುತ್ತವೆ.

ಪ್ರಸ್ತುತ ಅಧ್ಯಯನವು ರಾಜ್ಯಮಟ್ಟದಲ್ಲಿ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ರಾಜಕೀಯ ಹಾಗೂ ಸಾಮಾಜಿಕ ನಾಯಕರು ತಮ್ಮ ಪ್ರದೇಶಗಳ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ವಿಷಯಕ್ಕೆ ಸಂಬಂಧಪಟ್ಟಿದೆ. ಈ ಸಂಶೋಧನ ಅಧ್ಯಯನವು ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಪ್ರಭಾವಿ ರಾಜಕೀಯ ನಾಯಕರಾಗಿರುವ ಡಾ. ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳಿಗೆ ಸಂಬಂಧಪಟ್ಟದ್ದಾಗಿದೆ. ಅದರ ಮೇಲೆ ಅನೇಕ ಗ್ರಂಥಗಳು, ಲೇಖನಗಳು ಪ್ರಕಟಗೊಂಡಿವೆ. ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಅಧಿವೇಶನಗಳ ಚರ್ಚೆಯ ವಿಷಯಗಳು ಹಾಗೂ ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿಗಳು ಹಾಗೂ ಸಂಸ್ಥೆಯ ಪ್ರಸಾರಂಗದಿಂದ ಹೊರತಂದ ವಾರ್ತಾ ಸಂಚಿಕೆಗಳು ಲಭ್ಯವಿದ್ದು, ಅವುಗಳಲ್ಲಿ ಬರುವ ವಿಷಯಗಳನ್ನು ಹಾಗೂ ವಿವರಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. "ಪ್ರಭಾಂಕಲಿ"[೨೦] ಕೋರೆಯವರ ಅಭಿನಂದನ ಗ್ರಂಥ. ಈ ಅಭಿನಂದನ ಗ್ರಂಥದಲ್ಲಿ ಕೋರೆಯವರ ಬಾಲ್ಯ ಜೀವನ. ಕುಟುಂಬದ ಹಿನ್ನೆಲೆ, ಅವರ ವಿದ್ಯಾಭ್ಯಾಸ, ಅವರ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸಾಧನೆಗಳಲ್ಲದೇ. ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಯಲ್ಲಿ ಇವರ ಕೊಡುಗೆ ಮುಂತಾದವುಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ.

ಕೆ.ಎಲ್.ಇ. ಸಂಸ್ಥೆಯ ಸಮಗ್ರ ಪ್ರಗತಿಯ ಚಿತ್ರಣವು "ಕೆ.ಎಲ್.ಇ. ಸೊಸೈಟಿ ಸಂಪುಟ ೧"[೨೧]ರಲ್ಲಿ ಇದ್ದು, ಪ್ರಭಾಕರ ಕೋರೆಯವರ ಕೊಡುಗೆಯನ್ನು ತಿಳಿದುಕೊಳ್ಳಲು ಅನುಕೂಲಕರವಾಗಿದೆ.

"ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ" ಎಂಬ ಕಿರು ಹೊತ್ತಿಗೆ ೧೯೯೧ರಲ್ಲಿ ಡಾ. ಬಿ. ಎಸ್.

ಗವಿಮಠರಿಂದ ರಚಿಸಲ್ಪಟ್ಟಿತು.[೭] ಕೆ.ಎಲ್.ಇ. ಸಂಸ್ಥೆಗೆ ದಾನ ನೀಡಿದ ಮಹನೀಯರು ಮತ್ತು ಪ್ರಭಾಕರ ಕೋರೆ ಅವರಿಗೆ ಪ್ರೇರಣೆಯಾದ ಹಲವು ಜನ ವ್ಯಕ್ತಿಗಳ ಬಗ್ಗೆ ಮಾಹಿತಿ ಪಡೆಯಲು ಇದರಿಂದ ಸಹಕಾರಿಯಾಗುವುದು.

ಡಾ. ಪ್ರಭಾಕರ ಕೋರೆ ಅವರ ವ್ಯಕ್ತಿತ್ವ ಕುರಿತು, ಅವರ ಸಾಧನೆಗಳ ವಿವರಗಳೊಂದಿಗೆ ಹೊರ ಬಂದ ಅವರ ೬೦ನೇ ವರ್ಷದ ಹುಟ್ಟುಹಬ್ಬದ ಅಭಿನಂದನ ಗ್ರಂಥ 'ಸ್ಪಂದನ'[೮] ಇವರ ಇತ್ತೀಚಿನ ಸಾಧನೆ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ನಿವೇದಿಸುತ್ತದೆ. ಅಭಿಮಾನಿ ಬಳಗದ ಲೇಖನಗಳು ಇದರಲ್ಲಿ ಇರುವುದರಿಂದ ವಿವಿಧ ಕ್ಷೇತ್ರಗಳಲ್ಲಿ ಅವರು ಮಾಡಿದ ಸಾಧನೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. 'ಕೆ.ಎಲ್.ಇ.' ಸಂಸ್ಥೆಯ ವಾರ್ಷಿಕ ವರದಿಗಳು ಅಧ್ಯಯನಕ್ಕೆ ಆಕರಗಳಾಗಿವೆ.[೯] ವಾರ್ಷಿಕ ವರದಿಗಳು ನಮಗೆ ಡಾ. ಪ್ರಭಾಕರ ಕೋರೆಯವರ ಶೈಕ್ಷಣಿಕ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡಲು ಮಾಹಿತಿ ಕೊಡುತ್ತವೆ. "ಜನಸೇವಕ" ಪ್ರಾಯೋಜಿತ ಪುರವಣಿ ೨೦೦೮ ಜೂನ್ ೨೨ರ ಕನ್ನಡ ಪ್ರಭ ದಿನಪತ್ರಿಕೆಯ ವಿಶೇಷ ಸಂಚಿಕೆ, ೨೦೦೮ ಅಗಸ್ಟ್ ೧ರ ವಿಜಯ ಕರ್ನಾಟಕ ವಿಶೇಷ ಸಂಚಿಕೆ, ಅವರ ಸಾಮಾಜಿಕ ಸೇವೆಗಳ ಬಗ್ಗೆ ಮಾಹಿತಿ ಒದಗಿಸುತ್ತವೆ. ಇವು ಕೋರೆಯವರ ವ್ಯಕ್ತಿತ್ವದ ಹಲವು ಮುಖಗಳನ್ನು ಪರಿಚಯಿಸುತ್ತವೆ. ವೈಯಕ್ತಿಕ ಬದುಕಿನ ಹಲವಾರು ಘಟನೆಗಳನ್ನು ಸಂಶೋಧನೆ ಮಾಡಲು ಇದು ತಕ್ಕಮಟ್ಟಿಗೆ ಮಾಹಿತಿಯನ್ನು ಒದಗಿಸುತ್ತವೆ. ವಿಶ್ವೇಶ್ವರ ಭಟ್ಟರು ವಿಜಯ ಕರ್ನಾಟಕದ 'ನೂರೆಂಟು ಮಾತು' ಅಂಕಣದಲ್ಲಿ ಕೋರೆಯವರ ಸಾಧನೆಗಳನ್ನು ವಿನೂತನ ರೀತಿಯಲ್ಲಿ ಕಟ್ಟಿಕೊಡುವುದರ ಮೂಲಕ ಗಮನ ಸೆಳೆದಿದ್ದಾರೆ. ಈ ಎಲ್ಲ ಕೃತಿಗಳು ಹಾಗೂ ಲೇಖನಗಳು ಡಾ. ಪ್ರಭಾಕರ ಕೋರೆಯವರ ಸಾಮಾಜಿಕ ಜೀವನಕ್ಕೆ ಹಾಗೂ ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿನ ಸಾಧನೆಗಳಿಗೆ ಸಂಬಂಧಪಟ್ಟವುಗಳಾಗಿವೆ. ರಾಜ್ಯಮಟ್ಟದಲ್ಲಿ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಅವರ ಸಾಧನೆಗಳು ಅಪರಿಮಿತವಾದವುಗಳು. ಅವರ ವ್ಯಕ್ತಿತ್ವ ಮತ್ತು ತತ್ವನಿಷ್ಠ ರಾಜಕೀಯ ಜೀವನವನ್ನು ಕೊಂಡಾಡುವವರು ಎಲ್ಲೆಡೆ ಕಂಡುಬರುತ್ತಾರೆ. ಆದರೆ ಡಾ. ಪ್ರಭಾಕರ ಕೋರೆಯವರ ಜೀವನ ಹಾಗೂ ರಾಜಕೀಯ, ಶೈಕ್ಷಣಿಕ ಸಾಧನೆಗಳ ಕುರಿತು ಹೆಚ್ಚಿನ ಸಾಹಿತ್ಯ ಲಭ್ಯವಿಲ್ಲ. ವಿಶೇಷವೆಂದರೆ ಅವರನ್ನು ಕುರಿತು ಸಂಶೋಧನಾತ್ಮಕ ಅಧ್ಯಯನಗಳಾಗಿಲ್ಲ. ಈ ಕೊರತೆಯನ್ನು ನೀಗಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಅಧ್ಯಯನದ ವಿಧಾನ :

ಪ್ರಸ್ತುತ ಅಧ್ಯಯನವು ಒಂದು ಆನ್ವಯಿಕ ಸಂಶೋಧನೆಯಾಗಿದೆ. ಈ ಸಂಶೋಧನೆಯ ಮೂಲ ಉದ್ದೇಶವು ಕರ್ನಾಟಕ ರಾಜ್ಯದಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಸಾಕಷ್ಟು ಕಾರ್ಯ ಮಾಡಿದ ಡಾ. ಪ್ರಭಾಕರ ಕೋರೆಯವರ ಸಾಧನೆಗಳನ್ನು ತೂಗುವುದಾಗಿದೆ.

ಡಾ. ಪ್ರಭಾಕರ ಕೋರೆಯವರ ನಾಯಕತ್ವವು ಕರ್ನಾಟಕ ರಾಜ್ಯದ, ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಹಲವಾರು ಸಂಘ, ಸಂಸ್ಥೆಗಳ ಸ್ಥಾಪನೆ ಮಾಡುವಲ್ಲಿ ಹಾಗೂ ಅವುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗುವುದರಲ್ಲಿ ಮಹತ್ವಪೂರ್ಣವಾದದ್ದಾಗಿದೆ. ಕೆ.ಎಲ್.ಇ. ಸಂಸ್ಥೆಯು ಅವರಿಗೆ ಸಾಧನೆ ಮಾಡಲು ಒಂದು ಮಹತ್ವದ ವೇದಿಕೆ ಒದಗಿಸಿದೆ. ಬೆಳಗಾವ ವಿಧಾನ ಮಂಡಳದ ವಿಶೇಷ ಅಧಿವೇಶನದ ಶ್ರೇಯಸ್ಸು ಕೋರೆಯವರದು. ಜನರ ಸಮಸ್ಯೆಗಳನ್ನು ತಿಳಿದುಕೊಂಡು ಅವರಿಗೆ ಹತ್ತಿರವಾದವರು. ಆದ್ದರಿಂದ ಪ್ರಾಥಮಿಕ ಹಾಗೂ ಮಾಧ್ಯಮಿಕ

ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮೂಲಗಳಲ್ಲಿ ಸಂದರ್ಶನದ ಮೂಲಕ ಸಂಗ್ರಹಿಸಿದ ಮಾಹಿತಿಗಳು, ದಿನಚರಿ ಹಾಗೂ ರಾಜ್ಯಸಭಾ, ವಿಧಾನ ಪರಿಷತ್ತಿನ ಕಡತಗಳು ಹಾಗೂ ಕೆ.ಎಲ್.ಇ. ಸಂಸ್ಥೆಗೆ ಸಂಬಂಧಿಸಿದ ವಿಷಯಗಳಿವೆ. ಬೆಳಗಾವಿ ನಗರದ ಹಾಗೂ ಚಿಕ್ಕೋಡಿ ಭಾಗದ ಜನರನ್ನು ಸಂದರ್ಶಿಸಿ ಮಾಹಿತಿ ಕಲೆ ಹಾಕಲಾಗಿದೆ. ೮೫ ಜನರನ್ನು ಆಯ್ಕೆಮಾಡಿ ಸಂದರ್ಶಿಸಲಾಗಿದೆ. ಇವರು ಸಮಾಜದ ವಿವಿಧ ಸ್ತರಗಳಿಂದ ಬಂದವರಾಗಿದ್ದು, ಒಂದಲ್ಲೊಂದು ಕಾರಣಕ್ಕಾಗಿ ಕೋರೆಯವರ ಜೊತೆ ಒಡನಾಟವನ್ನು ಹೊಂದಿದವರಾಗಿದ್ದಾರೆ. ಸಂದರ್ಶನದ ಉದ್ದೇಶಕ್ಕಾಗಿ ೨ ಪುಟಗಳ ಪ್ರಶ್ನಾವಳಿಗಳನ್ನು ಸಿದ್ಧಪಡಿಸಲಾಗಿತ್ತು. ಪ್ರಮುಖ ರಾಜಕೀಯ ನಾಯಕರ ಜೊತೆಗೆ ನಡೆಸಿದ ಸಂದರ್ಶನವನ್ನು ರೆಕಾರ್ಡಿಂಗ್ ಮಾಡಲಾಗಿದೆ. ಸಂದರ್ಶಿಸಲ್ಪಟ್ಟವರಲ್ಲಿ ಅನೇಕರು ಡಾ. ಪ್ರಭಾಕರ ಕೋರೆಯವರ ಸಮಗ್ರ ಜೀವನ, ವ್ಯಕ್ತಿತ್ವ ಹಾಗೂ ಸಮಾಜದ ವಿವಿಧ ರಂಗಗಳಲ್ಲಿ ಅವರು ಮಾಡಿದ ಮಹತ್ತರ ಸಾಧನೆಗಳನ್ನು ಬಲ್ಲವರು. ಆ ಮಾಹಿತಿಗಳು ಡಾ. ಪ್ರಭಾಕರ ಕೋರೆಯವರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ನಿರ್ಧರಿಸಲು ಸಹಾಯಕವಾಗಿವೆ.

ದತ್ತಾಂಶಗಳನ್ನು ಮಾಧ್ಯಮ ಮೂಲದಿಂದ ಸಂಗ್ರಹಿಸಲಾಗಿದ್ದು, ಗ್ರಂಥಗಳು, ಲೇಖನಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ. ದತ್ತಾಂಶಗಳ ಸಂಗ್ರಹಕ್ಕಾಗಿ ವರ್ಣನಾತ್ಮಕ ವಿಧಾನ ಅಳವಡಿಸಲಾಗಿದೆ.

ಅಡಿ ಟಿಪ್ಪಣಿಗಳು :

೧. ಗವತಿ ಎಸ್. ಎಸ್. : ದಿ. ಇಂಪ್ಯಾಕ್ಟ್ ಆಫ್ ಇಕನಾಮಿಕ್ ಡೆವಲಪ್‌ಮೆಂಟ್ ಆನ್ ಪಾಲಿಟಿಕಲ್ ಪಾರ್ಟಿಸಿಫಿಶನ್: ಎ ಸ್ಟಡಿ ಆಫ್ ಹುಕ್ಕೇರಿ ತಾಲೂಕು; ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ೨-೩, ೧೯೯೩.

೨. ಡಾ. ಕಲಾಂ ಅಬ್ದುಲ್ ಎ.ಪಿ.ಜೆ. ಇಂಡಿಯಾ ೨೦೨೦ : 'ಎ ವ್ಹಿಜನ್ ಫಾರ್ ದಿ ನ್ಯೂ ಮಿಲೇನಿಯಂ'; ಪೆಂಗ್ವಿನ್ ಬುಕ್ಸ್ ಲಿ., ನವದೆಹಲಿ, ಪುಟ ೧, ೧೯೯೮.

೩. ಬಕ್ಕಪ್ಪ ಕೆ. ಬಿ. : ಭಾರತೀಯ ರಾಜಯಕೀಯದಲ್ಲಿ ಸರದಾರ ವಲ್ಲಭಭಾಯಿ ಪಟೇಲರ ಪಾತ್ರ; ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ೩, ೧೯೮೦.

೪. ಶಿಂತ್ರಿ ಸರೋಜನಿ ಮತ್ತು ರಾಘವೇಂದ್ರರಾವ್ : ದಿ ಐರನ್ ಮ್ಯಾನ್ ಆಫ್ ಕರ್ನಾಟಕ; ಹಳ್ಳಿಕೇರಿ ಗುದ್ಲೆಪ್ಪ: ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಮುದ್ರಣಾಲಯ, ಧಾರವಾಡ ಪುಟ ೧, ೨೦೦೦.

೫. ಸಂಪಾದಕರು ಪ್ರೊ. ವಿ. ಬಿ. ಹಿರೇಮಠ : 'ಪ್ರಭಾಂಕಲಿ' ಶ್ರೀ ಪ್ರಭಾಕರ ಕೋರೆಯವರ ೫೦ನೇ ವರ್ಷದ ಸಂದರ್ಭದಲ್ಲಿ ಪ್ರಕಟಗೊಂಡ ಅಭಿನಂದನ ಗ್ರಂಥ, ೧೯೯೯.

೬. ಸಂಪಾದಕರು ಶ್ರೀ ಬಿ. ಎಸ್. ಗವಿಮಠ, ಪ್ರೊ. ಎ. ಆರ್. ಪಾಟೀಲ, ಕೆ. ಎಲ್. ಇ. ಸೊಸೈಟಿ, ಸಂಪುಟ-೧, ಪ್ರಕಾಶನ ಕೆ.ಎಲ್.ಇ. ಪ್ರಸಾರಾಂಗ, ಬೆಳಗಾವಿ, ೨೦೦೨.

೭. ಸಂಪಾದಕರು ಶ್ರೀ ಬಿ. ಎಸ್. ಗವಿಮಠ : 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ', ಪ್ರಕಾಶನ: ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ ಬೆಳಗಾವಿ, ೧೯೯೫.

೮. ಸಂಪಾದಕರು ಬಿ. ಎಸ್. ಗವಿಮಠ : 'ಸ್ಪಂದನ' ಶ್ರೀ ಪ್ರಭಾಕರ ಕೋರೆಯವರ ೬೦ನೇ ವರ್ಷದ ಅಭಿನಂದನ ಗ್ರಂಥ, ೨೦೦೮.

೯. ೨೦೦೧ರಿಂದ ೨೦೦೮ರವರೆಗೆ ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿಗಳು.

ಅಧ್ಯಾಯ : ಎರಡು

ಪ್ರಾದೇಶಿಕ ಚಿಂತನೆ

ಅಧ್ಯಾಯ : ಎರಡು

ಪ್ರಾದೇಶಿಕ ಚಿಂತನೆ

ಡಾ. ಪ್ರಭಾಕರ ಕೋರೆ ಅವರ ವ್ಯಕ್ತಿಗತ ಜೀವನ ಅಧ್ಯಯನಕ್ಕಿಂತ ಮೊದಲು ರಾಜ್ಯದ ರಾಜಕೀಯ, ಸಾಮಾಜಿಕ, ಭೌಗೋಳಿಕ ಅಂಶಗಳ ಸಂಕ್ಷಿಪ್ತ ಪರಿಚಯ ಅವಶ್ಯವೆನಿಸುತ್ತದೆ. ಜೊತೆಗೆ, ಪ್ರಭಾಕರ ಕೋರೆಯವರ ತವರು ಜಿಲ್ಲೆಯಾದ ಬೆಳಗಾವಿಯ ಸಂಕ್ಷಿಪ್ತ ಪರಿಚಯ ಮತ್ತು ಪ್ರಭಾಕರ ಕೋರೆಯವರು ಬೆಳೆದುಬಂದ ಚಿಕ್ಕೋಡಿ ಭಾಗದ ಇತಿಹಾಸ ಹಾಗೂ ಕೋರೆಯವರ ಹುಟ್ಟೂರಾದ ಅಂಕಲಿ ಗ್ರಾಮದ ಪರಿಚಯ ಅಧ್ಯಯನ ದೃಷ್ಟಿಯಿಂದ ಮಹತ್ವದ್ದು. ಏಕೆಂದರೆ ವ್ಯಕ್ತಿಯ ಬೆಳವಣಿಗೆಯಲ್ಲಿ ಪರಿಸರದ ಪ್ರಭಾವ ಅಲ್ಲಗಳೆಯುವಂತಿಲ್ಲ.

ಬೆಳಗಾವಿ ಜಿಲ್ಲೆಯ ಸಂಕ್ಷಿಪ್ತ ಪರಿಚಯ :

ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾದ ಬೆಳಗಾವಿ ಜಿಲ್ಲೆ ಇಂದು ವಿಭಾಗಮಟ್ಟದ ಸ್ಥಾನವನ್ನು ಪಡೆದಿದೆ. ಇದರ ವ್ಯಾಪ್ತಿಗೆ ಬಿಜಾಪೂರ, ಧಾರವಾಡ, ಬಾಗಲಕೋಟೆ, ಗದಗ, ಹಾವೇರಿ, ಕಾರವಾರ ಸೇರಲ್ಪಟ್ಟಿವೆ. ಬೆಳಗಾವಿ ಜಿಲ್ಲೆ ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ವಿಸ್ತೀರ್ಣದಲ್ಲಿ ರಾಜ್ಯದಲ್ಲಿಯೇ ದೊಡ್ಡ ಜಿಲ್ಲೆ. ಕಬ್ಬು, ತಂಬಾಕು, ಅರಿಶಿಣ, ಶೇಂಗಾ, ಸೂರ್ಯಕಾಂತಿ, ಜೋಳ, ಗೋದಿ, ಭತ್ತ, ಹಣ್ಣಿನ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ, ಪೇರಲ, ಚಿಕ್ಕು ಪ್ರಮುಖ ಬೆಳೆಗಳು. ಬೆಳಗಾವಿ ಜಿಲ್ಲೆಯನ್ನು 'ಸಕ್ಕರೆಯ ನಾಡು' ಎಂದು ಕರೆಯಲಾಗುತ್ತದೆ. ಇಲ್ಲಿ ಅಧಿಕ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ. ಬೆಳಗಾವಿ ಜಿಲ್ಲೆ ಒಟ್ಟು ೧೦ ತಾಲೂಕುಗಳನ್ನು ಹೊಂದಿದೆ. ಅವುಗಳು – ೧. ಬೆಳಗಾವಿ, ೨. ಅಥಣಿ, ೩. ರಾಯಬಾಗ, ೪. ಸವದತ್ತಿ, ೫. ಬೈಲಹೊಂಗಲ, ೬. ಖಾನಾಪೂರ, ೭. ರಾಮದುರ್ಗ, ೮. ಗೋಕಾಕ್, ೯. ಹುಕ್ಕೇರಿ, ೧೦. ಚಿಕ್ಕೋಡಿ.

ಈ ಜಿಲ್ಲೆಯ ಪ್ರಮುಖ ನದಿಗಳು ಕೃಷ್ಣಾ, ಮಲಪ್ರಭಾ, ಘಟಪ್ರಭಾ. ಎರಡು ಅಣೆಕಟ್ಟುಗಳನ್ನು ಈ ಜಿಲ್ಲೆಯಲ್ಲಿ ಕಟ್ಟಲಾಗಿದೆ. ೧. ಮಲಪ್ರಭಾ ಅಣೆಕಟ್ಟೆ – ಬೆಳಗಾವಿಯ ಸವದತ್ತಿ ತಾಲೂಕಿನ ಮುನವಳ್ಳಿಯಲ್ಲಿ ಕಟ್ಟಲಾಗಿದೆ. ೨. ಘಟಪ್ರಭಾ ಅಣೆಕಟ್ಟು : ಮಲಪ್ರಭೆಯಂತೆ ಘಟಪ್ರಭಾ ಕೃಷ್ಣಾ ನದಿಯ ಒಂದು ಉಪನದಿ. ಬೆಳಗಾವಿಯ ಹುಕ್ಕೇರಿ ತಾಲೂಕಿನ ಹಿಡಕಲ್ ಗ್ರಾಮದ ಬಳಿ ಅಣೆಕಟ್ಟು ಕಟ್ಟಲಾಗಿದೆ. ಇಲ್ಲಿ ವಿದ್ಯುತ್ ಸಹ ಉತ್ಪಾದನೆ ಮಾಡಲಾಗುತ್ತದೆ. ಬೆಳಗಾವಿ ಜಿಲ್ಲೆಯ ಪ್ರಮುಖ ನದಿ ಕೃಷ್ಣಾ. ಇದರ ಉಪನದಿಗಳೆಂದರೆ 'ವೇದಗಂಗಾ' ಮತ್ತು 'ಧೂದಗಂಗಾ'. ಇವು

ಮಹಾರಾಷ್ಟ್ರದಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಹರಿಯುತ್ತವೆ.

ಬೆಳಗಾವಿಗೆ ಒಂದು ವಿಶೇಷ ಇತಿಹಾಸವಿದೆ. ಇದು ವೀರಯೋಧರ ಗಟ್ಟಿನೆಲೆ. ೧೮೨೪ರಲ್ಲಿ ಬ್ರಿಟಿಷರ ವಿರುದ್ಧ ವೀರಾವೇಶದಿಂದ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮ, ಬೆಳಗಾವಿ ವೀರಸಿರಿ. ಸಂಗೊಳ್ಳಿ ರಾಯಣ್ಣ ಕ್ರಾಂತಿ ಪುರುಷ. ಬ್ರಿಟಿಷರನ್ನು ಗಾಬರಿಗೊಳಿಸಿದ ಈ ಯೋಧರ ಪುಣ್ಯ ಜಿಲ್ಲೆ ಇದಾಗಿದೆ. ಇಂದು ಬೆಳಗಾವಿ ಶೈಕ್ಷಣಿಕವಾಗಿ, ಸಾಹಿತ್ಯಕವಾಗಿ, ರಾಜಕೀಯವಾಗಿ ಕರ್ನಾಟಕ ರಾಜ್ಯಕ್ಕೆ ಮತ್ತು ದೇಶಕ್ಕೆ ಮಾದರಿಯಾಗುವಂತಹ ಅನೇಕ ಕೊಡುಗೆಗಳನ್ನು ನೀಡಿದೆ. ಈ ಜಿಲ್ಲೆ ದೇಶದ ನಕಾಶೆಯಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿದೆ.

ಇಂದು ಬೆಳಗಾವಿ ನಗರವನ್ನು ಕುಂದಾನಗರಿ, ರಾಜ್ಯದ ಎರಡನೇ ರಾಜ್ಯಧಾನಿ ಎಂಬ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇಂದು ಬೆಳಗಾವಿಯು ಎಲ್ಲಾ ದೃಷ್ಟಿಯಿಂದಲೂ ಆಧುನಿಕತೆಗೆ ಮೈಯೊಡ್ಡಿನಿಂತಿದೆ. ವೈದ್ಯಕೀಯ, ವೃತ್ತಿಪರ ಕೋರ್ಸ್‌ಗಳು ಇಂದು ಈ ನಗರದಲ್ಲಿ ಲಭ್ಯವಿದ್ದು, ಉತ್ತಮ ವಾತಾವರಣದಿಂದಾಗಿ ಕೈಗಾರಿಕಾ ಅಭಿವೃದ್ಧಿಯು ಆಗುತ್ತಿದೆ. ಈ ಕಾರಣಕ್ಕಾಗಿ ಎಲ್ಲರನ್ನು ಆಕರ್ಷಿಸುತ್ತಿದೆ. ಈ ಜಿಲ್ಲೆ ಇಂದು ಕರ್ನಾಟಕದಲ್ಲಿ ಮಹಾನಗರಪಾಲಿಕೆಯ ಸ್ಥಾನವನ್ನು ಪಡೆದಿದೆ. ಕೋರೆಯವರ ವ್ಯಕ್ತಿತ್ವ ರೂಪಿಸುವಲ್ಲಿ ಬೆಳಗಾವಿ ಪಾತ್ರವಿದೆ. ಅದರಂತೆ ಬೆಳಗಾವಿ ಆಧುನೀಕರಣದಲ್ಲಿ ಕೋರೆಯವರ ಕೊಡುಗೆಯಿದೆ.

ಬೆಳಗಾವಿ ನಗರ ಇಂದು ಜಗತ್ತಿನ ಭೂಪಟದಲ್ಲಿ ರಾರಾಜಿಸುವಂತೆ ಮಾಡುವಲ್ಲಿ ಕೋರೆ ಅವರ ಶ್ರಮ ಅಧಿಕ. ಈ ನಗರದಲ್ಲಿ ಕೋರೆಯವರ ಶ್ರಮದಿಂದ ತಲೆ ಎತ್ತಿದ ಕೆ.ಎಲ್.ಇ. ಆಸ್ಪತ್ರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆ.ಎಲ್.ಇ. ವೈದ್ಯಕೀಯ ವಿಶ್ವವಿದ್ಯಾಲಯಗಳು ಈ ನಗರಕ್ಕೆ ಮತ್ತಷ್ಟು ಮೆರಗು ತಂದಿವೆ. ಎರಡನೇ ರಾಜಧಾನಿಯಾಗುವ ಎಲ್ಲಾ ಅರ್ಹತೆಯನ್ನು ಇದು ಹೊಂದಿದೆ. ಬೆಳಗಾವಿ ಜಿಲ್ಲೆ ಎರಡು ಲೋಕಸಭಾ ಕ್ಷೇತ್ರಗಳನ್ನು ಹೊಂದಿದೆ. ೧. ಬೆಳಗಾವಿ, ೨. ಚಿಕ್ಕೋಡಿ. ಒಟ್ಟು ೧೮ ವಿಧಾನಸಭಾಕ್ಷೇತ್ರಗಳನ್ನು ಜಿಲ್ಲೆ ಹೊಂದಿದ್ದು ಅವುಗಳೆಂದರೆ– ಬೆಳಗಾವಿ ನಗರ, ಬೆಳಗಾವಿ ಗ್ರಾಮೀಣ, ಚಿಕ್ಕೋಡಿ ಸದಲಗಾ, ಹುಕ್ಕೇರಿ, ನಿಪ್ಪಾಣಿ, ಅಥಣಿ, ಕಾಗವಾಡ, ಪರಸಗಡ ಸವದತ್ತಿ ಎಲ್ಲಮ್ಮ, ಗೋಕಾಕ್, ಬೈಲಹೊಂಗಲ, ಯಮಕನಮರಡಿ, ಅರಭಾವಿ, ರಾಯಬಾಗ್, ಕುಡಚಿ, ಖಾನಾಪುರ, ಚನ್ನಮ್ಮನ ಕಿತ್ತೂರು, ರಾಮದುರ್ಗ.

ರಾಜಕೀಯ ರಂಗದಲ್ಲಿ ಮೇರು ನಾಯಕರನ್ನು ನೀಡಿದ ಜಿಲ್ಲೆ ಇದಾಗಿದೆ. ಅನೇಕ ಸಕ್ಕರೆ ಕಾರ್ಖಾನೆಗಳನ್ನು ಜಿಲ್ಲೆ ಹೊಂದಿದ್ದು, ಸಕ್ಕರೆ ನಾಡು ಎನಿಸಿದೆ. ಒಟ್ಟಿನಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಈ ಜಿಲ್ಲೆಯ ಸಾಧನೆ ಅಪಾರ. ಅದೇ ರೀತಿ ಗಡಿ ಭಾಷಾ ಸಮಸ್ಯೆಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಆಗಾಗ ಈ ವಿಷಯ ಕುರಿತು ಮಹಾರಾಷ್ಟ್ರ–ಕರ್ನಾಟಕ ರಾಜ್ಯಗಳ ನಡುವೆ ವಾದ–ವಿವಾದಗಳು ಹುಟ್ಟಿಕೊಳ್ಳುತ್ತವೆ. ಮಹಾಜನ ಆಯೋಗ ವರದಿಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂದು ಹೇಳಲಾಗಿದ್ದರೂ, ಮಹಾರಾಷ್ಟ್ರ ರಾಜ್ಯವು ಪುನಃ ಈ ವಿಷಯದಲ್ಲಿ ಮೀನಮೇಷ ಎಣಿಸುತ್ತಿದೆ. ಆದರೂ ಇಂದಿನ

ಕನ್ನಡಿಗರು ಮಾತ್ರ ಗಟ್ಟಿತನ ತೋರಿಸುತ್ತ ಬಂದಿದ್ದಾರೆ. ಎಂ. ಇ. ಎಸ್.ನ ಕನ್ನಡ ವಿರೋಧಿ ಧೋರಣೆಗಳನ್ನು ಇಲ್ಲಿನ ಕನ್ನಡ ಪರ ಸಂಘಟನೆಗಳು ಪ್ರತಿರೋಧಿಸುತ್ತಾ, ಕನ್ನಡದ ಧ್ವಜವನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿವೆ. ಬೆಳಗಾವಿಯಲ್ಲಿ ಕನ್ನಡ ಕಟ್ಟುವಲ್ಲಿ ಕೆ.ಎಲ್.ಇ. ಸಂಸ್ಥೆಯು ಮುಂಚೂಣಿಯಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ.

ಚಿಕ್ಕೋಡಿ ಭಾಗದ ಸಂಕ್ಷಿಪ್ತ ಇತಿಹಾಸ :

ಚಿಕ್ಕೋಡಿ ಕರ್ನಾಟಕದ ಗಡಿನಾಡಿನ ತಾಲೂಕು ಇದು ಪ್ರಾಚೀನ ಕಾಲದಲ್ಲಿ ಕೂಹುಂಡಿ ನಾಡಿನ ಒಂದು ಭಾಗವಾಗಿತ್ತು. ತಾಲೂಕಿನಲ್ಲಿ ಹರಿಯುವ ಕೃಷ್ಣಾ, ವೇದಗಂಗಾ, ಧೂದಗಂಗಾ ಮೊದಲಾದ ಸಣ್ಣ, ದೊಡ್ಡ ನದಿಗಳು ನೆಲವನ್ನು ಹಸಿರುಗೊಳಿಸಿವೆ. ಒಕ್ಕಲುತನದ ಜೊತೆಗೆ ವಾಣಿಜ್ಯದಿಂದ ಚಿಕ್ಕೋಡಿ ಪ್ರದೇಶ ವಿದೇಶಿಯರನ್ನು ಆಕರ್ಷಿಸುತ್ತಾ ಬಂದುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ.

ಚಿಕ್ಕೋಡಿಯ ಪೂರ್ವಭಾಗ ಸಾಧಾರಣಮಟ್ಟದ್ದಾದರೂ, ಪಶ್ಚಿಮಭಾಗ ತುಂಬ ಫಲವತ್ತಾಗಿದ್ದು, ತಂಬಾಕು, ಕಬ್ಬಿನ ಬೆಳೆಗೆ ಪ್ರಖ್ಯಾತವಾಗಿದೆ. ಇದರೊಂದಿಗೆ ಹತ್ತಿ, ಗೋದಿ, ಜೋಳ, ಸೂರ್ಯಕಾಂತಿ, ಅರಿಷಿಣ, ದ್ರಾಕ್ಷಿ, ದಾಳಿಂಬೆ ಬೆಳೆಗಳಿಂದಾಗಿ ಸಂಪತ್ತಿನ ಆಗರವೆನಿಸಿದೆ.

ಚಿಕ್ಕೋಡಿ ಭಾಗದ ಪ್ರಾಚೀನ ಪರಂಪರೆ :

ಪುರಾತತ್ವವೇತ್ತರು ಈ ತಾಲೂಕಿನ ಎಕ್ಸಂಬಿ ಮತ್ತು ಕಡೋಳಿಯಲ್ಲಿ ಇತಿಹಾಸ ಕಾಲದ ಸಂಸ್ಕೃತಿ ನೆಲೆಸಿದ್ದುದರ ಬಗ್ಗೆ ಅವಶೇಷಗಳನ್ನು ಪತ್ತೆ ಮಾಡಿದ್ದಾರೆ. ಕದಂಬ ದೊರೆ ಶಾಂತಿವರ್ಮನ ಭೋಜ ಗ್ರಾಮದ ತಾಮ್ರಶಾಸನವು. ಕೃತಕ ಶಾಸನವಾದರೂ ತುಂಬಾ ಹಳೆಯದು. ಕ್ರಿ. ಶ. ಸುಮಾರು ೭, ೮ನೇ ಶತಮಾನದ್ದೆಂದು ಇತಿಹಾಸಕಾರರು. ಊಹಿಸಿರುವರು. ನಂತರ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಾಲ್ಯಾಣದ ಚಾಲುಕ್ಯರು ಈ ಪ್ರದೇಶದಲ್ಲಿ ಆಡಳಿತ ನಡೆಸಿದರು.

ಹೀಗೆ ೧೩ನೇ ಶತಮಾನದ ಆದಿ ಭಾಗದವರೆಗೆ ಬೇರೆ ಬೇರೆ ಕನ್ನಡದ ರಾಜಮನೆತಗಳು ಈ ಪ್ರದೇಶವನ್ನು ಆಳುತ್ತಾ ಬಂದವು. ಕ್ರಿ. ಶ. ೧೩೨೭ರಲ್ಲಿ ದಿಲ್ಲಿಯ ಸುಲ್ತಾನರು ಈ ಪ್ರದೇಶಗಳನ್ನು ಗೆದ್ದರು. ನಂತರ ಕ್ರಿ. ಶ. ೧೩೪೭ರಲ್ಲಿ ಬಹುಮನಿ ರಾಜ್ಯ ಸ್ಥಾಪನೆಯೊಂದಿಗೆ ಅವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿತ್ತು. ಕ್ರಿ. ಶ. ೧೪೮೯ರಲ್ಲಿ ವಿಜಾಪುರ ಆದಿಲ್‌ಶಾಹಿಗಳ ಅಧೀನವಾಯಿತು. ೧೭೭೬ರಲ್ಲಿ ಪೇಶ್ವೆಗಳು ಇದನ್ನು ಗೆದ್ದುಕೊಂಡರು. ೧೮೧೮ರಲ್ಲಿ ಪೇಶ್ವೆಗಳ ಆಳ್ವಿಕೆ ಕೊನೆಗೊಂಡು, ಬ್ರಿಟಿಷರ ಆಡಳಿತ ಬಂತು. ಬೆಳಗಾವಿ ಜಿಲ್ಲೆಯೊಂದಿಗೆ ಚಿಕ್ಕೋಡಿ ತಾಲೂಕು ಆಗಿ ಅಸ್ತಿತ್ವಕ್ಕೆ ಬಂದಿತು. ಬೆಳಗಾವಿ ಜಿಲ್ಲೆಯು ಉತ್ತರ ಭಾಗದ ಕೇಂದ್ರ ಪಟ್ಟಣವಾಗಿ ಇದು ಬೆಳೆಯುತ್ತಾ ಬಂದಿದೆ.

ಚಿಕ್ಕೋಡಿ ಭಾಗದ ಸಂಸ್ಕೃತಿ ಹಾಗೂ ಸಾಹಿತ್ಯಕ ಕೊಡುಗೆಗಳು :

ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸಾಹಿತಿಗಳು ಚಿಂತಕರು. ವಿಮರ್ಶಕರು. ಅನುವಾದಕರು ನುಡಿಗೆ ನೀಡಿದ

ಕೊಡುಗೆ ಅನನ್ಯ. ಕರ್ಣಪಾರ್ಯನ ನೇಮಿನಾಥ ಪುರಾಣವು ಈ ಪ್ರದೇಶದಲ್ಲಿ ರಚನೆಗೊಂಡ ಪ್ರಾಚೀನ ಕೃತಿಯೆಂದು ಹೇಳುವರು. ಇದರ ಕಾಲ ೧೨ನೇ ಶತಮಾನ. ಆಮೇಲೆ ೧೯ನೇ ಶತಮಾನದಲ್ಲಿ ದೇವದತ್ತತನಯರ ಹೆಸರು ನಮ್ಮ ಗಮನಕ್ಕೆ ಬರುವುದು. ಇವರು ಕನ್ನಡ, ಮರಾಠಿ ಭಾಷೆಗಳಲ್ಲಿ ನಾಟಕಗಳನ್ನು, ಲಾವಣಿಗಳನ್ನು ರಚಿಸಿದ್ದರು. ನಂತರ ನಾಟಕ ರಂಗಭೂಮಿಯಲ್ಲಿ ಚಿಕ್ಕೋಡಿ ಭಾಗದ ಹೆಸರನ್ನು ಚಿರಸ್ಥಾಯಿಗೊಳಿಸಿದವರು ಶಿವಲಿಂಗಸ್ವಾಮಿಗಳು. ನಾಟಕ ಕಂಪನಿಯನ್ನು ಕಟ್ಟಿ ರಾಜ್ಯದ ಎಲ್ಲೆಡೆ ಸಂಚಾರ ಮಾಡಿ ದೇಶಭಕ್ತಿಯ, ಸಾಮಾಜಿಕ, ಪೌರಾಣಿಕ ನಾಟಕಗಳನ್ನು ಆಡಿ ಜನರ ಮೆಚ್ಚುಗೆಯನ್ನು ಪಡೆದ ಶಿವಲಿಂಗ ಸ್ವಾಮಿಗಳು, ಚಿಕ್ಕೋಡಿ ಮಣ್ಣಿನವರು ಎನ್ನುವ ಅಭಿಮಾನ ಈ ಪ್ರದೇಶದ ಜನರದು. ಉತ್ತರ ಕರ್ನಾಟಕದಲ್ಲಿ ರಾಣಿ ಕಿತ್ತೂರು ಚೆನ್ನಮ್ಮ ನಾಟಕವನ್ನು ರಂಗಭೂಮಿಯ ಮೇಲೆ ಮೊದಲ ಸಲ ತಂದ ಶ್ರೇಯಸ್ಸು ಅವರದು. ಇವರ ಬಗ್ಗೆ ಇನ್ನು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ. ಇದಲ್ಲದೆ ಇವರು ಬಸವಾದಿ ಶಿವಶರಣೆಯರ ಇತಿಹಾಸಗಳನ್ನು ನಾಟಕ ರೂಪದಲ್ಲಿ ಬರೆದು ರಂಗದ ಮೇಲೆ ಪ್ರದರ್ಶನಗೊಳಿಸುತ್ತಿದ್ದರು. ಇವರು ಸ್ಥಾಪಿಸಿದ ನಾಟಕ ಕಂಪನಿಯ ಹೆಸರು ಶ್ರೀ ಶಿವಲಿಂಗೇಶ್ವರ ನಾಟಕ ಕಂಪನಿ, ಚಿಕ್ಕೋಡಿ. ಸ್ವಾತಂತ್ರ್ಯ ಆಂದೋಲನ ತೀವ್ರಗೊಳ್ಳುತ್ತಿದ್ದ ದಿನಗಳಲ್ಲಿ 'ಕಿತ್ತೂರು ರಾಣಿ ಚೆನ್ನಮ್ಮ' ನಾಟಕ ಜನರಲ್ಲಿ ಸ್ವಾತಂತ್ರ್ಯ ಆಂದೋಲನದ ಕಿಚ್ಚು ಹೊತ್ತಿಸಿತು. ಇನ್ನೊರ್ವ ರಂಗ ಭೂಮಿಯ ಶ್ರೇಷ್ಠ ನಾಡೋಜ ಏಣಗಿ ಬಾಳಪ್ಪನವರು ಇವರ ಶಿಷ್ಯರು ಎನ್ನುವುದು ಕೂಡಾ ಒಂದು ಹೆಮ್ಮೆಯ ಸಂಗತಿಯಾಗಿದೆ. ಶಿವಲಿಂಗ ಸ್ವಾಮಿಗಳ ಕಿರಿಯ ಸಹೋದರ ಬಾಬಯ್ಯನವರು ಒಬ್ಬ ಒಳ್ಳೆಯ ಕಲಾವಿದರಾಗಿದ್ದರೆಂದು ಬಿ. ಎಸ್. ಗವಿಮಠರು ಹೇಳುತ್ತಾರೆ.

ರಂಗನಟಿಯಾಗಿ, ನಾಟಕ ಕಂಪನಿಯ ಒಡತಿಯಾಗಿ, ಗಾಯಕಿಯಾಗಿ ಅನುಪಮ ಸೇವೆಗೈದ ಶ್ರೀಮತಿ ಸೋನುಬಾಯಿ ದೊಡಮನಿಯವರು ಮೂಲತಃ ಹಾವೇರಿಯವರಾದರೂ, ತಮ್ಮ ಜೀವಿತದ ಕೊನೆಯ ೨೫ ವರ್ಷಗಳನ್ನು ತಮ್ಮ ಮಗನ ಹತ್ತಿರ ಚಿಕ್ಕೋಡಿಯಲ್ಲಿ ಕಳೆದರು. ಸಂಗೀತ ಹಾಗೂ ನಾಟಕಕಾರರಿಗೆ ಚೇತನವಾಗಿ, ನಾಟಕ ಅಕಾಡೆಮಿಯ ಸದಸ್ಯರಾಗಿ ಹಾಗೂ ನಾಟಕಕಾರರಿಗೆ ಚೇತನವಾಗಿ ಬೆಳಗಿದರು.

ಆ. ನೇ. ಉಪಾಧ್ಯಾಯ ಅವರು ಈ ಭಾಗದ ಶ್ರೇಷ್ಠ ವಿದ್ವಾಂಸರು. ಕನ್ನಡ, ಅರ್ಧಮಾಗಧಿ, ಪ್ರಾಕೃತ, ಮರಾಠಿ ಹಾಗೆ ಇಂಗ್ಲೀಷ ಭಾಷೆಗಳ ಮೇಲೆ ಪ್ರಭುತ್ವ ಪಡೆದವರು. ಜೈನ ಸಾಹಿತ್ಯದ ಬಗ್ಗೆ ಅವರು ಕೈಗೊಂಡ ಸಂಶೋಧನೆ ಕನ್ನಡ ಸಾಹಿತ್ಯ ಸಾರಸ್ವತಲೋಕದಿಂದ ಪ್ರಶಂಸಿಸಲ್ಪಟ್ಟಿದೆ. ಮೂಲತಃ ಕಬ್ಬೂರಿನವರಾದ ಅನಂತ ಕಲ್ಲೋಳ, ಹಾಸ್ಯ ಲೇಖಕರೆಂದು ಗುರುತಿಸಲ್ಪಟ್ಟವರು. ಇವರ 'ಹಗರಣ' ಕೃತಿಗೆ ಅಕಾಡೆಮಿ ಪ್ರಶಸ್ತಿ ಸಿಕ್ಕಿದೆ. ಡಿ.ಎನ್. ಜೋಶಿ, ಪ್ರೊ. ಪಿ. ಆರ್. ದೇಶಪಾಂಡೆ, ಇಂದಿರಾ ಕಮಲಾ ಫಡ್ಕೆ ಮುಂತಾದವರು ಚಿಕ್ಕೋಡಿ ತಾಲೂಕಿನವರೇ. ಮರಾಠಿಯ ಪ್ರಸಿದ್ಧ ಕತೆಗಾರ ಜಿ. ಎ. ಕುಲಕರ್ಣಿ 'ಯಕ್ಸಂಬಾ'ದವರು. ಧಾರವಾಡದಲ್ಲಿದ್ದುಕೊಂಡು ಈ ಭಾಗದ ಪರಿಸರವನ್ನು ತಮ್ಮ ಕಥೆಗಳಲ್ಲಿ ಹಿಡಿದಿಟ್ಟಿದ್ದಾರೆ. ಡಾ. ಅನೀಲ ಕಮತಿಯವರು ವೃತ್ತಿಯಲ್ಲಿ ವೈದ್ಯರಾದರೂ, ಪ್ರವೃತ್ತಿಯಿಂದ ಸಾಹಿತಿಗಳು. ಇನ್ನು ಪ್ರೊ. ಮದನ ದೊಡ್ಡಮನಿ, ಪ್ರೊ. ಎಸ್. ವಾಯ್ ಹಂಜಿ, ಎಮ್. ಡಿ. ಉಪಾಧ್ಯೆ, ಜಯಪ್ರಕಾಶ

ಅಬ್ಬಿಗೇರಿ, ಪಿ. ಜಿ. ಕೆಂಪಣ್ಣವರ, ಶ್ರೀಪಾದ ಕುಂಬಾರ, ಧಾನೇಶ ಅವಟಿ, ಶಿವಪ್ಪ ಅರಭಾವಿ ಹಾಗೂ ಡಾ. ದಯಾನಂದ ನೂಲಿ ಇವರುಗಳು ಈಭಾಗದ ಹೆಸರಾಂತ ಬರಹಗಾರರು. ಚಿಕ್ಕೋಡಿ ತಾಲೂಕಿನಿಂದ ಕನ್ನಡ ಸಾಹಿತ್ಯಕ್ಕೆ ಅನೇಕ ಸಮರ್ಥ ಅನುವಾದಕರನ್ನು ಕೊಟ್ಟಿದೆ. ಅವರಲ್ಲಿ ಪ್ರೊ. ಚಂದ್ರಕಾಂತ ಪೋಕಳೆ, ಉಮಾ ಕುಲಕರ್ಣಿ, ಡಿ. ಎಸ್. ಚೌಗಲೆ ಪ್ರಮುಖರು.

ಚಿಕ್ಕೋಡಿ ತಾಲೂಕಿನ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ, ಸಂಕ್ಷಿಪ್ತ ಪರಿಚಯ :

ತಾಲೂಕು ಸ್ಥಳವಾಗಿರುವ ಚಿಕ್ಕೋಡಿ ಗಡಿನಾಡಿನ ಒಂದು ಮುಖ್ಯ ಪಟ್ಟಣ. ಈ ತಾಲೂಕಿನ ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಗುಡ್ಡಗಳಿವೆ. ಸರಾಸರಿ ಮಳೆಯ ಪ್ರಮಾಣ ೫೦೮ ಮಿಲಿಮೀಟರು. ಒಕ್ಕಲುತನ ಇಲ್ಲಿಯ ಜನರ ಮುಖ್ಯ ಉದ್ಯೋಗ. ಹತ್ತಿ, ಬೆಲ್ಲ, ತಂಬಾಕು, ಸಕ್ಕರೆ, ಮೆಣಸಿನಕಾಯಿ ಮುಂತಾದವುಗಳು ನಿಪ್ಪಾಣಿಯಿಂದ ಕೊಂಕಣ, ಪುಣೆ, ಮುಂಬಯಿ, ಗುಜರಾತಿನ ದೂರದ ಪ್ರದೇಶಗಳಿಗೆ ನಿರ್ಯಾತವಾಗುತ್ತವೆ. ಮತ್ತು ಹೈನುಗಾರಿಕೆಗೂ ಇದು ಪ್ರಸಿದ್ಧಿ ಪಡೆದಿದೆ. ಹಿತ್ತಾಳೆ, ತಾಮ್ರದ ಪಾತ್ರೆಗಳ ತಯಾರಿಕೆ, ಆಭರಣಗಳ ತಯಾರಿಕೆ, ನೇಕಾರಿಕೆ, ಕುಂಬಾರಿಕೆ ಇವು ಪ್ರಮುಖ ಕಸಬುಗಳು. ಇನ್ನು ಇಲ್ಲಿನ ದ್ರಾಕ್ಷಿ, ದಾಳಿಂಬೆ, ಪೇರಲ ಹಣ್ಣುಗಳು ಈ ಪ್ರದೇಶದ ರುಚಿಯನ್ನು ಹೆಚ್ಚಿಸಿವೆ.

ಬೆಳಗಾವಿ ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಗ್ರಾಮಗಳನ್ನು ಹೊಂದಿದ ಹಿರಿಮೆ ಈ ಚಿಕ್ಕೋಡಿ ತಾಲೂಕಿನದು. ೧೦೦ ಹಳ್ಳಿಗಳಿವೆ. (ಹೋಬಳಿಗಳನ್ನು ಹೊರತುಪಡಿಸಿ) ಚಿಕ್ಕೋಡಿ, ಸದಲಗಾ, ನಿಪ್ಪಾಣಿ ಇವು ಪುರಸಭೆಗಳನ್ನು ಹೊಂದಿದ ಪ್ರಮುಖ ಪಟ್ಟಣಗಳು.

ಇಲ್ಲಿ ೨ ಸಕ್ಕರೆ ಕಾರ್ಖಾನೆಗಳು, ಒಂದು ಹತ್ತಿ ಬಟ್ಟೆಯ ಗಿರಣಿ ಇದೆ.

ಈ ನಿಟ್ಟಿನಲ್ಲಿ ಚಿಕ್ಕೋಡಿ ತಾಲೂಕು ಕೃಷಿ, ತೋಟಗಾರಿಕೆ, ಸಹಕಾರ, ಕೈಗಾರಿಕೆಗಳ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಹೊಂದಿದೆ. ಒಂದು ಅಭಿವೃದ್ಧಿ ಹೊಂದುತ್ತಿರುವ ತಾಲೂಕಿನ ಪಟ್ಟಿಗೆ ಸೇರುತ್ತದೆ ಮತ್ತು ಜಿಲ್ಲೆಯ ಸ್ಥಾನಮಾನದ ಎಲ್ಲ ಅರ್ಹತೆಗಳನ್ನು ಹೊಂದಿದೆ.

ಚಿಕ್ಕೋಡಿ ತಾಲೂಕಿನ ಸಮಸ್ಯೆಗಳು :

ಚಿಕ್ಕೋಡಿ ಪ್ರದೇಶ ಕರ್ನಾಟಕ ಏಕೀಕರಣದ ನಂತರ ಮಹಾರಾಷ್ಟ್ರದ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳುವುದು ಸಾಧ್ಯವಾಗದೇ ಹೋಗಿದೆ. ಈ ಹಿನ್ನೆಲೆಯಲ್ಲಿ ಚಿಕ್ಕೋಡಿ ಪ್ರದೇಶದ ಸಮಸ್ಯೆಗಳು ಕುರಿತು ಚಿಂತನೆ ನಡೆಸಿದಾಗ ದಿಗಿಲುಗೊಳ್ಳುವುದು ಸಹಜ. ಈ ಪ್ರದೇಶದ ಉತ್ತರ ಹಾಗೂ ಪಶ್ಚಿಮಕ್ಕೆ ಹೀಗೆ ಎರಡು ದಿಕ್ಕುಗಳಲ್ಲಿ ಮಹಾರಾಷ್ಟ್ರದ ವಿಸ್ತೃತ ಸೀಮೆ ಆವರಿಸಿಕೊಂಡಿದೆ. ದಕ್ಷಿಣಕ್ಕೆ ಹುಕ್ಕೇರಿ, ಪೂರ್ವಕ್ಕೆ ರಾಯಬಾಗ್, ಪಶ್ಚಿಮದಲ್ಲಿ ಅಥಣಿ ತಾಲೂಕುಗಳು ಸುತ್ತುವರೆದಿವೆ.

ಇಲ್ಲಿ ಲಿಂಗಾಯತ, ಜೈನ, ಬ್ರಾಹ್ಮಣ, ಮರಾಠ, ಮುಸ್ಲಿಂ, ಬೇಡ, ಕುರುಬ, ಪರಿಶಿಷ್ಟ ಜನಾಗಂದವರಿದ್ದಾರೆ. ಲಿಂಗಾಯತರು ಕನ್ನಡಿಗರು. ಬ್ರಾಹ್ಮಣರ ಸುತ್ತ ಮರಾಠಿ ಸಂಸ್ಕೃತಿ ಹಬ್ಬಿಕೊಂಡಿದೆ. ಇಲ್ಲಿನ ಮುಖ್ಯ ಕಸಬು ಬೇಸಾಯ. ಕೃಷಿಗೆ ಸಂಬಂಧಿಸಿದ ಸಮಸ್ಯೆಗಳೇ ಇಲ್ಲಿ ಮುಖ್ಯ. ಕಬ್ಬು, ತಂಬಾಕು ಇಲ್ಲಿಯ ಆರ್ಥಿಕ ಬೆಳೆಗಳು. ಜೋಳ, ಗೋದಿ, ಶೇಂಗಾ, ಇನ್ನಿತರ ಬೆಳೆಗಳು. ಈ ಪ್ರದೇಶಕ್ಕೆ ಕೊಲ್ಲಾಪುರ, ಸಾಂಗ್ಲಿ, ಈಚಲಕರಂಜಿ ಸನಿಹದ ಅನುಕೂಲ ಹಾಗೂ ಲಾಭದಾಯಕ ಮಾರುಕಟ್ಟೆಗಳು. ರೈತರ ಫಸಲು ಖರೀದಿಸುವ ಒಂದು ಸುಸಜ್ಜಿತವಾದ ಮಾರುಕಟ್ಟೆ ಇಲ್ಲಿ ಇರದಿರುವುದು ರೈತರಿಗೆ ಅನಾನುಕೂಲವಾಗಿದೆ. ಪರಿಣಾಮ ಗಡಿಯಾಚೆಗಿನ ದಲಾಲಿಗಳನ್ನು, ನಗರಗಳನ್ನು ಅವಲಂಬಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಫಲವತ್ತಾದ ಕರಿ–ಎರೆ ಭೂಮಿಯಿದ್ದರೂ ವ್ಯವಸ್ಥಿತವಾದ ನೀರಾವರಿ ಸೌಲಭ್ಯವಿಲ್ಲ. ಸದಾಕಾಲ ವಿದ್ಯುತ್ತಿನ ಬರ ಕಾಡುತ್ತಿದೆ. ಪೂರೈಕೆಗಿಂತಲೂ ಮೂರು ಪಟ್ಟು ಅಧಿಕ ಬೇಡಿಕೆ ಇದೆ. ಹೀಗಾಗಿ ಸಕಾಲದಲ್ಲಿ ವಿದ್ಯುತ್ ಪೂರೈಕೆ ಇಲ್ಲದೆ ಜನ ಬೆಳೆದ ಬೆಳೆಗಳು ಇಳುವರಿ ಕಡಿಮೆಯಾಗಲು ಕಾರಣವಾಗಿದೆ. ಇನ್ನು ಕಬ್ಬನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ಮಣ್ಣಿನ ಶಕ್ತಿ ಕಡಿಮೆಯಾಗುತ್ತಿದೆ. ಗಡಿಯಾಚೆ ಐದು ನೂಲಿನ ಗಿರಣಿ ಇದ್ದರೂ, ಇಲ್ಲಿ ಮಾತ್ರ ಒಂದೇ ಇದೆ. ಅದು ನೆಪಮಾತ್ರ ಇದ್ದಂತೆ ಕಾರ್ಯ ಮಾಡುತ್ತದೆ. ಈ ಪ್ರದೇಶದಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳು ಇಲ್ಲದೇ ಇರುವುದರಿಂದ ಗಡಿಯಾಚಿನ ಕಾರ್ಖಾನೆಗಳತ್ತ ಜನ ಉದ್ಯೋಗ ಅರಸಿಕೊಂಡು ಹೋಗುವ ಸ್ಥಿತಿ ಇದೆ. ಇನ್ನು ರೈತರು ಬೆಳೆದ ಕಬ್ಬಿಗೆ ಸೂಕ್ತ ಬೆಲೆ ಸಿಗದೇ ಇರುವುದು ಕೂಡಾ ಸಮಸ್ಯೆ ಇಲ್ಲಿದೆ. ಇನ್ನು ತಂಬಾಕು ಬೆಳೆಗೆ ಯೋಗ್ಯವಾದ ಬೆಲೆ ಸಿಗದೆ ರೈತರು ಸಂಕಷ್ಟದಲ್ಲಿ ಇದ್ದಾರೆ.

ಮರಾಠಿ ಭಾಷಿಕರ ಹಿಡಿತ ಸಾಧಿಸಿದ ನಿಪ್ಪಾಣಿ ಭಾಗವು ಕನ್ನಡದ ಸಂಸ್ಕೃತಿಗೆ ಹೊಂದಿಕೊಳ್ಳುತ್ತಿಲ್ಲ. ಇನ್ನು ಮಹತ್ವದ ಸಮಸ್ಯೆ ಎಂದರೆ ನೆರೆ ಹಾವಳಿಯದ್ದು, ಕೃಷ್ಣಾ ನದಿಯ ಪ್ರವಾಹ ಪ್ರಮಾಣ ಪ್ರತಿ ವರ್ಷ ನದಿತೀರದ ಗ್ರಾಮೀಣ ಜೀವನವನ್ನು ನುಂಗಿಹಾಕುತ್ತಿದೆ.

ಹೈನುಗಾರಿಕೆಗೆ – ಡೈರಿಗಳ ಅನಾನುಕೂಲತೆಯಿಂದ ಈ ಭಾಗದಲ್ಲಿನ ಸಾವಿರಾರು ಲೀಟರ್ ಹಾಲು ಗಡಿಯಾಚೆಯ ನಗರಗಳಿಗೆ ಸಾಗಿಸುತ್ತಿರುವುದರಿಂದ, ಅಲ್ಲಿಯ ಡೈರಿ ಉದ್ಯಮ ಬೃಹದಾಕಾರದಲ್ಲಿ ಬೆಳೆದು ನಿಂತಿದೆ. ಇಲ್ಲಿಯೂ ಆ ತರಹದ ಉದ್ಯಮದ ಅವಶ್ಯಕತೆ ಇದೆ. ತಾಲೂಕಿನಲ್ಲಿ ಎರಡು ಸಹಕಾರಿ ಸಕ್ಕರೆ ಕಾರ್ಖಾನೆ ಇದ್ದರೂ, ಕಬ್ಬು ಬೆಳೆಯುವ ಪ್ರದೇಶ ಹೆಚ್ಚಿಗೆ ಇರುವುದರಿಂದ ಇನ್ನೂ ಎರಡು ಕಾರ್ಖಾನೆಗಳ ಅವಶ್ಯಕತೆ ಇದೆ.

ಚಿಕ್ಕೋಡಿ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಹಳವಿದ್ದು, ಕೃಷ್ಣಾ ನದಿಯಿಂದ ನೀರು ಪೂರೈಸುವ ಕಾರ್ಯ ಶೀಘ್ರಗತಿ ಪಡೆದುಕೊಳ್ಳಬೇಕಿದೆ. ನಗರಕ್ಕೆ ಒಳಚರಂಡಿ, ಸಮರ್ಪಕವಾದ ರಸ್ತೆ ಮತ್ತು ಬಡಾವಣೆಗಳ ಅಗತ್ಯವಿದೆ. ತಾಲೂಕಿನ ಗ್ರಾಮೀಣ ರಸ್ತೆಗಳನ್ನು ಉತ್ತಮ ಮಟ್ಟಕ್ಕೆ ಏರಿಸುವ ಕಾರ್ಯವಾಗಬೇಕಾಗಿದೆ. ಇಲ್ಲಿನ ಬಡ ದಲಿತರು ಉದ್ಯೋಗಕ್ಕಾಗಿ ದೂರದ ಮುಂಬೈ ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಗಡಿಯಾಚಿನ ಕಾರ್ಖಾನೆಗಳಲ್ಲಿ ನೌಕರಿ ಮಾಡುತ್ತಾರೆ. ಈ ನೆಲದಲ್ಲಿ ಅವರಿಗೆ ಆಶ್ರಯವಿಲ್ಲ. ನೆಲೆಯಾಗಿರಲು ಭದ್ರವಾದ ನೆಲೆಯೂ ಇಲ್ಲ. ಕುರಿ

ಸಾಕಾಣಿಕ ಹೆಚ್ಚಿಗೆ ಇದೆ. ಈ ಉದ್ಯಮಕ್ಕೆ ಪ್ರೋತ್ಸಾಹ ದೊರೆಯಬೇಕಿದೆ. ಬೃಹತ್ ಪ್ರಮಾಣದ ಮಾರುಕಟ್ಟೆಯ ಅವಶ್ಯಕತೆ ಇದೆ. ರೈಲು ಸಂಪರ್ಕದ ಅವಶ್ಯಕತೆ ಇದೆ. ಒಂದು ವೈದ್ಯಕೀಯ ಮಹಾವಿದ್ಯಾಲಯ, ಆಧುನಿಕ ಆಸ್ಪತ್ರೆಯ ಕೊರತೆ ಈ ಪ್ರದೇಶ ಎದುರಿಸುತ್ತಿದೆ. ಬೃಹತ್ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಯತ್ನ ಆಗಬೇಕಾಗಿದೆ. ಇದರಿಂದ ಉದ್ಯೋಗ ಸೃಷ್ಟಿಸಲು ಈ ಪ್ರದೇಶದ ಜನ ಗಡಿಯಾಚೆಗಿನ ಕಾರ್ಖಾನೆಗಳತ್ತ ಮುಖಮಾಡುವುದನ್ನು ತಪ್ಪಿಸಬಹುದು. ಈ ಎಲ್ಲಾ ಸಮಸ್ಯೆಗಳ ಮತ್ತು ಗೊಂದಲಗಳ ನಡುವೆಯೂ ವ್ಯವಸ್ಥಿತವಾದ ಯೋಜನೆ, ಸಮರ್ಥ ನಾಯಕತ್ವ, ಸಾಮಾಜಿಕ ಕಳಕಳಿ, ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಉತ್ಸಾಹ ಮತ್ತು ಧೈರ್ಯ ಬೇಕು. ಈ ನಿಟ್ಟಿನಲ್ಲಿ ಇತ್ತೀಚೆಗೆ ಈ ಭಾಗದ ನಾಯಕರು ಪ್ರಯತ್ನಿಸುತ್ತಿದ್ದಾರೆ. ಆದರೆ ಅದು ತೀವ್ರಗತಿಯ ಸ್ವರೂಪ ಪಡೆಯಬೇಕಾಗಿದೆ. ಅಂದಾಗ ಈ ಮೂಲಭೂತ ಸಮಸ್ಯೆಗಳು ನಿವಾರಣೆಯಾಗಲು ಸಾಧ್ಯವಿದೆ.

ಚಿಕ್ಕೋಡಿ ಪ್ರದೇಶದ ರಾಜಕೀಯ ಸ್ಥಿತಿ-ಗತಿಗಳು :

ಏಕೀಕರಣಕ್ಕಿಂತ ಮುಂಚೆ ಮುಂಬೈ ಇಲಾಖೆಯ ಕನ್ನಡ ಜಿಲ್ಲೆಗಳಲ್ಲಿ ಬೆಳಗಾವಿ ಜಿಲ್ಲೆ ಪ್ರಮುಖವಾದುದು. ಅದರಲ್ಲೂ ಚಿಕ್ಕೋಡಿ ತಾಲೂಕಿನ ಪ್ರದೇಶ ಕೊಲ್ಲಾಪೂರ ಸಂಸ್ಥಾನಕ್ಕೆ ಒಳಪಟ್ಟಿದ್ದು, ಈ ತಾಲೂಕಿನ ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿ ಮರಾಠಿ ಭಾಷಿಕರು ವಾಸವಾಗಿದ್ದರು. ಕೊಲ್ಲಾಪೂರದಿಂದ ಚಿಕ್ಕೋಡಿ ೪೦ ಮೈಲು ದೂರದಲ್ಲಿದೆ. ಕೊಲ್ಲಾಪೂರ ಭಾಗದಲ್ಲಿ ರಾಜಾರಾಮ ಕಾಲೇಜು ಹಳೆಯದು ಮತ್ತು ಪ್ರಸಿದ್ಧವಾದುದು. ವ್ಯವಹಾರ ನಿಪ್ಪಾಣಿಯಿಂದ ಕೊಲ್ಲಾಪೂರ ಮುಂಬೈ ಕಡೆಗೆ ವಿಸ್ತರಿಸಿದೆ. ಅಂತೆಯೇ ಪುಣೆ, ಮುಂಬೈಗಳಲ್ಲಿ ನಡೆಯುವ ರಾಜಕೀಯ ಚಿಂತನೆಯ ಗಾಳಿ ಚಿಕ್ಕೋಡಿಯತ್ತಲೂ ಬೀಸುತ್ತಾ ಬಂದಿದೆ. ರಾಜಕೀಯ ಚಳುವಳಿಯ ಕೇಂದ್ರವೆನಿಸಿದ ಮುಂಬೈ-ಪುಣೆ ಪ್ರದೇಶಗಳಲ್ಲಿ ಮೂಡಿದ ರಾಜಕೀಯ ಜಾಗೃತಿ ಕರ್ನಾಟಕದ ಉಳಿದ ಪ್ರದೇಶಗಳಿಗಿಂತ ಚಿಕ್ಕೋಡಿ ಭಾಗದಲ್ಲಿ ಮೊದಲೇ ಪ್ರಾರಂಭವಾಯಿತು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭಗಳಲ್ಲಿ, ಭಾರತ ಸ್ವಾತಂತ್ರ್ಯ ಚಳುವಳಿಯ ಆದ್ಯ ಪ್ರವರ್ತಕರಾದ ಬಾಲ ಗಂಗಾಧರ ತಿಲಕ ನೇತೃತ್ವದ ಮರಾಠಿ "ಕೇಸರಿ" ದಿನಪತ್ರಿಕೆಯನ್ನು ಚಿಕ್ಕೋಡಿ ತಾಲೂಕಿನ ಸುಶಿಕ್ಷಿತರು ಮೊದಲಿನಿಂದ ಓದುತ್ತಾ ಬಂದಿದ್ದಾರೆ. ಕೊಲ್ಲಾಪೂರ ಸಂಸ್ಥಾನದ ಛತ್ರಪತಿ ಶಾಹು ಮಹಾರಾಜರು ನಡೆಸುತ್ತಿದ್ದ ಸತ್ಯಶೋಧಕ ಚಳುವಳಿಯ ಪ್ರಭಾವ ಕೂಡಾ ಈ ಭಾಗದ ಮೇಲೆ ಆಗಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರ ಸಾಮಾಜಿಕ ಜಾಗೃತಿಯ ಅಲೆಗಳು ಇಲ್ಲಿ ಹಬ್ಬಿದವು. ೧೯೨೭ರಲ್ಲಿ ಡಾ. ಅಂಬೇಡ್ಕರ್ ಚವುದಾರ ಕೆರೆಯ ನೀರನ್ನು ಮುಟ್ಟಿ ಅಸ್ಪೃಶ್ಯರು ಉಳಿದ ಸಮಾಜದವರಿಗಿಂತ ಬೇರೆ ಅಲ್ಲ ಎಂದು ಘೋಷಿಸಿದರು. ಆ ಚಳುವಳಿಯಲ್ಲಿ ಚಿಕ್ಕೋಡಿ ತಾಲೂಕಿನ ಬೇಡಕಿಹಾಳ ಗ್ರಾಮದ ರತ್ನಪ್ಪ ಸೂರ್ಯವಂಶಿ ಪಾಲ್ಗೊಂಡಿದ್ದು, ರಾಜಕೀಯ ಹಾಗೂ ಸಾಮಾಜಿಕ ಜಾಗೃತಿಯ ಸೂಚನೆಯಾಗಿದೆ. ತಾಲೂಕಿನ ಮೇಲ್‌ವರ್ಗದವರು ಕೊಲ್ಲಾಪೂರ, ಪುಣೆ ಕಾಲೇಜುಗಳಲ್ಲಿ ಓದುತ್ತಾ ಪಡೆದುಕೊಂಡಿರುವ ಸ್ಫೂರ್ತಿಯನ್ನು ತಮ್ಮ ಊರಿಗೆ ತೆರಳಿದ ನಂತರ ಅಲ್ಲಿನ ಜನರಲ್ಲಿ ಬಿಂಬಿಸಿದರು.

ವ್ಯಾಪಾರ, ಶಿಕ್ಷಣ, ಉದ್ಯಮ ಕುರಿತಂತೆ ಈ ಶಹರಗಳ ಸಂಗಡ ಇದ್ದ ಸಂಬಂಧ ಕೂಡಾ ರಾಜಕೀಯ

ಪರಂಪರೆ ಬೆಳೆಯುವಲ್ಲಿ ಸಹಾಯಕವಾಯಿತು. ಒಟ್ಟಿನಲ್ಲಿ ಈ ಪ್ರದೇಶದ ಜನರು ಇಪ್ಪತ್ತನೆಯ ಶತಮಾನದ ಆರಂಭದಿಂದಲೇ ರಾಜಕೀಯ ಪರಿಜ್ಞಾನವುಳ್ಳವರಾಗಿದ್ದಾರೆ. ಮರಾಠಿ ವರ್ತಮಾನ ಪತ್ರಿಕೆಗಳಾದ 'ಜ್ಞಾನ ಪ್ರಕಾಶ', 'ಸಕಾಳ', 'ಕೇಸರಿ' ಮೊದಲಾದವುಗಳನ್ನು ಜನರು ಓದುತ್ತಿದ್ದರು. ಪೇಶ್ವೆ ರಾಜ್ಯದ ಪ್ರಭಾವ ಈ ಭಾಗದ ಮೇಲೆ ಆಗಿದ್ದುದರಿಂದ ಮರಾಠಿ ಓದುವುದು, ಬರೆಯುವುದು ಪ್ರತಿಷ್ಠೆಯ ಸಂಕೇತವಾಗಿತ್ತು.

'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂದು ಎದೆ ತಟ್ಟಿ ಹೇಳಿದ ಲೋಕಮಾನ್ಯ ಬಾಲಗಂಗಾಧರ ತಿಲಕರು ನಿಪ್ಪಾಣಿ, ಚಿಕ್ಕೋಡಿಗಳಲ್ಲಿ ಸಂಚರಿಸಿ, ಜನರಲ್ಲಿ ರಾಜಕೀಯ ಬೀಜಾರೋಹಣ ಮಾಡಿದರು. ಚಿಕ್ಕೋಡಿ ವಾಡೆಯೊಂದರಲ್ಲಿ ಲೋಕಮಾನ್ಯರು ಅತಿಥಿಯಾಗಿ ಉಳಿದುಕೊಂಡರು. ೧೯೨೦ರ ವೇಳೆಗೆ ತಿಲಕರ ಸ್ಫೂರ್ತಿಯಿಂದ ಇಲ್ಲಿ ಶೈಕ್ಷಣಿಕ ಚಳವಳಿ ಕೂಡಾ ಆರಂಭವಾಯಿತು. ಮಹಾತ್ಮಾ ಗಾಂಧೀಜಿ ೧೯೩೩ರಲ್ಲಿ ನಿಪ್ಪಾಣಿಯಲ್ಲಿ ತಂಗಿದ್ದರು. ಚಿಕ್ಕೋಡಿಯಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಅವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಪ್ರದೇಶವನ್ನು ಇಂದು 'ಗಾಂಧೀ ಬಜಾರ್' ಎಂದೇ ಕರೆಯಲಾಗುತ್ತದೆ. ಈ ರಾಷ್ಟ್ರ ನಾಯಕರ ಚಿಂತನೆಯ ಫಲವಾಗಿ ೧೯೩೧ ಹಾಗೂ ೧೯೪೨ರ ಚಳುವಳಿಯಲ್ಲಿ ಚಿಕ್ಕೋಡಿ ಪ್ರದೇಶದ ಸಾಕಷ್ಟು ಜನ ಸೇರಿಕೊಂಡರು. ಅಂತೆಯೇ ಈ ತಾಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ಹೆಚ್ಚು. ಇವರಲ್ಲಿ ಅಂಕಲಿಯ ಶ್ರೀ ಬಸವಪ್ರಭು ಕೋರೆ, ಮಾಂಜರಿಯ ಅಪ್ಪಾಸಾಹೇಬ ಪಾಟೀಲ, ಯಕ್ಸಂಬಿಯ ದತ್ತು ಪಾಂಗಮ, ದಿನಕರ ಜೋಶಿ ಮೊದಲಾದವರು ಪ್ರಮುಖರಾಗಿದ್ದಾರೆ. ಅದರಂತೆ ಅಕ್ಕೋಳ, ಬೋರಗಾಂವ, ಭೋಜ ಮುಂತಾದ ಊರುಗಳಲ್ಲಿಯೂ ಹೋರಾಟಗಾರರಾಗಿ ಹೋದರು.

೧೯೩೭ರಲ್ಲಿ ನಡೆದ ಚುನಾವಣೆಯಲ್ಲಿ ನಿರ್ದಿಷ್ಟ ಸರ್ಕಾರಿ (ಚಾವಡಿ), ಪಾಳೆ (ಕಂದಾಯ) ಕೊಡುವವರೇ ಮತದಾರರಾಗಿದ್ದ ಕಾಲದಲ್ಲಿ ಎ. ಬಿ. ಲಠ್ಠೆ, ಎಂ. ಪಿ. ಪಾಟೀಲ ಹಾಗೂ ರಾಘವೇಂದ್ರ ಜೋಶಿ ಅವರು ಈಗಿನ ಚಿಕ್ಕೋಡಿ ವಿಭಾಗದಿಂದ (ಹುಕ್ಕೇರಿ, ಚಿಕ್ಕೋಡಿ ಹಾಗೂ ಅಥಣಿ ತಾಲೂಕುಗಳನ್ನು ಒಳಗೊಂಡ ಭಾಗದಿಂದ) ಮುಂಬೈ ಶಾಸನ ಸಭೆಯ ಕೆಳಮನೆಗೆ ಕಾಂಗ್ರೆಸ್ ಅಭ್ಯರ್ಥಿಗಳೆಂದು ಆಯ್ಕೆಯಾಗಿದ್ದರು. ಅದೇ ಸಂದರ್ಭದಲ್ಲಿ ಬೆನ್ನಾಡಿಯ ಶ್ರೀ ಬಳವಂತ ಕರಾಳೆ ಅವರು ಹರಿಜನ ಪ್ರತಿನಿಧಿಯಾಗಿ ಆಗಿನ ಮುಂಬೈ ಕೆಳಮನೆಗೆ ಆಯ್ಕೆಯಾದರು. ಡಾ. ಅಂಬೇಡ್ಕರ್ ನೇತೃತ್ವದ ಸ್ವತಂತ್ರ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಗೊಂಡ ಕರಾಳೆ ಅವರು ಹರಿಜನರ ಮೊದಲ ಪ್ರತಿನಿಧಿ. ಅದು ನಡೆದದ್ದು ೧೯೩೭ರ ಚಳುವಳಿಯ ಪೂರ್ವದಲ್ಲಿ.

ಈ ತಾಲೂಕಿನ ದೊಡ್ಡ ಗ್ರಾಮ ಸದಲಗಾ. ಪಂಚಾಯತಿಯ ದಕ್ಷ ಚೇರ್‌ಮನ್ನರಾಗಿ ಕಾರ್ಯನಿರ್ವಹಿಸಿದ ಹೆಗ್ಗಳಿಕೆ ದಲಿತ ಸಮಾಜದ ಪಿ. ಪಿ. ಹೆಗರೆಯವರಿಗೆ ಸಲ್ಲುತ್ತದೆ. ಅಂದು ಆ ಭಾಗದ ದಲಿತರಲ್ಲಿ ಮೂಡಿದ ರಾಜಕೀಯ ಪ್ರಜ್ಞೆಯ ಲಕ್ಷಣ. ಈ ಭಾಗದ ಹರಿಜನರು ಅಂಬೇಡ್ಕರ್ ಅಭಿಮಾನಿಗಳು. ಆದರೂ ಸಾಕಷ್ಟು ಕಾರ್ಯಕರ್ತರು ಅಧಿಕಾರಿಗಳಾಗಿ ಇರುವುದುಂಟು. ಸ್ವರಾಜ್ಯ ಬಂದ ಮೇಲೆ ನೂತನ ಘಟನೆಯ ಪ್ರಕಾರ ನಡೆದ ಮೊದಲ ಚುನಾವಣೆಯಲ್ಲಿ ದ್ವಿಸದಸ್ಯ ಕ್ಷೇತ್ರವಾಗಿತ್ತು. (Double Member Constituency)೧೯೫೨ ರಲ್ಲಿ ಜರುಗಿದ ಚುನಾವಣೆಯಲ್ಲಿ

ಒಂಬತ್ತು ಜನರು ಈ ಮತ ಕ್ಷೇತ್ರದಿಂದ ಸ್ಪರ್ಧಿಸಿದರು. ಅವರಲ್ಲಿ ಚಿಕ್ಕೋಡಿಯ ಎಸ್. ಡಿ. ಕೋತಾವಳಿ (ವಕೀಲರು) ಹಾಗೂ ಕಾಯ್ದಿಟ್ಟ ಉಮೇದುವಾರಾಗಿ ಶ್ರೀಮತಿ ಶ್ರೇಯಕರ್‌ಬಾಯಿ ಕಾಂಗ್ರೆಸ್ಸಿನ ಪರವಾಗಿ ವಿಜಯಿಯಾಗಿದ್ದರು. ಆಗ ನಣದಿಯ ದೇಸಾಯಿ, ವಿ. ಟಿ. ನಿಂಬಾಳಕರ, ನನದಿಕರ ಬಾಬಾ ಹಾಗೂ ನಿಪ್ಪಾಣಿಯ ಬಲವಂತರಾವ್ ವರಾಳೆ ಒಂದಾಗಿ ಸ್ಪರ್ಧಿಸಿದರು. ಭಾರತೀಯ ಸಮಾಜವಾದ ಪಕ್ಷದ ವತಿಯಿಂದ ಸದಲಗಾದ ಪಿ. ಕೆ. ಭೋಗಲೆ ಹಾಗೂ ಚಿಕ್ಕೋಡಿಯ ಎಂ. ವಿ. ಶೆಟ್ಟಿ ಕಣಕ್ಕೆ ಇಳಿದಿದ್ದರು. ಅಲ್ಲದೆ ನಾಗನೂರಿನ ಮಲ್ಲಗೌಡ ಪಾಟೀಲ, ಅಕ್ಕೋಳದ ಹೊನ್ನಶೆಟ್ಟಿಯವರು ಸ್ವತಂತ್ರ ಅಭ್ಯರ್ಥಿಯಾಗಿದ್ದರು. ಅದೇ ವರ್ಷ ಅಂಕಲಿಯ ಚಿದಾನಂದ ಕೋರೆ ಕಾಗವಾಡ ಮತಕ್ಷೇತ್ರದಿಂದ ಸ್ವತಂತ್ರವಾಗಿ ಸ್ಪರ್ಧಿಸಿದ್ದರೆಂದು ಶಾಂತಪ್ಪಣ್ಣ ಮಿರ್ಜಿ ಹೇಳುತ್ತಾರೆ.

೧೯೪೮ರಲ್ಲಿ ಚಿಕ್ಕೋಡಿ ತಾಲೂಕಿನಲ್ಲಿ ಸಮಾಜವಾದದ ಅಲೆ ಬೀಸಿತು. ೧೯೪೮ರ ಏಪ್ರೀಲ್ ತಿಂಗಳಲ್ಲಿ ಕಾಂಗ್ರೇಸ್ಸಿನ ಕಿಸಾನ್ ಸಭೆಯ ಮೊದಲ ಪರಿಷತ್ ಯಕ್ಸಂಬಾದಲ್ಲಿ ಜರುಗಿತ್ತು. 'ಊಳುವವನೆ ಹೊಲದ ಒಡೆಯ' ಎಂಬ ಕಾಂಗ್ರೆಸ್ಸಿನ ವಿಚಾರ ಬಿರುಸಿನಿಂದ ಪ್ರಚಾರಗೊಂಡು, ಹಳ್ಳಿ-ಹಳ್ಳಿಗಳಿಗೆ ತಲುಪುವಂತಾಗಿತ್ತು. ಒಬ್ಬರು ಭಾರೀ ಶ್ರೀಮಂತರು, ಮತ್ತೊಬ್ಬರು ಕಡು ಬಡವರು ಇರಕೂಡದೆಂಬ ಸಮಾಜವಾದದ ವಿಚಾರ ಈ ತಾಲೂಕಿನಲ್ಲಿ ವ್ಯಾಪಿಸತೊಡಗಿತು. ರಾಷ್ಟ್ರದ ವಿಚಾರವಂತ ನಾಯಕರಲ್ಲಿ ಒಬ್ಬರಾದ ಡಾ. ರಾಮಮನೋಹರ ಲೋಹಿಯಾ ಹಾಗೂ ಮುಂದೆ 'ಲೋಕ ನಾಯಕ'ರೆಂದು ಪ್ರಸಿದ್ಧಿ ಪಡೆದ ಜಯಪ್ರಕಾಶ ನಾರಾಯಣರು ಚಿಕ್ಕೋಡಿಗೆ ಭೇಟಿಕೊಟ್ಟ ಪ್ರಮುಖ ರಾಷ್ಟ್ರ ನಾಯಕರು. ಇವರೆಲ್ಲರ ವಿಚಾರದ ಪ್ರಭಾವ ಈ ಭಾಗದ ತರುಣ ಕಾರ್ಯಕರ್ತರ ಮೇಲೆ ಆಗದೇ ಹೋಗಲಿಲ್ಲ. ೧೯೪೨ರ ಚಳುವಳಿಯ ಕಾಲಕ್ಕೆ 'ರಾಷ್ಟ್ರೀಯ ಸೇವಾದಳ' ಎಂಬ ಸಂಘ ಈ ಪ್ರದೇಶದ ತರುಣರಲ್ಲಿ ಸೇವಾ ಮನೋಭಾವನೆಯನ್ನು ಮೂಡಿಸಿ, ಅವರ ವ್ಯಕ್ತಿತ್ವವನ್ನು ರೂಪಿಸಿತು. ಮಹಾರಾಷ್ಟ್ರದಲ್ಲಿ ಸಾತಾರಾ ಜಿಲ್ಲೆಯಲ್ಲಿ ರೂಪತಾಳಿದ ಪ್ರತಿ ಸರ್ಕಾರದ ಪ್ರಭಾವ ಹಳ್ಳಿಯಲ್ಲಿನ ಶ್ರೀಮಂತರ ಬಡ್ಡಿ ಹಣಕ್ಕೆ ಅಡವಿಟ್ಟುಕೊಂಡ ಜಮೀನುಗಳನ್ನು ಮುಕ್ತಮಾಡಿತು. ಪ್ರತಿ ಸರ್ಕಾರದ ಮುಖಂಡರಾದ ಶ್ರೀ ನಾನಾ ಪಾಟೀಲರು ಆಗ ಚಿಕ್ಕೋಡಿಗೆ ಬಂದಿದ್ದರು. ಮುಂಬೈ ಸರ್ಕಾರದ ರೈತರ ಸಾಲ ಮುಕ್ತ ಮಾಡುವ ಕಾಯ್ದೆ ಬಂದಾಗ ಸಾವಿರಾರು ಅರ್ಜಿಗಳು ನ್ಯಾಯಾಲಯದಲ್ಲಿ ದಾಖಲಾಗಿ, ರೈತರು ಋಣಮುಕ್ತರಾದರು. ಮುಂಬೈ ಸರ್ಕಾರದ (ಟೆನೆನ್ಸಿ ಆ್ಯಕ್ಟ್) ಗೇಣಿದಾರರಿಗೆ ಶಾಶ್ವತ ಹಾಗೂ ಯೋಗ್ಯ ಗೇಣಿಯ ಹಣ ಗೊತ್ತು ಮಾಡಿಕೊಳ್ಳುವ ಹಕ್ಕನ್ನು ದೊರಕಿಸಿಕೊಟ್ಟಿತು. ಪೊಟ್ಟಿ ಶ್ರೀರಾಮುಲು ಅವರ ಉಪವಾಸ ಸತ್ಯಾಗ್ರಹದ ಫಲವಾಗಿ ಆಂಧ್ರ ಹಾಗೂ ತಮಿಳುನಾಡು ಎಂದು ಮದ್ರಾಸ್ ಇಬ್ಭಾಗವಾಯಿತು. ಫಜಲ್ ಅಲಿ ಆಯೋಗದ ಪ್ರಕಾರು ಮುಂಬೈ ರಾಜ್ಯದ ಕನ್ನಡದ ನಾಲ್ಕು ಜಿಲ್ಲೆಗಳು ಮೈಸೂರು ಪ್ರಾಂತ್ಯದಲ್ಲಿ ವಿಲೀನಗೊಂಡು ಹೊಸ ಮೈಸೂರು ರಾಜ್ಯ ಅಸ್ಥಿತ್ವಕ್ಕೆ ಬಂದಿತು.

ಮೈಸೂರು ರಾಜ್ಯವು ನಿರ್ಮಾಣಗೊಂಡ ಹೊಸದರಲ್ಲಿ ಈ ತಾಲೂಕನ್ನು ಮರು ವಿಧಾನಸಭೆಯ ಕ್ಷೇತ್ರವನ್ನಾಗಿ ವಿಭಜಿಸಲಾಯಿತು. ೧೯೫೭ರಲ್ಲಿ ನಡೆದ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಒಂದು ಐತಿಹಾಸಿಕ ತೀರ್ಪು

ದೊರೆಯಿತು. ವಕೀಲಿ ವೃತ್ತಿ ಕೈಗೊಂಡು ಅದೇ ಆಗ ಚಿಕ್ಕೋಡಿಗೆ ಬಂದ ದತ್ತಾ ಅಪ್ಪಾ ಕಟ್ಟಿಯವರು ಚಿಕ್ಕೋಡಿ ಲೋಕಸಭಾ ಕ್ಷೇತ್ರದಿಂದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಅಭ್ಯರ್ಥಿಯಾಗಿ ಮೀಸಲು ಅಲ್ಲದ ಸಾಮಾನ್ಯ ಕ್ಷೇತ್ರದಿಂದ ಗೆದ್ದು, ದೇಶದಲ್ಲಿಯೇ ದಾಖಲೆ ನಿರ್ಮಿಸಿದರು. ಚಿಕ್ಕೋಡಿ ವಿಧಾನಸಭೆಗೆ ಶ್ರೀ ಕೋತಾವಳಿ, ಸದಲಗಾ ಕ್ಷೇತ್ರದಿಂದ ಬೆಡಕಿಹಾಳದ ಶ್ರೀ ಸಿದ್ಧನಗೌಡ ಪಾಟೀಲ ಆಯ್ಕೆಯಾದರು. ಆದರೆ ಚಿಕ್ಕೋಡಿ ತಾಲೂಕಿನ ಮರಾಠಿ ಭಾಷಿಕ ಊರುಗಳನ್ನು ಮುಂಬೈ ಪ್ರಾಂತ್ಯದಲ್ಲಿ ವಿಲೀನಗೊಳಿಸುವ ಉದ್ದೇಶದಿಂದ ಜನ್ಮವೆತ್ತಿದ ಮಹಾರಾಷ್ಟ್ರ ಏಕೀಕರಣ ಸಮಿತಿ ಉಮೇದುವಾರು ಶ್ರೀ ಬಿ. ಡಿ. ನಾಯಕರು ನಿಪ್ಪಾಣಿ ಕ್ಷೇತ್ರದಿಂದ ವಿಜಯಿಯಾದರು. ಈ ಎಂ. ಇ. ಎಸ್.ನ ಆರ್ಭಟ ಅಲ್ಲಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು.

೧೯೬೨ರಲ್ಲಿ ಚಿಕ್ಕೋಡಿ ವಿಧಾನಸಭಾ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಕಾಂಗ್ರೇಸ್ಸಿನ ಅಭ್ಯರ್ಥಿ ಪರಾಭವಗೊಂಡರು. ಶ್ರೀ ಎಂ. ವಿ. ಶೆಟ್ಟಿ ವಕೀಲರು ಆಯ್ಕೆಗೊಂಡರು. ೧೯೬೪ರ ಹೊತ್ತಿಗೆ ಚಿಕ್ಕೋಡಿ ವಿಧಾನಸಭಾ ಮತ್ತು ಲೋಕಸಭಾ ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿ ಬದಲಾದವು. ೧೯೬೭ರಲ್ಲಿ ನಡೆದ ಲೋಕಸಭೆಯಲ್ಲಿ ಮೊದಲು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪಕ್ಷದಲ್ಲಿ ಇದ್ದ ಶ್ರೀ ಬಿ. ಶಂಕರಾನಂದ ಕಾಂಗ್ರೆಸ್ ಪಕ್ಷದಿಂದ ಮೊದಲ ಬಾರಿಗೆ ಲೋಕಸಭೆಗೆ ಆಯ್ಕೆಯಾದರು. ನಂತರ ಅವರು ಹಿಂದೆ ತಿರುಗಿ ನೋಡಲಿಲ್ಲ. ಸತತವಾಗಿ ಏಳು ಬಾರಿ ಆಯ್ಕೆಯಾಗಿ ಕೇಂದ್ರ ಸಚಿವ ಸಂಪುಟದಲ್ಲಿ ಸಂಪುಟ ದರ್ಜೆಯ ವಿವಿಧ ಇಲಾಖೆಗಳ ಸಚಿವರಾಗಿ ಸೇವೆ ಸಲ್ಲಿಸಿದರು.

ಶ್ರೀಮತಿ ಇಂದಿರಾಗಾಂಧಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ, ನಂತರ ರಾಜೀವಗಾಂಧಿ ಅವರಿಗೂ ಆಪ್ತರಾಗಿ ಕೇಂದ್ರದಲ್ಲಿ ಶಿಕ್ಷಣ, ಆರೋಗ್ಯ, ಕುಟುಂಬ ಕಲ್ಯಾಣ, ಕಾನೂನು, ನೀರಾವರಿ, ಇಂಧನ, ಪೆಟ್ರೋಲಿಯಂ, ನೈಸರ್ಗಿಕ ಅನಿಲದಂತಹ ಮಹತ್ವದ ಖಾತೆಗಳನ್ನು ನಿರ್ವಹಿಸಿದರು. ೧೯೮೭ರಲ್ಲಿ ಬೋಫೋರ್ಸ್ ಹಗರಣ ತನಿಖೆಗೆ ನೇಮಿಸಿದ್ದು, ಜಂಟಿ ಸಂಸದೀಯ ಸಮೀತಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ರಾಜೀವಗಾಂಧೀಯವರಿಗೆ 'ಕ್ಲೀನ್‌ಚಿಟ್' ನೀಡಿ, ರಾಜಕೀಯ ಪುನರುಜ್ಜೀವನಕ್ಕೆ ಕಾರಣರಾದವರು. ಇವರಿಂದ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ಪ್ರಭಾಕರ ಕೋರೆ, ಪ್ರಕಾಶ ಹುಕ್ಕೇರಿ, ಎಸ್. ಬಿ. ಘಾಟಗೆ, ವೀರಕುಮಾರ ಪಾಟೀಲ, ಮಲ್ಲಾರಿಗೌಡ ಪಾಟೀಲ ಮತ್ತಿತರರನ್ನು ರಾಜಕೀಯವಾಗಿ ಮೇಲಕ್ಕೆ ತಂದರು. ಚಿಕ್ಕೋಡಿ ಭಾಗದಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಲು ಕಾರಣರಾಗಿ, ಅನೇಕ ಜನರಿಗೆ ಉದ್ಯೋಗ ಒದಗಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಸ್ವಂತ ಊರಾದ ಕಣಗಲಿಯಲ್ಲಿ ೨೦ ಎಕರೆ ಪ್ರದೇಶದಲ್ಲಿ ಹಿಂದೂಸ್ಥಾನ ಲೆಟೆಕ್ಸ್ ಲಿಮಿಟೆಡ್ ನಿರ್ಮಾಣ ಮಾಡಿದರು.೧೯೭೦ರಿಂದ ೧೯೯೦ರ ದಶಕದವರೆಗೆ ಕೇಂದ್ರದಲ್ಲಿ ಅತ್ಯಂತ ಪ್ರಭಾವಿ ಎನಿಸಿದರು. ಚಿಕ್ಕೋಡಿ ರಾಜಕೀಯ ಎಂದರೆ ತಕ್ಷಣ ನೆನಪಿಗೆ ಬರುವುದು ಶ್ರೀ ಬಿ. ಶಂಕರಾನಂದರ ಹೆಸರು. ನಂತರ ಇವರ ಪುತ್ರ ಓಂಪ್ರಕಾಶ ಕಣಗಲಿ ವಿಧಾನಪರಿಷತ್ ಸದಸ್ಯರಾಗಿ ರಾಜ್ಯಸರ್ಕಾರದಲ್ಲಿ ಸಚಿವರು ಕೂಡಾ ಆಗಿದ್ದರು.

ಅಚ್ಚರಿಯಂತೆ ೧೯೯೬ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಜನತಾದಳ ಶ್ರೀಮತಿ ರತ್ನಮಾಲಾ ಸವಣೂರು ಇವರಿಂದ ಪರಾಜಿತರಾದರು. ನಂತರ ಪ್ರಧಾನಮಂತ್ರಿಯಾದ ಕರ್ನಾಟಕ ರಾಜ್ಯದ ಶ್ರೀ ಎಚ್. ಡಿ. ದೇವೇಗೌಡರ ಸಂಪುಟದಲ್ಲಿ ರಾಜ್ಯ ಸಚಿವರಾಗಿ ಕಾರ್ಯ ನಿರ್ವಹಿಸಿದರು. ನಂತರ ನಡೆದ ೧೯೯೮ರ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ ಪಕ್ಷದಿಂದ ಚಿಕ್ಕೋಡಿ (ಮೀಸಲು) ಕ್ಷೇತ್ರದಿಂದ ರಮೇಶ ಜಿಗಜಿಣಗಿ ಆಯ್ಕೆಯಾದರು. ನಂತರ ಈ ಕ್ಷೇತ್ರ ಪುನರ್ ವಿಂಗಡಣೆಯಿಂದ ಮೀಸಲು ಸ್ಥಾನದ ಬದಲಿ ಸಾಮಾನ್ಯ ಕ್ಷೇತ್ರವಾಗಿ ಬದಲಾವಣೆಗೊಂಡ ನಂತರ ತುರುಸಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಹಾಲಿ ಶಾಸಕರಾದ ಪ್ರಕಾಶ ಹುಕ್ಕೇರಿ ಅವರನ್ನು ಭಾರತೀಯ ಜನತಾ ಪಕ್ಷದ ರಮೇಶ ಕತ್ತಿ ೫೫ ಸಾವಿರ ಮತಗಳ ಅಂತರದಿಂದ ಸೋಲಿಸಿ, ೨೦೦೯ರಲ್ಲಿ ಆಯ್ಕೆಯಾದರು. ಚಿಕ್ಕೋಡಿ ಲೋಕಸಭಾ ಮೊದಲಿಗೆ ರಿಪಬ್ಲಿಕ್ ಪಾರ್ಟಿ ಇಂಡಿಯಾ ಪಕ್ಷಕ್ಕೆ, ನಂತರ ೭ ಸಲ ಕಾಂಗ್ರೆಸ್ಸಿಗೆ, ೧ ಬಾರಿ ಜನತಾ ದಳ, ೧ ಬಾರಿ ಲೋಕಶಕ್ತಿ ಪಕ್ಷ, ೪ ಬಾರಿ ಬಿಜೆಪಿ ಪಕ್ಷಕ್ಕೆ ಒಲಿಯಿತು. ಪ್ರಭಾಕರ ಕೋರೆಯವರು ೧೯೯೦ರಲ್ಲಿ ರಾಜ್ಯಸಭಾ ಸದಸ್ಯರಾಗಿ ೨೦೦೭ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ನಂತರ ೨೦೦೮ರಲ್ಲಿ ರಾಜ್ಯಸಭಾದ ಸದಸ್ಯರಾಗಿ ಆಯ್ಕೆಯಾಗಿ, ಈ ಭಾಗದ ಪ್ರಮುಖ ರಾಜಕೀಯ ನಾಯಕರೆನಿಸಿದ್ದಾರೆ.

ಪ್ರಕಾಶ ಹುಕ್ಕೇರಿ ಸದಲಗಾ ಕ್ಷೇತ್ರದಿಂದ ೪ ಬಾರಿ ಆಯ್ಕೆಯಾಗಿ ಧರ್ಮಸಿಂಗ್‌ರವರ ಸಚಿವ ಸಂಪುಟದಲ್ಲಿ ಕೃಷಿ ಮಾರುಕಟ್ಟೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯವನ್ನು ಮಾಡಿದ್ದಾರೆ. ಕ್ಷೇತ್ರ ಪುನರ್ ವಿಂಗಡನೆಯಿಂದ ಚಿಕ್ಕೋಡಿ, ಸದಲಗಾ ಎರಡು ಕ್ಷೇತ್ರಗಳನ್ನು ಕೂಡಿಸಿ ನಡೆದ ೨೦೦೮ರ ಚುನಾವಣೆಯಲ್ಲಿ ಬಿಜೆಪಿಯ ರಮೇಶ ಜಿಗಜಿಣಗಿ ಅವರನ್ನು ಸುಮಾರು ೨೫,೦೦೦ ಮತಗಳಿಂದ ಸೋಲಿಸಿ, ಕಾಂಗ್ರೆಸ್ ಪಕ್ಷಕ್ಕೆ ಗೆಲುವು ತಂದುಕೊಟ್ಟು, ೫ನೇ ಬಾರಿಗೆ ಪ್ರಕಾಶ ಹುಕ್ಕೇರಿಯವರು ವಿಧಾನಸಭೆಗೆ ಆಯ್ಕೆಯಾದರು. ಹೀಗೆ ಚಿಕ್ಕೋಡಿ ತಾಲೂಕಿನ ರಾಜಕೀಯವು ಒಂದು ಪಕ್ಷಕ್ಕೆ ಸೀಮಿತವಾಗದೆ, ಬದಲಾವಣೆಯನ್ನು ಬಯಸುತ್ತಾ, ವಿಭಿನ್ನ ಬೇರೆ ಪಕ್ಷದ ಹೊಸ ಮುಖಗಳಿಗೆ ಇಲ್ಲಿನ ಜನತೆ ಅಪ್ಪಿಕೊಂಡು ರಾಜಕೀಯ ಪ್ರಜ್ಞಾವಂತಿಕೆಗೆ ಕಾರಣರಾಗಿದ್ದಾರೆ.

ಇನ್ನು ತಾಲೂಕಿನಲ್ಲಿ ರಾಷ್ಟ್ರೀಯ ಪಕ್ಷಗಳೊಂದಿಗೆ ಪ್ರಾದೇಶಿಕ ಪಕ್ಷಗಳು ಅಸ್ತಿತ್ವಕ್ಕೆ ಬಂದು, ಹಲವಾರು ಸಂಘಟನೆಗಳು ಹುಟ್ಟಿಕೊಂಡಿವೆ. ನಿಪ್ಪಾಣಿಯ ಬೀಡಿ ಕಾರ್ಮಿಕರು, ಕಮ್ಯುನಿಸ್ಟ ಪರ ವಿಚಾರವುಳ್ಳವರು. ಆದರೆ ಇವರ ವಿಚಾರ ಹಳ್ಳಿಯ ಮಟ್ಟದವರೆಗೆ ತಲುಪಿಲ್ಲ. ಇತ್ತೀಚೆಗೆ ದಲಿತ ಸಮುದಾಯ ಬಹುಜನ ಸಮಾಜಪಕ್ಷದ ಜೊತೆಗೆ ಹೆಜ್ಜೆ ಹಾಕುತ್ತಿರುವುದನ್ನು ಕಾಣುತ್ತೇವೆ. ಇನ್ನು ಜಾತ್ಯತೀತ ಜನತಾದಳ ಪಕ್ಷವು ಕೂಡಾ ಇಲ್ಲಿ ಸಕ್ರಿಯವಾಗಿದೆ.

ಈ ಭಾಗದಲ್ಲಿ ನಡೆದ ಇತ್ತೀಚಿನ ದಿನಗಳಲ್ಲಿನ ದೊಡ್ಡ ಹೋರಾಟವೆಂದರೆ, ನಿಪ್ಪಾಣಿ, ಕೊಲ್ಲಾಪೂರ ರಾಷ್ಟ್ರೀಯ ಹೆದ್ದಾರಿಯ ಮೇಲೆ ರೈತರು ೧೯೮೧ರಲ್ಲಿ ರೈತರು ನಡೆಸಿದ ದೊಡ್ಡ ಪ್ರಮಾಣದಲ್ಲಿ 'ರಾಸ್ತಾ ರೋಕೋ' ಚಳುವಳಿ. ತಾವು ಬೆಳೆಯುವ ತಂಬಾಕು ಹಾಗೂ ಇನ್ನಿತರ ಬೆಳೆಗಳಿಗೆ ಯೋಗ್ಯ ಬೆಲೆ ದೊರೆಯಬೇಕೆಂಬುದು ಅವರ ಬೇಡಿಕೆ. ಇದರಿಂದಾಗಿ ತಾಲೂಕಿನ ರೈತರಲ್ಲಿ ತಾವು ಬೆಳೆದ ಬೆಳೆಗೆ ಯೋಗ್ಯ ಬೆಲೆ ಬೇಕು. ಅದು ನಮ್ಮ ಹಕ್ಕು

ಎಂದು ತೀವ್ರ ಸ್ವರೂಪದ ಹೋರಾಟ ನಡೆಸಿದರು. ಆಗಿನ ಸರ್ಕಾರದ ಅಚಾತುರ್ಯದ, ಅವಸರದ ಕಾರಣ ಅನೇಕ ರೈತರು ಹುತಾತ್ಮರಾದರು. ಅವರ ನೆನಪಿಗಾಗಿ ಅಲ್ಲಿ ಹುತಾತ್ಮರ ಸ್ಮಾರಕವನ್ನು ನಿಲ್ಲಿಸಲಾಗಿದೆ. ಇಂದಿಗೂ ಅಲ್ಲಿ ವಾರ್ಷಿಕ ಸ್ಮರಣೆಯ ದಿನವನ್ನು ಆಚರಿಸುತ್ತಾರೆ. ಇದು ಇಲ್ಲಿನ ಜನರ ಹೋರಾಟದ ಸ್ವರೂಪ ತಿಳಿಸುವ ಒಂದು ಉದಾಹರಣೆ ಅಷ್ಟೆ. ಇತ್ತೀಚೆಗೆ ಈ ಭಾಗದಲ್ಲಿ ರೈತ ಸಂಘ ಪಕ್ಷದ ಮತ್ತು ಆರ್.ಪಿ.ಐ. ಪಕ್ಷಗಳ ಪ್ರಭಾವ ಕುಗ್ಗುತ್ತಿದೆ. ದಲಿತ ಸಂಘರ್ಷ ಸಮಿತಿ, ದಲಿತರ ಪರ ಹೋರಾಟ ಚುರುಕುಗೊಳ್ಳುತ್ತಿವೆ.

ಚಿಕ್ಕೋಡಿ ತಾಲೂಕಿನ ರಾಜಕೀಯದ ಮೇಲೆ ಪ್ರಬಲ ಕೋಮವಾದ ಲಿಂಗಾಯತ ಮುಖಂಡರ ಪ್ರಭಾವ ಎದ್ದು ಕಾಣುತ್ತದೆ. ಇಲ್ಲಿ ಈ ಸಮಾಜವೇ ನಿರ್ಣಾಯಕ ಎನ್ನುವ ವಾತಾರವಣವಿದೆ. ಚಿಕ್ಕೋಡಿ ತಾಲೂಕು ರಾಷ್ಟ್ರ-ರಾಜ್ಯ ರಾಜಕೀಯಕ್ಕೆ ಅಪರೂಪದ ರಾಜಕಾರಣಿಗಳನ್ನು ನೀಡಿದೆ.

ಅಂಕಲಿಯ ಗ್ರಾಮದ ಸಾಂಸ್ಕೃತಿಕ ನೋಟ :

ಒಂದು ಹಿರಿಯ ಸಂಸ್ಕೃತಿಗೆ ತಾಯಿಬೇಕು. ಅದು ಒಂದು ನಾಗರೀಕತೆಯ ಜೀವ, ಜೀವಾಳ. ಸಂಸ್ಕೃತಿಯ ಎಂಬುದು ತನ್ನಷ್ಟಕ್ಕೆ ತಾನೆ ಬಂದ ಸಿದ್ಧವಸ್ತುವಲ್ಲ. ಅದು ಒಂದು ಜನಾಂಗದ ಶತಮಾನಗಳ ಸಾತ್ವಿಕ ಹೋರಾಟದ ಅಂತರಾಳದ ಅಧ್ಯಾತ್ಮದ ತಿರುಳು. ನಮ್ಮ ಧರ್ಮ, ಆಚಾರ, ಅನುಭವ, ಬದುಕು – ಸಹಬಾಳ್ವೆಯ ಕಲ್ಪನೆ ಸಾಮಾಜಿಕ ಆಕರಗಳನ್ನೆಲ್ಲ ಒಳಗೊಳ್ಳುವತಂಹದು. ನಡೆ-ನುಡಿಗಳಲ್ಲಿ ಒಳ್ಳೆಯತನ, ಸೌಜನ್ಯ, ಸಭ್ಯತೆ, ಮಾನವೀಯತೆ, ಹೃದಯವಂತಿಕೆ, ಪ್ರಗತಿಪರ ವಿಚಾರಧಾರೆಗಳಿಂದ ಮಿಳಿತವಾದುದು. ಧರ್ಮದ ಸಾಧನಮಾರ್ಗ ಹಿಡಿದ ಸಂಸ್ಕೃತಿಯನ್ನು ಸಾಧ್ಯ ಮಾಡಿಕೊಳ್ಳುವುದು. ಈ ಊರಿನ ಹಿರಿಯರು ಈ ಮೌಲ್ಯಗಳನ್ನು ಇಂದಿಗೂ ಪಾಲಿಸುತ್ತಾ ಬಂದಿರುವುದು ಈ ಊರಿನ ಹಿರಿಮೆ.

ಅಂಕಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಊರು. ಚಿಕ್ಕೋಡಿಯಿಂದ ೧೫ ಕಿ.ಮೀ. ಬಿಜಾಪುರ ಮುಖ್ಯರಸ್ತೆಯ ಬದಿಗೆ ಇದೆ. ಹಿರೇಹೊಳೆಯ ವರದಾನದಿಂದ ಇಲ್ಲಿ ಶ್ರೀಮಂತಿಕೆಗೆ ಕೊರತೆ ಇಲ್ಲ. ಇಲ್ಲಿಯ ಜನರು ಕೃಷಿಯನ್ನೇ ಮುಖ್ಯ ಉದ್ಯೋಗವನ್ನಾಗಿಸಿಕೊಂಡವರು. ವ್ಯಾಪಾರಿಗಳಿದ್ದಾರೆ, ಕೂಲಿ ಕಾರ್ಮಿಕರಿದ್ದಾರೆ, ಹೈನುಗಾರಿಕೆ ಇದೆ. ವಿದ್ಯಾವಂತರ ಸಂಖ್ಯೆ ಅಧಿಕ. ಅಂತೆಯೇ ಸರ್ಕಾರಿ, ಅರೆ ಸರ್ಕಾರಿ ಮತ್ತು ಖಾಸಗೀ ಉದ್ಯೋಗಿಗಳಿದ್ದಾರೆ.

ಇಂದಿನ ಪ್ರಾದೇಶಿಕ ಸಂಸ್ಕೃತಿಯೊಂದಿಗೆ ನಗರ ಸಂಸ್ಕೃತಿ ಸಮ್ಮಿಶ್ರಗೊಂಡು, ಎಲ್ಲ ವಲಯಗಳಲ್ಲಿ ಬದಲಾವಣೆಯ ಹೊಸ ಗಾಳಿ ಬೀಸುತ್ತಿದೆ.

ಜನರಾಡುವ ಭಾಷೆ – ಭಾವ, ಬದುಕಿನ ರೀತಿ – ನೀತಿಗಳು, ಧಾರ್ಮಿಕ ಸಂಪ್ರದಾಯಗಳ ಪದ್ಧತಿ ಮೊದಲಾದವುಗಳು ಸಂಸ್ಕೃತಿಯ ಬೇರುಗಳು. ಅಂತೆಯೇ ವಿವಿಧ ಕಲೆಗಳು ಸಂಸ್ಕೃತಿಯ ಬಿಂಬ – ಪ್ರತಿಬಿಂಬಗಳು. ಸಂಸ್ಕೃತಿ ಎಂಬುದು ಆಂತರಿಕ ಸಂಪತ್ತಿನಲ್ಲಿ ಧಾರ್ಮಿಕ ಭಾವನೆಯಲ್ಲಿ ವ್ಯಕ್ತವಾಗುತ್ತದೆ. ಕೇವಲ ಭೌತಿಕ ಸಂಪತ್ತು

ಶ್ರೀಮಂತಿಕೆ ಸಂಸ್ಕೃತಿಯ ಅಡಿಪಾಯವಲ್ಲ. ಜನಮೆಚ್ಚಿ ಶುದ್ಧನಾಗದೆ, ಮನಮೆಚ್ಚಿ ಶುದ್ಧವಾಗುವುದು 'ಸಂಸ್ಕೃತಿ'ಯ ಲಕ್ಷಣ. 'ಬಾಗಿದ ತಲೆ ಮುಗಿದ ಕೈ', 'ನುಡಿದರೆ ಮುತ್ತಿನ ಹಾರದಂತೆ', 'ಲಿಂಗ ಮೆಚ್ಚಿ ಹೌದು ಅಹುದೆನಬೇಕು'.

ಅಂಕಲಿಯ ಸುತ್ತಮುತ್ತಲಿನ ಪರಿಸರ ಸುಂದರ, ಮನೋಹರ. ಅದರಲ್ಲಿಯೂ ಮಹಾಬಳೇಶ್ವರದಲ್ಲಿ ಜನಿಸಿ, ಸಹಸ್ರಾರು ವರ್ಷಗಳಿಂದ ಧುಮ್ಮಿಕ್ಕಿ ಹರಿಯುತ್ತಿರುವ ಕೃಷ್ಣೆ ಆ ಪ್ರದೇಶದ ಜನರ ಜೀವನಾಡಿ, ಬದುಕಿಗೆ ಪ್ರತ್ಯಕ್ಷ ಸಾಕ್ಷಿ. ಪಂಚಗಂಗೆ, ವೇದಗಂಗೆ, ಧೂದಗಂಗೆ, ಹಳ್ಳಕೊಳ್ಳಗಳಲ್ಲೆಲ್ಲಾ ಕೊಡದಲ್ಲಿ ತುಂಬಿಕೊಂಡು ಹಿರೇಹೊಳೆಯಾದವಳು. ಮಳೆಗಾಲದ ವಿಸ್ತಾರ, ಅಬ್ಬರ, ಚಳಿಗಾಲದ ರಮ್ಯತೆ, ಬೇಸಿಗೆಯ ಜುಳು ಜುಳು ನೀನಾದ ಇದು ಕೃಷ್ಣೆಯ ನಡೆ. ಎಡ ಬಲದ ಫಲವತ್ತಾದ ನೆಲ, ಖಗ ಮೃಗಗಳ ಗಾನದಿಂದ ನಗು ಮೊಗದ ಜನಪದದಿಂದ ಭಾಗ್ಯದ ನೆಲೆಯಾಗಿದೆ, ಸಮೃದ್ಧಿಯ ಬೀಡಾಗಿದೆ.

'ಸಿದ್ಧೇಶ್ವರ' ಇಲ್ಲಿಯ ಗ್ರಾಮ ದೇವತೆ. ಮೊದಲು ಅಂಕಲಿಯನ್ನು ಸಿದ್ದಾಪುರ ಎಂದು ಕರೆಯುತ್ತಿದ್ದರೆಂದು ತಿಳಿಯುತ್ತದೆ. ಅಂಕಲಿ ಗ್ರಾಮದ ಇತಿಹಾಸದ ಸಾಮಗ್ರಿ ಒದಗಿಸುವ ಶಾಸನಗಳಿಲ್ಲ. ಲಿಖಿತ ಸಾಕ್ಷಿಗಳಲ್ಲಿ, ಜನರ ಹೇಳಿಕೆ, ಜನಪದ ಐತಿಹ್ಯಗಳೇ ಆಧಾರ ಸಾಮಗ್ರಿ. ಉತ್ತರ ಕರ್ನಾಟಕವು ಶಿವಶರಣರ ಕ್ರಾಂತಿಯ ನೆಲೆಯಾದಂತೆ, ಸಂತ ಜ್ಞಾನದೇವ, ತುಕಾರಾಮ ಭಕ್ತಿಪಂಥ, ಫಂಡರಪೂರ, ವಾರಕರೀ ಸಂಪ್ರದಾಯದ ಜೊತೆಗೆ ದ್ರಾವಿಡ, ವೈದಿಕ, ದ್ವೈತ, ಅದ್ವೈತ ವಿಚಾರವಾದಿಗಳ ಪ್ರಭಾವಕ್ಕೂ ಒಳಗಾಗಿತ್ತು. ಅಂಕಲಿ ಗ್ರಾಮ ಕೂಡಾ ಅದಕ್ಕೆ ಹೊರತಾಗಿಲ್ಲ. ಇಲ್ಲಿ ಮುಖ್ಯವಾಗಿ ವೀರಶೈವ-ಮರಾಠ-ಜೈನ-ಬ್ರಾಹ್ಮಣ-ಮಹಮ್ಮದೀಯರ ಜೊತೆಗೆ ಹಾಲಮತ ಹಾಗೂ ಪರಿಶಿಷ್ಟ ಜಾತಿ ವರ್ಗದ ಜನರು ಇದ್ದಾರೆ.

ಗ್ರಾಮದ ಸಮೀಪ ಕೃಷ್ಣ ನದಿಯ ಸಂಗಮ ಸ್ಥಳದಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರರಾಯರ ಬೃಂದಾವನವಿದೆ. ಅಸಂಖ್ಯಾತ ಭಕ್ತರನ್ನು ಆಕರ್ಷಿಸುವ ಮೂಲಕ ಅದು ಜಾಗ್ರತ ಸ್ಥಳವಾಗಿದೆ. ಅಲ್ಲಿಗೆ ಸಮೀಪ ಎರಡು ವಿರೂಪಾಕ್ಷ ಲಿಂಗಗಳಿವೆ. ಗ್ರಾಮದೇವತೆ ಸಿದ್ಧೇಶ್ವರ. ಅವನಿಗೆ ಕೇತರಾಯನೆಂದು ಕರೆಯುತ್ತಾರೆ. ಅವನ ಜಾತ್ರೆ ಕಾಲುಕಟ್ಟಿ, ವರ್ಷ ಭವಿಷ್ಯ ತಿಳಿಯುವ ಸಂಪ್ರದಾಯವಿದೆ. ಗ್ರಾಮದಲ್ಲಿ ಮಹಾದೇವ ಮಂದಿರವಿದ್ದು, ಭಕ್ತರು ವಿಶೇಷ ಪೂಜೆ ಸಲ್ಲಿಸುತ್ತಾರೆ. ಲಕ್ಷ್ಮೀ ದೇವಿಯ ಜಾತ್ರೆಯು ಮೂರು ವರ್ಷಕ್ಕೊಮ್ಮೆ ನೆರವೇರುತ್ತದೆ. ಗಣಪತಿ ಗುಡಿ, ಹನುಮನ ಗುಡಿ, ಜ್ಞಾನೇಶ್ವರಿ ಗುಡಿ, ವಿಠಲ ಮಂದಿರ, ಚಂದ್ರಪ್ರಭು ತೀರ್ಥಂಕರ ಬಸದಿ, ಅಂಬಾಬಾಯಿ ಗುಡಿ, ಮಸೀದಿಗಳು, ಜನಪದರ ಬಾಳಿನ ಆಶಾಕಿರಣವಾಗಿವೆ. ಬಾರಾ ಇಮಾಮ ಮಸೀದೆ - ಹಿಂದೂ, ಮುಸ್ಲಿಂ ಸೌಹಾರ್ದತೆಯ ಸಂಕೇತವಾಗಿದೆ. ಕೆಲವು ಪುರಾತನ ದೇವಾಲಯಗಳಿದ್ದು, ಗ್ರಾಮದ ಸಾಂಸ್ಕೃತಿಕ ದ್ರವ್ಯಕ್ಕೆ ಆಧಾರಗಳಾಗಿವೆ. ಬಸವಮಂಟಪ, ಶ್ರೀ ರುದ್ರ ಅವಧೂತ ಮಠಗಳಿವೆ.

ಪುರಾಣ, ಪ್ರವಚನ, ಕೀರ್ತನೆ, ವೇದಾಂತ, ಶಿವಾನುಭವ ಗೋಷ್ಠಿಗಳು ನೆರವೇರಿ ಬದುಕಿಗೆ ಭರವಸೆ ನೀಡುತ್ತವೆ. ಬ್ರಿಟಿಷರ ನಿರ್ಗಮನದೊಂದಿಗೆ ಪ್ರಜೆಗಳೇ ರಾಜರಾದ ಮೇಲೆ, ರಾಜ-ಮಹಾರಾಜರ ಆಡಳಿತ ಮುಗಿಯಿತು.

ರಾಜರ ಆಡಳಿತ ತಮ್ಮದೇ ಆದ ಹಣಕಾಸಿನ ಮೂಲದಿಂದ ವಂಚಿತರಾಗಿ ರಾಜ ವೈಭವವನ್ನು ಕಳೆದುಕೊಂಡಿತು. ಗ್ರಾಮದ ಉತ್ತರ ದಿಕ್ಕಿನಲ್ಲಿ ಹರಿಯುವ ಕೃಷ್ಣಾನದಿ ದಂಡೆಯ ೨ ಎಕರೆ ವಿಶಾಲ ನಿವೇಶನದಲ್ಲಿ ಪೂರ್ವಾಭಿಮುಖವಾಗಿ ರಾಜವಾಡೆಯಿಂದ ಅತ್ಯಾಕರ್ಷಕವಾಗಿದೆ. ಇದು ಭಾರತೀಯ ಮತ್ತು ಇಸ್ಲಾಂ ವಾಸ್ತುಗಳ ಸಂಯುಕ್ತ ರೂಪದ ರಚನೆಯಾಗಿದೆ. ವಾಡೆಯ ಎರಡನೇ ಅಂತಸ್ತು ಕಣ್ಮನ ಸೆಳೆಯುತ್ತದೆ. ಇದು ಗ್ವಾಲಿಯರ ಅರಮನೆಯ ಮಾದರಿಯಲ್ಲಿ ನಿರ್ಮಿಸಲಾಗಿದೆ. ಗ್ವಾಲಿಯರ್ ಅರಸು ಮನೆತನದೊಂದಿಗೆ ಅಂಕಲಿ, ಸೀತೊಳೆ ಮನೆತನದ ಸಂಬಂಧ ಗಟ್ಟಿಯಾಗಿತ್ತು. ಎರಡು ಅಂತಸ್ತುಗಳ ಈ ವಾಡೆ, ಹೊರಗೆ ನುಣುಪಾದ ಕಲ್ಲಿನ ಜೋಡಣೆ ಹೊಂದಿದೆ. ಒಳಗೆ ಪ್ರಶಸ್ತ ಕೋಣೆಗಳಿಂದ ತುಂಬಿಕೊಂಡಿದೆ. ಗಾಳಿ, ಬೆಳಕುಗಳು ಧಾರಳವಾಗಿ ಒಳಗೆ ಬರುವ ಪ್ರಶಾಂತ, ಗಂಭೀರ ನಿಲುವಿನ ಕೋಣೆಗಳು ರಾಜಠೀವಿಯನ್ನು ಹೊಂದಿವೆ. ಇದು ಅಂಕಲಿ ಗ್ರಾಮದ ರಾಜಕೀಯ ಇತಿಹಾಸ ಸಾರುವ ಒಂದು ಮಹತ್ವದ ದಾಖಲೆಯಾಗಿದೆ. ಅಂಕಲೀಕರ ಅವರು ಫಂಡರಪೂರದ ವಿಠ್ಠಲನ ಸದ್‌ಭಕ್ತರು. ಅವರ ಅಭೀಪ್ಸೆಯನ್ನು ಈಡೇರಿಸಿದ್ದರಿಂದಾಗಿ ಅವರು ಆಗ ಕೈಗೊಂಡಂತಹ ವ್ರತಾಚರಣೆಗಳು ಈಗಲೂ ನಡೆದುಕೊಂಡು ಬರುತ್ತಿವೆ. ಪಂಡರಪೂರದ ಲಕ್ಷಾಂತರ ಜನರ ಮಧ್ಯೆ ಅಂಕಲಿಯ ಕುದುರೆಗೆ ಮತ್ತು ಅಂಕಲಿಕರ ವಂಶಸ್ಥರಿಗೆ ಮಾನ ಸನ್ಮಾನಗಳು ಸಲ್ಲುತ್ತವೆ. ಇದೊಂದು ಹೆಮ್ಮೆಯ, ಗೌರವದ ವಿಷಯ. ಅಂಕಲಿ ಗ್ರಾಮಸ್ಥರು ಮೊದಲಿನಿಂದಲೂ ಕಲಾ ಪ್ರೇಮಿಗಳು, ಶ್ರೀ ಕೃಷ್ಣ ಪಾರಿಜಾತ, ಸಂಗ್ಯಾ-ಬಾಳ್ಯಾ, ಬಯಲಾಟಗಳನ್ನು, ಹಬ್ಬ-ಜಾತ್ರೆ, ಉತ್ಸವಗಳಲ್ಲಿ ತರಿಸಿ, ಪ್ರದರ್ಶಿಸಿ ಆನಂದಿಸುವ ಹವ್ಯಾಸಿಗಳು. ರಂಗ ನಾಟಕಗಳನ್ನು ಮೆಚ್ಚುವ ರಂಗ ಪ್ರೇಮಿಗಳಿದ್ದಾರೆ. ಅವರಿಗೆ ವಿಶೇಷವಾಗಿ ಏಣಗಿ ಬಾಳಪ್ಪನವರ ನಾಟಕಗಳೆಂದರೆ ಅಚ್ಚುಮೆಚ್ಚು. ಇಲ್ಲಿ ನಾಟಕಕಾರರು, ನಟ-ನಟಿಯರು, ಸಂಗೀತಗಾರರು, ಕವಿ, ಲೇಖಕರು ಸಾಕಷ್ಟು ಇದ್ದಾರೆ. ಅಂಕಲಿಯ ಹೆಸರಿಸಲೇಬೇಕಾದ ಕವಿ ಇಮಾಂಭಾಯಿ ವೃತ್ತಿಯಿಂದ ಉಪ್ಪಾರ. ಕಟ್ಟಡ ಕೆಲಸದಲ್ಲಿ ನಿಪುಣ, ಪ್ರತಿಭಾವಂತ ಕವಿ, ವರಕವಿ ಎಂದೇ ಪ್ರಸಿದ್ಧ. ರಾಷ್ಟ್ರೀಯ ಹೆದ್ದಾರಿ ೪ ರಲ್ಲಿ ನಿಪ್ಪಾಣಿ ಸಮೀಪ ಧೂದಗಂಗಾ ನದಿಗೆ ಸೇತುವೆ ಕಟ್ಟುವ ಕಾರ್ಯದಲ್ಲಿ ದುಡಿದವನು. ಅವನಿಗೆ ಮೈಲಿಬೇನೆ ಶಾಪವಾಯಿತು. ಎರಡು ಕಣ್ಣು ಕಳೆದುಕೊಂಡರೂ ಎದೆಗುಂದಲಿಲ್ಲ, ಗುರುವನ್ನು ಅರಿಸಿದ. ಜ್ಯೋತಿ ಫರಿಟ್ ಎಂಬ ಗುರುವಿನಿಂದ ದೀಕ್ಷೆ ಪಡೆದ. ಅವನು ಮಾತನಾಡಿದ್ದೇ ಹಾಡಾಯಿತು. ಶಿವಶರಣರ, ನಿಜಗುಣರ, ಸಿದ್ಧಾರೂಢರ ಪ್ರಭಾವದಿಂದ ಕನ್ನಡದಲ್ಲಿ ಅನುಭವ ಪದಗಳನ್ನು ರಚಿಸಿದ. ಇಮಾಂಬಾಯಿ ಲಾವಣಿಗಳನ್ನು ಜನ ಇಂದಿಗೂ ಹಾಡುತ್ತಾರೆ.

ದತ್ತು ಪಾಟೀಲ, ಚಿದಾನಂದ ಪಾಟೀಲ, ಅಶೋಕ ಅಂಬಿ ಕವಿಗಳು. ಶಂಕರ ಪಾಟೀಲ, ಹೀರಾಬಾಯಿ ಪಾಟೀಲ ರಂಗಕಲಾವಿದರು. ಈ ದಂಪತಿಗಳು ಏಣಗಿ ಬಾಳಪ್ಪನವರ ನಾಟಕ ಕಂಪನಿಯಲ್ಲಿ ೪೦ ವರುಷಗಳ ಕಾಲ ಅಭಿನಯಿಸಿದವರು. ಇವರ ಮಗ ಶಿವಾನಂದ ಪಾಟೀಲ ಆಕಾಶವಾಣಿ-ದೂರದರ್ಶನ ಕಲಾವಿದರು, ಶಾಸ್ತ್ರೀಯ ಸಂಗೀತ, ವಚನ, ಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಗುರುಪಾದ ಕುಂಬಾರ, ಪರಸುರಾಮ ಕೊಂತೆ, ಖ್ಯಾತ ಲಾವಣಿಕಾರರು. ಶಿವಪ್ಪ ಕುರುಡೆ ಶಾಸ್ತ್ರದಲ್ಲಿ ನಿಪುಣರು. ಬಸವಂತಪ್ಪ ಸಾಲಿಯವರು ಶಿವಪಾರಿಜಾತ ರಚಿಸಿ ಆಡಿಸಿದವರು. ಶ್ರೀ ಸಿದ್ದಪ್ಪ ಕೋರೆ, ಬಾಳಣ್ಣಗೌಡ ಪಾಟೀಲ ಊರ ಹಿರಿಯರು. ಅಂಕಲಿ ಅಲ್ಲದೇ ಸುತ್ತಲಿನ ಹಳ್ಳಿಗಳಲ್ಲಿ

ನಿಷ್ಪಕ್ಷಪಾತ ನ್ಯಾಯ ನಿರ್ಣಾಯಕರೆಂದು ಪ್ರಸಿದ್ಧರು. ಶ್ರೀ ಧರೆಪ್ಪ ಕೋರೆ, ಚೂಡಾಮಣಿ ಕೋರೆ, ಬಸವಪ್ರಭು ಕೋರೆ ಇವರು ಮಹಾದಾನಿಗಳು.

ಇನ್ನು ಸಿದ್ಧಲಿಂಗಪ್ಪ ಚಿಕಲಿ, ರಾಮು ಕಂಬಾರ, ಜಕ್ಕಪ್ಪ ಕೋಳಿ, ನೀಲಕಪ್ಪ ಧುಮಾಲೆ, ಮಾರುತಿ ಮಾನೆ, ಪರಶುರಾಮ ಕೊತೆ ಮೊದಲಾದವರು ಶಿವಭಜನೆಗಳನ್ನು ಹಾಡಿ ಜನಮನದಲ್ಲಿ ಆಧ್ಯಾತ್ಮಿಕ ಬೀಜ ಬಿತ್ತಿರುವರು. ಅಂತೆಯೇ ವಿಷ್ಣುವಿನ ಸರ್ವೋತ್ತಮತೆಯನ್ನು ಸಾರುವ ಹರಿಭಜನಾಕಾರರು ಇಲ್ಲಿದ್ದಾರೆ. ಅಪ್ಪಾಜಿರಾವ್ ಶಿತೋಳೆ, ಗುರುಸಿದ್ಧಗಿರಿ, ಮಾಂಜರಿ, ಕಲ್ಲಪ್ಪ ದಂಡಿ, ದತ್ತೋಪಂಥ ಕುಲಕರ್ಣಿ ಮೊದಲಾದವರು ವಿಠ್ಠಲನ ಆರಾಧನೆ ಮಾಡುವ ಮೂಲಕ ಜನಮನದಲ್ಲಿ ಭಕ್ತಿಯನ್ನು ತುಂಬಿದರು. ರಾಮು ಮಾನೆ, ದಸ್ತಗಿರಿ ಷಾಹ, ಮಕಾಂದಾರ ಡೊಳ್ಳು ವಾದನದಲ್ಲಿ, ಸಿದ್ಧಪ್ಪ ಬಡಿಗೇರ ಕೈತಾಳದಲ್ಲಿ, ಕಲ್ಲಪ್ಪ ಕುಂಬಾರ ಮತ್ತು ಕೃಷ್ಣ ಮಾದಿಗ ಹಲಗೆ ವಾದನದಲ್ಲಿ, ಎಲ್ಲಪ್ಪ ಕೊರವಿ ಶಹನಾಯಿ ವಾದನದಲ್ಲಿ, ಶಂಕರ ಮಾದಿಗ ತಾಳೆ ನುಡಿಸುವಲ್ಲಿ, ಮಾರುತಿ ಪಾಟೀಲ ತಬಲಾ ನುಡಿಸುವಲ್ಲಿ ಪ್ರವೀಣರು. ಇವರೆಲ್ಲರೂ ಸಾಂಸ್ಕೃತಿಕ ಸಾಮರಸ್ಯ ಸಾಧಿಸಿದ್ದಾರೆ. ಬುದ್ಧಿವಂತಿಕೆ ಪ್ರದರ್ಶನದಲ್ಲಿ ಬುದ್ಧಪ್ಪ ಗುಂಡಕಲ್ಲೆ ವಿಕಟ ನುಡಿಗೆ ರೇವಣ್ಣ ಹೇರಲಿಗೆ, ಮಲ್ಲ ಯುದ್ಧದಲ್ಲಿ ಸತ್ಯಪ್ಪ ಗುಂಡಕಲ್ಲೆ, ಸಿದ್ಧಪ್ಪ ಗುಂಡಕಲ್ಲೆ, ಚೂಡಾಮಣಿ ಕೋರೆ ಅವರ ಹೆಸರುಗಳು ಎದ್ದು ಕಾಣುತ್ತವೆ. ಕುಸ್ತಿಯಲ್ಲಿ ಮಲ್ಲಪ್ಪ ತಥಾಕೆ, ಹಸನ ಪಾಶಾರಿಯವರನ್ನು ಪ್ರೋತ್ಸಾಹಿಸಿ, ಮುಂದೆ ತಂದವರು ಶ್ರೀ ಬಸವಪ್ರಭು ಕೋರೆಯವರು. ಮಾರುತಿ ಕಮತೆ, ಮಾರುತಿ ಶಿತೋಳೆ, ರಾಮು ಭಂಡು ಘೋರ್ಪಡೆ ಪ್ರಸಿದ್ಧ ಪೈಲವಾನರು.

ಅಂಕಲಿಯ ಜನ ಕರ್ನಾಟಕ ಏಕೀಕರಣಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಭಾಷಾವಾರು ಪ್ರಾಂತ ರಚನೆಯಾದ ನಂತರ ಕನ್ನಡಿಗರ ಸ್ವಾಭಿಮಾನ ಜಾಗೃತಗೊಂಡಿತು. ಮೊದಲಿನಿಂದಲೂ ಕನ್ನಡ ಕಂಪನ್ನು ಸೂಸುವ ಪರಿಸರವಿದ್ದಿತು. ಮೊಘಲರು, ಬ್ರಿಟಿಷರು, ಮರಾಠಿಗರು, ಪೇಶ್ವೆಯರು ತಮ್ಮ ವರ್ಚಸ್ಸನ್ನು ಬೀರಿದ್ದು ನಿಜವಾದರೂ ಕನ್ನಡತನವನ್ನು ಉಳಿಸಿಕೊಂಡಿದೆ. ಸಂಸ್ಕೃತಿಯ ಪರಂಪರೆಯನ್ನು ಕಾಯ್ದುಕೊಂಡಿದೆ.

೧೮೭೩ರಲ್ಲಿ ಇಲ್ಲಿ ಸರ್ಕಾರಿ ಕನ್ನಡ ಶಾಲೆ ಸ್ಥಾಪಿತಗೊಂಡಿತು. ಶಿಕ್ಷಣ ರಂಗದಲ್ಲಿ ಕ್ರಾಂತಿ ಮಾಡಿತು. ಕನ್ನಡ ವಾತಾರವಣ ಉಂಟಾಯಿತು. ಅಂಕಲಿ ಸಂಸ್ಥಾನದ ಸರ್ಕಾರ ಶ್ರೀ ಅಪ್ಪಾಜಿರಾವ್ ಶಿತೋಳೆ ಅವರು ಮರಾಠರು. ಅವರು ಈ ಶಾಲೆಯ ಮೊದಲ ವಿದ್ಯಾರ್ಥಿ ಎಂಬುದು ಗಮನಾರ್ಹ. ಮುಂದೆ ಕನ್ನಡ ಕಲಿಯುವವರ ಸಂಖ್ಯೆ ಹೆಚ್ಚಿದರೂ, ವ್ಯಾಪಾರ, ವ್ಯವಹಾರಗಳಿಗಾಗಿ ಮರಾಠಿ ಮೋಡಿ ಮತ್ತು (ನಗರ ಸಂಪರ್ಕ ಹೊಂದಿದ) ಕೆಲವರು ಇಂಗ್ಲೀಷ್ ಕಲಿಯುತ್ತಿದ್ದರು.

ಈ ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಗ್ರಾಮೀಣ ಜೀವನಕ್ಕೆ ಕಾಯಕಲ್ಪ ನೀಡಲು ಇಲ್ಲಿ ಹಣಕಾಸು ಸಂಸ್ಥೆಗಳು ಹುಟ್ಟಿಕೊಂಡವು, ರಾಷ್ಟ್ರೀಕೃತ ಬ್ಯಾಂಕುಗಳು ಬಂದವು. ಶ್ರೀಯುತ ಪ್ರಭಾಕರ ಕೋರೆಯವರು ಅರ್ಬನ್ ಬ್ಯಾಂಕ್ ಸ್ಥಾಪಿಸುವುದರ ಮೂಲಕ ಜನತೆಯ ಆಶೋತ್ತರ ಪೂರೈಸುವಲ್ಲಿ ಶ್ರಮಿಸುತ್ತಿದ್ದಾರೆ. ಗ್ರಾಮೀಣ ಬದುಕಿಗೆ ಭದ್ರತೆಯನ್ನು ಕಲ್ಪಿಸಿದ್ದಾರೆ.

ಇಂದು ಅಂಕಲಿ ಗ್ರಾಮದ ಜನಸಂಖ್ಯೆ ಸುಮಾರು ೧೫ ಸಾವಿರದಷ್ಟು ಇದೆ. ಇದು ಗ್ರಾಮ ಪಂಚಾಯಿತಿ ಹೊಂದಿದೆ. ಚಿಕ್ಕೋಡಿ ಸದಲಗಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಇಂದು ಇಲ್ಲಿ ಆಸ್ಪತ್ರೆ, ಪಶು ಚಿಕಿತ್ಸಾಲಯ, ಪೊಲೀಸ್ ಉಪಠಾಣೆ, ಒಂದು ಗಂಡು ಮಕ್ಕಳ ಮತ್ತು ಇನ್ನೊಂದು ಹೆಣ್ಣುಮಕ್ಕಳ ಪ್ರೌಢ ಶಾಲೆಯಿದೆ. ಒಂದು ಪದವಿಪೂರ್ವ ಕಲಾ ಹಾಗೂ ವಿಜ್ಞಾನ ಕಾಲೇಜು ಇಲ್ಲಿ ಇದ್ದು, ಪ್ರಾಥಮಿಕ ಕನ್ನಡ, ಮರಾಠಿ, ಉರ್ದು ಭಾಷೆಗಳ ಶಾಲೆಗಳು ಇಲ್ಲಿವೆ.

ಅಂಕಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಡಾ. ಪ್ರಭಾಕರ ಕೋರೆಯವರ ಕುಟುಂಬದ ಕೊಡುಗೆ ಅಪಾರವಾದದ್ದು. ಅಂಕಲಿ ಎಂದಾಗ ನೆನಪಾಗುವುದು ಕೋರೆಯವರ ಕುಟುಂಬ. ಪ್ರಭಾಕರವರ ತಂದೆ ಮಹಾದಾನಿಗಳು, ಸಹೃದಯರು. ಅಣ್ಣ ಚಿದಾನಂದ ಕೋರೆ ಅವರು ಜನರ ಬಗ್ಗೆ ಅನುಕಂಪ ಹೊಂದಿದವರು. ಇಂದು ಅವರ ಹಾದಿಯಲ್ಲಿಯೇ ಈ ಗ್ರಾಮದ ಅಭಿವೃದ್ಧಿಗೆ ಡಾ. ಪ್ರಭಾಕರ ಕೋರೆಯವರು ಸಾಕಷ್ಟು ಶ್ರಮಿಸುತ್ತಿದ್ದಾರೆ. ಇಲ್ಲಿನ ಜನರು ಮುಖ್ಯವಾಗಿ ಕೃಷಿಕರು, ಈ ಎಲ್ಲ ಹಿನ್ನೆಲೆಯಲ್ಲಿ ಕೋರೆಯವರ ಸಾಧನೆಗಳನ್ನು ಮುಂದಿನ ಅಧ್ಯಾಯಗಳಲ್ಲಿ ಪರಿಶೀಲಿಸಲಾಗಿದೆ.

ಅಧ್ಯಾಯ : ಮೂರು

ಡಾ॥ ಪ್ರಭಾಕರ ಕೋರೆ ಅವರ ಜೀವನ ಮತ್ತು ಸಾಧನೆಗಳು

ಅಧ್ಯಾಯ : ಮೂರು

ಡಾ. ಪ್ರಭಾಕರ ಕೋರೆ ಅವರ ಜೀವನ ಮತ್ತು ಸಾಧನೆಗಳು

ಡಾ॥ ಪ್ರಭಾಕರ ಕೋರೆ ಅವರ ವೈಯಕ್ತಿಕ ಬದುಕು ಮತ್ತು ಅವರ ಸಾಧನೆಗಳನ್ನು ಅವಲೋಕಿಸುವದಕ್ಕಿಂತ ಮುಂಚೆ ಅವರ ಮನೆತನದ ಹಿನ್ನೆಲೆ, ಅವರ ತಂದೆಯವರು ಮತ್ತು ಕುಟುಂಬದ ಬಗ್ಗೆ ಸಂಕ್ಷಿಪ್ತವಾದ ಪರಿಚಯವನ್ನು ಅವಲೋಕಿಸುವುದು ಅಗತ್ಯವೆನಿಸುತ್ತದೆ. ಏಕೆಂದರೆ ವ್ಯಕ್ತಿಯ ಬೆಳವಣಿಗೆ ಕುಟುಂಬದ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಈ ಕಾರಣಕ್ಕಾಗಿ ಕುಟುಂಬದ ಸಂಕ್ಷಿಪ್ತ ಪರಿಚಯ ಅಧ್ಯಯನದ ದೃಷ್ಟಿಯಿಂದ ಅಗತ್ಯವೆನಿಸುತ್ತದೆ.

ಶ್ರೀ ಪ್ರಭಾಕರ ಕೋರೆಯವರ ಮನೆತನದ ಮೂಲ ವಿಜಾಪೂರ ಜಿಲ್ಲೆಯ ಭೀಮಾತೀರದ ಸಿಂದಗಿ ಹಾಗೂ ಇಂಡಿ ತಾಲೂಕಿನ ೩೦ ಹಳ್ಳಿಗಳ ದೇಶಗತ್ತಿಯನ್ನು ಹೊಂದಿದ ಶ್ರೀಮಂತ ಕುಟುಂಬ. ಆದಿಲ್‌ಶಾಹಿಗಳ ಮತ್ತು ರಜಾಕಾರರ ದಬ್ಬಾಳಿಕೆಯು ಹೆಚ್ಚಾದಂತೆ ಅಲ್ಲಿಂದ ಕೃಷ್ಣಾತೀರದ ಅಂಕಲಿಗೆ ಬಂದು ನೆಲೆನಿಂತರು, ನಂತರ ಕೆಲಕಾಲದಲ್ಲಿಯೇ ಕೋರೆಯವರ ಮನೆತನ ಅಂಕಲಿಯದಾಯಿತು. ಕೋರೆ ಮನೆತನದ ಕೀರ್ತಿ ಪ್ರಸಿದ್ಧಿ ಹೆಚ್ಚಿಸಿದವರು ಶ್ರೀ ಬಸವಪ್ರಭು ಕೋರೆ, ಇವರ ಧರ್ಮಪತ್ನಿ ಸೌ. ಶಾರಾದಾದೇವಿಯವರು.

ಡಾ॥ ಪ್ರಭಾಕರ ಕೋರೆ ಅವರ ತಂದೆ ಸ್ವಾತಂತ್ರ್ಯ ಹೋರಾಟಗಾರರು. ಅಂತೆಯೇ ಸ್ವಾತಂತ್ರ್ಯ ಚಳುವಳಿಯಲ್ಲಿ ಜೈಲು ಶಿಕ್ಷೆಯನ್ನು ಅನುಭವಿಸಿದವರು. ಆಗರ್ಭ ಶ್ರೀಮಂತರಾದರೂ ದಯಾಮಯಿ, ಸುಸಂಸ್ಕೃತಿಯ ಸ್ವಭಾವದವರು. ಸುತ್ತಲಿನ ಹತ್ತಾರು ಹಳ್ಳಿಗಳಿಗೆ ಆಗಿನ ಕಾಲದಲ್ಲಿ ಇವರ ಮನೆಯೇ ಬ್ಯಾಂಕ್ ಆಗಿತ್ತು. ಕಷ್ಟದಲ್ಲಿ ಇದ್ದವರಿಗೆ ಸದಾ ಸಹಾಯದ ಹಸ್ತವನ್ನು ಚಾಚುತ್ತಿದ್ದರು.

ಶ್ರೀ ಬಸವಪ್ರಭು ಕೋರೆಯವರು ಶಿಕ್ಷಣ ಪ್ರೇಮಿಗಳು, ಉದಾರ ದಾನಿಗಳು, ಸಂಘ-ಸಂಸ್ಥೆಗಳಿಗೆ, ಗುಡಿ-ಗುಂಡಾರಗಳಿಗೆ, ತನು-ಮನ-ಧನದಿಂದ ದಾನ ನೀಡಿದವರು. ವ್ಯಾಪಾರಕ್ಕೆ ಮರಾಠಿ ಭಾಷೆಯ ಅಗತ್ಯವನ್ನರಿತು ಮರಾಠಿ ಶಾಲೆಯನ್ನು ಆರಂಭಿಸಿ ಭಾಷಾ ಬಾಂಧವ್ಯದ ಹರಿಕಾರರಾದವರು.

೧೯೩೪ ರಲ್ಲಿ ಗಾಂಧಿಜೀಯವರು ಹರಿಜನ ಪತ್ರಿಕೆಗೆ ಸಂಬಂಧಿಸಿದಂತೆ ಅಂಕಲಿಗೆ ಬಂದಾಗ, ಬಸವಪ್ರಭು ಕೋರೆಯವರೇ ಆತಿಥ್ಯವನ್ನು ನೀಡಿದರು. ಬಿಹಾರದ ಭೂಕಂಪ ಪರಿಹಾರ ನಿಧಿಗಾಗಿ ಡಾ. ಬಾಬು ರಾಜೇಂದ್ರ ಪ್ರಸಾದರು ಆಗಮಿಸಿದಾಗ ಶ್ರೀಯುತರು ಉದಾರವಾಗಿ ದೇಣಿಗೆಯನ್ನು ನೀಡಿದರು. ಸೇವಾದಳದ ಶಿಬಿರವನ್ನು

ಏರ್ಪಡಿಸಿದರು. ಹರಿಜನರೊಂದಿಗೆ ಸಹಭೋಜನ ಮಾಡಿ ಮಾನವೀಯತೆಯನ್ನು ಮೆರೆದರು ಮತ್ತು ಸಮಾಜದಲ್ಲಿ ಏಕತೆಯ ಮಂತ್ರ ಜಪಿಸಿದರು.[೧]

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬಸವಪ್ರಭು ಕೋರೆ ಅವರ ನಂದಿಕುರಳಿ ತೋಟವು ಭೂಗತ ಚಳುವಳಿಗಾರರ ಭದ್ರಕೋಟೆಯೇನಿಸಿತ್ತು. ಅಲ್ಲಿಂದಲೇ ಬ್ರಿಟಿಷರ ವಿರುದ್ಧ ಕಾರ್ಯತಂತ್ರವನ್ನು ರೂಪಿಸುತ್ತಿದ್ದರು. ಅವರಿಗೆ ಸಾಥ್ ನೀಡಿದವರೆಂದರೆ 'ಮಚ್ಛೇಂದ್ರ ಕೋಕಣಿ, ಕಾಶಿಂ ಮುಲ್ಲಾ, ಭೈರು ಜೋಗುಜೆ, ಬಸಪ್ಪ ಕುರೋಳೆ, ರಾಮಚಂದ್ರ ಹೈಬತ್ತಿ, ಮೊದಲಾದವರನ್ನು ಕೂಡಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು.

ಸ್ವಾತಂತ್ರ್ಯ ನಂತರ ಕನ್ನಡ ವಾತಾವರಣವನ್ನು ಪ್ರಬಲಗೊಳಿಸಲು ಕನ್ನಡ ಏಕೀಕರಣಕ್ಕಾಗಿ ಹೋರಾಟಕ್ಕೆ ಸಿದ್ಧರಾದರು. ಇದರಲ್ಲಿ ಮುಂದಾಳತ್ವವನ್ನು ವಹಿಸಿ ಅಂಕಲಿಯಲ್ಲಿ ಸುಮಾರು ೨೫೦೦೦ ಜನರ ಬೃಹತ್ ಸಮಾವೇಶವನ್ನು ಏರ್ಪಡಿಸಿದರು. ಶ್ರೀಮಾನ ಎಸ್. ನಿಜಲಿಂಗಪ್ಪ, ಚನ್ನಬಸಪ್ಪ ಅಂಬಲಿ, ರಾವಬಹಾದ್ದೂರ ಅಂಗಡಿ, ಪದ್ಮಾವತಿ ಅಂಗಡಿ, ಹಳ್ಳಿಕೇರಿ ಗುದ್ಲೆಪ್ಪ ಮೊದಲಾದವರು ಸಮಾವೇಶದಲ್ಲಿ ಪಾಲ್ಗೊಂಡಿದ್ದು ಸ್ಮರಣೀಯ. ಹೀಗೆ ಕರ್ನಾಟಕದ ಏಕೀಕರಣಕ್ಕೆ ಹೋರಾಟ ಮಾಡಿದ ಶ್ರೀ ಬಸವಪ್ರಭು ಕೋರೆ ಅವರ ಕನ್ನಡ ಭಾಷೆಯ ಅಭಿಮಾನ ಮೆಚ್ಚುವಂತಹದು. ನಂತರ ಅವರ ಹಿರಿಯ ಮಗ ಚಿದಾನಂದ ಕೋರೆ ಮತ್ತು ಬಾಳನಗೌಡ ಪಾಟೀಲರು ಈ ಕಾರ್ಯವನ್ನು ಮುಂದುವರಿಸಿದರು.

ಶ್ರೀ ಬಸವಪ್ರಭು ಕೋರೆಯವರದ್ದು ದಾಸೋಹದ ಮನೆ. ಅವರ ಧರ್ಮಪತ್ನಿ ರಾಯಬಾಗದ ಗೌಡಕಿಯ ಪಾಟೀಲ ಮನೆತನದವರು. ಆಗರ್ಭ ಶ್ರೀಮಂತಿಕೆಯ ತವರುಮನೆ ಮತ್ತು ಗಂಡನ ಮನೆಯಲ್ಲಿ ಇದ್ದರು. ತಾಯಿ ಶಾರಾದೇವಿಯವರು ಸರಳ ಸಜ್ಜನಿಕೆಯ ಸ್ವಭಾವದವರು. ಮನೆಗೆ ಬಂದ ಅತಿಥಿಗಳಿಗೆ ಊಟ ಮಾಡಿಸಿಯೇ ಕಳುಹಿಸುತ್ತಿದ್ದರು ಮತ್ತು ಇನ್ನೊಬ್ಬರ ಬಗ್ಗೆ ಪ್ರೀತಿ ಕನಿಕರವನ್ನು ಹೊಂದಿದವರಾಗಿದ್ದರು. ಸ್ವಾಮಿಗಳು, ಗುರುಗಳು, ರಾಜಕಾರಣಿಗಳು, ರೈತರು, ಶಿಕ್ಷಣವೇತ್ತರು, ಬಡಜನರು ಎಲ್ಲರಿಗೂ ಅಲ್ಲಿ ಸದಾ ಸ್ವಾಗತವಿತ್ತು. ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು, ಬಿಳ್ಳೂರು, ಮೃತ್ಯುಂಜಯ ಸ್ವಾಮಿಗಳು, ಶೇಗುಣಸಿ ಶ್ರೀಗಳು, ಶ್ರೀಧರ ಸ್ವಾಮಿಗಳು, ಕಂಚಿ ಶ್ರೀಗಳು, ಸಿದ್ಧೇಶ್ವರ ಸ್ವಾಮಿಗಳು ಹೀಗೆ ಅನೇಕ ಯತಿವರ್ಯರು ಆಗಮಿಸಿ ಪರಿಸರವನ್ನು ಪವಿತ್ರಗೊಳಿಸಿದರು. ಇಂದಿಗೂ ಕೋರೆಯವರ ನಂದಿಕುರಳಿ ತೋಟ ಪೂಜ್ಯರ ಪೂಜೆ ಅನುಷ್ಠಾನಗಳಿಗೆ ಅನುಕೂಲಕರವೆನಿಸಿದೆ. ಅಲ್ಲಿ ಪುರಾಣ, ಪ್ರವಚನ, ಅಧ್ಯಾತ್ಮ ಚಿಂತನೆ ಮುತ್ಸದಿಗಳ ವಿಚಾರ ವಿನಿಮಯ ನಡೆಯುತ್ತದೆ.[೨]

ಬಸವಪ್ರಭು ಕೋರೆ ಅವರು ಪ್ರಸಿದ್ಧ ವ್ಯಾಪಾರಿಗಳಾಗಿದ್ದರು. ಆಗಿನ ಕಾಲದಲ್ಲಿ ಜನರ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ಪೂರೈಸುತ್ತಿದ್ದರು. ಮುಖ್ಯವಾಗಿ ತಂಬಾಕು, ಬೆಲ್ಲ ಖರೀದಿ ಮಾಡಿ ದೂರದ ಗುಜರಾತ, ಮಹಾರಾಷ್ಟ್ರದ ರಾಜ್ಯಗಳಿಗೆ ರಫ್ತು ಮಾಡುತ್ತಿದ್ದರು. ಇವರು ಟ್ರಾನ್ಸ್‌ಪೋರ್ಟ್ ಕಂಪನಿ, ಆಯಿಲ್ ಮಿಲ್, ಪೆಟ್ರೋಲ ಪಂಪ್ ಮತ್ತು ಅರಿವೇ ಅಂಗಡಿಯನ್ನು ಹೊಂದಿದ್ದರು. ರೈತರು ಬೆಳೆದ ಬೆಳೆಗಳನ್ನು ಖರೀದಿಸಿ ರಫ್ತು ಮಾಡುತ್ತಿದ್ದರು. ಶ್ರೀ

ಬಸವಪ್ರಭು ಕೋರೆಯವರು ೧೯೪೬ ರಲ್ಲಿ ಅಂಕಲಿಯಲ್ಲಿ ಹೈಸ್ಕೂಲನ್ನು ಪ್ರಾರಂಭಿಸಿದರು. ಸರ್ಕಾರದ ಧನಸಹಾಯ ಇಲ್ಲದ ಸಮಯದಲ್ಲಿ ಶಾಲೆಯನ್ನು ಯಶಸ್ವಿಯಾಗಿ ನಡೆಸಿ, ನೂರಾರು ಜನ ವಿದ್ಯಾರ್ಥಿಗಳಿಗೆ ಶಿಕ್ಷಣದ ಭಾಗ್ಯವನ್ನು ಕಲ್ಪಿಸಿದರು. ಶ್ರೀ ಬಸವಪ್ರಭು ಕೋರೆ ಅವರು ಯಾರೇ ಸಹಾಯ ಕೇಳಿ ಬಂದರು ಇಲ್ಲವೆನ್ನುತ್ತಿರಲಿಲ್ಲ. ಅಂತಹ ದೊಡ್ಡ ಗುಣ ಅವರದಾಗಿತ್ತು. ಅವರ ಈ ಎಲ್ಲ ಕಾರ್ಯದಿಂದ ಜನರು ಪ್ರೀತಿಯಿಂದ ಅವರನ್ನು ಕಾಕಾ ಎಂದೇ ಕರೆಯುತ್ತಿದ್ದರು. ಬಸವಪ್ರಭು ಕೋರೆ ಅವರ ೧೩೦೮ ಸಂಖ್ಯೆಯ ಕಾರು ಆಗಿನ ಕಾಲದಲ್ಲಿ ಈಗಿನ ಸರ್ಕಾರಿ ಅಂಬುಲೆನ್ಸ್ ತರಹ ಕಾರ್ಯ ಮಾಡುತ್ತಿತ್ತು. ಯಾರಿಗಾದರೂ ಅನಾರೋಗ್ಯದ ತೀವ್ರ ತೊಂದರೆಯಾದಲ್ಲಿ ಅವರ ಕಾರು ಚಿಕ್ಕೋಡಿ, ಬೆಳಗಾವಿ ದವಾಖಾನೆಗೆ ಒಯ್ಯುವ ವ್ಯವಸ್ಥೆಯನ್ನು ಮಾಡುತ್ತಿತ್ತು. ಒಂದು ಉದಾಹರಣೆ ಎಂದರೆ ಶ್ರೀಕಾಂತ ಗುಣಕಿ ಮಾಸ್ತರರ ಅಕ್ಕನ ಹೆರಿಗೆಬೇನೆಯು ತೀವ್ರವಾದಾಗ ಬೆಳಿಗ್ಗೆ ೪ ಗಂಟೆಗೆ ಬಸವಪ್ರಭು ಅವರ ಮನೆಗೆ ಹೋಗಿ ಅವರಿಗೆ ವಿಷಯ ತಿಳಿಸಿದಾಗ, ತಕ್ಷಣ ಅವರ ಕಾರು ಚಾಲಕ ಅವಡೆಗೋಪಾಲನನ್ನು ಕರೆದು ಅವರೊಡನೆ ಕಳುಹಿಸಿಕೊಟ್ಟರು. ಮರುದಿನ ಕಾರಿನ ಎಣ್ಣೆ ಖರ್ಚು ಕೊಡಲು ಹೋದಾಗ ಕಾಕಾ ಅವರು 'ಛೇ, ಛೇ ದೇವರು ಕೊಟ್ಟ ಕಾಲಕ್ಕ ಒಬ್ಬರಿಗೊಬ್ಬರು ಸಹಾಯ ಮಾಡದಿದ್ದರ ಮತ್ಯಾವಾಗ ಮಾಡೋದು, ಕೂಡೋದು ವಿಚಾರ ಮಾಡಬ್ಯಾಡ ನಿನ್ನ ಅಕ್ಕನ ನೋಡಿಕೋ ಹೋಗು' ಎಂದರು. ಇದರಿಂದ ಅವರ ಉದಾರಗುಣ ವ್ಯಕ್ತವಾಗದಿರದು. ಪ್ರಭಾಕರ ಕೋರೆ ಅವರು ಶಾಲೆಗೆ ಸೇರಿದಾಗ "ಸಾಹುಕಾರನ ಮಗ ಅಂತಾ ಪ್ರೀತಿ ಮಾಡಬ್ಯಾಡ ತಪ್ಪು ಮಾಡಿದ್ದರ ಗಜ್ಜುಹಾಕು" ಎಂದು ಹೇಳಿದರು. ಇದರಿಂದ ಇವರ ಸರಳತೆ ಎಂತಹದು ಎಂಬುದನ್ನು ನಾವು ಗುರುತಿಸಬಹುದು.[೩]

ಸುತ್ತಲಿನ ಹತ್ತಾರು ಹಳ್ಳಿಯ ಜನರ ನ್ಯಾಯವನ್ನು ಬಗೆಹರಿಸಿ, ನ್ಯಾಯ ಪಂಚಾಯತ್‌ನ ನಿರ್ಣಯವನ್ನು ಕೊಡುತ್ತಿದ್ದರು. ಜನರ ಕೌಟುಂಬಿಕ ಜಗಳ, ಅಣ್ಣತಮ್ಮಂದಿರ ಜಗಳ, ಹೊಲ-ಗದ್ದೆ-ಸೀಮೆ ಹೀಗೆ ನಾನಾ ತರಹದ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು. ಆಗಿನ ಕಾಲದಲ್ಲಿ ಇವರ ಮನೆಯೇ ಒಂದು ನ್ಯಾಯಾಲಯವಿದ್ದಂತೆ ಇತ್ತೆಂದು ಹೇಳಿದರೆ ಎಂದರೆ ಅತಿಶಯೋಕ್ತಿ ಎನಿಸದು. ಶಿಕ್ಷಣ ಪ್ರೇಮಿಯಾಗಿದ್ದ ಇವರು, ಅಂಕಲಿಯಲ್ಲಿ ಎಜ್ಯುಕೇಶನ್ ಸೊಸೈಟಿಯನ್ನು ೧೯೪೬ ರಲ್ಲಿ ಸ್ಥಾಪಿಸುವಲ್ಲಿ ನೆರವಾದರು. ಶಾಲೆಯ ನಿರ್ಮಾಣದ ಕಾರ್ಯವನ್ನು ವೀಕ್ಷಿಸಲು ಶ್ರೀ ಬಸವಪ್ರಭು ಕೋರೆಯವರ ಜೊತೆಗೆ ಪ್ರಭಾಕರ ಕೋರೆಯವರು ಕೂಡಾ ಬರುತ್ತಿದ್ದರು. ಅವರ ಮನೆಯ ಮುಂದೆ ನಡೆಯುತ್ತಿದ್ದ ನ್ಯಾಯ ಪಂಚಾಯಿತಿಗಳನ್ನು ಪ್ರಭಾಕರ ಕೋರೆಯವರು ಬಾಲ್ಯದಲ್ಲಿಯೇ ಬಹಳಷ್ಟು ಆಸಕ್ತಿಯಿಂದ ನೋಡುತ್ತಿದ್ದರು. ತಂದೆಯವರು ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತಿದ್ದರು ಎನ್ನುವುದನ್ನು ಆಸಕ್ತಿಯಿಂದ ತಿಳಿದುಕೊಳ್ಳುತ್ತಿದ್ದರು.

ಇಂತಹ ಶ್ರೇಷ್ಠ ವ್ಯಕ್ತಿ ಶ್ರೀ ಬಸವಪ್ರಭು ಅವರ ತಂದೆ ಶ್ರೀ ಶಿವಲಿಂಗಪ್ಪ, ತಾಯಿ ಸೌ. ಶಿವಬಾಯಿಯವರಿಗೆ ೨ ಜನ ಗಂಡುಮಕ್ಕಳು ೫ ಜನ ಹೆಣ್ಣುಮಕ್ಕಳು ಇದ್ದರು. ಮೊದಲನೆಯವರು ಧರೆಪ್ಪನವರು. ಎರಡನೆಯವರು ಸಿದ್ದಪ್ಪನವರು. ಮೂರನೆಯವರು ಬಾಯವ್ವ, ನಾಲ್ಕನೆಯವರು ನಿಂಬೆವ್ವ, ಐದನೆಯವರು ನೀಲವ್ವ, ಆರನೆಯವರು

ತಂಗವ್ವ, ಏಳನೆಯವರೇ ಬಸವಪ್ರಭು, ಎಂಟನೆಯವರು ಚೆಂಪವ್ವ. ಶ್ರೀ ಬಸವಪ್ರಭು ಅವರ ಪತ್ನಿ ಶಾರಾದೇವಿಯವರಿಗೆ ನಾಲ್ಕು ಜನ ಗಂಡುಮಕ್ಕಳು ಮೂರು ಜನ ಹೆಣ್ಣು ಮಕ್ಕಳು ಸುಖ ಸಂಸಾರವಿದು. ಮೊದಲನೆಯವರು ಚಿದಾನಂದ, ಎರಡನೆಯವರು ಗಣಪತಿರಾಮ, ಮೂರನೆಯವರು ತಂಗೆವ್ವ ಉರ್ಫ ಚನ್ನವ್ವ, ನಾಲ್ಕನೆಯವರು ಧರಪ್ಪನವರು, ಐದನೆಯವರು ಶಾಂತವ್ವ, ಆರನೆಯವರು ಸುಶೀಲಾ, ಏಳನೆಯವರು ಮತ್ತು ಕಡೆಯವರೇ ಶ್ರೀ ಪ್ರಭಾಕರ. ಈ ಸುಖಮಯ ಸಂಸಾರ ಶ್ರೀ ಬಸವಪ್ರಭು ಸೌ. ಶಾರಾದಾದೇವಿಯವರದಾಗಿತ್ತು. ಶ್ರೀ ಬಸವಪ್ರಭು ಕೋರೆ ಅವರು ದಿನಾಂಕ ೨೧-೧೨-೧೯೬೩ ರಂದು ತಮ್ಮ ೭೧ನೇ ವಯಸ್ಸಿನಲ್ಲಿ ಲಿಂಗೈಕ್ಯರಾದರು. ಸೌ. ಶಾರಾದಾದೇವಿ ಕೋರೆ ಅವರು ೯೪ನೇ ಇಳಿವಯಸ್ಸಿನಲ್ಲಿ ೧೬-೦೨-೨೦೦೨ ರಲ್ಲಿ ಲಿಂಗೈಕ್ಯರಾದರು.

ಮುಂದೆ ಕುಟುಂಬದ ಸಂಪೂರ್ಣವಾದ ಜವಾಬ್ದಾರಿಯು ಹಿರಿಯ ಮಗ ಚಿದಾನಂದ ಕೋರೆ ಅವರ ಹೆಗಲ ಮೇಲೆ ಬಿತ್ತು. ಚಿದಾನಂದ ಕೋರೆಯವರು ತಂದೆಯಂತೆಯೇ ಸಮಾಜ ಸೇವೆಯಲ್ಲಿ ಸಕ್ರಿಯರಾದರು. ರಾಜಕೀಯದಲ್ಲಿ ದೊಡ್ಡ ಹೆಸರು ಮಾಡಿದರು. ತಂದೆ ಅವರ ಕನಸಿನಂತೆ ೧೯೬೯ರ ಈ ಭಾಗದ ರೈತರ ಏಳ್ಗೆಗೆ ಒಂದು ಸಕ್ಕರೆ ಕಾರ್ಖಾನೆಯ ಅವಶ್ಯಕತೆ ಇದೆ ಎಂದು ಮನವರಿಕೆಯಾದಾಗ, ನಣದಿ ನದಿ ದಂಡೆಯಲ್ಲಿ ಶ್ರೀ ಧೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದರು. ಚಿಕ್ಕೋಡಿ ಭಾಗದ ರೈತರ ಆರ್ಥಿಕ ಸಬಲೀಕರಣಕ್ಕೆ ಇದೊಂದು ದೊಡ್ಡ ಸಾಧನೆ. ನಂತರ ಪ್ರತಿಷ್ಠಿತ ಕೆ.ಎಲ್.ಇ. ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿದರು. ಕೆ.ಎಲ್.ಇ. ಸಂಸ್ಥೆಗೆ ೧ ಲಕ್ಷ ರೂಪಾಯಿಯ ಸಹಾಯ ಧನವನ್ನು ನೀಡಿ ಚಿಕ್ಕೋಡಿಯಲ್ಲಿ ಪದವಿ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಆ ಮೂಲಕ ಈ ಭಾಗದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸುಲಭವಾಗಿ ಶಿಕ್ಷಣ ದೊರಕುವಂತೆ ಮಾಡಿದರು. ಅಂಕಲಿ ಎಜ್ಯುಕೇಶನ್ ಸೊಸೈಟಿಯ ಜವಬ್ದಾರಿಯನ್ನು ಹೊತ್ತುಕೊಂಡು ಅದರ ಪ್ರಗತಿಗೆ ಶ್ರಮಿಸಿದರು.

೧೯೫೭ರಲ್ಲಿ ನಡೆದ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಕಾಗವಾಡ ಮತ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ನಂತರ ಈ ಭಾಗದ ಹಲವಾರು ಕಾರ್ಯಗಳನ್ನು ಮಾಡಿ ಜನ ನಾಯಕರಾಗಿ ಬೆಳೆದರು. ಇವರ ಪ್ರತಿಯೊಂದು ಕಾರ್ಯದಲ್ಲಿ ಹೆಗಲು ಕೊಟ್ಟು ಪ್ರೋತ್ಸಾಹಿಸಿದವರು ಶ್ರೀ ಪ್ರಭಾಕರ ಕೋರೆ ಅವರು. ಚಿದಾನಂದ ಕೋರೆ ಅವರು ನಾಡಿನ, ರಾಷ್ಟ್ರದ ಹಲವು ನಾಯಕರ ಜೊತೆ ಉತ್ತಮ ಸಂಪರ್ಕವನ್ನು ಹೊಂದಿದ್ದರು. ಹೀಗಾಗಿ ಶ್ರೀಕೃಷ್ಣ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾದರು. ಕೆ.ಎಲ್.ಇ. ಸಂಸ್ಥೆಗೆ ಇವರು ನೀಡಿದ ಕೊಡುಗೆ ಅಪಾರವಾಗಿದೆ. ಇಂತಹ ಶ್ರೇಷ್ಠ ನಾಯಕರು ೧೯೮೧ ರಲ್ಲಿ ನಿಧನ ಹೊಂದಿದರು.

ಹೀಗೆ ಪ್ರಭಾಕರ ಕೋರೆ ಕುಟುಂಬದವರು ಈ ಐತಿಹಾಸಿಕ ಶ್ರೀಮಂತಿಕೆಯನ್ನು ಹೊಂದಿದವರು. ಪರೋಪಕಾರಿ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ. ತಂದೆ ಶ್ರೀ ಬಸವಪ್ರಭು ಕೋರೆ ಅವರ ಹಾಗೆಯೇ ತಾಯಿ ಶಾರದಾದೇವಿಯವರ

ತಂದೆ ರಾಯಭಾಗದ ಗೌಡಕಿ ಮನೆತನದವರಾದ ರಾಹುಸಾಹೇಬ ಪಾಟೀಲರು. ತಂದೆ ಬಸವಪ್ರಭು ತಾಯಿ ಶಾರಾದಾದೇವಿ, ಅಣ್ಣ ಚಿದಾನಂದ ಕೋರೆಯವರ ಪ್ರಭಾವಳಿಯಲ್ಲಿ ಬೆಳೆದ ಪ್ರಭಾಕರ ಕೋರೆಯವರು, ಇವತ್ತು ಈ ಸ್ಥಾನಕ್ಕೆ ಏರಲು ಕುಟುಂಬದ ಪ್ರಭಾವ ಅವರ ಮೇಲೆ ಗಾಢವಾಗಿದೆ.[೪]

ಡಾ. ಪ್ರಭಾಕರ ಕೋರೆ ಅವರ ಬದುಕು ಮತ್ತು ಸಾಧನೆಗಳು :

ಡಾ. ಪ್ರಭಾಕರ ಬಸವಪ್ರಭು ಕೋರೆ ಅವರು ದೇಶ ದಾಸ್ಯತ್ವದ ಸಂಕೋಲೆಯಿಂದ ಸ್ವಾತಂತ್ರ್ಯದ ಬೆಳಕನ್ನು ಸ್ವಾಗತಿಸುವ ಉತ್ಸಾಹದ ದಿನಗಳನ್ನು ಎಣಿಕೆ ಹಾಕುವ ಸಂದರ್ಭದಲ್ಲಿ ೧೯೪೭ರ ಆಗಸ್ಟ ೧ರಂದು ಸ್ವಾತಂತ್ರ್ಯ ಹೋರಾಟಗಾರರೂ, ಆಗರ್ಭ ಶ್ರೀಮಂತ ಮತ್ತು ದಯಾಮಯಿ ಸುಸಂಸ್ಕೃತಿಯ ದಂಪತಿಗಳಾದ ಶ್ರೀ ಬಸವಪ್ರಭು ಸೌ. ಶಾರಾದಾದೇವಿಯವರ ಕೊನೆಯ ಪುತ್ರರಾಗಿ ಜನಿಸಿದರು. ಪ್ರಭಾಕರ ಕೋರೆಯವರು ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವರು, ರಾಜ್ಯ ಸಭೆಯ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಶ್ರೀ ಧೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಚೇರಮನ್‌ರಾಗಿ, ಅಖಿಲ ಭಾರತ ಸಕ್ಕರೆ ಕಾರ್ಖಾನೆಯ ಮಹಾಮಂಡಲದ ನಿರ್ದೇಶಕರಾಗಿ, ಸದ್ಯ ಇದರ ಅಧ್ಯಕ್ಷರಾಗಿ, ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಇವರು ಮಾಡಿದ ಕಾರ್ಯಗಳು ಮತ್ತು ಸಾಧನೆಗಳು ರೋಮಾಂಚಕಾರಿಯಾಗಿವೆ. ಕೋರೆ ಅವರು ಇಲ್ಲದೇ ಉತ್ತರ ಕರ್ನಾಟಕದಲ್ಲಿ ಯಾವುದೇ ಬೃಹತ್ ಕಾರ್ಯ ನಡೆಯುವುದಿಲ್ಲ. ಒಂಮ ವೇಳೆ ನಡೆಯುತ್ತಿದ್ದರೆ ಅಲ್ಲಿ ಡಾ. ಪ್ರಭಾಕರ ಕೋರೆಯವರ ಸಾರಥ್ಯ ಇರಲೇಬೇಕು ಅನ್ನುವಷ್ಟರ ಮಟ್ಟಿಗೆ ಜನಾನುರಾಗಿರುವ ಶ್ರೀ ಪ್ರಭಾಕರ ಕೋರೆ ಅವರ ಸಾಧನೆ ಮಾತ್ರ ಮುಂದಿನ ಪೀಳಿಗೆಗೆ ದಾರಿ ದೀಪ. ಇಂತಹ ಮಹಾನ್ ಸಾಧಕರ ಬಾಹ್ಯಜೀವನದತ್ತ ಒಂದು ಪರಿಚಯ ಅಧ್ಯಯನದ ದೃಷ್ಟಿಯಿಂದ ಅಗತ್ಯವೆನಿಸುತ್ತದೆ.

ಪ್ರಭಾಕರ ಕೋರೆ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ವಂತ ಊರಾದ ಅಂಕಲಿಯಲ್ಲಿ ಮುಗಿಸಿದರು. ಬಾಲ್ಯದಲ್ಲಿಯೇ ಶಿಸ್ತು, ಧೈರ್ಯ, ಸಂಯಮ, ಓದಿನಲ್ಲಿ ಆಸಕ್ತಿಯನ್ನು ಬೆಳೆಯಿಸಿಕೊಂಡಿದ್ದರು. ಆ ಕಾಲದಲ್ಲಿ ಮರಾಠಿ ಪ್ರಭಾವ ಗಾಢವಾಗಿತ್ತು. ಅಂತಹದರಲ್ಲಿ ಕೋರೆ ಕುಟುಂಬದಲ್ಲಿ ಕನ್ನಡ ಶಾಲೆಗೆ ಸೇರಿದ್ದ ಪ್ರಭಾಕರರವರು ಪ್ರಥಮ ಸದಸ್ಯರಾದರು. ಆಗರ್ಭ ಶ್ರೀಮಂತಿಕೆ ಇದ್ದರೂ ಸದಾ ಸರಳ ಸಜ್ಜನಿಕೆಯನ್ನು ಬಾಲ್ಯದಲ್ಲಿಯೇ ಬೆಳೆಸಿಕೊಂಡು ಬಂದವರು, ಮನೆಯಲ್ಲಿ ಕಿರಿಯವರಾಗಿದ್ದರಿಂದ ತಾಯಿ ಶಾರಾದಾ ದೇವಿಯವರು ಇವರನ್ನು ಹೆಚ್ಚು ಪ್ರೀತಿಸುತ್ತಿದ್ದರು. ಅಂತೆಯೇ ತಂದೆ ಮತ್ತು ಇತರ ಕುಟುಂಬದ ಸದಸ್ಯರು ಎಲ್ಲರಿಗೂ ಪ್ರೀತಿಯ ಪ್ರಭಾಕರರಾಗಿ ಬೆಳೆದರು. ಪ್ರಾಥಮಿಕ ಶಾಲೆಯಲ್ಲಿ ವಿಜಯ ಜಾದವ ಮತ್ತಿತರ ಆತ್ಮೀಯ ಸ್ನೇಹಿತರೊಂದಿಗೆ ಶ್ರದ್ಧೆಯಿಂದ ಪಾಠವನ್ನು ಕೇಳುತ್ತಿದ್ದರು. ರಾತ್ರಿ ಕೋರೆಯವರ ಶಿಕ್ಷಕರಾದ ಶ್ರೀಕಾಂತ ಗುಣಕಿ ಅವರ ಹತ್ತಿರವೇ ಉಳಿದು ಪಾಠ ಬೋಧನೆಯನ್ನು ಮಾಡಿಸಿಕೊಳ್ಳುತ್ತಿದ್ದರು.[೫] ನಂತರ ಬೆಳಗಾವಿಯ ಜಿ. ಎ. ಹೈಸ್ಕೂಲಿಗೆ ಮಾಧ್ಯಮಿಕ ಶಿಕ್ಷಣಕ್ಕಾಗಿ ಸೇರಿದರು. ಅಲ್ಲಿಯೇ ತಮ್ಮ ನಾಯಕತ್ವದ ಗುಣಗಳನ್ನು ಪ್ರದರ್ಶಿಸಿಸ ತೊಡಗಿದರು. ಮತ್ತು ಹಲವಾರು ಜನ ಬಡ ಪ್ರತಿಭಾವಂತ ವಿದ್ಯಾರ್ಥಿ ಸ್ನೇಹಿತರ ಕಷ್ಟ

ಕಾರ್ಪಣ್ಯವನ್ನು ನೋಡಿ ಸಹಾಯವನ್ನು ಮಾಡುತ್ತಿದ್ದರು. ೧೯೬೨ ರಲ್ಲಿ ಕೋರೆ ಅವರು ೯ನೇ ತರಗತಿ ಓದುತ್ತಿದ್ದರು. ಆಗ ಕಣಬರಗಿಯ ವಿದ್ಯಾರ್ಥಿ ಸ್ನೇಹಿತರಾಗಿದ್ದ ಶ್ರೀ ಬಿ. ಕೆ. ಬಿರಜೆ ತುಂಬಾ ಪ್ರತಿಭಾವಂತರಾಗಿದ್ದರು. ಆದರೆ ಬಡತನ, ಅವರ ಸಮಸ್ಯೆಯನ್ನು ಕಂಡು ಅವರ ಶಾಲೆಯ ಫೀಯನ್ನು ಸ್ವತಃ ಕೋರೆ ಅವರೇ ಕಟ್ಟಿದ್ದರು. ಇದೊಂದು ಉದಾಹರಣೆ ಅಷ್ಟೆ. ಹೀಗೆ ಅನೇಕ ಬಡ ವಿದ್ಯಾರ್ಥಿಗಳಿಗೆ ತಮ್ಮ ಹಣದಿಂದಲೇ ಶಾಲೆಯ ಫೀ ಹಣವನ್ನು ಕಟ್ಟುತ್ತಿದ್ದರು. ಪುಸ್ತಕ, ಬಟ್ಟೆಗಳಿಗೆ ಹಣದ ಸಹಾಯವನ್ನು ನೀಡುತ್ತಿದ್ದರು. ಇಂತಹ ಪರೋಪಕಾರಿ ಮನೋಭಾವನೆಯನ್ನು ತಮ್ಮ ಹೈಸ್ಕೂಲ್ ಹಂತದ ಶಿಕ್ಷಣದಲ್ಲಿಯೇ ಪ್ರಭಾಕರ ಕೋರೆಯವರು ಮಾಡುತ್ತಲೇ ಬೆಳೆದರು. "ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎನ್ನುವ ಗಾದೆ ಮಾತು ಅಕ್ಷರಶಃ ಕೋರೆಯವರಿಗೆ ಅನ್ವಯಿಸುತ್ತದೆ. ಪ್ರಭಾಕರ ಕೋರೆ ಅವರು ಅದೇ ಸಮಯದಲ್ಲಿ ಕಾಳೀ ಅಂಬರಾಯಿ ಪ್ರದೇಶದಲ್ಲಿ ಇರುವ ಬಡರಾಮ ನಿವಾಸದಲ್ಲಿ ವಾಸಿಸುತ್ತಿದ್ದರು. ಮಿತ್ರರೊಂದಿಗೆ ನ್ಯೂಗ್ರ್ಯಾಂಡ ರೆಸ್ಟೋರೆಂಟನಲ್ಲಿ ಚಹಾ ಕುಡಿಯಲು ಹೋಗುತ್ತಿದ್ದರು. ೨೫ ಜನ ಸ್ನೇಹಿತರ ಜೊತೆಯಲ್ಲಿ 'ಹಂ ದೋನೋ' ಹಿಂದಿ ಚಲನ ಚಿತ್ರದ ಟಿಕೇಟನ್ನು ಎಲ್ಲರಿಗೂ ಕೋರೆ ಅವರೇ ತೆಗೆಸಿದರು. ಕೋರೆ ಅವರ ಜೊತೆಗೆ ಎಲ್ಲರೂ ಜಾಣ ವಿದ್ಯಾರ್ಥಿಗಳೇ ಇದ್ದರು. ಕೋರೆ ಅವರು ಶಾಲೆಗೆ ಕಡ್ಡಾಯವಾಗಿ ಹಾಜರಾಗಿರುತ್ತಿದ್ದರು. ವಿಷಯವನ್ನು ಗಮನಿವಿಟ್ಟು ಕೇಳುತ್ತಿದ್ದರು. ನೇರವಾಗಿ ಮಾತನಾಡುವ ಸ್ವಭಾವ ಅವರದು. ಹಿಂದೆ ಮಾತನಾಡುವ ಜಾಯಮಾನ ಅವರದಲ್ಲ. ಶಾಲಾ ಸಮಾರಂಭಗಳಲ್ಲಿ ಎಲ್ಲರನ್ನು ಜೊತೆಗೆ ತೆಗೆದುಕೊಂಡು ಅವರಿಂದ ಕಾರ್ಯ ಮಾಡಿಸುವ ಜಾಣ್ಮೆ ಅವರಲ್ಲಿ ಕರಗತವಾಗಿತ್ತು. ಆ ಸಮಯದಲ್ಲಿಯೇ ನಮ್ಮ ಪ್ರದೇಶ ಬದಲಾಗಬೇಕು, ಅಭಿವೃದ್ಧಿ ಹೊಂದಲು ಏನು ಮಾಡಬೇಕು ಎನ್ನುವ ತಮ್ಮ ಮನಸ್ಸಿನ ಇಚ್ಛೆಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಿದ್ದರು. ಆ ಹಂತದಲ್ಲಿಯೇ ಅವರು ದೃಢ ನಿರ್ಧಾರವನ್ನು ಮಾಡಿದ್ದರು. ಈ ಸಮಾಜಕ್ಕಾಗಿ ಏನಾದರೂ ಕಾಣಿಕೆಯನ್ನು ಸಲ್ಲಿಸಬೇಕೆಂಬುದು ಅವರ ಮಾತಿನಿಂದ ಸ್ಪಷ್ಟವಾಗಿ ತಿಳಿದುಬರುತ್ತಿತ್ತು. ಹಿಂದೆ ಮುಂದೆ ನೋಡದೆ ಇದ್ದುದ್ದನ್ನು ಇದ್ದ ಹಾಗೆ ಹೇಳುವ ಧೈರ್ಯ ಅವರದು ಮನಸ್ಸಿನಲ್ಲಿ ಅಂದುಕೊಂಡಿದ್ದನ್ನು ಮಾಡದೇ ಇರುತ್ತಿರಲಿಲ್ಲಾ. ಅಷ್ಟು ಹಠವಾದಿ ಸ್ವಭಾವ ಅವರದಾಗಿತ್ತು. ತಾನು ಶ್ರೀಮಂತ ಎನ್ನುವ ಭಾವನೆ ಅವರಲ್ಲಿ ಯಾವತ್ತೂ ಇರಲಿಲ್ಲ. ಎಲ್ಲರೊಂದಿಗೂ ಅಷ್ಟೆ ಸರಿಸಮಾನದಿಂದ ಬೆರೆಯುತ್ತಿದ್ದರು. ಅಂತಹ ಅಂಹಕಾರರಹಿತ ವ್ಯಕ್ತಿತ್ವ ಅವರದಾಗಿತ್ತು.

ಗೋಗಟೆ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪದವಿ ಶಿಕ್ಷಣಕ್ಕೆಂದು ಸೇರಿಕೊಂಡು, ಅಲ್ಲಿಯೇ ಅವರು ನಾಯಕತ್ವದ ಗುಣಗಳನ್ನು ತಮ್ಮ ಪದವಿ ಹಂತದ ಶಿಕ್ಷಣದಲ್ಲಿಯೇ ಪ್ರದರ್ಶಿಸಿಸತೊಡಗಿದರು. ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಗೊಂಡರು. ನಂತರ ೨೦೦ ರೂಪಾಯಿಯಲ್ಲಿಯೇ ವಿದ್ಯಾರ್ಥಿಗಳಿಗಾಗಿ ದೇಶದ ಪ್ರಮುಖ ನಗರಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಿ ಯಶಸ್ವಿಯಾಗಿ ಮುಗಿಸಿದರು.

ಗೋಗಟೆ ವಾಣಿಜ್ಯ ಮಹಾವಿದ್ಯಾಲಯ ಒಂದು ಪ್ರತಿಷ್ಠಿತ ಕಾಲೇಜು ಆಗಿತ್ತು. ಅದರ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಹುದ್ದೆಯೂ ಅಷ್ಟೇ ಮಹತ್ವದಾಗಿತ್ತು. ಅಂತಹ ಹುದ್ದೆಗೆ ಪ್ರಭಾಕರ ಕೋರೆಯವರು ಅವಿರೋಧವಾಗಿ

ಆಯ್ಕೆಯಾಗಿದ್ದು ಅವರ ನಾಯಕತ್ವದ ಗುಣ ಎಂತಹದು ಎನ್ನುವುದನ್ನು ತಿಳಿಯಬಹುದು. ಕಾಲೇಜಿನ ವಾರ್ಷಿಕ ದಿನಾಚರಣೆಗೆ ಖ್ಯಾತ ಕಾನೂನುತಜ್ಞ ಪಾಲ್ಕಿವಾಲಾರನ್ನು ಸ್ವತಃ ಮುಂಬಯಿಗೆ ಹೋಗಿ, ಆಮಂತ್ರಿಸಿ ಸಮ್ಮೇಳನವನ್ನು ಅದ್ದೂರಿಯಾಗಿ ಸಂಘಟನೆ ಮಾಡಿ, ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ತಮ್ಮ ಪದವಿ ಹಂತದ ಶಿಕ್ಷಣದಲ್ಲಿಯೇ ತಾವೊಬ್ಬ ಅದ್ಭುತ ಸಂಘಟನಾ ಚತುರ ಎನ್ನುವುದನ್ನು ನಿರೂಪಿಸಿದರು. ಮುಂದೆ ಜಪಾನಿನಲ್ಲಿ ನಡೆಯುತ್ತಿದ್ದ Expo–೭೦ ಪ್ರದರ್ಶನದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟದ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದರು. ಇದೇ ವೇಳೆ ಥಾಯ್‌ಲ್ಯಾಂಡ್, ಹಾಂಕಾಂಗ್ ದೇಶಗಳಿಗೂ ಭೇಟಿಕೊಟ್ಟು ಬಂದ ನಂತರ ಸ್ನೇಹಿತರೊಂದಿಗೆ ವಿದೇಶ ಪ್ರವಾಸದ ಅನುಭವವನ್ನು ಹಂಚಿಕೊಳ್ಳುತ್ತ, ನಮ್ಮ ಪ್ರದೇಶವನ್ನು ಆ ದೇಶಗಳಂತೆ ಅಭಿವೃದ್ಧಿ ಪಡಿಸಬೇಕೆಂದು ಹೇಳುತ್ತಿದ್ದರು. ಅಷ್ಟೊಂದು ಅಭಿಮಾನ ಈ ಪ್ರದೇಶದ ಬಗ್ಗೆ ಅವರಿಗೆ ವಿದ್ಯಾರ್ಥಿ ದಿಸೆಯಿಂದಲೇ ಇತ್ತು ಎಂಬುದನ್ನು ನಾವು ಗುರುತಿಸಬಹುದು. ಮುಂದೆ ಅಂಕಲಿಯಲ್ಲಿ ಬೃಹತ್ ಸನ್ಮಾನ ಸಮಾರಂಭ ನಡೆಯಿತು. ಆಗ ಈ ಸಮಾರಂಭದ ಅಧ್ಯಕ್ಷತೆಯನ್ನು ಅಪ್ಪಣ್ಣ ಗೌಡರ ಪಾಟೀಲರು ವಹಿಸಿದ್ದರು. ಆಗ ಪ್ರಾಥಮಿಕ ಶಾಲೆಯಲ್ಲಿ ಬೋಧಿಸಿದ ಗುಣಕಿ ಮಾಸ್ತರರು ಹಾರ ತೆಗೆದುಕೊಂಡು ಬಂದರು. ಆಗ ಆ ಹಾರವನ್ನು ಮರಳಿ ಅವರಿಗೆ ಅರ್ಪಿಸಿ, ಪಾದಮುಟ್ಟಿ ನಮಸ್ಕಾರ ಮಾಡಿ, ನೀವು ಆಗ ಕಲಿಸದೇ ಇದ್ದರೆ ಇವತ್ತು ಈ ಸನ್ಮಾನ ನನಗೆ ಇರುತ್ತಿರಲಿಲ್ಲ ಎಂದು ಹೇಳಿ ಔದಾರ್ಯವನ್ನು ಮೆರೆದರು.[೬]

ಪ್ರಭಾಕರ ಕೋರೆ ಅವರು ತಮ್ಮ ಪದವಿ ಶಿಕ್ಷಣವನ್ನು ಗೋಗಟೆ ವಾಣಿಜ್ಯ ವಿದ್ಯಾಲಯದಲ್ಲಿ, ವಾಣಿಜ್ಯ ಪದವಿಯನ್ನು ಪಡೆದ ನಂತರ ಅಣ್ಣ ಚಿದಾನಂದ ಕೋರೆ ಅವರ ಕಾರ್ಯದಲ್ಲಿ ಸಹಾಯ ಮಾಡಲು ಅಂಕಲಿಗೆ ಮರಳಿದರು. ನಂತರ ೧೯೭೩ರಲ್ಲಿ ಕೋರೆ ಕುಟುಂಬಕ್ಕೆ ಪರಿಚಯದವರಾದ ಜೀರಗಿ ಅವರು, ದೂರವಾಣಿ ಕೇಂದ್ರದಲ್ಲಿ ಚೀಫ್ ಇಂಜಿನೀಯರರಾಗಿದ್ದ ಕೋತಾವಳೆ ಅವರ ಸ್ನೇಹಿತರಾಗಿದ್ದರು. ಶಂಕರರಾವ ಕೋತಾವಳೆ ಮೂಲ ಬೀಳಗಿಯವರು. ಇವರ ಅತ್ತೆ ಹಾವೇರಿ ಜಿಲ್ಲೆಯ ಹೊನ್ನಳ್ಳಿಯವರು, ಪೂನಾದಲ್ಲಿ ನೆಲೆನಿಂತವರು. ಇವರ ಸಂಬಂಧಿಗಳು ಇನ್ನೂ ಬೀಳಗಿಯಲ್ಲಿ ಇದ್ದಾರೆ. ಅತ್ತೆಯ ಕಡೆಯವರು ಹೊನ್ನಳ್ಳಿಯಲ್ಲಿಯೇ ಇದ್ದಾರೆ. ಇವರ ಮೂಲಕ ಕೋತಾವಳೆ ಅವರ ಮಗಳಾದ ಆಶಾದೇವಿ ಅವರ ಜೊತೆ ಮದುವೆಯನ್ನು ನಿಶ್ಚಯಿಸಲಾಯಿತು. ಆಶಾದೇವಿಯವರಿಗೆ ಐದು ಮಂದಿ ತಮ್ಮಂದಿರು ಇದ್ದರು. ಒಬ್ಬರೇ ಹೆಣ್ಣುಮಗಳಾದ ಆಶಾದೇವಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪುಣೆಯ ಮಾಡೆಲ್ ಸ್ಕೂಲ್‌ನಲ್ಲಿ ಮುಗಿಸಿದರು. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿಯನ್ನು ಸಂಪಾದಿಸಿ ಬಂದರು. ಪುಣೆ ಸಾಮಾಜಿಕವಾಗಿ ಮುಂದುವರೆದ ನಗರವಾಗಿತ್ತು. ಅಂಕಲಿ ಒಂದು ಪುಟ್ಟಗ್ರಾಮ. ಆದರೂ ಆಶಾದೇವಿ ವ್ಯತ್ಯಾಸವೇನು ಅನ್ನಿಸಲಿಲ್ಲವಂತೆ. ಏಕೆಂದರೆ ಕೋರೆ ಅವರ ಮನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿತ್ತು. ೩೫೦ ಎಕರೆ ಜಮೀನು, ಪೆಟ್ರೋಲ್ ಪಂಪ, ಅರಿವೆ ಅಂಗಡಿ, ಟ್ರಾನ್ಸಪೋರ್ಟ, ಬೆಲ್ಲ ಮತ್ತು ತಂಬಾಕಿನ ವ್ಯಾಪಾರವಿತ್ತು. ಸುಮಾರು ೪೦ ಜನರ ಅವಿಭಕ್ತ ಕುಟುಂಬವಿದ್ದರೂ, ಕೆಲಸದ ಜವಾಬ್ದಾರಿ ಬೀಳಲಿಲ್ಲ. ಕಾರಣ ಕೆಲಸದ ಆಳುಗಳು ಸಾಕಷ್ಟು ಇದ್ದರು. ಶ್ರೀಮಂತಿಕೆ ಇತ್ತು. ಅಣ್ಣ ಚಿದಾನಂದ ಕೋರೆಯವರ ನಿಧನದ

ನಂತರ ೧೯೮೧ ರ ಹೊತ್ತಿಗೆ ಕುಟುಂಬದ ಸಂಪೂರ್ಣವಾದ ಜವಾಬ್ದಾರಿಯು ಇವರ ಮೇಲೆ ಬಿತ್ತು. ಶ್ರೀ ಪ್ರಭಾಕರ ಕೋರೆ ಸೌ. ಆಶಾದೇವಿಯವರಿಗೆ ಇಬ್ಬರು ಹೆಣ್ಣುಮಕ್ಕಳು; ಒಬ್ಬ ಗಂಡುಮಗ. ಪ್ರಭಾಕರ ಕೋರೆ ಅವರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸಹಕಾರ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದರಿಂದ ಮಕ್ಕಳ ಕಡೆಗೆ ಲಕ್ಷ್ಯ ವಹಿಸಲು ಸಮಯ ಸಿಗುತ್ತಿರಲಿಲ್ಲ. ದೊಡ್ಡ ಮಗಳು ಡಾ॥ ಪ್ರೀತಿ ಕರಣ ದೊಡ್ಡವಾಡ ದಂತ ವೈದ್ಯಕೀಯದಲ್ಲಿ ಎಮ್.ಡಿ. ಮಾಡಿದ್ದಾರೆ. ಸದ್ಯ ಇವರು ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ವಿಶ್ವನಾಥ ದಂತ ಮಹಾವಿದ್ಯಾಲಯ ಬೆಳಗಾವಿಯಲ್ಲಿ 'ಕಂಜರ್‌ವೇಟಿವ್ ಡೆಂಟಿಸ್ಟ' ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದರ ಜೊತೆಗೆ ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯರಾಗಿ ಸಂಸ್ಥೆಯ ಬೆಳವಣಿಗೆಯಲ್ಲಿ ತಂದೆಯವರ ಜೊತೆಯಲ್ಲಿ ಶ್ರಮಿಸುತ್ತಿದ್ದಾರೆ. ಶ್ರೀ ಕೋರೆಯವರ ಎರಡನೆಯ ಮಗಳು ದೀಪ್ತಿ ಆರಾಧ್ಯ, ಬಿ.ಎಸ್ಸಿ (B.Sc.) (ಹೋಮಸೈನ್ಸ) ಮಾಡಿ ಜ್ಯುವೇಲರಿ ಶಾಸ್ತ್ರದಲ್ಲಿ ಅಮೇರಿಕೆಯಿಂದ ಡಿಪ್ಲೋಮಾ ಮಾಡಿದ್ದಾರೆ. ಮಗ ಅಮಿತ ಕೋರೆಯವರು ಬಿ.ಇ. ಎಂ.ಬಿ.ಎ. (ಇಲಿನಾಯ್ಸ್ ವಿ. ವಿ., ಅಮೇರಿಕಾ) ಮುಗಿಸಿ, ಸದ್ಯ ಸಮಾಜ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಚಿಕ್ಕೋಡಿಯ ಧೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ ದಾಖಲೆ ಮತ ಪಡೆದು, ರೈತರ ಹಾಗೂ ಕಾರ್ಖಾನೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ೨೦೧೦ ರಲ್ಲಿ ನಡೆದ ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಶ್ರೀ ಅಮಿತ ಕೋರೆಯವರು ಬಹುಮತ ಪಡೆದು, ನೇರವಾಗಿ ಸದ್ಯಸರರಿಂದ ಪ್ರಜಾಸತ್ತಾತ್ಮಕವಾಗಿ, ಚುನಾವಣೆಯ ಮೂಲಕ ನಿರ್ದೇಶಕರಾಗಿ, ಆಯ್ಕೆಯಾಗಿ ಕೆ.ಎಲ್.ಇ. ಸಂಸ್ಥೆಯ ಅಭಿವೃದ್ಧಿಗಾಗಿ ತಂದೆ ಶ್ರೀ ಪ್ರಭಾಕರ ಕೋರೆಯವರಿಗೆ ಸಾಥ್ ನೀಡುತ್ತಿದ್ದಾರೆ. ಈ ಸಂಸ್ಥೆಗಳ ಚುನಾವಣೆಯಲ್ಲಿ ಆಯ್ಕೆಗೊಳ್ಳುವ ಮೂಲಕ ಭವಿಷ್ಯದಲ್ಲಿ ಉತ್ತಮ ನಾಯಕರಾಗುವ ಎಲ್ಲ ಲಕ್ಷಣಗಳು ಗೋಚರಿಸಿವ. ಶ್ರೀ ಅಮಿತ ಪಿ. ಕೋರೆಯವರಲ್ಲಿ ಅವರ ತಂದೆಯವರ ಸ್ಥಾನವನ್ನು ತುಂಬುವ ಎಲ್ಲ ಅರ್ಹತೆಗಳು, ಲಕ್ಷಣಗಳು ಸ್ಪಷ್ಟವಾಗುತ್ತಿವೆ. ಶ್ರೀ ಅಮಿತ ಪಿ. ಕೋರೆಯವರು ಶ್ರೀ ರಾಮಕೃಷ್ಣ ಮಿಶನ್ ಶಿಕ್ಷಣ ಸಂಸ್ಥೆಯಲ್ಲಿ ರೂಪುಗೊಂಡಿರುವುದು ಆಶ್ಚರ್ಯವಾದರೂ ಸತ್ಯವಾಗಿದೆ. ಶ್ರೀ ಪ್ರಭಾಕರ ಕೋರೆಯವರ ಪತ್ನಿ ಶ್ರೀಮತಿ ಆಶಾದೇವಿ ಪಿ. ಕೋರೆಯವರು ಸದ್ಯ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ೧೯೯೭ರಲ್ಲಿ ಸ್ಥಾಪನೆಯಾದ ಬೆಳಗಾವಿ ಜಿಲ್ಲಾ ರಾಣಿಚನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್ ನಿ. ಇದರ ಅಧ್ಯಕ್ಷರಾಗಿ ಸತತವಾಗಿ ೧೩ ವರ್ಷಗಳಿಂದ ಬ್ಯಾಂಕಿನ ಅಭಿವೃದ್ಧಿಯ ಜೊತೆಗೆ ಜಿಲ್ಲೆಯ ಮಹಿಳೆಯರ ಅರ್ಥಿಕ ಸದೃಡತೆಗಾಗಿ ಶ್ರಮಿಸುತ್ತಿದ್ದಾರೆ.

ಸಧ್ಯ ಪ್ರಭಾಕರ ಕೋರೆ ಅವರಿಗೆ ಅರುಷ ಎಂಬ ಒಬ್ಬ ಮೊಮ್ಮಗ ಇದ್ದಾನೆ. ಒಟ್ಟಿನಲ್ಲಿ ಸುಖಮಯ ಸಂಸಾರ ಇವರದು. ಕುಟುಂಬದ ಕಡೆಗೆ ಲಕ್ಷ್ಯ ವಹಿಸಿದ ಆಶಾದೇವಿಯವರು. ಪತಿಯ ಕಾರ್ಯಕ್ಷೇತ್ರದಲ್ಲಿ ಅವರಿಗೆ ಸಾಥ್ ನೀಡುವುದರೊಂದಿಗೆ, ಅವರಿಗೆ ಸ್ಪೂರ್ತಿಯಾಗಿ ಕಾರ್ಯವನ್ನು ಮಾಡುತ್ತಿದ್ದಾರೆ. ಒಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಸ್ತ್ರೀ ಪಾತ್ರವಿರುತ್ತದೆ ಎನ್ನುವುದು ಇಲ್ಲಿ ಕೋರೆ ಅವರಿಗೆ ಅಕ್ಷರಶಃ ಸೂಕ್ತವಾಗಿದೆ, ಪ್ರಾರಂಭದಲ್ಲಿ ತಾಯಿ ಶಾರಾದಾದೇವಿಯ ಆಶೀರ್ವಾದ ನಂತರ ಪತ್ನಿ ಆಶಾದೇವಿಯವರ ಪ್ರೇರಣೆಯೂ ಕೂಡಾ ಕೋರೆ ಅವರ ಸಾಧನೆಯ

ಹಿಂದೆ ಕೆಲಸ ಮಾಡಿದೆ ಎಂದು ಧಾರಾಳವಾಗಿ ಹೇಳಬಹುದು. ಪತಿಗೆ ತಕ್ಕ ಸತಿಯಾಗಿ ಆಶಾದೇವಿಯವರ ಕಾರ್ಯವೂ ಅಷ್ಟೇ ಮಹತ್ವದ್ದಾಗಿದೆ.

ಡಾ॥ ಪ್ರಭಾಕರ ಕೋರೆಯವರ ಸ್ವಭಾವ :

ಯುವಕರಾಗಿದ್ದಾಗ ಕೋರೆಯವರು ಹೆಚ್ಚು ಸಿಟ್ಟಿಗೆ ಬರುತ್ತಿದ್ದರು. ಏನಾದರು ಮಾಡಬೇಕೆಂದು ಸದಾ ಅವರ ಮನ ಮಿಡಿಯುತ್ತಿತ್ತು. ಸಿಟ್ಟಿಗೆ ಬಂದರೂ ಬಹಳ ಬೇಗನೆ ಮರೆಯುವ ಗುಣ ಅವರಲ್ಲಿ ಇದೆ. ಎಲ್ಲರನ್ನು ಆತ್ಮೀಯವಾಗಿ ಕಾಣುವುದು. ಒಂದು ಕೆಲಸ ಮಾಡಬೇಕೆಂದರೆ ಹಲವಾರು ದೃಷ್ಟಿಕೋನದಿಂದ ಅದನ್ನು ಪರೀಕ್ಷಿಸುವುದು, ನಂತರ ಅದನ್ನು ಕಾರ್ಯಗತಗೊಳಿಸುವುದು, ಹಿಡಿದ ಕೆಲಸವನ್ನು ಮುಗಿಸುವರೆಗೆ ಅವರಿಗೆ ನೆಮ್ಮದಿ ಇಲ್ಲ. ಅವರ ಕ್ಷೇತ್ರದಲ್ಲಿ ಒಬ್ಬರು ಸ್ನೇಹಿತರು ಇದ್ದರೆ, ಹತ್ತು ಜನ ವೈರಿಗಳು ಇರುತ್ತಾರೆ. ತಮ್ಮ ಇಚ್ಛೆಯನ್ನು ಇನ್ನೊಬ್ಬರ ಮೇಲೆ ಹಾಕುವ ಜಾಯಮಾನ ಅವರದಲ್ಲ. ಟೀಕೆ, ಟಿಪ್ಪಣಿಗಳಿಗೆ ಹಾಗೇ ವಿರೋಧಗಳಿಗೆ ತಲೆಯನ್ನು ಕೆಡಿಸಿಕೊಳ್ಳದೇ ಯಾವಾಗಲೂ ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಎನ್ನುವುದು ಅವರು ನಂಬಿದ ಸಿದ್ಧಾಂತ. ವೈರಿಗಳನ್ನು ಮಿತ್ರರನ್ನಾಗಿಸುವ ಜಾಣ್ಮೆ ಅವರಲ್ಲಿದೆ. ವಿದೇಶಿಗಳಲ್ಲಿನ ಬದಲಾವಣೆಯನ್ನು ನಮ್ಮ ಪ್ರದೇಶಗಳಲ್ಲಿ ಜಾರಿಗೊಳಿಸಬೇಕು. ಅಲ್ಲಿರುವಂತೆ ಇಲ್ಲಿಯೂ ಅಭಿವೃದ್ಧಿ ಆಗಬೇಕು ಎನ್ನುವುದು ಅವರ ಬಯಕೆ. ಸಹಾಯ ಕೇಳಿ ಬಂದವರಿಗೆ ಸಹಾಯ ಹಸ್ತವನ್ನು ಚಾಚುವುದು ರಕ್ತಗತವಾಗಿ ಬಂದ ಬಳುವಳಿ, ಬಡರೈತ, ಶ್ರೀಮಂತ ಎನ್ನದೇ ಎಲ್ಲರೊಂದಿಗೂ ಸಮಾನವಾಗಿ ಬೇರೆಯುವುದೇ ಅವರ ಯಶಸ್ಸಿನ ಹಿಂದಿರುವ ಗುಟ್ಟು.. ಎಲ್ಲ ಅಭಿವೃದ್ಧಿ ಕಾರ್ಯಗಳು ತಮ್ಮ ಪ್ರದೇಶಗಳಾದ ಚಿಕ್ಕೋಡಿ, ಬೆಳಗಾವಿ ಹಾಗೂ ಉತ್ತರ ಕರ್ನಾಟಕಕ್ಕೆ ಆಗಬೇಕು ಎನ್ನುವ ಮಹದಾಶೆ ಅವರಲ್ಲಿ ಇದೆ.

೬೩ನೇ ವಯಸ್ಸಿನಲ್ಲಿ ೨೫ರ ಉತ್ಸಾಹವಿದೆ. ಅವರ ಚಿಂತನೆ ಮಾಡುವ ಕಾರ್ಯ ಅಷ್ಟೊಂದು ವೇಗವಾಗಿ ಇರುತ್ತವೆ. ಹಿಂಬಾಲಕರಿಗೂ ಅವರ ಆಲೋಚನಾ ವೇಗಕ್ಕೆ ಹೋಗುವುದು ಕಷ್ಟ ಸಾಧ್ಯವೇ ಸರಿ! ಇನ್ನೂ ಸಮಾಜಕ್ಕೆ ಏನಾದರೂ ಮಾಡಬೇಕು ಎನ್ನುವ ಹಂಬಲ ಅವರಲ್ಲಿ ಎಳ್ಳಷ್ಟು ಕಡಿಮೆಯಾಗಿಲ್ಲ. ಬದಲಿಗೆ ಹೆಚ್ಚಾಗಿದೆ. ಬಡವರ, ದೀನ-ದಲಿತರ, ಅಲ್ಪ ಸಂಖ್ಯಾತ ವರ್ಗದವರ ಬಗ್ಗೆ ಅತಿಯಾದ ಪ್ರೀತಿ ಕನಿಕರ ಉಳ್ಳವರಾಗಿದ್ದಾರೆ. ಸಹಾಯ ಕೇಳಿ ಬಂದವರೊಂದಿಗೆ ಆತ್ಮೀಯವಾಗಿ ಬೆರೆಯುವಿಕೆ. ಈ ಸ್ವಭಾವದಿಂದಲೋ ಏನೋ ಸಹೋದರ ಸಂಬಂಧಿಯಿಂದ ಗುಂಡು ಏಟಿಗೆ ಗುರಿಯಾಗಿ, ಸಾವು ಬದುಕಿನ ಮಧ್ಯ ಹೋರಾಟ ನಡೆಸುತ್ತಿದ್ದಾಗ ಜಾತಿ, ಭೇದ ಎಣಿಸದೇ ಮಂದಿರ, ಮಠ, ಮಸೀದಿ, ಚರ್ಚ್, ಶಾಲಾ-ಕಾಲೇಜುಗಳಲ್ಲಿ ಇವರು ಬದುಕಿಬರಲಿ ಎಂದು ಪ್ರಾರ್ಥಿಸಿದ ಪರಿ ನಿಜವಾದ ಜನನಾಯಕನಿಗೆ ಜನರು ತೋರಿದ ಪ್ರೀತಿ ಮಾತ್ರ ಅಭಿಮಾನ ಪಡುವಂತಹದು.

ಡಾ॥ ಪ್ರಭಾಕರ ಕೋರೆಯವರ ಹವ್ಯಾಸಗಳು :

ಪ್ರಭಾಕರ ಕೋರೆ ಅವರ ಹವ್ಯಾಸಗಳು. ವಿದೇಶಿಗಳಿಗೆ ಭೆಟ್ಟಿಕೊಡುವುದು. ಅಲ್ಲಿನ ಬದಲಾವಣೆಗಳನ್ನು

ಸೂಕ್ಷ್ಮವಾಗಿ ಗಮನಿಸುವುದು ಮತ್ತು ಅಭಿವೃದ್ಧಿಯನ್ನು ತಮ್ಮ ಪ್ರದೇಶದಲ್ಲಿ ಮಾಡಬೇಕು ಎನ್ನುವುದು. ವಿದೇಶಗಳಲ್ಲಿನ ಶೈಕ್ಷಣಿಕ ಬದಲಾವಣೆಯನ್ನು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಅಳವಡಿಸಿಕೊಳ್ಳುವುದು. ೧೯೭೦ ಪ್ರಥಮವಾಗಿ ಜಪಾನ್, ಥಾಯ್‌ಲ್ಯಾಂಡ್, ಹಾಕಾಂಗ್‌ಗೆ ಭೇಟ್ಟಿಕೊಟ್ಟು ನಂತರ ೧೯೭೭ ರಲ್ಲಿ ಯುರೋಪಿನ ಪ್ರವಾಸ ಕೈಗೊಂಡರು. ನಂತರ ಕೆನಡಾ, ಅಮೇರಿಕಾ, ಮಲೇಶಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಚೀನಾ, ಇಂಡೋನೇಷಿಯಾದ ಜಕಾರ್ತ ಮುಂತಾದ ದೇಶಗಳಿಗೆ ಆಗಾಗ ಭೇಟಿ ಕೊಡುತ್ತಾರೆ. ಬೇರೆ ಬೇರೆ ಪಕ್ಷಿ, ಪ್ರಾಣಿಗಳನ್ನು ಸಾಕುವುದು ಇವರ ಆಸಕ್ತಿ, ವಿಶೇಷವಾಗಿ ಪ್ರೀತಿಯ ಪ್ರಾಣಿಗಳಾದ ಆಕಳು, ಎತ್ತು, ಹೋರಿ, ನಾಯಿ, ಪಕ್ಷಿಗಳನ್ನು ಪ್ರೀತಿಸುತ್ತಾರೆ.

ಕೃಷಿಯಲ್ಲಿ ವಿಶೇಷವಾದ ಆಸಕ್ತಿ :

ವಂಶಪಾರಂಪರಿಕವಾಗಿ, ಬಳುವಳಿಯಾಗಿ ಬಂದ ಕೃಷಿ ಮಾಡಿಸುವುದು ಹವ್ಯಾಸ. ಹೊಲ–ಗದ್ದೆಗಳ ಬಗ್ಗೆ ವಿಶೇಷವಾದ ಆಸಕ್ತಿ. ಯಾವ ಬೆಳೆಗಳಿಗೆ ಎಷ್ಟು ಗೊಬ್ಬರ ಹಾಕಬೇಕು, ನೀರು ಯಾವಾಗ ಹಾಯಿಸಬೇಕು ಮುಂತಾದವುಗಳನ್ನು ಪಕ್ಕಾ ಒಕ್ಕಲಿಗರು ಸಹ ಬೆರಗಾಗುವಂತೆ ತೋಟ ಹೊಲ–ಗದ್ದೆಗಳಲ್ಲಿ ಸಲಹೆಗಳನ್ನು ನೀಡುತ್ತಾರೆ. ಸ್ವಂತ ಅಂಕಲಿಯಲ್ಲಿ ಇದ್ದಾಗ ಮುಂಜಾನೆ ವಾಯುವಿಹಾರ, ಹೊಲ ಗದ್ದೆಗಳಲ್ಲಿ. ಕಬ್ಬು, ತೊಗರಿ, ಜೋಳ, ದ್ರಾಕ್ಷಿ, ಪೇರಲ, ಪಪ್ಪಾಯಿ, ತಂಬಾಕು, ಮಾವಿನ ಗಿಡಗಳು, ದಾಳಿಂಬೆ ಇತರ ಪ್ರಮುಖ ಬೆಳೆಗಳು ದೂರದ ಮುಂಬಯಿ, ದೆಹಲಿಯಲ್ಲಿ ಇದ್ದರೂ ಫೋನ ಮಾಡಿ ಬೆಳೆಗಳ ಬಗ್ಗೆ ತಿಳಿದುಕೊಳ್ಳುವುದು ಅವರ ಆಸಕ್ತಿಯನ್ನು ತೋರಿಸುತ್ತದೆ. ಪ್ರತಿ ಹೆಕ್ಟೇರಿಗೆ ಎಷ್ಟು ಟನ್ ಕಬ್ಬು ಬೆಳೆಯಬೇಕು ಇತ್ಯಾದಿ ಸಂಗತಿಗಳನ್ನು ಕುರಿತು ತೀವ್ರ ಲಕ್ಷ್ಯ ವಹಿಸುತ್ತಾರೆ.

ಕ್ರೀಡೆಯಲ್ಲಿನ ಕೋರೆಯವರ ಆಸಕ್ತಿ :

ವಾಲಿಬಾಲ್, ಬ್ಯಾಡ್ಮಿಂಟನ್, ಕ್ರಿಕೆಟ್, ಕಬ್ಬಡ್ಡಿ ಮುಂತಾದ ಆಟಗಳಲ್ಲಿ ಆಸಕ್ತಿ. ಶಾಲಾ ಕಾಲೇಜಿನ ದಿನಗಳಲ್ಲಿ ಇವುಗಳಲ್ಲಿ ಆಸಕ್ತಿಯನ್ನು ಹೊಂದಿದ್ದರು. ಈಗಲೂ ರಾಷ್ಟ್ರ, ರಾಜ್ಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಯನ್ನು ಮಾಡಿದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವುದು, ಬಡ ಕ್ರೀಡಾಪಟುಗಳಿಗೆ ಸಹಾಯವನ್ನು ಒದಗಿಸುತ್ತಿರುವುದು. ಅಲ್ಲದೆ ಇದರ ಜೊತೆಗೆ ಕ್ರೀಡಾಪಟುಗಳಿಗೆ ಅನುಕೂಲ ಒದಗಿಸಲು ಕೆ.ಎಲ್.ಇ. ಸಂಸ್ಥೆಗಳಲ್ಲಿ ಸುಸಜ್ಜಿತವಾದ ಕ್ರೀಡಾಂಗಣವನ್ನು ಕ್ರೀಡಾ ಮೈದಾನ, ಒಳಂಗಾಣ ಕ್ರೀಡಾಂಗಣ, ಜಿಮಖಾನ್ ಹಾಲುಗಳನ್ನು, ಮೈದಾನವಲ್ಲಿ ಸುಸಜ್ಜಿತವಾದ ರನ್ನಿಂಗ್ ಟ್ರಾಕ್ ಅಲ್ಲದೆ, ಕ್ರೀಡಾಪಟುಗಳಿಗೆ ಅಗತ್ಯವಾದ ಕ್ರೀಡಾ ಸಾಮಗ್ರಿಗಳ ಲಭ್ಯತೆ ಇರುವಂತೆ ಮಾಡಿದ್ದಾರೆ. ಇದರಿಂದ ಅವರ ಕ್ರೀಡಾ ಕ್ಷೇತ್ರದ ಆಸಕ್ತಿಯನ್ನು ನಾವು ಗುರುತಿಸಬಹುದಾಗಿದೆ.

ಉಡುಗೆಯಲ್ಲಿ ಅವರ ಆಸಕ್ತಿ :

ಪ್ರಭಾಕರ ಕೋರೆ ಅವರು ವಿಭಿನ್ನ ಶೈಲಿಯ ಬಟ್ಟೆಗಳನ್ನು ತೊಡುತ್ತಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ಪಕ್ಕಾ ರಾಜಕಾರಣಿಯಾಗಿ ಖಾದಿ ಧರಿಸುತ್ತಾರೆ. ವಿದೇಶಗಳಿಗೆ ಹೊರಟರೆ ಸೂಟ್ ಧರಿಸುತ್ತಾರೆ. ಜಾತ್ರೆ, ಹಬ್ಬ,

ಹರಿದಿನಗಳಲ್ಲಿ ಪಕ್ಕಾ ಗ್ರಾಮೀಣ ಪ್ರದೇಶ ಶೈಲಿಯ ಬಟ್ಟೆಯನ್ನು ಧರಿಸುತ್ತಾರೆ. ಬೆಳಿಗ್ಗೆ ವ್ಯಾಯಾಮಕ್ಕೆ ಹೊರಟರೆ ಪಕ್ಕಾ ಕ್ರೀಡಾ ಪಟುವಂತೆ ಟ್ರ್ಯಾಕ್‌ಸೂಟ್ ಬಟ್ಟೆ ಧರಿಸುತ್ತಾರೆ. ಹೀಗೆ ಸಂದರ್ಭಕ್ಕೆ ಅನುಸಾರವಾಗಿ ತಮ್ಮ ಬಟ್ಟೆಗಳನ್ನು ಬದಲಿಸುತ್ತಾರೆ. ಇದು ಅವರ ವಿಭಿನ್ನ ಶೈಲಿಯ ವ್ಯಕ್ತಿತ್ವವನ್ನು ತೋರಿಸುತ್ತದೆ.

ಕಲಾಸಕ್ತಿ (ಸಿನಿಮಾ, ನಾಟಕ) :

ಬಾಲ್ಯದಿಂದಲೂ ನಾಟಕ ನೋಡುವುದು ಇವರ ಆಸಕ್ತಿ. ಹಳೆಯ ಹಿಂದಿ ಚಲನಚಿತ್ರಗಳ ಹಾಡುಗಳನ್ನು ಆಲಿಸುತ್ತಾರೆ. ಅದರಲ್ಲಿ ಲತಾ ಮಂಗೇಶಕರ್ ಅವರ ಹಾಡುಗಳು ಬಹಳ ಇಷ್ಟಪಡುತ್ತಾರೆ. ಲತಾ ಮಂಗೇಶಕರ್ ಅವರ ಆಲ್‌ಬ್ರಡ್ ಲಂಡನ್ ಸಂಗೀತ ಕಾರ್ಯಕ್ರಮದಲ್ಲಿ ಹಾಕಿದ್ದ ಧ್ವನಿ ಸುರಳಿಯನ್ನು ಪದೇ ಪದೇ ಆಲಿಸುತ್ತಾರೆ. ಕಾಕತಾಳೀಯ ಎಂಬಂತೆ ತಮ್ಮ ನೆಚ್ಚಿನ ಸ್ವಂತದ ಅಂಕಲಿಯ ಮಯೂರ ಚಿತ್ರ ಮಂದಿರವನ್ನು ಆಧುನೀಕರಣಗೊಳಿಸಿ ಡಿಜಿಟಲ್ ಸೌಂಡ ಅಳವಡಿಸಿದಾಗ, ಇದೇ ಧ್ವನಿ ಸುರಳಿಯ ಹಾಡು ಕೇಳುತ್ತಿದ್ದಾಗ, ಅವರ ಮೇಲೆ ಗುಂಡಿನ ದಾಳಿ ಆಯಿತು. ಕನ್ನಡದಲ್ಲಿ ಡಾ॥ ರಾಜಕುಮಾರ ಅಂದರೆ ಇಷ್ಟಪಡುತ್ತಾರೆ. ಅದೇ ರೀತಿ ರಂಗಕರ್ಮಿ ಏಣಗಿ ಬಾಳಪ್ಪ, ಗಾನ ವಿದುಷಿ ಡಾ॥ ಗಂಗೂಬಾಯಿ ಹಾನಗಲ್ ಅಂದರೆ ಇವರಿಗೆ ಇಷ್ಟ. ಅನೇಕ ರಂಗಭೂಮಿ ಕಲಾವಿದರಿಗೆ ಇವರು ಆರ್ಥಿಕ ಸಹಾಯ ಒದಗಿಸಿ ಪ್ರೋತ್ಸಾಹಿಸುತ್ತಾರೆ. ಗ್ರಾಮೀಣ ಕಲೆ ಉಳಿಯಬೇಕು ಎನ್ನುವುದು ಇವರ ಆಸಕ್ತಿ. ಆ ನಿಟ್ಟಿನಲ್ಲಿ ಅವುಗಳನ್ನು ಪ್ರೋತ್ಸಾಹಿಸುವ ಕಾರ್ಯವು ಅಗತ್ಯವೆನಿಸಿದಾಗಲೆಲ್ಲಾ ಸಹಾಯ ಮಾಡಿದ್ದಾರೆ. ಮತ್ತು ಈ ಕಾರ್ಯವನ್ನು ಈಗಲೂ ಮಾಡುತ್ತಿದ್ದಾರೆ.[೭]

೧೯೬೮-೬೯ ರಲ್ಲಿ ತಮ್ಮ ಬಿ.ಕಾಮ್. ಪದವಿ ಪಡೆದು ಮನೆಯ ಕೆಲಸಗಳನ್ನು, ವ್ಯಾಪಾರ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದು, ಅಣ್ಣಂದಿರಿಗೆ ಸಹಾಯ ಮಾಡಲು ಅಂಕಲಿಗೆ ಬಂದ ನಂತರ, ನನಗೆ ಈಗಿನ ವ್ಯಾಪಾರದಲ್ಲಿ ಆಸಕ್ತಿ ಇಲ್ಲ, ಒಂದು ಸೀನೆಮಾ ಥೇಟರ್ ಕಟ್ಟಿಸಬೇಕು ಎಂದು ತಂದೆ ಬಸವಪ್ರಭು ಕೋರೆ ಅವರು ನಾವೇ ಜನರಿಗೆ ಹಣ ಕೊಟ್ಟು ಕಿತ್ತುಕೊಂಡ ಹಾಗೆ ಆಗುತ್ತದೆ. ಮತ್ತು ಈಗಾಗಲೇ ಒಂದು ಥೇಯಿಟರ ಇದೆ. ಅದು ಸರಿಯಾಗಿ ನಡೆಯುತ್ತಿಲ್ಲಾ ಎಂದರು. ಅದಕ್ಕೆ ಕೋರೆ ಅವರು ನಾವು ಕಟ್ಟದೇ ಇದ್ದರೇ ಬೇರೆ ಯಾರಾದರೂ ಕಟ್ಟುತ್ತಾರೆ. ಮತ್ತು ಹಳ್ಳಿಯ ಜನರಿಗೆ ಸಾಯಂಕಾಲ ಮನರಂಜನೆ ಬೇಕು ಎಂದು ಅಂಕಲಿಯಲ್ಲಿನ ಸ್ಟೇಟ್ ಬ್ಯಾಂಕಿನಿಂದ ಸಾಲ ತೆಗೆದು ಮಯೂರ ಚಿತ್ರಮಂದಿರವನ್ನು ೩ ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ನಿರ್ಣಯವಾಯಿತು. ೧೮-೦೫-೧೯೭೫ ರಲ್ಲಿ ಚಿತ್ರಮಂದಿರವನ್ನು ಉದ್ಘಾಟಿಸಲಾಯಿತು. ಪ್ರಥಮವಾಗಿ 'ದೇವರ ಗುಡಿ' ಚಿತ್ರವನ್ನು ಪ್ರದರ್ಶಿಸಲಾಯಿತು. ವಿಷ್ಣುವರ್ಧನ ಭಾರತಿ ಅಭಿನಯದ ಈ ಚಿತ್ರದ ಟಿಕೇಟ್ ದರವನ್ನು ೧ ರೂ. ಮತ್ತು ೨ ರೂಪಾಯಿ ಇಡಲಾಯಿತು. ಹೀಗೆ ಹಠವಾದಿ ಕೋರೆ ಅವರು ನಗರದಲ್ಲಿ ಚಿತ್ರಮಂದಿರವನ್ನು ಕಟ್ಟಿಸಬಹುದಿತ್ತು. ಆದರೆ ಅವರು ಲಾಭಕ್ಕಾಗಿ ಚಿತ್ರಮಂದಿರ ಮಾಡದೇ ಗ್ರಾಮೀಣ ಪ್ರದೇಶಗಳ ಬಡಜನರ ಮನರಂಜನೆಗಾಗಿ ಯೋಚನೆ ಮಾಡಿದ್ದರು. ಇದು ನಿಜಕ್ಕೂ ಅವರ ಗ್ರಾಮೀಣ ಪ್ರದೇಶದ ಜನರ ಬಗ್ಗೆ ಹೊಂದುವ ಪ್ರೀತಿ ಅಭಿಮಾನ ಎಂತಹದು ಎನ್ನುವುದನ್ನು

ತೋರಿಸುತ್ತದೆ.

ಈ ಚಿತ್ರಮಂದಿರಕ್ಕೆ ಖ್ಯಾತ ನಟ ನಟಿಯರು ಭೇಟಿ ಕೊಟ್ಟಿದ್ದಾರೆ. ಅದರಲ್ಲಿ ಬಹುಭಾಷೆಯ ಚತುರ ಭಾಷಾ ಅಭಿನೇತ್ರಿ ನಟಿ ಜಯಪ್ರದಾ, ವಿಷ್ಣುವರ್ಧನ-ಭಾರತಿ, ಶೃತಿ, ದಿ॥ ಉದಯಕುಮಾರ, ಶ್ರೀನಾಥ ಸೇರಿದಂತೆ ಅನೇಕರು ಬೇಟಿ ಕೊಟ್ಟಿದ್ದಾರೆ. ೨೦೦೦ನೇ ಇಸ್ವಿಯಲ್ಲಿ ಈ ಚಿತ್ರಮಂದಿರದ ರಜತ ಮಹೋತ್ಸವನ್ನು ಅದ್ದೂರಿಯಾಗಿ ನಡೆಸಿದರು. ಆಗ ಚತುರ್ಭಾಷಾಯ ತಾರೆ ಜಯಪ್ರದಾ, ನಾಟ್ಯಭೂಷಣ ಏಣಗಿ ಬಾಳಪ್ಪ ಮತ್ತಿತರು ಆಗಮಿಸಿದ್ದರು. ಹೀಗೆ ಚಿತ್ರ ರಂಗದೊಂದಿಗೆ ನಂಟು ಬೆಳೆಸಿಕೊಂಡ ಇವರು, ಉತ್ತರ ಕರ್ನಾಟಕದ ಚಿತ್ರ ಪ್ರದರ್ಶಕರ ಸಂಘದ ಸದಸ್ಯರಾಗಿ ಕರ್ನಾಟಕದ ಫಿಲ್ಮ್‌ಚೇಂಬರ್ ಆಫ್ ಕಾಮರ್ಸ್ ಸದಸ್ಯರಾಗಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ನಾಟಕ, ಸಿನಿಮಾ, ಕಲಾವಿದರು, ಗಾಯಕರುಗಳ ಬಗೆಗೆ ವಿಶೇಷವಾದ ಆಸಕ್ತಿ, ಆದರಗಳನ್ನು ತಾಳಿರುವ ಡಾ. ಪ್ರಭಾಕರ ಕೋರೆಯವರು ಕನ್ನಡ ಸಂಸ್ಕೃತಿಯ ರಕ್ಷಣೆಗೆ ಬದ್ಧರಾಗಿದ್ದಾರೆ.[೮] ಈ ಕ್ಷೇತ್ರದಲ್ಲಿ ಶ್ರೀ ಕೋರೆಯವರು ಆಸಕ್ತಿ ತಾಳಲು ಸ್ನೇಹಿತರಾದ ರಮೇಶ ದೇಸಾಯಿ ಅವರ ಪ್ರೇರಣೆ ಕೂಡಾ ಕಾರಣವಾಗಿದೆ.

೧೯೬೮ ರಿಂದ ೧೯೮೧ರ ವರೆಗೆ ಅಣ್ಣ ಚಿದಾನಂದ ಕೋರೆ ಬದುಕಿನುದ್ದಕ್ಕೂ ಹೊಂದುವರೆಗೆ ಬೆನ್ನೆಲುಬಾಗಿದ್ದರು. ಇವರು ಅವರ ಪ್ರತಿಯೊಂದು ನಿರ್ಣಯದಲ್ಲಿ ಶ್ರೀ ಪ್ರಭಾಕರ ಕೋರೆಯವರ ಸಲಹೆ ಇದ್ದೆ ಇರುತ್ತಿತ್ತು. ನಂತರ ೧೯೮೧ ರಲ್ಲಿ ಅಣ್ಣ ಚಿದಾನಂದ ಕೋರೆ ಅವರು ನಿಧನ ಹೊಂದಿದ ನಂತರ ಮನಸ್ಸು ಇಲ್ಲದಿದ್ದರೂ ಜನರ ಒತ್ತಾಯದ ಮೇರೆಗೆ ರಾಜಕೀಯವನ್ನು ಪ್ರವೇಶ ಮಾಡಬೇಕಾಯಿತು. ಅದು ಆಗಿನ ಸನ್ನಿವೇಶಕ್ಕೆ ಅನಿವಾರ್ಯವಾಗಿತ್ತು. ಅಂದರೆ ಚಿದಾನಂಧ ಕೋರೆ ಅವರ ಸ್ಥಾನವನ್ನು ತುಂಬುವ ಅಗತ್ಯ ಸಾಮರ್ಥ್ಯ ಎರಡೂ ಪ್ರಭಾಕರ ಕೋರೆ ಅವರಲ್ಲಿ ಇದ್ದವು. ಮತ್ತು ಅಭಿಮಾನಿಗಳ ಒತ್ತಾಸೆ ಒಂದೆಡೆ ಬಲಯುತವಾಗಿತ್ತು. ೧೯೮೩ ರಲ್ಲಿ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕನ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಒಂದುಸಾವಿರ ಮತಗಳಿಂದ ಆಯ್ಕೆಯಾದರು. ಅವರ ಪ್ರತಿ ಸ್ಪರ್ಧಿಗೆ ಕೇವಲ ೬೯ ಮತಗಳು ಪಡೆದಿದ್ದನ್ನು ಗಮನಿಸಿದರೆ ಶ್ರೀ ಪ್ರಭಾಕರ ಕೋರೆಯವರ ಬಗ್ಗೆ ಎಷ್ಟು ಅಭಿಮಾನವಿತ್ತು ಎನ್ನುವುದನ್ನು ಗಮನಿಸುವ ಸಂಗತಿಯಾಗಿದೆ.

೧೯೮೩ ರಲ್ಲಿ ಸದಲಗಾ ವಿಧಾನಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಜನತಾದಳ ಹಾಗೂ ರಾಮಕೃಷ್ಣ ಹೆಗಡೆ ಅವರ ಪ್ರಭಾವದಿಂದ ಸ್ವಲ್ಪ ಮತಗಳಿಂದ ಸೋಲನ್ನು ಶ್ರೀ ಪ್ರಭಾಕರ ಕೋರೆಯವರು ಕಂಡರೂ ಎದೆಗುಂದಲಿಲ್ಲ. ಮುಂದೆ ೧೯೮೪ ಕೆ.ಎಲ್.ಇ. ಸಂಸ್ಥೆಯ ಚುನಾವಣೆಯ ಪ್ರಚಾರಕ್ಕೆ ಹೋದ ಕಡೆಯೆಲ್ಲಾ ಪ್ರಭಾಕರ ಕೋರೆಯವರನ್ನು ಅವರ ಮತದಾರರು ತೋರುತ್ತಿರುವ ಪ್ರೀತಿಯನ್ನು ಕಂಡು, ಸ್ವತಃ ವಿಶ್ವನಾಥ ಕತ್ತಿಯವರು ಈಗ ನಮಗೆ ಒಬ್ಬ ಸಮರ್ಥ ವ್ಯಕ್ತಿ ಸಿಕ್ಕಂತೆ ಆಯಿತು ಎಂದು ಉದ್ಗರಿಸಿದರು. ೧೯೮೪ರಲ್ಲಿ ಸಂಸ್ಥೆಯ ಕಾರ್ಯಾಧ್ಯಕ್ಷರ ಪಟ್ಟ ದೊರೆಯಿತು. ಆಗ ಅವರು ೩೭ ವರ್ಷದ ಯುವಕರಾಗಿದ್ದರು. ಆಗ ಯಾರೂ ಎಣಿಸದೆ ಇರುವ ರೀತಿಯಲ್ಲಿ ಕೇವಲ ೩೭ ಅಂಗಸಂಸ್ಥೆಗಳನ್ನು ಹೊಂದಿದ್ದ ಕೆ.ಎಲ್.ಇ. ಸಂಸ್ಥೆಯನ್ನು ಕೇವಲ ೨೫ ವರ್ಷಗಳಲ್ಲಿ ೨೦೦ ಶಾಖೆಗಳನ್ನಾಗಿ

ವಿಸ್ತರಿಸಿದ ಕೋರೆ ಅವರ ಸಾಧನೆಯು ಎಂತಹವರನ್ನೂ ರೋಮಾಂಚನಗೊಳಿಸುತ್ತದೆ. ಇಂದು ಏಷಿಯಾ ಖಂಡದಲ್ಲಿಯೇ ಒಂದು ಬೃಹತ್ ಸಂಸ್ಥೆ ಎನಿಸಿಕೊಳ್ಳುವ ಭಾಗ್ಯ ಕೆ.ಎಲ್.ಇ. ಸಂಸ್ಥೆಗೆ ಇದೆ. ಅಂದರೆ ಅದರ ಹಿಂದಿರುವ ಆದಮ್ಯಶಕ್ತಿ ಡಾ॥ ಪ್ರಭಾಕರ ಕೋರೆ ಅವರು. ಅದೇ ರೀತಿ ಸಂಸ್ಥೆಯ ಆಸ್ತಿಯನ್ನು ೧೩.೭೭ ಕೋಟಿ ರೂ. ಇದ್ದಿದ್ದನ್ನು ೬೦೪.೦೨ ಕೋಟಿ ರೂ. ತಲುಪುವಂತೆ ಮಾಡಿದ ಇದರ ವರಮಾನ ೩೦೦ ಕೋಟಿಗಳಿಗಿಂತ ಅಧಿಕವಿದೆ. ಇಂದು ಪ್ರತಿ ವರ್ಷ ಸಂಸ್ಥೆಯ ವಾರ್ಷಿಕ ಸಾಧನೆ ಮಾತ್ರ ಅಕ್ಷರಶಃ ಒಂದು ದಂತ ಕತೆಯಾಗಿ ಉಳಿಯುವಂತಹದು. ಇಂದು ಕೆ.ಎಲ್.ಇ. ಸಂಸ್ಥೆಯ ಆಧುನೀಕತೆ ಮೈ ತೊರೆದುಕೊಂಡಿದೆ. ಅತ್ಯಾಧುನಿಕ ಸಲಕರಣೆಗಳು ಸಂಸ್ಥೆಯ, ಅಂಗಸಂಸ್ಥೆಗಳಲ್ಲಿ ಹವಾನಿಯಂತ್ರಿತ ಸಭಾಭವನ, ಸುಸಜ್ಜಿತವಾದ ಹಾಸ್ಟೆಲ್, ಗ್ರಂಥಾಲಯ, ಕ್ರೀಡಾ ಮೈದಾನ, ಕಂಪ್ಯೂಟರ್, ಲ್ಯಾಬ್ ಮುಂತಾದ ಸೌಲಭ್ಯಗಳಿಂದ ಕಂಗೊಳಿಸುತ್ತದೆ. ಕೆ.ಎಲ್.ಇ. ಸಂಸ್ಥೆ. ಅದೇ ಪ್ರಕಾರವಾಗಿ ಗಾರ್ಡನ್, ಕಾರಂಜಿ ಉದ್ಯಾನವನ ಹೀಗೆ ಎಲ್ಲ ರೀತಿಯಿಂದಲೂ ಪಾಶ್ಚಿಮಾತ್ಯ ದೇಶಗಳ ಶಿಕ್ಷಣಕ್ಕೆ ಕಡಿಮೆ ಇಲ್ಲದಂತೆ ಅಭಿವೃದ್ಧಿ ಪಡಿಸಿದ್ದಾರೆ. ಹೊಸ ಕೋರ್ಸುಗಳ ಪ್ರಾರಂಭ ಕೆ.ಎಲ್.ಇ. ಸಂಸ್ಥೆಗೆ ವಿಶ್ವ ವಿದ್ಯಾಲಯದ ಸ್ಥಾನಮಾನ ಸಿಗುವಂತೆ ಮಾಡಿ ಅದರ ಶಾಖೆಗಳ ದೇಶದ ಹಲವು ಕಡೆ ಅಲ್ಲದೇ ಹೊರ ದೇಶಕ್ಕೂ ವಿಸ್ತರಿಸಿದ್ದಾರೆ. ಫ್ರೀಬ್ಯಾನಿಯನ್ ಹಂತದಿಂದ ಹಿಡಿದು ಸ್ನಾತಕೋತ್ತರ ನಂತರದ ಹಂತದವರೆಗೆ ಶಿಕ್ಷಣವನ್ನು ಸಿಗುವಂತೆ ಮಾಡಿದ ಇವರು ಪ್ರಜಾಪ್ರಭುತ್ವದ ಮೂಲತತ್ವ ಶಿಕ್ಷಣ. ಆ ನಿಟ್ಟಿನಲ್ಲಿ ಅದನ್ನು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಸುಲಭವಾಗಿ ಸಿಗುವಂತೆ ಮಾಡಿದ ಇವರು ಆ ಮೂಲಕ ಸಹಸ್ರಾರು ವಿದ್ಯಾರ್ಥಿಗಳ ಬಾಳು ಬೆಳಗಿದ ಕೀರ್ತಿ ಕೋರೆ ಅವರಿಗೆ ಸಲ್ಲಲ್ಲೇಬೇಕಾಗುತ್ತದೆ.

ಇವತ್ತು ೭೫ ಸಾವಿರದಷ್ಟು ವಿದ್ಯಾರ್ಥಿಗಳು ಹಾಗೂ ಅವರಿಗೆ ಸುಮಾರು ೯೦.೧೮ ಸಾವಿರದಷ್ಟು ಸಿಬ್ಬಂದಿಯ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ಶೈಕ್ಷಣಿಕವಾಗಿ ಕ್ರಾಂತಿಯನ್ನೇ ಮಾಡಿದ ಯುಗಪುರುಷ ಕೋರೆ ಅವರೊಬ್ಬ ಮಾಂತ್ರಿಕ ಎನ್ನುವುದು ಅಕ್ಷರಶಃ ನಿಜ. ಇಂತಹ ಈ ಸಾಧನೆಗೆ ಕೋರೆ ಅವರಿಗೆ ಅವರೆ ಸಾಟಿ. ಇನ್ನೊಬ್ಬರಿಗೆ ಕಲ್ಪಿಸುವುದು ಕಷ್ಟಸಾಧ್ಯವೇ ಸರಿ.[೯] ಎಂದರೆ ಅತಿಸೂಕ್ತಿಯಾಗದು.

ಜಾತ್ಯತೀತ ನಾಯಕರಾಗಿ ಶ್ರೀ ಪ್ರಭಾಕರ ಕೋರೆಯವರ ವ್ಯಕ್ತಿತ್ವ :

ಪ್ರಭಾಕರ ಕೋರೆ ಅವರು ವೀರಶೈವ ಲಿಂಗಾಯತ ಧರ್ಮ ಒಳಪಂಗಡದ ಪ್ರಬಲ ಪಂಚಮಸಾಲಿ ಜನಾಂಗಕ್ಕೆ ಸೇರಿದವರು. ಎಂದಿಗೂ ಸ್ವಜಾತಿ ಪ್ರೇಮವನ್ನು ಮೆರೆದವರಲ್ಲ. ಇಂದಿಗೂ ಜನ ಅವರನ್ನು ಜಾತ್ಯಾತೀತ ಪಕ್ಷಾತೀತ ನಾಯಕನಾಗಿಯೇ ನೋಡುತ್ತಾರೆ. ಅಂತಹ ಧರ್ಮ ನಿರಪೇಕ್ಷ ನಾಯಕರಾಗಿ ಬೆಳೆದವರು. ಡಾ॥ ಪ್ರಭಾಕರ ಕೋರೆ ಅವರು ಹಿಂದೂ, ಮುಸ್ಲಿಂ, ಜೈನ, ಕ್ರೈಸ್ತ ಹೀಗೆ ಎಲ್ಲ ಧರ್ಮಿಯರನ್ನು ಸಮಾನ ದೃಷ್ಠಿಕೋನದಿಂದ ನೋಡುತ್ತಾರೆ. ಅವರಲ್ಲಿ ಸಹಾಯ ಕೇಳಿ ಬರುವವರು ಸಮಾಜದ ನಾನಾ ವರ್ಗದ ಜನರನ್ನು ಯಾವ ರೀತಿಯಾಗಿ ಕಾಣುತ್ತಾರೆ ಎನ್ನಲಿಕ್ಕೆ ಒಂದು ಉದಾಹರಣೆಯಲ್ಲಿ ನೋಡಬಹುದು. ತಮಗೆ ಪ್ರಾಥಮಿಕ ಶಾಲೆಯಲ್ಲಿ ಬೋಧಿಸಿದ ಶಿಕ್ಷಕಿ. ಬೇಬಜಾನ್ ನಧಾಪ್ ಅವರ ಪತಿ ದೊಡ್ಡಮನಿಯುವರು. ಪ್ರಭಾಕರ ಕೋರೆ ಅವರ ಹತ್ತಿರ ಬಂದು ತಮ್ಮ

ಪರಿಚಯವನ್ನು ಮಾಡಿಕೊಂಡು ನನ್ನ ಮಗಳಿಗೆ ಡೆಂಟಲ್ ಕಾಲೇಜಿನಲ್ಲಿ ಸೀಟುಕೊಡಿಸಿ ಎಂದು ಕೇಳಿದಾಗ, ಆಗ ಗುರುಮಾತೆಯನ್ನು ಕರೆದುಕೊಂಡು ಬನ್ನಿ ಎಂದರು. ಮರುದಿನ ಬಂದಾಗ ಕೋರೆ ಬಹಳಷ್ಟು ಅನಂದದಿಂದ ಮಾತನಾಡಿಸಿ ಸೀಟುಕೊಟ್ಟು ಕಳುಹಿಸಿದರು. ಆ ಗುರುಮಾತೆಯು "ಕೋರೆಯವರು ಆ ಸೀಟನ್ನು ನಮಗೆ ಗುರುದಕ್ಷಿಣೆಯಾಗಿ ಕೊಟ್ಟರು" ಎಂದು ಉದ್ಧರಿಸಿದರು[೧೦] ಆ ಅಲ್ಪಸಂಖ್ಯಾತ ವರ್ಗದ ಕುಟುಂಬದವರು. ಹೀಗೆ ಕೋರೆ ಅವರು ಗುಂಡು ಏಟನಿಂದ ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದಾಗ, ಅಲ್ಪಸಂಖ್ಯಾತ ಮುಸ್ಲಿಂ ಸಮಾಜದ ಬೆಳಗಾವಿಯ ಶ್ರೀ ಎಂ. ಜಿ. ಇಸ್ಮಾಯಿಲ್ ಅವರು ಬಂದು ಕೆ.ಎಲ್.ಇ. ಆಸ್ಪತ್ರೆಗೆ ಪತ್ರಕೊಟ್ಟು ಕೋರೆ ಅವರಿಗೆ ನನ್ನ ದೇಹದ ಯಾವ ಬೇಕಾದ ಅಮೂಲ್ಯವಾದ ಭಾಗವನ್ನು ತೆಗೆದುಕೊಂಡು ಹಾಕಿ ಅವರ ಪ್ರಾಣ ಉಳಿಸಿ ಎಂದು ಹೇಳಿದ್ದು ಸ್ಮರಣೀಯ. ನಿಜಕ್ಕೂ ಇದೊಂದು ಮಾನವೀಯತೆಯ ಪರಾಕಾಷ್ಠೆ. ಕೋರೆಯವರ ಬಗ್ಗೆ ಒಬ್ಬ ಅಲ್ಪಸಂಖ್ಯಾತರಿಗೆ ಇರುವ ಕಳಕಳಿ ಎಂತಹದು ಎಂದು ಗುರುತಿಸುವ ಒಂದು ಉದಾಹರಣೆ ಅಷ್ಟೆ. ಅವರ ಪ್ರಾಣ ಉಳಿಯಲಿ ಎಂದು ಮಂದಿರ, ಮಸೀದಿ, ಚರ್ಚುಗಳಲ್ಲದೇ, ಶಾಲಾ ಕಾಲೇಜುಗಳಲ್ಲಿ, ಸಮಾಜದ ಎಲ್ಲ ಸಮುದಾಯದ ಜನ, ವಿದ್ಯಾರ್ಥಿಗಳು ಪ್ರಾರ್ಥಿಸಿದ ಪರಿಯನ್ನು ಕಂಡಾಗ ಅಚ್ಚರಿಪಡುತ್ತದೆ. ಹೀಗೆ ಪ್ರಭಾಕರ ಕೋರೆ ಅವರು ಒಬ್ಬ ಧರ್ಮ ನಿರಪೇಕ್ಷ, ನಾಯಕ ಎನಿಸಿದ್ದಾರೆ.

ಉದಾರ ಮನೋಭಾವದ ಶ್ರೀ ಪ್ರಭಾಕರ ಕೋರೆಯವರು :

ಶ್ರೀ ಪ್ರಭಾಕರ ಕೋರೆ ಅವರು ತಂದೆಯಂತೆಯೇ ಉದಾರ ಮನೋಭಾವದವರಾಗಿದ್ದಾರೆ. ಕೋರೆಯವರ ತಂದೆ ಬಸವಪ್ರಭು ಕೋರೆಯವರು ಸುತ್ತಲಿನ ಹತ್ತಾರು ಹಳ್ಳಿಯ ಜನರಿಗೆ ಆಗಿನ ಸಮಯದಲ್ಲಿ ಅವರೇ ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತಿದ್ದರು. ಅವರ ಮನೆಯೇ ಒಂದು ಬ್ಯಾಂಕು ಆಗಿತ್ತು. ಅವರ ನಡೆದ ಹಾದಿಯಲ್ಲಿ ಮಗ ಪ್ರಭಾಕರ ಕೋರೆಯವರು ಸಾಗುತ್ತಿದ್ದಾರೆ. ಇವತ್ತು ಅವರ ಅಂಕಲಿಯ ಗ್ರಾಮವೇ ಇರಲಿ, ಬೆಳಗಾವಿಯ ಮನೆಯೇ ಇರಲಿ, ಸದಾ ಜನಜಂಗುಳಿಯೇ ಇರುತ್ತದೆ. ಸಹಾಯ ಕೇಳಿ ಬಂದವರಿಗೆ ಚಹಾ ಕುಡಿಸಿ ನಂತರ ಅವರ ಸಮಸ್ಯೆಗೆ ಪರಿಹಾರವನ್ನು ಕಲ್ಪಿಸುತ್ತಾರೆ. ಇವರಿಂದ ಸಹಾಯ ಪಡೆದ ಅನೇಕ ಜನ ಇವತ್ತಿಗೂ ದೊಡ್ಡ ಸ್ಥಾನದಲ್ಲಿ ಇದ್ದಾರೆ. ಒಂದು ಉದಾಹರಣೆ ಹೀಗಿದೆ- ಡಾ. ದಯಾನಂದ ಸೂಲಿ ಇವರು ಎಮ್.ಬಿ.ಬಿ.ಎಸ್. ಮುಗಿಸಿ ಎಮ್.ಎಸ್. ಮಾಡಬೇಕೆಂದಾಗ ಹಣದ ಕೊರತೆ ಇತ್ತು. ಕೋರೆ ಅವರ ಹತ್ತಿರ ಹೋಗಿ ವಿನಂತಿಸಿದಾಗ ಎಮ್.ಎಸ್. ಸೀಟು ಕೊಟ್ಟರು. ಇಂದಿಗೂ ಅವರ ಈ ಉಪಕಾರವನ್ನು ಸ್ಮರಿಸುತ್ತಾರೆ. ಅಂಕಲಿಯ ಈಶ್ವರ ಜಕಾತಿ ಅವರ ಮಕ್ಕಳಾದ ಸುಜಾತಾ ಇಂಜಿನಿಯರಿಂಗ ಮಾಡಲು ಸುನೀತಾ ಎಮ್.ಬಿ.ಎ. ಮಾಡಲು ಅವರಿಗೆ ಕೋರೆ ಅವರು ಸಹಾಯವನ್ನು ಮಾಡಿದ್ದಾರೆ. ಚಿಕ್ಕೋಡಿ ಭಾಗದ ಬಡ ರೈತರು, ಪ್ರತಿಭಾವಂತ ಮಕ್ಕಳಿಗೆ, ಹಲವಾರು ಜನರಿಗೆ ಇವತ್ತಿಗೂ ಸಹಾಯವನ್ನು ಮಾಡುತ್ತಿರುವುದು ಇವರ ಉದಾರ ಮನೋಭಾವ ಎಂತಹದು ಎನ್ನುವುದನ್ನು ತೋರಿಸುತ್ತದೆ.

ಇನ್ನು ಸಾಮಾಜಿಕ ಕಾರ್ಯಗಳಾದ ಮದುವೆ-ಮುಂಜಿವೆ ಹೀಗೆ ಹಲವಾರು ಸಾರ್ವಜನಿಕ ಕಲ್ಯಾಣ

ಕಾರ್ಯಗಳಿಗೆ ಉದಾರವಾದ ದೇಣಿಗೆಯನ್ನು ನೀಡಿದ್ದಾರೆ. ಶ್ರೀಸಾಮಾನ್ಯರೊಂದಿಗೆ ಅಷ್ಟೇ ಮಧುರ ಸಂಬಂಧವನ್ನು ಹೊಂದಿದ್ದಾರೆ. ಒಬ್ಬ ಸಾಮಾನ್ಯ ಬಡರೈತ ಶ್ರೀ ದೌಲತ ಯಲ್ಲಪ್ಪ ಕದಂ ಆಸ್ಪತ್ರೆಯಲ್ಲಿ ಇದ್ದಾಗ ಸ್ವತಃ ಕೋರೆ ಅವರು ಆಸ್ಪತ್ರೆಗೆ ಭೆಟ್ಟಿ ನೀಡಿ ಯೋಗಕ್ಷೇಮ ವಿಚಾರಿಸಿದರು. ನಂತರ ಆಸ್ಪತ್ರೆಯ ಸಿಬ್ಬಂದಿ ಇವರೊಬ್ಬ ದೊಡ್ಡ ವ್ಯಕ್ತಿ ಇರಬಹುದು ಎಂದುಕೊಂಡಿದ್ದರು. ಆದರೆ ಶ್ರೀ ದೌಲತ ನಾನು ಒಬ್ಬ ಸಾಮಾನ್ಯ. ಸಾಹುಕಾರರು ನನ್ನ ಆರೋಗ್ಯ ವಿಚಾರಿಸಲು ಬಂದಿದ್ದು, ನನ್ನ ಸೌಭಾಗ್ಯ ಎಂದಾಗ, ಆಸ್ಪತ್ರೆಯ ಸಿಬ್ಬಂದಿಗೆ ಒಂದು ರೀತಿ ಆಶ್ಚರ್ಯ. ಕೋರೆ ಅವರ ಬಗ್ಗೆ ಅಷ್ಟೇ ಅಭಿಮಾನವೂ ಮೂಡಿತು. ಹೀಗೆ ಶ್ರೀಸಾಮಾನ್ಯರೊಂದಿಗೆ ಅಷ್ಟು ಆತ್ಮೀಯತೆಯನ್ನು ಹೊಂದಿರುವ ಕೋರೆ ಅವರು ಪ್ರಭಾಕರಣ್ಣ ಎಂದೇ ಪ್ರೀತಿಯಿಂದ ಕರೆಯಿಸಿಕೊಳ್ಳುತ್ತಾರೆ.[೧೧]

ಸಹಕಾರಿರತ್ನ ಡಾ॥ ಪ್ರಭಾಕರ ಕೋರೆಯವರು :

ಆಡು ಮುಟ್ಟದ ಗಿಡವಿಲ್ಲ ಎನ್ನುವಂತೆ ಕೋರೆ ಅವರ ಸಾಧನಾ ಕ್ಷೇತ್ರಗಳು ಹಲವು. ಚಿಕ್ಕೋಡಿಯ ಶ್ರೀ ಧೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ಅಣ್ಣ ಚಿದಾನಂದ ಕೋರೆ ಅವರ ಶ್ರಮದಿಂದ ಪ್ರಾರಂಭವಾದದು. ಅದರ ಆಧುನೀಕರಣದ ಶಿಲ್ಪಿ ಡಾ. ಪ್ರಭಾಕರ ಕೋರೆ ಅವರು. ೧೯೯೦ರ ದಶಕದಲ್ಲಿ ಕಾರ್ಖಾನೆಯ ಅಧಿಕಾರ ವಹಿಸಿಕೊಂಡ ನಂತರ ಸಂಕಷ್ಟವನ್ನು ಎದುರಿಸುತ್ತಿದ್ದು, ಕಾರ್ಖಾನೆಯ ಪರಿಸ್ಥಿತಿಯನ್ನು ಕಂಡು ೫೫ ಕೋಟಿ ವೆಚ್ಚದ ವಿದ್ಯುತ್ ತಯಾರಿಕೆಯ ಘಟಕವನ್ನು ಪ್ರಾರಂಭಿಸಿದರು. ನಂತರ ಸ್ಪಿರೀಟ ತಯಾರಿಕಾ ಘಟಕವನ್ನು ಪ್ರಾರಂಭಿಸಿ ಕಾರ್ಖಾನೆ ಲಾಭ ಹೆಚ್ಚಿಸಿದ ಕೀರ್ತಿ ಕೋರೆ ಅವರಿಗೆ ಸಲ್ಲುತ್ತದೆ. ಇನ್ನು ಕಷ್ಟದಲ್ಲಿ ಇದ್ದ ಯಮಕನಮರಡಿ ಕ್ರೇಡಿಟ್ ಸೊಸೈಟಿ ಮತ್ತು ಕಟಕೋಳ ಅರ್ಬನ್ ಬ್ಯಾಂಕಿಗೆ ಸಹಾಯ ಮಾಡಿ ಅವುಗಳ ಪುನಶ್ಚೇತನಕ್ಕೆ ಕಾರಣವಾದರು. ಅಂಕಲಿಯ ಪ್ರಭಾಕರಣ್ಣ ಕೋರೆ ಅರ್ಬನ್ ಬ್ಯಾಂಕಿನ ಶಾಖೆಗಳನ್ನು ವಿಸ್ತರಿಸಿ ಅದರ ಅಭಿವೃದ್ಧಿಗೆ ಕಾರಣವಾದರು. ಬಡ ಮಧ್ಯಮ ವರ್ಗದ ರೈತರಿಗೆ ವರವಾಗಲೆಂದು ಅನೇಕ ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕಿ ರೈತರ ಆರ್ಥಿಕ ಸಬಲೀಕರಣಕ್ಕೆ ಕಾರಣವಾಗಿದ್ದಾರೆ. ಇವತ್ತು ಅಖಿಲ ಭಾರತ ಕಾರ್ಖಾನೆಗಳ ಮಹಾಮಂಡಲದ ಅಧ್ಯಕ್ಷರಾಗಿಯೂ ಕಾರ್ಯವನ್ನು ನಿರ್ವಹಿಸುತ್ತಿರುವ ಇವರು ಸಹಕಾರಿ ರಂಗದ ಮೇರು ನಾಯಕರು ಹೌದು.

ಮಹಿಳಾ ಸಬಲೀಕರಣಕ್ಕೆ ಕೋರೆ ಅವರ ಕೊಡುಗೆ :

ಮಹಿಳೆಯರು ಪುರುಷರಂತೆ ಸ್ವಾವಲಂಬಿ ಜೀವನವನ್ನು ನಡೆಸಬೇಕು. ಅವರಿಗೆ ಸಮಾನ ಅವಕಾಶವನ್ನು ಕಲ್ಪಿಸಬೇಕು ಮತ್ತು ಅವು ಮಹಿಳೆಯರಿಗೆ ಸಿಗಬೇಕು ಎನ್ನುವುದು ಶ್ರೀ ಪ್ರಭಾಕರ ಕೋರೆಯವರ ಆಶೆ. ಅಂತೆಯೇ ೧೯೯೭ ರಲ್ಲಿ ಬೆಳಗಾವಿಯಲ್ಲಿ ರಾಣಿಚನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕನ್ನು ಸ್ಥಾಪಿಸುವಲ್ಲಿ ನೆರವಾದ ಇವರು ಒಟ್ಟು ಈ ಬ್ಯಾಂಕು ೧೯ ಲಕ್ಷ ಶೇರು ಹಣದಿಂದ ಪ್ರಾರಂಭವಾಗಿ ಇಂದು ೩೨ ಕೋಟಿಗಿಂತ ಅಧಿಕ ಬಂಡವಾಳವನ್ನು ಹೊಂದಿದೆ. ಇದಕ್ಕೆ ಮೂಲ ಪ್ರೇರಣೆ ಶ್ರೀ ಕೋರೆಯವರು.[೧೨]

ಇದರಿಂದ ಅನೇಕ ಮಹಿಳೆಯರು ಆರ್ಥಿಕ ಸಹಾಯ ಪಡೆದು ಮುಂದೆ ಬಂದಿದ್ದಾರೆ. ಇದು ಶ್ರೀ ಕೋರೆಯವರ

ಮಹಿಳೆಯರ ಬಗ್ಗೆ ಹೊಂದಿರುವ ಕಳಕಳಿಯನ್ನು ಸೂಚಿಸುತ್ತದೆ. ಈ ಬ್ಯಾಂಕಿನ ಅಧ್ಯಕ್ಷರಾಗಿ ಸಮರ್ಥವಾಗಿ ಮುನ್ನಡೆಸುತ್ತಿರುವರು ಶ್ರೀಮತಿ ಆಶಾ ಪಿ. ಕೋರೆ ಎನ್ನುವುದು ಅಷ್ಟೆ ಅಭಿಮಾನದ ಸಂಗತಿಯಾಗಿದೆ.

ಜನರ ಆರೋಗ್ಯದ ಸಂಜೀವಿನಿ ಡಾ॥ ಪ್ರಭಾಕರ ಕೋರೆ – ಕೆ.ಎಲ್.ಇ. ಆಸ್ಪತ್ರೆಯ ರೂವಾರಿ :

ಒಂದು ಕಾಲವಿತ್ತು. ಜನರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದೂರದ ಪೂನಾ. ಮುಂಬಯಿ, ಮಿರಜಗಳಿಗೆ ತೆರಳಬೇಕಿತ್ತು. ಇದನ್ನು ಮನಗಂಡ ಕೋರೆ ಅವರು ಬೆಳಗಾವಿಯಲ್ಲಿಯೇ ಒಂದು ಬೃಹತ್ ಪ್ರಮಾಣ ಆಸ್ಪತ್ರೆಯನ್ನು ತೆರೆಯಬೇಕು ಎಂದು ನಿಶ್ಚಯಿಸಿ ಹಲವಾರು ದೇಶಗಳನ್ನು ಸುತ್ತಿ ಅಲ್ಲಿಯ ವೈದ್ಯಕೀಯ ಸೌಲಭ್ಯ ಆಸ್ಪತ್ರೆಯ ವಿನ್ಯಾಸದ ಸೌಲಭ್ಯಗಳನ್ನು ತಿಳಿದುಕೊಂಡು ಆ ಪ್ರಕಾರವಾಗಿ ಆಸ್ಪತ್ರೆಯನ್ನು ಬೆಳಗಾವಿಯಲ್ಲಿ ಸ್ಥಾಪಿಸಬೇಕೆಂದು ಸಂಕಲ್ಪವನ್ನು ಮಾಡಿ ಕಾರ್ಯಪ್ರವೃತ್ತರಾದರು. ಸುಮಾರು ೧೨೦ ಕೋಟಿ ರೂಪಾಯಿ ವೆಚ್ಚದಲ್ಲಿ ಅತ್ಯಾಧುನಿಕ ಸುಸಜ್ಜಿತವಾದ ಆಸ್ಪತ್ರೆಯನ್ನು ನಿರ್ಮಿಸಿದ್ದು ಕೋರೆ ಅವರ ಬಹುದೊಡ್ಡ ಸಾಧನೆಯಾಗಿದೆ. ಸುಮಾರು ಹಾಸಿಗೆಯ ಸಾಮರ್ಥ್ಯ ಇರುವ ಈ ಆಸ್ಪತ್ರೆಯು ದೇಶದಲ್ಲಿ ಎರಡನೆಯ ಅತಿ ದೊಡ್ಡ ಆಸ್ಪತ್ರೆ ಎನ್ನುವ ಹೆಗ್ಗಳಿಕೆಪಾತ್ರವಾಗಿದೆ. ಇದರಲ್ಲಿ ೯೯೦ ಹಾಸಿಗೆಯ ಬಡ, ದಲಿತ, ಅಲ್ಪಸಂಖ್ಯಾತರ ರೈತಾಪಿ ಜನ ವರ್ಗದವರಿಗೆ ಉಚಿತ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದ್ದು ಬಹುಶಃ ಇದು ದೇಶದ ಮಾನವೀಯತೆಯ ಇತಿಹಾಸದಲ್ಲಿಯೇ ಮೊದಲು ಪ್ರಯತ್ನ ಎಂದೇ ಹೇಳಬಹುದು. ಬಡಜನತೆಯ ಮೇಲಿನ ಅವರ ಪ್ರೀತಿ ಎಂತಹದು ಎನ್ನುವುದನ್ನು ಇದು ತೋರಿಸುತ್ತದೆ.

ಅಮೇರಿಕಾ ದೇಶದ ವೈದ್ಯಕೀಯ ಕ್ಷೇತ್ರದಲ್ಲಿ ಸಿಗುವ ಎಲ್ಲಾ ಆಧುನಿಕ ಸೌಲಭ್ಯಗಳು ನಮ್ಮ ಉತ್ತರ ಕರ್ನಾಟಕದ ಜನತೆಗೆ ಸಿಗಬೇಕು ಎನ್ನುವುದು ಅವರ ಹೆಬ್ಬಯಕೆ. ಇವತ್ತು ಕೆ.ಎಲ್.ಇ. ಸಂಸ್ಥೆಯ ಡಾ॥ ಪ್ರಭಾಕರ ಕೋರೆ ಆಸ್ಪತ್ರೆಯಲ್ಲಿ ಅವು ಲಭ್ಯ ಎನ್ನುವುದು ಕೂಡಾ ಅಷ್ಟೇ ನಿಜ.[೧೩]

ಬೆಳಗಾವಿಗೆ ಯೋಗದ ಭಾಗ್ಯವನ್ನು ಕಲ್ಪಸಿದ ಕೋರೆಯವರು :

ಸಾರ್ವಜನಿಕರ ಆರೊಗ್ಯದ ಬಗ್ಗೆ ಕೋರೆಯವರ ಕಳಕಳಿಗೆ ಆಸ್ಪತ್ರೆಯೊಂದೆ ಅಲ್ಲ. ೨೦೦೯ರಲ್ಲಿ ಬೆಳಗಾವಿಯಲ್ಲಿ ಸಂಘಟಿಸಿದ ಯೋಗಗುರು ಬಾಬಾ ರಾಮದೇವಜಿ ಮಹಾರಾಜರ ಯೋಗ ಶಿಬಿರವೂ ಒಂದು ಉತ್ತಮ ನಿದರ್ಶನವಾಗಿದೆ. ಜನವರಿ ೩ ರಿಂದ ೮ರ ವರೆಗೆ ನಡೆದ ಈ ಶಿಬಿರವೂ ನಿರೀಕ್ಷೆಗೆ ಮೀರಿ ಯಶಸ್ವಿಯಾಯಿತು. ದಿನಂಪ್ರತಿ ಬೆಳಿಗ್ಗೆ ೪ ಗಂಟೆಗೆ ಎದ್ದು ಶಿಬಿರಕ್ಕೆ ಹಾಜರಾಗುತ್ತಿದ್ದ ದೃಶ್ಯ, ಗುರೂಜಿಯವರ ಉಪನ್ಯಾಸ, ಪ್ರಾತ್ಯಕ್ಷಿಕೆಗಳು ಜನಮನ ಗೆದ್ದವು. ಶಿಬಿರದ ಮೂಲಕ ಅನೇಕ ಜನರ ಆರೋಗ್ಯವನ್ನು ಸುಧಾರಿಸಿದ ಕೀರ್ತಿ ಶ್ರೀ ಕೋರೆಯವರಿಗೆ ಸಲ್ಲುತ್ತದೆ. ಹೀಗೆ ಯೋಗ ಗುರುಗಳ ಕಾರ್ಯಕ್ರಮವನ್ನು ಸಂಘಟಿಸಿದ ಕೋರೆಯವರಿಗೆ ಬೆಳಗಾವಿಯ ಜನ ಸದಾ ಚಿರಋಣಿಯಾಗಿದ್ದಾರೆ.

ಸಂಘಟನಾ ಚತುರ ಡಾ॥ ಪ್ರಭಾಕರ ಕೋರೆಯವರು :

ಡಾ. ಪ್ರಭಾಕರ ಕೋರೆ ಅವರು ಒಬ್ಬ ಅದ್ಭುತ ಸಂಘಟನಾ ಚತುರ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಬೆಳಗಾವಿಯಲ್ಲಿ ದೊಡ್ಡ ಕಾರ್ಯಕ್ರಮ ನಡೆಯಬೇಕೆಂದರೆ ಅಲ್ಲಿ ಡಾ. ಪ್ರಭಾಕರ ಕೋರೆಯವರ ಸಾರಥ್ಯ ಇರಲೇಬೇಕು. ಶಿಕ್ಷಣ ಕ್ಷೇತ್ರದಂತೆ ಸಾಮಾಜಿಕ ಸಾಹಿತ್ಯಕ ಕ್ಷೇತ್ರಗಳಿಗೆ ಅವರದು ಅನುಪಮ ಸೇವೆ. ೧೯೯೨ರ ಬೆಳಗಾವಿಯ ಅಖಿಲ ಭಾರತ ವೀರಶೈವ ಮಹಾಸಭೆಯ ೨೧ನೇ ಮಹಾ ಅಧಿವೇಶನವನ್ನು ಅದ್ದೂರಿಯಾಗಿ ಸಂಘಟಿಸಿ, ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಡಾ. ಶಂಕರದಯಾಳ ಶರ್ಮಾರನ್ನು ಕರೆತಂದು ಬೃಹತ್ ಸಮ್ಮೇಳನವನ್ನು ನಡೆಸಿ ಯಶಸ್ವಿಯಾದರು. ನಂತರ ೧೯೯೯ ರ ಅಖಿಲ್ ಭಾರತ ೫ನೇ ಶರಣ ಸಾಹಿತ್ಯದ ಸಮ್ಮೇಳನವನ್ನು ಅದ್ದೂರಿಯಾಗಿ ಸಂಘಟಿಸಿದರು. ಕೊಣ್ಣೂರು ನಾಟಕ ಕಂಪನಿಯ ಶತಮಾನೋತ್ಸವವನ್ನು ೨೦೦೩ ರ ಅಖಿಲ ಭಾರತದ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳಗಳನ್ನು ಯಶಸ್ವಿಗೊಳಿಸಿದ ಇವರ ನಾಡನುಡಿಯ ಪ್ರೇಮ ಅನನ್ಯ. ಗಡಿಯಲ್ಲಿ ಕನ್ನಡ ಧ್ವಜ ಎತ್ತಿ ಹಿಡಿಯುವ ಯಾವುದೇ ಕಾರ್ಯಕ್ಕೂ ಸೈ ಎನ್ನುವ ಕೋರೆ ಅವರ ಗಡಿ ಭಾಷೆಯ ಸಮಸ್ಯೆಗಳನ್ನು ಮೆಟ್ಟಿ ಗಡಿಯಲ್ಲಿ ಕನ್ನಡದ ದೀಪವನ್ನು ಗಡಿಯಲ್ಲಿ ಬೆಳಗಲು ಶ್ರಮಿಸುತ್ತಿದ್ದಾರೆ.[೧೪]

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಡಾ॥ ಕೋರೆಯವರ ಕೊಡುಗೆಗಳು :

ಉತ್ತರ ಕರ್ನಾಟಕದ ಪ್ರದೇಶವು ಅಭಿವೃದ್ಧಿ ಹೊಂದಬೇಕು. ಈ ಭಾಗದ ಬೇಡಿಕೆಗಳು ಈಡೇರಬೇಕು. ಅನೇಕ ಭಾಗದಲ್ಲಿ ಇವತ್ತಿಗೆ ನೀರಾವರಿ ಸೌಲಭ್ಯವಿಲ್ಲ. ಬೃಹತ್ ಪ್ರಮಾಣದ ಕೈಗಾರಿಕೆಗಳ ಕೊರತೆ ನೀಗಿಸಬೇಕು. ದುಡಿಯು ವ ಕೈಗಳಿಗೆ ಕೆಲಸ ಸಿಗಬೇಕು. ಅದಕ್ಕೆ ತಕ್ಕಂತೆ ಸಂಬಳ ಕೊಡಬೇಕು. ಹೀಗೆ ಸದಾ ಉತ್ತರ ಕರ್ನಾಟಕದ ಬೆಳಗಾವಿಯ ಹಾಗೆ ಚಿಕ್ಕೋಡಿ ಭಾಗದ ಅಭಿವೃದ್ಧಿಗೆ ಚಿಂತಿಸುತ್ತಿರುವುದು ಕೋರೆಯವರಿಗೆ ಒಂದು ಸುವರ್ಣ ಅವಕಾಶ ದೊರೆಯಿತು. ೨೦೦೬ರಲ್ಲಿ ಅಂದಿನ ಯುವ ಮುಖ್ಯಮಂತ್ರಿ ಶ್ರೀ ಎಚ್. ಡಿ. ಕುಮಾರಸ್ವಾಮಿಯವರು ಉತ್ತರ ಕರ್ನಾಟಕದ ಜನರು ನೆಮ್ಮದಿ ಜೀವನ ನಡೆಸಬೇಕು. ಹಾಗೂ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಬೇಕು, ಗಡಿ ಸಮಸ್ಯೆಗೆ ಅಂತ್ಯ ಸಿಗುವಂತಾಗಬೇಕು ಎನ್ನುವ ನೈಜ ಕಳಕಳಿ ಹೊಂದಿದ್ದು, ಕುಮಾರಸ್ವಾಮಿ ಅವರು ಬೆಳಗಾವಿಯಲ್ಲಿ ಐತಿಹಾಸಿಕ ವಿಧಾನ ಮಂಡಳ ಅಧಿವೇಶನ ನಡೆಸಬೇಕೆಂದು ನಿರ್ಣಯಿಸಿದರು. ದಿನಾಂಕ ೧೬.೯.೨೦೦೬ರ ತೀರ್ಮಾನದಂತೆ ಅದರ ಸಂಪೂರ್ಣ ಹೊಣೆಯನ್ನು ಸ್ವ ಪಕ್ಷದಲ್ಲಿನ ವಿರೋಧವನ್ನು ಲೆಕ್ಕಿಸದೇ ನಮ್ಮ ಉತ್ತರ ಕರ್ನಾಟಕದ ಜನತೆಗೆ ಒಳ್ಳೆಯದಾಗುತ್ತದೆ. ಎನ್ನುವುದಾದರೆ ಎಂತಹ ತ್ಯಾಗಕ್ಕೂ ಸಿದ್ಧ ಎಂದು ಕುಮಾರಸ್ವಾಮಿಯವರಿಗೆ ಅಭಯ ಹಸ್ತ ನೀಡಿದ ಕೋರೆಯವರು ಕೇವಲ ಒಂದು ವಾರದಲ್ಲಿಯೇ ವಿಧಾನಮಂಡಲದ ಉಭಯ ಸದನಗಳ ಚಾರಿತ್ರಿಕ ಅಧಿವೇಶನಕ್ಕೆ ಕೆ.ಎಲ್.ಇ. ಸಂಸ್ಥೆಯ ಸಿಬ್ಬಂದಿಯನ್ನು ಅಣಿಗೊಳಿಸಿ. ಹಗಲು ರಾತ್ರಿಯೆನ್ನದೇ ಶ್ರಮಿಸಿ ಅಧಿವೇಶವನ್ನು ಯಶಸ್ವಿಗೊಳಿಸಿದರು. ನಂತರ ೨೦೦೮ರಲ್ಲಿ ತಮ್ಮ ನೇತೃತ್ವದಲ್ಲಿಯೇ ಈ ಐತಿಹಾಸಿಕ ಅಧಿವೇಶನವನ್ನು ನಡೆಸಿದ ಕೋರೆಯವರು ಅಂದಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ಅವರಿಂದ ಹಾಗೇ ೨೦೦೮ರಲ್ಲಿ ಈಗಿನ

ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರಿಂದ ಗೌರವಗಳನ್ನು ಪಡೆದರು. ಮುಂದೆ ಶಾಶ್ವತ ಅಧಿವೇಶನ ಬೆಳಗಾವಿಯಲ್ಲಿಯೇ ನಡೆಸಬೇಕೆಂದು ದೃಢವಾದ ನಿರ್ಧಾರವನ್ನು ಮಾಡಿ ಕಾರ್ಯಪ್ರವೃತ್ತರಾಗಿ ಯಶಸ್ವಿಯಾದ ಕೋರೆಯವರು ಈಗ ಅದು ಉತ್ತರ ಕರ್ನಾಟಕದ ಅಭಿವೃದ್ಧಿಗೆ ದಿಕ್ಸೂಚಿಯಾಗಿದೆ.[೧೫]

ಈ ರೀತಿಯಾಗಿ ಐತಿಹಾಸಿಕ ಅಧಿವೇಶನವನ್ನು ಸಂಘಟಿಸಿದ ಕೋರೆಯವರ ಸಂಘಟನಾ ಶಕ್ತಿಯನ್ನು ಕಂಡು ಮೆಚ್ಚುಗೆಯನ್ನು ವ್ಯಕ್ತಪಡಿಸಿದವರು ಅನೇಕರು. ಇದು ಅವರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಇರುವ ಕಳಕಳಿ ಎಂತಹದು ಎನ್ನುವುದನ್ನು ತೋರಿಸುವ ಒಂದು ಉದಾಹರಣೆ ಮಾತ್ರ. ಅನೇಕ ರಾಷ್ಟ್ರ ರಾಜ್ಯದ ನಾಯಕರನ್ನು ಈ ಭಾಗಕ್ಕೆ ಕಳುಹಿಸಿದ ಇಲ್ಲಿನ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಇನ್ನು ಉತ್ತರ ಕರ್ನಾಟಕದ ಜನರು ಆಕಸ್ಮಿಕವಾಗಿ ಸಮಸ್ಯೆಗಳಿಗೆ ಸಿಕ್ಕಾಗ ಉದಾರ ನೆರವನ್ನು ನೀಡಿದ್ದಾರೆ. ೨೦೦೫ ರಲ್ಲಿ ಕೃಷ್ಣಾ ನದಿಗೆ ಪ್ರವಾಹ ಬಂದಾಗ ಅನೇಕ ಗ್ರಾಮಗಳು ಜಲಪ್ರಳಯಕ್ಕೆ ಸಿಲುಕಿದಾಗ ತಮ್ಮ ಅನಾರೋಗ್ಯವನ್ನು ಸಹ ಲೆಕ್ಕಿಸದೇ ಅಂಕಲಿಯಲ್ಲಿ ಒಂದು ತಿಂಗಳ ಪರ್ಯಂತ ನಿರಂತರ ಠಿಕಾನಿ ಹೂಡಿ ಸರಕಾರಕ್ಕೆ ಸಮಾನಾಂತರವಾಗಿ ನಿರಾಶ್ರಿತರಿಗೆ ಕೆ.ಎಲ್.ಇ. ಆಸ್ಪತ್ರೆಯಿಂದ ಸೇವೆಯನ್ನು ಒದಗಿಸಿರುವುದಲ್ಲದೇ ಸ್ವತಃ ತಮ್ಮ ಮಯೂರ ಚಿತ್ರಮಂದಿರಗಲ್ಲಿ ನಿರಾಶ್ರಿತರಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಿ ಅವರಿಗೆ ಬಟ್ಟೆ, ಆಹಾರ, ಚಾದರ, ಜಮಖಾನೆ ಇತರೇ ಸೌಲಭ್ಯವನ್ನು ಒದಗಿಸಿ ಕೆ.ಎಲ್.ಇ. ಆಸ್ಪತ್ರೆಯ ವೈದ್ಯರಿಂದ ಔಷಧೋಪಚಾರವನ್ನು ಒದಗಿಸಿ ಮಾನವೀಯತೆಯನ್ನು ಮೆರೆದರು. ೨೦೦೯ ರ ಉತ್ತರ ಕರ್ನಾಟಕದಲ್ಲಿ ವಿಪರೀತವಾದ ಮಳೆಯಿಂದಾಗಿ ಉಂಟಾದ ಹಾನಿಯಿಂದ ಜನರು ಸಂಕಷ್ಟಕ್ಕೆ ಸಿಲುಕಿದಾಗ ಕೆ.ಎಲ್.ಇ. ಸಂಸ್ಥೆಯಿಂದ ೫೧ ಲಕ್ಷ ರೂಪಾಯಿಗಳ ದೇಣಿಗೆ ನೀಡಿ ಔದಾರ್ಯವನ್ನು ಮೆರೆದರು. ಇಂತಹ ಕೋರೆ ಅವರು ತಮ್ಮ ಜೀವನವನ್ನು ಸಮಾಜದ ಉನ್ನತಿಗಾಗಿ ಮುಡಿಪಾಗಿ ಇರಿಸಿದ್ದಾರೆ. ಇವರೊಬ್ಬ ಮಾನವೀಯತೆ ಮಿಡಿಯಬಲ್ಲ ಶ್ರೇಷ್ಠ ರಾಜಕೀಯ ನಾಯಕರಾಗಿದ್ದಾರೆ.

ಮಠ ಮಾನ್ಯಗಳ ಬಗ್ಗೆ ಅಭಿಮಾನ ಹೊಂದಿರುವ ಶ್ರೀ ಕೋರೆಯವರು :

ಕರ್ನಾಟಕದಲ್ಲಿನ ವೀರಶೈವ ಮಠ ಮಾನ್ಯಗಳು ಮಾಡಿದ ಶೈಕ್ಷಣಿಕ, ಸಾಮಾಜಿಕ ಕಾರ್ಯವು ಅಮೋಘವಾದದ್ದು. ತಮ್ಮ ತಂದೆಯವರಂತೆ ಧಾರ್ಮಿಕವಾಗಿ ಮಠಗಳು ಮತ್ತು ಮಠಾಧೀಶರನ್ನು ಕೋರೆಯವರು ಅತಿ ಗೌರವದಿಂದ ಕಾಣುತ್ತಾರೆ. ವಿಜಾಪೂರದ ಸಿದ್ಧೇಶ್ವರ ಸ್ವಾಮಿಯವರು, ತುಮಕೂರಿನ ಶ್ರೀ ಸಿದ್ಧಾಗಂಗಾಶ್ರೀಗಳು, ಯಡುರಿನಶ್ರೀಗಳು, ಸಿಡಸೋಸಿಯ ಶ್ರೀಗಳು, ಬೆಳಗಾವಿ ರುದ್ರಾಕ್ಷಿ ಮಠದ ನಾಗನೂರು ಶ್ರೀಗಳು, ಕಂಚಿಶ್ರೀಗಳು, ಮೈಸೂರಿನ ಸುತ್ತೂರು ಶ್ರೀ, ಪೇಜಾವರ ಮಠದ ಶ್ರೀಗಳು, ತರಳಬಾಳು ಶ್ರೀ ಜಗದ್ಗುರುಗಳು, ಮುಗಳಖೋಡ ಮಠದ ಶ್ರೀಗಳು, ಗದಗಿನ ತೋಟದ ಶ್ರೀ ಸಿದ್ಧಲಿಂಗ ಶ್ರೀಗಳು. ಹೀಗೆ ನಾಡಿನ ಅನೇಕ ಮಠಗಳ ಮತ್ತು ಮಠಾಧೀಶರ ಬಗ್ಗೆ ಅಭಿಮಾನ ಗೌರವವನ್ನು ಹೊಂದಿದ್ದಾರೆ. ಅಂಕಲಿ ಗ್ರಾಮ ದೇವರಾದ ಶ್ರೀ ಸಿದ್ದೇಶ್ವರ ಹಾಗೂ ಯಡೂರಿನ ಶ್ರೀ ವೀರಭದ್ರ ದೇವರಿಗೆ ನಡೆದುಕೊಳ್ಳುತ್ತಾರೆ. ಇವರ ಮನೆಯ ದೇವರಾದ ವಿಜಾಪೂರ ಜಿಲ್ಲೆಯ ಕನಮಡಿಯ ಗ್ರಾಮದ ಮಹಾರಾಷ್ಟ್ರದ

ಗಡಿಯಲ್ಲಿ ಇರುವ 'ಧರಿದೇವರು' ಇವರ ಮನೆಯ ದೇವರು ಪ್ರತಿವರ್ಷ ಹುಟ್ಟು ಹಬ್ಬದ ದಿನ ಮತ್ತು ಧರಿದೇವರು ಐತಿಹಾಸಿಕ ಪ್ರಸಿದ್ಧ ಪಡೆದ ದೇವಸ್ಥಾನ ಅದರ ಪುನುರುದ್ಧಾರಕ್ಕೆ ಕೋರೆ ಅವರ ಸ್ವಂತದ ಖರ್ಚಿನಲ್ಲಿಯೇ ಪ್ರವಾಸಿ ಮಂದಿರ ಹಾಗೂ ಭಕ್ತರು ಇಳಿದುಕೊಳ್ಳಲು ಯಾತ್ರಿ ಭವನಗಳನ್ನು ನಿರ್ಮಾಣ ಮಾಡಿ ಋಣವನ್ನು ತೀರಿಸಿದ್ದಾರೆ. ಇದೇ ರೀತಿಯಾಗಿ ಮಠಾಧೀಶರು ಕೂಡಾ ಕೋರೆಯವರ ಬಗ್ಗೆ ಅಪಾರವಾದ ಪ್ರೀತಿ ಅಭಿಮಾನವನ್ನು ಹೊಂದಿದ್ದಾರೆ. ಪ್ರಭಾಕರ ಕೋರೆಯವರ ಕಾರ್ಯಗಳನ್ನು ಮೆಚ್ಚಿ ಪ್ರೋತ್ಸಾಹಿಸಿ ಆರ್ಶೀವದಿಸುತ್ತಾ ಬಂದಿದ್ದಾರೆ.

ವೀರಶೈವ-ಲಿಂಗಾಯತ ವಧುವರ ಅನ್ವೇಷಣಾ ಕೇಂದ್ರ :

ವೀರಶೈವ ಸಮಾಜದ ವಧು-ವರರಿಗೆ ಸಹಾಯವಾಗಲಿ ಎಂದು ನಿರ್ಧರಿಸಿ ಬೆಳಗಾವಿಯಲ್ಲಿ ವೀರಶೈವ ವಧುವರ ಅನ್ವೇಷಣಾ ಕೇಂದ್ರವನ್ನು ಸ್ಥಾಪಿಸುವಲ್ಲಿ ಕೋರೆಯವರ ಪಾತ್ರವಿದೆ. ವಧು-ವರ ಅನ್ವೇಷಣೆಗಾಗಿ ಸಮಾಜದ ಬಾಂಧವರು ಪಡುತ್ತಿರುವ ಕಷ್ಟದಿಂದ ದೂರ ಮಾಡಬೇಕು. ಒಂದೇ ಸ್ಥಳದಲ್ಲಿಯೇ ಅವರಿಗೆ ಅನುಕೂಲ ಕಲ್ಪಿಸಬೇಕೆಂದು ನಿರ್ಧರಿಸಿ ಬೆಳಗಾವಿಯಲ್ಲಿ ವೀರಶೈವ ಕಲ್ಯಾಣ ಕೇಂದ್ರವನ್ನು ಸ್ಥಾಪಿಸಿ ಅನೇಕ ಜನರಿಗೆ ಅನುಕೂಲ ಕಲ್ಪಿಸಿದ ಕೀರ್ತಿ ಶ್ರೀ ಕೋರೆಯವರದ್ದಾಗಿದೆ.

ಪ್ರಭಾಕರ ಕೋರೆಯವರ ರಾಜಕೀಯ ಹೆಜ್ಜೆ ಗುರುತುಗಳು :

ಡಾ॥ ಪ್ರಭಾಕರ, ಬಸವಪ್ರಭು ಕೋರೆ ಅವರು ರಾಜಕೀಯದಲ್ಲಿ ಇದ್ದುಕೊಂಡು ಸಾಮಾಜಿಕ, ಶೈಕ್ಷಣಿಕ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದ ಕರ್ನಾಟಕ ರಾಜ್ಯ ಕಂಡ ವಿಶಿಷ್ಟ ರಾಜಕಾರಣಿಗಳು ಕೋರೆ ಕುಟುಂಬಕ್ಕೆ ರಾಜಕೀಯ ಕ್ಷೇತ್ರವೂ ಹೊಸದು ಅಲ್ಲಾ. ತಂದೆ ದಿ॥ ಬಸವಪ್ರಭು ಕೋರೆಯವರು ಸ್ವಾತಂತ್ರ್ಯ ಹೋರಾಟಗಾರರು. ಅಣ್ಣ ದಿ. ಚಿದಾನಂದ ಕೋರೆಯವರು ರಾಜಕೀಯದಲ್ಲಿ ಇದ್ದವರು. ಅಣ್ಣ ಚಿದಾನಂದ ಕೋರೆ ಅವರಿಗೆ ೧೯೬೮ ರಿಂದಲೇ ಅವರು ನಿಧನ ಹೊಂದುವವರಿಗೆ ಅಂದರೆ ೧೯೮೧ರ ವರೆಗೆ ಅವರ ಬೆನ್ನೆಲುಬು ಕಾರ್ಯ ಮಾಡುತ್ತಿದ್ದರು. ಅಣ್ಣ ಚಿದಾನಂದರ ನಿಧನದ ನಂತರ ಅವರ ಸ್ಥಾನವನ್ನು ತುಂಬಲು ಜನರ ಒತ್ತಾಯದ ಮೇರೆಗೆ ರಾಜಕೀಯಕ್ಕೆ ಬಂದವರು. ಮೊದಲು ನಿಪ್ಪಾಣಿಯ ಬೀಡಿ ತಂಬಾಕು ಕಾರ್ಮಿಕ ಸಂಘವನ್ನು ಸ್ಥಾಪಿಸಿ ಅವರ ಪರ ಹೋರಾಟ ನಡೆಸಿ ಬೆಳಕಿಗೆ ಬಂದವರು. ನಂತರ ಚಿಕ್ಕೋಡಿ ರೋಟರಿ ಕ್ಲಬ್‌ನ ಸದಸ್ಯರಾಗಿ ಸಕ್ರಿಯವಾಗಿ ಕಾರ್ಯವನ್ನು ಮಾಡುತ್ತಾ ಮಾಡಿದ್ದಾರೆ. ೧೯೮೩ರಲ್ಲಿ ಸದಲಗಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ ಪಕ್ಷದ ಅಭ್ಯರ್ಥಿಯಾಗಿ ಕಡಿಮೆ ಮತಗಳಿಂದ ಸೋಲನ್ನು ಕಂಡರೂ ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಅದರಲ್ಲೂ ರಾಮಕೃಷ್ಣ ಹೆಗಡೆ ಅವರ ಪರ ಅನುಕಂಪದಿಂದ ರಾಜ್ಯದಲ್ಲಿ ಜನತಾ ಪಕ್ಷದ ಗಾಳಿಯು ಬೀಸುತ್ತಿತ್ತು. ಆವಾಗ ಬಿರುಗಾಳಿಯಲ್ಲಿ ಇವರು ಸ್ವಲ್ಪದರಲ್ಲಿ ಸೋಲನ್ನು ಕಂಡಿದ್ದರು. ನಂತರ ೧೯೮೫ರಲ್ಲಿ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದವರು. ಇಂದಿಗೂ ಆ ಸ್ಥಾನದಲ್ಲಿ ಇದ್ದು ಕೆ.ಎಲ್.ಇ. ಸಂಸ್ಥೆಯ ಆ ಸ್ಥಾನ ಒಂದು ರಾಜ್ಯದ ಮುಖ್ಯಮಂತ್ರಿಯ ಸ್ಥಾನದಂತೆ ಪ್ರಾಮುಖ್ಯತೆಯನ್ನು ಪಡೆಯುವಂತೆ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ೧೯೯೩ರಲ್ಲಿ ಇವರ ಕಾರ್ಯವೈಖರಿ

ಸಂಘಟನಾ ಶಕ್ತಿಯನ್ನು ಪಕ್ಷವೂ ಗುರುತಿಸಿ ಇವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿತು. ರಾಜ್ಯಸಭೆಯ ಸದಸ್ಯರಾಗಿ ಸಂಸದೀಯ ವಿವಿಧ ಸ್ಥಾಯಿ ಸಮಿತಿಗಳಲ್ಲಿ ಕಾರ್ಯಮಾಡಿ ಮೆಚ್ಚುಗೆಯನ್ನು ಗಳಿಸಿದರು. ಅದರಲ್ಲಿ ೧) ರಕ್ಷಣಾ ಸಲಹಾ ಸಮಿತಿ ೨) ಟೆಲಿಕಾಂ ಸಲಹಾ ಸಮಿತಿ ೩) ಗೃಹ ಮಂಡಳಿ ಸಮಿತಿ ೪) ಆರೋಗ್ಯ, ರೇಲ್ವೆ ೫) ಹಿಂದಿ ಪ್ರಸಾರಸಮಿತಿ, ಭಾರತದಲ್ಲಿ ಏಡ್ಸ ಸಮಸ್ಯೆಯ ಕುರಿತು ಅಧ್ಯಯನ ಸಮಿತಿ, ಯೋಜನಾ ಮತ್ತು ವಾಸ್ತುಶಿಲ್ಪಿ ಶಾಲೆಯ ಸಾಮಾನ್ಯ ಸಮಿತಿ ಇತ್ಯಾದಿ. ಮತ್ತು ಸಂಸದರ ನಿಧಿಯಿಂದ ಬಸ್ ನಿಲ್ದಾಣ, ಸಮುದಾಯ ಭವನ, ಮಂದಿರ ನಿರ್ಮಾಣ, ಗ್ರಾಮೀಣ ರಸ್ತೆಗಳು, ಶಾಲಾ ಕೋಣೆಗಳು ಮತ್ತು ಕಂಪೌಂಡಗಳಿಗೆ ವಿನಿಯೋಗಿಸಿ ಸಮಾಜದ ಜನರಿಂದ ಹೊಗಳಿಕೆಗೆ ಪಾತ್ರರಾದರು. ೧೯೯೬ ರ ಬೆಳಗಾವಿ ಲೋಕಸಭಾ ಚುನಾವಣೆಯಲ್ಲಿ ಜನತಾದಳದ ಅಲೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ವಲ್ಪ ಮತಗಳಿಂದ ಸೋಲನ್ನು ಕಂಡರು. ಇಲ್ಲಿ ಹಾಲಿ ಸಂಸದರಾದ ಶ್ರೀ ಎಸ್. ಬಿ. ಸಿದ್ನಾಳರಿಗೆ ಟಿಕೇಟ ನಿರಾಕರಿಸಿ ಕೋರೆಯವರಿಗೆ ಪಕ್ಷದ ಟಿಕೆಟ್‌ನ್ನು ನೀಡಲಾಗಿತ್ತು. ಅಷ್ಟೊಂದು ಪ್ರಭಾವ ಪಕ್ಷದ ಹೈಕಮಾಂಡಿನಲ್ಲಿ ಶ್ರೀ ಕೋರೆಯವರು ಹೊಂದಿದ್ದರು. ನಂತರ ೨೦೦೨ ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾದರು. ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನಾನುರಾದರು.

೧೯೭೬ ರಿಂದ ೨೦೦೮ರ ವರೆಗೆ ಅಖಿಲ್ ಭಾರತ ಕಾಂಗ್ರೇಸ್ ಸಮಿತಿಯ ಸಕ್ರೀಯ ಸದಸ್ಯರಾಗಿ ಆ ಪಕ್ಷಕ್ಕೆ ಅಮೂಲ್ಯವಾದ ಕೊಡುಗೆ ನೀಡಿದರು. ಎಐಸಿಸಿಯ ಚುನಾವಣಾ ಸಮಿತಿಯ ನೀರಿಕ್ಷಕರಾಗಿ ಗೋವಾ ರಾಜ್ಯದಲ್ಲಿ ೧೯೯೭, ೧೯೯೯ ಮತ್ತು ೨೦೦೨ ರಲ್ಲಿ ಕಾರ್ಯ ನಿರ್ವಹಿಸಿದರು. ೧೯೯೯ ಕರ್ನಾಟಕ ರಾಜ್ಯ ವಿಧಾನಸಭೆಯ ಉತ್ತರ ಕರ್ನಾಟಕದ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ಸಮಿತಿಯ ನೀರಿಕ್ಷಕರ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಈ ಹಂತದಲ್ಲಿಯೇ ಅಖಿಲ ಭಾರತ ಸಕ್ಕರೆ ಕಾರ್ಖಾನೆಯ ಮಹಾಮಂಡಲದ ನಿರ್ದೇಶಕರಾಗಿ, ಕಾರ್ಯ ನಿರ್ವಹಿಸಿದರು. ಕಾಂಗ್ರೆಸ್ ಪಕ್ಷದ ಕಟ್ಟಾ ಅನುಯಾಯಿಗಳಾದ ಇವರು ೧೯೮೩ ರಿಂದ ೧೯೯೬ರ ವರೆಗೆ ಬಿ. ಶಂಕರಾನಂದರು. ಚಿಕ್ಕೋಡಿ ಕ್ಷೇತ್ರದಲ್ಲಿ ಗೆಲ್ಲಲು ಶ್ರಮಿಸಿದರು. ಕಾಂಗ್ರೆಸ್ ಪಕ್ಷದಲ್ಲಿಯೇ ಕೇಂದ್ರ ಸಚಿವರಾಗಿದ್ದು, ಬಿ. ಶಂಕರಾನಂದ, ವಿರೇಂದ್ರ ಪಾಟೀಲ, ಶರದ ಪವಾರ, ಎಸ್. ಎಂ. ಕೃಷ್ಣ ಮುಂತಾದವರ ಆತ್ಮೀಯ ವಲಯದಲ್ಲಿ ಗುರುತಿಸಿಕೊಂಡಿದ್ದರು. ಬಿ. ಶಂಕರಾನಂದ, ರಾಜಕೀಯದಲ್ಲಿ ಒಂದು ಅರ್ಥದಲ್ಲಿ ಕೋರೆ ಅವರಿಗೆ ಗಾಡಫಾದರ ಆಗಿದ್ದರು. ಕಾಂಗ್ರೆಸ್‌ನ ನಾಯಕ ದಿ. ರಾಜೀವಗಾಂಧೀ ಮುಂದೆ ಪಿ. ವಿ. ನರಸಿಂಹರಾವ ಶ್ರೀಮತಿ ಸೋನಿಯಾ ಗಾಂಧೀಯವರೊಂದಿಗೆ ನಿಕಟ ಸಂಪರ್ಕವನ್ನು ಮುಂದುವರಿಸಿದರು. ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಒಂದು ಶಕ್ತಿಯುತ ಪಕ್ಷವಾಗಿ ಬೆಳೆಯಲು ಇವರು ಕಾರಣವಾದರು.[೧೬]

ಬೆಳಗಾವಿ ಜಿಲ್ಲೆಯಲ್ಲಿ ವಿಶೇಷವಾಗಿ ಚಿಕ್ಕೋಡಿ ಭಾಗದಲ್ಲಿ ಅನೇಕ ಯುವ ನಾಯಕರು ಬೆಳೆದು ಬರಲು ಶ್ರೀ ಕೋರೆಯವರು ಕಾರಣವಾಗಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಶ್ರೀ ಪ್ರಕಾಶ ಹುಕ್ಕೇರಿ, ಮಹಾಂತೇಶ ಕವಟಗಿಮಠ, ವೀರಕುಮಾರ ಪಾಟೀಲ ಕಾಕಾಸಾಹೇಬ ಪಾಟೀಲ, ಶಹಾಜಹಾನ ಡೋಂಗರಗಾಂವ ಮೊದಲಾದ ಅನೇಕರು

ಬೆಳೆದು ನಾಯಕರಾಗಿ ರೂಪುಗೊಂಡಿದ್ದಾರೆ.

೨೦೦೮ರಲ್ಲಿ ಕರ್ನಾಟಕ ವಿಧಾನ ಸಭೆಯ ಚುನಾವಣೆಯಲ್ಲಿ ಚಿಕ್ಕೋಡಿ ಕ್ಷೇತ್ರದಿಂದ ಪಕ್ಷದ ಟಿಕೆಟ್ ಬಯಸಿದ್ದರು. ಅದು ಸಹಜವೂ ಆಗಿತ್ತು. ಏಕೆಂದರೆ ಚಿಕ್ಕೋಡಿ ತಾಲೂಕಿನಲ್ಲಿ ಶ್ರೀ ಕೋರೆಯವರು ಸಾಕಷ್ಟು ಜನಪರ ಕಾರ್ಯವನ್ನು ಮಾಡಿದ್ದರು. ಅದು ಮೀಸಲು ಕ್ಷೇತ್ರವಾಗಿದ್ದರಿಂದ, ಸ್ಪರ್ಧಿಸಲು ಅವಕಾಶ ಇರಲಿಲ್ಲ. ಆದರೆ ೨೦೦೮ರಲ್ಲಿ ಸಾಮಾನ್ಯ ಕ್ಷೇತ್ರವಾಗಿ ಬದಲಾವಣೆ ಹೊಂದಿದ ಮೇಲೆ ಸಹಜವಾಗಿ ಕಾಂಗ್ರೆಸ್ ಪಕ್ಷದ ಟಿಕೇಟ್ ನೀರಿಕ್ಷೆಯಲ್ಲಿ ಇದ್ದರು. ಆದರೆ ಪಕ್ಷ ಹಾಲಿ ಶಾಸಕರು ಎನ್ನುವ ಕಾರಣದಿಂದ ಪ್ರಕಾಶ ಹುಕ್ಕೇರಿ ಅವರಿಗೆ ಟಿಕೆಟ್ ನೀಡಿತು. ಇದರಿಂದ ಸ್ವಲ್ಪ ಬೇಸರವಾದರು. ಪಕ್ಷದ ಹಿತದ ದೃಷ್ಟಿಯಿಂದ ಪ್ರಕಾಶ ಹುಕ್ಕೇರಿಯವರ ಪರ ಕಾರ್ಯವನ್ನು ಮನಸ್ಸಿನಿಂದ ಮಾಡಿ ಅವರು ಗೆಲ್ಲಲು ಕಾರಣವಾದರು. ೨೦೦೬ರಲ್ಲಿ ಆಗಿನ ಜೆ.ಡಿ.ಎಸ್., ಬಿ.ಜೆ.ಪಿ. ಮೈತ್ರಿಕೂಟದ ಸರ್ಕಾರ ಬೆಳಗಾವಿಯಲ್ಲಿ ವಿಶೇಷ ವಿಧಾನಮಂಡಲದ ಅಧಿವೇಶನವನ್ನು ನಡೆಸಲು ನಿರ್ಣಯಿಸಿದಾಗ, ಕೋರೆ ಅವರು ಸಾರಥ್ಯ ವಹಿಸಿ ಕೆ.ಎಲ್.ಇ. ಸಂಸ್ಥೆಯಲ್ಲಿ ಸ್ಥಳಾವಕಾಶವನ್ನು ಕೊಡಲು ಮುಂದಾಗಿ ಸ್ವ ಪಕ್ಷದಿಂದಲೇ ಅದಕ್ಕೆ ವಿರೋಧ ಬಂತು ಅಂದರೆ ಈ ಅಧಿವೇಶನದ ಶ್ರೇಯಸ್ಸು ಆ ಪಕ್ಷಗಳಿಗೆ ಹೋಗುತ್ತದೆ. ನೀವು ಅನುಕೂಲ ಕಲ್ಪಿಸಬಾರದು ಎಂದು ಆಜ್ಞೆಯನ್ನು ಹೊರಡಿಸಿದರು. ಅದನ್ನು ಕೋರೆಯವರು ಲೆಕ್ಕಿಸದೆ ಉತ್ತರ ಕರ್ನಾಟಕದ ಅಭಿವೃದ್ಧಿಯಾಗುತ್ತದೆ ಎಂದಾದರೆ ನನಗೆ ಪಕ್ಷಕ್ಕಿಂತ ಜನ ಮತ್ತು ಪ್ರದೇಶವು ಮುಖ್ಯವಾದದ್ದು ಎಂದು ಅದನ್ನು ನಿರಾಕರಿಸಿ ಅಧಿವೇಶನದ ಯಶಸ್ಸಿಗೆ ಶ್ರಮಿಸಿದರು. ಇದರಿಂದ ಕಾಂಗ್ರೇಸ್ ಪಕ್ಷದಿಂದ ಸ್ವಲ್ಪ ಹಿಂದಕ್ಕೆ ಸರಿಯಲು ಪ್ರಾರಂಭಿಸಿದರು. ೨೦೦೮ರ ರಾಜ್ಯ ಸಭೆಯ ಚುನಾವಣೆಯಲ್ಲಾದರೂ ಪಕ್ಷ ಟಿಕೇಟ್ ಕೊಡುತ್ತದೆ ಎಂದು ನೀರೀಕ್ಷಿಸಿದ್ದ ಕೋರೆ ಅವರಿಗೆ ಅಲ್ಲಿಯೂ ನಿರಾಶೆಯೇ ಕಾದಿತ್ತು. ಇದನ್ನು ಅರಿತು ಭಾರತೀಯ ಜನತಾ ಪಕ್ಷದ ನಾಯಕರು ಉತ್ತರ ಕರ್ನಾಟಕದಲ್ಲಿ ಪಕ್ಷಕ್ಕೆ ಒಬ್ಬ ಸಮರ್ಥ ನಾಯಕರ ಅವಶ್ಯಕತೆ ಇದೆ ಎಂದು ಮನಗಂಡು ಪ್ರಭಾಕರ ಕೋರೆ ಅವರನ್ನು ಪಕ್ಷಕ್ಕೆ ಕರೆತಂದು ೨೦೦೮ರಲ್ಲಿ ರಾಜ್ಯಸಭಾ ಸದಸ್ಯರನ್ನಾಗಿ ಮಾಡಿ ರಾಜ್ಯದಲ್ಲಿ ಪಕ್ಷದ ಹಿರಿಯ ಉಪಾಧ್ಯಕ್ಷರನ್ನಾಗಿ ಮಾಡಿತು. ಅಲ್ಲಿಂದ ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷದ ಅವನತಿ ಆರಂಭವಾಯಿತು. ಮುಂದೆ ನಡೆದ ವಿಧಾನ ಪರಿಷತ್ತಿನ ಉಪಚುನುವಣೆಯಲ್ಲಿ, ಶಶಿಕಾಂತ ನಾಯಕರನ್ನು ಗೆಲ್ಲಿಸುವಲ್ಲಿ ಕೋರೆಯವರು ನಿರ್ಣಾಯಕ ಪಾತ್ರವನ್ನು ವಹಿಸಿದರು. ಮುಂದೆ ಧಾರವಾಡ ಪದವಿದರ ಕ್ಷೇತ್ರಕ್ಕೆ ನಡೆದ ಚುನಾವಣೆ ಕಾಂಗ್ರೆಸ್ಸಿನ ಪ್ರಬಲ ಅಭ್ಯರ್ಥಿಯಾಗಿದ್ದ ಶ್ರೀ ಎಚ್. ಕೆ. ಪಾಟೀಲರನ್ನು ಸೋಲಿಸಿ ಶ್ರೀ ಮೋಹನ ಲಿಂಬಿಕಾಯಿಯವರು ಆಯ್ಕೆಗೊಳ್ಳಲು ಕಾರಣವಾದರು.

೨೦೦೯ರ ಸಾರ್ವತ್ರಿಕ ಚುನಾವಣೆಯಲ್ಲಿ ಬೆಳಗಾವಿ ಮತ್ತು ಚಿಕ್ಕೋಡಿಯ ಎರಡು ಲೋಕಸಭಾ ಕ್ಷೇತ್ರಗಳನ್ನು ಬಿ.ಜೆ.ಪಿ. ಪಕ್ಷ ಗೆಲ್ಲುವಂತೆ ನೋಡಿಕೊಂಡರು.[೧೭] ೨೦೦೯ರಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ತಮ್ಮ ಆಪ್ತ ಶಿಷ್ಯರೆಂದು ಗುರುತಿಸಲ್ಪಟ್ಟ ಶ್ರೀ ಮಹಾಂತೇಶ ಕವಟಗಿಮಠರಿಗೆ ಪಕ್ಷದ ಟಿಕೆಟ್ ಕೊಡಿಸಿ ಗೆಲ್ಲಿಸಿದರು. ಹೀಗೆ ಬೆಳಗಾವಿ, ಚಿಕ್ಕೋಡಿ ಭಾಗದಲ್ಲಿ ಬಿ.ಜೆ.ಪಿ. ಪಕ್ಷದ ನೆಲೆಯನ್ನು ಭದ್ರಗೊಳಿಸಲು

ಕಾರಣವಾದರು. ಇದರಿಂದಾಗಿ ಕಾಂಗ್ರೆಸ್ ಪಕ್ಷವು ಸಾಕಷ್ಟು ಹಾನಿಯನ್ನು ಅನುಭವಿಸಬೇಕಾಯಿತು.

ಹೀಗೆ ಶ್ರೀ ಪ್ರಭಾಕರ ಕೋರೆ ಅವರು ಉತ್ತರ ಕರ್ನಾಟಕದ ರಾಜಕೀಯದಲ್ಲಿ ತಮ್ಮದೆ ಆದ ವಿಶಿಷ್ಟ ಛಾಪು ಬೀರಿದವರು. ಸದ್ಯ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಯ ಮಹಾಮಂಡಲದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು; ಅವರು ನಾಯಕತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಅವರ ರಾಜಕೀಯ ಕ್ಷೇತ್ರದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಬಹುದಿತ್ತು. ಆದರೆ ರಾಜಕೀಯವನ್ನು ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಗೆ ಬಳಸಿಕೊಂಡು ಸಮಾಜದಲ್ಲಿ ಸದಾಕಾಲ ಉಳಿಯುವ ಚಿರಸ್ಥಾಯಿ ಕಾರ್ಯಗಳನ್ನು ಮಾಡಿ ವಿಶಿಷ್ಟ ಬಗೆಯ ರಾಜಕೀಯ ನಾಯಕರೆನಿಸಿಕೊಂಡವರು ಡಾ॥ ಪ್ರಭಾಕರ ಕೋರೆ ಅವರು.[೧೮]

ಡಾ. ಪ್ರಭಾಕರ ಕೋರೆಯವರ ದಿನಚರಿ :

ಮನುಷ್ಯ ಎತ್ತರದ ಸ್ಥಾನಕ್ಕೆ ಏರಲು ಅವರು ಸಮಯಕ್ಕೆ ನೀಡಿದ ಮಹತ್ವ ಪ್ರಮುಖವಾಗಿರುತ್ತದೆ. ಇದನ್ನು ಮನಗಂಡಿರುವ ಕೋರೆಯವರು ವಿನಾಕಾರಣ ಸಮಯವನ್ನು ಹಾಳು ಮಾಡುವುದಿಲ್ಲ. ಸದಾ ಕ್ರಿಯಾಶೀಲರಾಗಿರುತ್ತಾರೆ. ಇದು ಅವರ ಯಶಸ್ವಿನ ಹಿಂದಿನ ಗುಟ್ಟು.

ಬೆಳಿಗ್ಗೆ ೫.೩೦ ರಿಂದ ಪ್ರಾರಂಭವಾಗುವ ಅವರ ದಿನಚರಿ ಹೀಗಿದೆ. ಬೆಳಿಗ್ಗೆ ೫.೩೦ಕ್ಕೆ ಏಳುವದು, ನಂತರ ೬.೪೫ರ ವರೆಗೆ ವಾಯುವಿಹಾರ ವ್ಯಾಯಾಮ ನಿತ್ಯಕಾರ್ಯ. ಸ್ವಂತ ಊರಾದ ಅಂಕಲಿಯಲ್ಲಿ ಇದ್ದಾಗ ಹೊಲಗದ್ದೆಗಳಲ್ಲಿ ವಾಯುವಿಹಾರದ ಜೊತೆಗೆ ಬೆಳೆಗಳ ಬಗ್ಗೆ ಕಾಳಜಿ ವಹಿಸುವುದು, ಬೆಳಗಾವಿಯಲ್ಲಿ ಇದ್ದಾಗ ಕ್ಯಾಂಪ ಪ್ರದೇಶದಲ್ಲಿ ವಾಯುವಿಹಾರ. ಈ ಸಮಯದಲ್ಲಿ ಸ್ನೇಹಿತರೊಂದಿಗೆ ವಿಚಾರ ವಿನಿಮಯವನ್ನು ಮಾಡುವುದು. ನಂತರ ೭ ಗಂಟೆಯಿಂದ ೧೦ ಗಂಟೆಯವರೆಗೆ ಚಹಾ ಕುಡಿಯುತ್ತ, ದಿನಪತ್ರಿಕೆಗಳನ್ನು ಓದುತ್ತಾ ತಮ್ಮನ್ನು ಕಾಣಲು ಬಂದ ಜನರ ಸಮಸ್ಯೆಗಳನ್ನು ಆಲಿಸುವುದು. ೧೦ ರಿಂದ ೧೧ ಸ್ನಾನ, ಪೂಜೆ ಮತ್ತು ಉಪಹಾರ ಸೇವನೆಯನ್ನು ಮಾಡಿ ಮನೆಯಿಂದ ಹೊರಟು ಕಛೇರಿ ಕೆಲಸ ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಭಾಗಿಯಾಗುವುದು, ಮಧ್ಯಾಹ್ನ ೨.೩೦ ಸುಮಾರಿಗೆ ಊಟ, ಮತ್ತೆ ಕಾರ್ಯಾಲಯ, ಆಸ್ಪತ್ರೆಗಳ ಉಸ್ತುವಾರಿ, ರಾತ್ರಿ ೮ ಗಂಟೆವರೆಗೆ, ನಂತರ ಟಿ.ವ್ಹಿ. ವೀಕ್ಷಣೆ, ವಾರ್ತೆಗಳನ್ನು ಕೇಳುವುದು ಮತ್ತು ಜಗತ್ತಿನಲ್ಲಿನ ಬದಲಾವಣೆಗಳನ್ನು ಗಮನಿಸುವುದು. ಒಳ್ಳೆಯ ಪುಸ್ತಕಗಳನ್ನು ಓದುವುದು. ೯ ರಿಂದ ೧೦.೩೦ ರವರೆಗೆ ಆಪ್ತರೊಂದಿಗೆ, ರಾಜಕೀಯ ನಾಯಕ ಮಿತ್ರರೊಂದಿಗೆ ದೂರವಾಣಿ ಸಂಭಾಷಣೆಯನ್ನು ನಡೆಸುವುದು ನಂತರ ಊಟ ಮಾಡಿ ೧೧.೩೦ಕ್ಕೆ ಮಲಗುವುದು. ಹೀಗೆ ವೇಳೆಗೆ ಸರಿಯಾಗಿ ಆಯಾ ಕೆಲಸವನ್ನು ಮಾಡುವ ಇವರು ವೇಳೆಯನ್ನು ಸರಿಯಾಗಿ ಸದುಪಯೋಗ ಪಡಿಸಿಕೊಂಡಿದ್ದರ ಫಲವಾಗಿ ಇವತ್ತು ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ.[೧೯]

ಕೋರೆ ಅವರ ಕಾರ್ಯಸಾಧನೆಗಳಿಂದ ಒಲಿದು ಬಂದ ಸ್ಥಾನಮಾನಗಳು :

೧. ಗೋಗಟೆ ವಾಣಿಜ್ಯ ಮಹಾವಿದ್ಯಾಲಯದ ಕಾಲೇಜು, ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ

೨. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನಿಂದ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ Expo-೭೦ ಜಪಾನ ಪ್ರದರ್ಶನದಲ್ಲಿ ಭಾಗವಹಿಸಿದ್ದು.

೩. ಸಕ್ರಿಯ ಸದಸ್ಯರು ಅಖಿಲ ಭಾರತ ಕಾಂಗ್ರೆಸ ಸಮಿತಿ ೧೯೭೫ ರಿಂದ ೨೦೦೮ರ ವರೆಗೆ.

೪. ನಿಪ್ಪಾಣಿ – ಬೀಡಿ, ತಂಬಾಕು, ವರ್ತಕರ ಕಾರ್ಮಿಕ ಸಂಘದ ಸಂಸ್ಥಾಪಕ ಅಧ್ಯಕ್ಷರು.

೫. ಅಂಕಲಿಯ ಏಜ್ಯುಕೇಶನ್ ಸೊಸೈಟಿಯ ಕಾರ್ಯದರ್ಶಿ ೧೯೮೧.

೬. ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕರಾಗಿ ಉಪಚುನಾವಣೆಯಲ್ಲಿ ಅತ್ಯಧೀಕ ಮತಗಳಿಂದ ಆಯ್ಕೆ ೧೯೮೩.

೭. ಸದಲಗಾ ವಿಧಾನ ಸಭೆಯಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧೆ ಕೂದಲೆಳೆ ಅಂತರದಿಂದ ಸೋಲು.

೮. ಕೆ.ಎಲ್.ಇ. ಸಂಸ್ಥೆಗೆ ನಡೆದ ೧೯೮೪ ರ ಚುನಾವಣೆಯಲ್ಲಿ ನಿರ್ದೇಶಕರಾಗಿ ಅಯ್ಕೆ. ನಂತರ ಎಲ್ಲ ನಿರ್ದೇಶಕರ ಒಮ್ಮತದಿಂದ ಕಾರ್ಯಾಧ್ಯಕ್ಷರಾಗಿ ಅವಿರೋಧ ಆಯ್ಕೆ. ಆಗ ಅವರಿಗೆ ಕೇವಲ ೩೭ರ ಪ್ರಾಯ. ಅಲ್ಲಿಂದ ಸದ್ಯದ ವರೆಗೆ ಅಂದರೆ ೨೦೧೦ರ ವರೆಗೆ ಸತತವಾಗಿ ೬ನೇ ಬಾರಿಗೆ ಕಾರ್ಯಾಧ್ಯಕ್ಷರಾಗಿ ಅವಿರೋಧ ಆಯ್ಕೆ.

೯. ಚಿಕ್ಕೋಡಿಯ ರೋಟರಿ ಕ್ಲಬ್ ಸದಸ್ಯರಾಗಿ ಸಕ್ರಿಯ ಪಾತ್ರ ಕಾರ್ಯನಿರ್ವಹಣೆ.

೧೦. ಭಾರತೀಯ ರಾಷ್ಟ್ರೀಯ ಕಾಂಗೆಸ್ ಪಕ್ಷದಿಂದ ಕರ್ನಾಟಕದ ಪ್ರತಿನಿಧಿಯಾಗಿ ರಾಜ್ಯಸಭೆಯ ಸದಸ್ಯರಾಗಿ ಆಯ್ಕೆ ೧೯೯೨. ಈ ಅವಧಿಯಲ್ಲಿ ಸಂಸದೀಯ ವಿವಿಧ ಸ್ಥಾಯೀ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಣೆ ಅವುಗಳು ಹೀಗಿವೆ–

ರಾಜ್ಯಸಭಾ ಸದಸ್ಯರಾಗಿ ವಿವಿಧ ಸ್ಥಾಯಿ ಸಮಿತಿಗಳಲ್ಲಿ ಸೇವೆ :

೧) ರಕ್ಷಣಾ ಸಲಹಾ ಸಮಿತಿ ೨) ಟೆಲಿಕಾಂ ಸಲಹಾ ಸಮಿತಿ ೩) ಗೃಹ ಮಂಡಳಿ ಸಮಿತಿ ೪) ಆರೋಗ್ಯ ಸಮಿತಿ ೫) ರೇಲ್ವೆ ಇಲಾಖೆಯ ಸ್ಥಾಯಿ ಸಮಿತಿ ೬) ಹಿಂದಿ ಪ್ರಸಾರ ಸಮಿತಿ ೭) ಭಾರತದಲ್ಲಿ ಏಡ್ಸ ಸಮಸ್ಯೆಯ ಕುರಿತು ಅಧ್ಯಯನ ಸಮಿತಿ ೮) ಯೋಜನಾ ಮತ್ತು ವಾಸ್ತುಶಿಲ್ಪ ಶಾಲೆಯ ಸಾಮಾನ್ಯ ಪರಿಷತ್ತಿನ ಹೀಗೆ ವಿವಿಧ ಸಂಸದೀಯ ಸಮಿತಿಗಳಲ್ಲಿ ದೇಶಕ್ಕೆ ಸೇವೆ ಸಲ್ಲಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. ೯) ಸಂಸದರ ನಿಧಿಯಿಂದ ಬಸ್ ನಿಲ್ದಾಣ, ಮಂದಿರ, ಸಮುದಾಯ ಭವನ, ರಸ್ತೆ ಹೀಗೆ ಕಾರ್ಯಮಾಡಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

೧೧. ಚಿಕ್ಕೋಡಿ ಶ್ರೀ ದೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ನಿ. ಚಿಕ್ಕೋಡಿ ಇದರ ನಿರ್ದೇಶಕರಾಗಿ.

ನಂತರ ಅಧ್ಯಕ್ಷರಾಗಿ ಅಯ್ಕೆ. ೧೯೯೨ರ ಈ ಅವಧಿಯಲ್ಲಿಯೇ ದಕ್ಷಿಣ ಭಾರತದ ಶ್ರೇಷ್ಠ ಸಹಕಾರಿ ಸಕ್ಕರೆ ಕಾರ್ಖಾನೆ ಎಂಬ ಗೌರವ. ೧೯೯೪ ರಲ್ಲಿ ಕಾರ್ಖಾನೆಗೆ ಪ್ರಶಸ್ತಿ ಬಂದಿದೆ.

೧೨. ಅಖಿಲ ಭಾರತ ಸಕ್ಕರೆ ಕಾರ್ಖಾನೆಗಳ ಮಹಾಮಂಡಲದ ನಿರ್ದೇಶಕರಾಗಿ ಆಯ್ಕೆ.

೧೩. ಉತ್ತರ ಕರ್ನಾಟಕ ಚಿತ್ರ ಪ್ರದರ್ಶನದ ಸಂಘದ ಸದಸ್ಯರಾಗಿ ಸಕ್ರೀಯ ಪಾತ್ರ ನಿರ್ವಹಣೆ.

೧೪. ಕರ್ನಾಟಕ ಫಿಲ್ಮ ಚೆಂಬರ್ ಆಫ್ ಕಾಮರ್ಸದ ಸದಸ್ಯರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೧೫. ನಿರ್ದೇಶಕರು ಭಾರತೀಯ ಸಹಕಾರಿ ಕೈಗಾರಿಕೆಗಳ ಆಮದು, ರಫ್ತು ನಿಯಮಿತ, ನವದೆಹಲಿ.

೧೬. ನಿರ್ದೇಶಕರು, ರಾಜಕುಮಾರ ಫೋರ್ಜ ಲಿ., ಪುಣೆ.

೧೭. ಮುಖ್ಯ ಪ್ರವರ್ತಕರು ಉದ್ದೇಶಿತ ಶಿವಶಕ್ತಿ ಶುಗರ್ಸ ಲಿ. ಸೌಂದತ್ತಿ ತಾ. ರಾಯಭಾಗ, ಜಿ. ಬೆಳಗಾವಿ.

೧೮. ಜಂಟಿ ಪ್ರವರ್ತಕರು, ವಿಶ್ವ ಕಲ್ಯಾಣ ಬ್ಯಾಂಕ ಮತ್ತು ಸ್ಥಳೀಯ ಬ್ಯಾಂಕ (ಅಭಿಯಾಂತ್ರಿಕ ಸಂಸ್ಥೆ)

೧೯. ಅಧ್ಯಕ್ಷರು, ಎಸ್. ನಿಜಲಿಂಗಪ್ಪ, ವೈದ್ಯಕೀಯ ಶಿಕ್ಷಣ ಸಂಸ್ಥೆ ಅಖಿಲ್ ಭಾರತ ಮಟ್ಟದಲ್ಲಿ, ನವದೆಹಲಿ.

೨೦. ಅಧ್ಯಕ್ಷರು, ಲಾರ್ಡ ಬಸವೇಶ್ವರ ಶಿಕ್ಷಣ ಸಂಸ್ಥೆ, ನವದೆಹಲಿ.

೨೧. ಉಪಾಧ್ಯಕ್ಷರು, ಅಖಿಲ್ ಭಾರತ ಖಾಸಗಿ ವೈದ್ಯಕೀಯ ಶಿಕ್ಷಣ ಕಾಲೇಜುಗಳ ಹಾಗೇ ಖಾಸಗಿ ಅಭಿಯಾಂತ್ರಿಕ ಕಾಲೇಜುಗಳ ಸಂಘ, ಬೆಂಗಳೂರು.

೨೨. ಕಾರ್ಯಾಧ್ಯಕ್ಷರು, ಕಾರ್ಯದಳ ಬೆಳಗಾವಿ ಜಿಲ್ಲಾ ಶಿಕ್ಷಣ ಗುಣಮಟ್ಟದ ನಿರ್ವಹಣೆ.

೨೩. ಸದಸ್ಯರು, ಕರ್ನಾಟಕ ವಿಶ್ವ ವಿದ್ಯಾಲಯ ಹಾಗೂ ವಿಶ್ವವಿದ್ಯಾಲಯಗಳ ಉನ್ನತ ಮಂಡಲಿ.

೨೪. ಎಐಸಿಸಿ ಚುನಾವಣಾ ನೀರಕ್ಷಕರು, ಗೋವಾ ರಾಜ್ಯ ವಿಧಾನಸಭೆ ಚುನಾವಣೆ ೧೯೯೭, ೧೯೯೯, ೨೦೦೨ ರಲ್ಲಿ ಕಾಂಗ್ರೇಸ್ ಪಕ್ಷಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ.

೨೫. ೧೯೯೯ ರ ಕರ್ನಾಟಕ ರಾಜ್ಯ ವಿಧನಸಭೆಯ ಚುನಾವಣೆಯಲ್ಲಿ ಉತ್ತರ ಕರ್ನಾಟಕದ ಕಾಂಗ್ರೇಸ್ ಅಭ್ಯರ್ಥಿಗಳ ಆಯ್ಕೆ ಸಮಿತಿಯ ನೀರಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

೨೬. ಸದಸ್ಯರು ಅಖಿಲ್ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು, ನವದೆಹಲಿ.

೨೭. ಭಾರತದ ಸನ್ಮಾನ್ಯ ಉಪರಾಷ್ಟ್ರಪತಿಗಳಾಗಿದ್ದ ಶಂಕರದಯಾಳ ಶರ್ಮಾ ಅವರನ್ನು ಆಮಂತ್ರಿಸಿ ೨೧ನೇ ಅಖಿಲ್ ಭಾರತ ವೀರಶೈವ ಮಹಾಸಭೆಯ ಮಹಾ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ.

೨೮. ಅಖಿಲ ಭಾರತ ವೀರಶೈವ ಮಹಾಸಭೆಯ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೨೯. ಬೆಳಗಾವಿಯಲ್ಲಿ ವೀರಶೈವ ವಧು-ವರ ಅನ್ವೇಷಣೆಯ ಕೇಂದ್ರದ ಸ್ಥಾಪಕರು.

೩೦. ಬೆಳಗಾವಿಯ ರಾಣಿಚನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ ನಿ. ಇದರ ಸ್ಥಾಪಕರು.

೩೧. ಅಂಕಲಿಯ ಡಾ॥ ಪ್ರಭಾಕರಣ್ಣ ಕೋರೆ ಅರ್ಬನ್ ಕೋ ಆಫ್ ಕ್ರೆಡಿಟ್ ಸೊಸೈಟಿಯ ಲಿ. ಹೊಸ ಶಾಖೆಗಳ ಸ್ಥಾಪಕರು.

೩೨. ಮಾಧ್ಯಮ ಸಲಹೆಗಾರರು, ಸಂಜಯಗಾಂಧಿ ಟ್ರಸ್ಟ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಅಮೇಥಿ

೩೩. ಸ್ವಾಗತ ಸಮಿತಿಯ ಅಧ್ಯಕ್ಷರು, ಅಖಿಲ ಭಾರತ ೫ನೇ ಶರಣ ಸಾಹಿತ್ಯ ಸಮ್ಮೇಳನ.

೩೪. ಹೊ. ಬೆಳವಣಿಗೆ, ಹೈನುಗಾರಿಕೆಯಲ್ಲಿ ಶಿಕ್ಷಣ ಕೊಡುವುದರ ಮೂಲಕ ರೈತ ಸಮುದಾಯದ ಕಲ್ಯಾಣ ಕಾರ್ಯದಲ್ಲಿ ಸಕ್ರಿಯ ಪಾತ್ರ.

೩೫. ನಿಮ್ನ ವರ್ಗದ ಜೀವನಮಟ್ಟವನ್ನು ಹೆಚ್ಚಿಸಲು ಶೈಕ್ಷಣಿಕ ಹಾಗೂ ಕಲ್ಯಾಣಕಾರಿ ಕಾರ್ಯಗಳನ್ನು ನಿರಂತರವಾಗಿ ಹಮ್ಮಿಕೊಂಡವರು.

೩೬. ಕರ್ನಾಟಕ ರಾಜ್ಯ ವಿಧಾನಮಂಡಲದ ಮೇಲ್ಮನೆಯಾದ ವಿಧಾನ ಪರಿಷತ್ತಿಗೆ ೨೦೦೨ರಲ್ಲಿ ಕಾಂಗ್ರೇಸ್ ಪಕ್ಷದಿಂದ ಆಯ್ಕೆ.

೩೭. ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರು ೨೦೦೩ ರಲ್ಲಿ ಜರುಗಿದ ಅಖಿಲ್ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿ.

೩೮. ೧೨೦ ಕೋಟಿ ರೂಪಾಯಿ ವೆಚ್ಚದಲ್ಲಿ ಈಗ ದೇಶದಲ್ಲಿಯೇ ಎರಡನೆಯ ಬೃಹತ್ ೧೦೦೦ ಹಾಸಿಗೆಗಳ ಅತ್ಯಾಧುನಿಕ ಕೆ.ಎಲ್.ಇ. ಆಸ್ಪತ್ರೆಯನ್ನು ಸ್ಥಾಪಿಸಿದ ಹಿರಿಮೆ ಕೋರೆ ಅವರದು.

೩೯. ಸಪ್ಟೆಂಬರ್ ೫-೨೦೦೬ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಶಿಕ್ಷಕರ ಪ್ರಶಸ್ತಿ ಪ್ರಧಾನ ಸಮಾರಂಭದ ಸಾರಥ್ಯ.

೪೦. ೨೦೦೬ ಸಪ್ಟೆಂಬರ್ ೨೫ ರಿಂದ ೨೯ರ ವರೆಗೆ ಐತಿಹಾಸಿಕ ಬೆಳಗಾವಿ ವಿಧಾನ ಮಂಡಲದ ವಿಶೇಷ ಅಧಿವೇಶನಕ್ಕೆ ಸಾಂಘಿಕ ಮುಂದಾಳತ್ವ ಮತ್ತು ೨೦೦೮ ರಲ್ಲಿ ಪುನಃ ಎರಡನೆಯ ಬಾರಿಗೆ ಅದ್ದೂರಿಯಾಗಿ ಅಧಿವೇಶನವನ್ನು ಸಂಘಟಿಸಿದ ಹಿರಿಮೆ ಕೋರೆಯವರದ್ದು.

೪೧. ಕೆ.ಎಲ್.ಇ. ಸಂಸ್ಥೆಗೆ ಆಧುನಿಕ ಸ್ಪರ್ಶ ನೀಡಿದ ಹಿರಿಮೆ ಇವರದು. ಕೇವಲ ೩೭ ಅಂಗಸಂಸ್ಥೆಗಳನ್ನು ಹೊಂದಿದ್ದನ್ನು ೨೧೧ಕ್ಕೆ ವಿಸ್ತರಿಸಿ ವಿಶ್ವವಿದ್ಯಾಲಯದ ಸ್ಥಾನಮಾನ ಸಿಗುವಂತೆ ಮಾಡಿ. ಹೊಸ ಕೋರ್ಸಗಳಾದ

ಫಾರ್ಮಸಿ, ನರ್ಸಿಂಗ್, ಹೋಟೆಲ್ ಮ್ಯಾನೇಜಮೆಂಟ್, ಶಿಕ್ಷಣ ಕಾಲೇಜು, ದಂತ ವಿಜ್ಞಾನ, ವ್ಯವಹಾರ ನಿರ್ವಹಣೆ, ತಾಂತ್ರಿಕ ಕೃಷಿ ಸಂಶೋಧನೆ ಮತ್ತು ತರಬೇತಿ ಕೇಂದ್ರ, ಫ್ಯಾಶನ್ ಟೆಕ್ನಾಲಜಿ, ಕಾನೂನು ಹೀಗೆ ೧೮೦ ಕ್ಕೆ ಹೆಚ್ಚು ಅಂಗ ಸಂಸ್ಥೆಗಳನ್ನು ಸ್ಥಾಪಿಸಿದ ಕೀರ್ತಿ ಕೋರೆಯವರದು. ಇವತ್ತು ೭೨ ಸಾವಿರ ವಿದ್ಯಾರ್ಥಿಗಳನ್ನು ಅವರಿಗೆ ೯ ಸಾವಿರ ಸಿಬ್ಬಂದಿಯನ್ನು ಹೊಂದುವಂತೆ ಮಾಡಿದ ಇವರು ಕೆ.ಎಲ್.ಇ. ಸಂಸ್ಥೆಗೆ ಜಾಗತಿಕ ನಕ್ಷೆಯಲ್ಲಿ ಮಿನುಗುವಂತೆ ಮಾಡಿದ್ದಾರೆ.

೪೨. ಕೆ.ಎಲ್.ಇ. ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೪೩. ೨೦೦೮ ರಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಿಂದ ಭಾರತೀಯ ಜನತಾ ಪಕ್ಷದಿಂದ ಎರಡನೆಯ ಬಾರಿಗೆ ಕರ್ನಾಟಕದಿಂದ ಸಂಸತ್ತಿನ ಮೇಲ್ಮನೆಯಾದ ರಾಜ್ಯ ಸಭೆಗೆ ಆಯ್ಕೆ.

೪೪. ಕರ್ನಾಟಕ ರಾಜ್ಯ ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಹಿರಿಯ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೪೫. ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಲ, ನವದೆಹಲಿ ಇದರ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

೪೬. ಕೆಲ ವರ್ಷಗಳಿಂದ ರಮಣಶ್ರೀ ಹೋಟೇಲುಗಳ ಸಮೂಹ, ಬೆಂಗಳೂರು ಇದರ ನಿರ್ದೇಶಕರಾಗಿಯೂ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

೪೭. ವಿಜಯಾನಂದ (VRL) ಲಾಜಿಸ್ಟಿಕ್‌ನ ನಿರ್ದೇಶಕರು.

೪೮. ಸತತವಾಗಿ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಅವಿರೋಧವಾಗಿ ಪುನರ್ ಆಯ್ಕೆಯಾಗುವ ಮೂಲಕ, ಈ ಸ್ಥಾನವನ್ನು ಸುದೀರ್ಘ ಅವಧಿಯವರೆಗೆ ಪಡೆಯುತ್ತಿರುವ ಗೌರವಕ್ಕೆ ಶ್ರೀ ಪ್ರಭಾಕರ ಕೋರೆಯವರು ಪಾತ್ರರಾಗಿದ್ದಾರೆ.[೨೦]

ಸಂಘ ಸಂಸ್ಥೆಗಳು ಇವರು ಸೇವೆಯನ್ನು ಗುರುತಿಸಿ ಪ್ರಶಸ್ತಿ ಪುರಸ್ಕಾರ ಮತ್ತು ಸಂಘ-ಸಂಸ್ಥೆಗಳಿಂದ ಸನ್ಮಾನವನ್ನು ಮಾಡಿ ಗೌರವಿಸಿವೆ. ಅವು ಹೀಗಿವೆ –

೧. ಉತ್ತರ ಅಮೇರಿಕೆಯ ವೀರಶೈವ ಸಮಾಜವು ನೀಡಿರುವ 'ಜೀವಮಾನದ ಸಾಧನೆ'.

೨. ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಾಗಿ 'ಜ್ಯಾಯಂಟ್ ಇಂಟರನ್ಯಾಶನಲ್'ನವರು ನೀಡಿರುವ ಪುರಸ್ಕಾರ – ೨೦೦೪.

೩. ಕರ್ನಾಟಕ ರಾಜ್ಯ ಸರ್ಕಾರದ ಸುವರ್ಣ ರಾಜ್ಯೋತ್ಸವ ಪ್ರಶಸ್ತಿ – ೨೦೦೬.

೪. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಶಿಕ್ಷಣ ಸಾಮಾಜಿಕ ರಂಗದ ವಿಶೇಷ ಸೇವೆಯನ್ನು ಗುರುತಿಸಿ ೫೦ನೇ

ಘಟಕರ್ವೋತ್ಸವದಲ್ಲಿ ನೀಡಿದ ಗೌರವ ಡಾಕ್ಟರೇಟ್ – ೨೦೦೭.

೫. ಮುಗಳಖೋಡ – ಜಿಡಗಾ ಶ್ರೀ ಮಠದ 'ಸಿದ್ಧಶ್ರೀ' ಪ್ರಶಸ್ತಿ (ಒಂದು ಲಕ್ಷ ರೂಪಾಯಿ) ೨೦೦೮ ರಲ್ಲಿ ನೀಡಿ ಗೌರವಿಸಿದೆ.

೬. ಪುಣೆಯ ಕರ್ನಾಟಕ ಸಂಘವು ಗೌರವಿಸಿ ಸನ್ಮಾನಿಸಿದೆ.

೭. ಗೋವಾದ ರೋಟರಿ ಕ್ಲಬ್ ಪ್ರಶಸ್ತಿ ನೀಡಿ ಗೌರವಿಸಿದೆ.

೮. ಆರ್ಯಭಟ ಪ್ರಶಸ್ತಿ, ಬೆಂಗಳೂರು – ೨೦೦೮ ನೀಡಿದ ಪ್ರಶಸ್ತಿ.

೯. ಬಹ್ರೇನ್ ಕನ್ನಡ ಸಂಘ – ೨೦೦೭ ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

೧೦. ಕತಾರ್ ಕನ್ನಡ ಸಂಘ – ೨೦೦೮ ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

೧೧. ನಾಡೋಜ ಪ್ರತಿಷ್ಠಾನದರಿಂದ ಪ್ರಶಸ್ತಿ – ೨೦೦೮ ಬಂದಿದೆ.

೧೨. ಮುಂಬೈ ಮೆಡಿಕಲ್ ಅಸೋಸಿಯೇಶನ್ ಪ್ರಶಸ್ತಿ.

೧೩. ಶ್ರೀ ಮೋಟಗಿಮಠ ಅಥಣಿ – 'ಬಸವ ಭೂಷಣ' ಪ್ರಶಸ್ತಿಯನ್ನು ೨೦೦೭ ರಲ್ಲಿ ನೀಡಿ ಗೌರವಿಸಿದೆ.

೧೪. ಸಿರಿಗನ್ನಡ ರಾಷ್ಟ್ರೀಯ ಪ್ರಶಸ್ತಿ – ೨೦೦೮ ರಲ್ಲಿ ನೀಡಿದೆ.

೧೫. ಕರ್ನಾಟಕ ರಾಜ್ಯೋತ್ಸವ ಸಂಭ್ರಮದಲ್ಲಿ ಗಡಿನಾಡು ಕನ್ನಡಿಗರ ಬಳಗ ಹಾಗೂ ಸಿದ್ಧ ಸಂಸ್ಥಾನ ಮಠ ಚಿಂಚಣಿ. ಕನ್ನಡ ಭಾಷೆಯ ಸಂಸ್ಕೃತಿಯ ಹಾಗೂ ನಾಡು–ನುಡಿಗೆ ಶ್ರೀ ಕೋರೆಯವರು ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಸನ್ಮಾನಿಸಿದೆ.[೨೧]

೧೬. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸಿದವರಿಗೆ ನೀಡಲಾಗುವ 'ಬಸವ ಚೇತನ' ಪ್ರಶಸ್ತಿಯನ್ನು ೨೦೧೦ರಲ್ಲಿ ಡಾ. ಪ್ರಭಾಕರ ಕೋರೆಯವರಿಗೆ ಸಾಮಾಜಿಕ ಶೈಕ್ಷಣಿಕ ಆರೋಗ್ಯ ಸೇವೆಯಲ್ಲಿ ಸಲ್ಲಿಸಿದ ಅನುಪಮ ಸೇವೆಯನ್ನು ಗುರುತಿಸಿ ಹುನ್ನೂರ ಮಧುರ–ಖಂಡಿಯ ಬಸವ ಜ್ಞಾನಗುರುಕುಲ ೨೧–೧–೨೦೧೦ ರಂದು ನೀಡಿ ಗೌರವಿಸಿದೆ.[೨೨]

ಹೀಗೆ ಡಾ॥ ಪ್ರಭಾಕರ ಕೋರೆಯವರ ಸಮಾಜಿಕ ಶೈಕ್ಷಣಿಕ ಸಹಕಾರ ಆರೋಗ್ಯ ಕ್ಷೇತ್ರಗಳಲ್ಲಿನ ಅವರ ಅಮೋಘ ಕೊಡುಗೆಯನ್ನು ಗಮನಿಸಿ ಅವರನ್ನು ಹುಡುಕಿಕೊಂಡು ಬಂದ ಪ್ರಶಸ್ತಿ ಸಮ್ಮಾನಗಳು ಇವುಗಳಾಗಿವೆ.

ಹೀಗೆ ಪ್ರಭಾಕರ ಕೋರೆಯವರು ಸ್ವಾತಂತ್ರ್ಯ ಹೋರಾಟಗಾರರು, ಆಗರ್ಭ ಶ್ರೀಮಂತ, ದಯಾಮಯಿ, ಸುಸಂಸ್ಕೃತ ದಂಪತಿಗಳಾದ ದಿ. ಬಸವಪ್ರಭು ಹಾಗೂ ಸೌ. ದಿ. ಶಾರಾದಾದೇವಿಯವರ ಮಗನಾಗಿ ಸಂಸ್ಕೃತ

ವಾತಾವರಣದಲ್ಲಿ ಬೆಳೆದವರು. ಬಾಲ್ಯದಲ್ಲಿಯೇ ತಂದೆಯವರ ಜನಸೇವೆ. ಅಣ್ಣ ಚಿದಾನಂದರ ರಾಜಕೀಯ ಎಲ್ಲವನ್ನು ಸಮೀಪದಿಂದ ಕಂಡವರಾದ ಶ್ರೀ ಕೋರೆಯವರು ಕಲ್ಪಿಸದೇ ಇರುವ ರೀತಿಯಲ್ಲಿ ಇಂದು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಕಿತ್ವವನ್ನು ರೂಪಿಸಿಕೊಂಡಿದ್ದಾರೆ. ಅವರ ಈ ಸಾಧನೆಯ ಹಾದಿಯೇನೂ ಹೂವಿನ ಹಾದಿಯಾಗಿರಲಿಲ್ಲ. ಹಲವಾರು ತೊಡಕುಗಳನ್ನು ಭೇದಿಸಿ ಮುನ್ನುಗ್ಗಿ, ಈ ಎಲ್ಲ ಸಾಧನೆಗಳನ್ನು ಮಾಡಿದ್ದಾರೆ. ಹಲವಾರು ಜನರ ಟೀಕೆ, ಟಿಪ್ಪಣಿಗಳನ್ನು ಹಾಗೂ ವಿರೋಧಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಿ ಅಂದುಕೊಂಡಿದ್ದನ್ನು ಸಾಧಿಸಿದ್ದಾರೆ. ಕರ್ನಾಟಕ ಕಂಡ ವಿಶಿಷ್ಟ ರಾಜಕಾರಣಿಯಾದ ಇವರಿಗೆ ಅವರ ವ್ಯಕ್ತಿತ್ವಕ್ಕೆ ತಕ್ಕಂತೆ ರಾಜಕೀಯದಲ್ಲಿ ಸ್ಥಾನಮಾನ ಸಿಗದೇ ಇರುವುದು ಕೋರೆ ಅವರಿಗೆ ಒಂದು ಬೇಸರ ತರುವ ಸಂಗತಿಯಾಗಿದೆ. ರಾಜಕೀಯವನ್ನು ಸಾಮಾಜಿಕ ಹಾಗೂ ಶೈಕ್ಷಣಿಕ ಸುಧಾರಣೆಗೆ ಬಳಸಿಕೊಂಡಿದ್ದಾರೆ. ಇವತ್ತು ಕೆ.ಎಲ್.ಇ. ಸಂಸ್ಥೆಯ ಸಲುವಾಗಿ ಅವರು ಒಂದು ಅರ್ಥದಲ್ಲಿ ತ್ಯಾಗಮಾಡಿದರು ಎಂದು ಹೇಳಬಹುದು.[೨೩]

ಇದು ಡಾ. ಪ್ರಭಾಕರ ಕೋರೆಯವರ ಜೀವನದ ಜೊತೆಗೆ ಸಂಕ್ಷಿಪ್ತವಾಗಿ ಅವರ ಸಾಧನೆಗಳನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಗಮನಿಸಲಾಗಿದೆ. ಇದು ಕರ್ನಾಟಕ ಕಂಡ ಶ್ರೇಷ್ಠ ಶೈಕ್ಷಣಿಕ ತಜ್ಞ ವಿಶಿಷ್ಟ ರಾಜಕಾರಣಿಯಾಗಿ ಅಂಕಲಿಯ ಡಾ॥ ಪ್ರಭಾಕರ ಬಸವಪ್ರಭು ಕೋರೆಯವರ ಬದುಕು, ಸಾಧನೆಗಳ ವಿವರಗಳನ್ನು ಸಂಪೂರ್ಣವಾಗಿ ಕೊಡಲು ಪ್ರಯತ್ನ ಮಾಡಲಾಗಿದೆ.

ಅಡಿಟಿಪ್ಪಣಿಗಳು:

೧. ಸಂಪಾದಕರು ಪ್ರಾ. ವಿ. ಬಿ. ಹಿರೇಮಠ 'ಪ್ರಭಾಂಕಲಿ', ಪುಟ–೧೨೩, ಕೋರೆಯವರ ೫೦ನೇ ಅಭಿನಂದನಾ ಗ್ರಂಥ, ೧೯೯೯.

೨. ಅದೇ ಪುಟ–೧೨೪.

೩. ಸಂಪಾದಕರು ಬಿ. ಎಸ್. ಗವಿಮಠ, 'ಸ್ಪಂದನ' ಪುಟ–೪೮, ಕೋರೆಯವರ ೬೦ನೇ ಅಭಿನಂದನಾ ಗ್ರಂಥ, ಶ್ರೀಕಾಂತ ಗುಣಕಿ ನೆನಪಿನ ಬುತ್ತಿ ಅಂಕಣ, ೨೦೦೬.

೪. ದಿನಾಂಕ ೪–೧–೨೦೦೮, ಶ್ರೀ ಅಣ್ಣಾಸಾಬ ಈಶ್ವರ ಜಕಾತೆ, ಸಾ। ಅಂಕಲಿ, ಸಂದರ್ಶನದಲ್ಲಿ ಹೇಳಿದ್ದು.

೫. ದಿನಾಂಕ ೨೨–೬–೨೦೦೮ ಕನ್ನಡ ಪ್ರಭ ದಿನಪತ್ರಿಕೆಯ ವಿಶೇಷ ಪುರವಣಿ, ಪುಟ–೭.

೬. ಸಂಪಾದಕರು ಪ್ರಾ. ಬಿ. ಎಸ್. ಗವಿಮಠ, 'ಸ್ಪಂದನ' ಪುಟ–೪೬, ಅಭಿನಂದನಾ ಗ್ರಂಥ, ೨೦೦೬.

೭. ಸಂದರ್ಶನ ಮನಿಷಾ ಸುಬೇದಾರ, ಆಶಾದೇವಿ ಕೋರೆ, ಆಸೇ ಮಾಜಿ ಹೈ ಮರಾಠಿ ಅಂಕಣ ಕನ್ನಡ ಅನುವಾದ, ಪುಟ–೭೨, ಪ್ರಭಾಂಕಲಿ ಅಭಿನಂದನಾ ಗ್ರಂಥ, ೧೯೯೫.

೮. 'ಅಂಕಲಿಯೊಳಗೊಂಡು ಮಯೂರ', ವಿಜಯ ಕರ್ನಾಟಕ ದಿನಪತ್ರಿಕೆ, ವಿಶೇಷ ಪುರವಣಿ, ೧–೭–೨೦೦೯, ಪುಟ–೩.

೯. ಆತ್ಮಬಂಧು ಲೇಖನ, ಶ್ರೀ ವಿಜಯ ಜಾಧವ, 'ಸ್ಪಂದನ' ಅಭಿನಂದನಾ ಗ್ರಂಥ, ೨೦೦೬, ಪುಟ–೫೧.

೧೦. ವಿಜಯ ಕರ್ನಾಟಕ ದಿನಪತ್ರಿಕೆ, ವಿಶೇಷ ಪುರವಣಿ 'ಯೋಗ ಸಂದೇಶ', ದಿನಾಂಕ ೭–೧–೨೦೦೯, ಪುಟ–೧.

೧೧. ದಿನಾಂಕ ೨೮–೮–೨೦೦೮ ರಂದು ಡಾ. ದಯಾನಂದ ನೂಲಿ ಸಾ। ಚಿಕ್ಕೋಡಿ ಸಂದರ್ಶನದಲ್ಲಿ ಹೇಳಿದ್ದು.

೧೨. ವಿಜಯ ಕರ್ನಾಟಕ ದಿನಪತ್ರಿಕೆ, ವಿಶೇಷ ಪುರವಣಿ 'ಜನಮುಖಿ', ದಿನಾಂಕ ೧–೮–೨೦೧೦, ಪುಟ–೨.

೧೩ ಅದೇ ಪುಟ–೪.

೧೪. ೬೨ರಲ್ಲಿ ಕೆ.ಎಲ್.ಇ. ದೊರೆ ಲೋಕದರ್ಶನ ದಿನಪತ್ರಿಕೆ, ಪುಟ–೫, ೧–೭–೨೦೦೯.

೧೫. ದಿನಾಂಕ ೨೫–೯–೨೦೦೬ ವಿಜಯ ಕರ್ನಾಟಕ ದಿನಪತ್ರಿಕೆ, ಪುಟ–೧, ೫.

೧೬. ದಿನಾಂಕ ೭–೧–೨೦೦೯ ವಿಜಯಕರ್ನಾಕ ದಿನಪತ್ರಿಕೆ ಪುರವಣಿ, 'ಯೋಗ ಸಂದೇಶ', ಪುಟ–೨.

೧೭. ಸಂಯುಕ್ತ ಕರ್ನಾಟಕ ಕನ್ನಡ ದಿನಪತ್ರಿಕೆ, ದಿನಾಂಕ ೨೬–೫–೨೦೦೮, ಪುಟ–೨.

೧೮. ದಿನಾಂಕ ೨೨–೧೨–೨೦೦೯ ಕನ್ನಡ ದಿನಪತ್ರಿಕೆ ವಿಶೇಷ ಪುರವಣಿ, ಪುಟ–೩.

೧೯. ದಿನಾಂಕ ೪–೨–೨೦೦೮ರಂದು ಶ್ರೀ ಬಾಬಾಸಾಹೇಬ ಮೊಹಿತೆ ದಿವಾನಜೀ ಸಾ। ಅಂಕಲಿ ಸಂದರ್ಶನದಲ್ಲಿ ಹೇಳಿದ್ದು.

೨೦. ಸಂಪಾದಕರು ಬಿ. ಎಸ್. ಗವಿಮಠ, 'ಸ್ಪಂದನ' ಕೋರೆಯವರ ಅಭಿನಂದನಾ ಗ್ರಂಥ, ೨೦೦೬, ಪುಟ–೧೧೦, ೧೧೧.

೨೧. ಅದೇ ಪುಟ–೧೧೦, ೧೧೧.

೨೨. ಪ್ರಾ. ಬಿ.ಎಸ್. ಗವಿಮಠ, ದಿನಾಂಕ ೩–೬–೨೦೦೯ ರಂದು ಸಂದರ್ಶನದಲ್ಲಿ ಹೇಳಿದ್ದು.

೨೩. ವಿಜಯ ಕರ್ನಾಟಕ ದಿನಪತ್ರಿಕೆ ದಿನಾಂಕ ೨೦–೧–೨೦೧೦ ಪುಟ–೩.

ಅಧ್ಯಾಯ : ನಾಲ್ಕು

ಕೆ.ಎಲ್.ಇ. ಸಂಸ್ಥೆ ಮತ್ತು ಪ್ರಭಾಕರ ಕೋರೆಯವರ ಶೈಕ್ಷಣಿಕ ಸಾಧನೆಗಳು

ಅಧ್ಯಾಯ : ನಾಲ್ಕು
ಕೆ.ಎಲ್.ಇ. ಸಂಸ್ಥೆ ಮತ್ತು ಪ್ರಭಾಕರ ಕೋರೆಯವರ ಶೈಕ್ಷಣಿಕ ಸಾಧನೆಗಳು

ಐತಿಹಾಸಿಕ ಹಿನ್ನೆಲೆ :

ಲಿಂಗಾಯತರು ಕನ್ನಡಿಗರಿಗೆ, ಕನ್ನಡಿಗರು ಭಾರತೀಯರಿಗೆ, ಭಾರತೀಯರು ವಿಶ್ವಕ್ಕೆ ನೀಡಿದ ಬಹುದೊಡ್ಡ ಕೊಡುಗೆ ಕೆ.ಎಲ್.ಇ. ಸಂಸ್ಥೆ. ಈ ಸಂಸ್ಥೆಯು ಇಂದು ವಿಶ್ವವಿದ್ಯಾಲಯದ ಮಟ್ಟಕ್ಕೆ ಬೆಳೆದು ನಿಂತಿದೆ. ಕರ್ನಾಟಕ ಮಹಾರಾಷ್ಟ್ರ, ಗೋವಾ, ದೆಹಲಿಗಳಲ್ಲಿ ಹಾಗೂ ಅಲ್ಲದೇ ವಿದೇಶಿ ನೆಲೆಗಳಾದ ಅಮೇರಿಕಾ, ಇಂಗ್ಲೆಂಡ್, ಚೀನಾ, ಮಲೇಶಿಯಾ, ಜಾಂಬಿಯಾ ಮುಂತಾದ ದೇಶಗಳಲ್ಲಿ ೨೧೧ ಅಂಗಸಂಸ್ಥೆಗಳನ್ನು ಹೊಂದಿದೆ.

ಈ ಸಂಸ್ಥೆಯ ಸ್ಥಾಪನೆಯ ಮುಂಚೆ ಮುಖ್ಯವಾಗಿ ಮೂರು ಪ್ರಯತ್ನಗಳು ವೀರಶೈವ ಸಮಾಜದಲ್ಲಿ ನಡೆದಿದ್ದವು. ಡೆಪ್ಯುಟಿ ಚೆನ್ನಬಸಪ್ಪನವರು ಸ್ಥಾಪಿಸಿದ ಬೆಳಗಾವಿಯಲ್ಲಿರುವ ೧೮೬೮ರಲ್ಲಿ ಫ್ರೀ ಬೋರ್ಡಿಂಗ್ (ಉಚಿತ ಪ್ರಸಾದ ನಿಲಯ) ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ೧೮೮೨, ಅಖಿಲ ಭಾರತ ವೀರಶೈವ ಮಹಾಸಭೆ ೧೯೦೪ ವೀರಶೈವ ಸಮಾಜದ ಶಿಕ್ಷಣಕ್ಕಾಗಿ ಈ ಮೂರು ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದು ಒಂದು ಐತಿಹಾಸಿಕ ಸನ್ನಿವೇಶವೇ ಸರಿ.[೧]

ಕನ್ನಡ ನಾಡಿನಲ್ಲಿ, ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಕನ್ನಡ ಭಾಷೆಯು ನಲುಗುತ್ತಿತ್ತು. ಆದಿಲ್ ಶಾಹಿ ಆಳ್ವಿಕೆಯಲ್ಲಿ ಉರ್ದು ಭಾಷೆಯ ಪ್ರಭಾವ ಪೇಶ್ವೆಗಳ ಆಡಳಿತದಲ್ಲಿ ಮರಾಠಿ ಪ್ರಾಬಲ್ಯ, ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ನಂತರ ಇಂಗ್ಲೀಷ್ ಭಾಷೆಯ ಪ್ರಭಾವದಿಂದಾಗಿ ಕನ್ನಡ ಭಾಷೆಯನ್ನು ಈ ಎಲ್ಲ ಸಂದಿಗ್ಧ ಪರಿಸ್ಥಿತಿಯಲ್ಲಿ ಪಾರುಮಾಡುತ್ತ ಬಂದವರು ವೀರಶೈವ ಸಮಾಜದವರು. ಸರ್ಕಾರಿ ಹುದ್ದೆಯಲ್ಲಿ ಹೆಚ್ಚಾಗಿ ಬ್ರಾಹ್ಮಣರೇ ಇರುವುದರಿಂದ ವೀರಶೈವ ಸಮಾಜದವರಿಗೆ ಗೌರವದ ಸ್ಥಾನಗಳು ಸಿಗುವದಿಲ್ಲ, ಇದರಿಂದ ಸಮಾಜದ ಅಭಿವೃದ್ಧಿ ಸಾಧ್ಯವಿಲ್ಲ ಅನ್ನುವುದನ್ನು ಅರಿತುಕೊಂಡು ಡೆಪ್ಯುಟಿ ಚೆನ್ನಬಸಪ್ಪನವರು ಶಿಕ್ಷಣ ಕೊಡುವ ಕಾರ್ಯವಾಗಬೇಕು ಎಂದು ನಿರ್ಣಯಿಸಿದರು.

ಬೆಳಗಾವಿಯು ಮುಸಲ್ಮಾನರು, ಪೇಶ್ವೆಗಳ ಹಾಗೂ ಬ್ರಿಟಿಷರ ಆಡಳಿತಕ್ಕೆ ಒಳಪಡುತ್ತ ಸಾಗಿದಂತೆ, ಇಲ್ಲಿಯ ಆಡಳಿತ ಭಾಷೆಯು ಬದಲಾಗುತ್ತಾ ಸಾಗಿತು. ಪೇಶ್ವೆಗಳ ಆಳ್ವಿಕೆಯಲ್ಲಿ ಮರಾಠಿಯು ರಾಜ್ಯ ಭಾಷೆಯಾದರೆ, ಆಂಗ್ಲರ ಆಡಳಿತದಲ್ಲಿ ಇಂಗ್ಲೀಷ್ ಭಾಷೆ ಪ್ರಾಧಾನ್ಯ ಪಡೆಯಿತು. ಸ್ಥಳೀಯ ಭಾಷೆ ಕನ್ನಡವೇ ಆದರೂ ಅದು ಬಳಕೆಯಾಗುತ್ತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಬ್ರಾಹ್ಮಣರು ಸಮಯ ಸಾಧಕರಂತೆ ಆಯಾ ಕಾಲಕ್ಕೆ ಆಯಾ ಭಾಷೆಗಳನ್ನು ಕಲಿತು, ಸರ್ಕಾರಿ ಹುದ್ದೆಗಳನ್ನು ಪಡೆದು, ಸಮಾಜದವರಿಗೆ ಅನುಕೂಲ ಕಲ್ಪಿಸುತ್ತಿದ್ದರು. ಇದನ್ನು ಮನಗಂಡ ಡೆಪ್ಯುಟಿ ಚೆನ್ನಬಸಪ್ಪನವರು, ಲಿಂಗಾಯತರು ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಲು ಕಷ್ಟಪಡುತ್ತಿದ್ದುದನ್ನು ಗಮನಿಸಿ, ಉಚಿತ ಪ್ರಸಾದ ನಿಲಯ

ಸ್ಥಾಪಿಸಬೇಕು, ಇದರಲ್ಲಿ ವೀರಶೈವ ಮಕ್ಕಳು ಉನ್ನತ ಶಿಕ್ಷಣ ಪಡೆದು, ಸರ್ಕಾರಿ ಹುದ್ದೆಯಲ್ಲಿ ಇದ್ದು, ಸಮಾಜದ ಅಭಿವೃದ್ಧಿಯಾಗಬೇಕು ಎಂದು ನಿರ್ಧರಿಸಿದರು, ಶ್ರೀ ಮಮ್ಮಹಾರಾಜ ಜಗದ್ಗುರು, ಶ್ರೀ ಮಹಾಲಿಂಗಸ್ವಾಮಿಗಳು ಸಂಸ್ಥಾನ ಚಿತ್ರದುರ್ಗ, ಮಹಾಸ್ವಾಮಿಗಳವರನ್ನು ಪ್ರತಿ ತಿಂಗಳ ೩೦೦ ರೂಪಾಯಿಗಳನ್ನು ಕೊಡಲು ಒಪ್ಪಿಸಿದರು. ೧೮೬೮ರಲ್ಲಿ ಬೆಳಗಾವಿಯ ಕೇಳಕರ ಭಾಗದಲ್ಲಿ ಉಚಿತ ಪ್ರಸಾದ ನಿಲಯವನ್ನು ಸ್ಥಾಪಿಸಿದರು. ಒಟ್ಟು ೫೦ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಯಿತು. ನಾಲ್ಕು ವರ್ಷ ಇಲ್ಲಿ ಓದಿದ ನಂತರ ಮುಂಬೈನಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅನುಕೂಲ ಕಲ್ಪಿಸಲು ನಿರ್ಣಯಿಸಿದರು. ಹೀಗೆ ಪ್ರಾರಂಭವಾದ ಬೋರ್ಡಿಂಗ್ ಎರಡು ವರ್ಷಗಳ ನಂತರ ಚಿತ್ರದುರ್ಗದ ಮಠದ ಪ್ರತಿ ತಿಂಗಳ ೫೦೦ ರೂಪಾಯಿಗಳ ಸಹಾಯ ಧನ ನಿಂತುಹೋದಮೇಲೆ, ಚೆನ್ನಬಸಪ್ಪನವರು ತಮ್ಮ ಮನೆಯನ್ನು ಮಾರಿ, ತಮ್ಮ ಹೆಂಡಂದಿರ ಮೈ ಮೇಲಿನ ಒಡವೆಗಳನ್ನೂ ಮಾರಿ, ಬಡ ಲಿಂಗಾಯತ ಉಚಿತ ಪ್ರಸಾದ ನಿಲಯ ನಡೆಸಿದರು. ಮುಂದೆ ಅವರು ಧಾರವಾಡಕ್ಕೆ ವರ್ಗಾವಣೆ ಹೊಂದಿದ ಮೇಲೆ ಈ ಬೋರ್ಡಿಂಗ್ ನಿಂತಿತು. ಆದರೆ ಮುಂದೆ ಅನೇಕ ಉಚಿತ ಪ್ರಸಾದ ನಿಲಯಗಳು ಸ್ಥಾಪನೆಗೆ, ಹಾಗೂ ವೀರಶೈವರಲ್ಲಿನ ಶಿಕ್ಷಣದ ಮಹತ್ವ ಸಾಧಿಸುವಲ್ಲಿ ಇದು ಯಶಸ್ವಿಯಾಯಿತು.[೨]

ಅನ್ನದಾನದ ಬಳಿಕ ಮಾಡುವ ವಿಚಾರ ಅರ್ಥದಾನದ್ದು. ಈವರೆಗೆ ವೀರಶೈವ ಮಕ್ಕಳಿಗಾಗಿ ಚಿಂತನೆ ಮಾಡಿದ ಈ ಮಹನೀಯರಲ್ಲದೆ, ಇನ್ನಿತರ ಲಿಂಗವಂತ ಅಭಿಮಾನಿಗಳು ಈ ಸಮಾಜದ ಮಕ್ಕಳ ಉನ್ನತ ಶಿಕ್ಷಣಕ್ಕೆ ಅವಶ್ಯವಿರುವ ಹಣಕಾಸಿನ ನೆರವಿನ ಕುರಿತು ಆಲೋಚಿಸತೊಡಗಿದರು. ವೈಯಕ್ತಿಕ ಆಲೋಚನೆಗಳು, ಚಿಂತನೆಗಳು ಸಾಮೂಹಿಕ ಸ್ವರೂಪವನ್ನು ತಳೆದವು. ಪರಿಣಾಮವಾಗಿ ೧೮೮೩ರಲ್ಲಿ "ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ" ಎಂಬ ಹೆಸರಿನಲ್ಲಿ ಒಂದು ವ್ಯವಸ್ಥಿತವಾದ ಸಂಘಟನೆ ರೂಪಗೊಂಡಿತು. ಸೆಪ್ಟೆಂಬರ್ ೨೦, ೧೮೮೩ರಂದು ಧಾರವಾಡದ 'ಸರಕಾರಿ ದರ್ಬಾರ್ ಹಾಲ್'ನಲ್ಲಿ ಕರೆದ ಸಭೆಯಲ್ಲಿ ಪಾಸಾದ ನಿರ್ಣಯವು ಸಂಸ್ಥೆಯ ಉದ್ದೇಶವನ್ನು ಹೀಗೆ ಹೊಂದಿತ್ತು. 'ಪ್ರಾಂತ್ಯದಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ ಪಾಸಾಗಿರುವ ಲಿಂಗಾಯತ ಜನರಿಗೆ ಇಂಗ್ಲೀಷ್ ಭಾಷೆಯ ಜ್ಞಾನವಿಲ್ಲದೇ, ಉನ್ನತ ಶಿಕ್ಷಣವನ್ನು ಪಡೆಯಲು ವೀರಶೈವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿಕ್ಕೆ ಆರ್ಥಿಕ ತೊಂದರೆಯುಂಟಾಗಿದೆ. ಈ ಕಾರಣಕ್ಕಾಗಿ ಸ್ಥಿತಿವಂತರಿಂದ 'ಲಿಂಗಾಯತ ಫಂಡ್' ಸಂಗ್ರಹಿಸಿ, ಅದರಲ್ಲಿನ ಬಹುಪಾಲು ಹಣವನ್ನು ಸರಕಾರದ ಪ್ರಾಮಿಜರಿ ನೋಟುಗಳಲ್ಲಿ ತೊಡಗಿಸಿದ್ದರಿಂದ ಬಡ್ಡಿಯ ಹಣವೂ ಬರುತ್ತದೆ ಎಂದು ಆಲೋಚಿಸಿ, ಈ ಕಾರ್ಯಕ್ಕಾಗಿ ರಾ.ಬ. ಅರಟಾಳ ರುದ್ರಗೌಡರು, ಗಿಲಗಂಚಿ ಗುರುಸಿದ್ಧಪ್ಪನವರಂತಹ ನಿಷ್ಠಾವಂತ ಧರ್ಮಾಭಿಮಾನಿಗಳ ಪರಿಶ್ರಮದ ಫಲವಾಗಿ ೪ ವರ್ಷಗಳಲ್ಲಿ, ಅಂದರೆ ೧೯೦೨ರಷ್ಟೊತ್ತಿಗೆ ೧,೮೮,೦೦೦ರಷ್ಟು ಹಣವನ್ನು ಸಂಗ್ರಹಿಸಲಾಯಿತು. ವಂಟಮುರಿಯ ಸರ್‌ದೇಸಾಯಿಯವರಾದ ಶ್ರೀಮಂತ ರಾಜಾ ಲಖಮನಗೌಡ, ಬಸವಪ್ರಭು ಇತರರು ತಾವು ಕೊಡಲೊಪ್ಪಿದ ರೂ. ೫೦೦೦ಗಳ ಜೊತೆಗೆ ೫೦,೦೦೦ಗಳನ್ನು ಕೊಟ್ಟದ್ದು ಆಗಿದೆ. ಈ ನಿಧಿಯಿಂದ ಸಾವಿರಾರು ಬಡ ವಿದ್ಯಾರ್ಥಿಗಳು ಪ್ರಯೋಜನ ಪಡೆಯುವಂತೆ ಆಯಿತು. ಈ ನಿಧಿಯ ಸಹಾಯದಿಂದಲೇ ಕೆ.ಎಲ್.ಇ. ಸೊಸೈಟಿಯ ಕೆಲವು ಸಂಸ್ಥಾಪಕ ಆಜೀವ ಸದಸ್ಯರು ಪುಣೆ, ಮುಂಬಯಿಗೆ ಹೋಗಿ ತಮ್ಮ ಹೆಚ್ಚಿನ

ಅಭ್ಯಾಸವನ್ನು ಪೂರೈಸಿದರು. ಇದರಲ್ಲಿ ಹೊಸಳ್ಳಿ ಎಂಬವರಿಗೆ ಐ. ಸಿ. ಎಸ್. ಪರೀಕ್ಷೆಗಾಗಿ ಇಂಗ್ಲೆಂಡಿಗೆ ಕಳುಹಿಸಲಾಯಿತು. ರಾ. ಬ. ಅರಟಾಳ ರುದ್ರಗೌಡರು, ಗಿಲಗಂಚಿಯ ಗುರುಸಿದ್ಧಪ್ಪನವರು ಕೈಗೊಂಡ ಕಾರ್ಯದಿಂದ ಲಿಂಗಾಯತರಲ್ಲಿ ಜಾಗೃತಿಯು ಉಂಟಾಯಿತು. ಈ ಇಬ್ಬರೂ ಮಹನೀಯರ ಶ್ರಮದಿಂದ ಅನೇಕ ವೀರಶೈವ ವಿದ್ಯಾರ್ಥಿಗಳ ಬಾಳು ಬೆಳಗಿಸಿದ ಕೀರ್ತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯದು ಆಯಿತು.[೩]

ಅಖಿಲ ಭಾರತ ವೀರಶೇವ ಮಹಾಸಭೆ ೧೯೦೪ರಲ್ಲಿ, ಹಾನಗಲ್ ಕುಮಾರಸ್ವಾಮಿಯವರ ಪ್ರಯತ್ನದ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಇದರ ಮೂಲ ಉದ್ದೇಶ, ಬಡ ವೀರಶೈವರ ಶಿಕ್ಷಣದ ಕುರಿತು ಚಿಂತನೆ, ಸಮಾಜದಲ್ಲಿ ಒಕ್ಕಟ್ಟನ್ನು ಒಡಮೂಡಿಸುವ ಉಪಾಯಗಳು ಹಾಗೂ ಮುಖ್ಯವಾಗಿ ವೀರಶೈವ ಮಠಗಳಿಗೆ ತರಬೇತಿ (ಸಂಸ್ಕಾರ) ಹೊಂದಿದ ಸ್ವಾಮಿಗಳನ್ನು ನೆಲೆಗೊಳಿಸುವ ಆಶಯ ಹೊಂದಿತ್ತು. ಈ ಮಹಾಸಭೆಯು ವೀರಶೈವರಲ್ಲಿ ಜಾಗೃತಿಯನ್ನುಂಟುಮಾಡುವ ಮೂಲಕ, ವೀರಶೈವ ಸಮಾಜವನ್ನು ಬಡಿದೆಬ್ಬಿಸಿತು ಸಮಾಜೋದ್ಧಾರದ ಕಾರ್ಯಗಳತ್ತ ಮುನ್ನಡೆಸುವ ಆಂದೋಲನದ ಸಂಸ್ಥೆಯಾಯಿತು.

ಹೀಗೆ ಈ ಸಂಸ್ಥೆಗಳ ಸ್ಥಾಪನೆಯಲ್ಲಿ ವೀರಶೈವ ಸಮಾಜದಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆಗೆ ಶಿಕ್ಷಣದ ಮಹತ್ವವನ್ನು ಸಾರುವಲ್ಲಿ ಒಂದು ಭೂಮಿಕೆಯನ್ನು ಒದಗಿಸುವುದು ಅಲ್ಲದೇ, ಮುಂದೆ ಸ್ಥಾಪಿಸಲಾದ ವೀರಶೈವ ಶಿಕ್ಷಣ ಸಂಸ್ಥೆಗಳಿಗೆ ಪ್ರೇರಣೆ ನೀಡಿದವು.[೪]

ಕೆ.ಎಲ್.ಇ. ಸೊಸೈಟಿ ಸ್ಥಾಪಿಸುವ ಚಾರಿತ್ರಿಕ ಗಳಿಗೆ :

ಕರ್ನಾಟಕ ಶಿಕ್ಷಣ ರಂಗದ ಜೀವನಾಡಿ ಎನಿಸಿರುವ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿಯ ಸ್ಥಾಪನೆಯ ಹಿನ್ನೆಲೆ ರೋಮಾಂಚಕಾರಿಯಾಗಿದೆ. ಒಂದು ಜನಾಂಗದ ಸೇವಾ ಮನೋಭಾವ ಹಾಗೂ ಸಾಹಸಗಳ ವೃತ್ತಾಂತವಾಗಿದೆ. ತ್ಯಾಗಿಗಳ ಬೆವರಿನ ಕಥೆಯಾಗಿದೆ. ಋಷಿಸದೃಶ ಜೀವನ ನಡೆಸಿದ ಏಳು ಜನ ಸಂಸ್ಥಾಪಕರು, ಅಜೀವ ಸದಸ್ಯರು ಶಿಕ್ಷಣ ಪ್ರಸಾರಕ್ಕಾಗಿ ಮಾಡಿದ ಸಾಹಸಗಾಥೆಯಾಗಿದೆ.

ಪೇಶ್ವೆಗಳ ಕಾಲದಲ್ಲಿ ಮರಾಠಿ ಭಾಷೆಯು ಪ್ರಬಲವಾಗಿದ್ದರೆ, ಬ್ರಿಟಿಷರ ಕಾಲದಲ್ಲಿ ಇಂಗ್ಲೀಷ್ ಪ್ರಾಬಲ್ಯದ ಮಧ್ಯ ಉತ್ತರ ಕರ್ನಾಟಕದ ಅಸಲು ಭಾಷೆ ಕನ್ನಡದ ಪ್ರಭಾವ ಸಪ್ಪೆಯಾಗಿತ್ತು. ೧೮೩೨ರಲ್ಲಿ ಲಂಡನ್ ಸೊಸೈಟಿಯ ಇಬ್ಬರು ಮಿಶನರಿಗಳು ಬೆಳಗಾವಿಯಲ್ಲಿ ಬೆನನ್‌ಸ್ಮಿತ್ ಹೈಸ್ಕೂಲ್ ಸ್ಥಾಪಿಸಿದರು. ದಕ್ಷಿಣದ ಸರದಾರರಿಂದ ಹಾಗೂ ಜಹಗೀರದಾರರಿಂದ ವಂತಿಕೆಯನ್ನು ಸಂಗ್ರಹಿಸಿ, ಸರದಾರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ೧೮೫೦ರಲ್ಲಿ ಸರದಾರ ಹೈಸ್ಕೂಲ್ ಪ್ರಾರಂಭಿಸಿದರು. ೧೮೫೭ರಲ್ಲಿ ಸೇಂಟ್ ಪಾಲ್ಸ್ ಪ್ರಾರಂಭವಾಯಿತು. ೧೮೮೦ರವರೆಗೆ ಕ್ರಿಶ್ಚನ್ ಮಿಶನರಿಗಳು ಮಾತ್ರವೇ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಶಿಕ್ಷಣ ಪ್ರಸಾರ ಮಾಡುತ್ತಿದ್ದವು. ಅವರ ನಂತರ ಮಿಶನರಿಗಳಲ್ಲದವರೂ ಪ್ರಾರಂಭಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುವ ನೀತಿಯು ಮಹತ್ವ ಪಡೆಯಿತು. ಆಗ ಪರೀಕ್ಷೆಯ ಪರಿಣಾಮಗಳನ್ನು ಅವಲಂಬಿಸಿ, ಅನುದಾನವನ್ನು ಬಿಡುಗಡೆ ಮಾಡುವ ವ್ಯವಸ್ಥೆ ಜಾರಿಗೆ ಬಂದಿತು.

ಈ ಹಂತದಲ್ಲಿಯೇ ಪುಣೆಯಲ್ಲಿ ಯುವ ಲಿಂಗವಂತ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಇದ್ದಾಗ, ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯ ಶೈಕ್ಷಣಿಕ ಚಟುವಟಿಕೆಗಳ ಪ್ರೇರಣೆಯಿಂದ ಹಾಗೂ ಬಾಲಗಂಗಾಧರ ತಿಲಕರ ಗಜಾನನೋತ್ಸವದಿಂದ ಪ್ರಭಾವಿತರಾಗಿದ್ದ ಈ ಯುವಕರು ತಮ್ಮ ಪ್ರದೇಶದಲ್ಲಿಯೂ ಒಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಮುಂದಾದರು.

೧೯೧೬ರಲ್ಲಿ ಪ್ರಪ್ರಥಮ ವೀರಶೈವ ಶಿಕ್ಷಣದ ಪರಿಷತ್ತು ದಾವಣಗೇರಿಯಲ್ಲಿ ಸಭೆ ಸೇರಿದಾಗ, ಅಲ್ಲಿ ಲಿಂಗಾಯತ ಸಮಾಜದ ಪ್ರಥಮ ಸ್ನಾತಕೋತ್ತರ ಪದವೀಧರರಾದ ಶ್ರೀಯುತರಾದ ಎಂ. ಆರ್. ಸಾಖರೆ ಹಾಗೂ ಶ್ರೀ ಶಿ. ಶಿ. ಬಸವನಾಳ ಅವರನ್ನು ಆನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆಯನ್ನು ಮಾಡಿ ಗೌರವಿಸಲಾಯಿತು. ಮುಂಬಯಿಯಲ್ಲಿ ೧೯೧೫ರಲ್ಲಿ ಒಂದು ಕಟ್ಟಡವನ್ನು ಬಾಡಿಗೆ ಪಡೆದು ವೀರಶೈವ ಆಶ್ರಮ ಪ್ರಾರಂಭಿಸಿದರು. ವಿದ್ಯಾರ್ಥಿಗಳಿಗೆ ಉಚಿತ ಬೋರ್ಡಿಂಗ್ ವ್ಯವಸ್ಥೆಯನ್ನು ಮಾಡಿದರು. ವೀರಶೈವ ವಿದ್ಯಾವರ್ಧಕ ಸಂಘದಿಂದಲೂ ನೆರವು ಒದಗಿಸಿದರು. ಶ್ರೀ ರಾ. ಬ. ಅರಟಾಳ ರುದ್ರಗೌಡರ ನೆರವಿನಿಂದ ಕೆ.ಎಲ್.ಇ. ಸ್ಥಾಪಕ ಸದಸ್ಯರಾದ ಸರ್ವಶ್ರೀ ಸಿ. ಸಿ. ಬಸವನಾಳ, ಪಿ. ಆರ್. ಚಿಕ್ಕೋಡಿ, ಬಿ. ಬಿ. ಮಮದಾಪೂರ, ಎಂ. ಆರ್. ಸಾಖರೆ, ಎಚ್. ಎಫ್. ಕಟ್ಟಿಮನಿ ಮೊದಲಾದವರು ಸೇರಿ ಕರ್ನಾಟಕದಲ್ಲಿ ಒಂದು ಹೈಸ್ಕೂಲನ್ನು ಪ್ರಾರಂಭಿಸಬೇಕೆಂದು ಸಂಕಲ್ಪಿಸಿದರು.[೫]

ಭಾರತದ ಶೈಕ್ಷಣಿಕ ಚರಿತ್ರೆಯಲ್ಲಿ ೧೯೧೬ನೇ ಇಸವಿಯು ಅತ್ಯಂತ ಮಹತ್ವದ ವರ್ಷ. ಕಲ್ಕತ್ತಾ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಆಶುತೋಷ್ ಮುಖರ್ಜಿಯವರು ಈ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳನ್ನು ಪ್ರಾರಂಭಿಸಿದರು. ಪಂಡಿತ್ ಮದನ್‌ಮೋಹನ್ ಮಾಳವೀಯ ಅವರು, ಬನಾರಸ್ ಹಿಂದು ವಿಶ್ವವಿದ್ಯಾಲಯವನ್ನು ಅದೇ ವರ್ಷ ಸ್ಥಾಪಿಸಿದರು. ಆಚಾರ್ಯ ಡಿ. ಕೆ. ಕರ್ವೆ ಪುಣೆಯ ಸಮೀಪ ಎಸ್.ಎನ್.ಡಿ.ಟಿ. ಹೆಸರಿನಲ್ಲಿ ಮಹಿಳಾ ವಿಶ್ವವಿದ್ಯಾಲಯ ಪ್ರಾರಂಭಿಸಿದರು. ಅದೇ ವೇಳೆಯಲ್ಲಿ ಬೆಳಗಾವಿಯಲ್ಲಿ ೭ ಜನ ಪದವೀಧರ ಯುವಕರು ಉದಾತ್ತ ಧ್ಯೇಯಗಳನ್ನಿಟ್ಟುಕೊಂಡು ರಾ. ಬ. ಅರಟಾಳ ರುದ್ರಗೌಡರ ನೇತೃತ್ವದಲ್ಲಿ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿಯನ್ನು ಸ್ಥಾಪಿಸುವ ನಿರ್ಧಾರವನ್ನು ಮಾಡಿದರು. ೧೯೧೬ರಲ್ಲಿ ಶಿ. ಶಿ. ಬಸವನಾಳರು ಎಂ.ಎ. ಪದವೀಧರರಾಗಿ ಬಂದ ಮೇಲೆ, ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಕುರಿತು, ಶ್ರೀ ಪಂಡಿತಪ್ಪ ಚಿಕ್ಕೋಡಿ, ಶ್ರೀ ಬಿ. ಬಿ. ಮಮದಾಪೂರ ಮತ್ತು ಶ್ರೀ ಎಂ. ಆರ್. ಸಾಖರೆಯವರೊಂದಿಗೆ ಆಲೋಚಿಸಿದರು. ಕೂಡಲೇ ಶ್ರೀ ಪಂಡಿತಪ್ಪನವರ ಹಿರಿತನದಲ್ಲಿ ಬೆಳಗಾವಿಯಲ್ಲಿ ಒಂದು ಸಮಾಲೋಚನ ಸಭೆಯನ್ನು ಕರೆಯಲಾಯಿತು. ಈ ಯುವಕರು ಆಗ ತಮ್ಮ ಪದವಿಗಳಿಂದ ಸರಕಾರದ ಉನ್ನತ ಹುದ್ದೆಯನ್ನು ಪಡೆದು, ಮದುವೆಯಾಗಿ ಸುಖ ಸಂಸಾರವನ್ನು ನಡೆಸಬಹುದಿತ್ತು. ಆದರೆ ತಮ್ಮ ಸುಖವನ್ನು ಸಮಾಜದ ಉದ್ಧಾರಕ್ಕಾಗಿ, ಸಮಾಜದಲ್ಲಿನ ಬಡವರನ್ನು ಸುಶಿಕ್ಷಿತರನ್ನಾಗಿಸಲು ತ್ಯಾಗಿಗಳಾದರು. ಈ ಯುವಕರು ರಾ. ಬ. ಅರಟಾಳ ರುದ್ರಗೌಡರನ್ನು ಭೇಟಿಯಾಗಿ, ತಮ್ಮ ಇಂಗಿತವನ್ನು ಪ್ರಸ್ತಾಪಿಸಿದರು. ಇದರಿಂದ ಸಂತೋಷಭರಿತರಾದ ಅರಟಾಳ ರುದ್ರಗೌಡರು ಎಲ್ಲ ರೀತಿಯ ಬೆಂಬಲವನ್ನು ದೊರಕಿಸಿಕೊಡುವ ಭರವಸೆ ಇತ್ತರು. ಶ್ರೀ ಬಸವನಾಳರೊಂದಿಗೆ ಸರ್ವಶ್ರೀ ಪಿ. ಆರ್. ಚಿಕ್ಕೋಡಿ, ಬಿ. ಬಿ. ಮಮದಾಪೂರ, ಎಂ. ಆರ್. ಸಾಖರೆ, ೭

ಎಸ್. ಹಂಚನಾಳ, ಎಚ್. ಎಸ್. ಕಟ್ಟಿಮನಿ ಮತ್ತು ಬಿ. ಎಲ್. ಪಾಟೀಲರು ಶಿಕ್ಷಣ ಸಂಸ್ಥೆ ಸ್ಥಾಪಿಸುವ ನಿರ್ಧಾರವನ್ನು ಮಾಡಿದರು. ಸಂಸ್ಥೆಯು ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯ ಮಾದರಿಯಂತೆ ಇರಬೇಕೆಂದು ನಿರ್ಧರಿಸಿದರು. ಆಗ ಶ್ರೀ ಬಿ. ಎಲ್. ಪಾಟೀಲರು ತಮ್ಮ ಮನೆತನದ ತೊಂದರೆಗಳ ಕಾರಣದಿಂದ ಧಾರವಾಡ ಬಿಟ್ಟು ಬರಲು ಸಾಧ್ಯವಾಗದ್ದರಿಂದ ಈ ಸಂಘಟನೆಯಿಂದ ದೂರ ಉಳಿದರು. ಸಮಾಜದ ಹಿರಿಯರೊಂದಿಗೆ ಪತ್ರ ವ್ಯವಹಾರವನ್ನು ನಡೆಸಲು ಶ್ರೀ ಎಂ. ಆರ್. ಸಾಖರೆಯವರನ್ನು ಸೆಕ್ರೆಟರಿ ಎಂದು ನೇಮಿಸಲಾಯಿತು.[೬]

ಹೈಸ್ಕೂಲನ್ನು ಯಾವ ಊರಿನಲ್ಲಿ ಸ್ಥಾಪಿಸಬೇಕು ಎನ್ನುವ ಚರ್ಚೆ ನಡೆದಾಗ, ಆಗ ಬಸವನಾಳರು ಎರಡನೇ ಸಭೆಯನ್ನು ಬೆಳಗಾವಿಯ ಕಲ್ಮಠದಲ್ಲಿ ನಡೆಸಿದರು. ಎಲ್ಲರ ಅಭಿಪ್ರಾಯವನ್ನು ಪರಿಶೀಲಿಸಿ, ಅಂತಿಮವಾಗಿ ಬೆಳಗಾವಿಯಲ್ಲಿಯೇ ಶಾಲೆಯನ್ನು ಸ್ಥಾಪಿಸುವ ನಿರ್ಣಯವನ್ನು ಕೈಗೊಂಡರು.

ಈ ಮೇಲಿನ ನಿರ್ಧಾರವು ಚಾರಿತ್ರಿಕ ದೃಷ್ಟಿಯಿಂದ ಮಹತ್ವದ್ದಾಯಿತು. ಆಗ ಬೆಳಗಾವಿಯು ವಿಭಾಗೀಯ ಸ್ಥಾನದಲ್ಲಿತ್ತು. ಕಮೀಷನರ್ ಅವರ ಕೇಂದ್ರ ಸ್ಥಳವಾಗಿತ್ತು ಹಾಗೂ ಬಿಜಾಪುರ, ಧಾರವಾಡ, ಕಾರವಾರ, ಈಗಿನ ಗದಗ, ಹಾವೇರಿ, ಬಾಗಲಕೋಟ ಜಿಲ್ಲೆಗಳ ವಿಭಾಗೀಯ ಸ್ಥಾನದಲ್ಲಿತ್ತು. ಹಾಗೂ ವೀರಶೈವ ಶಿಕ್ಷಣ, ಉಚಿತ ಪ್ರಸಾದ ನಿಲಯ, ಶಿಕ್ಷಣಕ್ಕಾಗಿ ನಿಧಿ ಸಂಗ್ರಹಿಸುವಲ್ಲಿ ಸತತವಾಗಿ ಪ್ರಯತ್ನದಲ್ಲಿ ಇರುವ ಶ್ರೀ ಅರಟಾಳ ರುದ್ರಗೌಡರು ಆಗ ಬೆಳಗಾವಿಯಲ್ಲಿಯೇ ಇದ್ದರು. ಅಲ್ಲಿ ಕನ್ನಡಿಗರ ವರ್ಚಸ್ಸು ಸರಿಯಾಗಿ ಇರಲಿಲ್ಲ, ಮರಾಠಿಗರ ಪ್ರಾಬಲ್ಯ ಹೆಚ್ಚಾಗಿತ್ತು. ಆದ್ದರಿಂದ ಬೆಳಗಾವಿಯಲ್ಲಿ ಇಂದು ಏಶಿಯಾ ಖಂಡದ ಪ್ರತಿಷ್ಠಿತ ಸಂಸ್ಥೆಯಾಗಿ, ಹೆಮ್ಮರವಾಗಿ ಬೆಳೆದು ನಿಂತಿರುವ ಕೆ.ಎಲ್.ಇ. ಸಂಸ್ಥೆಯನ್ನು ಬೆಳಗಾವಿಯಲ್ಲಿ ಸ್ಥಾಪಿಸುವ ಮೂಲಕ ಕನ್ನಡಿಗರ ಪ್ರಾಬಲ್ಯ ಬೆಳೆಸಬೇಕೆಂಬ ತೀರ್ಮಾನಗಳನ್ನು ಸದಸ್ಯರು ಕೈಗೊಂಡರು.

ಹೀಗೆ ಸರ್ವಶ್ರೀ ಬಸವನಾಳ, ಸಾಖರೆ, ಚಿಕ್ಕೋಡಿ, ಹಂಚಿನಾಳ, ಕಟ್ಟಿಮನಿ, ಮಮದಾಪೂರ ಇವರು, ೧೧ ಅಕ್ಟೋಬರ್ ೧೯೧೬ರಂದು ಸಭೆ ನಡೆಸಿ, ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯನ್ನು ಸ್ಥಾಪಿಸಲು ನಿರ್ಣಯಿಸಿದರು. ಪುಣೆಯ ಡೆಕ್ಕನ್ ಎಜ್ಯುಕೇಶನ್ ಸೊಸೈಟಿ ಮಾದರಿಯಲ್ಲಿ ಘಟನೆಯನ್ನು ರಚಿಸಿದರು. ಸದಸ್ಯತ್ವವನ್ನು ಎಲ್ಲರಿಗೂ ತೆರೆದಿಟ್ಟರು, ಲೈಫ್ ಮೆಂಬರ್ ಪದ್ಧತಿಯನ್ನು ಸ್ವೀಕರಿಸಿದರು. ಜನರಲ್ ಬಾಡಿಗೆ ಸರ್ವ ಅಧಿಕಾರವನ್ನು ನೀಡಿದರು. ಅಧೀನ ಕಮೀಟಿಗಳಿಗೆ ಅನಿರ್ಬಂಧಿತವಾಗಿ ಅಧಿಕಾರವನ್ನು ಕೊಡಲಿಲ್ಲ. ಈ ತತ್ವವು ಡೆಕ್ಕನ್ ಎಜ್ಯುಕೇಷನ್ ಸೊಸೈಟಿಯ ಘಟನೆಯಲ್ಲಿ ಇರಲಿಲ್ಲ. ಮೇಲೆ ಉಲ್ಲೇಖಿಸಿದ ಎಲ್ಲರೂ ಸಂಸ್ಥೆಯ ಆಜೀವ ಸದಸ್ಯರಾಗಿ ಸೇರಿದರು. ಕಜವಿಯ ಸರದಾರ ವೀರನಗೌಡ ಪಾಟೀಲರು ೧೯೧೭ರಲ್ಲಿ ಆಜೀವ ಸದಸ್ಯರಾಗಿ ಸೇರಿಕೊಂಡರು. ಈ ಏಳು ಜನರನ್ನು ಸಪ್ತರ್ಷಿಗಳೆಂದೇ ಕರೆಯಲಾಗುತ್ತದೆ. ಈ ಮೊದಲು ೧೯೧೬ರ ನವೆಂಬರ್ ೫ರಂದು ಬೆಳಗಾವಿಯ ದಂಡು ಪ್ರದೇಶದ ರಾ. ಬ. ಅರಟಾಳ ರುದ್ರಗೌಡರ ಬಂಗಲೆಯಲ್ಲಿ ಗಿಲಗಂಚಿ ಅರಟಾಳ ಹೈಸ್ಕೂಲಿನ ಪ್ರವರ್ತಕರ ಸಭೆ ಸೇರಿತ್ತು. ಈ ಸಭೆಗೆ ಹಾಜರಿದ್ದ ಪ್ರಮುಖರೆಂದರೆ, ರಾ. ಬ. ಅರಟಾಳ ರುದ್ರಗೌಡರು. ಶ್ರೀಮಂತ ಸರದಾರ ಜಿ.

ಜಿ. ನಾಯಕ, ಬಹದ್ದೂರ ದೇಸಾಯಿ, ಚಚಡಿ ಸರ್ವಶ್ರೀ ಬಿ. ಬಿ. ಮಮದಾಪೂರ, ಎಸ್. ಎಸ್. ಬಸವನಾಳ, ಪಿ. ಆರ್. ಚಿಕ್ಕೋಡಿ, ಬಿ. ಎಸ್. ಹಂಚನಾಳ ಮತ್ತು ಎಚ್. ಎಫ್. ಕಟ್ಟಿಮನಿ. ಈ ಸಭೆಯು ಕರ್ನಾಟಕ ಲಿಂಗಾಯತ ಎಜ್ಯುಕೇಷನ್ ಸೊಸೈಟಿ ರಚಿಸಲು ನಿರ್ಣಯಿಸಲಾಯಿತು. ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ರೂಪಿಸಿದ ಸೊಸೈಟಿಯ ನಿಯಮಾವಳಿಗಳನ್ನು ಸರ್ವಾನುಮತದಿಂದ ಈ ಸಭೆಯು ಒಪ್ಪಿಕೊಂಡಿತು. ರಾ. ಬ. ಅರಟಾಳ ರುದ್ರಗೌಡರನ್ನು ಅಧ್ಯಕ್ಷರನ್ನಾಗಿ ಶ್ರೀ ಶ್ರೀಮಂತ ಸರದಾರ ಲಖಮನಗೌಡ ಬಸವಪ್ರಭು ಸರದೇಸಾಯಿ, ವಂಟಮುರಿ ಹಾಗೂ ಶ್ರೀ ಸ. ವಿ. ಜಿ. ನಾಯಕ, ಬಹದ್ದೂರ್ ಚಚಡಿ ದೇಸಾಯಿ ಇವರನ್ನು ಸೊಸೈಟಿಯ ಮಹಾ ಪೋಷಕರೆಂದು, ಸರ್ವಶ್ರೀ ಎಂ. ಆರ್. ಸಾಖರೆ, ಬಿ. ಎಸ್. ಹಂಚನಾಳ, ಪಿ. ಆರ್. ಚಿಕ್ಕೋಡಿ, ಬಿ. ಬಿ. ಮಮದಾಪೂರ, ಎಸ್. ಎಸ್. ಬಸವನಾಳ ಹಾಗೂ ಎಚ್. ಎಫ್. ಕಟ್ಟಿಮನಿ ಅವರನ್ನು ಸೊಸೈಟಿಯ ಆಜೀವ ಸದಸ್ಯರಾಗಿ ಆಯ್ಕೆ ಮಾಡಲಾಯಿತು. ೧೯೧೬–೧೭ರಲ್ಲಿನ ಸಭೆಗಳಲ್ಲಿ ಶ್ರೀ ವೈಜನಪ್ಪ ಆನಗೋಳ ಸೇರ್ಪಡೆಯಾದರು. ಇವರಲ್ಲಿ ಪಂಡಿತಪ್ಪ ಚಿಕ್ಕೋಡಿಯವರು ಸಾರ್ವಜನಿಕ ಜೀವನ ಪ್ರವೇಶಿಸುವ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದರು. ೧೯೧೮ರಲ್ಲಿ ನಂತರ ೧೯೩೧ರಲ್ಲಿ ಸರದಾರ್ ವೀರನಗೌಡ ಪಾಟೀಲರು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲು ಸಂಸ್ಥೆಗೆ ರಾಜೀನಾಮೆ ನೀಡಿದರು. ಉಳಿದ ಐವರು ಕೊನೆಯವರೆಗೂ ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯರಾಗಿ, ಸಂಸ್ಥೆಯ ಪ್ರಗತಿಗಾಗಿ ನಿರಂತರ ಶ್ರಮಿಸಿದರು.

ಸೊಸೈಟಿಯ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ :

೧೮೬೦ನೇ ವರ್ಷದ ೨೧ನೆಯ ಕಾನೂನಿನ ಎರಡನೇ ವಿಭಾಗದ ಪ್ರಕಾರ, ಕೆ.ಎಲ್.ಇ. ಸೊಸೈಟಿ ಬೆಳಗಾವಿ ಈ ಸಂಸ್ಥೆಯು ಸಾದರ ಪಡಿಸಿದ ಬಖೈರು :

೧. ಸೊಸೈಟಿಯ ಹೆಸರು : ದಿ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿ, ಬೆಳಗಾವಿ.

೨. ಸೊಸೈಟಿಯ ಧ್ಯೇಯಗಳು : ಬೆಳಗಾವಿ, ವಿಜಾಪೂರ, ಧಾರವಾಡ ಜಿಲ್ಲೆಗಳಲ್ಲಿ ಸಂಸ್ಥೆಗಳನ್ನು ತನ್ನ ಕಕ್ಷೆಗಳಲ್ಲಿ ತೆಗೆದುಕೊಂಡಾಗಲೂ, ವಿಜ್ಞಾನ ಸಾಹಿತಿಗಳಿಗೆ ಉತ್ತೇಜನ ಕೊಡುವುದು. ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಶಿಕ್ಷಣದ ಪ್ರಸಾರ ಮಾಡುವುದು. ಸಂಸ್ಥೆಯ ಸದಸ್ಯರ ಸಹಿಯೊಂದಿಗೆ ನೊಂದಾಯಿಸಲ್ಪಟ್ಟಿತು.[೭]

ಕೆ.ಎಲ್.ಇ. ಸೊಸೈಟಿಯ ಪ್ರಾರಂಭಿಕ ಘಳಿಗೆ :

ಕೆ.ಎಲ್.ಇ. ಸಂಸ್ಥಾಪಕರು ಶಿಕ್ಷಣಾಧಿಕಾರಿ ವಿ. ಶಾರ್ಪ್ ಇವರಿಗೆ ಅರ್ಜಿಯನ್ನು ಸಲ್ಲಿಸಿ, ೧ ರಿಂದ ೬ನೇ ವರ್ಗಗಳನ್ನು ನಡೆಸಲು ಅನುಮತಿ ಪಡೆದರು. ಕೋಟೆಯ ಒಳಗಿನ ಬಂಗ್ಲೆ ನಂ. ೨೪ನ್ನು ಬಾಡಿಗೆ ಪಡೆದುಕೊಂಡು. ಧಾರವಾಡ ವೀರಶೈವ ವಿದ್ಯಾವರ್ಧಕ ಸಂಘ ವಿದ್ಯಾರ್ಥಿ ನಿಧಿಯ ಫಂಡಿನ ಬಡ್ಡಿಯ ಹಣದ ನಾಲ್ಕು ಸಾವಿರ ರೂಪಾಯಿಗಳನ್ನು ಶ್ರೀ ಅರಟಾಳ ರುದ್ರಗೌಡರು, ಶ್ರೀ ಗಿಲಗಂಚಿ ಗುರುಸಿದ್ದಪ್ಪನವರು ನೀಡಿದರು. ೧೯೧೬ ರಿಂದ

೧೯೩೦ರವರೆಗೆ ಬಂಗ್ಲೆಯಲ್ಲಿಯೇ ಇವರ ಸ್ಮರಣಾರ್ಥ ಕೆ.ಎಲ್.ಇ. ಸಂಸ್ಥೆಯು ಪ್ರಥಮ ಮಾಧ್ಯಮಿಕ ಶಾಲೆಯಾದ ಗಿಲಗಂಚಿ ಅರಟಾಳ ಹೈಸ್ಕೂಲ್ ಎಂದು ಹೆಸರಿಸಿ ಪ್ರಾರಂಭಿಸಿದರು. ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಎಂಬ ಹೆಸರಿನಲ್ಲಿ ಶಾಲೆಯನ್ನು ಪ್ರಾರಂಭಿಸಿದರು. ಪ್ರಾರಂಭದಲ್ಲಿ ೩೦ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದುಕೊಂಡರು. ೧೯೧೬ರ ಮಧ್ಯದಲ್ಲಿ ಶಾಲೆಯನ್ನು ಪ್ರಾರಂಭಿಸಿದರು. ಬೆಳಗಾವಿ, ವಿಜಾಪೂರ, ಧಾರವಾಡ, ಶಿರಸಿ, ಸಿದ್ದಾಪುರ, ಶಿವಮೊಗ್ಗ, ಬಳ್ಳಾರಿಯಿಂದ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದರು. ಕೆ.ಎಲ್.ಇ. ಸಂಸ್ಥೆಯು ಕಾನೂನಾತ್ಮಕವಾಗಿ ಅಧಿಕೃತವಾಗಿ ನವೆಂಬರ್ ೧೩, ೧೯೧೭ರಂದು ಅಸ್ತಿತ್ವಕ್ಕೆ ಬಂದಿತು.[೮] ಜೆ. ಎ. ಹೈಸ್ಕೂಲ್‌ನಲ್ಲಿ ಜೂನ್ ೧೯೧೭ರಲ್ಲಿ ಮೆಟ್ರಿಕ್ಯುಲೇಶನ್ ಕ್ಲಾಸ್ ಪ್ರಾರಂಭವಾಯಿತು. ೧೯೧೮ರಲ್ಲಿ ಮೊದಲನೇಯ ಬ್ಯಾಚ್ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ೪೦ ವಿದ್ಯಾರ್ಥಿಗಳಲ್ಲಿ ೧೮ ವಿದ್ಯಾರ್ಥಿಗಳು ಪಾಸಾಗಿ, ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿನ ಫಲಿತಾಂಶ ಬಂದಿತು. ಶಾಲಾ ವಾರ್ಷಿಕೋತ್ಸವಕ್ಕೆ ಪುಣೆಯ ಪ್ರೊ. ಜೇ. ಸಿ. ಭಾತಿ, ಪ್ರೊ. ಸದಾಶಿವಯ್ಯ ಅತಿಥಿಗಳಾಗಿ ಬಂದು ಹೋದರು. ಕೊಲ್ಲಾಪೂರದ ಪೂಜ್ಯ ಛತ್ರಪತಿ ಶಾಹು ಮಹಾರಾಜರು, ರಾವಬಹದ್ದೂರ, ಎಸ್. ಎಸ್. ಅಂಗಡಿಯವರು ಮಹಾರಾಜರನ್ನು ಕರೆತಂದು ಬಹಳ ಯಶಸ್ವಿಯಾಗಿ ಕಾರ್ಯಕ್ರಮವನ್ನು ನಿರ್ವಹಿಸಿದರು. ೧೯೨೦ರಲ್ಲಿ ಜೆ. ಎ. ಹೈಸ್ಕೂಲ್‌ನಲ್ಲಿ ಲಿಂಗಾಯತ ಶಿಕ್ಷಣದ ಸಮಾವೇಶವನ್ನು ಏರ್ಪಡಿಸಲಾಯಿತು. ಈ ಅಧಿವೇಶನಕ್ಕೆ ಮಿ. ಎಲ್. ಜಿ. ಮಾಂಟ್‌ಫರ್ಡ್ ಮುಂಬಯಿ ಪ್ರಾಂತದ ದಕ್ಷಿಣ ವಿಭಾಗದ ಕಮೀಷನರ್ ಹಾಗೂ ಮಿ. ಎಸ್. ಎನ್. ಲಾರೆನ್ಸ್ ಮುಂಬಯಿ ಪ್ರಾಂತದ ಸರ್ಕಾರದ ಫೈನಾನ್ಸ್ ಮೆಂಬರ್ ಇವರು ಭಾಗವಹಿಸಿದರು. ಲಿಂಗಾಯತ ಬಾಂಧವರಿಗೆ ಶ್ರೀಯುತರು ಉದಾರವಾಗಿ ಧನಸಹಾಯ ಮಾಡಿ, ಕೆ.ಎಲ್.ಇ. ಸಂಸ್ಥೆಯನ್ನು ಬೆಳೆಸಲು ಕರೆ ನೀಡಿದರು.

ಸಂಸ್ಥಾಪಕ ಆಜೀವ ಸದಸ್ಯರಲ್ಲಿ ಪರಸ್ಪರ ಸಂಪೂರ್ಣ ಸಹಕಾರ, ತಿಳುವಳಿಕೆ ಇತ್ತು ಮತ್ತು ಮಹತ್ವವಾದುದನ್ನು ಸಾಧಿಸುವ ಛಲ ಇತ್ತು, ಯಾವ ಕೆಲಸವನ್ನಾದರೂ ಮುಜುಗರವಿಲ್ಲದೇ ಮಾಡುತ್ತಿದ್ದರು. ಮೇಲಧಿಕಾರಿಗಳ ಜೊತೆಗೆ ಸಂಪರ್ಕ ಹಾಗೂ ಪತ್ರ ವ್ಯವಹಾರವನ್ನು ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ನೋಡಿಕೊಳ್ಳುತ್ತಿದ್ದರು. ಶ್ರೀ ಎಸ್. ಎಸ್. ಬಸವನಾಳರು ದಾಖಲೆಗಳನ್ನು ಅಚ್ಚುಕಟ್ಟಾಗಿ ಬರೆದಿಡುತ್ತಿದ್ದರು. ಶ್ರೀ ಎಂ. ಆರ್. ಸಾಖರೆಯವರು ಅಗತ್ಯ ಬಿದ್ದಾಗ ಮೇಲಧಿಕಾರಿಗಳನ್ನು ಕಾಣುವುದು, ನಿಧಿ ಸಂಗ್ರಹಿಸಲು ಸಂಚಾರಮಾಡುವ ಕೆಲಸ ಮಾಡಿದರೆ, ಶ್ರೀ ಮಮದಾಪುರ, ಶ್ರಿ ಹಂಚಿನಾಳರು ಶಾಲಾ ಚಟುವಟಿಕೆಗಳನ್ನು ಸಂಯೋಜಿಸುತ್ತಿದ್ದರು. ಶ್ರೀ ಕಟ್ಟಿಮನಿ ಹಾಗೂ ಸರದಾರ ವೀರನಗೌಡರು ಸಮಾಜದ ಸ್ಥಿತಿವಂತ ಬಂಧು-ಬಾಂಧವರನ್ನು ಭೇಟಿಯಾಗಿ ಶಾಲೆಗೆ ನೆರವು ಯಾಚಿಸುತ್ತಿದ್ದರು.

ಮುಂದೆ ಧಾರವಾಡದಲ್ಲಿ ೧೯೨೨ರಲ್ಲಿ ಶಾಲೆಯೊಂದನ್ನು ಸ್ಥಾಪಿಸಲು ಸಂಸ್ಥಾಪಕ ಆಜೀವ ಸದಸ್ಯರು ಮುಂದಾದರು. ಶ್ರೀ ಮೂಗಪ್ಪಣ್ಣ ಸವದತ್ತಿ, ದಿವಾನ್ ಬಹದ್ದೂರರು, ಎಸ್. ಪಿ. ಮೆಣಸಿನಕಾಯಿಯವರು ಪ್ರಮುಖರಾಗಿ ಸಭೆಯಲ್ಲಿ ಭಾಗವಹಿಸಿ ವಿಚಾರ ವ್ಯಕ್ತಪಡಿಸಿದರು. ಶ್ರೀ ದಂಡಿನ ಅವರ ಬಂಗ್ಲೆಯನ್ನು ಬಾಡಿಗೆ ಪಡೆದು. ಇಂದಿನ ಆರ್.ಎಲ್.ಎಸ್. ಹೈಸ್ಕೂಲನ್ನು ಪ್ರಾರಂಭಿಸಿದರು. ನಂತರ ಇದು ಲಿಂಗಾಯತ ವಿದ್ಯಾಭಿವೃದ್ಧಿ ಕಟ್ಟಡಕ್ಕೆ ಸ್ಥಳಾಂತರಗೊಂಡು. ಕಾಲಾಂತರದಲ್ಲಿ ಆ ಕಟ್ಟಡವನ್ನು ಖರೀದಿಸಲಾಯಿತು. ೧೯೨೩ರಲ್ಲಿ ಬೆಳ್ಳದ ಬಾಗೇವಾಡಿಯಲ್ಲಿ ಶ್ರೀ ಬಸವಪ್ರಭು ಕೆತ್ತಿ

ಮತ್ತು ಶ್ರೀ ಬಸಪ್ಪ ಹೊನ್ನಳ್ಳಿ ಇವರು ತಲಾ ೫೦೦೦ ರೂಪಾಯಿಗಳನ್ನು ದಾನವಾಗಿ ನೀಡಿದರು. ಇದೇ ಸಮಯದಲ್ಲಿ ಅಂದರೆ, ೧೯೨೫ರಲ್ಲಿ ವಂಟಮುರಿಯಲ್ಲಿ ರಾಜಾ ಲಖಮ ಗೌಡರ ನೆರವಿನಿಂದ ಕೆ.ಎಲ್.ಇ. ಸೊಸೈಟಿಯು ಇಂಗ್ಲೀಷ್ ಶಾಲೆಯನ್ನು ಪ್ರಾರಂಭಿಸಿತು. ಅದು ಗ್ರಾಮೀಣ ಪ್ರದೇಶವಾದುದರಿಂದ ನಂತರ ನಿಂತುಹೋಯಿತು. ೧೯೩೦ರಲ್ಲಿ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದ ಬಸವೇಶ್ವರ ಹೈಸ್ಕೂಲ್ ಕೆ.ಎಲ್.ಇ. ಆಡಳಿತಕ್ಕೆ ಒಳಪಟ್ಟಿತು. ೧೯೩೨ರವರೆಗೆ ಈ ಹೈಸ್ಕೂಲನ್ನು ನಡೆಸಿ, ಮುಂದೆ ಅದೇ ಸಂಸ್ಥೆಗೆ ಬಿಟ್ಟುಕೊಟ್ಟು ದೊಡ್ಡತನ ಮೆರೆಯಿತು. ೧೯೨೬ರಲ್ಲಿ ಬೆಳಗಾವಿಯಲ್ಲಿ ಕಾಲೇಜೊಂದನ್ನು ಸ್ಥಾಪಿಸಲು ಸಂಸ್ಥಾಪಕರು ಯೋಜಿಸುತ್ತಿದ್ದರು. ಕಾರಣ, ಆಗ ಸನಿಹದಲ್ಲಿ ಎಲ್ಲೂ ಉನ್ನತ ಶಿಕ್ಷಣ ದೊರೆಯುತ್ತಿರಲಿಲ್ಲ. ದೂರ ಕೋಲ್ಲಾಪುರ, ಪುಣೆ ಇತ್ತ ಮೈಸೂರಿನವರೆಗೆ ಉನ್ನತ ಶಿಕ್ಷಣಕ್ಕಾಗಿ ಪರದಾಡುವ ಸ್ಥಿತಿ ವಿದ್ಯಾರ್ಥಿಗಳಿಗೆ ಇತ್ತು. ಇದನ್ನು ಅರಿತು ೧೯೨೬ರಲ್ಲಿ ಬೆಳಗಾವಿಯಲ್ಲಿ ಪ್ರಮುಖರು ಸಭೆ ಸೇರಿ ಕಾಲೇಜು ಸ್ಥಾಪಿಸುವ ಬಗ್ಗೆ ನಿರ್ಣಯಿಸಿದರು. ಆಗಿನ ಮುಂಬಯಿ ಪ್ರಾಂತದ ಶಿಕ್ಷಣ ಮಂತ್ರಿಯಾಗಿದ್ದ ಸರ್ ಸಿದ್ದಪ್ಪ ಕಂಬಳಿಯವರ ತೀವ್ರ ಪ್ರಯತ್ನದಿಂದಾಗಿ ೧೯೩೩ರಲ್ಲಿ ಲಿಂಗರಾಜ ಕಾಲೇಜು ಸ್ಥಾಪಿಸಲು ಅನುಮತಿ ದೊರೆಯಿತು. ಇದು ಕೆ.ಎಲ್.ಇ. ಸಂಸ್ಥೆಯ ಪ್ರಥಮ ಕಾಲೇಜು ಆಗಿದೆ. ಹಾಗೂ ಸಂಸ್ಥೆಯ ಇತಿಹಾಸದಲ್ಲಿ ಮಹತ್ವದ ಘಟ್ಟವಾಗಿದೆ.

ಲಿಂಗರಾಜ ಕಾಲೇಜನ್ನು ಪ್ರಾರಂಭಿಸುವ ಪೂರ್ವದಲ್ಲಿ, ರಾಜಾ ಲಖಮ ಗೌಡರಿಂದ ನೆರವು ಪಡೆದರು. ಅನೇಕ ದಾನಿಗಳು ಕಟ್ಟಡ ನಿರ್ಮಾಣಕ್ಕೆ ಮುಂದೆ ಬಂದರು. ಬೆಳಗಾವಿಯ ಅಮರಾಯಿ ಪ್ರದೇಶದ ೧೬ ಎಕರೆ ಭಾಗವನ್ನು ೩೦,೦೦೦ ಸಾವಿರ ರೂ.ಗಳಿಗೆ ಖರೀದಿಸಿ, ೮೦,೦೦೦ ಸಾವಿರ ವೆಚ್ಚದಲ್ಲಿ ಭವ್ಯವಾದ ಕಟ್ಟಡವನ್ನು ನಿರ್ಮಿಸಿದರು. ೧೯೩೦ರಲ್ಲಿ ಜಿ. ಎ. ಹೈಸ್ಕೂಲ್ ಕಿಲ್ಲೆಯಿಂದ ಬೆಳಗಾವಿ ನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಸೆಪ್ಟೆಂಬರ್ ೧೯೩೩ರಂದು ಮುಂಬಯಿ ಪ್ರಾಂತದ ಗವರ್ನರ್ ಆಗಿದ್ದ ಸರ್ ಫ್ರೆಡರಿಕ್ ಸೈಕ್ಸ್ ಇವರು ಕಾಲೇಜನ್ನು ಉದ್ಘಾಟಿಸಿ, 'ಲಿಂಗರಾಜ ಕಾಲೇಜು' ಎಂದು ನಾಮಕರಣ ಮಾಡಿದರು. ೧೯೩೪ರಲ್ಲಿ ಮುಂಬಯಿ ಗವರ್ನರ್ ಆಗಿದ್ದ ಲಾರ್ಡ್ ಬ್ರೆಬಾರ್ನ್ ಮತ್ತು ಲೇಡಿ ಬ್ರೆಬಾರ್ನ್ ಆಗಮಿಸಿ 'ಲಿಂಗರಾಜ' ಹಾಸ್ಟೇಲಿನ ಅಡಿಗಲ್ಲನ್ನು ನೆರವೇರಿಸಿದರು. ನಂತರ ಬ್ರೆಬಾರ್ನ್ ಹಾಸ್ಟೆಲ್, ಲಿಂಗರಾಜ ಕಾಲೇಜು ಕಟ್ಟಡ ನಿರ್ಮಾಣಗೊಂಡವು. ಕೆ.ಎಲ್.ಇ. ಸಂಸ್ಥಾಪಕರು ರಾಷ್ಟ್ರಮಟ್ಟದಲ್ಲಿ ಖ್ಯಾತಿ ಪಡೆದು, ನುರಿತ ಪ್ರಾಧ್ಯಾಪಕರನ್ನು ಕರೆಯಿಸಿ, ಬೋಧನೆ ಮಾಡಲು ಪ್ರಾರಂಭಿಸಿದರು. ಕೆಲವೆ ವರ್ಷಗಳಲ್ಲಿ ಲಿಂಗರಾಜ ಕಾಲೇಜು ದೇಶಾದ್ಯಂತ ಮನ್ನಣೆ ಪಡೆಯಿತು.[೯]

ವಿದ್ಯಾರ್ಥಿಗಳಿಗಾಗಿ (ಬೋರ್ಡಿಂಗ್) ಪ್ರಸಾದ ನಿಲಯ :

ಬಡ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಆರ್ಥಿಕ ತೊಂದರೆಯನ್ನು ಮನಗಂಡು ವೀರಶೈವ ವಿದ್ಯಾರ್ಥಿಗಳಿಗಾಗಿ ಬೆಳಗಾವಿ, ವಿಜಾಪೂರ, ವೀರಶೈವ ಬೋರ್ಡಿಂಗ್ ಎಂಬ ಸಂಸ್ಥೆ ಜಿ. ಎ. ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ೧೯೧೮ರವರೆಗೆ ಸಹಾಯಮಾಡಿತು. ನಂತರ ಈ ಸಂಸ್ಥೆ ನಿಂತುಹೋದ ಮೇಲೆ ಕೆ.ಎಲ್.ಇ. ಸಂಸ್ಥಾಪಕರು ಶಿರಸಂಗಿ ಟ್ರಸ್ಟಿನ ೫೦

ರೂ.ಗಳ ಸಹಾಯಧನವನ್ನು ಪಡೆದು ಕಿಲ್ಲೆಯೊಳಗೆ ಬಂಗ್ಲೆಯಲ್ಲಿ 'ಸುಖನಿವಾಸ' ಎಂಬ ವಸತಿ ಗೃಹ ಪ್ರಾರಂಭಿಸಿದರು. ಧಾರವಾಡದಲ್ಲಿ ೧೯೧೯ರಲ್ಲಿ ಲಿಂಗೈಕ್ಯ ಮೃತ್ಯುಂಜಯ ಅಪ್ಪಗಳ ಬೋರ್ಡಿಂಗ್, ಕೆ.ಎಲ್.ಇ. ಸಂಸ್ಥೆಯ ರಾಜಾಲಖಮನಗೌಡ ಸರದೇಸಾಯಿ ಹೈಸ್ಕೂಲ್, ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳಿಗೆ ಅನ್ನದಾಸೋಹದ ಮೂಲಕ ಶಿಕ್ಷಣ ಪಡೆಯಲು ನೆರವಾಯಿತು.

ಬೆಳಗಾವಿಯಲ್ಲಿ ಶ್ರೀ ನಾಗನೂರ ಸ್ವಾಮೀಜಿಯವರ ಪ್ರಸಾದನಿಲಯ :

ರಾಷ್ಟ್ರಭಕ್ತರಾಗಿದ್ದ ಶ್ರೀ ನಾಗನೂರ ಮಠದ ಶ್ರೀ ಶಿವಬಸಪ್ಪ ಸ್ವಾಮಿಗಳು ೧೯೩೭ರಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೆ ವಿದ್ಯಾರ್ಥಿ ಪ್ರಸಾದ ನಿಲಯ ಸ್ಥಾಪಿಸಿದರು. ನಂತರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಗೆ ಆದಾಗ ಮತ್ತು ಲಿಂಗರಾಜ ಕಾಲೇಜಿಗೆ ದೂರದ ಸ್ಥಳವಾದ ಹಿನ್ನೆಲೆಯಲ್ಲಿ ಬೆಳಗಾವಿ ಹೃದಯ ಭಾಗದಲ್ಲಿರುವ ಹನುಮಾನ ಬೀದಿಯಲ್ಲಿ ೧೯೪೩ರಲ್ಲಿ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದರು. ಉಚಿತ ಪ್ರಸಾದ ನಿಲಯ ಕಟ್ಟಿಸಲಾಯಿತು. ೧೯೫೦ರಲ್ಲಿ ಬಸರೀಗಿಡದ ವೀರಪ್ಪನವರು ಮೈಸೂರು ಮಹಾರಾಜರಿಂದ ಈ ಕಟ್ಟಡವನ್ನು ಉದ್ಘಾಟಿಸಿದರು. ಮುಂದೆ ಈ ಮಹತ್ವದ ಕಾರ್ಯದಲ್ಲಿ ಶೇಗುಣಸಿ ಶ್ರೀ ಮುರುಘೇಂದ್ರ ಸ್ವಾಮಿಗಳು ನಾಗನೂರ ಶ್ರೀಯೊಂದಿಗೆ ಸೇರಿ ಅಸಂಖ್ಯಾತ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾದ ಉಚಿತ ಪ್ರಸಾದ ನಿಲಯ ನಡೆಸಿದರು. ಇದರ ಸದುಪಯೋಗ ಪಡೆದು ಅನೇಕ ಜನ ಸುಶಿಕ್ಷಿತರಾಗಿ ಸಮಾಜದಲ್ಲಿ ದೊಡ್ಡ ಹುದ್ದೆ ಪಡೆಯಲು ಸಹಾಯವಾಯಿತು. ಬೆಳಗಾವಿಯಲ್ಲಿ ಕೆ.ಎಲ್.ಇ. ಸಂಸ್ಥೆ ಹಾಗೂ ನಾಗನೂರ ಮಠಗಳು ಇಂದಿಗೂ ಕನ್ನಡದ ದೀಪವನ್ನು ಅಖಂಡವಾಗಿ ಬೆಳಗಿಸುತ್ತಿವೆ.[೧೦]

ಕೆ.ಎಲ್.ಇ. ಸಂಸ್ಥಾಪಕ ಆಜೀವ ಸದಸ್ಯರ ಸೇವಾ ಜೀನನದ ಮಾದರಿ :

ಆರಂಭದಲ್ಲಿ ಶ್ರೀ ಎಚ್. ಎಫ್. ಕಟ್ಟಿಮನಿ, ಶ್ರೀ ಬಿ. ಬಿ. ಮಮದಾಪೂರ, ಶ್ರೀ ಪಂಡಿತಪ್ಪ ಚಿಕ್ಕೋಡಿ, ಶ್ರೀ ವಿ. ಎಸ್. ಹಂಚಿನಾಳ, ಶ್ರೀ ಎಸ್. ಎನ್. ಬಸವನಾಳ, ಶ್ರೀ ವೀರನಗೌಡ ಪಾಟೀಲ ಹೀಗೆ ಎಲ್ಲರೂ ಬೆಳಗಾವಿಯ ಖಡೇಬಜಾರದಲ್ಲಿನ ಬೋಜಣ್ಣನವರ ಮನೆಯಲ್ಲಿ, ಒಂದು ಕೋಣೆಯಲ್ಲಿ ಇದ್ದು, ಖಾನಾವಳಿ ಊಟ ಮಾಡುತ್ತ ಸೊಸೈಟಿಯ ಸಂಘಟನೆಯನ್ನು ಸಿದ್ಧಪಡಿಸುತ್ತಿದ್ದರು. ಬೋಜಣ್ಣನವರ ಮಗ ಗುರುಸಿದ್ಧಪ್ಪನವರು ನಮ್ಮ ಸಹಪಾಠಿಗಳು. ಅವರ ತಂಗಿ ಶ್ರೀ ಪಂಡಿತಪ್ಪನವರ ಪತ್ನಿಯಾಗಿದ್ದರು. ಸೌ. ಗೌರವ್ವನವರು ಎಲ್ಲರಿಗೂ ಊಟ ಹಾಕಿಸುತ್ತಿದ್ದರು. ನಂತರ ಇವರ ಸಹಾಯಕ್ಕೆ ಶ್ರೀ ಹಂಚಿನಾಳರು ತಮ್ಮ ಪತ್ನಿಯನ್ನು ಕರೆತಂದರು. ಶ್ರೀ ಬಸವನಾಳ, ಶ್ರೀ ಮಮದಾಪೂರ, ಶ್ರೀ ಪಾಟೀಲರು ಅವಿವಾಹಿತರಾಗಿದ್ದರು. ಎಲ್ಲರಿಗೂ ಒಟ್ಟಿಗೆ ೧೦೦ ರೂಪಾಯಿ ಸಂಬಳ ಪಡೆದು ಅವರಲ್ಲಿಯೇ ಸುಖಿ ಜೀವನ ಸದಾ ಜೀವನ ನಡೆಸುತ್ತಿದ್ದರು. ನಂತರ ಶಾಲೆಯ ವಿದ್ಯಾರ್ಥಿಗಳಿಂದ ಫೀ ಬರಹತ್ತಿದ ನಂತರ ೧೫೦ ರೂ. ಪಡೆದು ೧೯೧೭ರಲ್ಲಿ ಪ್ರತಿ ಜೂನ್ ತಿಂಗಳಿಗೆ ಪ್ರತಿಯೊಬ್ಬರು ೫೦ ರೂಪಾಯಿ ವೇತನವನ್ನು ಪಡೆಯುತ್ತಿದ್ದರು. ಆಗ ಅವರೆಲ್ಲರೂ ಅಣ್ಣ ತಮ್ಮಂದಿರಂತೆ ಇದ್ದು, ತಾವು ಕಷ್ಟದಲ್ಲಿ ಜೀವನ ನಡೆಸಿ, ಸಮಾಜಕ್ಕಾಗಿ ಒಂದು ದೊಡ್ಡ ಆಸ್ತಿಯನ್ನಾಗಿಸಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅದಕ್ಕಾಗಿಯೇ ಇವರನ್ನು ಜನಮಾನಸದಿಂದ

ಸಪ್ತರ್ಷಿಗಳೆಂದು ಕರೆಯಲಾಗುತ್ತದೆ. ಹೀಗೆ ಈ ಮಹನೀಯರ ಶ್ರಮದ ಫಲವಾಗಿ ಕೆ.ಎಲ್.ಇ. ಸಂಸ್ಥೆ ಹುಟ್ಟು ಪಡೆಯಿತು. ಮಹಾದಾನಿಗಳಾದ ಶ್ರೀ ಸಿರಸಂಗಿಯ ಲಿಂಗರಾಜರು ಪ್ರಸಿದ್ಧ ಎಣ್ಣೆ ವ್ಯಾಪಾರಸ್ಥರಾದ ಭೂಮರಡ್ಡಿ ಬಸಪ್ಪನವರು, ರಾಜಾಲಖಮನಗೌಡರು, ಅರಟಾಳ ರುದ್ರಗೌಡರು, ಗಿಲಗಂಚಿ ಗುರುಸಿದ್ದಪ್ಪನವರು ಹೀಗೆ ಅನೇಕ ದಾನಿಗಳಿಂದ ಈ ಸಂಸ್ಥೆ ಬೆಳೆಯುತ್ತ ಹೋಗಿ, ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣದ ದಾಹ ನೀಗಿಸಿದ ಈ ಸಂಸ್ಥೆಯ ಸಂಸ್ಥಾಪಕರು ಪ್ರಾತಸ್ಮರಣೀಯರು ಎನಿಸಿದ್ದಾರೆ.[೧೧]

ಕೆ.ಎಲ್.ಇ. ಸೊಸೈಟಿಯ ಅಂಗವಿನ್ಯಾಸ :

ಕೆ.ಎಲ್.ಇ. ಸಂಸ್ಥೆಗೆ ಒಂದು ಸರ್ವ ಸಾಧಾರಣ ಸಭೆ ಇದ್ದು, ಸಭೆಯು ಮಹಾದಾನಿಗಳು, ಮಹಾಪೋಷಕರು, ಪೋಷಕರು, ಸಭಾ ಸದಸ್ಯರು, ಸಾಮಾನ್ಯ ಸದಸ್ಯರು, ನಿವೃತ್ತ ಆಜೀವ ಸದಸ್ಯರು, ಗೌರವ ಸದಸ್ಯರು ಎಂಬ ಎಂಟು ಪ್ರಕಾರದ ಸದಸ್ಯ ವರ್ಗಗಳನ್ನು ಒಳಗೊಂಡಿದೆ. ಈ ಸಭೆಗೆ ಒಬ್ಬರು ಅಧ್ಯಕ್ಷರು ಹಾಗೂ ಇಬ್ಬರು ಉಪಾಧ್ಯಕ್ಷರು ಇರುತ್ತಾರೆ. ಈ ಪದಾಧಿಕಾರಿಗಳನ್ನು ಸಾಮಾನ್ಯ ಸಭೆಯ ಸದಸ್ಯರು ಎರಡು ವರ್ಷಗಳಿಗೊಮ್ಮೆ ಚುನಾಯಿಸುತ್ತಾರೆ.

ಸಂಸ್ಥೆಯು ದಿನ ನಿತ್ಯದ ಆಡಳಿತವನ್ನು ನೋಡಿಕೊಳ್ಳಲು ಒಂದು ಆಡಳಿತ ಮಂಡಳಿಯು ಕಾರ್ಯ ನಿರ್ವಹಿಸುತ್ತಿದೆ. ಈ ಮಂಡಳಿಯಲ್ಲಿ ೧೫ ಜನ ಸದಸ್ಯರಿದ್ದು, ಇವರಲ್ಲಿ ೧೨ ಜನರನ್ನು ಪ್ರಜಾಸತ್ತಾತ್ಮಕವಾಗಿ ಚುನಾವಣೆಯ ಮೂಲಕ ಆಯ್ಕೆ ಮಾಡುತ್ತದೆ. ಉಳಿದ ಮೂವರನ್ನು ಆಜೀವ ಸದಸ್ಯರ ಮಂಡಳಿಯಿಂದ ಅವರ ಜೇಷ್ಠತೆಯ ಆಧಾರದ ಮೇಲೆ ಹಾಗೂ ಸರದಿಯ ಪ್ರಕಾರ ಆಯ್ಕೆ ಮಾಡಲಾಗುತ್ತದೆ. ಈ ಆಡಳಿತ ಮಂಡಳಿಯಲ್ಲಿ ಒಬ್ಬರು ಕಾರ್ಯಾಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಕಾರ್ಯದರ್ಶಿ (ಆಜೀವ ಸದಸ್ಯರ ಗುಂಪಿನಿಂದ ಆಯ್ಕೆಗೊಂಡವರು) ಹಾಗೂ ಸಹ ಕಾರ್ಯದರ್ಶಿಗಳು ಇರುತ್ತಾರೆ. ಈಗ ಇದರ ಬದಲಾಗಿ ಸಂಯೋಜಕರ ಹುದ್ದೆಯನ್ನು ಸೃಷ್ಟಿಸಿ ಜಾರಿಯಲ್ಲಿ ತರಲಾಗಿದೆ. ಆಡಳಿತ ಮಂಡಳಿಯ ಅಧಿಕಾರದ ಅವಧಿ ೫ ವರ್ಷದಾಗಿರುತ್ತದೆ.

ಆಡಳಿತ ಮಂಡಳಿಯವರಿಗೆ ಸಲಹಾತ್ಮಕ ಮಂಡಳಿಯಾಗಿ ಆಜೀವ ಸದಸ್ಯರ ಮಂಡಳಿಯೊಂದು ಕಾರ್ಯನಿರ್ವಹಿಸುತ್ತದೆ. ಈ ಮಂಡಳಿಗೆ ಒಬ್ಬರು ಕಾರ್ಯಾಧ್ಯಕ್ಷರು ಇರುತ್ತಾರೆ. ಈ ಮಂಡಳಿಯಲ್ಲಿ ಇಪ್ಪತ್ತು ಜನ ಸದಸ್ಯರು ಇರಬಹುದಾಗಿದೆ. ಆಜೀವ ಸದಸ್ಯರ ಮಂಡಳಿ ಹಾಗೂ ಆಡಳಿತ ಮಂಡಳಿಯ ಶಿಫಾರಸ್ಸಿನ ಮೇರೆಗೆ ಇವರನ್ನು ಸಾಮಾನ್ಯ ಸಭೆ ನಾಮಕರಣ ಮಾಡುತ್ತದೆ. ಕೆ.ಎಲ್.ಇ. ಸೊಸೈಟಿಯ ಅಂಗಸಂಸ್ಥೆಗಳಲ್ಲಿ ಸೇವಾನಿರತರಾಗಿರುವ ಅಧ್ಯಾಪಕ ವರ್ಗದವರೇ ಈ ಆಜೀವ ಸದಸ್ಯತ್ವಕ್ಕೆ ನಾಮಕರಣಗೊಳ್ಳಲು ಅರ್ಹರಾಗಿರುತ್ತಾರೆ. ಕೆ.ಎಲ್.ಇ. ಸೊಸೈಟಿಯ ಅಂಗ ಸಂಸ್ಥೆಗಳ ಸುಗಮವಾದ ಆಡಳಿತಕ್ಕೆ ಮಾರ್ಗದರ್ಶನ ನೀಡಲು ಪ್ರತಿಯೊಂದು ಅಂಗಸಂಸ್ಥೆಗೆ ಸ್ಥಾನಿಕ ಆಡಳಿತ ಮಂಡಳಿಯಲ್ಲಿ ಕೆ.ಎಲ್.ಇ. ಸಂಸ್ಥೆಯ ಸದಸ್ಯರನ್ನೇ ಆಯ್ಕೆ ಮಾಡಲಾಗುತ್ತದೆ. ಈ ಮಂಡಳಿಗೆ ಒಬ್ಬರು ಕಾರ್ಯಾಧ್ಯಕ್ಷರಿರುತ್ತಾರೆ. ಆಯಾ ಸಂಸ್ಥೆಯ ಮುಖ್ಯಸ್ಥರು ಪದನಿಮಿತ್ತ ಕಾರ್ಯದರ್ಶಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಾರೆ.

ಕೆ.ಎಲ್.ಇ. ಸಂಸ್ಥೆಯ ಪ್ರಧಾನ ಕಾರ್ಯಾಲಯ ಬೆಳಗಾವಿಯ ಲಿಂಗರಾಜ ಕಾಲೇಜಿನ ಕ್ಯಾಂಪಸ್ಸಿನಲ್ಲಿ ಇದೆ. ಈ ಕಾರ್ಯಾಲಯದಿಂದಲೇ ಸಂಸ್ಥೆಯ ಸಮಗ್ರ ಆಡಳಿತ ನೋಡಿಕೊಳ್ಳಲಾಗುತ್ತದೆ.[೧೨]

ಕೆ.ಎಲ್.ಇ. ಸಂಸ್ಥೆಯ ಲಾಂಛನ :

ಇಂದು ಏಶಿಯಾ ಖಂಡದಲ್ಲಿಯೇ ಬೃಹತ್ ಪ್ರಮಾಣದ ಸಂಸ್ಥೆಯಾಗಿ ಬೆಳೆದು ನಿಂತಿರುವ ಕೆ.ಎಲ್.ಇ. ಸಂಸ್ಥೆಗೆ ಅದರ ಸಂಸ್ಥಾಪಕರು ಸತ್ಯ, ಪ್ರೇಮ, ಸೇವೆ, ಸ್ವಾರ್ಥ, ತ್ಯಾಗಗಳೆಂಬ ದಿವ್ಯ ಪದಗಳಿಂದ ಕೂಡಿದ ಸಂಕೇತವೊಂದನ್ನು ರೂಪಿಸಿದರು.

ಆಕರ್ಷಕಮಯವಾದ ಸಂಸ್ಥೆಯ ಸಂಕೇತವು ತನ್ನ ಗರ್ಭದಲ್ಲಿ ಅಮೂಲ್ಯವಾದ ವಿಚಾರ ಧಾರೆಗಳನ್ನು ಧ್ವನಿಸುತ್ತಿರುವುದು ಬಿಡಿ ಬಿಡಿಯಾಗಿ ಗಮನಿಸಿದಾಗ ಮೈನವಿರೇಳುತ್ತವೆ. ಸಂಕೇತವನ್ನು ಮೇಲ್ಮೆಯ ಕಣ್ಣೋಟದಿಂದ ಗಮನಿಸಿದಾಗ ಕಂಡುಬರುವ ಅಂಶಗಳು ಇಂತಿವೆ.

೧. ಮೊದಲನೆಯದಾಗಿ ಬಿಲ್ಲೆಯಂತೆ ಬಾಗಿರುವ ತ್ರಿಕೋನಾಕಾರದ

೨. ಬಿಲ್ಲೆಯ ಒಳಗಡೆ ಷಟ್‌ಸ್ಥಲ ಚಿತ್ರ.

೩. ಷಟ್‌ಸ್ಥಲದ ಕೆಳಗಡೆ ಈಶ್ವರಲಿಂಗ, ಲಿಂಗದ ಮೇಲೆ ಪ್ರಕಾಶಿಸುತ್ತಿರುವ ಬೆಳಕಿನ ಕಿರಣಗಳು.

೪. ಷಟಸ್ಥಳದಲ್ಲಿ ಹಕ್ಕಿಯೊಂದು ಹಾರುತ್ತಿರುವ ದೃಶ್ಯ.

೫. ಬಿಲ್ಲೆಯ ಮೇಲೆ ಬಸವ – ನಂದಿ.

೬. ಬಿಲ್ಲೆಯ ಮೇಲೆ ಹಾಗೂ ಒಳಗಡೆ ಸತ್ಯ, ಪ್ರೇಮ, ಸೇವೆ, ಸ್ವಾರ್ಥ, ತ್ಯಾಗ ಎಂಬ ಅಮೂಲ್ಯವಾದ ಶಬ್ದ ಸಮೂಹ ಸಂಕೇತದ ಚಿತ್ತಾರದಲ್ಲಿ ಮೂಡಿ ಬಂದ ಈ ಎಲ್ಲ ಅಂಶಗಳ ಉದ್ದೇಶ ಇನ್ನೂ ವೈಷಿಷ್ಟ್ಯಮಯವಾಗಿದೆ.

ಬಿಲ್ಲೆಯಂತೆ ಬಾಗಿರುವ ತ್ರಿಕೋನಾಕಾರದ ಮುದ್ರಿಕೆಯ ಕೆಳಭಾಗದಲ್ಲಿ ಮೂಡಿರುವ ಈಶ್ವರಲಿಂಗ, ಸರ್ವಾಂತರ್ಯಾಮಿ ದೈವಶಕ್ತಿಯ ಕುರುಹು. ಅಲ್ಲಿಂದಲೇ ಜ್ಞಾನದ ಪ್ರಕಾರ ಎಂಬುದನ್ನು ಸಂಕೇತಿಸುತ್ತವೆ. ಪ್ರಜ್ವಲಿಸುತ್ತಿರುವ ಬೆಳಕಿನ ಕಿರಣಗಳು, ಬಿಲ್ಲೆಯ ಮೇಲಿರುವ ಬಸವ–ನಂದಿ ವೀರಶೈವ ಧರ್ಮ ವಿಶ್ವಕ್ಕೆ ನೀಡಿರುವ ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿ ಸೂಚಕದ ಪ್ರತೀಕ. ಬಿಲ್ಲೆಯ ಒಳಗಡೆ ಇರುವ ಷಟ್‌ಸ್ಥಲ ಮುದ್ರಿಕೆ ವೀರಶೈವ ಜೀವತತ್ವ, ಈ ಸ್ಥಲಗಳ ಆಧಾರದಿಂದಲೇ ವೀರಶೈವ ಧರ್ಮ ಬೆಳೆಯಬೇಕು, ಉಳಿಯಬೇಕು ಮುದ್ರಿಕೆಯ ಮಧ್ಯದಲ್ಲಿ ಹಾರುತ್ತಿರುವ ರೆಕ್ಕೆಯ ಹಕ್ಕಿ ವಿದ್ಯಾರ್ಜನೆಗೆ ಸಾಗುತ್ತಿರುವ ವಿದ್ಯಾರ್ಥಿಯ ಪ್ರತಿರೂಪ. ಬಿಲ್ಲೆಯ ಮೇಲ್ಗಡೆ ಬರೆಯಲಾದ ಸತ್ಯ, ಪ್ರೇಮ, ಸೇವೆ, ಸ್ವಾರ್ಥ, ತ್ಯಾಗ, ಮೌಲ್ಯಯುತ ಶಬ್ದಗಳು ವಿದ್ಯೆಯ ಪವಿತ್ರ ಪ್ರಕ್ರಿಯೆಗೆ ಪುಣ್ಯಮಯ ಕಾರ್ಯಕ್ಕೆ ಪೂರಕವಾಗಿರುವ ಮಂತ್ರಗಳು, ಒಂದೊಂದು ಮಂತ್ರವೂ ಒಂದೊಂದು ಮೌಲ್ಯವಾಗಿದೆ.[೧೩]

ಸತ್ಯ : ಶಿವಮಯ, ದೇವರನ್ನು ಕಾಣುವುದು ಸತ್ಯದಲ್ಲಿ. ವಿದ್ಯೆಯು ಮೋಕ್ಷದಲ್ಲಿ ಕೊಂಡೊಯ್ಯುವ ದಿವ್ಯ ಸಾಧನ, ಮೋಕ್ಷವೆಂದರೆ ದೇವನಲ್ಲಿ ಒಂದಾಗುವುದು. ಇಂತಹ ಪರಮ ಪವಿತ್ರ ಕಾರ್ಯವಾದ ಮೋಕ್ಷವೆಂದರೆ

ದೇವನಲ್ಲಿ ಒಂದಾಗುವುದು. ಇಂತಹ ಪರಮ ಪವಿತ್ರ ಕಾರ್ಯವಾದ ವಿದ್ಯಾರ್ಜನೆಯು ತನ್ನ ಗುರಿಯನ್ನು ತಲುಪಬೇಕಾದರೆ ಅದರ ಜೀವಾಳ ಸತ್ಯವಾಗಬೇಕು.

ಪ್ರೇಮ : ವಿದ್ಯಾರ್ಜನೆಯ ಮತ್ತು ವಿದ್ಯಾದಾನ ಪ್ರಕ್ರಿಯೆಗೆ ಅಗತ್ಯವಿರುವ ತಂತ್ರಸೂಚಕ ಮೌಲ್ಯ. ಪ್ರೇಮವೇ ಜಗತ್ತಿನ ಉದ್ಧಾರಕ್ಕೆ ತಳಪಾಯ. ಪರಸ್ಪರ ಪ್ರೀತಿ ಪ್ರೇಮಗಳಿಲ್ಲದಿದ್ದರೆ, ಜೀವ ಜಗತ್ತಿನ ಸರ್ವನಾಶಕ್ಕೆ ಮೂಲ. ಅದಕ್ಕಾಗಿ ಎಲ್ಲರೂ ನನ್ನವರು ಎಂಬ ಪ್ರೇಮ ಮನೋಭಾವ ಅತ್ಯಗತ್ಯ. ಪ್ರೇಮ ಎನ್ನುವುದು ಬೋಧಕನಲ್ಲಿ ವಿದ್ಯಾರ್ಜನೆ ಪಡೆಯುವಲ್ಲಿ ಮೌಲ್ಯಯುತವಾಗಿ ಬೆಸುಗೆಯಾಗಬೇಕು.

ಸೇವೆ : ದಾಸೋಹ ತತ್ವದ ಒಂದು ಅವಿಭಾಜ್ಯ ಅಂಗ. ದಾಸೋಹವೇ ಶಿವನ ಸೇವೆ. ವಿದ್ಯಾರ್ಜನೆಯ ಪವಿತ್ರ ಕಾರ್ಯದಲ್ಲಿ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು ವಿದ್ಯೆ ನೀಡುವ ಕಾರ್ಯವನ್ನು ಸೇವಾ ಮನೋಭಾವದಿಂದ ಸ್ವೀಕರಿಸಿ, ಕಾರ್ಯತತ್ಪರರಾಗಬೇಕು.

ಸ್ವಾರ್ಥ–ತ್ಯಾಗ : ಸಂಸ್ಥೆಯನ್ನು ಪೋಷಿಸಬೇಕಾಗಿರುವ, ಸಮಾಜದ ಹೊಣೆಗಾರಿಕೆಯನ್ನು ಎಚ್ಚರಿಸುವ ಮೌಲ್ಯವಾಗಿದೆ. ತನ್ನ ಸ್ವಾರ್ಥದಿಂದ ಸಮಾಜವನ್ನು ಅವನತಿಯತ್ತ ಕೊಂಡೊಯ್ಯದೇ, ತನ್ನ ತ್ಯಾಗದಿಂದ ಅದನ್ನು ಪ್ರಗತಿಯತ್ತ ಕೊಂಡೊಯ್ಯಬೇಕು. ಜನತೆ ಹಾಗೂ ಸಮಾಜದ ಏಳ್ಗೇಗೆ ತನ್ನ ಜ್ಞಾನವನ್ನು ಸ್ವಾರ್ಥ ರಹಿತ ತ್ಯಾಗ ಮನೋಭಾವದಿಂದ ನೀಡಬೇಕು.

ಲಾಂಛನದ ಕರ್ತೃ :

ಕರ್ನಾಟಕ ಲಿಂಗಾಯತ ಎಜ್ಯುಕೇಷನ್ ಸೊಸೈಟಿಯ ಲಾಂಛನವನ್ನು ಅರ್ಥಪೂರ್ಣ ರೀತಿಯಲ್ಲಿ ರೂಪಿಸಿಕೊಟ್ಟ ಕೀರ್ತಿ ಈ ಶತಮಾನದ ವೀರಶೈವ ಪುಣ್ಯ ಪುರುಷರ ಪರಂಪರೆಯ ಆದ್ಯ ಕಲಾವಿದರಲ್ಲಿ ಅಗ್ರಗಣ್ಯರಾದ, ಅಂತಾರಾಷ್ಟ್ರೀಯ ಖ್ಯಾತಿಯ ಶ್ರೀ ದೇವಪ್ಪ ಘೂಳಪ್ಪ ಬಡಿಗೇರ ಇವರಿಗೆ ಸಲ್ಲುತ್ತದೆ.[೧೪]

ಕೆ.ಎಲ್.ಇ. ಸಂಸ್ಥೆಯ ಸದಸ್ಯರ ಮಾಹಿತಿ

ಅ.ನಂ.	ವರ್ಗ	ಸದಸ್ಯರ ಸಂಖ್ಯೆ
೧.	ಬೆನಿಫ್ಯಾಕ್ಟರ್‌ಗಳು	–
೨.	ಗ್ರ್ಯಾಂಡ್ ಪೇಟ್ರನ್ಸ (ಮಹಾಪೋಷಕರು)	೦೧
೩.	ಪೇಟ್ರನ್ಸ್ (ಪೋಷಕರು)	೦೨
೪.	ಫೆಲೋಜ್	೦೨
೫.	ಸಾಮಾನ್ಯ ಸದಸ್ಯರು	೧೨,೨೭೯
೬.	ಗೌರವ ಸದಸ್ಯರು	೦೫

೭. ಆಜೀವ ಸದಸ್ಯರು ೧೨

೮. ನಿವೃತ್ತ ಸದಸ್ಯರು ೧೯೧೫

ಕೆ.ಎಲ್.ಇ. ಸಂಸ್ಥೆಯ ಈವರೆಗಿನ ಪದಾಧಿಕಾರಿಗಳು :

೧. ಅಧ್ಯಕ್ಷರು : ಇಲ್ಲಿಯವರಿಗೆ ಕೆ.ಎಲ್.ಇ. ಸಂಸ್ಥೆಯ ೧೪ ಜನರು ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಈಗ ಪ್ರಸ್ತುತ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಶಿವಾನಂದ ಕೌಜಲಗಿಯವರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

೨. ಉಪಾಧ್ಯಕ್ಷರುಗಳು : ಇಲ್ಲಿಯವರೆಗೆ ೪೨ ಜನ ಸಂಸ್ಥೆಯ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರಸ್ತುತ ಸಂಸ್ಥೆಯ ಉಪಾಧ್ಯಕ್ಷರಾಗಿ ಶ್ರೀ ಎಸ್. ಎಸ್. ಬೆಳಗಾವಿ, ಶ್ರೀ ಬಿ. ಎಸ್. ತಟವಟಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

೩. ಕಾರ್ಯಾಧ್ಯಕ್ಷರು : ಇಲ್ಲಿಯವರಿಗೆ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ೧೧ ಜನ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರಸ್ತುತ ಶ್ರೀ ಪ್ರಭಾಕರ ಕೋರೆಯವರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

೪. ಉಪಾಧ್ಯಕ್ಷರು, ಆಡಳಿತ ಮಂಡಳಿ : ಇಲ್ಲಿಯವರೆಗೆ ೩ ಜನ ಕಾರ್ಯವನ್ನು ನಿರ್ವಹಿಸಿದ್ದಾರೆ.

೫. ಕಾರ್ಯದರ್ಶಿಗಳು : ಕೆ.ಎಲ್.ಇ. ಸಂಸ್ಥೆಯು ಇಲ್ಲಿಯವರೆಗೆ ೧೧ ಜನರು ಸಂಸ್ಥೆಯ ಕಾರ್ಯಾದರ್ಶಿಯಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

ಹೀಗೆ ಕೆ.ಎಲ್.ಇ. ಸಂಸ್ಥೆಯಲ್ಲಿ ಇಲ್ಲಿಯವರೆಗೆ ಇವರ ಎಲ್ಲರ ಶ್ರಮದಿಂದ ಇವತ್ತು ಕೆ.ಎಲ್.ಇ. ಸಂಸ್ಥೆಯು ಒಂದು ಬೃಹತ್ ಶೈಕ್ಷಣಿಕ ಸಾಮ್ರಾಜ್ಯವಾಗಿ ಬೆಳೆದು ನಿಲ್ಲಲು ಈ ಎಲ್ಲ ಮಹನೀಯರು ತಮ್ಮ ಸೇವಾ ಅವಧಿಯಲ್ಲಿ ಬಂದಿಲ್ಲ. ಒಂದು ಹೊಸ ಶಾಖೆಗಳನ್ನು ಹುಟ್ಟು ಹಾಕಲು ಮತ್ತು ಸಂಸ್ಥೆಯನ್ನು ಬೆಳೆಸಲು ಶ್ರಮಿಸಿದ್ದಾರೆ. ಹೀಗಾಗಿ ಇಂದು ಕೆ.ಎಲ್.ಇ. ಸಂಸ್ಥೆಯು ಬಾನ ಎತ್ತರಕ್ಕೆ ಬೆಳೆದು ನಿಲ್ಲಲು ಸಾಧ್ಯವಾಗಿದೆ.

ಅಧ್ಯಕ್ಷರು ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ, ಉಪಾಧ್ಯಕ್ಷರು ಶ್ರೀ ಎಸ್. ಎಸ್. ಬೆಳಗಾವಿ, ಶ್ರೀ ಬಿ. ಎಸ್. ತಟವಟಿ.

ಇಲ್ಲಿಯವರೆಗೆ ಕೆ.ಎಲ್.ಇ. ಸಂಸ್ಥೆಯು ಒಟ್ಟು ೧೩ ಜನ ಅಧ್ಯಕ್ಷರನ್ನು, ಹಾಗೂ ೪೦ ಜನ ಉಪಾಧ್ಯಕ್ಷರನ್ನು, ೧೦ ಜನ ಕಾರ್ಯಾಧ್ಯಕ್ಷರನ್ನು, ೨ ಉಪಕಾರ್ಯಾಧ್ಯಕ್ಷರನ್ನು ಕಂಡಿದೆ. ಇವರೆಲ್ಲರ ಶ್ರಮದಿಂದ ಇವತ್ತು ಕೆ.ಎಲ್.ಇ. ಸಂಸ್ಥೆಯು ಒಂದು ಬೃಹತ್ ಶೈಕ್ಷಣಿಕ ಸಾಮ್ರಾಜ್ಯವಾಗಿ ಬೆಳೆದು ನಿಲ್ಲಲು ಕಾರಣವಾಯಿತು. ಈ ಸಧ್ಯಕ್ಕೆ ಇರುವ ಕೆ.ಎಲ್.ಇ. ಸಂಸ್ಥೆಯ ಪದಾಧಿಕಾರಿಗಳು ಈ ಕೆಳಗಿನಂತಿದ್ದಾರೆ.

ಶ್ರೀ ಎಸ್. ಎಚ್. ಕೌಜಲಗಿ, ಅಧ್ಯಕ್ಷರು

ಶ್ರೀ ಎಸ್. ಎಸ್. ಬೆಳಗಾವಿ, ಉಪಾಧ್ಯಕ್ಷರು

ಶ್ರೀ ಬಿ. ಎಸ್. ತಟವಟಿ, ಉಪಾಧ್ಯಕ್ಷರು

ಡಾ. ಪ್ರಭಾಕರ ಬಿ. ಕೋರೆ

ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರು

ಶ್ರೀ ಅಶೋಕಣ್ಣ ಗ. ಬಾಗೇವಾಡಿ

ಆಡಳಿತ ಮಂಡಳಿಯ ಉಪಾಧ್ಯಕ್ಷರು

ಆಡಳಿತ ಮಂಡಳಿಯ ಸದಸ್ಯರು

೧. ಡಾ. ಪ್ರಭಾಕರ ಬಿ. ಕೋರೆ

೨. ಶ್ರೀ ಅಶೋಕ ಬಾಗೇವಾಡಿ

೩. ಶ್ರೀ ವಿಶ್ವನಾಥ ಆಯ್. ಪಾಟೀಲ

೪. ಶ್ರೀ ಮಹಾಂತೇಶ ಎಂ. ಕವಟಗೀಮಠ

೫. ಶ್ರೀ ಅಮಿತ್ ಪಿ. ಕೋರೆ

೬. ಶ್ರೀ ಶಂಕರಣ್ಣ ಈ. ಮುನವಳ್ಳಿ

೭. ಶ್ರೀ ಬಸವರಾಜ ರು. ಪಾಟೀಲ

೮. ಶ್ರೀ ಯಲ್ಲನಗೌಡ ಶಿ.. ಪಾಟೀಲ

೯. ಶ್ರೀ ಜಯಾನಂದ ಊರ್ಫ ರಾಜು ಎಂ. ಮುನವಳ್ಳಿ

೧೦. ಶ್ರೀ ಅನೀಲ ವಿ. ಪಟ್ಟೇದ

೧೧. ಶ್ರೀ ಶ್ರೀಶೈಲಪ್ಪ ಚ. ಮೆಟಗುಡ್ಡ

೧೨. ಡಾ. ವಿರುಪಾಕ್ಷಿ ಶಿವಲಿಂಗಪ್ಪ ಸಾಧುನವರ

೧೩. ಡಾ. ಎಸ್. ಎಸ್. ಗೌಡರ

೧೪. ಡಾ. ಎಸ್. ಸಿ. ಪಾಟೀಲ

೧೫. ಡಾ. ಮಹಾದೇವ ಡಿ. ದೀಕ್ಷಿತ್

ಕಾರ್ಯದರ್ಶಿ

ಪ್ರೊ. ಎಸ್. ಎಸ್. ಉರಜಿನವರ

ಸಂಯೋಜಕರು :

೧. ಪ್ರೊ. ಎ. ಆರ್. ಪಾಟೀಲ

೨. ಪ್ರೊ. ಆರ್. ನಟರಾಜ

೩. ಆಯ್. ಆರ್. ನೀಲಿ – ನಿರ್ದೇಶಕರು (ಆಡಳಿತ)[೧೬]

ಕೆ.ಎಲ್.ಇ. ಸಂಸ್ಥೆಯ ಐತಿಹಾಸಿಕ ಘಟ್ಟಗಳು :

ಕೆ.ಎಲ್.ಇ. ಸಂಸ್ಥೆಯ ವಿಕಾಸವೆಂದರೆ, ಅದು ಕರ್ನಾಟಕದ ಶೈಕ್ಷಣಿಕ ಬೆಳವಣಿಗೆಯ ಜೈತ್ರಯಾತ್ರೆ ಎಂದೇ ಭಾವಿಸಲಾಗುವುದು. ೧೯೧೬ರಲ್ಲಿ ಆಂಗ್ಲೋವರ್ನಾಕ್ಯುಲರ್ ಎಂಬ ೧ನೇ ತರಗತಿಯು ಇಂಗ್ಲೀಷ್ ಮಾಧ್ಯಮದ ೩೦ ವಿದ್ಯಾರ್ಥಿಗಳಿಂದ ಸಪ್ತರ್ಷಿಗಳ ಶ್ರಮದ ಫಲವಾಗಿ ಬೆಳಗಾವಿಯಲ್ಲಿ ಸ್ಥಾಪಿಸಲಾಯಿತು. ನಂತರ ೧೯೧೭ರಲ್ಲಿ ಪೂರ್ಣ ಪ್ರಮಾಣದಲ್ಲಿ ಜೆ. ಎ. ಮಾಧ್ಯಮಿಕ ಶಾಲೆಯ ಪ್ರಾರಂಭದೊಂದಿಗೆ ನಿರಂತರವಾಗಿ ಕರ್ನಾಟಕದ ಬಹುತೇಕ ನೆರೆ ರಾಜ್ಯಗಳಲ್ಲದೆ ವಿದೇಶಗಳಲ್ಲಿಯೂ ಸಂಸ್ಥೆಯನ್ನು ಹೊಂದಿದೆ.

೧೯೨೨ರಲ್ಲಿ ಧಾರವಾಡದಲ್ಲಿ ಒಂದು ಶಾಲೆಯನ್ನು ನಂತರ ಹೈಸ್ಕೂಲ್‌ನ್ನು ಪ್ರಾರಂಭಿಸಲಾಯಿತು. ೧೯೩೩ರಲ್ಲಿ ಉನ್ನತ ಪದವಿ ಶಿಕ್ಷಣಕ್ಕಾಗಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ದೂರದ ಕೊಲ್ಲಾಪೂರ, ಸಾಂಗ್ಲಿ, ಮುಂಬೈ, ಪೂನಾಕ್ಕೆ ಹೋಗುವ ಅನಿವಾರ್ಯತೆಯನ್ನು ಕಂಡು, ಬೆಳಗಾವಿಯಲ್ಲಿ ಪದವಿ ಕಾಲೇಜು ಸ್ಥಾಪಿಸಬೇಕೆಂದು ನಿರ್ಣಯಿಸಿ, ೧೯೩೩ರಲ್ಲಿ ಲಿಂಗರಾಜ ಕಾಲೇಜನ್ನು ಸ್ಥಾಪಿಸಿ, ಒಂದು ಐತಿಹಾಸಿಕ ಘಟನೆಗೆ ನಾಂದಿಹಾಡಿತು. ನಂತರ ೧೯೪೪ರಲ್ಲಿ ವಿಜ್ಞಾನ ವಿಭಾಗಗಳು ಪ್ರಾರಂಭಗೊಂಡು, ಇದರಿಂದ ಪದವಿ ಶಿಕ್ಷಣ ಪಡೆಯಲು ಬಹುಸಂಖ್ಯಾತರಿಗೆ ಸಾಧ್ಯವಾಯಿತು. ೧೯೩೫ರಲ್ಲಿ ಸವದತ್ತಿಯಲ್ಲಿ ಶ್ರೀ ಕಾಡಸಿದ್ಧೇಶ್ವರ ಹೈಸ್ಕೂಲ್‌ನ್ನು ಪ್ರಾರಂಭಿಸಲಾಯಿತು. ೧೯೩೫ರಲ್ಲಿ ಕೆ.ಎಲ್.ಇ. ಸಂಸ್ಥೆ ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಕರ್ನಾಟಕದಿಂದ ಮಹಾರಾಷ್ಟ್ರ ರಾಜ್ಯಕ್ಕೂ ವಿಸ್ತರಿಸಿತು. ೧೯೩೨ರಲ್ಲಿ ಸೊಲ್ಲಾಪುರದಲ್ಲಿ ಕಾಡಾದಿ ಹೈಸ್ಕೂಲ್ ಪ್ರಾರಂಭವಾಗಿ, ಕನ್ನಡದ ದೀಪ ಬೆಳಗತೊಡಗಿತು. ೧೯೪೦ರಲ್ಲಿ ಬೆಳಗಾವಿಯಲ್ಲಿ ಪ್ರಾಥಮಿಕ ಶಿಕ್ಷಕರಿಗೆ ತರಬೇತಿ ನೀಡುವ ಟ್ರೇನಿಂಗ್ ಕಾಲೇಜು ವೃತ್ತಿ ಮೂಲದ ತರಬೇತಿ ಸಂಸ್ಥೆಯಾಗಿ ಬದಲಾವಣೆಯನ್ನು ಕಂಡಿತು. ೧೯೪೧ರಲ್ಲಿ ಮಹಾರಾಷ್ಟ್ರದ ಬಾರ್ಸಿಯಲ್ಲಿ ಸಿಲ್ವರ್ ಜ್ಯುಬಿಲಿ ಹೈಸ್ಕೂಲ್ ಸ್ಥಾಪನೆಗೊಂಡಿತು. ೧೯೪೩ರಲ್ಲಿ ಬೆಳಗಾವಿಯಲ್ಲಿಯೇ ಕನ್ನಡ ಪ್ರಾಥಮಿಕ ಶಾಲೆಯೊಂದನ್ನು ಪ್ರಾರಂಭಿಸಿದ ಕೆ.ಎಲ್.ಇ. ಸೊಸೈಟಿಯು ಪ್ರಾಥಮಿಕ ಶಿಕ್ಷಣಕ್ಕೆ ಭದ್ರ ಬುನಾದಿಯನ್ನು ಒದಗಿಸಿತು. ಈ ಕಾಲದಲ್ಲಿ ೧೫ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಕ್ಕೆ ಹಾಗೂ ಪದವಿ ಶಿಕ್ಷಣದ ಪ್ರಸಾರಕ್ಕೆ ಸಂಸ್ಥೆಯು ಪ್ರಾಧಾನ್ಯತೆಯನ್ನು ನೀಡಿತು.[೧೭]

೧೯೪೭ರಲ್ಲಿ ಕೆ.ಎಲ್.ಇ. ಸಂಸ್ಥೆ ಹೊಸ ಆಯಾಮವನ್ನು ಪಡೆಯಿತು. ತನ್ನ ಆಲೋಚನಾ ಕ್ರಮವನ್ನು ಬದಲಾಯಿಸಿತು. ಸಾಮಾನ್ಯ ಶಿಕ್ಷಣವಷ್ಟೇ ಅಲ್ಲದೇ, ತಾಂತ್ರಿಕ ಶಿಕ್ಷಣದ ಪ್ರಸಾರಕ್ಕೆ ನಾಂದಿಹಾಡಿತು. ಮಹಾದಾನಿ ಲಿಂಗ್ರಾಜ ಬಸಪ್ಪಣ್ಣ ಭೂಮರೆಡ್ಡಿಯವರ ಕೊಡುಗೆ ಹಾಗೂ ಹೊಸ ಚಿಂತನೆಯ ಫಲವಾಗಿ ಕೆ.ಎಲ್.ಇ. ಸಂಸ್ಥೆಯು ೧೯೪೬ರಲ್ಲಿ ಗದಗಿನಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು (ಪಾಲಿಟೆಕ್ನಿಕ್) ಪ್ರಾರಂಭಿಸಿತು.. ಈ ಸಂಸ್ಥೆ ೧೯೪೭ರಲ್ಲಿ ಹುಬ್ಬಳ್ಳಿಗೆ ಸ್ಥಳಾಂತರಗೊಂಡು ೧೯೪೭ರಲ್ಲಿ ಬಿ. ವಿ. ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜು ಪೂರ್ಣ ಪ್ರಮಾಣದಲ್ಲಿ

ಅಭಿಯಾಂತ್ರಿಕ ಕಾಲೇಜಾಗಿ ಪರಿವರ್ತನೆಗೊಂಡಿತು. ಹುಬ್ಬಳ್ಳಿ ಮೂರುಸಾವಿರ ಮಠದ ಅಂದಿನ ಪೂಜ್ಯ ಜಗದ್ಗುರುಗಳ ಉದಾರ ಕೊಡುಗೆಯಿಂದ ೧೯೪೭ರಲ್ಲಿ ಕಾಮರ್ಸ್ (ವಾಣಿಜ್ಯ) ಕಾಲೇಜನ್ನು ಪ್ರಾರಂಭಿಸಿತು.

೧೯೮೪ರಲ್ಲಿ ಪ್ರಭಾಕರ ಕೋರೆಯವರು ಕೆ.ಎಲ್.ಇ. ಸಂಸ್ಥೆಯ ನೇತೃತ್ವವನ್ನು ವಹಿಸಿದಾಗ ಅವರಿಗೆ ಕೇವಲ ೩೭ರ ಪ್ರಾಯ. ಈ ಹುಡುಗ ಇಂತಹ ದೊಡ್ಡ ಸಂಸ್ಥೆಯನ್ನು ಹೇಗೆ ಮುನ್ನಡೆಸಬಲ್ಲರು, ಎಂದು ಕೆಲವರು ಸಂದೇಹಿಸಿದರು. ಚಿಕ್ಕ ವಯಸ್ಸಿನಲ್ಲಿ ದೊಡ್ಡ ಸವಾಲನ್ನು ಸ್ವೀಕರಿಸಿ, ಕೇವಲ ೨೫ ವರ್ಷಗಳಲ್ಲಿ ೩೭ ಅಂಗಸಂಸ್ಥೆಗಳನ್ನು ಹೊಂದಿದ ಕೆ.ಎಲ್.ಇ. ಸಂಸ್ಥೆಯ ಅಂಗ ಸಂಸ್ಥೆ ಇಂದು ೨೧೧ಕ್ಕೆ ವಿಸ್ತರಿಸಿದ್ದು ನಿಜಕ್ಕೂ ಪವಾಡ ಆಗ ಅಪಸ್ವರ ಎತ್ತಿದವರು ಇಂದು ಅಭಿಮಾನದಿಂದ ಬೆರಗಾಗುವಂತೆ ಮಾಡಿದರು, ಇಂದು ಕೆ.ಎಲ್.ಇ. ಸಂಸ್ಥೆಯನ್ನು ಏಶಿಯಾ ಖಂಡದಲ್ಲಿಯೇ ಪ್ರಥಮ ಶಿಕ್ಷಣ ಸಂಸ್ಥೆಯೆಂಬ ಹೆಗ್ಗಳಿಕೆ ಕೆ.ಎಲ್.ಇ. ಸಂಸ್ಥೆಯದು ಅದರ ಹಿಂದಿನ ಅದಮ್ಯಶಕ್ತಿ ಎಂದರೆ ಶ್ರೀ ಪ್ರಭಾಕರ ಕೋರೆಯವರು. ಇಂದು ಪ್ರತಿವರ್ಷ ಸಂಸ್ಥೆಯಲ್ಲಿ ೮೦ ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗಾಗಿ ೯ ಸಾವಿರ ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದೆ. ಒಟ್ಟು ಸಂಸ್ಥೆಯ ಆಸ್ತಿ ೫೧ ಬಿಲಿಯನ್‌ಕ್ಕೂ ಹೆಚ್ಚು. ಫ್ರಿ ಬ್ಯಾನಿಯನ್ ಹಂತದಿಂದ ಸ್ನಾತಕೋತ್ತರ ನಂತರದ ಹಂತದವರೆಗೆ ಶಿಕ್ಷಣ ದೊರಕುವಂತೆ ಮಾಡಿದ ಇವರು, ಗುಣಮಟ್ಟವನ್ನು ಕಾಯ್ದುಕೊಂಡು ಬಂದಿದ್ದು, ಆಧುನಿಕ ಸ್ಪರ್ಧಾ ಜಗತ್ತಿಗೆ ಅಣಿಗೊಳಿಸಿದ್ದಾರೆ. ಪ್ರಜಾ ಪ್ರಭುತ್ವದ ಯಶಸ್ಸಿನ ಮೂಲಮಂತ್ರ ಶಿಕ್ಷಣ. ಆ ನಿಟ್ಟಿನಲ್ಲಿ ಅದನ್ನು ನಗರ – ಗ್ರಾಮೀಣ ಪ್ರದೇಶಗಳಲ್ಲಿ ಸುಲಭವಾಗಿ ದೊರಕುವಂತೆ ಮಾಡಿದ ಇವರು, ಕೆ.ಎಲ್.ಇ. ಸಂಸ್ಥೆಗೆ ವಿಶ್ವ ವಿದ್ಯಾಲಯದ ಸ್ಥಾನಮಾನ ಸಿಗುವಂತೆ ಮಾಡಿ, ಅದರ ಕುಲಾಧಿಪತಿಯಾಗಿ, ವಿದೇಶಗಳೊಂದಿಗೆ ಒಪ್ಪಂದ ಮಾಡಿಕೊಂಡು, ಕರ್ನಾಟಕ ಲಿಂಗಾಯಿತ ಶಿಕ್ಷಣ ಸಂಸ್ಥೆಯ ಸಾಮ್ರಾಜ್ಯವನ್ನು ವಿಸ್ತರಿಸಿದ ಇವರ ರೀತಿಯು ಅನುಪಮವಾಗಿದೆ.

ಹೀಗೆ ಕೆ.ಎಲ್.ಇ. ಸಂಸ್ಥೆಗೆ ಹೊಸ ಆಯಾಮವನ್ನು ಒದಗಿಸಿಕೊಟ್ಟ ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕವಲ್ಲದೇ, ಇಡೀ ದೇಶವೇ ಹೆಮ್ಮೆ ಪಡುವಂತೆ ಶೈಕ್ಷಣಿಕವಾಗಿ ಕ್ರಾಂತಿಯನ್ನು ಮಾಡಿದ ಇವರ ಕಾರ್ಯದ ಬಗ್ಗೆ ಖ್ಯಾತ ಪತ್ರಕರ್ತ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರು ೯೩ನೇ ಕೆ.ಎಲ್.ಇ. ಸಂಸ್ಥಾಪನೆಯ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡುತ್ತ, "ಡಾ. ಪ್ರಭಾಕರ ಕೋರೆ ಕರ್ನಾಟಕ ರಾಜ್ಯ ಕಂಡ ಅಪರೂಪದ ಕನಸುಗಾರ, ಕನಸುಗಳನ್ನೆಲ್ಲಾ ಸಾಕಾರ ಮಾಡಿದ ಧೀಮಂತ, ಅವರ ದೂರದರ್ಶಿತ್ವ ಸಮಾಜಮುಖಿ ಹೊಸ ಹೊಸ ಚಿಂತನೆಗಳ ಮೂಲಕ ಸಮಾಜಕ್ಕೆ ವಿಶೇಷವಾದ ಕಾಣಿಕೆ ಸಲ್ಲಿಸಿದ್ದಾರೆ. ಈ ಅವರ ಪ್ರಯತ್ನಫಲವಾಗಿ ಇವತ್ತು ಅನೇಕ ಓರೆ ಕೋರೆಗಳ ಮಧ್ಯ ಕೆ.ಎಲ್.ಇ. ಬಾನೆತ್ತರಕ್ಕೆ ಬೆಳೆದು ನಿಂತಿದೆ" ಎಂಬ ಮಾತು ಗಮನಾರ್ಹವಾಗಿದೆ.

೧೯೮೩ರ ವರೆಗಿನ ೬೭ ವರ್ಷಗಳ ಅವಧಿಯಲ್ಲಿ ೩೮ಕ್ಕೂ ಅಧಿಕ ಕಾಲೇಜುಗಳನ್ನು ಸಮರ್ಥ ರೀತಿಯಿಂದ ನಡೆಸಲು ಶಕ್ತವಾಯಿತು.[೧೮] ವಿವಿಧ ಸಂಸ್ಥೆಗಳನ್ನು ಸ್ಥಾಪಿಸಲು ಸಮಾಜದ ಗಣ್ಯರು ಉದಾರವಾಗಿ ಧನ

ಸಹಾಯ ಹಾಗೂ ನಿವೇಶನಗಳನ್ನು ನೀಡಿದರು. ಇವರ ಧನ ಹಾಗೂ ಜಾಗಗಳ ಸಹಾಯದಿಂದ ಆಡಳಿತ ಮಂಡಳಿಯು ಪ್ರಾಮಾಣಿಕತೆಯ ದೂರದರ್ಶಿತ್ವದ ಪರಿಶ್ರಮದ ಫಲವಾಗಿ ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಶೈಕ್ಷಣಿಕವಾಗಿ ಹಿಂದೆ ಉಳಿದಿದ್ದ ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕವಾಗಿ ಕ್ರಾಂತಿಕಾರಿ ಬದಲಾವಣೆಗೆ ಕೆ.ಎಲ್.ಇ. ಸಂಸ್ಥೆಯು ಕಾರಣವಾಗಿತ್ತು. ಇದರಿಂದ ಹಲವಾರು ಬಡ, ಮಧ್ಯಮ, ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವ ಭಾಗ್ಯವನ್ನು ಕೆ.ಎಲ್.ಇ. ಸಂಸ್ಥೆಯು ಒದಗಿಸಿತು. ಇದರ ಪ್ರಯೋಜನ ಪಡೆದ ಸಾವಿರಾರು ಜನ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆ ಪಡೆದರು.

ಕೆ.ಎಲ್.ಇ. ಸೊಸೈಟಿಯ ಪ್ರಮುಖ ಸಮಾರಂಭಗಳಲ್ಲಿ ರಾಷ್ಟ್ರದ, ರಾಜ್ಯದ ಹಲವಾರು ಗಣ್ಯರು, ಅಧಿಕಾರಿಗಳು, ಸಾಹಿತಿಗಳು, ವಿಜ್ಞಾನಿಗಳು ಭಾಗವಹಿಸಿ, ಸಂಸ್ಥೆಯ ಕಾರ್ಯ ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಗಿನಂತಿವೆ.

೧. ೧೯೨೪ರಲ್ಲಿ ಜಿ. ಎ. ಹೈಸ್ಕೂಲ್‌ಗೆ ಖ್ಯಾತ ಕವಯಿತ್ರಿ ಶ್ರೀಮತಿ ಸರೋಜನಿ ನಾಯ್ಡು ಭೇಟಿಕೊಟ್ಟರು.

೨. ೧೯೨೫ರಲ್ಲಿ ಲಿಂಗಾಯತ ಶೈಕ್ಷಣಿಕ ಸಮಾವೇಶಕ್ಕೆ ಅಂದಿನ ದಕ್ಷಿಣ ವಿಭಾಗದ ಕಮೀಷನರ್ ಮಿ. ಎಲ್. ಜೆ. ಮಾಂಟ್‌ಫರ್ಡ್ ಹಾಗೂ ಮುಂಬಯಿ ಸರಕಾರದ ಅರ್ಥ ಮಂತ್ರಿಗಳಾಗಿದ್ದ ಶ್ರೀ ಎಸ್. ಎಸ್. ಲಾರೆನ್ಸ್ ಇವರು ಆಗಮಿಸಿದ್ದರು.

೩. ೧೯೩೩ರಲ್ಲಿ ಲಿಂಗರಾಜ ಕಾಲೇಜಿನ ಉದ್ಘಾಟನೆಗೆ ಮುಂಬೈ ಪ್ರಾಂತದ ಗವರ್ನ್‌ರ್ ಸರ್ ಫ್ರೆಡ್ರಿಕ್‌ಸೈಕ್ಸ ಆಗಮಿಸಿದರು.

೪. ೧೯೩೪ರಲ್ಲಿ ಲಿಂಗರಾಜ ಹಾಸ್ಟೆಲಿನ ಕಟ್ಟಡದ ಅಡಿಗಲ್ಲು ಸಮಾರಂಭಕ್ಕೆ ಮುಂಬಯಿ ಪ್ರಾಂತದ ಆಗಿನ ಗವರ್ನ್‌ರ್ ಲಾರ್ಡ್ ಬ್ರೆಬಾರ್ನ್ ಆಗಮಿಸಿದ್ದರು.

೫. ೧೯೩೪ರಲ್ಲಿ ಬ್ರೆಬಾರ್ನ್ ಹಾಸ್ಟೆಲ್ ಉದ್ಘಾಟನೆಯನ್ನು ಲೇಡಿ ಬ್ರೆಬಾರ್ನ್‌ರಿಂದ ನೆರವೇರಿಸಲಾಯಿತು.

೬. ೧೯೩೫ರಲ್ಲಿ ಲಿಂಗರಾಜ ಕಾಲೇಜಿನ ವಿಜ್ಞಾನದ ವಿಭಾಗವನ್ನು ಮುಂಬಯಿ ಸರ್ಕಾರದ ಶಿಕ್ಷಣ ಸಚಿವರಾದ ಸರ್ ಸಿದ್ದಪ್ಪ ಕಂಬಳಿ ಉದ್ಘಾಟಿಸಿದರು.

೭. ೧೯೪೪ರಲ್ಲಿ ವಿಜ್ಞಾನ ವಿಭಾಗದ ಪದವಿ ವರ್ಗಗಳ ಉದ್ಘಾಟನೆಗೆ ಹಾಗೂ ೧೯೫೮ರಲ್ಲಿ ರಾಜಾ ಲಖಮ ಗೌಡ ವಿಜ್ಞಾನ ಮಹಾವಿದ್ಯಾಲಯದ ಪ್ರತ್ಯೇಕ ಕಾರ್ಯನಿರ್ವಹಣೆಯ ಪ್ರಾರಂಭಕ್ಕೆ ಖ್ಯಾತ ವಿಜ್ಞಾನಿ ಸರ್ ಸಿ. ವ್ಹಿ. ರಾಮನ್ ಆಗಮಿಸಿದ್ದು ಹೆಮ್ಮೆಯ ಸಂಗತಿಯಾಗಿದೆ.

೮. ೧೯೪೮ರಲ್ಲಿ ಲಿಂಗರಾಜ ಕಾಲೇಜಿನ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿಯ ಮೂರ್ತಿ ಅನಾವರಣಕ್ಕೆ ಗೌರವಾನ್ವಿತ ರಾಜಾ ಮಹಾರಾಜಾಸಿಂಗ್ ಆಗಮಿಸಿದ್ದರು.

೯. ೧೯೫೧ರಲ್ಲಿ ಮೈಸೂರು ಸರ್ಕಾರದ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ ಲಿಂಗರಾಜ ಕಾಲೇಜಿಗೆ ಭೇಟಿ ನೀಡಿದರು.

೧೦. ೧೯೫೧ರಲ್ಲಿ ಸವದತ್ತಿಯ ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಹೈಸ್ಕೂಲ್ ಕಟ್ಟಡದ ಉದ್ಘಾಟನೆಯ ಸಮಾರಂಭಕ್ಕೆ, ಭಾರತದ ಪ್ರಥಮ ಪ್ರಧಾನಮಂತ್ರಿಗಳಾದ ಶ್ರೀ ಪಂಡಿತ ಜವಾಹರಲಾಲ್ ನೆಹರು ಆಗಮಿಸಿ, ಉದ್ಘಾಟನೆಯನ್ನು ನೆರವೇರಿಸಿದ್ದು ಹೆಮ್ಮೆಯ ಸಂಗತಿಯಾಗಿದೆ.

೧೧. ೧೯೬೯ರಲ್ಲಿ ಕೆ.ಎಲ್.ಇ. ಸೊಸೈಟಿಯ ವಜ್ರಮಹೋತ್ಸವಕ್ಕೆ ಅಂದಿನ ಭಾರತದ ಉಪ ಪ್ರಧಾನಿಗಳಾಗಿದ್ದ ಶ್ರೀ ಮುರಾರ್ಜಿ ದೇಸಾಯಿಯವರು ಆಗಮಿಸಿದ್ದರು.

೧೨. ೧೯೭೯ರಲ್ಲಿ ಕೆ.ಎಲ್.ಇ. ಸೊಸೈಟಿಯ ವಜ್ರಮಹೋತ್ಸವಕ್ಕೆ ಅಂದಿನ ಭಾರತದ ರಾಷ್ಟ್ರಪತಿಗಳಾಗಿದ್ದ ಶ್ರೀ ಎನ್. ಸಂಜೀವ ರೆಡ್ಡಿ ಆಗಮಿಸಿದ್ದರು.

೧೩. ೧೯೬೧ರಲ್ಲಿ ಬೆಳಗಾವಿ ಲಿಂಗರಾಜ ಕಾಲೇಜು ಬೆಳ್ಳಿಹಬ್ಬದ ಆಚರಣೆಗೆ ಮುಖ್ಯ ಅತಿಥಿಗಳಾಗಿ ಭಾರತದ ಉಪರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಆಗಮಿಸಿದ್ದರು.

೧೪. ಜೆ. ಜಿ. ಕಾಮರ್ಸ್ ಕಾಲೇಜ್ ಹುಬ್ಬಳ್ಳಿ ಬೆಳ್ಳಿಹಬ್ಬದ ಆಚರಣೆಗೆ ೧೯೭೨ರಲ್ಲಿ ಅತಿಥಿಗಳಾಗಿ ಶ್ರೀ ನಾನಿ ಪಾಲ್ಕಿವಾಲಾ ಖ್ಯಾತ ಕಾನೂನು ತಜ್ಞರು ಆಗಮಿಸಿದ್ದರು.

೧೫. ೧೯೭೯ರಲ್ಲಿ ಶ್ರೀ ಕಾಡಸಿದ್ಧೇಶ್ವರ ಕಲಾ ಹಾಗೂ ಕೋತಂಬ್ರಿ ವಿಜ್ಞಾನ ಕಾಲೇಜಿನ ಬೆಳ್ಳಿ ಹಬ್ಬಕ್ಕೆ ಅತಿಥಿಗಳಾಗಿ ಕರ್ನಾಟಕದ ರಾಜ್ಯದ ಅಂದಿನ ರಾಜ್ಯಪಾಲರಾಗಿದ್ದ ಶ್ರೀ ಗೋವಿಂದ ನಾರಾಯಣ ಆಗಮಿಸಿದ್ದರು. ಸಾನಿಧ್ಯವನ್ನು ಮೂರು ಸಾವಿರಮಠದ ಹುಬ್ಬಳ್ಳಿಯ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮೀಜಿ ವಹಿಸಿದ್ದರು.[೧೯]

ಸಂಸ್ಥೆಯ ವಿವಿಧ ಸಮಾರಂಭಗಳಿಗೆ ಭಾರತದ ರಾಷ್ಟ್ರಪತಿಗಳಿಂದ ಹಿಡಿದು, ಉಪರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ರಾಜ್ಯಪಾಲರು, ವಿವಿಧ ಇಲಾಖೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚೀವರು, ಶಿಕ್ಷಣ, ಆರ್ಥಿಕ, ಕಾನೂನಿನ ತಜ್ಞರು, ಪೂಜ್ಯ ಸ್ವಾಮೀಜಿಯವರು ಆಗಮಿಸಿ, ಸಂಸ್ಥೆಯ ಕೀರ್ತಿ ಹೆಚ್ಚಿಸುವಂತೆ ಮಾಡಿದರು.

ಈ ಅವಧಿಯಲ್ಲಿ ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ಕೊಡುಗೆ ಅಪಾರವಾದದ್ದು :

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಲ್ಲಿ ಸಂಸ್ಥೆಯ ಕೊಡುಗೆ ಅಪಾರವಾಗಿದೆ. ಅಖಿಲ ಭಾರತ ವೀರಶೈವ ಸಮ್ಮೆಳನಗಳನ್ನು ಸಂಘಟಿಸಿ, ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ, ಅದರಲ್ಲಿ ಮರಾಠಿ ಹಾಗೂ ಇಂಗ್ಲೀಷ್ ಭಾಷೆಯ ಪ್ರಭಾವವನ್ನು ಕಡಿಮೆಗೊಳಿಸಿ, ಕನ್ನಡ ಭಾಷೆಯ ಬೆಳವಣಿಗೆಗೆ ಸಂಸ್ಥೆಯು ಮಹತ್ವದ ಪಾತ್ರವನ್ನು ವಹಿಸಿದೆ. ಮಹಾಜನ ಆಯೋಗದ ಮುಂದೆ ಸಂಸ್ಥೆಯು ಸಾಕ್ಷಿ ಹೇಳಿದ್ದು, ಕನ್ನಡದ ಬಗ್ಗೆ ಇರುವ ಅಭಿಮಾನವನ್ನು ತೋರುತ್ತದೆ. ಹೀಗೆ ಸಂಸ್ಥೆ ಶಿಕ್ಷಣ ಪ್ರಸಾರದ ಜೊತೆಗೆ ಕನ್ನಡ ಭಾಷೆ, ನೆಲ, ಸಾಹಿತ್ಯವನ್ನು ಬೆಳೆಸುತ್ತಾ ಬಂದಿರುವುದು ತಿಳಿಮುಬರುತ್ತದೆ.

ಡಾ. ಪ್ರಭಾಕರ ಕೋರೆ ಮತ್ತು ಕೆ.ಎಲ್.ಇ. ಸಂಸ್ಥೆ :

ಶ್ರೀ ಕೋರೆಯವರ ಶೈಕ್ಷಣಿಕ ಸಾಧನೆಗಳು :

ಡಾ. ಪ್ರಭಾಕರ ಕೋರೆಯವರು ಕೆ.ಎಲ್.ಇ. ಸಂಸ್ಥೆಯ ಆಧುನೀಕರಣದ ಶಿಲ್ಪಿ. ಸಂಸ್ಥೆಯು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆಯಲು ಕೋರೆಯವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ತಮ್ಮ ಬಹುತೇಕ ಸಮಯವನ್ನು ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಗೆ ಮೀಸಲು ಇರಿಸಿದ ಫಲವಾಗಿ ಇಂದು ಕೆ.ಎಲ್.ಇ. ಸಂಸ್ಥೆಯು ಶೈಕ್ಷಣಿಕ ಇತಿಹಾಸದಲ್ಲಿ ಒಂದು ಅಚ್ಚರಿಯ ದೈತ್ಯ, ಶೈಕ್ಷಣಿಕ ಸಾಮ್ರಾಜ್ಯವಾಗಿ ಬೆಳೆದು ನಿಂತಿದೆ. ಫ್ರಿ. ಬ್ಯಾನಿಯನ್ ಹಂತದಿಂದ ಹಿಡಿದು ಸ್ನಾತಕೋತ್ತರ ಹಂತದವರೆಗೆ ಶಿಕ್ಷಣ ನೀಡುವಂತೆ ಮಾಡಿದ ಇವರು, ಇಂದು ಕೆ.ಎಲ್.ಇ. ಸಂಸ್ಥೆಗೆ ವಿಶ್ವವಿದ್ಯಾಲಯದ ಸ್ಥಾನಮಾನ ಸಿಗುವಂತೆ ಮಾಡಿ, ರಾಜ್ಯದ ಹೊರಗೆ ಮತ್ತು ಪರದೇಶಗಳಲ್ಲಿ ಕೆ.ಎಲ್.ಇ. ಸಂಸ್ಥೆಯನ್ನು ವಿಸ್ತರಿಸಿದ್ದಾರೆ.

ಅಣ್ಣ ಚಿದಾನಂದ ಬ. ಕೋರೆಯವರ ನಿಧನದ ನಂತರ ೧೯೮೩ರಲ್ಲಿ ಸಂಸ್ಥೆಗೆ ನಡೆದ ಮರು ಚುನಾವಣೆಯಲ್ಲಿ ೧೦೦೦ ಮತಗಳನ್ನು ಪಡೆಯುವ ಮೂಲಕ ಭಾರೀ ಅಂತರದಿಂದ ವಿಜಯಶಾಲಿಯಾಗಿ, ಕೆ.ಎಲ್.ಇ. ಸಂಸ್ಥೆಗೆ ನಿರ್ದೇಶಕರಾಗಿ ಆಯ್ಕೆಯಾಗಿ, ಸಂಸ್ಥೆಗೆ ಪ್ರವೇಶ ಪಡೆದರು, ನಂತರ ೧೯೮೪ರಲ್ಲಿ ನಡೆದ ಚುನಾವಣೆಯಲ್ಲಿ ಮತ್ತೆ ಆಯ್ಕೆಯಾಗಿ ಕೇವಲ ೩೭ ವರ್ಷ ವಯಸ್ಸಿನಲ್ಲಿ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಅಂದಿನಿಂದ ಕೆ.ಎಲ್.ಇ. ಸಂಸ್ಥೆಯ ಸುವರ್ಣಯುಗ ಪ್ರಾರಂಭವಾಯಿತು ಎಂದೇ ಹೇಳಬೇಕು.

ಮಾನವ ಇತಿಹಾಸವನ್ನು ಅವಲೋಕಿಸಿದರೆ, ಜೀವಿತ ಅವಧಿಯಲ್ಲಿ ದಂತಕಥೆಯಾದವರು ವಿರಳ. ಹಾಗೆ ಆಗುವುದೂ ಕಷ್ಟ. ಸಮಾಜದ ಬಹುಮುಖ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಡಾ. ಪ್ರಭಾಕರ ಕೋರೆಯವರು ಈ ಸಾಧನೆ ಮಾಡಿದ್ದಾರೆ. ಕೆ.ಎಲ್.ಇ. ಸಂಸ್ಥೆ ಜಾಗತಿಕ ಮಟ್ಟದಲ್ಲಿ ಮಿಂಚಲು ಸವೆಸಿದ ಹಾದಿಯನ್ನು ಮೆಲುಕು ಹಾಕಿದರೆ, ಕೋರೆಯವರ ಶ್ರಮದ ಸಾಧನೆ, ದೂರದೃಷ್ಟಿ, ಕರ್ತೃತ್ವ ಶಕ್ತಿ, ಎದುರಿಸಿದ ಸಮಸ್ಯೆ ಹಾಗೂ ಸವಾಲು, ಮಾಡಿದ ತ್ಯಾಗದ ಚಿತ್ರಣ ಬಿಚ್ಚಿಕೊಳ್ಳುತ್ತದೆ.

ಕೆ.ಎಲ್.ಇ. ಸಂಸ್ಥೆ ಎಂದರೆ ವ್ಯಾಟಿಕನ್ ಸಿಟಿ ಇದ್ದ ಹಾಗೆ. ಸಂಸ್ಥೆಯ ಕಾರ್ಯಾಧ್ಯಕ್ಷರು ವಾಟಿಕನ್ ಪೋಪರು ಹಾಗೆ. ವ್ಯಾಟಿಕನ್ ಪೋಪರು ಜಗತ್ತಿನ ತುಂಬಾ ಪ್ರಭಾವ ಹೊಂದಿರುವಂತೆ, ಕೆ.ಎಲ್.ಇ. ಸಂಸ್ಥೆಯ ಆಧುನೀಕರಣದ ಶಿಲ್ಪಿ ಪ್ರಬಾಕರ ಕೋರೆ ತುಂಬಾ ಪ್ರಭಾವಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಕೋರೆಯವರು ಕೆ.ಎಲ್.ಇ. ಸಂಸ್ಥೆಯನ್ನು ಬೆಳೆಸಿದ ಪರಿಯನ್ನು ಕಂಡು ಮುಕ್ತಕಂಠದಿಂದ ಪ್ರಶಂಸಿಸಿದ್ದು ಆಗಿನ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಎ. ಎಂ. ಪಠಾಣ ೧೯೯೯ರಲ್ಲಿ ಹೇಳಿದ ಮಾತಿದು.[೨೦] ಈ ರೀತಿಯ ಹೋಲಿಕೆ ಮಾಡಲು ಕೆ.ಎಲ್.ಇ. ಸಂಸ್ಥೆಯನ್ನು ಕೋರೆಯವರು ಬೃಹತ್ ಪ್ರಮಾಣದಲ್ಲಿ ಬೆಳೆಸಿದ ಪರಿಯನ್ನು ಗಮನಿಸಿದ್ದರೆ ನಿಜಕ್ಕೂ ಇದು ಸೂಕ್ತವೆನಿಸುತ್ತದೆ.

"ಕೆಲವರು ಕಾಲಿಡುತ್ತಾರೆ ಮತ್ತೆ ಕೆಲವರು ದಾಪುಗಾಲಿಡುತ್ತಾರೆ". ಮೊದಲ ಗುಂಪಿಗೆ ಸೇರಿದವರು ಸಿಂಗರ್

ಪ್ರಿಂಟ್ಸ್ ಬಿಟ್ಟು ಹೋಗುತ್ತಾರೆ. ಎರಡನೆ ಗುಂಪಿಗೆ ಸೇರಿದವರು ಫುಟ್ ಪ್ರಿಂಟ್ಸ್ (ಹೆಜ್ಜೆ ಗುರುತು) ಬಿಡುತ್ತಾರೆ. ಕೋರೆಯವರು ಎರಡನೆಯ ಗುಂಪಿಗೆ ಸೇರಿದವರು[೨೧] ಎಂಬ ಅಭಿಪ್ರಾಯವ ಖ್ಯಾತ ಪರ್ತಕರ್ತರಾದ ಶ್ರೀ ವಿಶ್ವೇಶ್ವರ ಭಟ್ ಅವರದು. ಅದಕ್ಕೆ ಕಾರಣ ಕೋರೆಯವರು ಸ್ಥಾಪಿಸಿದ ಹೊಸ ಬಗೆಯ ಕೋರ್ಸುಗಳು ಕಟ್ಟಡದಿಂದ ಭವ್ಯ ಕಟ್ಟಡಗಳು ಕೆ.ಎಲ್.ಇ. ಎಂಬ ವಿಶ್ವ ವಿಖ್ಯಾತಿಯ ಬೃಹತ್ ಅತ್ಯಾಧುನಿಕ ಆಸ್ಪತ್ರೆಯು ಕೋರೆಯವರ ಜೀವಂತ ಸ್ಮಾರಕದಂತೆ ಇದೆ. ಹೀಗೆ ಕೆ.ಎಲ್.ಇ. ಸಂಸ್ಥೆಯು ಹಬ್ಬಿದ ಪರಿ, ಬೆಳೆಸಿದ ರೀತಿಯನ್ನು ಕಂಡಾಗ, ಒಂದು ಸಂಸ್ಥೆಯನ್ನು ಹೇಗೆ ಕಟ್ಟಬೇಕು ಎಂಬುದಕ್ಕೆ ಕೆ.ಎಲ್.ಇ. ನಿದರ್ಶನವಾಗಿದೆ. ಅದನ್ನು ಹೇಗೆ ಮುನ್ನಡೆಸಬೇಕೆಂಬುದಕ್ಕೆ ಡಾ. ಪ್ರಭಾಕರ ಕೋರೆಯವರು ಮಾದರಿಯಾಗಿದ್ದಾರೆ. ಹೀಗೆ ಕೆ.ಎಲ್.ಇ. ಸಂಸ್ಥೆಗೆ ಆಧುನಿಕ ಸ್ಪರ್ಶ ನೀಡಿ, ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆಯುವಂತೆ ಮಾಡಿದ ಕೋರೆಯವರ ಶ್ರಮ ಎದ್ದು ಕಾಣುತ್ತದೆ.

ಕೆ.ಎಲ್.ಇ. ಸಂಸ್ಥೆಯಲ್ಲಿ ಡಾ. ಪ್ರಭಾಕರ ಕೋರೆಯವರು ಸ್ಥಾಪಿಸಿದ ಹೊಸ ಪದವಿಪೂರ್ವ ಕಾಲೇಜುಗಳು :

ಪದವಿ ಹಾಗೂ ಪದವಿಪೂರ್ವ ಕಾಲೇಜುಗಳು ಅವಶ್ಯಕವಿರುವ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಕೆ.ಎಲ್.ಇ. ಸಂಸ್ಥೆಯು ಹೊಸ ಕಾಲೇಜುಗಳನ್ನು ಸ್ಥಾಪಿಸಲು ಮುಂದಾಗಿ, ಆ ಭಾಗದಲ್ಲಿನ ಬಹುದಿನದ ಜನರ ಬೇಡಿಕೆಗಳನ್ನು ಕೋರೆಯವರು ಈಡೇರಿಸಿದ್ದಾರೆ. ಬಹು ದಿನಗಳಿಂದ ಗದಗಿನಲ್ಲಿ ಒಂದು ಪ್ರತ್ಯೇಕ ಮಹಿಳಾ ಮಹಾವಿದ್ಯಾಲಯದ ಬೇಡಿಕೆ ಇತ್ತು. ೧೯೮೫ರಲ್ಲಿ ಕಲಾ ಹಾಗೂ ವಾಣಿಜ್ಯ ವಿಭಾಗದ ಕಾಲೇಜನ್ನು ಗದಗಿನಲ್ಲಿ ಪ್ರಾರಂಭಿಸಿ ಅದಕ್ಕೆ ಒಂದು ಸುಂದರ, ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ, ಮಹಿಳೆಯರು ನಿರ್ಭೀತಿಯಿಂದ ಮುಕ್ತವಾಗಿ ಅಧ್ಯಯನ ಮಾಡುವಂತೆ ಪ್ರತ್ಯೇಕ ಕಾಲೇಜನ್ನು ಸ್ಥಾಪಿಸಿದ್ದಾರೆ. ಅನೇಕ ವಿದ್ಯಾರ್ಥಿನಿಯರು ಪದವಿ ಶಿಕ್ಷಣವನ್ನು ಪೂರೈಸಲು ಸಾಧ್ಯವಾಗಿದೆ. ೨೦೦೧ರಲ್ಲಿ ಅಂಕೋಲಾದಲ್ಲಿ ಮಹಿಳಾ ಮಹಾವಿದ್ಯಾಲಯ ಸ್ಥಾಪಿಸಿದ ಕೋರೆಯವರು ಇಂದು ಮಹಿಳಾ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿರುವುದು ಸಂಶೋಧನೆಯಿಂದ ವ್ಯಕ್ತವಾಗುತ್ತದೆ.[೨೨] ೧೯೮೫ರಿಂದ ಪದವಿ ಮಹಾವಿದ್ಯಾಲಯಗಳತ್ತ ಸರ್ಕಾರ ತೋರುತ್ತಿರುವ ನಿರ್ಲಕ್ಷವನ್ನು ಕಂಡುಕೊಂಡು, ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಸ್ಥಾಪಿಸುವ ಸಾಹಸ ಮಾಡಿದ ಕೋರೆಯವರು ಹಾಗೂ ಅವುಗಳ ಯಶಸ್ಸಿಗಾಗಿ ಮುನ್ನಡೆಯಲು ಹಣಕಾಸಿನ ಕೊರತೆ ಬೀಳದಂತೆ ಅವುಗಳನ್ನು ಮುನ್ನಡೆಸಿದ್ದು ಕಂಡಾಗ ಅವರ ಆತ್ಮವಿಶ್ವಾಸ ಎಂತಹದು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಸರ್ಕಾರದ ಅನುದಾನ ಇಲ್ಲದೇ ಕಾಲೇಜುಗಳನ್ನು ನಡೆಸುವುದು ಕಷ್ಟವೇ ಸರಿ. ಎಷ್ಟೋ ಪದವಿಪೂರ್ವ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜುಗಳು ಸರ್ಕಾರದ ಧನಸಹಾಯ ಇಲ್ಲದೇ ೧೯೯೦ರ ದಶಕದಲ್ಲಿ ರಾಜ್ಯದಲ್ಲಿ ಮುಚ್ಚಲ್ಪಟ್ಟವು. ಕೋರೆ ಅವರು ಮಾತ್ರ ಧೈರ್ಯಗೆಡದೇ ಕಾಲೇಜುಗಳನ್ನು ಸ್ಥಾಪಿಸಿ, ಅವುಗಳಿಗೆ ಬೋಧಕರ ಕೊರತೆ ಬೀಳದಂತೆ, ತಾತ್ಕಾಲಿಕ ಉಪನ್ಯಾಸಕರನ್ನು ರಾಜ್ಯದ ಯಾವುದೇ ಶಿಕ್ಷಣ ಸಂಸ್ಥೆಯು ನೀಡದೇ ಇರುವಷ್ಟು ವೇತನವನ್ನು ಕೊಟ್ಟು, ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದ್ದಾರೆ. ಉದಾ: ಪ್ರತಿವರ್ಷ ಸುಮಾರು ರೂ. ೧೫

ಲಕ್ಷದಷ್ಟು ರೂ.ಗಳನ್ನು ಒಂದು ಕಾಲೇಜಿನಿಂದ ಅರೆಕಾಲಿಕ ಸಿಬ್ಬಂದಿಗೆ ಸಂಬಳ ರೂಪದಲ್ಲಿ ಕೊಡುತ್ತಾ ಬಂದಿದ್ದಾರೆ. ಮುಖ್ಯ ಸಂಗತಿಯೆಂದರೆ, ಕೋರೆಯವರು ಕೇವಲ ಸಂಸ್ಥೆಗೆ ಆದಾಯ ತರುವ ಕೋರ್ಸ್‌ಗಳತ್ತ ಗಮನಹರಿಸದೆ, ಮೂಲ ಶಿಕ್ಷಣವಾದ ಕಲಾ ಹಾಗೂ ವಾಣಿಜ್ಯ ವಿಭಾಗಗಳನ್ನು ಸ್ಥಾಪಿಸುತ್ತಾ ಬಂದಿದ್ದಾರೆ. ನಷ್ಟವಾದರೂ ಚಿಂತೆಯಿಲ್ಲ ಆ ವಿಭಾಗಗಳು ನಡೆಯಬೇಕು ಎನ್ನುವುದು ಅವರ ಶೈಕ್ಷಣಿಕ ಪ್ರೀತಿಗೆ ಸಾಕ್ಷಿಯಾಗಿದೆ.

ಶ್ರೀ ಕೋರೆಯವರು ಸ್ಥಾಪಿಸಿದ ಹೊಸ ಪದವಿಪೂರ್ವ ಕಾಲೇಜುಗಳು ಈ ಕೆಳಗಿನಂತಿವೆ.

೧. ಕೆ.ಎಲ್.ಇ. ಸಂಸ್ಥೆಯ ಪದವಿ ಪೂರ್ವ ಕಾಲೇಜು, ಗೋಕಾಕ. ೧೯೮೭ರಲ್ಲಿ ಸ್ಥಾಪಿಸಿದರು.

೨. ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ೧೯೯೫ರಲ್ಲಿ ಹೊಸ ಕಾಲೇಜನ್ನು ಪ್ರಾರಂಭಿಸಿದರು. ಹಾಗೆಯೇ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಗುರುತಿಸಿ, ೨೦೦೭ರಲ್ಲಿ ಬೆಂಗಳೂರಿನ ಹೊರವಲಯದಲ್ಲಿ ನಾಗರಬಾವಿಯಲ್ಲಿ ಮತ್ತೊಂದು ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಬೆಂಗಳೂರು ಹೊರವಲಯದಲ್ಲಿ ನಗರದ ದಟ್ಟನೆಯ ಸಂಚಾರದಿಂದ ಮುಕ್ತವಾದ ಸ್ಥಳದಲ್ಲಿ ಕಾಲೇಜನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಿದ ಕೀರ್ತಿ ಕೋರೆಯವರದು. ಹಾಗೆಯೇ ೨೦೦೩ರಲ್ಲಿ ಸಂಶಿಯಲ್ಲಿ ಪದವಿಪೂರ್ವ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಹಾಗೂ ೨೦೦೪ರಲ್ಲಿ ಗಡಿಭಾಗದ ಖಾನಾಪೂರದಲ್ಲಿ ಪದವಿಪೂರ್ವ ವಿಜ್ಞಾನ ಕಾಲೇಜನ್ನು ಸ್ಥಾಪಿಸುವ ಮೂಲಕ ವಿದ್ಯಾರ್ಥಿಗಳು ಹಾಗೂ ಆ ಭಾಗದ ಜನರ ಬೇಡಿಕೆಯನ್ನು ಪೂರೈಸಿದ ಶ್ರೇಯಸ್ಸು ಕೋರೆಯವರದಾಗಿದೆ. ೨೦೦೧ರಲ್ಲಿ ಗಂಗಾವತಿಯಲ್ಲಿ ವಿಜ್ಞಾನ ಪದವಿಪೂರ್ವ ಕಾಲೇಜನ್ನು ಸ್ಥಾಪಿಸಿದ್ದಾರೆ. ಡಾ. ನಂಜುಂಡಪ್ಪ ವರದಿಯ ಪ್ರಕಾರ ಹೈದರಾಬಾದ-ಕರ್ನಾಟಕ ಪ್ರದೇಶದಲ್ಲಿ ಶೈಕ್ಷಣಿಕವಾಗಿ ಸಾಕಷ್ಟು ಹಿಂದೆ ಉಳಿದಿದ್ದು ಮತ್ತು ಆ ಭಾಗದ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳ ಕೊರೆತ ಗಮನಿಸಿದ ಕೋರೆಯವರು, ಅಲ್ಲಿ ಎಲ್ಲ ಆಧುನಿಕ ಸೌಲಭ್ಯಗಳನ್ನು ಒದಗಿಸಿ, ಗಂಗಾವತಿಯಲ್ಲಿ ವಿಜ್ಞಾನ ಕಾಲೇಜು ಪ್ರಾರಂಭಿಸುವ ಮೂಲಕ ಆ ಪ್ರದೇಶಗಳ ಅಸಮಾನತೆಯನ್ನು ಕಡಿಮೆಗೊಳಿಸಿದ್ದಾರೆ.

೨೦೦೭ರಲ್ಲಿ ಕುಕನೂರಿನಲ್ಲಿ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಪದವಿ ಕಾಲೇಜುಗಳನ್ನು ಸ್ಥಾಪಿಸಿದರು. ಅಥಣಿ ತಾಲೂಕು ಶಿರಗುಪ್ಪಿಯಲ್ಲಿ ೨೦೦೭ರಲ್ಲಿ ಪ.ಪೂ. ಕಾಲೇಜನ್ನು ಪ್ರಾರಂಭಿಸಿದರು. ೨೦೦೮ರಲ್ಲಿ ರಾಯಬಾಗ ಹಾಗೂ ಗಂಗಾವತಿಯಲ್ಲಿ ಪದವಿಪೂರ್ವ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಸಂಸ್ಥೆಯ ಕಾರ್ಯಚಟುವಟಿಕೆಯನ್ನು ವಿಸ್ತರಿಸಿದರು.

ಒಟ್ಟು ೧೧ ಪದವಿ ಪೂರ್ವ ಕಾಲೇಜುಗಳನ್ನು ಸ್ಥಾಪಿಸಿ, ಕೆ.ಎಲ್.ಇ. ಸಂಸ್ಥೆಯ ಅಂಗ ಸಂಸ್ಥೆಗಳ ಶಾಖೆಗಳನ್ನು ವಿಸ್ತರಿಸಿದರಲ್ಲದೇ, ಬೇರೆ ಸ್ಥಳಗಳಲ್ಲಿ ಸಂಸ್ಥೆಯ ಶಾಖೆಗಳನ್ನು ಪ್ರಾರಂಭಿಸಿದ ಕೀರ್ತಿ ಕೋರೆಯವರದ್ದಾಗಿದೆ.[೨೩]

ಹೀಗೆ ಸ್ಥಾಪಿಸಿದ ಕಾಲೇಜುಗಳಲ್ಲಿ ಅಗತ್ಯವಾದ ಬೋಧಕರನ್ನು ನೇಮಿಸಿ, ಕೋಟ್ಯಾಂತರ ರೂಪಾಯಿಗಳ ಸುಸಜ್ಜಿತವಾದ ಕಟ್ಟಡವನ್ನು ಕಟ್ಟಿಸಿ, ಅಗತ್ಯವಾದ ಗ್ರಂಥಾಲಯ ಹಾಗೂ ಪ್ರಯೋಗಾಲಯಗಳನ್ನು ಸ್ಥಾಪಿಸುವ

ಮೂಲಕ ಮೂಲಭೂತ ಆಧುನಿಕ ಸೌಲಭ್ಯಗಳನ್ನು ಒದಗಿಸಿ, ಸಾವಿರಾರು ವಿದ್ಯಾರ್ಥಿಗಳ ಶಿಕ್ಷಣದ ದಾಹವನ್ನು ನೀಗಿಸುತ್ತಿವೆ.

ಸರ್ಕಾರದ ಸಹಾಯಧನದ ಕೊರತೆ ಇದ್ದರೂ, ಕಲಾ ಹಾಗೂ ವಾಣಿಜ್ಯ- ವಿಜ್ಞಾನ ಪದವಿ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಸ್ಥಾಪಿಸುವುದರೊಂದಿಗೆ ಯಶಸ್ವಿಯಾಗಿ ಯಾವುದೆ ಕೊರತೆ ಬೀಳದ ರೀತಿಯಲ್ಲಿ ಮುನ್ನಡೆಸುತ್ತಿರುವುದು ಕೋರೆಯವರ ಕಾರ್ಯದಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಒಂದು ಸರ್ಕಾರಕ್ಕೂ ಸಹ ಈ ವಿಭಾಗಗಳ ಪ್ರಾರಂಭದಿಂದ ನಷ್ಟವಾಗುತ್ತದೆ ಎಂದು ಹಿಂದೆ ಮುಂದೆ ನೋಡುತ್ತಿರುವ ಈ ಸಮಯದಲ್ಲಿ, ಕೆ.ಎಲ್.ಇ. ಸಂಸ್ಥೆ ಇವುಗಳನ್ನು ಸ್ಥಾಪಿಸಿ, ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿರುವುದು ಗಮನಾರ್ಹವಾಗಿದೆ.

ಪ್ರಜಾಪ್ರಭುತ್ವದ ಯಶಸ್ಸು ಅಡಗಿರುವುದು ಸುಸಜ್ಜಿತ ಸಮಾಜದ ನಿರ್ಮಾಣದಲ್ಲಿ. ಅದರಂತೆಯೇ ಕೋರೆಯವರು ಮೂಲಭೂತ ಶಿಕ್ಷಣಕ್ಕೆ ಆದ್ಯತೆ ನೀಡಿರುವುದನ್ನು ಗಮನಿಸಬಹುದು. ಭಾರತ ಸಂವಿಧಾನವು ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಂವಿಧಾನದ ೧೪ನೇ ಕಲಂನಲ್ಲಿ ಸ್ಪಷ್ಟಪಡಿಸುತ್ತದೆ. ಅದರ ಆಶಯವಾಗಿ ಭಾಗವಾಗಿ ಶ್ರೀ ಪ್ರಭಾಕರ ಕೋರೆಯವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದ ಶಿಕ್ಷಣಕ್ಕೆ ಬಹಳಷ್ಟು ಆದ್ಯತೆ ನೀಡಿರುವುದನ್ನು ಗುರುತಿಸಬಹುದು. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಅದರಂತೆ ಆಂಗ್ಲ, ಕನ್ನಡ ಮಾಧ್ಯಮಗಳಲ್ಲಿ ಶಾಲೆಗಳನ್ನು ಸ್ಥಾಪಿಸುವತ್ತ ಗಮನ ಹರಿಸಿದ್ದಾರೆ.

ದೇಶದ ಇತಿಹಾಸದಲ್ಲಿಯೇ ದಿ ಬ್ಯಾನಿಯನ್ ಪ್ರಿ ಸ್ಕೂಲ್ ಎಂಬ ಶೈಕ್ಷಣಿಕ ಹೊಸ ಆವಿಷ್ಕಾರ ಕೆ.ಎಲ್.ಇ. ಸಂಸ್ಥೆಯ ಮೂಲಕ ದೇಶಕ್ಕೆ ನೀಡಿದ ಕೊಡುಗೆ :

ಬಾಲ್ಯಾವಸ್ಥೆಯಲ್ಲಿಯೇ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನವೀನತೆ ಅಳವಡಿಸುವ ದೃಷ್ಟಿಯಿಂದ ಬ್ಯಾನಿಯನ್ ಅಮೇರಿಕಾ ದೇಶದ ಮೆಗಲಿನ್ ಮ್ಯಾನೆಜಮೆಂಟ್ ಹಾಗೂ ದೆಹಲಿಯ ಬಸವ ಇಂಟರ್ ನ್ಯಾಷನಲ್ ಸ್ಕೂಲ್ ಸಂಸ್ಥೆಗಳ ಒಡಂಬಡಿಕೆಯ ಅಡಿಯಲ್ಲಿ ಸ್ಥಾಪಿಸಲಾಗುತ್ತಿರುವ ಯೋಜನೆ ಇದಾಗಿದೆ. ಬೆಳಗಾವಿಯಲ್ಲಿ ಪ್ರಾರಂಭಿಸಲಾದ ಈ ಶಾಲೆಯು ಪ್ರಥಮ ಭಾರತ ದೇಶದ ಘಟಕವಾಗಿದೆ. ೯ ತಿಂಗಳಿಂದ ೪ ವರ್ಷದ ಮಕ್ಕಳಿಗೆ ದಿ ಬ್ಯಾನಿಯನ್ ಶಾಲೆಯು ಪ್ರೋನೆಟ್ ೧೯ ತಿಂಗಳಿಂದ ೧.೫ ವರ್ಷದ ಮಕ್ಕಳಿಗೆ, ಕುಡ್ಲ್‌ಬಗ್ಸ ೧.೬ ರಿಂದ ೨.೫ ವರ್ಷದ ಮಕ್ಕಳಿಗೆ, ಬಟರ್ ಫ್ಲೈಸ್ ೩.೬ ರಿಂದ ೪.೫ ವರ್ಷದ ಮಕ್ಕಳಿಗೆ. ಹೀಗೆ ನಾಲ್ಕು ವಿಭಾಗಗಳಲ್ಲಿ ವಿಶಿಷ್ಠ, ಸುಸಂಘಟಿತ, ಸೂಕ್ಷ್ಮ ವಿಷಯ ಗ್ರಹಣ, ವಿಶಿಷ್ಟ ಕಲಿಕಾ ಪರಿಸರವನ್ನು ನಿರ್ಮಿಸಿರುವುದು ಈ ಶಾಲೆಯ ಮುಖ್ಯ ಉದ್ದೇಶವಾಗಿದೆ. ಅಂದರೆ ಬಾಲ್ಯದಲ್ಲಿಯೇ ಮಕ್ಕಳು ಮಾನಸಿಕ ಹಾಗೂ ಶಾರೀರಿಕವಾಗಿ ಸದೃಢವಾಗುವಂತೆ ಶಿಕ್ಷಣ ನೀಡುವುದು. ಇದು ಸುಸಜ್ಜಿತ ಉಪಕರಣ, ಪರಿಣಿತ ಶಿಕ್ಷಕರನ್ನು ಒಳಗೊಂಡಿರುತ್ತದೆ.[೨೪] ಹುಬ್ಬಳ್ಳಿಯಲ್ಲಿ ೨೦೦೯ರಲ್ಲಿ ಪ್ರಾರಂಭಿಕ ಸುಮಾರು ೬೦ ಲಕ್ಷ ವೆಚ್ಚದ ಭವ್ಯ ಕಟ್ಟಡವನ್ನು ದಿನಾಂಕ ೬ ಫೆಬ್ರುವರಿ ೨೦೦೯ರಂದು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಉದ್ಘಾಟಿಸಿದರು.[೨೫] ಇದು ಕೋರೆಯವರ ಚಿಂತನೆ ಯಾವ ಮಟ್ಟದಲ್ಲಿ ಇರುತ್ತದೆ

ಎಂಬುದನ್ನು ತೋರಿಸುತ್ತದೆ. ಪ್ರಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವ ಮೂಲಕ ಕೋರೆಯವರು ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ.

ಹೀಗೆ ಪ್ರಿ ಬ್ಯಾನಿಯನ್ ಸ್ಕೂಲಗಳತ್ತ ಆಸಕ್ತಿ ವಹಿಸಿದ ಕೋರೆಯವರು, ಇಂದಿನ ಆಧುನಿಕ ಸ್ಪರ್ಧಾ ಯುಗದಲ್ಲಿ ಇಂಗ್ಲೀಷ್ ಬಾಷೆಯ ಪ್ರಾಮುಖ್ಯತೆಯನ್ನು ಅರಿತು ನಮ್ಮ ವಿದ್ಯಾರ್ಥಿಗಳ ಭಾಷೆಯ ಕೊರತೆಯಿಂದ ಅನೇಕ ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಉತ್ತರ ಭಾಗದ ಹಾಗೂ ವಿದೇಶಿ ವಿದ್ಯಾರ್ಥಿಗಳಿಗೆ ಪೈಪೋಟಿ ನೀಡಬೇಕು ಎಂಬ ಮಹದಾಸೆ ಕೋರೆಯವರದ್ದಾಗಿತ್ತು. ಅದಕ್ಕಾಗಿಯೇ ಕಾನ್ವೆಂಟ್ ಪ್ರಾಥಮಿಕ ಹಾಗೂ ಮಾಧ್ಯಮಿಕ ಹೀಗೆ ಇಂಗ್ಲೀಷ್ ಮಾಧ್ಯಮದಲ್ಲಿ ಅನೇಕ ಶಾಲೆಗಳನ್ನು ಪ್ರಾರಂಭಿಸುತ್ತಿದ್ದಾರೆ. ಕೇಂದ್ರೀಯ ಸಿ.ಬಿ.ಎಸ್.ಸಿ. ಪಠ್ಯಕ್ರಮದ ಅನ್ವಯ ಶಾಲೆಗಳನ್ನು ಪ್ರಾರಂಭಿಸುವತ್ತ ದಾಪುಗಾಲು ಇರಿಸಿದರು. ಸ್ಥಾಪಿಸಿದ ಪ್ರಾಥಮಿಕ ಪೂರ್ವಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ಈ ಕೆಳಗಿನಂತಿವೆ.

೧. ಕೆ.ಎಲ್.ಇ. ಸಂಸ್ಥೆಯ ಎಚ್. ಎಫ್. ಕಟ್ಟಿಮನಿ ಕನ್ನಡ ಪ್ರಾಥಮಿಕ ಶಾಲೆ, ಮಾಲೂರು ೧೯೮೩.

೨. ಕೆ.ಎಲ್.ಇ. ಸಂಸ್ಥೆಯ ಶಿಶು ವಿಹಾರ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಮಾಲೂರು ೧೯೮೯.

೩. ಕೆ.ಎಲ್.ಇ. ಸಂಸ್ಥೆಯ ಸಾತಗೌಡ ಚನಗೌಡ ಪಾಟೀಲ ಕನ್ನಡ ಮಾಧ್ಯಮಿಕ ಶಾಲೆ, ಅಂಕಲಿ ೧೯೮೯.

೪. ಕೆ.ಎಲ್.ಇ. ಸಂಸ್ಥೆಯ ಸಿಲ್ವರ್ ಜ್ಯುಬಿಲಿ ಕಿಂಡರಗಾರ್ಟನ್, ಬಾರ್ಸಿ (ಮಹಾರಾಷ್ಟ್ರ) ೧೯೯೦.

೫. ಕೆ.ಎಲ್.ಇ. ಸಂಸ್ಥೆಯ ಡಾ. ದಯಾನಂದ ಹಿರೇಮಠ ಕನ್ನಡ ಮಾಧ್ಯಮಿಕ ಕಾನ್ವೆಂಟ್ ಶಾಲೆ, ಕೆರೂರ ೧೯೯೦.

೬. ಕೆ.ಎಲ್.ಇ. ಸಂಸ್ಥೆಯ ಬಾಲ ಸಂಸ್ಕಾರ ಕೇಂದ್ರ, ಅಕ್ಕಲಕೋಟ (ಮಹಾರಾಷ್ಟ್ರ) ೧೯೯೨.

೭. ಕೆ.ಎಲ್.ಇ. ಸಂಸ್ಥೆಯಕನ್ನಡ ಪ್ರಾಥಮಿಕ ಕಾನ್ವೆಂಟ್ ಶಾಲೆ, ಹಾವೇರಿ ೧೯೯೮.

೮. ಕೆ.ಎಲ್.ಇ. ಸಂಸ್ಥೆಯ ಕನ್ನಡ ಪ್ರಾಥಮಿಕ ಕಾನ್ವೆಂಟ್ ಶಾಲೆ, ಗದಗ ೧೯೯೮.

೯. ಕೆ.ಎಲ್.ಇ. ಸಂಸ್ಥೆಯ ಕನ್ನಡ ಪ್ರಾಥಮಿಕ ಕಾನ್ವೆಂಟ್ ಶಾಲೆ, ಸವದತ್ತಿ ೧೯೯೮.

೧೦. ಕೆ.ಎಲ್.ಇ. ಸಂಸ್ಥೆಯ ಕನ್ನಡ ಪ್ರಾಥಮಿಕ ಕಾನ್ವೆಂಟ್ ಶಾಲೆ, ಅಥಣಿ ೧೯೯೮.

೧೧. ಕೆ.ಎಲ್.ಇ. ಸಂಸ್ಥೆಯ ಇಂಗ್ಲೀಷ್ ಮಾಧ್ಯಮಿಕ ಶಾಲೆ, ಮಂಜುನಾಥ ನಗರ, ಹುಬ್ಬಳ್ಳಿ ೨೦೦೨.

೧೨. ಕೆ.ಎಲ್.ಇ. ಸಂಸ್ಥೆಯ ಇಂಗ್ಲೀಷ್ ಮಾಧ್ಯಮಿಕ ಶಾಲೆ ಸೊಲ್ಲಾಪೂರ (ಮಹಾರಾಷ್ಟ್ರ), ೨೦೦೨.

೧೩ ಕೆ.ಎಲ್.ಇ. ಸಂಸ್ಥೆಯಕನ್ನಡ ಕಾನ್ವೆಂಟ್ ಪ್ರಾಥಮಿಕ ಶಾಲೆ, ಗೋಕಾಕ್, ೨೦೦೩.

೧೪ ಕೆ.ಎಲ್.ಇ. ಸಂಸ್ಥೆಯ ಕೆ.ಎಲ್.ಇ. ಇಂಟರ್ ನ್ಯಾಶನಲ್ ಸ್ಕೂಲ್, ಬೆಳಗಾವಿ, ೨೦೦೪.

೧೫. ಕೆ.ಎಲ್.ಇ. ಸಂಸ್ಥೆಯ ಶಾಲೆ ಆರ್.ಎಲ್.ಎಸ್. ಸಂಯುಕ್ತ ಪದಪಿಪೂರ್ವ ಕಾಲೇಜು ಆವರಣ, ಧಾರವಾಡ. ೨೦೦೫.

೧೬. ಕೆ.ಎಲ್.ಇ. ಸಂಸ್ಥೆಯ ಸಿ.ಬಿ.ಎಸ್.ಸಿ., ನಿಪ್ಪಾಣಿ, ೨೦೦೫.

೧೭. ಕೆ.ಎಲ್.ಇ. ಸಂಸ್ಥೆಯ ಪ್ರಾಥಮಿಕ ಶಾಲೆ, ಅಂಕಲಿ, ೨೦೦೬.

೧೮. ಕೆ.ಎಲ್.ಇ. ಸಂಸ್ಥೆಯ ಇಂಗ್ಲೀಷ್ ಮಾಧ್ಯಮ ಪ್ರಾಥಮಿಕ ಶಾಲೆ, ಮಾಲೂರು, ೨೦೦೬.

೧೯. ಕೆ.ಎಲ್.ಇ. ಸಂಸ್ಥೆಯ ಎಸ್.ಎಸ್. ಪಾಟೀಲ ಪ್ರಾಥಮಿಕ ಕಾನ್ವೆಂಟ್ ಶಾಲೆ, ಸೋಲ್ಲಾಪುರ, ೨೦೦೫.

೨೦. ಕೆ.ಎಲ್.ಇ. ಸಂಸ್ಥೆಯ ಫ್ರಿ ಬ್ಯಾನಿಯನ್ ಸ್ಕೂಲ್, ಹುಬ್ಬಳ್ಳಿ, ೨೦೦೯

೨೧. ಕೆ.ಎಲ್.ಇ. ಸಂಸ್ಥೆಯ ಶಾಲೆ ನಾಗರಬಾವಿ, ಬೆಂಗಳೂರು, ೨೦೦೮.

೨೨. ಕೆ.ಎಲ್.ಇ. ಸಂಸ್ಥೆಯ ಫ್ರಿ ಬ್ಯಾನಿಯನ್ ಸ್ಕೂಲ್, ಹುಬ್ಬಳ್ಳಿ, ೨೦೦೯.

೨೩. ಕೆ.ಎಲ್.ಇ. ಸಂಸ್ಥೆಯ ಶಾಲೆ ನಾಗರಭಾವಿ (ಬೆಂಗಳೂರು), ೨೦೦೭–೦೮.

ಮಾಧ್ಯಮಿಕ ಶಾಲೆಗಳು :

೨೪. ಕೆ.ಎಲ್.ಇ. ಸಂಸ್ಥೆಯ ಎಚ್. ಎಫ್. ಕಟ್ಟಿಮನಿ ಕನ್ನಡ ಮಾಧ್ಯಮಿಕ ಶಾಲೆ (ಪ್ರೌಢಶಾಲೆ), ಹುಬ್ಬಳ್ಳಿ, ೨೦೦೨.

೨೫. ಕೆ.ಎಲ್.ಇ. ಸಂಸ್ಥೆಯ ಇಂಟರ್‌ನ್ಯಾಶನಲ್ ಸ್ಕೂಲ್ ಬೆಂಗಳೂರು – ೨೦೦೨.

೨೬ ಕೆ.ಎಲ್.ಇ. ಸಂಸ್ಥೆಯ ಇಂಗ್ಲೀಷ್ ಮಾಧ್ಯಮ ಶಾಲೆ, ಅಥಣಿ – ೨೦೦೫.

೨೭. ಕೆ.ಎಲ್.ಇ. ಸಂಸ್ಥೆಯ ಇಂಗ್ಲೀಷ್ ಮಾಧ್ಯಮ ಶಾಲೆ, ಗದಗ – ೨೦೦೫.

೨೮. ಕೆ.ಎಲ್.ಇ. ಸಂಸ್ಥೆಯ ಇಂಗ್ಲೀಷ್ ಮಾಧ್ಯಮಿಕ ಶಾಲೆ, ಮಾಲೂರು – ೨೦೦೬.

ಹೀಗೆ ಒಟ್ಟು ೨೨ ಕನ್ನಡ ಇಂಗ್ಲೀಷ್ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸುವ ಮೂಲಕ ಕೆ.ಎಲ್.ಇ. ಸಂಸ್ಥೆಯ ಸಾಮ್ರಾಜ್ಯವನ್ನು ವಿಸ್ತರಿಸಿದ್ದಾರೆ. ವಿಶೇಷವಾಗಿ ಸಂಶೋಧನೆಯಿಂದ ಕಂಡುಬರುವ ಅಂಶವೆಂದರೆ, ಭಾಷೆಯ ದೃಷ್ಟಿಯಿಂದ ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲೀಷ್ ಭಾಷೆಯಿಂದ ಸಾಕಷ್ಟು ಹಿನ್ನಡೆಯನ್ನು ಅನುಭವಿಸುತ್ತಿದ್ದಾರೆ. ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲೀಷ್ ಭಾಷೆಯ ಮಹತ್ವ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಡಾ. ಪ್ರಭಾಕರ ಕೋರೆಯವರು ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲೀಷ್ ಭಾಷೆಯನ್ನು ಸುಲಭವಾಗಿ ಕಲಿಯಬೇಕು, ಅವರು ವಿದೇಶಿ ವಿದ್ಯಾರ್ಥಿಗಳ ಜೊತೆಗೆ ಪೈಪೋಟಿಗೆ ಸಿದ್ಧಗೊಳ್ಳಬೇಕೆಂದು ಅವರು ವಿಶೇಷವಾಗಿ ಅಥಣಿ, ಸವದತ್ತಿ, ನಿಪ್ಪಾಣಿ, ಅಂಕಲಿ, ಮಾಲೂರುಗಳಂತಹ ಗ್ರಾಮೀಣ ಭಾಗದಲ್ಲಿ ಸಿ.ಬಿ.ಎಸ್.ಸಿ. ಶಾಲೆಗಳನ್ನು ಸ್ಥಾಪಿಸಿದರು. ಆ ಮೂಲಕ ಗ್ರಾಮೀಣ ಪ್ರದೇಶದಲ್ಲಿನ ಪಾಲಕರು ನಗರ ಪ್ರದೇಶಕ್ಕೆ ಗುಣಮಟ್ಟದ ಇಂಗ್ಲೀಷ್ ಮಾಧ್ಯಮ ಮತ್ತು ಸಿ.ಬಿ.ಎಸ್.ಸಿ. ಪಠ್ಯ ಕ್ರಮದ ಶಿಕ್ಷಣಕ್ಕಾಗಿ ನಗರ ಪ್ರದೇಶಕ್ಕೆ ಕಳುಹಿಸುವ ಪಾಲಕರ ಚಿಂತೆಯನ್ನು ದೂರ ಮಾಡಿದ ಹಿರಿಮೆ ಕೋರೆಯವರದು. ಈ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳು ಇಂಗ್ಲೀಷ್ ಭಾಷೆಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಸುಲಭವಾಗಿ ಕಲಿಯುವಂತೆ ಮಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ಮಾತೃಭಾಷೆಯಾದ ಕನ್ನಡದ ಶಾಲೆಗಳನ್ನು

ಸಮಾನಾಂತರವಾಗಿ ಸ್ಥಾಪಿಸುವ ಮೂಲಕ ಭಾಷೆಯ ಪ್ರೇಮವನ್ನು ಮೆರೆದಿದ್ದಾರೆ. ಹೀಗೆ ಗ್ರಾಮೀಣ ಭಾಗದಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸುವುದರಿಂದ ಆದಾಯ ಕಡಿಮೆ ಬರುತ್ತದೆ ಎನ್ನುವ ಇತರ ಶಿಕ್ಷಣ ಸಂಸ್ಥೆಗಳ ಮನೋಭಾವನೆಗೆ ಪ್ರತಿಯಾಗಿ ನೈಜ ಗ್ರಾಮೀಣರಿರಾಗಿ ಶ್ರೀ ಕೋರೆಯವರ ಈ ಪ್ರಯತ್ನ ನಿಜಕ್ಕೂ ಅಭಿನಂದನೀಯವಾಗಿದೆ.

ಹೀಗೆಯೇ ೬ ಮಾಧ್ಯಮಿಕ ಶಾಲೆಗಳನ್ನು ಕನ್ನಡ, ಇಂಗ್ಲೀಷ್ ಮಾಧ್ಯಮದಲ್ಲಿ ಪ್ರಾರಂಭಿಸಿದ ಅವರು, ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಕ್ಕೆ ಒತ್ತು ನೀಡಿದ್ದನ್ನು ಗುರುತಿಸಬಹುದು. ಈ ಶಾಲೆಗಳಿಗೆ ಸುಸಜ್ಜಿತ ಕಟ್ಟಡ, ಆಧುನಿಕ ಸಲಕರಣೆಗಳು, ಆಟದ ಮೈದಾನವನ್ನು ನಿರ್ಮಿಸಿ, ನುರಿತ ಶಿಕ್ಷಕರಿಗೆ ಆದ್ಯತೆಯನ್ನು ನೀಡಿದ್ದಾರೆ.. ಒಂದು ಉದಾಹರಣೆಯನ್ನು ಗಮನಿಸಬಹುದು. ಸೋಲ್ಲಾಪೂರ ಜುಳೆಯಲ್ಲಿ ಕೆ.ಎಲ್.ಇ. ಇಂಗ್ಲೀಷ್ ಮಾಧ್ಯಮದ ಸ್ಕೂಲನ್ನು ಪ್ರಾರಂಭಿಸಿ (೨೦೦೨) ಸುಮಾರು ೪ ಕೋಟಿ ವೆಚ್ಚದ ಆಧುನಿಕ ಕಟ್ಟಡವನ್ನು ನಿರ್ಮಿಸಿ, ಕೇಂದ್ರ ವಿದ್ಯುತ್ ಸಚಿವರಾದ ಶ್ರೀ ಸುಶೀಲ ಕುಮಾರಸಿಂಧೆ ಅವರಿಂದ ಉದ್ಘಾಟಿಸಿದರು. ಹೀಗೆ ಸಂಸ್ಥೆಯ ಎಲ್ಲ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಾ, ಸಮರ್ಥವಾಗಿ ಶಿಕ್ಷಣ ನೀಡುವಂತೆ ಮಾಡಿದ ಕೋರೆಯವರ ಸಾಧನೆ ಮುಂದಿನ ತಲೆಮಾರಿಗೆ ಆದರ್ಶಪ್ರಾಯವಾಗಿದೆ. ಬದಲಾಗುತ್ತಿರುವ ಶೈಕ್ಷಣಿಕ ವ್ಯವಸ್ಥೆಗೆ ಹೊಂದಿಕೊಂಡು, ಮೂಲ ಶಿಕ್ಷಣವನ್ನು ಉಳಿಸಿಕೊಳ್ಳುತ್ತಿರುವುದು ಹಿರಿಮೆಯಾಗಿದೆ. ಅದೇ ರೀತಿಯಾಗಿ ೪ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ನಾಗರಬಾವಿಯಲ್ಲಿ ಹೊಸ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿ, ವಿಜ್ಞಾನ ಮತ್ತು ಉದ್ಯೋಗ ಆಧಾರಿತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಾಹ್ಯ ಪರೀಕ್ಷೆಗಳನ್ನು ನಡೆಸುತ್ತಿರುವುದು ಇವರ ದೂರದೃಷ್ಟಿಯ ಸಂಕೇತವಾಗಿದೆ.[೨೬]

ಪಿ. ಆರ್. ಚಿಕ್ಕೋಡಿ ಪ್ರಾಥಮಿಕ ಶಾಲೆಯನ್ನು ಗಳತಗಾದಲ್ಲಿ ಸುಮಾರು ೧೦ ಲಕ್ಷ ರೂಪಾಯಿಯ ಭವ್ಯ ಭವನ ನಿರ್ಮಿಸಿದ್ದನ್ನು, ಅಥಣಿಯಲ್ಲಿ ಒಂದು ಕೋಟಿ ವೆಚ್ಚದ ಮಾಧ್ಯಮಿಕ ಕಾನ್ವೆಂಟ್ ಶಾಲಾ ಕಟ್ಟಡವನ್ನು ನಿರ್ಮಾಣ ಮಾಡಿದ್ದನ್ನು ನೋಡಿದಾಗ, ಕೋರೆಯವರು ಒದಗಿಸುತ್ತಿರುವ ಮೂಲಭೂತ ಸೌಕರ್ಯಗಳನ್ನು ಕಂಡಾಗ ಇತರೇ ಸಂಘ ಸಂಸ್ಥೆಯವರು ಮೂಗಿನ ಮೇಲೆ ಕೈ ಇಟ್ಟುಕೊಳ್ಳುವಂತೆ ಮಾಡಿದ್ದಾರೆ.[೨೭]

ಹೀಗೆ ಕೋರೆಯವರು ಯಾವುದನ್ನು ಮಾಡಬೇಕೆಂಬುದನ್ನು ಹತ್ತಾರುಬಾರಿ ಯೋಚನೆ ಮಾಡಿ ಮಾಡುತ್ತಾರೆ. ಆ ಕಾರಣಕ್ಕಾಗಿ ಕೋರೆಯವರು ಸ್ಥಾಪಿಸಿದ ಶಾಲೆಗಳು ಸರ್ಕಾರದ ಅನುದಾನ ರಹಿತವಾಗಿದ್ದರೂ, ಯಾವುದೇ ಕೊರತೆ ಇಲ್ಲದೇ ಸಂಸ್ಥೆಯ ಶಾಲಾ ಕಾಲೇಜುಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದು ಅವರ ಬುದ್ಧಿವಂತಿಕೆಯನ್ನು ಇದು ತೋರಿಸುತ್ತದೆ.

ಹೊಸ ಶಿಕ್ಷಣ ಮಹಾವಿದ್ಯಾಲಯ ಸ್ಥಾಪನೆ ಕೋರೆಯವರ ಆಸಕ್ತಿ :

೧. ಶ್ರೀ ಪ್ರಭಾಕರ ಕೋರೆಯವರ ನಾಯಕತ್ವದಲ್ಲಿ ಸ್ಥಾಪಿಸಲಾಗಿರುವ ವೃತ್ತಿ ಆಧಾರಿತ ಕೆ.ಎಲ್.ಇ. ಸಂಸ್ಥೆಯ ಹೊಸ ಕೋರ್ಸ್‌ಗಳು – ಶಿಕ್ಷಣ ಮಹಾವಿದ್ಯಾಲಯ

ಬದಲಾಗುತ್ತಿರುವ ಶೈಕ್ಷಣಿಕ ಪದ್ಧತಿಗೆ ಅನುಗುಣವಾಗಿ ಆಯಾಕಾಲಕ್ಕೆ ತಕ್ಕಂತೆ ಬದಲಾವಣೆಗೆ ಸ್ಪಂದಿಸಬೇಕೆಂಬುದು

ಕೋರೆಯವರ ಮಹದಾಸೆಯಾಗಿದೆ. ವಿದ್ಯಾರ್ಥಿಗಳ ಬೇಡಿಕೆಗನುಗುಣವಾಗಿ ಹೊಸ ಕಾಲೇಜುಗಳನ್ನು ಸ್ಥಾಪಿಸುವಲ್ಲಿ ಕೋರೆಯವರು ಸಿದ್ಧಹಸ್ತರು. ೨೦೦೪ರಲ್ಲಿ ಕೆ.ಎಲ್.ಇ. ಸಂಸ್ಥೆಗೆ ಕೋರೆಯವರು ಹೊಸ ದಿಕ್ಕನ್ನು ನೀಡಿದರು. ೧೯೮೬ರಲ್ಲಿ ಹುಬ್ಬಳ್ಳಿ ನಗರದಲ್ಲಿ ಶಿಕ್ಷಣ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಇತರೆ ಕೋರ್ಸ್‌ಗಳ ಕಡೆಗೆ ಗಮನಹರಿಸಿದ್ದರು. ಸರ್ಕಾರದ ಯಾವುದೇ ಸಹಾಯಧನವಿಲ್ಲದೇ ಶಿಕ್ಷಣ ಮಹಾವಿದ್ಯಾಲಯಗಳನ್ನು ನಡೆಸಬೇಕಿತ್ತು. ಇಂತಹ ಸವಾಲುಗಳನ್ನು ಸುಲಭವಾಗಿ ಸ್ವೀಕರಿಸಿ, ಯಶಸಾಧಿಸುವುದನ್ನು ಕರಗತ ಮಾಡಿಕೊಂಡಿರುವ ಇವರು, ಮುಖ್ಯವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕೆಂದು ೨೦೦೪ರಲ್ಲಿ ಒಟ್ಟು ೫ ಶಿಕ್ಷಣ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಮೂಲಕ ಹೊಸ ಇತಿಹಾಸವನ್ನು ಸೃಷ್ಟಿಸಿದರು. ಬೆಳಗಾವಿ, ಬೆಂಗಳೂರು, ನಿಪ್ಪಾಣಿ, ಅಥಣಿ, ಅಂಕೋಲಾದಲ್ಲಿ ಸ್ಥಾಪಿಸಿ, ಅವುಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ಇಂದಿವು ಪ್ರತಿವರ್ಷ ೫೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಭಾವಿ ಶಿಕ್ಷಕರನ್ನಾಗಿ ಮಾಡುವ ಮಹತ್ವದ ಕಾರ್ಯದೊಂದಿಗೆ ಶಿಕ್ಷಣದಲ್ಲಿ ಒಂದು ಆಯಾಮವನ್ನು ತಂದಿವೆ. ಹೀಗೆ ಶ್ರೀಯುತ ಕೋರೆಯವರು ಕೆ.ಎಲ್.ಇ. ಸಂಸ್ಥೆಗೆ ಒಂದು ಹೊಸ ಆಯಾಮ ಒದಗಿಸಿದ್ದಾರೆ.[೨೮]

ಕೋರೆಯವರ ನಾಯಕತ್ವದಲ್ಲಿ ಸ್ಥಾಪಿಸಿರುವ ಕೆ.ಎಲ್.ಇ. ಶಿಕ್ಷಕರ ತರಬೇತಿ ಸಂಸ್ಥೆಗಳು (ಡಿ.ಎಡ್) :

ಡಾ. ಪ್ರಭಾಕರ ಕೋರೆಯವರ ಯಶಸ್ವಿ ಯಾತ್ರೆ ಮುಂದುವರಿದು, ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಬೇಡಿಕೆ ಆಧರಿಸಿ ಸ್ಥಾಪಿಸುವ ಯೋಚನೆಯನ್ನು ಹಾಕಿಕೊಂಡರು. ೧೯೮೨ರಲ್ಲಿ ಅಂಕೋಲಾ ಅಂಗನವಾಡಿ ಶಿಕ್ಷಕರ ತರಬೇತಿ ಸಂಸ್ಥೆ ಅಂಕೋಲಾದಲ್ಲಿ ಸ್ಥಾಪಿಸಿದರು. ಸರ್ಕಾರದ ಸಹಾಯಧನ ಇರಲಾರದ ಸಂದರ್ಭದಲ್ಲಿ ಸಹಾಯಮಾಡಿ, ಗ್ರಾಮೀಣ ಭಾಗದ ಜನರಿಗೆ ವಿದ್ಯಾರ್ಜನೆ ಒದಗಿಸುವ ಮಹದಾಸೆಯಾಗಿತ್ತು. ಶ್ರೀಯುತ ಕೋರೆಯವರ ನೇತೃತ್ವದಲ್ಲಿ ೧೧ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಅವುಗಳ ವಿವರ ಹೀಗಿದೆ –

೧. ಕೆ.ಎಲ್.ಇ. ಸಂಸ್ಥೆಯ ಶಿಶುವಿಹಾರ ಶಿಕ್ಷಕರ ತರಬೇತಿ ಕೇಂದ್ರ, ಮಾಲೂರು–೧೯೮೬.

೨. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.) ಲಿಂಗರಾಜ ಕ್ಯಾಂಪಸ್, ಬೆಳಗಾವಿ–೨೦೦೪.

೩. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ (ಡಿ.ಎಡ್.), ಖಾನಾಪೂರ–೨೦೦೪.

೪. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ (ಡಿ.ಎಡ್.), ಅಂಕಲಿ–೨೦೦೪

೫. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಹಾವೇರಿ–೨೦೦೪.

೬. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಗಂಗಾವತಿ–೨೦೦೪.

೭. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅಥಣಿ–೨೦೦೫.

೮. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅವರ್ಸಾ, ಅಂಕೋಲಾ–೨೦೦೬.

೯. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅಕ್ಕಲಕೋಟ (ಮಹಾರಾಷ್ಟ್ರ)–೨೦೦೭.

೧೦. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಸೊಲ್ಲಾಪುರ (ಮಹಾರಾಷ್ಟ್ರ)–೨೦೦೭.

೧೧. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಇಚಲಕರಂಜಿ (ಮಹಾರಾಷ್ಟ್ರ)–೨೦೦೭.

ಹೀಗೆ ಕೋರೆಯವರು ಅದಮ್ಯ ವಿಶ್ವಾಸದಿಂದ ಹೊಸ ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಕೆ.ಎಲ್.ಇ. ಸಂಸ್ಥೆಯ ಕಕ್ಷೆಗೆ ಸೇರಿಸುವುದರ ಮೂಲಕ ಸಂಸ್ಥೆಯ ಘನತೆಯನ್ನು ಹೆಚ್ಚಿಸಿದರು. ಇಲ್ಲಿ ಶ್ರೀಯುತ ಕೋರೆಯವರು ಅಕ್ಕಲಕೋಟೆ, ಸೊಲ್ಲಾಪೂರ ಮತ್ತು ಇಚಲಕರಂಜಿ ಇವು ಗಡಿಭಾಗದಲ್ಲಿದ್ದು, ಅಲ್ಲಿಯ ಕನ್ನಡಿಗರು ಶಿಕ್ಷಣದ ದೃಷ್ಟಿಯಿಂದ ತೀವ್ರತರವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಗಮನವಲ್ಲಿಟ್ಟುಕೊಂಡು, ಗಡಿನಾಡಿನ ಕನ್ನಡಿಗರ ಭಾವನೆಗಳಿಗೂ ಸಕಾರಾತ್ಮಕವಾಗಿ ಸ್ಪಂದಿಸಿದ ಹೆಗ್ಗಳಿಕೆ ಅವರದಾಗಿದೆ. ಈ ಮೂಲಕ ಕನ್ನಡ ಭಾಷೆಯು ಗಡಿನಾಡಿನಲ್ಲಿ ಗಟ್ಟಿಯಾಗಿ ಬೆಳೆಯುವಂತೆ ವಾತಾವರಣ ನಿರ್ಮಿಸಿದ ಕೀರ್ತಿಯೂ ಶೈಕ್ಷಣಿಕ ಮಾಂತ್ರಿಕ ಶ್ರೀ ಕೋರೆಯವರಿಗೆ ಸಲ್ಲುತ್ತದೆ.[೨೯] ಹೀಗೆ ಪ್ರತಿವರ್ಷ ಈ ತರಬೇತಿ ಸಂಸ್ಥೆಗಳಿಂದ ೧೫೦೦ಕ್ಕೂ ಅಧಿಕ ಭಾವಿ ಶಿಕ್ಷಕರನ್ನು ರೂಪಿಸುವ ಕೀರ್ತಿ ಕೆ.ಎಲ್.ಇ. ಸಂಸ್ಥೆಯದಾಗಿರುತ್ತದೆ.

ಜಾಗತಿಕ ಮಟ್ಟದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ನುರಿತ ಶಿಕ್ಷಣವನ್ನು ನೀಡಲು ಆಯ್.ಎಫ್.ಡಿ ಸ್ಥಾಪನೆಯಾಗಿದೆ. (Institute of Faculty Development) ಕ್ರಿಯಾತ್ಮಕವಾದ ಬೋಧನೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರಿಗಾಗಿ ಕಾರ್ಯಾಗಾರಗಳನ್ನು ನಡೆಸಲಾಗುತ್ತದೆ. ದಕ್ಷ, ನುರಿತ, ಅನುಭವಿ ತಜ್ಞರಿಂದ ಶಿಕ್ಷಕರ ಶಕ್ತಿ ಸಾಮರ್ಥ್ಯ ಮತ್ತು ಜವಾಬ್ದಾರಿಯುತ ಶಿಕ್ಷಕರನ್ನು ನಿರ್ಮಾಣ ಮಾಡುವುದರ ಜೊತೆಗೆ, ಶಿಕ್ಷಣದ ಹೊಸ ಬೆಳಕನ್ನು ಚೆಲ್ಲುವ ಪ್ರಯತ್ನ ನಡೆಸಲಾಗುತ್ತದೆ. ಈ ಉದ್ದೇಶಕ್ಕಾಗಿ ಬೆಂಗಳೂರಿನ ಅಕಾಡೆಮಿ ಆಫ್ ಕ್ರಿಯೇಟಿವ್ ಟೀಚಿಂಗ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಶಿಕ್ಷಕರ ತರಬೇತಿಯನ್ನು ನಿರಂತರವಾಗಿ ನೀಡಲಾಗುತ್ತದೆ. ಒಳ್ಳೆಯ ಗುಣಮಟ್ಟದ ಶಿಕ್ಷಕರನ್ನು ತಯಾರಿಸುವ ಜತೆಗೆ ಮುಂದಿನ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶ ಕೋರೆಯವರದ್ದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೆ ಇದು ಒಂದು ನಿದರ್ಶನವಾಗಿದೆ. ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಆಸಕ್ತಿ ವಹಿಸಿದಂತೆ ಅಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಲಿಕ್ಕೆ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಅಂತೆಯೆ ಅವರನ್ನು 'ಶಿಕ್ಷಣ ತಜ್ಞರು' ಎಂದು ಗುರುತಿಸಲಾಗುತ್ತದೆ.[೩೦]

ಹೊಸ ಕಾನೂನು ಮಹಾವಿದ್ಯಾಲಯಗಳ ಸ್ಥಾಪನೆ :

ಕೆ.ಎಲ್.ಇ. ಸಂಸ್ಥೆಯು ಈ ಮೊದಲು ಹುಬ್ಬಳ್ಳಿ, ಗದಗ, ಬೆಳಗಾವಿ ಹಾಗೂ ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿ ಕಾನೂನು ಮಹಾ ವಿದ್ಯಾಲಯಗಳನ್ನು ಸ್ಥಾಪಿಸಿತ್ತು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರಕ್ಕೆ ಬರುವುದು ಕಷ್ಟಸಾಧ್ಯ ಎಂಬುದನ್ನು ಅರಿತು, ಚಿಕ್ಕೋಡಿಯಲ್ಲಿ ೧೯೯೯ರಲ್ಲಿ ಕಾನೂನು ಮಹಾ ವಿದ್ಯಾಲಯವನ್ನು ಸ್ಥಾಪಿಸಿದರು. ಕೆ.ಎಲ್.ಇ. ಸಂಸ್ಥೆಯ ಹುಬ್ಬಳ್ಳಿ, ಬೆಳಗಾವಿ, ಬೆಂಗಳೂರು, ಗದಗ ಮಹಾವಿದ್ಯಾಲಯಗಳಿಗೆ ಸುಸಜ್ಜಿತವಾದ ಕಟ್ಟಡ ನಿರ್ಮಾಣಮಾಡಿ, ಆಧುನಿಕ ಸಲಕರಣೆಗಳನ್ನು ಒದಗಿಸಿ ಹೊಸರೂಪು ನೀಡಿದರು. ದೇಶದ ಪ್ರತಿಷ್ಠಿತ ಪತ್ರಿಕೆಯಾದ 'ಇಂಡಿಯಾ ಟುಡೆ' ಪತ್ರಿಕೆ ದೇಶದ ಕಾನೂನು ಮಹಾವಿದ್ಯಾಲಯುವನ್ನು ಗುಣಮಟ್ಟದ ಬಗ್ಗೆ ನಡೆಸಿದ

ಸಮೀಕ್ಷೆಯಲ್ಲಿ, ಕೆ.ಎಲ್.ಇ. ಸಂಸ್ಥೆಯ ಬೆಂಗಳೂರಿನ ಕಾನೂನು ಮಹಾವಿದ್ಯಾಲಯಕ್ಕೆ ದೇಶದ ೧೪ನೇ ಅತ್ಯುತ್ತಮ ಕಾನೂನು ಮಹಾವಿದ್ಯಾಲಯ ಎಂದು ಗುರುತಿಸಿದೆ. ಅದರ ಸಂಪೂರ್ಣ ಶ್ರೇಯಸ್ಸು ಕೋರೆಯವರದು. ಇದು ಕೆ.ಎಲ್.ಇ. ಸಂಸ್ಥೆಯ ಖ್ಯಾತಿಗೆ ತಕ್ಕುದಾಗಿದೆ.[೩೧] ಗ್ರಾಮೀಣ, ನಗರ ಪ್ರದೇಶಗಳಲ್ಲಿ ಕಾನೂನು ಮಹಾವಿದ್ಯಾಲಯಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಶ್ರೀ ಪ್ರಭಾಕರ ಕೋರೆಯವರು ಇತರ ಸಂಸ್ಥೆಗಳಿಗೆ ಮಾದರಿಯಾಗಿ ನಿಲ್ಲುತ್ತಾರೆ.

ಕೃಷಿ ವಿಜ್ಞಾನ : ಕೆ.ಎಲ್.ಇ. ಸಂಸ್ಥೆಯ ಕೃಷಿ ತರಬೇತಿ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ-೧೯೯೬ :

ಇದು ಡಾ. ಪ್ರಭಾಕರ ಕೋರೆಯವರ ಕನಸಿನ ಸಂಸ್ಥೆಯಾಗಿದೆ. ಮುಖ್ಯವಾಗಿ ಕೃಷಿಕರ ಕುಟುಂಬದಿಂದ ಬಂದ ಡಾ.ಕೋರೆಯವರು, ರೈತರ ಸಮಸ್ಯೆಗಳನ್ನು ಅರಿಯುವಲ್ಲಿ ನಿಸ್ಸೀಮರು. ರೈತರ ಫಲವತ್ತಾದ ಭೂಮಿಯನ್ನು ಕಾಯ್ದುಕೊಳ್ಳುವಿಕೆ, ಹೆಚ್ಚುವರಿ ಬೆಳೆಗಳನ್ನು ಬೆಳೆಯುವ ಪದ್ಧತಿ ಹಾಗೂ ಯಾವ ಕಾಲಕ್ಕೆ ಯಾವ ಬೆಳೆಗಳನ್ನು ಬೆಳೆಯಬೇಕು, ಅದಕ್ಕೆ ಎಷ್ಟು ಪ್ರಮಾಣದ ಗೊಬ್ಬರ ಹಾಕಬೇಕು, ಇದರಿಂದ ಹೆಚ್ಚಿನ ಆದಾಯ ರೈತರಿಗೆ ಸಿಗಬೇಕು ಎಂದು ಸದಾ ಚಿಂತಿಸುವ, ರೈತರ ಕಣ್ಮಣಿಯಾದ ಕೋರೆಯವರು, ರೈತರಿಗೆ ಆಧುನಿಕ ಸುಧಾರಿತ ಬೇಸಾಯ ಪದ್ಧತಿಯ ಬಗ್ಗೆ ತರಬೇತಿ ದೊರಕಬೇಕು, ಇವತ್ತು ಮುಂದುವರಿದ ರಾಷ್ಟ್ರಗಳು ಕಡಿಮೆ ಬಂಡವಾಳ ಮತ್ತು ಶ್ರಮದಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ ನಮ್ಮ ರೈತರು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅನುಸರಿಸಿ ತೊಂದರೆಗೀಡಾಗುವುದನ್ನು ಮನಗಂಡರು. ರೈತರ ಉದ್ಧಾರಕ್ಕಾಗಿ ೧೯೯೬ರಲ್ಲಿ ಕೆ.ಎಲ್.ಇ. ಸಂಸ್ಥೆಯ ಆಶ್ರಯದಲ್ಲಿ ಕೃಷಿ ತರಬೇತಿ ಮತ್ತು ಸಂಶೋಧನಾ ಕೇಂದ್ರವನ್ನು ಬೆಳಗಾವಿಯಲ್ಲಿ ಸ್ಥಾಪಿಸಿದರು. ಇದರಿಂದ ರೈತರಿಗೆ ಅನುಕೂಲವಾಗಿದೆ. ಉದಾ: ೨೦೦೮ರಲ್ಲಿ ಚಿಕ್ಕೋಡಿ ತಾಲೂಕಿನ ಯಡೂರು ಗ್ರಾಮದಲ್ಲಿ ರೈತರಿಗಾಗಿ ಕೃಷಿ ಮೇಳವನ್ನು ನಡೆಸಿ, ಕೃಷಿ ಸುಧಾರಣೆ ಪದ್ಧತಿಗಳ ಬಗೆಗೆ, ಬೆಳೆಗಳಿಗೆ ಮಾರಕವಾದ ವಿಷಜಂತುಗಳ ನಿಯಂತ್ರಣದ ಬಗ್ಗೆ ನುರಿತ ಕೃಷಿ ತಜ್ಞರಿಂದ ಮಾಹಿತಿ ನೀಡಲಾಯಿತು. ಕಬ್ಬಿನ ಫಲವತ್ತತೆ ಹೆಚ್ಚಿಸುವ ಕುರಿತು ರೈತರು ಅನುಸರಿಸಬೇಕಾದ ವಿಧಾನಗಳನ್ನು ತಜ್ಞರಿಂದ ಒದಗಿಸುವಲ್ಲಿ ಯಶಸ್ವಿಯಾದರು. ಇದರಿಂದ ಸುತ್ತಲಿನ ೨೦, ೩೦ ಹಳ್ಳಿಗಳ ರೈತರು ಪ್ರಯೋಜನ ಪಡೆದರು. ಕೃಷಿ ಸಂಸೋಧನಾ ಕೇಂದ್ರಕ್ಕೆ ಅನೇಕ ರೈತರು ಭೇಟಿ ನೀಡಿ ತಮಗೆ ಬೇಕಾದ ಮಾಹಿತಿಯನ್ನು ಪಡೆಯುತ್ತಿದ್ದಾರೆ. ಇದು ಕೋರೆಯವರು ರೈತಾಪಿ ಜನರ ಉದ್ಧಾರಕ್ಕಾಗಿ ಸ್ಥಾಪಿಸಿದ ಶ್ರೇಷ್ಠ ಸಂಸ್ಥೆಯಾಗಿದೆ. ನಮ್ಮ ಸಂಶೋಧನೆಯಿಂದ ಕೋರೆಯವರಲ್ಲಿರುವ ರೈತರ ಕಾಳಜಿ, ಅವರ ಕಳಕಳಿ ಈ ಕೇಂದ್ರ ಸ್ಥಾಪಿಸುವ ಮೂಲಕ ಗೊತ್ತಾಗುತ್ತದೆ. ಇಲ್ಲಿ ಪ್ರತಿ ವರ್ಷ ೭೫ ವಿದ್ಯಾರ್ಥಿಗಳಿಗೆ ತರಬೇತಿ, ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗಿಸುತ್ತಾರೆ. ಇದು ಒಂದು ರೀತಿಯಲ್ಲಿ ಉತ್ತರ ಕರ್ನಾಟಕ ರೈತರ ಪಾಲಿಗೆ ಸಂಜೀವಿನಿಯಾಗಿದೆ. ಕೆ.ಎಲ್.ಇ. ಸಂಸ್ಥೆಯಲ್ಲಿ ಕೃಷಿ ತರಬೇತಿ ಹಾಗೂ ಸಂಶೋಧನಾ ಕೇಂದ್ರ[೩೨] ಮಾಡಿರುವ ಸಾಧನೆ ಕೋರೆಯವರಿಗೆ ಸಲ್ಲುತ್ತದೆ.

ತಾಂತ್ರಿಕ ಕಾಲೇಜುಗಳ ಸ್ಥಾಪನೆ :

ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ಆವಿಷ್ಕಾರಗಳ ಫಲವಾಗಿ ಜಗತ್ತು ನಿರಂತರ ಬದಲಾವಣೆ ಹೊಂದುತ್ತಲಿದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಾದ ಕೈಗಾರಿಕಾ ಕ್ರಾಂತಿಯ ಫಲವಾಗಿ ವಿಶ್ವದಾದ್ಯಂತ ಹೊಸ ಹೊಸ ಉದ್ಯಮಗಳು, ಕಾರ್ಖಾನೆಗಳು, ಗಣಿಗಳು ಸ್ಥಾಪಿತವಾದವು. ಇವುಗಳ ಸಮರ್ಥ ನಿರ್ವಹಣೆಗೆ ತಾಂತ್ರಿಕ ಜ್ಞಾನವುಳ್ಳ ಪರಿಣಿತರ ಅವಶ್ಯಕತೆ ಉಂಟಾಯಿತು. ವಿಜ್ಞಾನಿಗಳನ್ನು, ತಾಂತ್ರಿಕ ತಜ್ಞರನ್ನು ನಿರ್ಮಿಸಲು ತಾಂತ್ರಿಕ ಶಿಕ್ಷಣಕ್ಕೆ ಒತ್ತು ಕೊಡುವುದು ಅವಶ್ಯವಾಗಿತ್ತು. ೨೦ನೇ ಶತಮಾನದಲ್ಲಿ ಇದರ ಬೇಡಿಕೆ ಹೆಚ್ಚು ಕಂಡುಬಂದಿತು.

ಇಂಥ ಒಂದು ಮುಖ್ಯವಾದ ಉದ್ದೇಶವನ್ನಿಟ್ಟುಕೊಂಡು ಕೆ.ಎಲ್.ಇ. ಸಂಸ್ಥೆಯವರು ೧೯೪೭ರಲ್ಲಿಯೇ ಹುಬ್ಬಳ್ಳಿ ಬಿ. ವ್ಹಿ. ಭೂಮರೆಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ ಸ್ಥಾಪಿಸಿದರು. ನಂತರ ೧೯೭೯ರಲ್ಲಿ ಬೆಳಗಾವಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದರು. ಇವುಗಳನ್ನು ಆಧುನೀಕರಣಗೊಳಿಸಿ, ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿದ ಕೀರ್ತಿ ಶ್ರೀಯುತ ಪ್ರಭಾಕರ ಕೋರೆಯವರಿಗೆ ಸಲ್ಲುತ್ತದೆ. ಅದರಲ್ಲೂ ಬಿ. ವಿ. ಭೂಮರೆಡ್ಡಿ ತಾಂತ್ರಿಕ ಅಭಿಯಾಂತ್ರಿಕ ಕಾಲೇಜಿಗೆ ಸ್ವಾಯತ್ತತೆಯ ಸ್ಥಾನಮಾನ ಸಿಕ್ಕಿರುವುದು ಕೋರೆಯವರ ಪರಿಶ್ರಮದ ಫಲ ಎಂದು ಹೇಳಬಹುದು. ಇದರ ಹೊರತಾಗಿ ೧೯೯೦ರ ದಶಕದಲ್ಲಿ ಐ.ಟಿ.ಬಿ.ಟಿ. ಅಂದರೆ ಔದ್ಯೋಗಿಕವಾಗಿ ಬೆಂಗಳೂರಿಗೆ ಬಂದಂತೆ ಸಾಕಷ್ಟು ಸಂಬಳ ಕೊಡುವ ಉದ್ದಿಮೆಗಳ ಸ್ಥಾಪನೆಯಿಂದ ಯುವ ಜನಾಂಗ ಆ ಉದ್ಯಮದ ಕಡೆಗೆ ಆಕರ್ಷಿತರಾಗುತ್ತಿರುವುದನ್ನು ಗುರುತಿಸಿದ ಪ್ರಭಾಕರ ಕೋರೆಯವರು, ಹೊಸ ತಾಂತ್ರಿಕ ಪಾಲಿಟೆಕ್ನಿಕ್, ಎಂ.ಬಿ.ಎ., ಬಿ.ಬಿ.ಎ., ಬಿ.ಸಿ.ಎ., ಫ್ಯಾಶನ್ ಟೆಕ್ನಾಲಜಿಯಂತಹ ಸಂಸ್ಥೆಗಳನ್ನು, ಮಾಸ್ಟರ್ ಆಫ್ ಕಂಪ್ಯೂಟರ್‌ನಂತಹ ಹೊಸ ಬಗೆಯ ಕೋರ್ಸ್‌ಗಳನ್ನು ಸಂಸ್ಥೆಯಲ್ಲಿ ತೆರೆಯುವ ಮೂಲಕ ಯುವ ಜನಾಂಗದ ಅಭಿಲಾಷೆ ಈಡೇರಿಸುವ ಕೀರ್ತಿ ಕೋರೆಯವರದ್ದಾಗಿತ್ತು.[೩೩]

ಅದರಲ್ಲಿ ೧೯೯೩ ಗ್ಯಾಟ್ ಒಪ್ಪಂದ, ೧೯೯೬ರಲ್ಲಿನ ಮುಕ್ತ ಆರ್ಥಿಕ ನೀತಿಯಿಂದಾಗಿ ವಿದೇಶಿ ಸಂಸ್ಥೆಗಳು ನಮ್ಮ ದೇಶದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸುವ ಮುನ್ಸೂಚನೆಯನ್ನು ಅರಿತು, ವಿದೇಶಿ ದೇಶಗಳ ಶೈಕ್ಷಣಿಕ ಸುಧಾರಣೆ ಪದ್ಧತಿಯನ್ನು ಮೀರಿಸುವ ಹಾಗೆ ಆಧುನಿಕ ಸೌಲಭ್ಯಗಳನ್ನು, ಅಗತ್ಯವಾದ ಸಲಕರಣೆಗಳನ್ನು ಒದಗಿಸಿ, ಅಂತಾರಾಷ್ಟ್ರೀಯ ಗುಣಮಟ್ಟದ ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸಿದ ಹೆಗ್ಗಳಿಕೆ ಕೋರೆಯವರದಾಗಿತ್ತು.

ಅದರಲ್ಲಿ ಉತ್ತರ ಕರ್ನಾಟಕ ಪ್ರದೇಶ ಹಿಂದುಳಿದಿದ್ದನ್ನು ಮನಗಂಡು ಕೋರೆಯವರು ಉತ್ತರ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸುವುದರ ಮೂಲಕ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಬಾಳು ಬೆಳಗಿಸಿದ ಶ್ರೇಯಸ್ಸು ಕೋರೆಯವರದಾಗಿದೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತಂತ್ರಜ್ಞಾನದಿಂದ ವಂಚಿತರಾಗಬಾರದೆಂದು ಮನಸ್ಸು ಮಾಡಿದ ಕೋರೆಯವರು, ೧೯೮೪ರಲ್ಲಿ ಸ್ವಂತ ೧.೫೦ ಲಕ್ಷ ರೂ.ಗಳನ್ನು ಕೆ.ಎಲ್.ಇ. ಸಂಸ್ಥೆಗೆ ದಾನವಾಗಿ ನೀಡಿ, ಚಿಕ್ಕೋಡಿಯಲ್ಲಿ ತಮ್ಮ ಅಣ್ಣಂದಿರಾದ ದಿ. ಚಿದಾನಂದ ಕೋರೆಯವರ ಹೆಸರಿನಲ್ಲಿ ಒಂದು ಪಾಲಿಟೆಕ್ನಿಕ್ ಕಾಲೇಜನ್ನು ಆರಂಭಿಸಿದರು. ನಂತರ ೨೦೦೮ರಲ್ಲಿ ಚಿಕ್ಕೋಡಿಯಲ್ಲಿ ಇನ್ನೊಂದು ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ

ಸ್ಥಾಪಿಸುವ ಮೂಲಕ ತಾವು ಬೆಳೆದ ಭಾಗದ ಋಣವನ್ನು ತೀರಿಸಿದ್ದಾರೆ. ಅದರಂತೆ ಬೈಲಹೊಂಗಲ, ಮಹಾಲಿಂಗಪೂರಗಳಲ್ಲಿ ತಾಂತ್ರಿಕ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಮೂಲಕ ಎಂಟು ತಿಂಗಳಲ್ಲಿ ಈ ನಾಲ್ಕು ಮಹಾವಿದ್ಯಾಲಯಗಳನ್ನು ಭೂಮಿಯನ್ನು ಪಡೆದರು. ಭೂಮಿ ಪೂಜಯದಿಂದ ಹಿಡಿದು ಕಟ್ಟಡ, ವಿದ್ಯಾರ್ಥಿಗಳ ಪ್ರವೇಶದವರೆಗೆ ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಬೆಳೆಸಿದ ಕೀರ್ತಿ ಶ್ರೀ ಪ್ರಭಾಕರ ಕೋರೆಯವರಿಗೆ ಸಲ್ಲುತ್ತದೆ. ಇದು ಅವರ ಆಡಳಿತದ ವೇಗ ಮತ್ತು ದಕ್ಷತೆಗೆ ಹಿಡಿದ ಕನ್ನಡಿ ಮತ್ತು ಹೆಮ್ಮೆಯ ವಿಷಯವಾಗಿದೆ.[೩೪]

ಕೋರೆಯವರು ಕೆ.ಎಲ್.ಇ. ಸಂಸ್ಥೆಗೆ ಆಧುನಿಕ ಸ್ಪರ್ಶ ನೀಡುತ್ತಾ, ಕರ್ನಾಟಕ ಶೈಕ್ಷಣಿಕ ರಂಗದಲ್ಲಿ ಒಂದು ಕ್ರಾಂತಿಯನ್ನು ಮಾಡಿದ್ದಾರೆ. ಗ್ರಾಮೀಣ ಪ್ರದೇಶಗಳಾದ ಅಥಣಿ, ನಿಪ್ಪಾಣಿ, ಸವದತ್ತಿ, ಚಿಕ್ಕೋಡಿ, ಬಿ.ಬಿ.ಎ. ಬಿ.ಸಿ.ಎ.ಯಂತಹ ಹೊಸ ಕೋರ್ಸ್‌ನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ವೃತ್ತಿ ಆಧಾರಿತ ಕೋರ್ಸ್‌ಗಳನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳು ನಗರ ಪ್ರದೇಶಗಳತ್ತ ತಮ್ಮ ಅಧ್ಯಯನಕ್ಕಾಗಿ ಹೋಗುವ ತೊಂದರೆಯನ್ನು ನಿವಾರಿಸಿದ್ದಾರೆ. ಈ ಮಹಾವಿದ್ಯಾಲಯಗಳಲ್ಲಿ ನುರಿತ ಪ್ರಾಧ್ಯಾಪಕರನ್ನು ಆಯ್ಕೆಮಾಡಿ, ಹೆಚ್ಚಿನ ಪ್ರಮಾಣದಲ್ಲಿ ಸಂಬಳವನ್ನು ನೀಡಿ ನಿಯಮಿಸಿಕೊಂಡರು. ಇದಲ್ಲದೆ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಸೌಲಭ್ಯ ಒದಗಿಸಿ, ವಿದ್ಯಾರ್ಥಿಗಳಿಗೆ ಹವಾನಿಯಂತ್ರಿತ ಉಪನ್ಯಾಸ ಕೊಠಡಿ, ಗ್ರಂಥಾಲಯದ ಸೌಲಭ್ಯಗಳನ್ನು ಒದಗಿಸುವ ಮೂಲಕ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಈ ಮಹಾವಿದ್ಯಾಲಯ ನಡೆಸುವುದರ ಜೊತೆಗೆ ಕ್ಯಾಂಪಸ್ ಸಂದರ್ಶನ, ವಿವಿಧ ಅಂತರಾಷ್ಟ್ರೀಯ ಕಂಪನಿಗಳ ಸಂದರ್ಶನ ನಡೆಸುವಂತೆ ಮಾಡಿ, ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿಕೊಳ್ಳಲು ನೆರವಾಗಿದ್ದಾರೆ.

ಕೋರೆಯವರು ಯಾವುದನ್ನೇ ಮಾಡಲಿ ಅದು ವೈಶಿಷ್ಟ್ಯ ಪೂರ್ಣವಾಗಿಯೇ ಇರುತ್ತದೆ ಎನ್ನುವುದಕ್ಕೆ ಈ ಬಿ.ಬಿ.ಎ., ಬಿ.ಸಿ.ಎ. ಮಹಾವಿದ್ಯಾಲಯಗಳೇ ಸಾಕ್ಷಿಯಾಗಿವೆ.

ಸ್ಥಾಪಿಸಿದ ಕೆಲವೇ ವರ್ಷಗಳಲ್ಲಿ ಇವುಗಳ ಸಾಧನೆ ತೃಪ್ತಿಕರವಾಗಿದೆ. ಗದಗಿನಲ್ಲಿ ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ., ಬಿ.ಸಿ.ಎ. ಮಹಾವಿದ್ಯಾಲಯಗಳಲ್ಲಿ ನಿರ್ಮಿಸಿದ ಆಧುನಿಕ ವಿದೇಶಿಯರ ಮಾದರಿಯಲ್ಲಿಯೇ ಸಮ್ಮೇಳನ ಕೋಣೆ ಹಾಗೂ ಗಣಕಯಂತ್ರ ಕೋಣೆ ನಿರ್ಮಾಣ, ಹಾಗೆ ಅಥಣಿಯಲ್ಲಿ ಪ್ರಾರಂಭಿಸಿದ ಬಿ.ಸಿ.ಎ., ಬಿ.ಬಿ.ಎ. ಮಹಾವಿದ್ಯಾಲಯಗಳಲ್ಲಿ ೩೫ ಕಂಪ್ಯೂಟರ್ ಒಳಗೊಂಡ ಸುಸಜ್ಜಿತವಾದ ಹವಾನಿಯಂತ್ರಿತ ಕಂಪ್ಯುಟರ್ ಲ್ಯಾಬ್‌ಗಳೇ ಸಾಕ್ಷಿಯಾಗಿವೆ. ಇದರ ಪ್ರಯೋಜನದ ಫಲವಾಗಿ ಈ ಮಹಾವಿದ್ಯಾಲಯದಲ್ಲಿ ೩೦ ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿ ತಮ್ಮ ಭವಿಷ್ಯವನ್ನು ಕಂಡುಕೊಂಡಿದ್ದಾರೆ.[೩೫] ಇದು ಒಂದು ಚಿಕ್ಕ ಉದಾಹರಣೆ ಅಷ್ಟೆ. ಹೀಗೆ ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ., ಬಿ.ಬಿ.ಎ. ಮಹಾವಿದ್ಯಾಲಯಗಳಲ್ಲಿ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ ಸಾವಿರಾರು ವಿದ್ಯಾರ್ಥಿಗಳು ಉದ್ಯೋಗ ಪಡೆದು ಭಾಗ್ಯಶಾಲಿಗಳಾಗಿದ್ದಾರೆ. ಈ ರೀತಿಯಾಗಿ ಕೆ.ಎಲ್.ಇ. ಸಂಸ್ಥೆಗೆ ಹೊಸ ರೂಪವನ್ನು ನೀಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಒಳ್ಳೆಯ ಸದವಕಾಶವನ್ನು ಒದಗಿಸಿಕೊಟ್ಟಿದ್ದಾರೆ.

ಬಿ. ವಿ. ಭೂಮರೆಡ್ಡಿ ಇಂಜನಿಯರಿಂಗ್ ಕಾಲೇಜಿನಲ್ಲಿ ಪ್ರಸ್ತುತ ೧೧ ಯು.ಜಿ.ಸಿ. ಕೋರ್ಸ್‌ಗಳು, ಸಿವಿಲ್, ಮೆಕ್ಯಾನಿಕಲ್, ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್, ಇನ್‌ಸ್ಟ್ರುಮೆಂಟೇಶನ್, ಇಂಡಸ್ಟ್ರಿಯಲ್ ಮತ್ತು ಪ್ರೊಡಕ್ಷನ್ ಆಟೋಮೊಬೈಲ್, ಮಾಹಿತಿ ವಿಜ್ಞಾನ, ಕಂಪ್ಯೂಟರ್ ವಿಜ್ಞಾನ, ಆರ್ಕಿಟೆಕ್ಚರ್ ಮತ್ತು ಬಯೋಟೆಕ್ನಾಲಜಿ ಅಲ್ಲದೇ ಏಳು ಸ್ನಾತಕ ಪದವಿ ಕೋರ್ಸ್‌ಗಳಾದ ಸ್ಟ್ರಕ್ಚರಲ್ ಇಂಜಿನಿಯರಿಂಗ್, ಪ್ರೊಡಕ್ಷನ್ ಮ್ಯಾನೇಜಮೆಂಟ್, ಎನರ್ಜಿ ಸಿಸ್ಟಮ್ಸ್, ಡಿಜಿಟಲ್ ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸಾಯನ್ಸ್, ಎಂ.ಸಿ.ಎ. ಮತ್ತು ಎಂ.ಬಿ.ಎ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅನುಮತಿ ಪಡೆದು, ಏಳು ಸಂಶೋಧನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಶೈಕ್ಷಣಿಕವಾಗಿ ಉನ್ನತ ಮಟ್ಟವನ್ನು ಸಾಧಿಸುವ ದಿಸೆಯಲ್ಲಿ ಈ ಸಂಸ್ಥೆಯು ಉತ್ತಮ ಕಟ್ಟಡ ಮತ್ತು ಸುಸಜ್ಜಿತ ಪ್ರಯೋಗಾಲಯ ಹಾಗೂ ಅಧ್ಯಯನಕ್ಕೆ ಬೇಕಾಗುವ ಗ್ರಂಥಗಳು, ೬೦,೦೦೦ಕ್ಕೂ ಮಿಕ್ಕಿ ಗ್ರಂಥಗಳನ್ನು ಒಳಗೊಂಡ ಸ್ವಯಂಚಾಲಿತ ನಿರ್ವಹಣೆ ವ್ಯವಸ್ಥೆ ಹೊಂದಿದೆ. ಅಲ್ಲದೆ ೭೦ ದೇಶೀಯ, ೪೦ ಅಂತಾರಾಷ್ಟ್ರೀಯ ನಿಯತಕಾಲಿಕೆಗಳು, ಇದಲ್ಲದೆ ಅಂತರ್ಜಾಲದ ಮೂಲಕ (IEEE & ASME) ನಿಯತಕಾಲಿಕೆ ಪತ್ರಿಕೆಗಳು ಲಭ್ಯವಿವೆ. ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿ ನಿಲಯ, ಆಟದ ಮೈದಾನ, ವ್ಯಾಯಾಮ ಶಾಲೆಗಳು ಇವೆ. ಸುಂದರವಾದ ಉದ್ಯಾನವನಗಳಿವೆ. ಹೀಗೆ ಅನೇಕ ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿದ್ದರ ಹಿಂದಿನ ಶ್ರಮ ಶ್ರೀ ಪ್ರಭಾಕರ ಕೋರೆಯವರದು. ಇವರ ಪ್ರಯತ್ನದ ಫಲವಾಗಿ ೨೦೦೮ರಲ್ಲಿ ನವದೆಹಲಿಯ ಧನ ಸಹಾಯ ಆಯೋಗ ಈ ಕಾಲೇಜಿಗೆ ಸ್ವಾಯತ್ತತೆಯನ್ನು ನೀಡಿದೆ.[೩೬]

ಕರ್ನಾಟಕ ಘನಸರ್ಕಾರ ಮೆಡಿಕಲ್, ಇಂಜಿನಿಯರಿಂಗ್, ಸಿ.ಇ.ಟಿ., ಕೌನ್ಸಲಿಂಗ್ ಈ ವಿದ್ಯಾಲಯಗಳನ್ನು ಆರಂಭಿಸಿದ್ದು ಸಂಸ್ಥೆಯ ಹೆಗ್ಗಳಿಕೆಯ ಜತೆಗೆ ಸರ್ಕಾರದ ಘನತೆಯೂ ಹೆಚ್ಚಿದೆ. ಪ್ರತಿವರ್ಷ ಹಲವಾರು ಅಂತಾರಾಷ್ಟ್ರೀಯ ಖ್ಯಾತಿಯ ಕಂಪನಿಗಳು ಕ್ಯಾಂಪಸ್ ಸಂದರ್ಶನ ನಡೆಸುತ್ತವೆ. ಇದರಿಂದ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು ದೇಶ, ವಿದೇಶಗಳಲ್ಲಿ ಉತ್ತಮ ಉದ್ಯೋಗವನ್ನು ಪಡೆದಿದ್ದಾರೆ. ಒಂದು ಸಂಸ್ಥೆಯ ಇಂಜಿನಿಯರಿಂಗ್ ಕಾಲೇಜು ಹೇಗೆ ಇರಬೇಕು ಎಂಬುದರ ಬಗ್ಗೆ ಕೆ.ಎಲ್.ಇ. ಸಂಸ್ಥೆಯ ಇಂಜಿನಿಯರಿಂಗ್ ಕಾಲೇಜುಗಳ ಬಿ.ಬಿ.ಎ. ಮಾದರಿಯಾಗಿವೆ. ಅದನ್ನು ಹೇಗೆ ಅಭಿವೃದ್ಧಿಪಡಿಸಬೇಕು ಮತ್ತು ಹೇಗೆ ನಿರ್ವಹಿಸಬೇಕು ಎಂಬುದಕ್ಕೆ ಶ್ರೀ ಪ್ರಭಾಕರ ಕೋರೆಯವರು ಮಾದರಿಯಾಗಿದ್ದಾರೆ. ಇದೇ ಮಾದರಿಯಲ್ಲಿಯೇ ಚಿಕ್ಕೋಡಿ, ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳನ್ನು ಅಭಿವೃದ್ಧಿಪಡಿಸುತ್ತಿರುವ ಶ್ರೀ ಕೋರೆಯವರು, ಉತ್ತರ ಕರ್ನಾಟಕದಲ್ಲಿಯೂ ಪರಿಣಿತ ತಂತ್ರಜ್ಞರನ್ನು ತಯಾರಿಸುವ ಹೃದಯವಿಶಾಲತೆ ತೋರುತ್ತದೆ.

ಉತ್ತರ ಕರ್ನಾಟಕದಲ್ಲಿ ತಾಂತ್ರಿಕ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಉತ್ತರ ಕರ್ನಾಟಕ ನಕ್ಷೆಯನ್ನು ಬದಲಾಯಿಸುವ ಹಂತಕ್ಕೆ ಬಂದು ನಿಲ್ಲುವಂತೆ ಮಾಡಲು ಸಿಂಹಪಾಲು ಕೆ.ಎಲ್.ಇ. ಸಂಸ್ಥೆಯ ನಾಯಕ ಶ್ರೀ ಪ್ರಭಾಕರ ಕೋರೆಯವರಿಗೆ ಸಲ್ಲುತ್ತದೆ.

ಯುವ ಜನಾಂಗಕ್ಕೆ ಹೊಸ ಆವಿಷ್ಕಾರದ ಕಾಲೇಜುಗಳು :

ಆಧುನಿಕ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿಪುಲ ಉದ್ಯೋಗ ದೊರಕಿಸಿಕೊಡುವ ಉದ್ದೇಶದಿಂದ ನೂತನ ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ಬದಲಾವಣೆಗೆ ಕೆ.ಎಲ್.ಇ. ಸಂಸ್ಥೆಯನ್ನು ಕೊಂಡೊಯ್ದ ಕೀರ್ತಿ ಕೋರೆಯವರದ್ದಾಗಿದೆ.

ಎಂ.ಬಿ.ಎ. ಕಾಲೇಜುಗಳನ್ನು, ಸಂಶೋಧನಾ ಕೇಂದ್ರಗಳನ್ನು ಹೊಸ ಫ್ಯಾಶನ್ ಟೆಕ್ನಾಲಜಿ, ಪ್ರವಾಸೋದ್ಯಮ, ಆಡಳಿತ ಸಂಸ್ಥೆ, ಜಾಬ್ ಓರಿಯಂಟೆಡ್ ಕೋರ್ಸ್‌ಗಳು, ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೆಜಮೆಂಟ್ ಮತ್ತು ಕೇಟರಿಂಗ್ ಟೆಕ್ನಾಲಜಿ, ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ವ್ಯವಹಾರ ಮಹಾವಿದ್ಯಾಲಯ, ವ್ಯವಹಾರ ನಿರ್ವಹಣೆ ಸಂಸ್ಥೆಗಳನ್ನು, ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಹೀಗೆ ಹೊಸ ಬಗೆಯ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಸ್ಪರ್ಧೆ ಒಡ್ಡಲು ಸಾಧ್ಯವಾಗುತ್ತದೆ. ಗುಣಮಟ್ಟಕಾಯ್ದುಕೊಂಡು, ನಮ್ಮ ವಿದ್ಯಾರ್ಥಿಗಳು ಈ ಬಗೆಯ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗುವುದನ್ನು ತಪ್ಪಿಸಿ, ಆ ಬಗೆಯ ಎಲ್ಲ ಸೌಕರ್ಯಗಳನ್ನು ಒದಗಿಸಿದರು ಕೆ.ಎಲ್.ಇ. ಸಂಸ್ಥೆಗೆ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿ ದೊರಕಿಸಿಕೊಟ್ಟ ಹೆಗ್ಗಳಿಕೆ ಕೋರೆಯವರದು.

ಶ್ರೀ ಕೋರೆಯವರ ನೇತೃತ್ವದಲ್ಲಿ ಸ್ಥಾಪಿಸಲಾದ ತಾಂತ್ರಿಕ ಸಂಸ್ಥೆಗಳು :

೧೯೮೪ರಿಂದ ೨೦೦೯ರ ವರೆಗೆ ತಾಂತ್ರಿಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿದ್ದಾರೆ ಶ್ರೀಯುತ ಕೋರೆಯವರು.

೧. ಕೆ.ಎಲ್.ಇ. ಸಂಸ್ಥೆಯ ಬಿ. ವ್ಹಿ. ಭೂಮರೆಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹುಬ್ಬಳ್ಳಿ ೧೯೪೭ರಲ್ಲಿ ಸ್ಥಾಪಿಸಲಾಗಿದ್ದರೂ, ಇದಕ್ಕೆ ಆಧುನೀಕರಣದ ಸ್ಪರ್ಶ ನೀಡಿ, ಹೊಸ ಸಂಶೋಧನೆ ಕೇಂದ್ರಗಳನ್ನು ಸ್ಥಾಪಿಸಿ, ಈಗ ೨೦೦೮ರಲ್ಲಿ ಈ ಕಾಲೇಜು ಸ್ವಾಯತ್ತತೆ ಪಡೆದಿದ್ದು, ಕೋರೆಯವರ ಶ್ರಮವೇ ಕಾರಣವಾಗಿದೆ.

೨. ಕೆ.ಎಲ್.ಇ. ಸಂಸ್ಥೆಯ ಅಭಿಯಾಂತ್ರಿತ ಮತ್ತು ತಾಂತ್ರಿಕ ಮಹಾವಿದ್ಯಾಲಯ ಉದ್ಯಮ ಭಾಗ ಬೆಳಗಾವಿ ಇದಕ್ಕೂ ಕೂಡ ಹೊಸ ಕಟ್ಟಡ ಇತರೇ ಆಧುನಿಕ ಸೌಲಭ್ಯಗಳನ್ನು ಒದಗಿಸಿ, ಗುಣಮಟ್ಟವನ್ನು ಹೆಚ್ಚಿಸುವಂತೆ ಮಾಡಿ. ಆಧುನೀಕರಣಗೊಳಿಸಿದ ಕೀರ್ತಿ ಕೋರೆಯವರದಾಗಿದೆ.

೩. ಕೆ.ಎಲ್.ಇ. ಸಂಸ್ಥೆಯ ಸಿ. ಬಿ. ಕೋರೆ ಪಾಲಿಟೆಕ್ನಿಕ್, ಚಿಕ್ಕೋಡಿ-೧೯೮೪.

೪. ಕೆ.ಎಲ್.ಇ. ಸಂಸ್ಥೆಯ ಸಿ. ಬಿ. ಕೊಳ್ಳಿ ಪಾಲಿಟೆಕ್ನಿಕ್, ಹಾವೇರಿ-೧೯೮೪.

೫. ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಹುಬ್ಬಳ್ಳಿ-೧೯೮೪.

೬. ಕೆ.ಎಲ್.ಇ. ಸಂಸ್ಥೆಯ ಫ್ಯಾಶನ್ ಟೆಕ್ನಾಲಜಿ ಆ್ಯಂಡ್ ಅಪೆರಲ್ ಸಂಸ್ಥೆ, ಬೆಂಗಳೂರು-೨೦೦೨.

೭. ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಮಹಾವಿದ್ಯಾಲಯ, ಪಿ. ಸಿ. ಜಾಬಿನ್ ಎಲ್ಸನ್ ಮಹಾವಿದ್ಯಾಲಯ

ಆವರಣ, ಹುಬ್ಬಳ್ಳಿ-೧೯೯೯.

೮. ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ ಜೆ.ಟಿ. ಕಾಲೇಜ, ಗದಗ-೧೯೯೯.

೯. ಕೆ.ಎಲ್.ಇ. ಸಂಸ್ಥೆಯ ಆರ್. ಎಲ್. ವಿಜ್ಞಾನ ಸಂಸ್ಥೆ, ಬೆಳಗಾವಿ-೧೯೯೯.

೧೦. ಕೆ.ಎಲ್.ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಕಾಲೇಜು ಆವರಣ, ಬೆಂಗಳೂರು-೨೦೦೦.

೧೧. ಕೆ.ಎಲ್.ಇ. ಸಂಸ್ಥೆಯ ವ್ಯವಹಾರ ಆಡಳಿತ ಮಹಾವಿದ್ಯಾಲಯ, ವಿದ್ಯಾನಗರ ಹುಬ್ಬಳ್ಳಿ-೧೯೯೬

೧೨. ಕೆ.ಎಲ್.ಇ. ಸಂಸ್ಥೆಯ ವ್ಯವಹಾರ ಆಡಳಿತ ಮಹಾವಿದ್ಯಾಲಯ, ಲಿಂಗರಾಜ ಕಾಲೇಜ ಆವರಣ, ಬೆಳಗಾವಿ-೧೯೯೬.

೧೩. ಕೆ.ಎಲ್.ಇ. ಸಂಸ್ಥೆಯ ಆಡಳಿತ ಅಧ್ಯಯನ ಸಂಶೋಧನಾ ಕೇಂದ್ರ, ಹುಬ್ಬಳ್ಳಿ-೧೯೯೮.

೧೪. ಕೆ.ಎಲ್.ಇ. ಸಂಸ್ಥೆಯ ವ್ಯವಹಾರ ನಿರ್ವಹಣಾ ಸಂಸ್ಥೆ, ಎಸ್. ನಿಜಲಿಂಗಪ್ಪ ಕಾಲೇಜು, ಬೆಂಗಳೂರು-೧೯೯೮.

೧೫. ಕೆ.ಎಲ್.ಇ. ಸಂಸ್ಥೆಯ ಮಾಸ್ಟರ್ ಆಫ್ ಕಂಪ್ಯುಟರ್ ಅಪ್ಲಿಕೇಶನ್ಸ್, ಬಿ.ವ್ಹಿ.ಬಿ ಮಹಾವಿದ್ಯಾಲಯ, ಹುಬ್ಬಳ್ಳಿ-೧೯೯೯.

೧೬. ಕೆ.ಎಲ್.ಇ. ಸಂಸ್ಥೆಯ ಮಾಸ್ಟರ್ ಆಫ್ ಕಂಪ್ಯುಟರ್ ಇಂಜಿನಿಯರಿಂಗ್ ಕಾಲೇಜು, ಬೆಳಗಾವಿ-೧೯೯೯.

೧೭. ಕೆ.ಎಲ್.ಇ. ಸಂಸ್ಥೆಯ ಮಾಸ್ಟರ್ ಆಫ್ ಕಂಪ್ಯುಟರ್ ಎಸ್. ನಿಜಲಿಂಗಪ್ಪ ಕಾಲೇಜು, ಬೆಂಗಳೂರು-೨೦೦೦.

೧೮. ಕೆ.ಎಲ್.ಇ. ಸಂಸ್ಥೆಯ ಪ್ರವಾಸೋದ್ಯಮ ಆಡಳಿತ ಸಂಸ್ಥೆ, ಎಸ್. ನಿಜಲಿಂಗಪ್ಪ ಕಾಲೇಜು, ಬೆಂಗಳೂರು-೨೦೦೦.

೧೯. ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಮ್ಯಾನೆಜಮೆಂಟ್ ಮತ್ತು ಕೆ. ಲಿಂಗ್ ಟೆಕ್ನಾಲಜಿ, ಬೆಂಗಳೂರು-೧೯೯೧.

೨೦. ಕೆ.ಎಲ್.ಇ. ಸಂಸ್ಥೆಯ ಕೈಗಾರಿಕಾ ತರಬೇತಿ ಸಂಸ್ಥೆ, ಗೋಕಾಕ-೨೦೦೩.

೨೧. ಕೆ.ಎಲ್.ಇ. ಸಂಸ್ಥೆಯ ಜಾಬ್ ಓರಿಯಂಟೆಡ್ ಕೋರ್ಸ್, ಜಿ.ಎ.ಸಂ.ಪ.ಪೂ. ಮಹಾವಿದ್ಯಾಲಯ, ಬೆಳಗಾವಿ-೧೯೯೯.

೨೨. ಕೆ.ಎಲ್.ಇ. ಸಂಸ್ಥೆಯ ಜಿ. ಒ. ಸಿ. ಕಾಲೇಜು, ಹಾವೇರಿ-೧೯೯೫.

೨೩. ಕೆ.ಎಲ್.ಇ. ಸಂಸ್ಥೆಯ ಶ್ರೀಮತಿ ಶಾರದಾ ದೇವಿ ಕೋರೆ ಪ.ಪೂ. ಕಾಲೇಜು, ಅಂಕಲಿ-೧೯೯೪

೨೪. ಕೆ.ಎಲ್.ಇ. ಸಂಸ್ಥೆಯ ಫ್ಯಾಶನ್ ಟೆಕ್ನಾಲಜಿ ಆ್ಯಂಡ್ ಅಪೆರಲ್ ಡಿಜಾಯಿನ್, ಬೆಳಗಾವಿ–೨೦೦೬

೨೫. ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ ಬಿ.ಕೆ. ಕಾಲೇಜು, ಚಿಕ್ಕೋಡಿ–೨೦೦೬.

೨೬. ಕೆ.ಎಲ್.ಇ. ಸಂಸ್ಥೆಯ ವ್ಯವಹಾರ ಆಡಳಿತ ಮಹಾವಿದ್ಯಾಲಯ, ಜೆ. ಟಿ. ಕಾಲೇಜು, ಗದಗ–೨೦೦೭.

೨೭. ಕೆ.ಎಲ್.ಇ. ಸಂಸ್ಥೆಯ ವ್ಯವಹಾರ ಆಡಳಿತ ಮಹಾವಿದ್ಯಾಲಯ, ಬಿ. ಕೆ. ಕಾಲೇಜು, ಚಿಕ್ಕೋಡಿ–೨೦೦೭.

೨೮. ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ ಎಸ್.ಎಂ.ಎಸ್. ಮಹಾವಿದ್ಯಾಲಯ, ಅಥಣಿ–೨೦೦೭.

೨೯. ಕೆ.ಎಲ್.ಇ. ಸಂಸ್ಥೆಯ ಜೆ. ಎ. ಬಾಗೇವಾಡಿ ಕಾಲೇಜು, ನಿಪ್ಪಾಣಿ–೨೦೦೭.

೩೦. ಕೆ.ಎಲ್.ಇ. ಸಂಸ್ಥೆಯ ಜೆ.ಎಚ್. ಕಾಲೇಜು, ಹಾವೇರಿ–೨೦೦೭

೩೧. ಕೆ.ಎಲ್.ಇ. ಸಂಸ್ಥೆಯ ಎಸ್.ವ್ಹಿ.ಎಸ್. ಬೆಳ್ಳುಬ್ಬಿ ಕಾಲೇಜು, ಸವದತ್ತಿ–೨೦೦೮.

೩೨. ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಶ್ರೀ ಮೃತ್ಯುಂಜಯ ಕಾಲೇಜು, ಧಾರವಾಡ–೨೦೦೮.

೩೩. ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಜಿ. ಆಯ್. ಬಾಗೇವಾಡಿ ಕಾಲೇಜು, ನಿಪ್ಪಾಣಿ–೨೦೦೮.

೩೪. ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಎಸ್.ಎಂ.ಎಸ್. ಕಾಲೇಜು, ಅಥಣಿ–೨೦೦೮

೩೫. ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೋಕುಲರೋಡ್, ಹುಬ್ಬಳ್ಳಿ–೨೦೦೮.

೩೬. ಕೆ.ಎಲ್.ಇ. ಸಂಸ್ಥೆಯ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಚಿಕ್ಕೋಡಿ–೨೦೦೮.

೩೭. ಕೆ.ಎಲ್.ಇ. ಸಂಸ್ಥೆಯ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಹುಬ್ಬಳ್ಳಿ–೨೦೦೯.

೩೮. ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಬೈಲಹೊಂಗಲ–೨೦೦೮.

೩೯. ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಮಹಾಲಿಂಗಪೂರ–೨೦೦೮.

೪೦. ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್ ಎಸ್.ಸಿ.ಪಿ., ಐ.ಟಿ.ಸಿ., ಮಹಾಲಿಂಗಪೂರ.[೩೭]

ಹೀಗೆ ೪೦ಕ್ಕೂ ಅಧಿಕ ತಾಂತ್ರಿಕ ಮತ್ತು ವೃತ್ತಿ ಆಧಾರಿತ ಕೋರ್ಸ್‌ಗಳನ್ನು ಶ್ರೀ ಕೋರೆಯವರು ಸ್ಥಾಪಿಸುವುದರ ಮೂಲಕ, ಕೆ.ಎಲ್.ಇ. ಸಂಸ್ಥೆಯನ್ನು ಒಂದು ಬೃಹತ್ ಸಂಸ್ಥೆಯಾಗಿ ಬೆಳೆಸಿದ್ದಾರೆ. ಸಾವಿರಾರು ವಿದ್ಯಾರ್ಥಿಗಳಿಗೆ ಹೊಸ ಬಗೆಯ ಹಾಗೂ ತಾಂತ್ರಿಕ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡಲು ಗ್ರಾಮೀಣ ಮತ್ತು ನಗರ ಎರಡೂ ಪ್ರದೇಶಗಳಲ್ಲಿ ಸಮನಾಗಿ ಸ್ಥಾಪಿಸುವ ಮೂಲಕ, ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣದಲ್ಲಿ ಕ್ರಾಂತಿಯನ್ನು ಮಾಡಿದ್ದಾರೆ. ಹೊಸ ಸಂಶೋಧನಾ ಸಂಕೀರ್ಣಗಳನ್ನು ನಿರ್ಮಿಸುವುದರ ಮೂಲಕ ಜಾಗತಿಕವಾಗಿ ವಿದೇಶಿ ಸಂಸ್ಥೆಗಳನ್ನು ಮೀರಿಸುವ ಹಾಗೆ ಅಭಿವೃದ್ಧಿಪಡಿಸಿದ್ದಾರೆ. ಕೇವಲ ಒಂದು ಸಂಸ್ಥೆಯು ಬೆಳೆಸುವುದರೊಂದಿಗೆ ಇತರ

ಕರ್ನಾಟಕ ರಾಜ್ಯ ಅದರಲ್ಲಿಯೂ ಉತ್ತರಕರ್ನಾಟಕದಲ್ಲಿ ತಾಂತ್ರಿಕ ಪರಿಣತರನ್ನು ತಯಾರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ತಾಂತ್ರಿಕ ಶಿಕ್ಷಣ ರಂಗದಲ್ಲಿ ಕರ್ನಾಟಕ ಹೊಸ ಇತಿಹಾಸವನ್ನು ನಿರ್ಮಿಸಿದ್ದು ಸ್ಮರಣೀಯ.

ಆರೋಗ್ಯ ಮತ್ತು ವಿಜ್ಞಾನ ಸಂಸ್ಥೆಗಳು ಹಾಗೂ ಶುಶ್ರೂಷಾ ಸಂಸ್ಥೆಗಳು :

ಕರ್ನಾಟಕ ರಾಜ್ಯದ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿಯ ಸಾಧನೆಯ ಕುರಿತು ಚರ್ಚಿಸುವಾಗ, ದೇಶದ ಮತ್ತು ಹೊರ ದೇಶದಲ್ಲಿ ನೆನಪಿಸಿದರೆ ಪ್ರಮುಖವಾಗಿ ಕೇಳಿಬರುವ ಹೆಸರು ಡಾ. ಪ್ರಭಾಕರ ಕೋರೆಯವರದ್ದು. ನಂತರ ಅವರು ಸ್ಥಾಪಿಸಿದ ಆರೋಗ್ಯ ಸಂಸ್ಥೆಗಳದ್ದು. ಹೀಗೆ ಕೆ.ಎಲ್.ಇ. ಸಂಸ್ಥೆಯು ಶಿಕ್ಷಣದ ಜೊತೆಗೆ ಆರೋಗ್ಯ, ವಿಜ್ಞಾನ ಶಿಕ್ಷಣದಲ್ಲಿಯೂ ಕ್ರಾಂತಿಕಾರಕ ಹೆಜ್ಜೆಗಳನ್ನು ಇಡುವಂತೆ ಮಾಡಿ, ಜಾಗತಿಕ ನಕ್ಷೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ಸಾಮ್ರಾಜ್ಯವನ್ನು ವಿಸ್ತರಿಸಿ, ಗುರುತಿಸಿದ ಕೋರೆಯವರ ಕಾರ್ಯ ಅಮೋಘವಾದದ್ದು.

ಆರೋಗ್ಯ ಶಿಕ್ಷಣ ಮತ್ತು ಆರೋಗ್ಯ ಸೇವೆಯಲ್ಲಿ ಕೆ.ಎಲ್.ಇ. ಸಂಸ್ಥೆಯು ಪ್ರಭಾಕರ ಕೋರೆಯವರ ನೇತೃತ್ವದಲ್ಲಿ ಇಟ್ಟ ದಾಪುಗಾಲು ಎಲ್ಲರನ್ನು ಬೆರಗುಗೊಳಿಸಿದೆ. ಇವುಗಳಲ್ಲಿ ವೈದ್ಯಕೀಯ ಕಾಲೇಜುಗಳು, ದಂತವಿಜ್ಞಾನ ಮಹಾವಿದ್ಯಾಲಯಗಳು, ಔಷಧ ವಿಜ್ಞಾನ ಮಹಾವಿದ್ಯಾಲಯಗಳು, ಫಿಜಿಯೋಥೆರಪಿ ಮಹಾವಿದ್ಯಾಲಯಗಳು, ಆಯುರ್ವೇದ ಮಹಾವಿದ್ಯಾಲಯಗಳು, ಶುಶ್ರೂಷ (ನರ್ಸರಿ) ಮಹಾವಿದ್ಯಾಲಯಗಳು, ನಿಸರ್ಗ ಉಪಚಾರ ಮತ್ತು ಯೋಗ ವಿಜ್ಞಾನ ವಿದ್ಯಾಲಯಗಳು ಮತ್ತು ಆಸ್ಪತ್ರೆ, ಸಂಶೋಧನಾ ಕೇಂದ್ರಗಳು, ಆಯುರ್ವೇದ, ಫಾರ್ಮಸಿ ಕಾಲೇಜುಗಳು ಹಾಗೂ ತುರ್ತು ಚಿಕಿತ್ಸಾ ನಿಗಾಘಟಕ, ಹಾರ್ಟ್‌ಫೌಂಡೆಶನ್, ಕಿಡ್ನಿ ಫೌಂಡೇಶನ್‌ಗಳು, ಕಾರ್ಡಿಯಾಕ ಕೋರ ಸಂಸ್ಥೆಗಳು ಹೀಗೆ ವೈದ್ಯಕೀಯ ಲೋಕವೇ ಅಚ್ಚರಿಪಡುವಂತೆ ಆರೋಗ್ಯ ವಿಜ್ಞಾನ ಹಾಗೂ ಆರೋಗ್ಯ ಆರೈಕೆ ಸಂಸ್ಥೆಗಳನ್ನು ಡಾ. ಪ್ರಭಾಕರ ಕೋರೆಯವರು ಸ್ಥಾಪಿಸುವ ಮೂಲಕ ಕೆ.ಎಲ್.ಇ. ಸಂಸ್ಥೆಗೆ ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾನಮಾನ ಸಿಗುವಂತೆ ಮಾಡಿದರು. ಇದು ಉತ್ತರ ಕರ್ನಾಟಕದಲ್ಲಿಯೇ ಪ್ರಥಮ ವೈದ್ಯಕೀಯ ವಿಶ್ವವಿದ್ಯಾಲಯ ಎಂಬ ಸ್ಥಾನಮಾನ ಸಿಗುವಂತೆ ಮಾಡಿದ ಕೋರೆಯವರ ಸಾಧನೆ ಕೆ.ಎಲ್.ಇ. ಸಂಸ್ಥೆಗೆ ಕಳಶಪ್ರಾಯವಾಗಿದೆ.

ಡಾ. ಕೋರೆಯವರ ಕನಸಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ :

೧೯೯೬ರಲ್ಲಿ ಸುಮಾರು ೧೨೦ ಕೋಟಿ ರೂ. ವೆಚ್ಚಮಾಡಿ ೧೦೦೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ಸ್ಥಾಪಿಸುವ ಮೂಲಕ ಕೆ.ಎಲ್.ಇ. ಸಂಸ್ಥೆಗೆ ಜಾಗತಿಕ ಮನ್ನಣೆ ದೊರೆಯುವಂತೆ ಮಾಡಿದ್ದಾರೆ. ಇಂದು ೧೯೯೦ ಹಾಸಿಗೆಯುಳ್ಳ ಸುಸಜ್ಜಿತವಾದ ಸೌಲಭ್ಯವುಳ್ಳದ್ದಾಗಿದೆ. ಇದರ ಕಟ್ಟಡ ಬೆಳಗಾವಿ ನಗರದ ಸೌಂದರ್ಯವನ್ನು ಹೆಚ್ಚಿಸುವಂತೆ ಮಾಡಿದೆ. ಇದರಲ್ಲಿ ೯೨೦ ಹಾಸಿಗೆಗಳನ್ನು ಕೇವಲ ಬಡವರಿಗೆ, ಅಲ್ಪ ಸಂಖ್ಯಾತರಿಗೆ, ಸಮಾಜದಲ್ಲಿ ಅವಕಾಶವಂಚಿತ ನಿರ್ಗತಿಕ ರೋಗಿಗಳಿಗೆ ಉಚಿತ ಸೌಲಭ್ಯ ಕಲ್ಪಿಸಿದ್ದು, ಬಹುಶಃ ದೇಶದ ಮಾನವೀಯತೆಗೆ ಸಾಕ್ಷಿಯಾಗಿ, ಒಂದು ಖಾಸಗಿ ಸಂಸ್ಥೆಯ ಮೊದಲ ಪ್ರಯತ್ನ ಎಂದೇ ಗುರುತಿಸಬಹುದು. ಇದರಿಂದ ಬಡವರ ಬದುಕಿಗೆ ಆಶಾಕಿರಣವಾಗಿ ಹೊರಹೊಮ್ಮಿದೆ. ಈ ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ವೈದ್ಯಕೀಯ

ಸೇವೆಯಲ್ಲಿ ಅಮೇರಿಕಾ ಮತ್ತು ಇತರ ದೇಶಗಳಲ್ಲಿ ದೊರೆಯುತ್ತಿರುವ ಆಧುನಿಕ ಸೌಲಭ್ಯಗಳು ನಮ್ಮ ಉತ್ತರ ಕರ್ನಾಟಕ ಜನತೆಗೆ ಸಿಗಬೇಕು ಎಂಬುದೇ ಸಂಸ್ಥೆಯ ಹೆಬ್ಬಯಕೆ. ಯಾವುದೇ ವಿಷಯದಲ್ಲಿ ಚಿಕಿತ್ಸೆಗೆ ಸಂಬಂಧಪಟ್ಟಂತೆ ವಿಚಾರಿಸಿದರೆ ಅದು ಡಾ. ಪ್ರಭಾಕರ ಕೋರೆಯವರ ಆಸ್ಪತ್ರೆಯಲ್ಲಿದೆ ಎನ್ನುವುದು ಅಷ್ಟೇ ನಿಜವಾಗಿದೆ.[೩೮] ನುರಿತ ವೈದ್ಯರನ್ನು ಒಳಗೊಂಡ ಈ ಆಸ್ಪತ್ರೆ ಉತ್ತರ ಕರ್ನಾಟಕ ಜನರ ಆರೋಗ್ಯ ಭಾಗ್ಯದ ದೇವಾಲಯವಾಗಿದೆ. ಇದನ್ನು ನಿರ್ಮಾಣಮಾಡುವುದಕ್ಕಾಗಿ ಹಲವಾರು ದೇಶಗಳಲ್ಲಿ ಸಂಚರಿಸಿ, ಹಗಲು ರಾತ್ರಿ ಎನ್ನದೇ ದುಡಿದು, ಈ ಆಸ್ಪತ್ರೆಯನ್ನು ನಿರ್ಮಿಸಿದ್ದಾರೆ. ಇದೊಂದು 'ಜೀವಂತ ಸ್ಮಾರಕ'ವಾಗಿದೆ. ಇಲ್ಲಿಯ ಸೌಲಭ್ಯಗಳನ್ನು ಗಮನಿಸಿದ ಭಾರತದ ಪ್ರತಿಷ್ಠೆಯ ಪತ್ರಿಕೆಯಾದ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಹೆಲ್ತ್‌ಕೇರ್ ಮ್ಯಾಗಜಿನ್ ಮಾಡಿದ ಸರ್ವೆಯ ಪ್ರಕಾರ ಇದು ದಕ್ಷಿಣ ಭಾರತದ ಎಲ್ಲ ಆಸ್ಪತ್ರೆಗಳಲ್ಲಿಯೇ ಅತ್ಯುತ್ತಮ ಆಸ್ಪತ್ರೆಯೆಂದು ಗುರುತಿಸಿದೆ. ಇದು ಡಾ. ಕೋರೆಯವರ ಕಾರ್ಯ ವೈಖರಿಗೆ ಹಿಡಿದ ಕನ್ನಡಿಯಾಗಿದೆ.[೩೯] ರಾಜ್ಯದ ವಿವಿಧ ಭಾಗಗಳಿಗೆ ವೈದ್ಯಕೀಯ ಸೇವೆಯನ್ನು ತಲುಪಿಸುವುದರ ಸಲುವಾಗಿ ತೀವ್ರ ನಿಗಾ ಘಟಕಗಳನ್ನು ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿದೆ. ೬ ಕೋಟಿ ರೂ. ವೆಚ್ಚದಲ್ಲಿ ಹುಬ್ಬಳ್ಳಿ ಹೃದಯ ಶಸ್ತ್ರ ಚಿಕಿತ್ಸಾ ಘಟಕ ಸ್ಥಾಪಿಸಿದೆ. ಇದಲ್ಲದೆ ಜಮಖಂಡಿ, ಗೋಕಾಕ ನಗರಗಳಲ್ಲಿ ಕೆ. ಎಲ್. ಇ. ಆಸ್ಪತ್ರೆಗಳನ್ನು ತೆರೆಯಲಾಗಿದ್ದು, ಮೂಲ ಆಸ್ಪತ್ರೆಯೊಂದಿಗೆ ದೂರ ಸಂಪರ್ಕ ಮಾಧ್ಯಮದಿಂದ ಲಿಂಕ್ ಕಲ್ಪಿಸಿ, ದಿನಕ್ಕೆ ೧೦೦ಕ್ಕೂ ಅಧಿಕ ರೋಗಿಗಳಿಗೆ ಚಿಕಿತ್ಸೆ ಕೊಡುತ್ತಿದೆ.

ಇದಲ್ಲದೆ ೩೦೦ ಹಾಸಿಗೆಯುಳ್ಳ ಆಯುರ್ವೆದ ಆಸ್ಪತ್ರೆ ಜಮಖಂಡಿಯಲ್ಲಿ ಸ್ಥಾಪಿಸಿದ್ದಾರೆ. ಅಮೇರಿಕಾ ಆರೋಗ್ಯ ವಿಶ್ವವಿದ್ಯಾಲಯಗಳ ಜೊತೆಗೆ ಒಪ್ಪಂದ ಮಾಡಿಕೊಂಡು, ವೈದ್ಯಕೀಯ ಆವಿಷ್ಕಾರಗಳಿಗೆ ಹೆಸರುಪಡೆದಿದೆ. ಆರೋಗ್ಯ ಕ್ಷೇತ್ರ ಅಚ್ಚರಿಪಡುವಂತೆ ಮಾಡಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದಂತ ವಿಜ್ಞಾನ, ಫಾರ್ಮಸಿ, ನರ್ಸಿಂಗ್, ಆಯುರ್ವೇದ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಕರ್ನಾಟಕ ರಾಜ್ಯದಲ್ಲಿಯೇ ಹೊಸ ದಾಖಲೆ ಬರೆದ ಕೀರ್ತಿ ಕೋರೆಯವರದು. ಈ ಮಹಾವಿದ್ಯಾಲಯಗಳಿಂದ ಸಾವಿರಾರು ಜನ ತಮ್ಮ ವೈದ್ಯಕೀಯ ಶಿಕ್ಷಣ ಪೂರೈಸಿ, ಸಮಾಜದ ಸೇವೆಯಲ್ಲಿ ತೊಡಗುವಂತೆ ಮಾಡಿದ ಕೋರೆಯವರ ಸಾಧನೆ ಮಾನವ ಇತಿಹಾಸದಲ್ಲಿ 'ಸುವರ್ಣಾಕ್ಷರ'ಗಳಿಂದ ಬರೆಯಲ್‌ಪಡುವಂತಹದು. ದೇಶ, ವಿದೇಶಗಳಲ್ಲಿ ಕೆ.ಎಲ್.ಇ. ಸಂಸ್ಥೆಯ ಇತಿಹಾಸವನ್ನು ಸಾರುವಂತೆ ಮಾಡಿ, ದಕ್ಷಿಣ, ಏಷ್ಯಾದ ಒಂದು ಪ್ರತಿಷ್ಠಿತ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ. ಇವರ ಕಾರ್ಯ ನಿಜಕ್ಕೂ ಒಂದು ಪವಾಡಸದೃಶ್ಯವೇ ಸರಿ.

ಆರೋಗ್ಯ ವಿಜ್ಞಾನ ಸಂಸ್ಥೆಗಳು ಹಾಗೂ ಆರೋಗ್ಯ ಆರೈಕೆ ಆಧುನೀಕರಣಗೊಂಡ ಸಂಸ್ಥೆಗಳು :

೧. ಕೆ.ಎಲ್.ಇ. ಸಂಸ್ಥೆಯ ದಂತ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು–೧೯೯೨.

೨. ಕೆ.ಎಲ್.ಇ. ಸಂಸ್ಥೆಯ ಶುಶ್ರೂಷ (ನರ್ಸಿಂಗ್) ಮಹಾವಿದ್ಯಾಲಯ, ಬೆಳಗಾವಿ–೧೯೮೬.

೩. ಕೆ.ಎಲ್.ಇ. ಸಂಸ್ಥೆಯ ಶುಶ್ರೂಷ ಮಹಾವಿದ್ಯಾಲಯ, ಹುಬ್ಬಳ್ಳಿ–೨೦೦೩.

೪. ಕೆ.ಎಲ್.ಇ. ಸಂಸ್ಥೆಯ ಶುಶ್ರೂಷ ಮಹಾವಿದ್ಯಾಲಯ, ಅಂಕೋಲಾ-೨೦೦೩.

೫. ಕೆ.ಎಲ್.ಇ. ಸಂಸ್ಥೆಯ ಶುಶ್ರೂಷ ಮಹಾವಿದ್ಯಾಲಯ, ಗೋಕಾಕ-೨೦೦೪.

೬. ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ-೧೯೮೫

೭. ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ನಿಪ್ಪಾಣಿ-೧೯೯೨

೮. ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಗದಗ-೧೯೯೨

೯. ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು-೧೯೯೨.

೧೦. ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಅಂಕೋಲಾ-೨೦೦೫.

೧೧. ಕೆ.ಎಲ್.ಇ. ಸಂಸ್ಥೆಯ ನಿಸರ್ಗ ಉಪಚಾರ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ-೨೦೦೪.

೧೨. ಕೆ.ಎಲ್.ಇ. ಸಂಸ್ಥೆಯ ಫಿಜಿಯೋಥೆರಪಿ ಮಹಾವಿದ್ಯಾಲಯ, ಹುಬ್ಬಳ್ಳಿ-೨೦೦೪.

ಹೀಗೆ ಈ ಮೊದಲು ಸ್ಥಾಪನೆಗೊಂಡ ಆರೋಗ್ಯ ಸಂಸ್ಥೆಗಳನ್ನು ಆಧುನಿಕ ಕಟ್ಟಡ, ಇತರೇ ಸೌಲಭ್ಯಗಳನ್ನು ಒದಗಿಸಿದ ಕೀರ್ತಿ ಕೋರೆಯವರಿಗೆ ಸಲ್ಲುತ್ತದೆ. ಅವುಗಳು ಹೀಗಿವೆ.

೧೩. ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯ (ವಿಜ್ಞಾನ), ಬೆಳಗಾವಿ-೧೯೬೮.

೧೪. ಕೆ.ಎಲ್.ಇ. ಸಂಸ್ಥೆಯ ಸರದಾರ ವ್ಹಿ. ವ್ಹಿ. ಪಾಟೀಲ ಔಷಧ ಮಹಾವಿದ್ಯಾಲಯ, ಬೆಂಗಳೂರು-೧೯೭೬.

೧೫. ಕೆ.ಎಲ್.ಇ. ಸಂಸ್ಥೆಯ ಬಿ. ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯ, ಬೆಳಗಾವಿ-೧೯೫೩.

ಆರೋಗ್ಯ ಶುಶ್ರೂಷಾ ಸಂಸ್ಥೆಗಳು

೧೬. ಕೆ.ಎಲ್.ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ-೧೯೮೬.

೧೭. ಕೆ.ಎಲ್.ಇ. ಸಂಸ್ಥೆಯ ವಿಶ್ವನಾಥ ಕತ್ತಿ ದಂತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ-೧೯೮೫.

೧೮. ಕೆ.ಎಲ್.ಇ. ಸಂಸ್ಥೆಯ ದಂತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು-೧೯೯೨.

೧೯. ಕೆ.ಎಲ್.ಇ. ಸಂಸ್ಥೆಯ ತುರ್ತುಚಿಕಿತ್ಸಾ ನಿಗಾ ಘಟಕ, ಹುಬ್ಬಳ್ಳಿ-೨೦೦೨.

೨೦. ಕೆ.ಎಲ್.ಇ. ಸಂಸ್ಥೆಯ ಹಾರ್ಟ್ ಫೌಂಡೆಶನ್, ಬೆಳಗಾವಿ-೨೦೦೨.

೨೧. ಕೆ.ಎಲ್.ಇ. ಸಂಸ್ಥೆಯ ತುರ್ತು ಚಿಕಿತ್ಸಾ ನಿಗಾ ಘಟಕ ಹಾಗೂ ಆಸ್ಪತ್ರೆ, ಗೋಕಾಕ-೨೦೦೩.

೨೨. ಕೆ.ಎಲ್.ಇ. ಸಂಸ್ಥೆಯ ಕಿಡ್ನಿ ಫೌಂಡೆಶನ್, ಬೆಳಗಾವಿ-೨೦೦೩.

೨೩. ಕೆ.ಎಲ್.ಇ. ಸಂಸ್ಥೆಯ ಕಾರ್ಡಿಯಾಕ ಕೇರ್ ಸಂಸ್ಥೆ, ಹುಬ್ಬಳ್ಳಿ-೨೦೦೩.

೨೪. ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಆಸ್ಪತ್ರೆ, ಅಥಣಿ-೨೦೦೭.

೨೫. ಕೆ.ಎಲ್.ಇ. ಸಂಸ್ಥೆಯ ಬಸವೇಶ್ವರ ಆಸ್ಪತ್ರೆ, ಜಮಖಂಡಿ-೨೦೦೭.

೨೬. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಮತ್ತು ತುರ್ತು ಚಿಕಿತ್ಸಾ ನಿಗಾ ಘಟಕ, ಗಡಿ ಹಿಂಗ್ಲಜ-೨೦೦೮.

೨೭. ಕೆ.ಎಲ್.ಇ. ಸಂಸ್ಥೆಯ ಹೃದಯ ಶಸ್ತ್ರ ಚಿಕಿತ್ಸಾ ಘಟಕ, ಹುಬ್ಬಳ್ಳಿ-೨೦೦೮.[೪೦]

ಇವುಗಳು ಕೋರೆಯವರ ಪ್ರಯತ್ನದ ಫಲವಾಗಿ ಕೆ.ಎಲ್.ಇ. ಸಂಸ್ಥೆಯಲ್ಲಿ ಸ್ಥಾಪಿಸಿದ ಹೊಸ ಆರೋಗ್ಯ ವಿಜ್ಞಾನ ಸಂಸ್ಥೆಗಳು ಹಾಗೂ ಆರೋಗ್ಯ ಆರೈಕೆ ಕೇಂದ್ರಗಳಾಗಿವೆ. ಇನ್ನು ಕೋರೆಯವರ ನೇತೃತ್ವದಲ್ಲಿ ಮೊದಲು ಸ್ಥಾಪಿಸಿದ ಆರೋಗ್ಯ ಕೇಂದ್ರಗಳಿಗೆ ಹೊಸ ದಿಕ್ಕನ್ನು ತೋರಿಸಿ, ಆಧುನಿಕ ಸೌಲಭ್ಯಗಳನ್ನು ಒದಗಿಸಿ, ಆಧುನೀಕರಣಗೊಂಡಿವೆ. ಕೋರೆಯವರ ಸ್ಪರ್ಶದಿಂದ ಅಭಿವೃದ್ಧಿಗೊಂಡು, ವಿಶ್ವವಿದ್ಯಾಲಯ ಸ್ಥಾನಮಾನ ಪಡೆದ ಹಾಗೂ ಉತ್ತಮ ಸಂಸ್ಥೆಗಳು ಎಂಬ ಹೆಸರು ಗಳಿಸಿದ ಆರೋಗ್ಯ ಸಂಸ್ಥೆಗಳು ಹೀಗಿವೆ -

೧. ಕೆ.ಎಲ್.ಇ. ವಿಶ್ವವಿದ್ಯಾಲಯ, ಬೆಳಗಾವಿ.

೨. ಕೆ.ಎಲ್.ಇ. ಸಂಸ್ಥೆಯ ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾವಿ-೧೯೬೩.

೩. ಕೆ.ಎಲ್.ಇ. ವಿಶ್ವನಾಥ ಕತ್ತಿ ದಂತ ಮಹಾವಿದ್ಯಾಲಯ, ಬೆಳಗಾವಿ-೧೯೮೫

ಈ ಸಂಸ್ಥೆಗಳ ಅಡಿಯಲ್ಲಿ ಕೋರೆಯವರು ಸಂಗೀತ ಶಾಲೆಯನ್ನು ಸ್ಥಾಪಿಸಿ, ಆ ಎಲ್ಲ ವಿದ್ಯಾರ್ಥಿಗಳ ಆಸೆಯನ್ನು ಪೂರೈಸಿದ್ದಾರೆ.

೪. ಕೆ.ಎಲ್.ಇ. ಸಂಸ್ಥೆಯ ಸಂಗೀತ ಶಾಲೆ, ಬೆಳಗಾವಿ-೨೦೦೮.

ಇನ್ನು ಕೆ.ಎಲ್.ಇ. ಸಂಸ್ಥೆಯ ಆರೈಕೆಯ ಸಂಸ್ಥೆಗಳಿಗೆ ಕೋರೆಯವರು ಆಧುನಿಕ ಸ್ಪರ್ಶ ನೀಡಿ ಉತ್ತಮ ಸಂಸ್ಥೆಗಳು ಎಂದು ಗುರುತಿಸುವಂತೆ, ಆರೈಕೆಯ ಸಂಸ್ಥೆಗಳು

೧. ಕೆ.ಎಲ್.ಇ. ಸಂಸ್ಥೆಯ ಡಾ. ಕಮಲ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಅಂಕೋಲಾ-೧೯೭೯.

೨. ಕೆ.ಎಲ್.ಇ. ಶ್ರೀ ಬಿ.ಎಂ. ಕಂಕಣವಾಡಿ ಆಯುರ್ವೇದ ಆಸ್ಪತ್ರೆ ಮತ್ತು ಸಂಸೋಧನಾ ಕೇಂದ್ರ, ಶಹಾಪೂರ, ಬೆಳಗಾವಿ-೧೯೩೮.

೩. ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಫಾರ್ಮಸಿ ಕಾಲೇಜು, ಬೆಳಗಾವಿ-೧೯೩೮[೪೧]

ಹೀಗೆ ತಮ್ಮ ೨೫ ವರ್ಷಗಳ ಸೇವೆಯಲ್ಲಿ ೨೪ ಉತ್ತಮ ಮಟ್ಟದ ಆರೋಗ್ಯ ವಿಜ್ಞಾನ ಸಂಸ್ಥೆಗಳನ್ನು, ಹಾಗೆಯೇ ಆರೋಗ್ಯ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿ. ಈ ಮೊದಲು ಇದ್ದ ಹತ್ತು ಆರೋಗ್ಯ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸುವುದರ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಹೊಸ ಇತಿಹಾಸ ಸ್ಥಾಪಿಸಿದ ಕೀರ್ತಿ ಕೋರೆಯವರದಾಗಿದೆ. ಆ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಭಾಗ್ಯ ದೊರಕುವಂತೆ ಮಾಡುವುದರ ಜತೆಗೆ ಲಕ್ಷಾಂತರ ರೋಗಿಗಳಿಗೆ ಆರೋಗ್ಯ ಸುಧಾರಣೆ ಕಲ್ಪಿಸಿದ ಭಾಗ್ಯ ಶ್ರೀ ಡಾ. ಪ್ರಭಾಕರ ಕೋರೆಯವರದ್ದಾಗಿದೆ. ಕೆ.ಎಲ್.ಇ. ಸಂಸ್ಥೆಗೆ

ಹೊಸ ಆಯಾಮ ಒದಗಿಸಿದ ಅವರ ಸಾಧನೆ ಅಭೂತಪೂರ್ವವಾಗಿದೆ.

ಕೆ.ಎಲ್.ಇ. ಸಂಸ್ಥೆಯ ವಸತಿ ನಿಲಯಗಳು ವಸತಿ ನಿಲಯಗಳ ಆಧುನೀಕರಣ :

ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮುಖ್ಯವಾಗಿ ಬೇಕಾಗಿರುವುದು ವಸತಿ ಮತ್ತು ಊಟದ ವ್ಯವಸ್ಥೆ ಅದಕ್ಕಾಗಿ ಬೋರ್ಡಿಂಗ್ ಪ್ರಾರಂಭಿಸಿದರು. ಶ್ರೀ ಕೋರೆಯವರು ಬಡ ವಿದ್ಯಾರ್ಥಿಗಳು ಶಿಕ್ಷಣದ ಅನುಕೂಲಕ್ಕಾಗಿ ಆಧುನಿಕ ಸೌಲಭ್ಯಗಳನ್ನೊಳಗೊಂಡ ವಿನೂತನ ಮಾದರಿಯ ವಸತಿ ನಿಲಯಗಳನ್ನು ಕಟ್ಟಿಸಿದರು. ಚಿಕ್ಕೋಡಿ, ನಿಪ್ಪಾಣಿ, ಗದಗ, ಅಥಣಿ, ಹುಬ್ಬಳ್ಳಿ, ಬೆಂಗಳೂರು, ಹಾವೇರಿ, ಬೆಳಗಾವಿಗಳಲ್ಲಿ ವಸತಿ ನಿಲಯಗಳನ್ನು ನಿರ್ಮಿಸಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲ ಒದಗಿಸಿದ್ದಾರೆ. ಅದರಂತೆ ಶಿಕ್ಷಕ ವರ್ಗಕ್ಕೂ ಅನುಕೂಲವಾಗಲಿ ಎಂದು ಬೆಳಗಾವಿ, ಬೆಂಗಳೂರು, ನಿಪ್ಪಾಣಿ, ಹುಬ್ಬಳ್ಳಿಗಳಲ್ಲಿ ವಸತಿಗೃಹಗಳನ್ನು ಕಟ್ಟಿಸಿದ್ದಾರೆ. ಈ ಮೊದಲು ಕಟ್ಟಿಸಿದ ಅನೇಕ ವಸತಿ ನಿಲಯಗಳು ವಿದ್ಯಾರ್ಥಿನಿಲಯಗಳನ್ನು ಆಧುನೀಕರಣಗೊಳಿಸಿದ ಕೀರ್ತಿ ಕೋರೆಯವರದ್ದಾಗಿದೆ. ಇತರೆ ಸಂಸ್ಥೆಗಳು ವಿದ್ಯಾರ್ಥಿನಿಲಯಗಳನ್ನು ನೋಡಿ ಮೂಗು ಮುರಿಯುತ್ತಿರುವ ವಿದ್ಯಾರ್ಥಿಗಳು ಮತ್ತು ಪಾಲಕರು ಕೆ.ಎಲ್.ಇ. ಸಂಸ್ಥೆಯ ವಸತಿನಿಲಯಗಳಿಗಾಗಿ ವಿದ್ಯಾರ್ಥಿಗಳು ಪರದಾಡುತ್ತಾರೆ. ಏಕೆಂದರೆ ಶೈಕ್ಷಣಿಕ ವಾತಾವರಣ, ಕೊಣೆಗಳ ಸ್ವಚ್ಛತೆ, ಶಾಂತ ವಾತಾವರಣ, ಗ್ರಂಥಾಲಯಗಳು, ಕಂಪ್ಯೂಟರ್ ಸೌಲಭ್ಯ, ವಿಶಾಲ ಕೋಣೆಗಳು, ತಕ್ಕಮಟ್ಟಿಗೆ ಫರ್ನಿಚರ್, ಮನೆಯ ವಾತಾವರಣವನ್ನು ಮೀರಿಸುವ ರುಚಿಕರ ಸ್ವಾದದ ಊಟ, ಅಲ್ಲಿಯೇ ಓದಲು ವಾರಪತ್ರಿಕೆ, ಮ್ಯಾಗಝಿನ್ ಈ ಎಲ್ಲ ಸೌಲಭ್ಯಗಳನ್ನು ನೋಡಿದಾಗ ಎಂಥ ವಿದ್ಯಾರ್ಥಿಗಳೂ, ನಾನು ಈ ಸಂಸ್ಥೆಯಲ್ಲಿ ವಿದ್ಯಾರ್ಜನೆ ಮಾಡಬೇಕು ಎಂಬ ಭಾವನೆ ಬರದೆ ಇರಲಾರದು. ಅಲ್ಲಿ ಸ್ವಚ್ಛತೆಗೆ ಮೊದಲು ಆದ್ಯತೆ. ಕೇವಲ ಸಂಸ್ಥೆಗಳನ್ನು ಸ್ಥಾಪಿಸುವುದು ಮುಖ್ಯವಲ್ಲ, ಅದರ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಎಂಬ ಪರಿಕಲ್ಪನೆಯಲ್ಲಿ ಶ್ರೀ ಕೋರೆಯವರು ಸಂಸ್ಥೆಗಳನ್ನು ಬೆಳೆಸಿದ್ದಾರೆ. ನಿಜಕ್ಕೂ ಶೈಕ್ಷಣಿಕ ಲೋಕದಲ್ಲಿ ಕೆ.ಎಲ್.ಇ. ಸಂಸ್ಥೆಯ ಕ್ಯಾಂಪಸ್ ಅಂದರೆ ಅದೊಂದು ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸಗೆ ಏನೂ ಕಡಿಮೆ ಇಲ್ಲ ಎಂದೆನಿಸುತ್ತದೆ. ಇಂಥ ಒಂದು ಸಂಸ್ಥೆಯು ಶ್ರೀಯುತ ಪ್ರಭಾಕರ ಕೋರೆಯಂಥ ವ್ಯಕ್ತಿಯನ್ನು ಹೊಂದಿದ್ದು ಭಾಗ್ಯವೇ ಸರಿ.[೨೨]

ಮಹಿಳೆಯರ ಶಿಕ್ಷಣಕ್ಕಾಗಿ ಕೋರೆಯವರ ಕೊಡುಗೆ :

ಮಹಿಳೆಯರು, ಪುರುಷರು ಇರ್ವರೂ ಸಮಾನರು, ಅವರಿಗೂ ಪುರುಷರಷ್ಟೆ ಸ್ಥಾನಮಾನ ಸಿಗಬೇಕು ಎಂದು ೧೨ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಲಿಂಗ ಸಮಾನತೆಯ ಜಾರಿ ಮಾಡುವುದರ ಸಲುವಾಗಿ, ಅವರ ವಿಚಾರಧಾರೆಗಳನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪುರುಷರಿಗೆ ಎಷ್ಟು ಪ್ರಾಮುಖ್ಯತೆಯನ್ನು ನೀಡಿದರೋ ಅಷ್ಟೇ ಪ್ರಾಮುಖ್ಯತೆಯನ್ನು ಮಹಿಳೆಯರಿಗೂ ನೀಡಿದ್ದಾರೆ. ಶ್ರೀ ಕೋರೆಯವರು ಮಹಿಳೆಯರ ಸಬಲೀಕರಣಕ್ಕಾಗಿ ಶಿಕ್ಷಣ ಒಂದು ಪ್ರಬಲ ಸಾಧನ ಎಂದು ಅರಿತುಕೊಂಡು. ಮಹಿಳೆಯರಿಗೆ ಪ್ರತ್ಯೇಕವಾಗಿ ಮುಕ್ತವಾಗಿ ಶಿಕ್ಷಣ ಪಡೆಯುವ ವಾತಾವರಣ ನಿರ್ಮಾಣಮಾಡಿಕೊಡಬೇಕು ಎಂಬ ಉದ್ದೇಶದಿಂದ ೧೯೮೫ರಲ್ಲಿ

ಗದಗಿನಲ್ಲಿ ಪ್ರತ್ಯೇಕವಾಗಿ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯವನ್ನು ಶ್ರೀ ಕೋರೆಯವರು ಪ್ರಾರಂಭಿಸಿದರು. ತಮ್ಮ ಸಂಸ್ಥೆಯ ಅಡಿಯಲ್ಲಿ ಮಹಿಳೆಯರಿಗೆ ಶಿಕ್ಷಣ ಒದಗಿಸಿಕೊಡುವ ಒಂದು ಮುಕ್ತ ಅವಕಾಶ ಒದಗಿಸುವತ್ತ ಹೆಜ್ಜೆಯನ್ನಿರಿಸಿದರು. ನಂತರ ೨೦೦೧ರಲ್ಲಿ ಅಂಕೋಲಾದಲ್ಲಿ ಮಹಿಳಾ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಮೂಲಕ ಮಹಿಳೆಯರ ಉನ್ನತಿಗಾಗಿ ತಮ್ಮ ಕಾರ್ಯವನ್ನು ಮುಂದುವರೆಸಿದರು. ಇದಕ್ಕೂ ಮೊದಲು ಅಂಕೋಲಾದಲ್ಲಿ ೧೯೯೯ರಲ್ಲಿ ಮಹಿಳಾ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದ್ದರು. ಇಷ್ಟಕ್ಕೂ ಕೋರೆಯವರ ಮಹಿಳೆಯರ ಬಗ್ಗೆ ಇರುವ ಅನುಕಂಪ ನಿಲ್ಲಲಿಲ್ಲ ಅವರು ಉದ್ಯೋಗಪಡೆದು ಸ್ವತಂತ್ರ ಜೀವನ ನಡೆಸಬೇಕೆಂದು ಆಶಿಸಿದ ಕೋರೆಯವರು, ೧೯೮೨ರಲ್ಲಿ ಬೆಳಗಾವಿಯಲ್ಲಿ ಶುಶ್ರೂಷಾ (ನರ್ಸಿಂಗ್) ಮಹಾವಿದ್ಯಾಲಯ ನಂತರ ಕೆ.ಎಲ್.ಇ. ಸಂಸ್ಥೆಯ ಶುಶ್ರೂಷೆ ವಿಜ್ಞಾನ ಮಹಾವಿದ್ಯಾಲಯಗಳನ್ನು ಹುಬ್ಬಳ್ಳಿ ಮತ್ತು ಅಂಕೋಲಾದಲ್ಲಿ ೨೦೦೩ರಲ್ಲಿ, ಗೋಕಾಕದಲ್ಲಿ ೨೦೦೪ರಲ್ಲಿ ಪ್ರಾರಂಭಿಸಿ, ಗ್ರಾಮೀಣ ಭಾಗದ ಮಹಿಳೆಯರ ಉನ್ನತಿಗೆ ಶ್ರಮಿಸಿದರು.

ಇನ್ನು ಮಹಿಳಾ ವಿದ್ಯಾರ್ಥಿಗಳ ನೆಮ್ಮದಿ ಮತ್ತು ಧೈರ್ಯದಿಂದ ಉದ್ಯೋಗ ಮಾಡಲು ಅನುಕೂಲ ಕಲ್ಪಿಸಬೇಕೆಂದು ಚಿಂತನೆ ನಡೆಸಿದ ಶ್ರೀ ಕೋರೆಯವರು, ಆಗ ಕೆ.ಎಲ್.ಇ. ಸಂಸ್ಥೆ ಕಾರ್ಯ ನಿರತ ಮಹಿಳೆಯರ ವಸತಿ ನಿಲಯ ಗೋಕಾಕ-೧೯೯೬ ಇದೇ ಮಾದರಿಯ ಶಾಲೆಯನ್ನು ಅಂಕೋಲಾದಲ್ಲಿ ೧೯೯೬ರಲ್ಲಿ ಪ್ರಾರಂಭಿಸಿ, ಮಹಿಳೆಯರಿಗೆ ಅನುಕೂಲ ಕಲ್ಪಿಸಿದ ಕೀರ್ತಿಗೆ ಶ್ರೀಕೋರೆಯವರು ಪಾತ್ರರಾಗಿದ್ದಾರೆ. ಇನ್ನು ಗ್ರಾಮೀಣ ಭಾಗದ ಶಿಕ್ಷಣದಿಂದ ವಂಚಿತರಾಗಬಾರದು, ಹಳ್ಳಿಗಳಿಂದ ದಿನಾಲು ನಗರಕ್ಕೆ ಬರಲು ವಾಹನ ತೊಂದರೆಯಿಂದ ಮಹಿಳೆಯರು ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಮೊಟಕುಗೊಳಿಸುತ್ತಿದ್ದರು. ಗ್ರಾಮೀಣಭಾಗಕ್ಕೆ ಹತ್ತಿರವೇ ತಮ್ಮ ಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ಯು.ಜಿ.ಸಿ. ಅನುದಾನದಿಂದ ಮಹಿಳೆಯರ ವಸತಿನಿಲಯ ನಿರ್ಮಾಣಕ್ಕೆ ಆದ್ಯತೆ ನೀಡಿದರು. ಯು.ಜಿ.ಸಿ. ೧೦ನೇ ಯೋಜನೆಯಲ್ಲಿ ೧೦ ಮಹಿಳೆಯರ ವಸತಿ ನಿಲಯ ನಿರ್ಮಿಸಿದ ಕೀರ್ತಿ ಕೋರೆಯವರದು :

ಅನಂ	ಕಾಮಗಾರಿಗಳು	ಸಂಸ್ಥೆಯ ಹೆಸರು	ವೆಚ್ಚ ಮಾಡಿದ ಹಣ
೧.	ವಿದ್ಯಾರ್ಥಿನಿಯರ ವಸತಿಗೃಹ	ಬಿ. ಕೆ. ಕಾಲೇಜು ಚಿಕ್ಕೋಡಿ	೪೦ ಲಕ್ಷ ರೂ.
೨.	ವಿದ್ಯಾರ್ಥಿನಿಯರ ವಸತಿಗೃಹ	ಜೆ.ಆಯ್.ಬಾಗೇವಾಡಿ ಕಾಲೇಜು, ನಿಪ್ಪಾಣಿ	೪೫ ಲಕ್ಷ ರೂ.
೩.	ವಿದ್ಯಾರ್ಥಿನಿಯರ ವಸತಿಗೃಹ	ಎಸ್.ಎಂ.ಎಸ್. ಕಾಲೇಜು, ಅಥಣಿ	೪೦ ಲಕ್ಷ ರೂ.
೪.	ವಿದ್ಯಾರ್ಥಿನಿಯರ ವಸತಿಗೃಹ	ಲಿಂಗರಾಜ ಕಾಲೇಜು, ಬೆಳಗಾವಿ	೮೫ ಲಕ್ಷ ರೂ.
೫.	ವಿದ್ಯಾರ್ಥಿನಿಯರ ವಸತಿಗೃಹ	ಆರ್. ಎಲ್. ಎಸ್. ಕಾಲೇಜು, ಬೆಳಗಾವಿ	೬೫.೮ ಲಕ್ಷ ರೂ.
೬.	ವಿದ್ಯಾರ್ಥಿನಿಯರ ವಸತಿಗೃಹ	ಪಿ. ಸಿ. ಜಾಬಿನ್ ಸೈನ್ಸ್ ಕಾಲೇಜು, ಹುಬ್ಬಳ್ಳಿ	೬೦ ಲಕ್ಷ ರೂ.
೭.	ವಿದ್ಯಾರ್ಥಿನಿಯರ ವಸತಿಗೃಹ	ಪಿ. ಸಿ. ಜಾಬಿನ್ ಸೈನ್ಸ್ ಕಾಲೇಜು, ಹುಬ್ಬಳ್ಳಿ	೬೦ ಲಕ್ಷ ರೂ.

೮.	ವಿದ್ಯಾರ್ಥಿನಿಯರ ವಸತಿಗೃಹ	ಮಹಿಳಾ ಕಾಲೇಜು, ಗದಗ	೬೦ ಲಕ್ಷ ರೂ.
೯.	ವಿದ್ಯಾರ್ಥಿನಿಯರ ವಸತಿಗೃಹ	ಜೆ. ಎಚ್. ಕಾಲೇಜು, ಹಾವೇರಿ	೬೦ ಲಕ್ಷ ರೂ.
೧೦.	ವಿದ್ಯಾರ್ಥಿನಿಯರ ವಸತಿಗೃಹ	ಜೆ. ಜೆ. ಕಾಮರ್ಸ್ ಕಾಲೇಜು, ಹುಬ್ಬಳ್ಳಿ	೬೦–೮೦.೪೩ ಲಕ್ಷ ರೂ.[೪೩]

ಹೀಗೆ ೧೦ ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ನಿರ್ಮಿಸುವುದರ ಮೂಲಕ ಮಹಿಳೆಯರ ಶಿಕ್ಷಣಕ್ಕಾಗಿ ಇವರು ಮಾಡುತ್ತಿರುವ ಸೇವೆ ಇತರರಿಗೆ ಮಾದರಿಯಾಗಿದೆ. ಇಲ್ಲಿ ಪುರುಷ ಮತ್ತು ಸ್ತ್ರೀಯರಿಗೆ ಸಮಾನ ಪ್ರಾತಿನಿಧ್ಯ ತರುವಲ್ಲಿ ಶ್ರೀ ಕೋರೆಯವರು ಯಶಸ್ವಿಯಾಗಿದ್ದಾರೆ. ಕೋರೆಯವರು ಮಹಿಳೆಯರ ಉದ್ಧಾರಕ್ಕಾಗಿ ಭಾಷಣ ಮಾಡದೆ ನಿಜವಾದ ಕಾರ್ಯ ಮಾಡಿ ತೋರಿಸಿದ್ದಾರೆ. ಮಹಿಳೆಯರು ಸಬಲರಾಗಬೇಕೆಂದು ೧೯೯೫ರಲ್ಲಿ ಶ್ರೀ ರಾಣಿ ಚೆನ್ನಮ್ಮ ಮಹಿಳಾ ಬ್ಯಾಂಕ್ ಸ್ಥಾಪನೆಗೆ ಶ್ರಮಿಸಿದ ಕೋರೆಯವರು, ಮಹಿಳೆಯರ ಅಭಿವೃದ್ಧಿಗಾಗಿ ದುಡಿಯುತ್ತಿರುವ ಕೆಲವೇ ರಾಜಕೀಯ ನಾಯಕರಲ್ಲಿ ಇವರೂ ಒಬ್ಬರು. ಹೀಗೆ ತಮ್ಮ ಸಂಸ್ಥೆಯಲ್ಲಿ ಮಹಿಳೆಯರ ಅನುಕೂಲಕ್ಕಾಗಿ ಮಹಿಳೆಯರ ವಸತಿ ನಿಲಯಗಳನ್ನು ಸ್ಥಾಪಿಸುವುದರ ಮೂಲಕ ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಕೆ.ಎಲ್.ಇ. ಸಂಸ್ಥೆಯಲ್ಲಿ ಸ್ಥಾಪಿಸಿರುವ ಇತರ ಸಂಸ್ಥೆಗಳು :

ಡಾ. ಪ್ರಭಾಕರ ಕೋರೆಯವರ ನೇತೃತ್ವದಲ್ಲಿ ಸ್ಥಾಪನೆಯಾಗಿರುವ ಇತರೆ ಕೆ.ಎಲ್.ಇ. ಸಂಸ್ಥೆಯ ಹೊಸ ಸಂಸ್ಥೆಯ ಹಾಗೂ ಅಭಿವೃದ್ಧಿ ಪಡಿಸಿದ ಹಳೆಯ ಸಂಸ್ಥೆಗಳ ವಿವರ ಹೀಗಿದೆ–

೧. ಕೆ.ಎಲ್.ಇ. ಸಂಸ್ಥೆಯ ವಸತಿ ನಿಲಯಗಳು, ಲಿಂಗರಾಜ ಕಾಲೇಜು, ಬೆಳಗಾವಿ–೧೯೨೫

೨. ಕೆ.ಎಲ್.ಇ. ಸಂಸ್ಥೆಯ ತೋಂಟದಾರ್ಯ ಮುದ್ರಣಾಲಯ, ಹುಬ್ಬಳ್ಳಿ–೧೯೨೫.

ಇವುಗಳಿಗೆ ಕೋರೆಯವರು ಆಧುನಿಕ ಸೌಕರ್ಯಗಳನ್ನು ಕಲ್ಪಿಸುವುದರ ಮೂಲಕ ಹೊಸ ಮಾದರಿಯ ವಿನೂತನ ಸಂಸ್ಥೆಗಳನ್ನಾಗಿ ಪರಿವರ್ತಿಸಿದ ಕೀರ್ತಿ ಅವರದಾಗಿದೆ.

೩. ಕೆ.ಎಲ್.ಇ. ಸಂಸ್ಥೆಯ ಎಲ್. ಕೆ. ಖೋತ ಜಿಮ್‌ಖಾನಾ ಹಾಲ್, ಅಥಣಿ–೧೯೮೯.

೪. ಕೆ.ಎಲ್.ಇ. ಸಂಸ್ಥೆಯ ವಸತಿ ನಿಲಯ, ಬೆಂಗಳೂರು – ೧೯೯೬.

೫. ಕೆ.ಎಲ್.ಇ. ಸಂಸ್ಥೆಯ ಕಾರ್ಯನಿರತ ಮಹಿಳೆಯರ ವಸತಿನಿಲಯ, ಗೋಕಾಕ–೧೯೯೬.

೬. ಕೆ.ಎಲ್.ಇ. ಸಂಸ್ಥೆಯ ಕಾರ್ಯನಿರತ ಮಹಿಳೆಯರ ವಸತಿನಿಲಯ, ಅಂಕೋಲಾ–೧೯೯೬

೭. ಕೆ.ಎಲ್.ಇ. ಸಂಸ್ಥೆಯ ಧರ್ಮಶಾಲೆ, ಕೆ.ಎಲ್.ಇ. ಸಂಸ್ಥೆ ಆವರಣ, ಬೆಳಗಾವಿ–೨೦೦೩.

೮. ಕೆ.ಎಲ್.ಇ. ಸಂಸ್ಥೆಯ ಕುಟುಂಬ ಸಲಹಾ ಕೇಂದ್ರ, ಅಂಕೋಲಾ–೧೯೮೪[೪೪]

೯. ಕೆ.ಎಲ್.ಇ. ಸಂಸ್ಥೆಯು ಹಾಗೂ ೧೦ ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಯು.ಜಿ.ಸಿ. ೧೦ನೇ ಯೋಜನೆಯಡಿಯಲ್ಲಿ ಪ್ರಾರಂಭಿಸಿದ್ದು.

೧೦. ಕೆ.ಎಲ್.ಇ. ಸಂಸ್ಥೆಯ ಹುಬ್ಬಳ್ಳಿ ಕೆ.ಎಲ್.ಇ. ಸಂಸ್ಥೆಯ ದೇಶಪಾಂಡೆ ಸಾಮಾಜಿಕ ಸಮ್ಮಿಶ್ರ ವೃತ್ತಿಪರ ನಿರ್ವಹಣಾ ಕೇಂದ್ರ, ಹುಬ್ಬಳ್ಳಿ-೨೦೦೯.

ಇದನ್ನು ಐದು ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದು ಉತ್ತರ ಕರ್ನಾಟಕದಲ್ಲಿ ಸಾಮಾಜಿಕ ಅಭಿವೃದ್ಧಿಗೆ ಚಾಲನೆ ನೀಡಿರುವುದು. ಸಮರ್ಥ ಹಾಗೂ ಕ್ರಿಯಾಶೀಲ ವ್ಯಕ್ತಿಗಳಿಗೆ ಸಹಾಯ, ಸಲಹೆ ನೀಡುವ ಮೂಲಕ ಈ ಭಾಗದ ಜನರಿಗೆ ಸಾಮಾಜಿಕ ಬದಲಾವಣೆ ತರುವ ಉದ್ದೇಶ ಇಟ್ಟುಕೊಂಡು ಶ್ರೀ ಕೋರೆಯವರ ಪ್ರಯತ್ನ ಚಿಂತನೆಯ ಫಲವಾಗಿ ಅಮೇರಿಕಾದಲ್ಲಿರುವ ಶ್ರೀ ದೇಶಪಾಂಡೆ ದಂಪತಿಗಳ ಸಹಾಯಧನದಿಂದ ಈ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ.[೬೫] ಇದರಿಂದ ವ್ಯಕ್ತವಾಗುವ ಅಂಶವೇನೆಂದರೆ, ಕೋರೆಯವರು ಕೇವಲ ಶಿಕ್ಷಣ ಕ್ಷೇತ್ರ, ಆರೋಗ್ಯ ಕ್ಷೇತ್ರಗಳ ಜತೆಗೆ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೂ ಒಂದು ಸಂಸ್ಥೆಯನ್ನು ಸ್ಥಾಪಿಸಿರುವರು. ಹಾಗೆ ಶಾಲಾ ಕಾಲೇಜುಗಳಿಗೆ ಪೂರಕವಾಗಿ ವಸತಿನಿಲಯಗಳನ್ನು, ಬಡಜನತೆಗಾಗಿ ಧರ್ಮಶಾಲೆ, ವಿದ್ಯಾರ್ಥಿಗಳಿಗಾಗಿ ಜಿಮ್‌ಖಾನಾ ಹಾಲ್ ಹೀಗೆ ಶಿಕ್ಷಣಕ್ಕೆ ಪೂರಕವಾದ ಎಲ್ಲ ಸೌಲಭ್ಯಗಳನ್ನು ಒದಗಿಸುವ ಪೂರಕ ಸಂಸ್ಥೆಗಳನ್ನು ತೆರೆಯುವ ಮೂಲಕ ಸಮಗ್ರ ಶೈಕ್ಷಣಿಕ ವಲಯದ ಒಂದು ಬೃಹತ್ ಸಂಸ್ಥೆಯಾಗಿ ಬೆಳಗಿಸಿದ ರೀತಿ ಮಾತ್ರ ಸಾಧ್ಯವಾ ಎನ್ನುವ ಪ್ರಶ್ನೆ ಮೂಡುವುದು ಸಹಜ. ಆದರೆ ಅಷ್ಟೇ ನಿಜ ಎನ್ನುವುದಕ್ಕಾಗಿಯೇ ಕೆ.ಎಲ್.ಇ. ಸಂಸ್ಥೆಗೆ ಜಾಗತಿಕ ಮನ್ನಣೆ ಸಿಕ್ಕಿದೆ.

ಇಂತಹ ಸಂಸ್ಥೆಯನ್ನು ಸ್ಥಾಪಿಸಿದ ಸಪ್ತರ್ಷಿಗಳು ಕೂಡಾ ಕಲ್ಪಿಸದೆ ಇರುವ ರೀತಿಯಲ್ಲಿ ಸಂಸ್ಥೆಯನ್ನು ಬೆಳೆಸಿದ ಕೀರ್ತಿ ಕೋರೆಯವರಂತಹ ದೈತ್ಯ ಶಕ್ತಿಯಿಂದ ಮಾತ್ರ ಸಾಧ್ಯ. ಅಂತಹ ವರಪುತ್ರ ಕೆ.ಎಲ್.ಇ. ಸಂಸ್ಥೆಗೆ ಸಿಕ್ಕಿರುವುದು ಸಂಸ್ಥೆಯ ಪುಣ್ಯ.

ಲಿಂಗಾಯತರು ಕನ್ನಡಿಗರಿಗೆ, ಕನ್ನಡಿಗರು ಭಾರತೀಯರಿಗೆ, ಭಾರತೀಯರು ವಿಶ್ವಕ್ಕೆ ನೀಡಿದ ಶ್ರೇಷ್ಠ ಶಿಕ್ಷಣ ತಜ್ಞ ಡಾ. ಪ್ರಭಾಕರ ಕೋರೆಯವರು. ಸುಮಾರು ೧೭೩ಕ್ಕೂ ಹೆಚ್ಚು ಶಾಲಾ ಕಾಲೇಜುಗಳನ್ನು ಕೇವಲ ೨೫ ವರ್ಷಗಳಲ್ಲಿ ಸ್ಥಾಪಿಸಿದ್ದು ಪವಾಡವೇ ಸರಿ. ಇದು ಕೋರೆಯವರನ್ನು ಬಿಟ್ಟರೆ ಇನ್ನೊಬ್ಬರಿಗೆ ಸಾಧಿಸುವುದು ಕಷ್ಟಸಾಧ್ಯ ಎನ್ನುವ ಮಟ್ಟಕ್ಕೆ ಕೆ.ಎಲ್.ಇ. ಸಂಸ್ಥೆ ಬೆಳೆದ ರೀತಿ ಮಾತ್ರ ಶೈಕ್ಷಣಿಕ ಲೋಕದ ಅಚ್ಚರಿ!

ಸಂಸ್ಥೆಗೆ ಮೂಲ ಹೆಸರನ್ನು ಮರು ನಾಮಕರಣಗೊಳಿಸಿ, ಸಂಸ್ಥಾಪಕರ ಹೆಸರುಗಳನ್ನು ಕೆ.ಎಲ್.ಇ. ಸಂಸ್ಥೆಯ ಅಂಗ ಸಂಸ್ಥೆಗಳಿಗೆ ಇಡುವ ಮೂಲಕ ಸ್ಮರಿಸಿದ ಸಾಧನೆ ಕೋರೆಯವರದು :

ಒಂದು ಸಂಸ್ಥೆಗೆ ಒಳ್ಳೆಯ ಹೆಸರನ್ನು ಆಯ್ಕೆ ಮಾಡುವುದು ಉತ್ತಮ. ಆ ಹೆಸರಿನಲ್ಲಿ ದೇಶ, ಕಾಲದ ಸಂಸ್ಕೃತಿಯು ಪ್ರತಿಬಿಂಬಿತವಾಗುತ್ತದೆ. ಸಮಾಜ ವಸ್ತುಗಳಿಗಿಂತಲೂ ಹೆಸರುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇರುವುದನ್ನು ಜೀವನದ ಅನುಭವದಿಂದ ಕೊಂಡುಕೊಳ್ಳಬಹುದಾಗಿದೆ. ಮಾನವ ಇತಿಹಾಸದ ಪರಂಪರೆಗೆ, ಕಾರ್ಯಕಲಾಪಗಳಿಗೆ ಹೆಸರುಗಳು ಮಧ್ಯ ಬಂದು ನಿಂತಿರುತ್ತವೆ. ಹೆಸರು ಕೇವಲ ಸಂಜ್ಞೆಯಾಗಿರದೆ ಅದು ಸಾರ್ಥಕವೂ ಆಗಿರುತ್ತದೆ.

ಶಬ್ದಾರ್ಥಗಳು ಜಲ ತರಂಗಗಳು ಒಂದನ್ನೊಂದು ಆಕ್ರಮಿಸಿದಂತೆ, ನಾಡು-ನುಡಿ, ಸಂಘ-ಸಂಸ್ಥೆಗಳ ಜಡ ಚೇತನಗಳು ಹೆಸರಿನೊಂದಿಗೆ ವಿಭಿನ್ನ ಸಂಬಂಧ ಹೊಂದಿರುತ್ತವೆ.

ಆ ನಿಟ್ಟಿನಲ್ಲಿ ಕೆ.ಎಲ್.ಇ. ಸಂಸ್ಥೆಯ ಹೆಸರು ವೈಶಿಷ್ಟ್ಯವನ್ನು ಪಡೆದಿದೆ. "ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ" ಎಂಬ ನಾಮದೊಂದಿಗೆ ೧೯೧೬ರಲ್ಲಿ ಪ್ರಾರಂಭಿಸಲಾಯಿತು. ಆದರೆ ೧೯೪೭ರಲ್ಲಿ ದೇಶದಲ್ಲಿ ಜಾತ್ಯಾತೀತ ವ್ಯವಸ್ಥೆಯ ಕೂಗು ಕೇಳಿಬರುತ್ತಿದ್ದಂತೆ, ನಾಮದಲ್ಲಿ ಅಡಕವಾಗಿರುವ 'ಲಿಂಗಾಯತ' ಎಂಬ ಪದ ಒಂದು ಜನಾಂಗವನ್ನು ಪ್ರತಿನಿಧಿಸುವ ಸಂಕುಚಿತ ಭಾವನೆಯನ್ನು ತರಬಹುದು ಎಂಬ ಕಾರಣಕ್ಕಾಗಿ, ವಿಶಾಲವಾದ ತಳಹದಿಯ ಚಿಂತನೆ ನಡೆಸಿ, ೧೯೪೯ ಜುಲೈ ೧ ರಂದು 'ಕರ್ನಾಟಕ ಲಿಬರಲ್ ಎಜ್ಯುಕೇಶನ್ ಸೊಸೈಟಿ' ಎಂದು ಪುನರ್ ನಾಮಕರಣಮಾಡಲಾಯಿತು.[೪೬]

ನಂತರ ೧೯೭೨ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ವೀರಶೈವ ೨೧ನೇ ಮಹಾ ಅಧಿವೇಶನದಲ್ಲಿ ಪ್ರಸ್ತಾವನೆಯಾದಂತೆ ಮೂಲ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ ಹೆಸರನ್ನು ಮರುನಾಮಕರಣ ಮಾಡಬೇಕು ಎಂಬುದನ್ನು ಗಮನಿಸಿದ ಡಾ. ಕೋರೆಯವರು, ಕರ್ನಾಟಕದಲ್ಲಿ ಲಿಂಗಾಯತ ಸಮಾಜವು ಬಹುದೊಡ್ಡ ಸ್ವತಂತ್ರ ಸಮಾಜ. ಈ ಸಮಾಜ ಭಾರತದಲ್ಲಿ ಒಂದು ಅಲ್ಪಸಂಖ್ಯಾತ ಸಮಾಜವಾಗಿರುವುದರಿಂದ, ಸರ್ಕಾರದ ಸೌಲಭ್ಯಗಳು ಇತರ ಅಲ್ಪಸಂಖ್ಯಾತರಿಗೆ ಸಿಗುವಂತೆ ಈ ಸಮಾಜಕ್ಕೂ ಸಿಗಬೇಕು ಮತ್ತು ಲಿಂಗಾಯತರ ಸ್ವಾಭಿಮಾನದ ಸಂಕೇತವಾಗಿ ಈ ಸಂಸ್ಥೆಯನ್ನು ಬೆಳೆಸಬೇಕು ಎನ್ನುವ ಮಹತ್ವಾಕಾಂಕ್ಷೆಯಿಂದ ೧೯೮೫ರಲ್ಲಿ ಸಂಸ್ಥೆಯ ಮೂಲ ಹೆಸರಾದ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ ಎಂಬುದನ್ನು ಮರುನಾಮಕರಣ ಮಾಡುವುದರ ಮೂಲಕ, ಲಿಂಗಾಯತ ಸಮಾಜದ ಒಂದು ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಪರಿವರ್ತಿಸಿದರು.[೪೭]

ಸಂಸ್ಥೆಗೆ ಸಂಸ್ಥಾಪಕರ ಹೆಸರನ್ನಿಟ್ಟ ಕರ್ತೃ ಡಾ. ಕೋರೆಯವರು :

ಡಾ. ಕೋರೆಯವರು ತಮ್ಮ ಜೀವನದ ಸುಖ, ನೆಮ್ಮದಿಯನ್ನು ಬದಿಗಿರಿಸಿ, ಕೆ.ಎಲ್.ಇ. ಸಂಸ್ಥೆಯ ಅನೇಕ ತೊಂದರೆಗಳನ್ನು ಬಗೆಹರಿಸುತ್ತಾ ಮುನ್ನಡೆಸಿದ್ದಾರೆ. ಸಂಸ್ಥೆಯನ್ನು ಸ್ಥಾಪಿಸುವ ಸಲುವಾಗಿ ಶ್ರಮಿಸಿದ ಪುಣ್ಯಪುರುಷರ ಸ್ಮರಣಾರ್ಥವಾಗಿ ೭ ಅಂಗ ಸಂಸ್ಥೆಗಳಿಗೆ ೧೯೯೧ರಲ್ಲಿ ಸಂಸ್ಥಾಪಕ ಸದಸ್ಯರಾದ ಜನಸಾಮಾನ್ಯರಿಂದ ಸಪ್ತರ್ಷಿಗಳೆಂದು ಮನ್ನಣೆ ಪಡೆದ ಆ ಮಹನೀಯರ ಹೆಸರನ್ನು ನಾಮಕರಣ ಮಾಡಿದ್ದಾರೆ. ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪನವರು ಕರ್ನಾಟಕ ರಾಜ್ಯಕ್ಕೆ ಹಾಗೂ ಲಿಂಗಾಯತ ಸಮಾಜಕ್ಕೆ, ಶಿಕ್ಷಣ ಸಂಸ್ಥೆಗಳಿಗೆ, ಅದರಲ್ಲೂ ಕೆ.ಎಲ್.ಇ. ಸಂಸ್ಥೆಗೆ ಮಾಡಿದ ಸಹಾಯ ಸೌಲಭ್ಯ ಒದಗಿಸಿದ್ದಕ್ಕಾಗಿ, ಅವರ ಸೇವೆಯ ಗೌರವಾರ್ಥವಾಗಿ ಬೆಂಗಳೂರಿನಲ್ಲಿರುವ ಕೆ.ಎಲ್.ಇ. ಸಂಸ್ಥೆಯ ಕಾಲೇಜಿಗೆ ೧೯೯೭ರಲ್ಲಿ ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪ ಕಾಲೇಜು ಎಂದು ನಾಮಕರಣ ಮಾಡಲಾಯಿತು.[೪೮] ಇದರಿಂದ ಸಂಸ್ಥೆಯಲ್ಲಿ ಹೊಸ ಇತಿಹಾಸ ಬರೆದ ಗೌರವ ಕೋರೆಯವರದಾಗಿತ್ತು. ಸಮಾಜಕ್ಕೆ ಸೇವೆ ಸಲ್ಲಿಸಿದ ಮಹನೀಯರನ್ನು ಗೌರವಿಸುವ ಅವರ ಆದರ್ಶವಿದೆ.

ಕೆ.ಎಲ್.ಇ. ಸಂಸ್ಥೆಗೆ ಸಾಂಸ್ಕೃತಿಕ ಮುಖ ನೀಡಿದ ಡಾ. ಕೋರೆಯವರು :

ಉತ್ತರ ಕರ್ನಾಟಕದ ಇತಿಹಾಸ ಬದಲಿಸಿದ ಈ ಸಂಸ್ಥೆಯ ಇತಿಹಾಸವನ್ನು ೨೦೦೨ರ ವರೆಗೂ ಬರೆದು ಪ್ರಕಟಿಸುವುದಾಗಿರಲಿಲ್ಲ. ಈ ಕುರಿತು ಚಿಂತನೆ ನಡೆಸಿದ ಕೋರೆಯವರು ಶ್ರೀ ಬಿ. ಎಸ್. ಗವಿಮಠ ಹಾಗೂ ಪ್ರೊ. ಎ. ಆರ್. ಪಾಟೀಲರ ಸಂಪಾದಕತ್ವದಲ್ಲಿ 'ಕೆ.ಎಲ್.ಇ. ಸೊಸೈಟಿ, ಸಂಪುಟ-೧'ನ್ನು ೨೦೦೨ರಲ್ಲಿ ಬರೆಯಿಸಿ, ಸಮಾಜಕ್ಕೆ ತಿಳಿಯಪಡಿಸಿದ ಕೀರ್ತಿಗೆ ಪಾತ್ರರಾದರು. ಕಳೆದ ೭೫ ವರ್ಷಗಳಿಂದ ಪ್ರಕಟಣೆ ಕಾಣದೆ ಧೂಳು ತಿನ್ನುತ್ತಿದ್ದ ವೀರಶೈವ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ ರಾವಬಹದ್ದೂರ ಅರಟಾಳ ರುದ್ರಗೌಡರ ಚರಿತ್ರೆಯನ್ನು ಡಾ. ಎಂ.ಎಂ. ಕಲಬುರ್ಗಿಯವರಿಂದ ಪರಿಷ್ಕರಿಸಿ, ಕೆ.ಎಲ್.ಇ. ಸಂಸ್ಥೆಯ ಪ್ರಸಾರಂಗದಿಂದ ಪ್ರಕಟಿಸಿದರು. ೧೯೯೮ರಿಂದ ನಿಯಮಿತವಾಗಿ ಕೆ.ಎಲ್.ಇ. ವಾರ್ತಾ ಪತ್ರಿಕೆ (ತ್ರೈಮಾಸಿಕ) ಪ್ರಕಟಗೊಳ್ಳುವಂತೆ ಮಾಡುವ ಮೂಲಕ ಸಂಸ್ಥೆಯ ಕಾರ್ಯಚಟುವಟಿಕೆ ಸಾಧನೆಗಳಿಗೆ ಮುಖವಾಣಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಿದ ಹಿರಿಮೆ ಶ್ರೀ ಕೋರೆಯವರದು. ನಂತರ ಸಂಸ್ಥಾಪಕ ಸದಸ್ಯರುಗಳ ಸ್ಮರಣೆಗಾಗಿ 'ಯುಗ ಪುರುಷರು' ಎಂಬ ಕೃತಿಯನ್ನು ಕೆ.ಎಲ್.ಇ. ಪ್ರಸಾರಾಂಗದಿಂದ ಪ್ರಕಟಗೊಳ್ಳುವಂತೆ ಮಾಡಿದ ಇವರ ಕಾರ್ಯ ಶ್ಲಾಘನೀಯವಾದುದಾಗಿದೆ. ಗ್ರಂಥಗಳನ್ನು ಪ್ರಕಟಿಸುವ ಮೂಲಕ ಆ ಪುಣ್ಯ ಪುರುಷರ ಜೀವನ ಸಾಧನೆಗಳನ್ನು, ಅವರನ್ನು ಸ್ಮರಿಸುವ ಕೆಲಸ ಮಾಡಿದ್ದಾರೆ.[೪೯]

ನಂತರ ೨೦೦೭ರಲ್ಲಿ ಕೆ.ಎಲ್.ಇ. ಸಂಸ್ಥೆಯ ಲಾಂಛನದ ಇತಿಹಾಸವನ್ನು 'ಲಾಂಛನಕೆ ಶರಣೆಂಬೆ' ಗ್ರಂಥವನ್ನು ಡಾ. ವ್ಹಿ. ವ್ಹಿ. ಹೆಬ್ಬಳ್ಳಿ ಇವರಿಂದ ಬರೆಯಿಸಿ, ಕೆ.ಎಲ್.ಇ. ಪ್ರಸಾರಾಂಗದಿಂದ ಪ್ರಕಟಿಸುವ ಮೂಲಕ ಸಂಸ್ಥೆಯ ಹೆಸರು ಮತ್ತು ಲಾಂಛನದ ಇತಿಹಾಸ ಮತ್ತು ಅದರ ಮಹತ್ವವನ್ನು ಜನತೆಗೆ ತಿಳಿಸುವ ಮಹಾಕಾರ್ಯ ಎಸಗಿದ್ದಾರೆ. ಶ್ರೀ ಶಿ. ಶಿ. ಬಸವನಾಳರ ಜೀವನ ಮತ್ತು ಸಾಧನೆ ಕುರಿತು ಡಾ. ಮಹೇಶ ಚಿಂತಾಮಣಿ ರಚಿಸಿದ ಮಹಾಪ್ರಬಂಧವನ್ನು ಸಂಸ್ಥೆಯ ಪ್ರಸಾರಂಗದಿಂದ ಪ್ರಕಟಿಸಿದರು.[೫೦] ಒಟ್ಟಾರೆ ಸಂಸ್ಥೆಯ ಇತಿಹಾಸ, ಸಂಸ್ಥಾಪಕರ ಜೀವನ ಚರಿತ್ರೆ, ಸಂಸ್ಥೆಯ ಹೆಸರು, ಲಾಂಛನ ಪ್ರತಿವರ್ಷ ಸಂಸ್ಥೆಯ ಕಾರ್ಯ ಚಟುವಟಿಕೆಗಳು ಹಾಗೂ ಸಾಧನೆಗಳನ್ನು ತಿಳಿಸುವ ಉದ್ದೇಶದಿಂದ ಗ್ರಂಥಗಳು, ಮಹಾಪ್ರಬಂಧಗಳು ತ್ರೈಮಾಸಿಕ ಪತ್ರಿಕೆಗಳನ್ನು ಪ್ರಾರಂಭಿಸುವ ಮೂಲಕ ಸಂಸ್ಥೆಗೆ ಸಾಂಸ್ಕೃತಿಕ ಮುಖ ನೀಡಿದವರು ಕೋರೆಯವರು. ಇದರಿಂದ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸುಲಭವಾದ ದಾರಿ ಮಾಡಿಕೊಟ್ಟದ್ದಾರೆ. ಸಂಸ್ಥೆಯ ಪ್ರಸಾರಾಂಗ ಪ್ರಾರಂಭಿಸುವ ಮೂಲಕ ಸಂಸ್ಥೆಯ ಸಾಧನೆಗಳನ್ನು ದಾಖಲಿಸುವ ಕಾರ್ಯ ಮಾಡಿ, ಸಂಸ್ಥೆಗೆ ಸಾಂಸ್ಕೃತಿಕ ಆಯಾಮ ಒದಗಿಸಿದ ಕೀರ್ತಿ ಕೋರೆಯವರದ್ದಾಗಿದೆ.

ಕೆ.ಎಲ್.ಇ. ಸಂಸ್ಥಾಪನೆ ದಿನಾಚರಣೆ :

೧೯೯೮ರಿಂದ ಪ್ರತಿವರ್ಷ ನವ್ಹೆಂಬರ್ ೧೩ ರಂದು ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಆಚರಿಸುವ ಪದ್ಧತಿಯನ್ನು ಜಾರಿಗೊಳಿಸಿದ ಶ್ರೇಯಸ್ಸು ಕೋರೆಯವರದ್ದಾಗಿದೆ.[೫೧] ಈ ಮೂಲಕ ಯುವ ವಿದ್ಯಾರ್ಥಿಗಳಿಗೆ ನಾಡಿನ ಸಾಹಿತ್ಯ, ಚರಿತ್ರೆ, ಸಾಂಸ್ಕೃತಿಕ ಜೀವನ ಸಾಧನೆಯ ಜೊತೆಗೆ ಸಂಸ್ಥೆಯ ಸಾಧನೆ, ಧ್ಯೇಯ, ಉದ್ದೇಶಗಳನ್ನು

ಸ್ಮರಿಸುವುದರ ಮೂಲಕ ಎಲ್ಲ ಅಂಗ ಸಂಸ್ಥೆಗಳಲ್ಲಿ ಹಾಗೂ ಕೇಂದ್ರ ಕಚೇರಿಗಳಲ್ಲಿ ಸಂಸ್ಥೆಯ ವಿವಿಧ ಭಾಗಗಳಲ್ಲಿ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಂಗಾರದ ಪದಕ, ಬೆಳ್ಳಿ ಪದಕ ನೆನಪಿನ ಕಾಣಿಕೆ ನೀಡಿ, ಗೌರವಿಸುವ ಹಾಗೂ ಪ್ರೋತ್ಸಾಹಿಸುವ ಕಾರ್ಯ ಪ್ರಾರಂಭಿಸಿದರು. ಇದರಿಂದ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಭಾವನೆ ಬಂದು, ಅವರು ಇನ್ನಷ್ಟು ಸ್ಫೂರ್ತಿಗೊಳ್ಳಲಿ ಎಂಬ ಸದಾಶಯ ಶ್ರೀ ಕೋರೆಯವರಲ್ಲಿತ್ತು. ಆದ್ದರಿಂದಲೇ ಸಂಸ್ಥೆಯ ದಿನಾಚರಣೆ ಆರಂಭಿಸುವ ಮಹತ್ವದ ಕಾರ್ಯ ಮಾಡಿದ ಶ್ರೇಯಸ್ಸು ಅವರದಾಗಿದೆ. ಇದೇ ಸಂದರ್ಭದಲ್ಲಿ ಸಂಸ್ಥೆಯ ಅಂಗ ಸಂಸ್ಥೆಗಳಲ್ಲಿ ವಿಶೇಷವಾದ ಸಾಧನೆಗೈದ ಪ್ರಾಧ್ಯಾಪಕರನ್ನು ಗೌರವಿಸಿ, ಸನ್ಮಾನಿಸುವ ಕಾರ್ಯ ನಡೆಯುವಂತೆ ನೋಡಿಕೊಂಡು, ಪ್ರಾಧ್ಯಾಪಕರಲ್ಲಿ ಮತ್ತಷ್ಟು ಹುರುಪು, ಹುಮ್ಮಸ್ಸಿನಿಂದ ಕಾರ್ಯ ಮಾಡಲು ಪ್ರೇರಣೆ ಒದಗಿಸಿದ ಕೀರ್ತಿಯು ಕೋರೆಯವರದ್ದಾಗಿದೆ.

ಶಿಕ್ಷಕರ ಕಣ್ಮಣಿ ಹಾಗೂ ಹಿತಚಿಂತಕರು :

'ಶಿಕ್ಷಕರು ರಾಷ್ಟ್ರದ ಯುವಜನಾಂಗದ ಭವಿಷ್ಯ ನಿರ್ಮಾಪಕರು' ಎಂಬುದನ್ನು ಬಾಲ್ಯದಿಂದಲೇ ಅರಿತ ಕೋರೆಯವರು ಶಿಕ್ಷಕರು, ಪ್ರಾಧ್ಯಾಪಕರು ಹಾಗೂ ಅಂಗ ಸಂಸ್ಥೆಯ ಮುಖ್ಯಸ್ಥರನ್ನೂ ಸದಾ ಆತ್ಮೀಯವಾಗಿ ಕಾಣುವುದರೊಂದಿಗೆ, ಪ್ರೀತಿ, ವಿಶ್ವಾಸವನ್ನು ತೋರಿಸುತ್ತ ಬಂದಿದ್ದಾರೆ. ಎಂಫಿಲ್ ಹಾಗೂ ಪಿಎಚ್.ಡಿ.ಯಂತಹ ಸಂಶೋಧನೆಗೈಯುವ ಪ್ರಾಧ್ಯಾಪಕರನ್ನು ಪ್ರೋತ್ಸಾಹಿಸುವುದರ ಜೊತೆಗೆ ಸಂಶೋಧನೆ ಕೈಗೊಳ್ಳಲು ಪ್ರೇರಣೆ ನೀಡುತ್ತಾರೆ. ಯಾರಲ್ಲಿ ಪ್ರತಿಭೆ ಅಡಗಿದೆಯೆಂದು ಗುರುತಿಸುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಆ ಮೂಲಕ ಕಾರ್ಯಸಾಧನೆಯನ್ನು ಪ್ರೋತ್ಸಾಹಿಸುತ್ತಾರೆ. ದೇಶದ ಯಾವುದೇ ಭಾಗದಲ್ಲಿ ಹಾಗೂ ವಿದೇಶಗಳಲ್ಲಿರುವ ಪರಿಣತರನ್ನು ಗುರುತಿಸಿ, ಕೆ.ಎಲ್.ಇ. ಸಂಸ್ಥೆಗೆ ಆಹ್ವಾನಿಸುತ್ತಾರೆ. ಆ ಮೂಲಕ ಅಭಿವೃದ್ಧಿ ಹೊಂದುವಂತೆ ನೋಡಿಕೊಳ್ಳುತ್ತಾರೆ. ಯಾರ ಕಾರ್ಯದಲ್ಲಿ ವಿನಾಕಾರಣ ಹಸ್ತಕ್ಷೇಪ ಮಾಡುವುದಿಲ್ಲ. ಕೋರೆಯವರು ಒಬ್ಬ ರಾಜಕೀಯ ನಾಯಕರಾಗಿರುವುದರಿಂದ ಜನ ತಮ್ಮ ಕೆಲಸಕ್ಕಾಗಿ ಸದಾ ಅವರ ಮೇಲೆ ಒತ್ತಡ ತರುತ್ತಾರೆ. ಆ ಹಂತದಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡುವ ಮುಖ್ಯಸ್ಥರನ್ನು ಗಮನದಲ್ಲಿ ಇಟ್ಟುಕೊಂಡು, ಆಶ್ವಾಸನೆ ನೀಡುತ್ತಾರೆ. ಒಂದು ಉದಾಹರಣೆ : ತಮ್ಮ ಬಾಲ್ಯದ ಸ್ನೇಹಿತರಾದ ವಿಜಯ ಜಾಧವ್‌ವರ ಎರಡನೇ ಮಗ ಹುಬ್ಬಳ್ಳಿಯ ಇಂಜನಿಯರಿಂಗ್ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದರು. ಅವರಿಗೆ ಬೆಳಗಾವಿಯ ಕೆ.ಎಲ್.ಇ. ಇಂಜನಿಯರಿಂಗ್ ಕಾಲೇಜಿಗೆ ಪರಸ್ಪರ ವರ್ಗಾವಣೆ ಬೇಕಾಗಿತ್ತು. ಹುಬ್ಬಳ್ಳಿ ಕಾಲೇಜಿನ ನಿರೀಕ್ಷಣಾ ಪತ್ರ ಸಿಕ್ಕಿತು. ಆದರೆ ಬೆಳಗಾವಿಯಲ್ಲಿ ಕಾರ್ಯವಾಗದೇ ವಿಳಂಬವಾಗುತ್ತಿರುವುದನ್ನು ಕಂಡು ವಿಜಯ ಜಾಧವ್ ಸಿಟ್ಟಿನಿಂದ ಕೋರೆಯವರ ಹತ್ತಿರ ಬಂದು, ನೀವು ಸಂಸ್ಥೆಯ ಚೇರ್ಮನ್‌ರು ನಿಮ್ಮ ಕಾಲೇಜಿನ ಒಬ್ಬ ಪ್ರಿನ್ಸಿಪಾಲರು ನೀವು ಹೇಳಿದ ಕೂಡಲೇ ಕೆಲಸ ಮಾಡಿಕೊಡಬೇಕು ಅದನ್ನು ಬಿಟ್ಟು ಕಾರಣಗಳನ್ನು ಹೇಳುತ್ತಾ ಹೋದರೆ ಹೇಗೆ ಎಂದು ಪ್ರಶ್ನಿಸಿದರು. ಆಗ ಕೋರೆಯವರು ನೀಡಿದ ಉತ್ತರ ಯಾರಿಗಾದರೂ ಅಚ್ಚರಿ ಮೂಡಿಸುವಂತಹದು.

"ಇಂಜನಿಯರಿಂಗ್ ಕಾಲೇಜನ್ನು ನಡೆಸುವ ಪ್ರಿನ್ಸಿಪಾಲರು ತಮ್ಮ ಆಯುಷ್ಯದುದ್ದಕ್ಕೂ ಅವರ ಕ್ಷೇತ್ರದಲ್ಲಿ

ಅತ್ಯುತ್ತಮ ಅಧ್ಯಯನ ಮಾಡಿ, ಹಲವಾರು ಪದವಿಗಳನ್ನು ಪಡೆದುಕೊಂಡು ಪರಿಣಿತರು ಹಾಗೂ ಶಿಕ್ಷಣ ತಜ್ಞರಾಗಿರುತ್ತಾರೆ. ನಾವು ಚುನಾವಣೆಯಲ್ಲಿ ಆಯ್ಕೆಗೊಂಡ ಪದಾಧಿಕಾರಿಗಳು. ಅವರಂಥ ಪರಿಣತರನ್ನು ಗೌರವದಿಂದ ಕಾಣಬೇಕು. ಅವರಿಗೆ ಅವರದೇ ಆದ ಸ್ಥಾನಮಾನ ಇರುತ್ತದೆ. ನಾವು ಅದಕ್ಕೆ ಚ್ಯುತಿ ತರಬಾರದು ಎಂದು ಹೇಳಿ, ಅವರ ಒಂದು ಸಂಸ್ಥೆಯ ಮುಖ್ಯಸ್ಥರಿಗೆ ಇರಬೇಕಾದ ವ್ಯವಹಾರ ಚತುರತೆ ಸಾಕ್ಷಿಯಾದರು. ಇದು ಕೋರೆಯವರು ಶಿಕ್ಷಕರನ್ನು ಯಾವ ರೀತಿ ಗೌರವದಿಂದ ಕಾಣುತ್ತಾರೆ ಎಂಬುದಕ್ಕೆ ಒಂದು ಉತ್ತಮ ನಿದರ್ಶನವಾಗಿದೆ.[೫೨]

ಸಾಹಿತಿಗಳಾದ ಪ್ರಾ. ಬಿ. ಎಸ್. ಗವಿಮಠ, ಡಾ. ಬಸವರಾಜ ಜಗಜಂಪಿ, ಡಾ. ಗುರುದೇವಿ ಹುಲ್ಲೆಪ್ಪನವರ ಮಠ ಇತರ ಸಾಹಿತಿಗಳನ್ನು ಪ್ರೋತ್ಸಾಹಿಸಿರುವುದು, ಹಾಗೆಯೇ ತಜ್ಞ ವೈದ್ಯರಾದ ಡಾ. ದೀಕ್ಷಿತ, ಡಾ. ಎಂ. ವಿ. ಜಾಲಿಯಲ್ಲದೆ ಡಾ. ಅಶೋಕ ಶೆಟ್ಟರ ಹೀಗೆ ಮುಂತಾದವರನ್ನು ಪ್ರೋತ್ಸಾಹಿಸಿ, ಬೆಳೆಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ. ಇನ್ನು ಅಶಿಸ್ತು, ಅಸಭ್ಯತನ, ಬೇಜವಾಬ್ದಾರಿ ಇರುವ ಸಿಬ್ಬಂದಿ ಮಾತ್ರ ಅವರ ಕಣ್ಣಿನ ಎದುರಿಗೆ ಸಿಗುವುದು ಅಪರೂಪ. ಒಂದು ವೇಳೆ ಕಂಡುಬಂದರೆ ಅದಕ್ಕೆ ತಕ್ಕ ಶಿಕ್ಷೆ ಖಂಡಿತ. ಅವರ ಈ ಪ್ರಾಮಾಣಿಕತೆ, ವ್ಯವಹಾರಿಕ ಚತುರತೆ ಉಳ್ಳವರನ್ನು ಗೌರವದಿಂದ ಕಾಣುವ ಕಲೆ ಇವರಿಗೆ ತಿಳಿದಿದೆ. ಮುಂದಿನ ಇಪ್ಪತ್ತು ವರ್ಷಗಳಲ್ಲಿನ ಬದಲಾವಣೆಯನ್ನು ಗ್ರಹಿಸಿ, ಸಂಸ್ಥೆಯನ್ನು ಆ ನಿಟ್ಟಿನಲ್ಲಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಇಪ್ಪತ್ತು ವರ್ಷದ ಯುವಕರ ಹಾಗೇ ಅವರ ಕಾರ್ಯದಲ್ಲಿ ವೇಗ ಇರುತ್ತದೆ. ಇದನ್ನು ಗ್ರಹಿಸಿ ಅವರಿಗೆ ಸಹಕರಿಸುವ ವ್ಯವಸ್ಥಿತ ಕಾರ್ಯಪಡೆ ಸಂಸ್ಥೆಯಲ್ಲಿ ಇರುವುದರಿಂದ ಇವತ್ತು ಕೆ.ಎಲ್.ಇ. ಸಂಸ್ಥೆಯು ಯಾವ ಸಂಸ್ಥೆಯೂ ಬೆಳೆಯದ ರೀತಿಯಲ್ಲಿ ಬೆಳೆಸಲು ಕಾರಣೀಕರ್ತರಾಗಿದ್ದಾರೆ. ಅವರು ಸಂಸ್ಥೆಯ ಸಿಬ್ಬಂದಿಯನ್ನು ಪ್ರೀತಿಸುವ, ಗೌರವಿಸುವ, ಕೆಲವು ಉದಾಹರಣೆಗಳನ್ನು ಗಮನಿಸುವುದು ಅವಶ್ಯಕ.[೫೩]

ಶ್ರೀ ಪ್ರಭಾಕರ ಕೋರೆಯವರ ನಾಯಕತ್ವದಲ್ಲಿ ಹಾಗೂ ಅವರ ಸಾಧನೆಗಳಿಂದ ಸ್ಫೂರ್ತಿಗೊಂಡು ಕೆ.ಎಲ್.ಇ. ಸಂಸ್ಥೆಯ ಆಡಳಿತಕ್ಕೆ ಇತರ ಸಂಸ್ಥೆಗಳ ಸೇರ್ಪಡೆ :

ಡಾ. ಪ್ರಭಾಕರ ಕೋರೆಯವರ ನಾಯಕತ್ವದಲ್ಲಿ ಕೆ.ಎಲ್.ಇ. ಸಂಸ್ಥೆ ಸಾಧಿಸಿದ ಅದ್ಭುತ ಪ್ರಗತಿಯ ಕಂಡು ತಮ್ಮ ಸಂಸ್ಥೆಗಳನ್ನು ಕೆ.ಎಲ್.ಇ. ಸಂಸ್ಥೆಯಲ್ಲಿ ವಿಲೀನಗೊಳಿಸಿ, ಅಭಿವೃದ್ಧಿಪಡಿಸುವ ಮಹದಾಸೆಯನ್ನು ಇಟ್ಟುಕೊಂಡು, ಕೋರೆಯವರ ಸಮರ್ಥ ನಾಯಕತ್ವಕ್ಕೆ ಮನ್ನಣೆ ನೀಡಿ ಸ್ವಯಂ ಪ್ರೇರಿತರಾಗಿ ಸೇರ್ಪಡೆಗೊಂಡು ಅಭಿವೃದ್ಧಿಯ ಹಾದಿಯಲ್ಲಿವೆ.

ಖ್ಯಾತ ರಾಜಕೀಯ ನಾಯಕತ್ವದ ಸಿದ್ಧಾಂತದ ಚಿಂತಕರಾದ ಕೂಪರ ಮತ್ತು ಮಾಕ್ಯಗೌ ಅವರ ನಾಯಕತ್ವಕ್ಕೆ ಜನರ ಸಂಸ್ಥೆಗಳು ಪ್ರೇರಿತರಾದವರ ಬಗ್ಗೆ ಒಂದು ವ್ಯಾಖ್ಯಾನ ನೀಡುವುದು ಇಲ್ಲಿ ಸೂಕ್ತವೆನಿಸುತ್ತದೆ..ಅದು ಹೀಗಿದೆ "ಒಂದು ನಿರ್ದಿಷ್ಟವಾದ ಸಮಯದಲ್ಲಿ ಜನಸಮುದಾಯಕ್ಕೆ ಕೆಲವು ಉದ್ದೇಶಿತ ಗುರಿಗಳಿದ್ದವು. ಅವುಗಳನ್ನು ಈಡೇರಿಸಿಕೊಳ್ಳಲು ಒಬ್ಬ ಉತ್ತಮ ನಾಯಕನ ಸೇವೆ ಅವಶ್ಯಕವಾಗಿರುತ್ತದೆ. ನಾಯಕನು ಜನಸಮುದಾಯದ ಗುರಿಗಳನ್ನು

ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ತನ್ನ ನಾಯಕತ್ವವನ್ನು ನಿರ್ವಹಿಸುವುದರ ಮೂಲಕ ಈಡೇರಿಸಲು ಅವನಿಗೆ ಸನ್ನಿವೇಶವು ಅನುಕೂಲವಾಗಿರುತ್ತದೆ.[೫೪] ಮೇಲಿನ ವ್ಯಾಖ್ಯೆಯಂತೆ ತಮ್ಮ ಬೇಡಿಕೆ, ಇಷ್ಟಸಿದ್ಧಿಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಒಬ್ಬ ಸಮರ್ಥನಾಯಕನ ಅವಶ್ಯಕತೆ ಇರುವಂತೆ, ಆ ಸಮರ್ಥ ನಾಯಕತ್ವ ಕೋರೆಯವರಲ್ಲಿ ಕಂಡ ಕಾರಣದಿಂದ ತಮ್ಮ ಸಂಸ್ಥೆಗಳಿಂದ ಅಭಿವೃದ್ಧಿ ಹೊಂದುವ ಇಚ್ಛೆಯಿಂದ ಕೆ.ಎಲ್.ಇ. ಸಂಸ್ಥೆಯೊಂದಿಗೆ ವಿಲೀನಗೊಳಿಸಿಕೊಂಡಿದ್ದು ಕೋರೆಯವರ ಸಮರ್ಥ ನಾಯಕತ್ವಕ್ಕೆ ಸಾಕ್ಷಿಯಾಗಿದೆ.

ಕೆ.ಎಲ್.ಇ. ಸಂಸ್ಥೆಯಲ್ಲಿ ವಿಲೀನಗೊಂಡ ಇತರ ಸಂಸ್ಥೆಗಳ ವಿವರ :

೧. ೧೯೯೧ರಲ್ಲಿ ಬೆಳಗಾವಿಯ ಆಯುರ್ವೇದ ವಿದ್ಯಾಪೀಠದ ಬಿ. ಎಮ್. ಕಂಕಣವಾಡಿ ಆಯುರ್ವೇದ ಕಾಲೇಜ್–ಆಸ್ಪತ್ರೆ ಹಾಗೂ ಫಾರ್ಮಸಿಗಳು ಕೆ.ಎಲ್.ಇ. ಆಡಳಿತಕ್ಕೆ ಒಳಪಟ್ಟವು.

೨. ೧೯೯೨ ಕೋಲಾರ ಜಿಲ್ಲೆ ಮಾಲೂರಿನ ಶ್ರೀಮತಿ ವ್ಹಿ. ನಂಜಮ್ಮ ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಪೂರ್ವ ಪ್ರಾಥಮಿಕ ಶಾಲೆ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಕಿಯರ ತರಬೇತಿ ಸಂಸ್ಥೆಗಳು ಕೆ.ಎಲ್.ಇ. ಆಡಳಿತಕ್ಕೆ ಒಳಪಟ್ಟವು.

೩. ೧೯೯೩ರಲ್ಲಿ ಗೋಕಾಕ ಶಿಕ್ಷಣ ಸಂಸ್ಥೆ ಕೆ.ಎಲ್.ಇ. ಆಡಳಿತಕ್ಕೆ ಒಳಪಟ್ಟಿತ್ತು.

೪. ೨೦೦೪ರಲ್ಲಿ ಅಂಕಲಿಯ ಎಜ್ಯುಕೇಷನ್ ಸೊಸೈಟಿಯ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಈ ಸಂಸ್ಥೆಗೆ ಸೇರಿಕೊಂಡವು. ಈ ಸಂಸ್ಥೆಯು ಕೋರೆಯವರ ತಂದೆ ಲಿ. ಬಸವಪ್ರಭು ಕೋರೆಯವರ ದಾನದಿಂದ ಸ್ಥಾಪನೆಗೊಂಡಿದ್ದರೂ, ಇವುಗಳನ್ನು ಕೋರೆಯವರು ಕೆ.ಎಲ್.ಇ. ಸಂಸ್ಥೆಗೆ ಸೇರಿಸಿ, ಅದರ ಅಭಿಮಾನವನ್ನು ಮೆರೆದರು.

೫. ೧೯೯೪ರಲ್ಲಿ ಉ. ಕನ್ನಡ ಜಿಲ್ಲೆಯ ಅಂಕೋಲಾದಲ್ಲಿರುವ ಕಮಲಾ ಮೆಡಿಕಲ್ ಸೆಂಟರ್ ಕೆ. ಎಲ್. ಇ. ಆಡಳಿತಕ್ಕೆ ಒಳಪಟ್ಟಿತು.

೬. ೧೯೯೮ರಲ್ಲಿ ಅಂಕೋಲಾದ ನೂತನ ಶಿಕ್ಷಣ ಸಭಾ ಟ್ರಸ್ಟ್ ಸಮಗ್ರವಾಗಿ ಕೆ.ಎಲ್.ಇ. ಆಡಳಿತಕ್ಕೆ ಒಳಪಟ್ಟಿತು. ಅಲ್ಲಿಯ ಪ್ರೌಢಶಾಲೆ, ಟ್ರೇನಿಂಗ್ ಕಾಲೇಜ್, ಪ್ರಾಥಮಿಕ ಶಾಲೆ, ಅಂಗನವಾಡಿ, ಶಿಕ್ಷಕಿಯರ ತರಬೇತಿ ಕೇಂದ್ರ, ಕುಟುಂಬ ಸಲಹಾ ಕೇಂದ್ರ ಮುಂತಾದ ಏಳು ಅಂಗ ಸಂಸ್ಥೆಗಳು ಕೆ.ಎಲ್.ಇ. ಸಂಸ್ಥೆಗೆ ಕೋರೆಯವರ ನಾಯಕತ್ವವನ್ನು ಮೆಚ್ಚಿ ಸೇರ್ಪಡೆಗೊಂಡಿವೆ. ಇವತ್ತು ಹೊಸ ಬಗೆಯ ಕೋರ್ಸ್‌ಗಳನ್ನು, ಕಟ್ಟಡಗಳನ್ನು ನಡೆಸುವ ಮೂಲಕ ಆಧುನೀಕರಣಗೊಳಿಸಿದ್ದಾರೆ.[೫೫]

ಈ ಮೂಲಕ ಸುಮಾರು ಕೋಟಿ ರೂಪಾಯಿಗಳ ಕಟ್ಟಡಗಳನ್ನು ಕಟ್ಟಿದ್ದಾರೆ. ಇದೇ ರೀತಿಯಾಗಿ ರಾಣೆಬೆನ್ನೂರು ತಾಲೂಕಿನ ಹನುಮನಟ್ಟಿಯ "ಗ್ರಾಮ ಸೇವಾ ಮಂಟಪ" ತನ್ನ ಒಡೆತನದ ಒಂಭತ್ತು ಅಂಗ ಸಂಸ್ಥೆಗಳನ್ನು, ಹಾಗೂ ಕೋಟ್ಯಾಂತರ ರೂಪಾಯಿಯ ಕಟ್ಟಡ ಐವತ್ತೇಳು ಎಕರೆ ಇಪ್ಪತ್ತು ಗುಂಟೆ ಜಮೀನನ್ನು

ಕೆ.ಎಲ್.ಇ. ಸಂಸ್ಥೆಗೆ ನೀಡಿತು.

ಇದರಲ್ಲಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಪದವಿಪೂರ್ವ ಕಾಲೇಜು, ಪ್ರೌಢಶಾಲೆ, ಪ್ರಾಥಮಿಕ, ಬಾಲವಾಡಿ, ವಸತಿ ನಿಲಯಗಳು ಸೇರಿವೆ.[೫೬] ದಿನಾಂಕ ೪ ಜನವರಿ ೨೦೦೮ರಂದು ನಡೆದ ಸಮಾರಂಭದಲ್ಲಿ ರಾಜ್ಯದ ಅಂದಿನ ಉಪ ಮುಖ್ಯಮಂತ್ರಿಗಳಾದ ಶ್ರೀ ಎಂ. ಪಿ. ಪ್ರಕಾಶ ಆಗಮಿಸಿದ್ದರು. ಸಮಾರಂಭದಲ್ಲಿ ಕೆ.ಎಲ್.ಇ. ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆಯವರಿಗೆ ಅಧಿಕೃತವಾಗಿ ಈ ಎಲ್ಲ ಸಂಸ್ಥೆಗಳನ್ನು ಕೆ.ಎಲ್.ಇ. ಸಂಸ್ಥೆಗೆ ಸೇರ್ಪಡೆ ಮಾಡಿಕೊಂಡಿರುವುದು ಸಂಸ್ಥೆಯ ಇತಿಹಾಸದಲ್ಲಿ ಮತ್ತೊಂದು ಮೈಲುಗಲ್ಲು ಸೃಷ್ಟಿಯಾಯಿತು.

ಮಹಾಲಿಂಗಪೂರ ಶ್ರೀ ಚೆನ್ನಗಿರೀಶ್ವರ ವಿದ್ಯಾವರ್ಧಕ ಟ್ರಸ್ಟ್ ಫಂಡ್ ಸಂಸ್ಥೆಯ ೫ ಅಂಗಸಂಸ್ಥೆಗಳು ಅಂದರೆ, ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಪ್ರಾಥಮಿಕ ಶಾಲೆ, ಪದವಿಪೂರ್ವ ಮಹಾವಿದ್ಯಾಲಯ, ಆಯ್. ಟಿ. ಆಯ್ ಕಾಲೇಜ ಪದವಿ ಹಾಗೂ ಪ್ರಾಥಮಿಕ ಶಾಲೆಗಗಳು ಸೇರ್ಪಡೆಯಾದವು. ಕೊಟ್ಯಾಂತರ ರೂ.ಗಳ ಕಟ್ಟಡ ಸುಮಾರು ೨೦ ಎಕರೆ ಪ್ರದೇಶ ಜಮೀನನ್ನು ದಿನಾಂಕ ೧೩ ಅಕ್ಟೋಬರ್ ೨೦೦೮ರಂದು ನಡೆದ ಸಮಾರಂಭದಲ್ಲಿ ಕೆ.ಎಲ್.ಇ. ಸಂಸ್ಥೆಗೆ ನೀಡಿದರು.[೫೭]

ಹೀಗೆ ಕೋರೆಯವರ ಕಾರ್ಯ ಸಾಧನೆಗಳಿಂದ ಕೆ.ಎಲ್.ಇ. ಸಂಸ್ಥೆಗೆ ಈ ಮೇಲಿನ ಇತರೇ ಸಂಸ್ಥೆಗಳು ಸೇರ್ಪಡೆಗೊಂಡಿದ್ದು, ಸಂಸ್ಥೆಯ ಇತಿಹಾಸದಲ್ಲಿ ಅವಿಸ್ಮರಣೀಯ ಕಣವಾಗಿದೆ. ಸೇರ್ಪಡೆಯಾದ ಸಂಸ್ಥೆಗಳನ್ನು ಆಧುನೀಕರಣಗೊಳಿಸಿ, ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

ಸಂಸ್ಥೆಗೆ ಆಧುನಿಕ ಸೌಲಭ್ಯಗಳ ಜತೆಗೆ ಆಧುನಿಕ ಕಟ್ಟಡಗಳ ಗುಣಮಟ್ಟ ಹೆಚ್ಚಿಸುವಂತೆ ಮಾಡಿದ ಶ್ರೀ ಕೋರೆಯವರು:

ಒಂದು ಶಿಕ್ಷಣ ಸಂಸ್ಥೆಗೆ ಅಗತ್ಯವಾದ ಕಟ್ಟಡ ಮತ್ತು ಸೌಲಭ್ಯಗಳು ಅಷ್ಟೇ ಮಹತ್ವಪಡೆದಿರುತ್ತವೆ. ಅಂತೆಯೇ ಇತರ ಶಿಕ್ಷಣ ಸಂಸ್ಥೆಗಳಿಗೆ ಮಾದರಿಯಾಗುವಂತೆ ಕೆ.ಎಲ್..ಇ. ಸಂಸ್ಥೆಯ ಶಾಲಾ ಕಾಲೇಜುಗಳನ್ನು ಆಧುನೀಕರಣಕ್ಕಾಗಿ ಕೋಟ್ಯಂತರ ರೂ.ಗಳನ್ನು ಖರ್ಚುಮಾಡಿ ಭವ್ಯ, ಸುಂದರವಾದ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಸುಂದರವಾದ ಕೈತೋಟ, ಕಾರಂಜಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ವಿದ್ಯಾರ್ಥಿಗಳಿಗೆ ಆಧುನಿಕ ಗ್ರಂಥಾಲಯಗಳು, ಹವಾನಿಯಂತ್ರಿತ ಸಭಾ ಭವನಗಳು ವಿದೇಶಿ ಮಾದರಿಯಲ್ಲಿ ಆಸನಗಳ ವ್ಯವಸ್ಥೆ, ಇಂಟರನೆಟ್, ಇಮೇಲ್, ಕಂಪ್ಯೂಟರ್‌ಗಳನ್ನು ಒದಗಿಸಿದ್ದಾರೆ. ಗುಣಮಟ್ಟದ ಶಿಕ್ಷಣಕ್ಕೂ ಒತ್ತುಕೊಟ್ಟಿದ್ದಾರೆ. ಆದ್ದರಿಂದಲೇ ಕೆ.ಎಲ್.ಇ. ಸಂಸ್ಥೆಯು ದೇಶಿ ಹಾಗೂ ವಿದೇಶಿಯರನ್ನು ಆಕರ್ಷಿಸುತ್ತದೆ. ಎತ್ತರದ ಮಹಡಿಗಳಿಗೆ ಲಿಫ್ಟ್ ಸೌಲಭ್ಯ ಆಧುನಿಕತೆಯ ಪ್ರತೀಕವಾಗಿದೆ. ಬೃಹತ್ ಪ್ರಮಾಣದ ವಿವಿಧ ಮಾದರಿಯ ವಿನ್ಯಾಸದ ಕಟ್ಟಡ, ಅಲ್ಲಿಯ ಸೌಲಭ್ಯಗಳನ್ನು ನೋಡುವವರನ್ನೂ ಆಕರ್ಷಿಸುತ್ತವೆ. ಇವೆಲ್ಲ ಕಾರಣಗಳಿಂದಲೇ ಲೋಕವೇ ಅಚ್ಚರಿಪಡುವಂತೆ ಸಂಸ್ಥೆ ಬೆಳೆದು ನಿಂತಿದೆ. ಸ್ಪರ್ಧಾತ್ಮಕ ಲೋಕಕ್ಕೆ ಪ್ರಬಲವಾದ ಸವಾಲನ್ನು ಎದುರಿಸುವಂತಹ ಸಾಮರ್ಥ್ಯ ಶ್ರೀ ಕೋರೆಯವರ ಮುಂದಾಲೋಚನೆ, ಶ್ರಮ-ಚಿಂತನೆ ಎದ್ದುಕಾಣುತ್ತದೆ. ವಿದ್ಯಾರ್ಥಿಗಳಿಗೆ ಪೂರಕ ವಾತಾವರಣ ನಿರ್ಮಿಸುವುದು, ಉತ್ತಮ ಗುಣಮಟ್ಟದ ಶಿಕ್ಷಣದ ಧ್ಯೇಯ ಇರಿಸಿಕೊಂಡಿರುವ

ಕೋರೆಯವರು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ವಿಶ್ರಾಂತಿ ಕೋಣೆ, ಸಿಬ್ಬಂದಿಗಾಗಿ ಪ್ರತ್ಯೇಕ ಕೋಣೆ, ಜತೆಗೆ ವಿದ್ಯಾರ್ಥಿಗಳು ದೈಹಿಕ ಹಾಗೂ ಮಾನಸಿಕವಾಗಿ ಸದೃಢಗೊಳ್ಳಲು ವಿಶಾಲವಾದ ಆಟದ ಮೈದಾನಗಳನ್ನು ಕಲ್ಪಿಸಿ ಕೊಟ್ಟಿದ್ದಾರೆ. ಒಳಾಂಗಣ ಕ್ರೀಡಾಂಗಣ, ಜಮಖಾನಾ ಹಾಲುಗಳು, ಉತ್ತಮ ಟ್ರ್ಯಾಕ್ ನಿರ್ಮಿಸುವುದರ ಮೂಲಕ ಭೌತಿಕವಾಗಿ ಜೊತೆಗೆ ಶಾರೀರಿಕವಾಗಿಯೂ ವಿದ್ಯಾರ್ಥಿಗಳು ಬೆಳವಣಿಗೆ ಹೊಂದಬೇಕೆಂಬುದೇ ಅವರ ಆಶಯ. ಈ ಎಲ್ಲ ಸೌಲಭ್ಯಗಳನ್ನು ಅಂಗಸಂಸ್ಥೆಗಳಲ್ಲಿಯೂ ನಿರ್ಮಿಸಿ ಎಲ್ಲ ಬಗೆಯ ಶಿಕ್ಷಣಕ್ಕೆ ಆದ್ಯತೆ ನೀಡಿದ್ದಾರೆ.

ಕೆ.ಎಲ್.ಇ. ಸಂಸ್ಥೆಯಲ್ಲಿ ಭವ್ಯವಾಗಿ ಎದ್ದು ನಿಂತಿರುವ ವಿವಿಧ ಮಾದರಿಯ ಆಧುನಿಕ ಸೌಲಭ್ಯವುಳ್ಳ ಕಟ್ಟಡಗಳು ಕೋರೆಯವರ ಸಾಧನೆಗಳ ಪ್ರತೀಕವಾಗಿವೆ. ಗದಗಿನಲ್ಲಿಯ ಔಷಧ ಮಹಾವಿದ್ಯಾಲಯ ಕಟ್ಟಡ ಸುಮಾರು ಕೋಟ್ಯಾಂತರ ರೂಪಾಯಿಗಳಿಂದ ನಿರ್ಮಾಣವಾಗಿದೆ. ಅದೇ ರೀತಿ ಬೆಳಗಾವಿ, ಬೆಂಗಳೂರಿನ ಕಾಲೇಜುಗಳು ಬಹುಮಹಡಿ ಕಟ್ಟಡ ಹೊಂದಿದ್ದು, ಅವುಗಳಿಗೆ ಲಿಫ್ಟ್ ಸೌಕರ್ಯ ಒದಗಿಸಲಾಗಿದೆ. ನಿಪ್ಪಾಣಿಯ ಔಷಧಿ ಮಹಾವಿದ್ಯಾಲಯ, ಹುಬ್ಬಳ್ಳಿಯ ವ್ಯವಹಾರ ಮತ್ತು ಆಡಳಿತ ಮಹಾವಿದ್ಯಾಲಯದ ಕಟ್ಟಡ ವಿದೇಶಿ ಮಾದರಿಯ ಕಟ್ಟಡಗಳಾಗಿವೆ. ಚಿಕ್ಕೋಡಿಯಲ್ಲಿನ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ಗ್ರಂಥಾಲಯದ ಕಟ್ಟಡಗಳು, ಗದಗಿನಲ್ಲಿ ವಿದೇಶಿ ಮಾದರಿ ಸಭಾಭವನ, ಅಥಣಿಯಲ್ಲಿನ ವಿದ್ಯಾರ್ಥಿನಿಯರ ವಸತಿನಿಲಯ, ಕಂಪ್ಯೂಟರ್ ಲ್ಯಾಬೋರಟರಿ, ಲಿಂಗರಾಜ ಕಾಲೇಜು, ಜವಾಹರಲಾಲ ನೆಹರು ವೈದ್ಯಕೀಯ ಕಾಲೇಜು, ಹುಬ್ಬಳ್ಳಿಯ ಇಂಜಿನಿಯರಿಂಗ್ ಕಾಲೇಜಿನ ಆವರಣಗಳಲ್ಲಿನ ನಯನ ಮನೋಹರ ಉದ್ಯಾನವನ ಹಾಗೂ ಕಾರಂಜಿಗಳು ಒಂದು ರೀತಿಯಲ್ಲಿ ಪ್ರವಾಸಿ ತಾಣದಂತೆ ಗೋಚರಿಸುತ್ತವೆ. ಒಂದು ಸಂಸ್ಥೆಗೆ ಏನೇನು ಸೌಲಭ್ಯಗಳು ಬೇಕೋ ಆ ಎಲ್ಲ ಸೌಲಭ್ಯಗಳನ್ನು ಒದಗಿಸಿ, ಸಹಸ್ರಾರು ವಿದ್ಯಾರ್ಥಿಗಳಿಗೆ ಉತ್ತಮ ಪರಿಸರದಲ್ಲಿ ಶಿಕ್ಷಣ ಪಡೆಯುವಂತೆ ಮಾಡಿದ್ದಾರೆ. ಇಂಥ ಎಲ್ಲ ಸೌಲಭ್ಯಗಳನ್ನು ಇತರ ಅಂಗಸಂಸ್ಥೆಗಳಿಗೂ ವಿಸ್ತರಿಸಿದ್ದಾರೆ.

ಅದೇ ಪ್ರಕಾರವಾಗಿ ವಾಹನ ನಿಲುಗಡೆಗಾಗಿ ಬೃಹತ್ ಕಟ್ಟಡಗಳ ಸಾನ್ನಿಧ್ಯದಲ್ಲಿ ವ್ಯವಸ್ಥೆಯನ್ನು ಮಾಡಿದ್ದಾರೆ. ಅವುಗಳನ್ನು ಸಂರಕ್ಷಿಸಲು ಸಿಬ್ಬಂದಿಯನ್ನು ಕೂಡಾ ನೇಮಿಸಿದ್ದಾರೆ. ಉದ್ಯಾನವವನ್ನು ಸದಾ ಸ್ವಚ್ಛವಾಗಿಡಲು ಸಿಬ್ಬಂದಿಯನ್ನು ನೇಮಿಸಿ, ಯಾವತ್ತು ಸ್ವಚ್ಛವಾಗಿಡುವಂತೆ ಎಚ್ಚರಿಕೆ ವಹಿಸಿದ್ದಾರೆ.

ಬೋಧಕ ಸಿಬ್ಬಂದಿ ಗ್ರಂಥಾಲಯದಲ್ಲಿ ಪ್ರತ್ಯೇಕವಾಗಿ ಕುಳಿತು ಅಧ್ಯಯನ ಮಾಡಲು, ಬೋಧಕೇತರ ಸಿಬ್ಬಂದಿಗೆ ಪ್ರತ್ಯೇಕ ವ್ಯವಸ್ಥೆ, ಗಣಕಯಂತ್ರದ ಸೌಲಭ್ಯ ಸಂಪೂರ್ಣವಾಗಿ ಗಣಕೀಕೃತವಾದ ಆಡಳಿತ ವ್ಯವಸ್ಥೆಯನ್ನು ಸಂಸ್ಥೆಯಲ್ಲಿ ಜಾರಿಗೊಳಿಸಿದ್ದಾರೆ.[೫೮]

ಹುಬ್ಬಳ್ಳಿಯಲ್ಲಿ ಕೆ.ಎಲ್.ಇ. ಸಂಸ್ಥೆಯ ಅಭಿಯಾಂತ್ರಿಕ ಮಹಾವಿದ್ಯಾಲಯ ಆವರಣದಲ್ಲಿ ೭ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಡಾ. ಎಚ್. ಆರ್. ಕುಲಕರ್ಣಿಯವರ ಸ್ಮಾರಕ ಉಪನ್ಯಾಸ ಸಂಕೀರ್ಣ. ೫ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ದೇಶಪಾಂಡೆ ಸಾಮಾಜಿಕ ಸಮಸ್ಯೆ ವೃತ್ತಿಪರ ನಿರ್ಮಾಣ ಕೇಂದ್ರ ಕಟ್ಟಡಗಳಲ್ಲಿ ವಿದೇಶಿ ಮಾದರಿಯ ಸುಮಾರು ೪೦ ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಮಹಾರಾಷ್ಟ್ರ ಸೋಲ್ಲಾಪುರ (ಬುಕ್)

ಆಂಗ್ಲಮಾಧ್ಯಮಿಕ ಶಾಲೆನಿರ್ಮಿಸಿದ್ದು ಶ್ಲಾಘನೀಯವಾಗಿದೆ.[೫೯]

ಪ್ರಾಚಾರ್ಯರ ಕೋಣೆ, ಸಿಬ್ಬಂದಿ ಕೋಣೆ, ಸಭಾಭವನ, ಮಹಿಳಾ ಸಿಬ್ಬಂದಿಗೆ ಪ್ರತ್ಯೇಕ ಕೋಣೆ ಹೀಗೆ ಎಲ್ಲ ಅಂಗಸಂಸ್ಥೆಗಳಲ್ಲಿ ಇಂತಹ ಸೌಲಭ್ಯಗಳನ್ನು ಒದಗಿಸಲಾಗಿದೆ. ಜಗತ್ತಿನಲ್ಲಿ ಬದಲಾಗುತ್ತಿರುವ ಹೊಸ ಶೈಕ್ಷಣಿಕ ವ್ಯವಸ್ಥೆಗೆ ತಕ್ಕಂತೆ ಕೆ.ಎಲ್.ಇ. ಸಂಸ್ಥೆಯ ಶಾಲಾ ಕಾಲೇಜುಗಳನ್ನು ಅಭಿವೃದ್ಧಿಪಡಿಸುತ್ತಿರುವ ಕೋರೆಯವರು, ಇತರ ಸಂಸ್ಥೆಗಳಿಗೆ ಮಾದರಿ ಒದಗಿಸಿದ್ದಾರೆ. ಅಚ್ಚುಕಟ್ಟುತನ, ಶಿಸ್ತು, ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ಕೆ.ಎಲ್.ಇ. ಸಂಸ್ಥೆಯ ಆಧುನೀಕರಣದ ಶಿಲ್ಪಿ ಎನಿಸಿದ್ದಾರೆ. ತಮ್ಮ ಸಂಸ್ಥೆಯನ್ನು ಬೆಳೆಸುವುದರ ಜೊತೆಯಲ್ಲಿ ಅಂಗ ಸಂಸ್ಥೆಗಳ ಅಭಿವೃದ್ಧಿ ಮಾದರಿಯಾಗಿಟ್ಟುಕೊಂಡು ಗುರುತಿಸಬಹುದಾಗಿದೆ. ಒಟ್ಟಾರೆ ದಕ್ಷ ನಾಯಕತ್ವಕ್ಕೆ ಕೆ.ಎಲ್.ಇ. ಸಂಸ್ಥೆ ಶ್ರೇಷ್ಠ ನಿದರ್ಶನವೊದಗಿಸುತ್ತದೆ.

ಕೆ.ಎಲ್.ಇ. ಸಂಸ್ಥೆಯ ಆಸ್ತಿಯನ್ನು ದ್ವಿಗುಣ ಗೊಳಿಸಿದ ಕೋರೆಯವರು :

ಶ್ರೀ ಕೋರೆಯವರು ತಮ್ಮ ಆಡಳಿತದ ೨೫ ವರ್ಷಗಳ ಅವಧಿಯಲ್ಲಿ ಕೆ.ಎಲ್.ಇ. ಸಂಸ್ಥೆಯ ಆಸ್ತಿಯನ್ನು ದ್ವಿಗುಣಗೊಳಿಸಿದ್ದಾರೆ. ೧೯೮೪ರಲ್ಲಿ ೧೩.೭೭ ಕೋಟಿ ರೂ. ಇದ್ದ ಕೆ.ಎಲ್.ಇ. ಸಂಸ್ಥೆಯ ಆಸ್ತಿ ೨೦೦೯ರಲ್ಲಿ ಇದ್ದಂತೆ ೬೦೪.೨ ಕೋಟಿ ರೂ.ಗೆ ಹೆಚ್ಚಳಗೊಂಡಿದೆ. ಈ ಸಾಧನೆ ನೋಡಿದವರೆಲ್ಲರನ್ನು ಚಕಿತಗೊಳಿಸುತ್ತದೆ. ಅದೇ ಪ್ರಕಾರ ಮುಂಗಡ ಪತ್ರ, ಸಿಬ್ಬಂದಿ, ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ೨೦೦೯ರ ಅಂಕಿ ಅಂಶಗಳು ಕೆಳಗಿನಂತಿವೆ.

ಡಾ. ಪ್ರಭಾಕರ ಕೋರೆ ೧೯೮೪ರಿಂದ ಕೆ.ಎಲ್.ಇ. ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಂದಿನಿಂದ

ಇಂದಿನವರೆಗೆ ಸಂಸ್ಥೆ ಬೆಳೆದುಬಂದ ಬಗೆ:

ಸಂ.	ವಿವರ	೧೯೮೪	೨೦೦೯
೧.	ಆಯವ್ಯಯ ಅಂದಾಜು	೪.೨೦ ಕೋಟಿ ರೂ.	೧೭೭.೫೨ ಕೋಟಿ ರೂ.
೨.	ಆಸ್ತಿಗಳು	೧೩.೭೭ ಕೋಟಿ ರೂ.	೬೦೪.೦೨ ಕೋಟಿ ರೂ.
೩.	ಮುಂಗಡ ಪತ್ರ	೬.೪೫ ಕೋಟಿ ರೂ.	೩೦೪.೯೪ ಕೋಟಿ ರೂ.
೪.	ಅಂಗ ಸಂಸ್ಥೆಗಳು	೩೮	೨೦೭
೫.	ವಿದ್ಯಾರ್ಥಿಗಳ ಸಂಖ್ಯೆ	೩೩,೫೦೮	೭೧,೯೦೦
೬.	ಸಿಬ್ಬಂದಿ	೩೦೦೦	೮,೨೫೦
೭.	ಸದಸ್ಯರ ಸಂಖ್ಯೆ	೧೨,೫೪೭	೧೨,೩೩೧

ಈ ಸೌಲಭ್ಯಗಳಲ್ಲದೆ ಉತ್ತಮ ಗುಣಮಟ್ಟದ ಶಿಕ್ಷಣಕ್ಕೂ ಆದ್ಯತೆ ನೀಡುತ್ತಿದ್ದಾರೆ. ಸಂಸ್ಥೆಯ ವಿವಿಧ ಮಹಾವಿದ್ಯಾಲಯಗಳಲ್ಲಿ ಅಂತಾರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ, ರಾಜಮಟ್ಟದ ಅನೇಕ ವಿಚಾರ ಸಂಕಿರಣಗಳು ಹಾಗೂ ಬೌದ್ಧಿಕ ತರಬೇತಿ ಶಿಬಿರಗಳನ್ನು ಏರ್ಪಡಿಸುತ್ತಿರುವುದು ಅಲ್ಲದೇ ನುರಿತ ಪರಿಣತರನ್ನು ಆಹ್ವಾನಿಸಿ, ಹೊಸ ಬಗೆಯ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅದರಲ್ಲೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದಲಾಗುತ್ತಿರುವ ನೀತಿಗಳಿಗೆ ಎದುರಾಗುತ್ತಿರುವ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವ ಪ್ರಾಧ್ಯಾಪಕರನ್ನು ನಿರ್ಮಿಸುವ ಕಾರ್ಯಕ್ಕೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯವಾಗಿದೆ.

ಕೆ.ಎಲ್.ಇ. ಸಂಸ್ಥೆಯ ಗ್ರಂಥಾಲಯಗಳಲ್ಲಿ ಕಾಲೇಜು ಆವರಣದಲ್ಲಿ ಸಿ.ಸಿ. ಟಿ.ವಿ. ಕ್ಯಾಮರಾ ಅಳವಡಿಸುವ ಮೂಲಕ ಕಾಲೇಜಿನ ಪರಿಸರದಲ್ಲಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿಗಳು ನೀಡುವ ಕಿರುಕುಳ ತಪ್ಪಿಸಿದ್ದಾರೆ. ಮತ್ತು ಅನೈತಿಕ ಚಟುವಟಿಕೆಗಳಿಗೆ ಇದು ತಡೆ ಒಡ್ಡಿದೆ.

ಈ ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೇನೆಂದರೆ, ಆರ್ಥಿಕವಾಗಿ, ಶೈಕ್ಷಣಿಕ ಲೋಕದಲ್ಲಿ ಎಲ್ಲರೂ ಅಚ್ಚರಿಪಡುವಂತೆ ಕೆ.ಎಲ್.ಇ. ಸಂಸ್ಥೆಯನ್ನು ಹೆಮ್ಮರವಾಗಿ ಬೆಳೆಸಿದ ಪರಿ ಪವಾಡ ಸದೃಶವಾಗಿದೆ. ಡಾ. ಪ್ರಭಾಕರ ಕೋರೆ ಇವರ ಹೆಸರು ಶ್ರೇಷ್ಠ ಸಾಧಕರ ಸಾಲಿನಲ್ಲಿ ನಿಲ್ಲುತ್ತದೆ. ಪ್ರತಿವರ್ಷ ಮೂರುನೂರು ಕೋಟಿ ರೂ.ಗಳಿಗಿಂತಲೂ ಹೆಚ್ಚು ಮೊತ್ತದ ಕೆ.ಎಲ್.ಇ. ಮುಂಗಡಪತ್ರ ಹೊಂದಿದೆ. ಒಂದು ರಾಜ್ಯ ಸರ್ಕಾರ ಶಿಕ್ಷಣ ಇಲಾಖೆ ನೀಡುವ ಮೊತ್ತದಷ್ಟಾಯಿತು. ಈ ಕಾರಣಕ್ಕಾಗಿ ಆಧುನಿಕ ಕಟ್ಟಡಗಳು, ಉದ್ಯಾನವನ, ವಿದ್ಯಾರ್ಥಿಗಳಿಗೆ ಬೇಕಾಗುವ ಅನೇಕ ಸೌಲಭ್ಯಗಳನ್ನು ಒದಗಿಸಿ, ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಪ್ಪತ್ತೈದು ಸಾವಿರ ತಲುಪಿದೆ. ಕೆ.ಎಲ್.ಇ. ಸಂಸ್ಥೆಯ ಸಿಬ್ಬಂದಿ ೯,೦೧೮ ರಷ್ಟಿದೆ. ಶಿಕ್ಷಣ ತಜ್ಞರು, ನಾಯಕರು, ಸಾಹಿತಿಗಳು ಮಠಾಧೀಶರು, ಅದ್ಭುತ ಸಾಧನೆಯನ್ನು ಕಂಡು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಹಾಗೇ ಇತರ ಸಂಸ್ಥೆಗಳು ಕೆ.ಎಲ್.ಇ. ಸಂಸ್ಥೆಯನ್ನು ಒಂದು ಮಾದರಿಯಾಗಿ ಇಟ್ಟುಕೊಳ್ಳುತ್ತಾರೆ. ಡಾ. ಪ್ರಭಾಕರ ಕೋರೆಯವರು ಶೈಕ್ಷಣಿಕ ಲೋಕದ ಅದ್ಭುತ ಮಾಂತ್ರಿಕ ಎನ್ನುವ ಶಬ್ದ, ಅಕ್ಷರಶಃ ಈ ಸಾಧನೆಯಿಂದ ಇವರಿಗೆ ಅನ್ವಯಿಸುತ್ತದೆ. ಈ ಅಮೋಘ ಸಾಧನೆಯ ಹಿಂದಿನ ರಹಸ್ಯವೇನೆಂದರೆ, ಅಂದುಕೊಂಡಿದ್ದನ್ನು ವೇಳೆಗೆ ಸರಿಯಾಗಿ ಮಾಡುವುದು. ಏನಿದ್ದರೂ ಎಲ್ಲವೂ ಟೈಮ್‌ಬಾಂಡ್. ಅದೇ ಅವರ ಯಶಸ್ಸಿನ ಗುಟ್ಟು.. ಚಿತ್ತ ಮಾತ್ರ ಫಲಿತಾಂಶದತ್ತಲೇ ಇರುತ್ತದೆ. ಕೋರೆಯವರು ಸಮಯಕ್ಕೆ ನೀಡುವ ಮಹತ್ವದಿಂದಾಗಿ ಇದೆಲ್ಲ ಸಾಧ್ಯವಾಗಿದೆ.[೬೧]

ಕೆ.ಎಲ್.ಇ. ಸಂಸ್ಥೆಗೆ ಗರಿಷ್ಠ ಮಟ್ಟದ ಮಾನ್ಯತೆ ನೀಡಿದ ನ್ಯಾಕ್ ಸಮಿತಿ :

ಕೆ.ಎಲ್.ಇ. ಸಂಸ್ಥೆಯ ಗುಣಮಟ್ಟದ ಶಿಕ್ಷಣ ಸಂಸ್ಥೆಯ ಮಹಾವಿದ್ಯಾಲಯಗಳಲ್ಲಿ ಒದಗಿಸಿದ ಸೌಲಭ್ಯಗಳು ಉತ್ತಮ ಮಟ್ಟದ ವಿದ್ಯಾರ್ಥಿಯ ಫಲಿತಾಂಶ, ಪ್ರಾಧ್ಯಾಪಕರ ಕಾರ್ಯ ಸಾಧನೆಯನ್ನು ಗಮನಿಸಿ, ಯು.ಜಿ.ಸಿ.ಯು

೨೦೦೪ರಲ್ಲಿ ಆರು ಕಾಲೇಜುಗಳ ಗುಣಮಟ್ಟದ ಮೌಲ್ಯ ಮಾಪನಕ್ಕೆ ನೇಮಿಸಿದ ನ್ಯಾಕ್ ಸಮಿತಿಯು ಕೆ.ಎಲ್.ಇ.ಯ ಮಹಾ ವಿದ್ಯಾಲಯಗಳಿಗೆ ಗರಿಷ್ಠ ಪ್ರಮಾಣದ 'ಎ+' ಮತ್ತು 'ಎ' ಗ್ರೇಡ್ ನೀಡುವ ಮೂಲಕ ಪ್ರಶಂಸಿಸಿದೆ.[೬೩] ೨೦೧೦ರಲ್ಲಿ ೮ ಕಾಲೇಜುಗಳು 'ಎ' ಗ್ರೇಡ್ ಪಡೆದಿವೆ. ಇದು ಕೋರೆಯವರು ಸಾಧಿಸಿದ ಸಾರ್ಥಕ ಪರಿಶ್ರಮಕ್ಕೆ ಸಂದ ಗೌರವವೆಂದು ಹೇಳಬಹುದು. ಬಹಳಷ್ಟು ವಿಶ್ವವಿದ್ಯಾಲಯಗಳು 'ಬಿ' 'ಬಿ'ಕ್ಕಿಂತಲೂ ಹೆಚ್ಚಿಗೆ ಅಂಕಗಳಿಸಿದ್ದು ಕೆ.ಎಲ್.ಇ. ಸಂಸ್ಥೆಯ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ. ಅದರ ಚಿಕ್ಕೋಡಿ ಗ್ರಾಮೀಣ ಮಟ್ಟದ ಕಾಲೇಜಿಗೆ ಎ ಶ್ರೇಣಿ ದೊರೆಯಬೇಕಾದಲ್ಲಿ ಯಾವ ರೀತಿ ನಗರ ಗ್ರಾಮ ಎನ್ನದೇ ಕೋರೆಯವರು ಕಾಲೇಜುಗಳನ್ನು ಆಧುನಿಕವಾಗಿ ಅಭಿವೃದ್ಧಿಪಡಿಸಿದ್ದಾರೆ ಎಂಬುದನ್ನು ನಿರ್ದೇಶಿಸುತ್ತಾರೆ. ಅದೇ ರೀತಿ ವಿಶ್ವ ವಿದ್ಯಾಲಯ ಹಾಗೂ ರಾಜ್ಯ ಸರ್ಕಾರ ಅನೇಕ ಪರಿಶೀಲನಾ ಸಮಿತಿಯು ಸಂಸ್ಥೆಯ ಮಹಾವಿದ್ಯಾಲಯವು ಕಾರ್ಯ ಚಟುವಟಿಕೆ, ಸೌಲಭ್ಯಗಳನ್ನು ಗಮನಿಸಿ ಪ್ರಶಂಸಿಸಿದೆ. ಆದ್ದರಿಂದ ಸಂಸ್ಥೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಕಾರ್ಯಾಧ್ಯಕ್ಷರ ಪಾತ್ರ ಎತ್ತಿ ತೋರಿಸುತ್ತದೆ.

ಸ್ವಾಯತ್ತ ಮಹಾವಿದ್ಯಾಲಯದ ಸ್ಥಾನಮಾನ :

ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯಕ್ಕೆ ಸ್ವಾಯತ್ತ ಮಹಾವಿದ್ಯಾಲಯವೆಂದು ದೆಹಲಿ ನ್ಯಾಕ್ ಸಮಿತಿ ಗುರುತಿಸಿದ್ದು, ಇದು ಉತ್ತರ ಕರ್ನಾಟಕದ ಪ್ರಥಮ ಸ್ವಾಯತ್ತ ಮಹಾವಿದ್ಯಾಲಯವೆಂಬ ಹೆಗ್ಗಳಿಕೆಗೆ ಕಾರಣವಾಗಿದೆ. ಇದಕ್ಕೆ ಕಾರ್ಯಾಧ್ಯಕ್ಷರ ಶ್ರಮದ ಫಲಕ್ಕೆ ಸಿಕ್ಕ ಗರಿಷ್ಠ ಪ್ರಮಾಣದ ಗೌರವವಾಗಿದೆ. ೨೦೦೮ರಲ್ಲಿ ಕೆ.ಎಲ್.ಇ. ಸಂಸ್ಥೆಯ ಬಿ. ವಿ. ಭೂಮರೆಡ್ಡಿ ಅಭಿಯಾಂತ್ರಿತ ಹಾಗೂ ತಾಂತ್ರಿಕ ಮಹಾವಿದ್ಯಾಲಯವನ್ನು ನ್ಯಾಕ್ ಸಮೀತಿಯು ಸ್ವಾಯತ್ತ ಮಹಾವಿದ್ಯಾಲಯವೆಂದು ಮಾನ್ಯತೆ ನೀಡುವ ಮೂಲಕ ಕೆ.ಎಲ್.ಇ. ಸಂಸ್ಥೆ ಸಾಧನೆಯ ಇತಿಹಾಸದಲ್ಲಿ ಮತ್ತೊಂದು ಹೊಸ ಅಧ್ಯಾಯಕ್ಕೆ ಸಾಕ್ಷಿಯಾಗಿದೆ.[೬೪] ದೇಶದಲ್ಲಿಯೇ ಇದೊಂದು ಪ್ರತಿಷ್ಠಿತ ಇಂಜಿನಿಯರಿಂಗ್ ಮಹಾವಿದ್ಯಾಲಯವೆಂದು ಗುರುತಿಸಲ್ಪಟ್ಟಿದೆ. ಇದರಿಂದ ಗಮನಿಸುವ ಸಂಗತಿಯೆಂದರೆ, ಕೋರೆಯವರು ಕಲ್ಪಿಸಿಕೊಟ್ಟ ಸೌಲಭ್ಯ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ನೀಡಿದ ಮಹತ್ವ ಎಂತಹದು ಎಂದು ತಿಳಿಯುತ್ತದೆ. ೨೦೦೬ರಲ್ಲಿ ದೇಶದ ಪ್ರತಿಷ್ಠಿತ ಆಂಗ್ಲ ಪತ್ರಿಕೆಯಾದ 'ಇಂಡಿಯಾ ಟುಡೆ' ನಡೆಸಿದ ಸಮೀಕ್ಷೆಯ ಪ್ರಕಾರ ದೇಶದಲ್ಲಿಯೇ ಅತ್ಯುತ್ತಮ ಕಾನೂನು ಮಹಾವಿದ್ಯಾಲಯಗಳಲ್ಲಿ ಬೆಂಗಳೂರಿನ ಕೆ.ಎಲ್.ಇ. ಕಾನೂನು ಮಹಾವಿದ್ಯಾಲಯ ಹದಿನಾಲ್ಕನೆಯ ಅತ್ಯುತ್ತಮ ಕಾನೂನು ಮಹಾವಿದ್ಯಾಲಯವೆಂದು ಗುರುತಿಸಿದ್ದು[೬೫] ಸಂಸ್ಥೆಯ ಕಾರ್ಯಾಧ್ಯಕ್ಷರ ಕಾರ್ಯವೈಖರಿಗೆ ಸಿಕ್ಕ ಗೌರವವಾಗಿದೆ.

ಕೆ.ಎಲ್.ಇ. ಸಂಸ್ಥೆಗೆ ವಿಶ್ವವಿದ್ಯಾಲಯದ ಸ್ಥಾನಮಾನ, ಗೌರವ :

ಕೋರೆಯವರ ಇಪ್ಪತ್ತೈದು ವರ್ಷಗಳ ಸುದೀರ್ಘ, ನಿಸ್ವಾರ್ಥ ಸೇವೆಯ ಫಲವಾಗಿ ಸಂಸ್ಥೆಗೆ ಹಲವಾರು ಗೌರವಗಳು, ಮಾನ್ಯತೆಗಳು ಸಿಕ್ಕಿವೆ. ಇತ್ತೀಚೆಗೆ ಅಂದರೆ, ೨೦೦೬ರಲ್ಲಿ ನವದೆಹಲಿಯ ಯು.ಜಿ.ಸಿ.ಯಿಂದ ಅನುಮೋದಿತ ಸ್ವಾಯತ್ತ ವಿಶ್ವವಿದ್ಯಾಲಯ ಸ್ಥಾನ ನೀಡಿದ್ದು, ಇದು ಅತ್ಯಂತ ಶ್ರೇಷ್ಠವಾದದ್ದು, ಚರಿತಾರ್ಹವಾದುದು. ಯು.ಜಿ.ಸಿ.

ಶಿಫಾರಸ್ಸಿನ ಮೇರೆಗೆ ಮಾನವ ಸಂಪನ್ಮೂಲ ಇಲಾಖೆ ಹಾಗೂ ಭಾರತ ಸರ್ಕಾರ ಬೆಳಗಾವಿಯ ಜೆ.ಎನ್.ಎಂ.ಸಿ. ಹಾಗೂ ದಂತ ವಿಜ್ಞಾನ ಮಹಾವಿದ್ಯಾಲಯ ಒಳಗೊಂಡಂತೆ ವಿಶ್ವವಿದ್ಯಾಲಯವೆಂದು ಅಧಿಕೃತ ಮನ್ನಣೆಯನ್ನು ನೀಡಿದೆ. ಇದು ಒಂದು ಉತ್ತರ ಕರ್ನಾಟಕದಲ್ಲಿಯೇ ಪ್ರಥಮ ಸ್ವಾಯತ್ತ ವಿಶ್ವವಿದ್ಯಾಲಯದ ಸ್ಥಾನ ಹೊಂದಿದೆ.[೬೫] ಸದ್ಯ ೮ ಅಂಗಸಂಸ್ಥೆಗಳ ವಿಶ್ವವಿದ್ಯಾಲಯವು ಸಾಮಾಜಿಕ ಬದಲಾವಣೆಗಳಿಗೆ ತಕ್ಕಂತೆ ಪಠ್ಯಕ್ರಮವನ್ನು ತಾನೇ ರಚಿಸಿಕೊಳ್ಳುವ ಶೈಕ್ಷಣಿಕ ಸ್ವಾತಂತ್ರ್ಯ ಹೊಂದಿದೆ. ಈಗ ಅನೇಕ ಮಹಾವಿದ್ಯಾಲಯಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಸಲ್ಪಟ್ಟಿರುವುದು ಹೆಮ್ಮೆಯ ವಿಷಯ. ಇಂಥ ಒಂದು ಸ್ಥಾನ ದೊರಕುವಲ್ಲಿ ಶ್ರೀ ಕೋರೆಯವರ ಶ್ರಮ, ನಿಸ್ವಾರ್ಥ ಸೇವೆ, ದೂರದೃಷ್ಟಿಗಳ ಪಾತ್ರ ಗಣನೀಯ. ಇದು ಕೋರೆಯವರು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಿಗೆ ಸಿಕ್ಕ ಮನ್ನಣೆಯಾಗಿದೆ.

ಕೆ.ಎಲ್.ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ :

ಕೆ.ಎಲ್.ಇ. ಸಂಸ್ಥೆಯ ಮಕುಟದಂತೆ ಇರುವ ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರವು ೧೯೯೬ರಲ್ಲಿ ೧೨೦ ಕೋಟಿ ರೂ. ವೆಚ್ಚದಲ್ಲಿ ಸುಮಾರು ೧೦೦೦ ಹಾಸಿಗೆಯ ಅತ್ಯಾಧುನಿಕ ಬೃಹತ್ ಆಸ್ಪತ್ರೆ ಬೆಳಗಾವಿಯಲ್ಲಿ ತಲೆ ಎತ್ತಲು ಡಾ. ಕೋರೆಯವರು ಮಾಡಿದ ಅವಿರತ ಪ್ರಯತ್ನ ಪ್ರಶಂಸನೀಯ. ಅಂತೆಯೇ ಡಾ. ಕೋರೆಯವರ ಬಹುದೊಡ್ಡ ಸಾಧನೆ ಇದಾಗಿದೆ. ಇಂದು ೧೯೯೦ ಹಾಸಿಗೆಗೆ ವಿಸ್ತಾರಗೊಂಡು, ಎಲ್ಲ ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳನ್ನು ಹಾಗೂ ನುರಿತ ವೈದ್ಯರನ್ನು ಹೊಂದಿರುವ ಈ ಆಸ್ಪತ್ರೆಯ ಗುಣಮಟ್ಟ, ಸ್ವಚ್ಛತೆ ಹಾಗೂ ಶ್ರೇಷ್ಠ ಮಟ್ಟದ ಆರೋಗ್ಯ ಸೇವೆಯಿಂದ ವಿದೇಶಿಯರನ್ನು ಆಕರ್ಷಿಸುತ್ತದೆ. ಭಾರತದ ಪ್ರತಿಷ್ಠಿತ ಆಂಗ್ಲ ದೈನಿಕ ಪತ್ರಿಕೆಯಾದ 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು ಹೆಲ್ತ್‌ಕೇರ್ ಮ್ಯಾಗಝಿನ್ ನಡೆಸಿದ ಸರ್ವೆಯ ಪ್ರಕಾರ, ಕೆ.ಎಲ್.ಇ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವು ದಕ್ಷಿಣ ಭಾರತದ ಆಸ್ಪತ್ರೆಗಳಲ್ಲಿಯೇ ಅತ್ಯುತ್ತಮ ಆಸ್ಪತ್ರೆ ಎಂದು ಗುರುತಿಸಲ್ಪಟ್ಟಿದೆ.[೬೬] ಇದು ಕೋರೆಯವರ ಶ್ರಮದ ಫಲವಾಗಿ ಸಂಸ್ಥೆಗೆ ದೊರೆತ ಉತ್ಕೃಷ್ಟ ಪುರಸ್ಕಾರವಾಗಿದೆ. ೬ ವಿಶ್ವವಿದ್ಯಾಲಯಗಳ ಜೊತೆಗೆ ಕೆ.ಎಲ್.ಇ. ಆರೋಗ್ಯ ಸಂಶೋಧನಾ ಕೇಂದ್ರವು ಕಾರ್ಯನಿರತವಾಗಿದೆ. ಅಮೇರಿಕಾ ಮತ್ತು ಜಾಗತಿಕ ಆರೋಗ್ಯ ಸಂಸ್ಥೆಯಿಂದ ಅನುದಾನವನ್ನು ಪಡೆಯುತ್ತಿರುವ ಜೆ.ಎನ್.ಎಂ.ಸಿ. ಜತೆ ಈ ಸಂಶೋಧನಾ ಕೇಂದ್ರವು ಭಾರತದ ಕೆಲವೇ ಕೇಂದ್ರಗಳಲ್ಲಿ ಒಂದಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಇವುಗಳ ಪ್ರಗತಿಯ ಸಾಧನೆಯ ಹಿಂದೆ ಕೋರೆಯವರ ದೂರದೃಷ್ಟಿ, ಪರಿಶ್ರಮದ ಫಲ ಅರಿವಾಗದೇ ಇರದು. ಆದ್ದರಿಂದಲೇ ಇದೊಂದು ಮಾದರಿ ಸಂಸ್ಥೆಯಾಗಿ ಹೊರಹೊಮ್ಮಿದೆ. ಅಭಿವೃದ್ಧಿ ಹೇಗೆ ಪಡಿಸಬೇಕು ಎಂಬುದರಲ್ಲಿ ಕೋರೆಯವರು ಮಾದರಿಯಾಗಿದ್ದಾರೆ ಎಂಬ ಅಂಶ ಖಚಿತವಾಗಿ ತಿಳಿಯಬಹುದಾಗಿದೆ.

ರಾಷ್ಟ್ರದ ರಾಜಧಾನಿಗೆ ಕೆ.ಎಲ್.ಇ. ಸಂಸ್ಥೆಯ ವಿಸ್ತರಣೆಯ ಸಾಧನೆ :

ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ನಾಲ್ಕು ಎಕರೆ ಸ್ವಂತ ಜಾಗ ಖರೀದಿಸಿ, ೭೦ ಲಕ್ಷ ರೂಪಾಯಿಯನ್ನು

ಖರ್ಚುಮಾಡಿ, ಕೆ.ಎಲ್.ಇ. ಸಂಸ್ಥೆಯ ಬಸವ ಅಂತಾರ್ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದ ಹೆಗ್ಗಳಿಕೆ ಶ್ರೀ ಕೋರೆಯವರದು. ಇದರಿಂದ ಸಂಸ್ಥೆಯ ಸಾಮ್ರಾಜ್ಯವನ್ನು ರಾಜ್ಯ ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ತಲುಪಿಸಿದ ಕೀರ್ತಿ ಕೋರೆಯವರದ್ದಾಗಿದೆ. ೬೫ ಕರ್ನಾಟಕದ ಯಾವ ಸಂಸ್ಥೆಯೂ ಮಾಡದ ಸಾಧನೆ ಇದಾಗಿದೆ. ಕೆ.ಎಲ್.ಇ. ಸಂಸ್ಥೆಯ ಸಾಧಿಸಿದ ಈ ಸಾಧನೆ ಮಾತ್ರ ಸಕಲ ಕನ್ನಡಿಗರು ಹೆಮ್ಮೆಪಡುವಂತಾಗಿದೆ. ಈ ಕಾರಣಕ್ಕಾಗಿಯೇ ಕೋರೆಯವರ ಸ್ಥಾನ ವಿಶೇಷ ರಾಜಕೀಯ ನಾಯಕರ ಸ್ಥಾನದಲ್ಲಿ ನಿಲ್ಲುತ್ತದೆ. ಹನ್ನರಡನೆಯ ಶತಮಾನದಲ್ಲಿ ಸಮಾನತೆಯ ಸಂದೇಶ ಸಾರಿದ ವಿಶ್ವಗುರು ಬಸವಣ್ಣನವರ ಹೆಸರನ್ನು ಇಡುವುದರ ಮೂಲಕ ಸಕಲ ಕನ್ನಡಿಗರ ಅಭಿಮಾನದ ಪ್ರತೀಕವನ್ನಾಗಿಸಿ, ದೆಹಲಿಯಲ್ಲಿ ಕೆ.ಎಲ್.ಇ. ಸಂಸ್ಥೆಯು ಬೆಳೆದು ನಿಲ್ಲುವಂತೆ ಮಾಡಿದ ಕೋರೆಯವರು, ಕರ್ನಾಟಕದ ಸ್ವಾಭಿಮಾನದ ಪ್ರತೀಕವೆನಿಸಿದ್ದಾರೆ.[೬೭]

ವಿದೇಶಗಳಿಗೆ ಕೆ.ಎಲ್.ಇ. ಸಾಮ್ರಾಜ್ಯವನ್ನು ವಿಸ್ತರಿಸಿದ ಕೀರ್ತಿಗೆ ಪಾತ್ರರಾದವರು ಡಾ. ಪ್ರಭಾಕರ ಕೋರೆಯವರು :

ಇಡೀ ಕರ್ನಾಟಕ ರಾಜ್ಯವೇ ಅಭಿಮಾನಪಡುವಂತೆ ಭಾರತ ಹಿಂದುಳಿದ ದೇಶ, ಅಭಿವೃದ್ಧಿ ಹೊಂದುತ್ತಿರುವ ದೇಶ ಎನ್ನುವ ವಿದೇಶಿಯರು, ಕೆ.ಎಲ್.ಇ. ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಗಳನ್ನು ತಮ್ಮ ತಮ್ಮ ದೇಶಗಳಲ್ಲಿ ಪ್ರಾರಂಭಿಸುವಂತೆ ಬಾಯಿ ಬಿಟ್ಟು ಹೇಳುತ್ತಿರುವುದು ಭಾರತೀಯರಿಗೆ ಹೆಮ್ಮೆಪಡುವ ಸಂಗತಿಯಾಗಿದೆ. ವಿದೇಶಗಳಿಗೆ ನಮ್ಮ ದೇಶದ ಮುಖ್ಯಮಂತ್ರಿಗಳು ಕೈಗಾರಿಕೆ ಸ್ಥಾಪಿಸುವಂತೆ ದುಂಬಾಲು ಬೀಳುವ ಈ ಪರಿಸ್ಥಿತಿಯಲ್ಲಿ ಆ ದೇಶಗಳೇ ನಮ್ಮಲ್ಲಿ ಶಿಕ್ಷಣ ಕೇಂದ್ರ ತೆರೆಯುವಂತೆ ಕೆ.ಎಲ್.ಇ. ಸಂಸ್ಥೆಗೆ ಬಿನ್ನಹ ಸಲ್ಲಿಸುತ್ತಿರುವುದನ್ನು ಕಂಡಾಗ, ಡಾ. ಪ್ರಭಾಕರ ಕೋರೆಯವರ ಬಗೆಗೆ ಇಡೀ ದೇಶದ ಶೈಕ್ಷಣಿಕ ಲೋಕವೇ ಅಭಿಮಾನಪಡುವಂತಾಗಿದೆ. ಇಂದು ಕೆ.ಎಲ್.ಇ. ಸಂಸ್ಥೆಯು ಚೀನಾ ದೇಶದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ನರ್ಸಿಂಗ್ ಮಹಾ ವಿದ್ಯಾಲಯಗಳನ್ನು ಸ್ಥಾಪಿಸುತ್ತಿರುವುದು ಸಂಸ್ಥೆಯ ಇತಿಹಾಸದಲ್ಲೇ ಒಂದು ಸುವರ್ಣಗಳಿಗೆಯಾಗಿದೆ. ಇಂತಹ ಒಂದು ಸಾಹಸದ ಹಿಂದೆ ಕಾರ್ಯಾಧ್ಯಕ್ಷರ ಶ್ರಮ ಅರಿವಾಗದೇ ಇರದು. ಇದಕ್ಕೂ ಮೊದಲು ೧೯೯೮ರಲ್ಲಿ ಕೆ.ಎಲ್.ಇ. ಸಂಸ್ಥೆಯ ಆಶ್ರಯದಲ್ಲಿ ನೆಹರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನ ಕೇಂದ್ರದೊಂದಿಗೆ ಅಮೇರಿಕಾ ದೇಶದ 'ಇಲಿನಾಯ್ಸ್' ವಿಶ್ವವಿದ್ಯಾಲಯದೊಂದಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಶೈಕ್ಷಣಿಕ ಸಹಯೋಗ ಸಾಧಿಸಿದ ಸಾಧನೆ ವಿಶಿಷ್ಟವಾದದ್ದು. ನಂತರ ೨೦೦೦ರಲ್ಲಿ ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯ ಮತ್ತು ಸಂಡರ್‌ಲ್ಯಾಂಡ್ (ಯು.ಕೆ.) ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಸಂಯೋಗವನ್ನು ಸಾಧಿಸಿದ್ದು, ೨೦೦೨ರಲ್ಲಿ ಕೆ.ಎಲ್.ಇ. ಸಂಸ್ಥೆಯು ಮಲೇಶಿಯಾದ ಪೆರಿಕ್ ರಾಜ್ಯದ ಜೊತೆಗೆ ವೈದ್ಯಕೀಯ ಕ್ಷೇತ್ರದ ಅಭಿವೃದ್ಧಿಗಾಗಿ ಒಪ್ಪಂದ ಮಾಡಿಕೊಂಡಿರುವುದು ಹಾಗೂ ಅಮೇರಿಕಾ ದೇಶದ ೬ ಆರೋಗ್ಯ ವಿಶ್ವವಿದ್ಯಾಲಯಗಳ ಜೊತೆಗೆ ಕೆ.ಎಲ್.ಇ. ಆರೋಗ್ಯ ಸಂಶೋಧನ ಕೇಂದ್ರವು ಕಾರ್ಯನಿರತವಾಗಿರುವುದು.[೬೮] ಇಡೀ ಭಾರತೀಯರೇ ಹೆಮ್ಮೆ ಪಡುವ ಸಂಗತಿಯಾಗಿದೆ. ಈ ಮೂಲಕ ಕೆ.ಎಲ್.ಇ. ಸಂಸ್ಥೆಯ ಸಾಮ್ರಾಜ್ಯವನ್ನು ಸಾಗರದಾಚೆಗೆ ತಲುಪಿಸಿದ ಕೀರ್ತಿ ಶ್ರೀ ಕೋರೆಯವರದ್ದಾಗಿದೆ.

ಕರ್ನಾಟಕ ಯಾವುದೇ ಶಿಕ್ಷಣ ಸಂಸ್ಥೆಯು ಸಾಧಿಸದ ಈ ಸಾಧನೆ ಮಾತ್ರ ಕನ್ನಡಿಗರದು. ಶಿಕ್ಷಣ ಪ್ರೇಮಿಗಳು ಹೆಮ್ಮೆಪಟ್ಟು ಕೋರೆಯವರ ಸಾಮರ್ಥ್ಯವನ್ನು ಮುಕ್ತಕಂಠದಿಂದ ಪ್ರಶಂಸಿಸದೇ ಬೇರೆ ದಾರಿಯಿಲ್ಲ ಎನ್ನುವಂತೆ ಆಗಿದೆ. ಅಮೇರಿಕಾ ಮಿಚಿಗನ್ ಪಬ್ಲಿಕ್ ಶಾಲೆಯ ಪ್ರೊ. ಕೆನಿತ್ ವಾರ್ನರ್, ಡಾ. ಮಾರ್ಕ್ ವಿಲ್ಸನ್ ಹಾಗೂ ಅಮೇರಿಕಾ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಲಿಂಡಾ ರೈಟ್, ಕೆ.ಎಲ್.ಇ. ಸಂಸ್ಥೆಗೆ ಭೇಟಿ ನೀಡಿ ಕೆ.ಎಲ್.ಇ. ಸಂಸ್ಥೆಯ ಕಾರ್ಯಚಟುವಟಿಕೆಗಳಿಂದ ಪ್ರೇರಿತರಾಗಿ, ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಅಲ್ಲದೇ ಝಾಂಬಿಯಾ ದೇಶದ ಉಪಾಧ್ಯಕ್ಷರಾದ ಶ್ರೀಮಾನ್ ರೂಪಿಯಾ ಬಂಧಾ ಅಲ್ಲಿನ ಶಿಕ್ಷಣ ಸಚಿವರಾದ ಲುಂಗ್‌ವಾಂಗ್ ಕೆ.ಎಲ್.ಇ. ಸಂಸ್ಥೆಗೆ ಭೇಟಿ ಕೊಟ್ಟು, ಸಂಸ್ಥೆಯ ವೈದ್ಯಕೀಯ, ಇಂಜಿನಿಯರಿಂಗ್ ಕಾರ್ಯಚಟುವಟಿಕೆಗಳನ್ನು ಕಂಡು ಹೆಮ್ಮೆ ವ್ಯಕ್ತಪಡಿಸಿದ್ದಾರೆ. ತಮ್ಮ ದೇಶದಲ್ಲಿಯೂ ತಮ್ಮ ಸಂಸ್ಥೆಯ ಮಹಾವಿದ್ಯಾಲಯಗಳನ್ನು ಸ್ಥಾಪಿಸುವಂತೆ ಮನವಿ ಸಲ್ಲಿಸಿದ್ದು, ಕೆ.ಎಲ್.ಇ. ಸಂಸ್ಥೆಯ ಖ್ಯಾತಿಗೆ ಹಿಡಿದ ಕನ್ನಡಿಯಾಗಿದೆ.[೧೯]

ಕೆ.ಎಲ್.ಇ. ಸಂಸ್ಥೆಯ ಮೂಲಕ ಸಾಮಾಜಿಕ ಕಾರ್ಯ ಮಾಡುವುದರ ಮೂಲಕ ಸಂಸ್ಥೆಗೆ ಸಾಮಾಜಿಕ ಮುಖವನ್ನು ನೀಡಿದವರು ಶ್ರೀ ಕೋರೆಯವರು :

ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆಯಲ್ಲಿ (ಬೆಳಗಾವಿ) ೬೨೦ ಹಾಸಿಗೆಯನ್ನು ಪ್ರತ್ಯೇಕ ಉಚಿತ ಧರ್ಮಶಾಲೆ ಪ್ರಾರಂಭಿಸುವ ಮೂಲಕ, ಬಡ ರೈತರ, ಅಲ್ಪಸಂಖ್ಯಾತರ, ದಲಿತರ, ಬಡತನದ ರೇಖೆಗಳಿಗಿಂತ ಕೆಳಗೆ ಇರುವ ರೋಗಿಗಳಿಗೆ ಉಚಿತ ವೈದ್ಯಕೀಯ ಉಪಚಾರ ಕಲ್ಪಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಇಲ್ಲಿ ರೋಗಿಗಳಿಗೆ ಆಹಾರ, ಬಟ್ಟೆ, ವಸತಿ ಹಾಗೂ ವೈದ್ಯಕೀಯ ಸೇವೆಯನ್ನು ಸಂಪೂರ್ಣ ಉಚಿತವಾಗಿ ಒದಗಿಸುವ ಸಲುವಾಗಿ ಅನ್ನಪೂರ್ಣೇಶ್ವರಿ ನಿಧಿಯನ್ನು ಸ್ಥಾಪಿಸುವ ಮೂಲಕ ಸಾಮಾಜಿಕ ಕಾರ್ಯಮಾಡಿದ ಕೋರೆಯವರು, ಕೇವಲ ಶೈಕ್ಷಣಿಕ ಕ್ಷೇತ್ರ ಅಲ್ಲದೆ, ಸಾಮಾಜಿಕ ಕಾರ್ಯಮಾಡುತ್ತಿರುವ ಅವರ ಹೃದಯ ವೈಶಾಲ್ಯ ಹಾಗೂ ಮಾನವೀಯತೆಗೆ ಸಾಕ್ಷಿಯಾಗಿದೆ.[೨೦]

೨೦೦೫ರಲ್ಲಿ ಕೃಷ್ಣಾ ನದಿಗೆ ಪ್ರವಾಹ ಬಂದಾಗ ಕೋರೆಯವರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ, ಕೆ.ಎಲ್.ಇ. ಆಸ್ಪತ್ರೆಯ ತಂಡದೊಂದಿಗೆ ನಿರಾಶ್ರಿತರಿಗೆ ಉಚಿತ ವೈದ್ಯಕೀಯ ಸೌಲಭ್ಯ, ವಸತಿ, ಬಟ್ಟೆ, ಆಹಾರ ಒದಗಿಸುವ ಮೂಲಕ ಸಮಾಜದಲ್ಲಿ ತೊಂದರೆ ಇರುವ ಜನರಿಗೆ ಸಹಾಯ ಮಾಡಿದ ಪುಣ್ಯಕ್ಕೆ ಶ್ರೀ ಕೋರೆಯವರು ಪಾತ್ರರಾಗುತ್ತಾರೆ.[೨೧]

೨೦೦೯ರಲ್ಲಿ ಅಕಾಲಿಕವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಸುರಿದ ಭಾರಿ ಮಳೆಯಿಂದ ನೆರೆ ಉಂಟಾಯಿತು. ಅಪಾರ ಪ್ರಮಾಣದ ನಷ್ಟವಾದ ಸಂದರ್ಭದಲ್ಲಿ ಸ್ಪಂದಿಸಿದ ಕೋರೆಯವರು, ಅವರ ಮನಸ್ಸಿನಲ್ಲಿಯೇ ಮರುಕ ಹುಟ್ಟಿಕೊಂಡು ಅವರಿಗೆ ಸಹಾಯ ಮಾಡಬೇಕು ಎಂದು ನಿಶ್ಚಯಿಸಿದರು. ತಮ್ಮ ಸಂಸ್ಥೆಯ ಪರವಾಗಿ ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ೫೧ ಲಕ್ಷ ರೂ. ಮೊತ್ತದ ಪರಿಹಾರಧನದ ಚೆಕ್‌ನ್ನು ಸಂತ್ರಸ್ತರ ಪುನರ್ ವಸತಿ ಕಲ್ಪಿಸುವುದರ ಸಲುವಾಗಿ ಮಾನ್ಯ ಶ್ರೀ ಮುಖ್ಯಮಂತ್ರಿಗಳಾದ ಬಿ. ಎಸ್. ಯಡಿಯೂರಪ್ಪನವರಿಗೆ ಅರ್ಪಿಸಿದರು.[೨೨]

ಇಷ್ಟೊಂದು ದೊಡ್ಡ ಮೊತ್ತ ನೀಡಿದ್ದನ್ನು ಮುಖ್ಯಮಂತ್ರಿಯವರು ಸ್ವೀಕರಿಸಿ, ಕೆ.ಎಲ್.ಇ. ಸಂಸ್ಥೆಯ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಇದು ಕೋರೆಯವರು ಸಂಸ್ಥೆಯ ಮೂಲಕ ಸಮಾಜದಲ್ಲಿನ ತೊಂದರೆಗೊಳಗಾದ ಜನವರ್ಗಗಳಿಗೆ ಸ್ಪಂದಿಸಿ ಸಹಾಯ ಮಾಡುವ ಮೂಲಕ ಕೆ.ಎಲ್.ಇ. ಸಂಸ್ಥೆಗೆ ಸಾಮಾಜಿಕ ಮಾನವೀಯತೆ ಮುಖವನ್ನು ಒದಗಿಸಿದ ಕೀರ್ತಿ ಕೋರೆಯವರದ್ದಾಗಿದೆ.

ಶ್ರೀ ಕೋರೆಯವರ ನೇತೃತ್ವದಲ್ಲಿ ನಡೆದ ಸಮ್ಮೇಳನಗಳ ಮೂಲಕ ಕೆ.ಎಲ್.ಇ. ಸಂಸ್ಥೆಯ ಕೀರ್ತಿ ಹೆಚ್ಚಿತು :

ಡಾ. ಪ್ರಭಾಕರ ಕೋರೆಯವರದು ಅದ್ಭುತ ಸಂಘಟನಾ ಶಕ್ತಿ ಎನ್ನುವುದು ಅವರ ನೇತೃತ್ವದಲ್ಲಿಯೆ ಕೆ.ಎಲ್.ಇ. ಸಂಸ್ಥೆಯ ಸಹಾಯದಿಂದ ಜರುಗಿದ ಅದ್ದೂರಿ ಸಮ್ಮೇಳನಗಳೇ ಸಾಕ್ಷಿಯಾಗಿವೆ. ಅವುಗಳನ್ನು ಯಶಸ್ವಿಯಾಗಿ ಸಂಘಟಿಸುವ ಮೂಲಕ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸುವಂತೆ ಮಾಡಿದ್ದಾರೆ. ೧೯೯೨ರಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯ ೨೧ನೇ ಅಧಿವೇಶನವನ್ನು ಬೆಳಗಾವಿಯಲ್ಲಿ ಅದ್ದೂರಿಯಾಗಿ ಸಂಘಟಿಸಿದ ಹಿರಿಮೆ ಕೋರೆಯವರದ್ದಾಗಿದೆ. ಅಂದಿನ ಉಪರಾಷ್ಟ್ರಪತಿ ಶಂಕರ ದಯಾಳ್ ಶರ್ಮಾರನ್ನು ಅಧಿವೇಶನಕ್ಕೆ ಕರೆತಂದು ಕಂಡು ಹಲವಾರು ಸಂಸ್ಥೆಯವರು ಕೆ.ಎಲ್.ಇ. ಸಂಸ್ಥೆಯನ್ನು ಹಾಗೂ ಕೋರೆಯವರ ಸಂಘಟನಾ ಶಕ್ತಿಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ನಂತರ ೧೯೯೯ರಲ್ಲಿ ಅಖಿಲ ಭಾರತ ೫ನೇ ಶರಣ ಸಾಹಿತ್ಯ ಸಮ್ಮೇಳನ, ೨೦೦೧ರಲ್ಲಿ ಕೊಣ್ಣೂರು ನಾಟಕ ಕಂಪನಿಯ ಶತಮಾನೋತ್ಸವ, ೨೦೦೩ರಲ್ಲಿ ಅಖಿಲ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನಗಳ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಅದ್ದೂರಿಯಾಗಿ ಅಚ್ಚುಕಟ್ಟುತನದಿಂದ ಯಶಸ್ವಿಗೊಳಿಸಿದ ಶ್ರೇಯಸ್ಸು ಕೋರೆಯವರಿಗೆ ಸಲ್ಲಬೇಕು. ಅಲ್ಲದೆ, ಅದರ ಬೆನ್ನೆಲುಬಾಗಿ ದುಡಿದ ಸಂಸ್ಥೆಯ ಎಲ್ಲ ಸಿಬ್ಬಂದಿಯನ್ನು ಎಲ್ಲ ಗಣ್ಯರು ಮುಕ್ತವಾಗಿ ಪ್ರಶಂಸಿಸಿದ್ದಾರೆ. ಹೀಗೆ ಕೆ.ಎಲ್.ಇ. ಸಂಸ್ಥೆಗೆ ಗೌರವ ಪ್ರಾಪ್ತಿಯಾಗುವಂತೆ ಮಾಡಿದ್ದಾರೆ ಕೋರೆಯವರು.[೨೩] ೨೦೦೬ರಲ್ಲಿ ಐತಿಹಾಸಿಕ ವಿಧಾನಮಂಡಲ ಅಧಿವೇಶನವನ್ನು ಒಂದು ಸವಾಲೆಂಬಂತೆ ಸ್ವೀಕರಿಸಿ, ಕೇವಲ ೧೦ ದಿವಸಗಳಲ್ಲಿ ಒಂದು ಸರ್ಕಾರಕ್ಕೂ ಕಷ್ಟವಾಗುವ ಕೆಲಸವನ್ನು ಕೋರೆಯವರ ಮುಂದಾಳತ್ವದಲ್ಲಿ ಕೆ.ಎಲ್.ಇ. ಸಂಸ್ಥೆಯ ಅಧಿಪತ್ಯದಲ್ಲಿ ವಿಧಾನ ಮಂಡಲದ ಉಭಯ ಸದನಗಳ ಐತಿಹಾಸಿಕ ಅಧಿವೇಶನವನ್ನು ಸಂಘಟಿಸಿದ್ದು ಕೋರೆಯವರ ಸಂಘಟನಾ ಶಕ್ತಿಯ ಜ್ವಲಂತ ನಿದರ್ಶನ.[೨೪] ನಂತರ ೨೦೦೮ರಲ್ಲಿಯೂ ಎರಡನೇ ಬಾರಿ ವಿಧಾನ ಮಂಡಲ ಅಧಿವೇಶನವನ್ನು ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಆತಿಥ್ಯದಲ್ಲಿ ಕೋರೆಯವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿಸಿದೆ.

ಈ ಕಾರ್ಯದಿಂದ ಇಡಿ ಉತ್ತರ ಕರ್ನಾಟಕದ ಸಂಘ, ಸಂಸ್ಥೆಗಳು ದೇಶದಲ್ಲಿಯೇ ಎಂಥ ಅದ್ಭುತವಾದವುಗಳು ಎಂಬುದನ್ನು ಕೋರೆಯವರು ಕೆ.ಎಲ್.ಇ. ಸಂಸ್ಥೆಯ ಮುಖಾಂತರ ತೋರಿಸಿಕೊಟ್ಟಿದ್ದಾರೆ. ಅಧಿವೇಶನ ನಡೆಸಿದ ಕೆಲಸ ಸಂಸ್ಥೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟ ಘಳಿಗೆಯಾಗಿದೆ. ಇಲ್ಲಿ ಗಮನಿಸುವ ಅಂಶ ಏನೆಂದರೆ, ಇಂತಹ ಅವಕಾಶಕ್ಕಾಗಿ ಹಲವಾರು ಸಂಸ್ಥೆಗಳು ಸರ್ಕಾರದ ಬಳಿ ತೆರಳುವ ಸನ್ನಿವೇಶದಲ್ಲಿ, ಸರ್ಕಾರವೇ ಸಂಸ್ಥೆಗೆ ಇಂತಹ ಕಾರ್ಯಕ್ರಮ ಸಂಘಟಿಸುವಂತೆ ವಿನಂತಿಸಿಕೊಳ್ಳುವುದನ್ನು ನೋಡಿದಾಗ ಕೆ.ಎಲ್.ಇ. ಸಂಸ್ಥೆಯ

ಸಾಮರ್ಥ್ಯ ಹಾಗೂ ಕೋರೆಯವರ ನಾಯಕತ್ವದ ಬಗ್ಗೆ ತಿಳಿಯದೆ ಇರದು. ಮುಖ್ಯಮಂತ್ರಿಗಳಿಂದ ಹಿಡಿದು ಮಾಧ್ಯಮದವರು, ಜನಪ್ರತಿನಿಧಿಗಳು, ಮಠಾಧೀಶರು, ಇತರ ಕ್ಷೇತ್ರಗಳ ಗಣ್ಯರು ಕೋರೆಯವರ ಸಂಘಟನಾ ಶಕ್ತಿಯನ್ನು ಕಂಡು ಮುಕ್ತವಾಗಿ ಪ್ರಶಂಸಿಸಿದ್ದಾರೆ. ಸಂಸ್ಥೆಯ ಕೀರ್ತಿಯನ್ನು ಶಿಖರಕ್ಕೆ ಏರಿಸುವ ಮೂಲಕ ಮತ್ತಷ್ಟು ಜನಪ್ರಿಯಗೊಳ್ಳಲು ಕಾರಣರಾದರು. ಉತ್ತರ ಕರ್ನಾಟಕದಲ್ಲಿ ಯಾವುದೇ ಭಾಗದಲ್ಲಿ ಏನಾದರು ದೊಡ್ಡ ಪ್ರಮಾಣದ ಕಾರ್ಯಕ್ರಮ, ಸಮ್ಮೇಳನ ನಡೆಸಬೇಕೆಂದರೆ ಅದಕ್ಕೆ ಕೋರೆಯವರ ನಾಯಕತ್ವ ಹಾಗೂ ಕೆ.ಎಲ್.ಇ. ಸಂಸ್ಥೆಯು ಇರಲೇಬೇಕು ಎನ್ನುವಷ್ಟರ ಮಟ್ಟಿಗೆ ಬೆಳೆದಿದೆ. ಇಂಥ ಸಮಾರಂಭ ಯಶಸ್ವಿಯಾಗಿದೆ ಎಂದರೆ ಅದರ ಹಿಂದೆ ಕೆ.ಎಲ್.ಇ. ಸಂಸ್ಥೆಯ ಪಾತ್ರ ಇರಲೇಬೇಕು ಎಂದು ಹೇಳುವಂತಾಗಿದೆ. ಅದೇ ರೀತಿ ೨೦೦೯ರಲ್ಲಿ ಕರ್ನಾಟಕ ಸರ್ಕಾರ ನೀಡುವ ಆದರ್ಶ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಪ್ರಥಮ ಬಾರಿಗೆ ರಾಜಧಾನಿಯಿಂದ ಹೊರಗೆ ನಡೆಸುವ ಜವಾಬ್ದಾರಿಯನ್ನು ಕೋರೆಯವರು ಕೆ.ಎಲ್.ಇ. ಸಂಸ್ಥೆಯಲ್ಲಿಯೇ ಅದ್ದೂರಿಯಾಗಿ ಸಂಘಟಿಸಿದರು. ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಟಿ. ಎನ್. ಚತುರವೆದಿಯವರು ೩೦ ಜನ ಶಿಕ್ಷಕರ ಸೇವೆಯನ್ನು ಗುರುತಿಸಿ ಗೌರವಿಸಿದರು. ಇದು ಕೆ.ಎಲ್.ಇ. ಸಂಸ್ಥೆಯ ಇತಿಹಾಸದಲ್ಲಿ ಒಂದು ಮಹತ್ವದ ಘಳಿಗೆಗೆ ಸಾಕ್ಷಿಯಾಯಿತು.[೭೫] ಈ ರೀತಿಯಾದ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸುವುದರ ಮೂಲಕ ಕೆ.ಎಲ್.ಇ. ಸಂಸ್ಥೆಯು ಎಂತಹ ಸವಾಲುಗಳನ್ನು ಸ್ವೀಕರಿಸಬಲ್ಲದು ಎಂಬುದನ್ನು ತೋರಿಸಿಕೊಡುವ ಮೂಲಕ ಕೆ.ಎಲ್.ಇ. ಸಂಸ್ಥೆಯ ಹೆಸರನ್ನು ಅಮರಗೊಳಿಸಿದ ಕೀರ್ತಿ ಪ್ರಭಾಕರರವರಿಗೆ ಸಲ್ಲುತ್ತದೆ.

ಕೆ.ಎಲ್.ಇ. ಸಂಸ್ಥೆಯ ಐತಿಹಾಸಿಕ ಸಮಾರಂಭಗಳನ್ನು ಸಂಘಟಿಸಿ, ಆ ಮೂಲಕ ರಾಷ್ಟ್ರದ, ರಾಜ್ಯದ ನಾಯಕರುಗಳನ್ನು ಹಾಗೂ ಗಣ್ಯರನ್ನು ಆಮಂತ್ರಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಕೀರ್ತಿ ಡಾ. ಪ್ರಭಾಕರ ಕೋರೆಯವರದು :

ಕೆ.ಎಲ್.ಇ. ಸಂಸ್ಥೆಯ ಅಂಗ ಸಂಸ್ಥೆಗಳ ಬೆಳ್ಳಿ ಹಬ್ಬದ ಸಮಾರಂಭಗಳನ್ನು ಸಂಸ್ಥೆಗಳ ನೂತನ ಮಹಾವಿದ್ಯಾಲಯಗಳ ಉದ್ಘಾಟನೆ ಹಾಗೂ ಕಟ್ಟಡಗಳ ಪ್ರಾರಂಭೋತ್ಸವ ಇಂತಹ ಹಲವಾರು ಸಮಾರಂಭಗಳಿಗೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯದ ರಾಜ್ಯಪಾಲರು, ಮುಖ್ಯಮಂತ್ರಿಗಳು, ಕೇಂದ್ರದ ಹಾಗೂ ರಾಜ್ಯದ ಸಚಿವರನ್ನು, ರಾಷ್ಟ್ರೀಯ, ಅಂತರಾಷ್ಟ್ರೀಯ, ರಾಜ್ಯದಲ್ಲಿನ ವಿಶೇಷ ರಂಗಗಳಲ್ಲಿ ಪರಿಣಿತರನ್ನು, ಸೇವೆಸಲ್ಲಿಸಿದವರನ್ನು ಆಮಂತ್ರಿಸಿ, ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಇದರ ಕೀರ್ತಿ ಕೋರೆಯವರದಾಗಿದೆ.

೧. ೧೯೮೪ರಲ್ಲಿ ಕೆ.ಎಲ್.ಇ. ಸಂಸ್ಥೆಯ ದಂತ ವಿಜ್ಞಾನ ಮಹಾವಿದ್ಯಾಲಯ ಕಟ್ಟಡದ ಅಡಿಗಲ್ಲು ಸಮಾರಂಭಕ್ಕೆ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ ಹಾಗೂ ಮಂತ್ರಿಗಳಾದ ಎಸ್.ಆರ್.ಬೊಮ್ಮಾಯಿ ಆಗಮಿಸಿದ್ದರು.

೨. ೧೯೮೭ರಲ್ಲಿ ಕೆ.ಎಲ್.ಇ. ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಉದ್ಘಾಟನೆಗೆ ಅಂದಿನ ಭಾರತದ ರಾಷ್ಟ್ರಪತಿಗಳಾದ ಶ್ರೀ ಗ್ಯಾನಿ ಜೈಲ್‌ಸಿಂಗ್ ಆಗಮಿಸಿದ್ದರು.

೩. ೧೯೮೮ರಲ್ಲಿ ಜೆ.ಎನ್. ಮೆಡಿಕಲ್ ಕಾಲೇಜಿನ ಸಿಲ್ವರ್ ಜುಬ್ಲಿ ಸಮಾರಂಭಕ್ಕೆ ಅಂದಿನ ಭಾರತದ ಪ್ರಧಾನಮಂತ್ರಿಗಳಾದ ಶ್ರೀ ರಾಜೀವಗಾಂಧಿ ಆಗಮಿಸಿದ್ದರು.

೪. ಕೆ.ಎಲ್.ಇ. ಸಂಸ್ಥೆಯ ಅಂಗ ಸಂಸ್ಥೆಗಳಿಗೆ ಆಜೀವ ಸಂಸ್ಥಾಪಕ ಸದಸ್ಯರ ನಾಮಕರಣ ಸಮಾರಂಭಕ್ಕೆ ರಾಷ್ಟ್ರ ನಾಯಕ ಶ್ರೀ ಎಸ್. ನಿಜಲಿಂಗಪ್ಪ ಆಗಮಿಸಿದ್ದರು.

೫. ೧೯೯೦ರಲ್ಲಿ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಕೋರೆಯವರ ನೇತೃತ್ವದಲ್ಲಿ ನಡೆದ ಇಪ್ಪತ್ತೊಂದನೆಯ ಅಖಿಲ ಭಾರತ ವೀರಶೈವ ಮಹಾ ಅಧಿವೇಶನಕ್ಕೆ ಅಂದಿನ ಉಪರಾಷ್ಟ್ರಪತಿಗಳಾದ ಶಂಕರ ದಯಾಳ್ ಶರ್ಮಾ ಆಗಮಿಸಿದ್ದರು.

೬. ಲಿಂ. ಸಿ. ಸಿ. ಬಸವನಾಳರ ಜನ್ಮ ಶತಾಬ್ದಿ ಸಮಾರಂಭಕ್ಕೆ ಪೂಜ್ಯ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ತೋಂಟದಾರ್ಯ ಮಠ ಗದಗ ಇವರು ದಯಮಾಡಿಸಿದ್ದರು.

೭. ೧೯೯೬ರಲ್ಲಿ ಸಾವಿರ ಹಾಸಿಗೆಗಳ ಅತ್ಯಾಧುನಿಕ ಬೃಹತ್ ಕೆ.ಎಲ್.ಇ. ಆಸ್ಪತ್ರೆಯನ್ನು ಅಂದಿನ ಪ್ರಧಾನ ಮಂತ್ರಿಗಳಾದ ಪಿ. ವ್ಹಿ. ನರಸಿಂಹರಾವ್ ಉದ್ಘಾಟಿಸಿದರು.

೮. ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕ ದಿನಾಚರಣೆ ಪ್ರಾರಂಭೋತ್ಸವಕ್ಕೆ ಡಾ. ಎಮ್. ಎಮ್. ಕಲಬುರ್ಗಿ, ವಿಶ್ರಾಂತ ಕುಲಪತಿಗಳು ಆಗಮಿಸಿದ್ದರು.

೯. ಶಿ. ಶಿ. ಬಸವನಾಳ ಜೀವನ ಮತ್ತು ಸಾಧನೆ ಡಾ. ಮಹೇಶ ಚಿಂತಾಮಣಿ ಅವರಿಂದ ರಚಿತವಾದ ಮಹಾಪ್ರಬಂಧ ಪ್ರಕಟಣೆ, ಡಾ. ಎಂ. ಎಂ. ಕಲಬುರ್ಗಿ ಕನ್ನಡ ಪ್ರಾಧ್ಯಾಪಕರು ಕರ್ನಾಟಕ ವಿಶ್ವವಿದ್ಯಾಲಯ ಇವರಿಂದ.

೧೦. ಕೆ.ಎಲ್.ಇ. ವಾರ್ತಾಪತ್ರಿಕೆಯ ಉದ್ಘಾಟನೆ ಶ್ರೀ ಕೆ. ಶಾಮರಾವ್, ಚೆನ್ನವೀರ ಕಣವಿಯವರಿಂದ.

ಕೆ.ಎಲ್.ಇ. ಸಂಸ್ಥೆಯ ಅಂಗ ಸಂಸ್ಥೆಗಳ ಬೆಳ್ಳಿ ಹಬ್ಬಗಳು ಶ್ರೀ ಕೋರೆಯವರ ನಾಯಕತ್ವದಲ್ಲಿ ನಡೆದ ಸಮಾರಂಭಗಳು.

೧. ೧೯೮೮ರಲ್ಲಿ ಕೆ.ಎಲ್.ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, ಬೆಂಗಳೂರು ಇದರ ಬೆಳ್ಳಿ ಹಬ್ಬದ ಅತಿಥಿಗಳಾಗಿ ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ಎಚ್. ಡಿ. ದೇವೇಗೌಡರು ಆಗಮಿಸಿದ್ದರು.

೨. ೧೯೯೧ರಲ್ಲಿ ಗುದ್ಲೆಪ್ಪ ಹಳ್ಳಿಕೇರಿ ಜೆ. ಎಚ್. ಮಹಾವಿದ್ಯಾಲಯ ಹಾವೇರಿ, ಇದರ ಬೆಳ್ಳಿ ಹಬ್ಬದ ಆಚರಣೆಗೆ ಮುಖ್ಯ ಅತಿಥಿಗಳಾಗಿ ಶ್ರೀ ವೀರಪ್ಪ ಮೊಯಿಲಿ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ ಹಾಗೂ ಡಾ. ಸಿದ್ಧಲಿಂಗ ಮಹಾ ಸ್ವಾಮಿಗಳು ಗದಗ ಅವರು ಸಾನಿಧ್ಯ ವಹಿಸಿದ್ದರು.

೩. ೧೯೯೫ರಲ್ಲಿ ಜಿ. ಎ. ಬಾಗೇವಾಡಿ ಕಾಲೇಜು, ನಿಪ್ಪಾಣಿ. ಈ ಕಾಲೇಜಿನ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕೇಂದ್ರ ಸರ್ಕಾರದ ಶ್ರೀ ಜಿ. ಶಂಕರಾನಂದ ಹಾಗೂ ಶ್ರೀ ಶರದ್ ಪವಾರ್ ಕರ್ನಾಟಕದ ಸಚಿವರುಗಳಾದ ಶ್ರೀ ಆರ್. ವಿ. ದೇಶಪಾಂಡೆ, ಶ್ರೀ ಅಜಯ ಕುಮಾರ ಸರನಾಯಕ.

೪. ೧೯೯೫ರಲ್ಲಿ ಅಥಣಿ ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮಿಜಿ ಮಹಾವಿದ್ಯಾಲಯದಲ್ಲಿ ಜರುಗಿದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶಿಕ್ಷಣ ಸಚಿವರಾದ ಡಿ. ಮಂಜುನಾಥ್, ಶ್ರೀಮತಿ ಲೀಲಾದೇವಿ ಪ್ರಸಾದ, ಭಾಗವಹಿಸಿದ್ದರು.

೫. ೧೯೯೭ ಶ್ರೀ ಬಸವಪ್ರಭು ಕೋರೆ ಮಹಾವಿದ್ಯಾಲಯ ಚಿಕ್ಕೋಡಿ, ಮುಖ್ಯ ಅತಿಥಿಗಳು ಶ್ರೀ ರಮೇಶ ಜಿಗಜಣಗಿ, ಶ್ರೀ ಉಮೇಶ ಕತ್ತಿ , ಶ್ರೀಮತಿ ಲೀಲಾದೇವಿ ಪ್ರಸಾದ, ಅಧ್ಯಕ್ಷತೆ ಶಿವಾನಂದ ಕೌಜಲಗಿ ಅವರದಾಗಿತ್ತು.

೬. ೧೯೯೮ರಲ್ಲಿ ಶ್ರೀ ಬಿ. ವಿ. ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜು ಹುಬ್ಬಳ್ಳಿ, ಇದರ ಸುವರ್ಣ ಮಹೋತ್ಸವ ಸಮಾರಂಭದ ಉದ್ಘಾಟನೆಯ ಮುಖ್ಯ ಅತಿಥಿಗಳಾಗಿ ವಿ. ತಾಂ. ವಿ.ವಿ.ಯ ಕುಲಪತಿ ಡಾ. ಎಸ್. ರಾಜಶೇಖರಯ್ಯ ಭಾಗವಹಿಸಿದ್ದರು.

೭. ೧೯೯೦ರಲ್ಲಿ ಚಿಕ್ಕೋಡಿ ಚಿದಾನಂದ ಕೋರೆ ಪಾಲಿಟೆಕ್ನಿಕ್‌ನ ನೂತನ ಕಟ್ಟಡದ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಅವರಿಂದ ಮಾಡಿಸಯಿತು.

೮. ೧೯೯೬ರಲ್ಲಿ ಮುಖ್ಯಮಂತ್ರಿಗಳಾದ ಜೆ. ಎಚ್. ಪಟೇಲ್ ಕೆ.ಎಲ್.ಇ. ಆಸ್ಪತ್ರೆಗೆ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಅದೇ ರೀತಿ ೨೦೦೨ರಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಮ್. ಕೃಷ್ಣ ರಾಜ್ಯದ ರಾಜ್ಯಪಾಲರಾದ ಶ್ರೀಮತಿ ರಮಾದೇವಿ, ಕನ್ನಡ ಸಂಸ್ಕೃತಿ ಇಲಾಖೆಯ ಸಚಿವೆ ರಾಣಿ ಸತೀಶ ಸಂಸ್ಥೆಯ ವಿವಿಧ ಕಾರ್ಯಕ್ರಮಗಳನ್ನು ಉದ್ಘಾಟಿಸಿ, ಸಂಪೂರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.[೭೬] ದಿನಾಂಕ ೨೫-೬-೨೦೦೪ರಂದು ಕೆ.ಎಲ್.ಇ. ಸಂಸ್ಥೆಯ ಹಾಗೂ ಕೋರೆಯವರ ಮಹತ್ವಾಂಕ್ಷೆಯ ದಿವಸವಾಗಿತ್ತು. ಧರ್ಮಶಾಲೆ, ಉಚಿತ ವೈದ್ಯಕೀಯ ಸೇವೆ ಹಾಗೂ ಎಮ್.ಆರ್.ಆಯ್. ಸಿಟಿ ಸ್ಕ್ಯಾನ್ ಆಗಿನ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರು ಕಿಡ್ನಿ ಫೌಂಡೇಶನ್‌ದ ಉದ್ಘಾಟನೆ ಕಾರ್ಯ ಮಾಡಿದರು. ಇದಕ್ಕೆಲ್ಲ ಕೋರೆಯವರ ಸಮರ್ಥ ನಾಯಕತ್ವ ಕಾರಣವೆಂದು ಮುಕ್ತವಾಗಿ ಪ್ರಶಂಸಿಸಿದರು.

ದಿನಾಂಕ ೧೨-೯-೦೬ರಂದು ಅಂದಿನ ಕೇಂದ್ರ ನಾಗರೀಕ ವಿಮಾನ ಸಚಿವರಾದ ಪ್ರಫುಲ್ ಕುಮಾರ ಪಟೇಲ ಆಗಮಿಸಿ, ನಿಪ್ಪಾಣಿ ಆಧುನಿಕ ಔಷಧಿ ಮಹಾವಿದ್ಯಾಲಯವನ್ನು ಉದ್ಘಾಟಿಸಿ, ಕೆ.ಎಲ್.ಇ. ಸಂಸ್ಥೆಯ ಪ್ರಗತಿಯನ್ನು ಹಾಗೂ ಕಾರ್ಯಾಧ್ಯಕ್ಷರಾದ ಕೋರೆಯವರನ್ನು ಮುಕ್ತ ಮನಸ್ಸಿನಿಂದ ಮೆಚ್ಚಿಗೆ ವ್ಯಕ್ತಪಡಿಸಿದರು.

ದಿನಾಂಕ ೨೩ ಜುಲೈ ೨೦೦೬ರಂದು ಗೋವಾ ರಾಜ್ಯದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣದ ಸಚಿವರಾದ ಮಾನ್ಯಶ್ರೀ ದಯಾನಂದ ನಾರ್ವೇಕರ ಅವರು ಕೆ.ಎಲ್.ಇ. ಆಸ್ಪತ್ರೆಯ 'ಡಿಜಿಟಲ್ ಕ್ಯಾಥ್ ಲ್ಯಾಬ್' ಉದ್ಘಾಟಿಸಿದರು.

೧೦ ಏಪ್ರಿಲ್ ೨೦೦೬ರಂದು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ವಿ. ಎಸ್. ಆಚಾರ್ಯ, ಕೆ.ಎಲ್.ಇ. ಆಸ್ಪತ್ರೆಯ ಟ್ಯಾಗೋರ್ ಇ.ಎಮ್.ಎಸ್. ಸೌಕರ್ಯವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್‌ನ ಸದಸ್ಯರಾದ ಶ್ರೀ ಡಾ. ಎಮ್.ಪಿ. ನಾಡಗೌಡ ಉಪಸ್ಥಿತರಿದ್ದರು.

೧೪ ಫೆಬ್ರವರಿ ೨೦೦೬ರಂದು ಕೆ.ಎಲ್.ಇ. ಆಸ್ಪತ್ರೆಯ ವೈದ್ಯಕೀಯ ದಾಖಲೆಯ ಬಯೋ ವಿಭಾಗವನ್ನು ಇಸ್ರೋದ ವಿಜ್ಞಾನಿ ಡಾ. ಯು. ಆರ್. ರಾವ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಬಾಲವೀರ ರೆಡ್ಡಿ ಉಪಸ್ಥಿತರಿದ್ದರು. ೨೫ ಜನೇವರಿ ೨೦೦೬ರಂದು ಅಮೇರಿಕಾದ ಡಾ. ಈಸ್ಪೆನ್ಲಿಯವರು ಕೆ.ಎಲ್.ಇ.ಯ ಟೆಲಿಮೆಡಿಸಿನ್ ಸೌಕರ್ಯವನ್ನು ಉದ್ಘಾಟಿಸಿದರು.

ಅದೇ ರೀತಿಯಾಗಿ ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾದ ಶ್ರೀ ವಾಯ್. ಎಸ್. ರಾಜಶೇಖರ ರೆಡ್ಡಿಯವರು ಕೆ.ಎಲ್.ಇ. ದಂತ ವಿಜ್ಞಾನ ಮಹಾವಿದ್ಯಾಲಯಕ್ಕೆ ಶ್ರೀ ವಿಶ್ವನಾಥ ಕತ್ತಿ ಎಂದು ಅವರ ಹೆಸರನ್ನು ನಾಮಕರಣ ಮಾಡಿದ್ದಾರೆ.

೨೦೦೬ರಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಚ್. ಡಿ. ಕುಮಾರಸ್ವಾಮಿ ಅವರು ಸಂಸ್ಥೆಗೆ ಭೇಟಿಕೊಟ್ಟು, ಕೋರೆಯವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು. ಹಾಗೆಯೇ ಸಂಸ್ಥೆಯು ಬೆಳಗಾವಿಯ ಅಧಿವೇಶನಕ್ಕೆ ನೀಡಿದ ಸಹಕಾರವನ್ನು ಮುಕ್ತಕಂಠದಿಂದ ಪ್ರಶಂಸಿಸಿ, ಕೋರೆಯವರನ್ನು ಅಭಿನಂದಿಸಿದರು.

ಹೀಗೆ ನಾಡಿನ ಸಾಹಿತಿಗಳಾದ ಶ್ರೀ ಯು. ಆರ್. ಅನಂತಮೂರ್ತಿ, ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪನವರು, ಬರಗೂರು ರಾಮಚಂದ್ರಪ್ಪ, ಚನ್ನವೀರ ಕಣವಿ, ಶ್ರೀ ನಾಗತಿಹಳ್ಳಿ ಚಂದ್ರಶೇಖರ, ಶ್ರೀ ಪಾಟೀಲ ಪುಟ್ಟಪ್ಪ, ಶ್ರೀ ಏಣಗಿ ಬಾಳಪ್ಪನವರು, ಗಾನವಿದೂಷಿ ಗಂಗೂಬಾಯಿ ಹಾನಗಲ್, ಚಿತ್ರ ತಾರೆಯರಾದ ಡಾ. ರಾಜಕುಮಾರ, ಶ್ರೀ ವಿಷ್ಣುವರ್ಧನ್, ಅಂಬರೀಷ್, ಜಯಪ್ರದಾ, ಶ್ರೀನಾಥ್, ಬಿ. ಸಿ. ಪಾಟೀಲ, ಮುಖ್ಯಮಂತ್ರಿ ಚಂದ್ರು, ರಾಘವೇಂದ್ರ ಹಾಗೂ ಪುನಿತ್ ರಾಜಕುಮಾರ್, ಹಿಂದಿ ನಟ ಸುನೀಲದತ್ತ, ಖ್ಯಾತ ಪತ್ರಕರ್ತರಾದ ವಿಶ್ವೇಶ್ವರ ಭಟ್, ಅಲ್ಲದೇ ಅಮೇರಿಕೆಯ ಸಂಶೋಧಕರಾದ ಪ್ರೊ. ಕೆನಿತ್ ವಾರ್ನರ್, ಡಾ. ಮಾರ್ಕ್ಸ್‌ವಿಲ್ಸನ್ ಹಾಗೂ ಝಾಂಬಿಯಾ ದೇಶದ ಉಪಾಧ್ಯಕ್ಷರಾದ ಶ್ರೀಮಾನ್ ರೂಪಿಯಾ ಬಂದಾ, ಆ ದೇಶದ ಶಿಕ್ಷಣ ಸಚಿವರಾದ ಶ್ರೀ ಲುಂಗ್‌ಲಾಂಗ್ವ ಇತರ ಪ್ರಮುಖರು ಭೇಟಿ ನೀಡಿ, ಸಂಸ್ಥೆಯ ಸಾಧನೆ ಹಿಂದಿರುವ ಕೋರೆಯವರ ಶ್ರಮವನ್ನು ಮುಕ್ತವಾಗಿ ಪ್ರಶಂಸಿಸಿದ್ದಾರೆ. ನಾಡಿನ ಶ್ರೇಷ್ಠ ಮಠಗಳ ಮಠಾಧೀಶರಾದ ಶ್ರೀಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠದ ಡಾ. ಶಿವಕುಮಾರ ಮಹಾಸ್ವಾಮಿಗಳು, ಚಿತ್ರದುರ್ಗದ ಶರಣರು, ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರ ಸ್ವಾಮಿಗಳು, ಶ್ರೀ ರಂಭಾಪುರಿ, ಕಾಶಿ, ಉಜ್ಜಯಿನಿ, ಶ್ರೀಶೈಲ, ಕೇದಾರ ಜಗದ್ಗುರುಗಳು ಹಾಗೂ ತರಳಬಾಳು ಜಗದ್ಗುರುಗಳು, ಬೆಳಗಾವಿ ನಾಗನೂರು ಶ್ರೀಗಳು, ಮುಗಳಖೋಡ ಜಿಡಗಾ ಮಠದ ಶ್ರೀಗಳು, ಯಡಿಯೂರ ಹಾಗೂ ನಿಡಸೋಶಿ ಶ್ರೀಗಳು, ಜೈನಧರ್ಮದ ಮುನಿಗಳು, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಸಂಸ್ಥೆಯ ವಿವಿಧ ಸಮಾರಂಭಗಳಿಗೆ ಭಾಗವಹಿಸಿ, ಕೋರೆಯವರ ಶೈಕ್ಷಣಿಕವಾಗಿ ಸಾಧಿಸಿದ ಕೆಲಸಗಳು ಇತರರಿಗೆ ಮಾದರಿಯಾಗಿವೆ. ಅಲ್ಲದೆ ಕೋರೆಯವರು ಆಶೀರ್ವದಿಸಿದರು.[22]

ಅದೇ ರೀತಿಯಾಗಿ ಕೆ.ಎಲ್.ಇ. ಆಂಗ್ಲಮಾಧ್ಯಮ ಶಾಲೆಯ ನೂತನ ಕಟ್ಟಡವನ್ನು ೨೦೦೬ರಲ್ಲಿ ಕೇಂದ್ರ

ವಿದ್ಯುತ್ ಸಚಿವರಾದ ಸುಶೀಲಕುಮಾರ ಶಿಂಧೆ ಉದ್ಘಾಟಿಸಿದರು.

೨೦೦೮ ಡಿಸೆಂಬರ್ ೧೩ರಂದು ಖ್ಯಾತ ಅಂತಾರಾಷ್ಟ್ರೀಯ ಕ್ರೀಡಾಪಟು ಶ್ರೀ ಅನೀಲ ಕುಂಬ್ಳೆ, ಬೆಳಗಾವಿಯ ನೆಹರು ವೈದ್ಯಕೀಯ ಕೇಂದ್ರ ಪದವಿಧರರಿಗೆ ಪದವಿ ಪುರಸ್ಕಾರ ಮಾಡಿದರು.[೨೮]

ಜುಲೈ ೧೨ ೨೦೦೯ರಂದು ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ನೇತ್ರ ಚಿಕಿತ್ಸಾ ಕೇಂದ್ರ ಸಂಸ್ಥೆ ಬೆಳಗಾವಿ, ಲಾಸಿಕ್ ಕೇಂದ್ರವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಉದ್ಘಾಟಿಸಿ, ಕೆ.ಎಲ್.ಇ. ಸಂಸ್ಥೆಯು ವೈದ್ಯಕೀಯ ಕ್ಷೇತ್ರದಲ್ಲಿ ಸಾಧಿಸುತ್ತಿರುವ ಪ್ರಗತಿಯನ್ನು ಕಂಡು ಮುಕ್ತವಾಗಿ ಪ್ರಶಂಸಿಸಿದರು ಮತ್ತು ಪ್ರಭಾಕರ ಕೋರೆಯವರ ಸಮರ್ಥ ನಾಯಕತ್ವ ಹಾಗೂ ಅವರು ವಹಿಸುವ ಶ್ರಮವನ್ನು ಶ್ಲಾಘಿಸಿದರು.

೭-೨-೦೯ರಂದು ಕೆ.ಎಲ್.ಇ. ಸಂಸ್ಥೆಯ ಹುಬ್ಬಳ್ಳಿ ನೂತನ ಕಟ್ಟಡಗಳಾದ ಡಾ. ಆರ್. ಎಚ್. ಕುಲಕರ್ಣಿ ಸ್ಮಾರಕ ಉಪನ್ಯಾಸ ಸಂಕೀರ್ಣದ ಕಟ್ಟಡ ಹಾಗೂ ದೇಶಪಾಂಡೆ ಸಾಮಾಜಿಕ ಸಮಸ್ಯೆ ಪರಿಹಾರ ನಿರ್ವಹಣಾ ಕೇಂದ್ರವನ್ನು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಉದ್ಘಾಟಿಸಿದರು. ಈ ಸಂಧರ್ಭದಲ್ಲಿ ಇನ್‌ಫೋಸಿಸ್ ಮುಖ್ಯಸ್ಥರಾದ ನಾರಾಯಮಮೂರ್ತಿ, ಸುಧಾ ಮೂರ್ತಿ ಉಪಸ್ಥಿತರಿದ್ದರು. ಕೋರೆಯವರು ಸಂಸ್ಥೆಯನ್ನು ಆಧುನಿಕ ಸ್ಪರ್ಧಾ ಜಗತ್ತಿಗೆ ಪೂರಕವಾಗಿ ಅಭಿವೃದ್ಧಿಪಡಿಸುತ್ತಿರುವುದನ್ನು ಕಂಡು ಮುಕ್ತವಾಗಿ ಪ್ರಶಂಸಿಸಿದರು.[೨೯]

ಹೀಗೆ ದೇಶದ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ಕೇಂದ್ರ ಸಚಿವರು, ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು, ಸಾಹಿತಿಗಳು, ಚಿತ್ರ ತಾರೆಯರು, ಶಿಕ್ಷಣ ತಜ್ಞರು, ಮಠಾಧೀಶರು ಹಾಗೂ ದೇಶಿ ಹಾಗೂ ವಿದೇಶಿ ಗಣ್ಯರನ್ನು ಕೆ.ಎಲ್.ಇ. ಸಂಸ್ಥೆಗೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಿ, ಅವರನ್ನು ಆಮಂತ್ರಿಸಿ ಕೋರೆಯವರು ಸಂಸ್ಥೆಯ ಕೀರ್ತಿ ಹೆಚ್ಚುವಂತೆ ಮಾಡಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ಅದ್ಭುತ ಸಾಧನೆಯನ್ನು ಮುಕ್ತವಾಗಿ ಕೊಂಡಾಡಿದ್ದಾರೆ. ಇದರಲ್ಲಿ ಕೋರೆಯವರ ಪ್ರಾಮಾಣಿಕತೆ, ಸೇವಾ ಮನೋಭಾವ, ಅವರ ದೂರದೃಷ್ಟಿಯನ್ನು ಮನಸಾರೆ ಹೊಗಳುವ ಜೊತೆಗೆ, ಇನ್ನೂ ಹೆಚ್ಚಿನ ಸಾಧನೆ ಮಾಡಲೆಂದು ಹುರಿದುಂಬಿಸಿದ್ದಾರೆ. ಇದರಿಂದ ಕೆ.ಎಲ್.ಇ. ಸಂಸ್ಥೆ ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆದುದು ಇತಿಹಾಸವಾಗಿದೆ. ಇದರಿಂದ ಸಂಸ್ಥೆಯ ಗೌರವ ಹೆಚ್ಚಾಗಿರುವುದರ ಜೊತೆಗೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಹೊಸ ಉತ್ಸಾಹಕ್ಕೆ ಕಾರಣವಾಗಿದೆ.

ಇತರ ಶೈಕ್ಷಣಿಕ ಸಂಸ್ಥೆಗಳ ಬೆಳವಣಿಗೆಗೆ ಕೋರೆಯವರ ಕೊಡುಗೆ :

ಡಾ. ಪ್ರಭಾಕರ ಕೋರೆಯವರು ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಯ ಜೊತೆಗೆ, ಇತರ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ಸಹಾಯ ಸಹಕಾರ ನೀಡಿದ್ದಾರೆ. ಇದು ಅವರ ಉದಾರತೆಯ ಮನೋಭಾವಕ್ಕೆ ಸಾಕ್ಷಿಯಾಗಿದೆ. ಇವತ್ತು ಬೇರೆಯವರು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರೆ ನಮಗೆ ತೊಂದರೆಯಾಗುತ್ತದೆ ಎನ್ನುವ ಮನೋಭಾವದ ಜನ ಬಹಳ. ಆದರೆ ಕೋರೆಯವರು ಅದಕ್ಕೆ ತದ್ವಿರುದ್ಧವಾಗಿದ್ದಾರೆ. ಅಂತೆಯೇ ಶೈಕ್ಷಣಿಕ ಲೋಕದ ತ್ರಿವಿಕ್ರಮ ಸ್ಥಾನದಲ್ಲಿ ಶ್ರೀ ಕೋರೆಯವರನ್ನು ಗುರುತಿಸುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಸ್ನಾತಕೋತ್ತರ ಕೇಂದ್ರವನ್ನು ಬೆಳಗಾವಿಯಲ್ಲಿ ಪ್ರಾರಂಭಿಸಲು ಮುಂದಾದಾಗ ಸ್ಥಳದ ಸಮಸ್ಯೆಯಿಂದ ಈ ನಿರ್ಧಾರ ಕೈ ಬಿಡಬೇಕೆನ್ನುವ ಆಲೋಚನೆ ಮಾಡಿದ್ದು, ವಿಶ್ವವಿದ್ಯಾಲಯ ಆಡಳಿತ ಅಧಿಕಾರಿಗಳು ಈ ಹಂತದಲ್ಲಿ ಶ್ರೀ ಕೋರೆಯವರನ್ನು ಸಂಪರ್ಕಿಸಿದಾಗ ತಮ್ಮ ಸಂಸ್ಥೆಯ ಆವರಣದಲ್ಲಿಯೇ ಸ್ಥಳ ಒದಗಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ನೆರವಾದರು. ಬಹಳ ದಿನಗಳ ನಂತರ ಅದು ತಮ್ಮ ಸ್ವಂತ ಆವರಣಕ್ಕೆ ಸ್ಥಳಾಂತರಗೊಂಡಿತು.[೮೦]

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸ್ಥಾಪನೆ ಸಲುವಾಗಿ ಇದೇ ಸಮಸ್ಯೆ ಬಂದಾಗ ತಮ್ಮ ಸಂಸ್ಥೆಯಲ್ಲಿಯೇ ಸ್ಥಳ ಒದಗಿಸಿಕೊಟ್ಟು, ವಿಶ್ವವಿದ್ಯಾಲಯ ಪ್ರಾರಂಭವಾಗಲು ಎಲ್ಲ ರೀತಿ ಸಹಕಾರ ನೀಡಿದರು. ಇವತ್ತು ಅದು ತನ್ನ ಸ್ವಂತ ಆವರಣದಲ್ಲಿ ಪೂರ್ಣ ಪ್ರಮಾಣದ ತಾಂತ್ರಿಕ ವಿಶ್ವವಿದ್ಯಾಲಯವಾಗಲು ಕೋರೆಯವರು ವಹಿಸಿದ ಶ್ರಮ, ನೀಡಿದ ಸಹಕಾರ ಅವಿಸ್ಮರಣೀಯವಾದದ್ದು. ಹೀಗೆ ವಿಜಾಪುರದ ಬಿ.ಎಲ್.ಡಿ. ವೈದ್ಯಕೀಯ ಮಹಾವಿದ್ಯಾಲಯ ಸ್ವಾಯತ್ತತೆ ಪಡೆಯಲು ಸಹಾಯ ಮಾಡಿದ್ದಾರೆ. ನೀಡಸೋಸಿಯ ಶಿಕ್ಷಣ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ.[೮೧]

ಹೀಗೆ ಮತ್ತೊಂದು ಶಿಕ್ಷಣ ಸಂಸ್ಥೆಯ ಬಗ್ಗೆ ಬಿಗುವಿನ ನಿಲುವು ತಾಳದೆ, ಉದಾರತೆಯನ್ನು ತೋರಿಸುತ್ತಿರುವ ಕೋರೆಯವರ ವಿಶಾಲ ಹೃದಯಕ್ಕೆ ಹಾಗೂ ಘನ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಒಟ್ಟಾರೆ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗೆ ಇವರ ಕೊಡುಗೆ ಅನನ್ಯವಾಗಿದೆ. ಇತರ ಸಂಘ ಸಂಸ್ಥೆಗಳಿಗೂ ಮಾದರಿಯಾಗಿದೆ.

ಕೆ.ಎಲ್.ಇ. ಸಂಸ್ಥೆಯ ಆಸ್ತಿಯನ್ನು ಹೆಚ್ಚಿಸಿದ ಕೀರ್ತಿ ಕೋರೆಯವರದು :

ಕೆ.ಎಲ್.ಇ. ಸಂಸ್ಥೆಗೆ ಶ್ರೀ ಕೋರೆಯವರು ವಿವಿಧ ನಗರಗಳಲ್ಲಿ ನೂರಾರು ಎಕರೆ ಪ್ರದೇಶದಷ್ಟು ಆಸ್ತಿಯನ್ನು ಖರೀದಿಸುವ ಮೂಲಕ ಹೊಸ ಕೋರ್ಸ್‌ಗಳ ಪ್ರಾರಂಭ, ಭವ್ಯವಾದ ಆಧುನಿಕ ಕಟ್ಟಡಗಳು ತಲೆ ಎತ್ತಿ ನಿಲ್ಲುವಂತೆ ಮಾಡಿದ್ದಾರೆ. ಈಗಲೂ ಈ ಕಾರ್ಯ ಮುಂದುವರಿದಿದೆ. ಕೋರೆಯವರ ನೇತೃತ್ವದಲ್ಲಿ ಖರೀದಿಸಿದ ಭೂಮಿ ಮತ್ತು ಆಸ್ತಿಗಳ ವಿವರ :

೧. ಹುಬ್ಬಳ್ಳಿಯಲ್ಲಿ ೧೯೩ ಎಕರೆ, ಬೆಳಗಾವಿಯಲ್ಲಿ ೫೦ ಎಕರೆ, ಬೆಂಗಳೂರಿನ ಯಶವಂತಪುರದಲ್ಲಿ ೩ ಎಕರೆ, ಬೆಂಗಳೂರಿನ ನಾಗರಬಾವಿಯಲ್ಲಿ ೫ ಎಕರೆ, ಬೆಂಗಳೂರಿನ ಚಿಕ್ಕಜಾಲಹಳ್ಳಿಯಲ್ಲಿ ೧೦ ಎಕರೆ. ನವದೆಹಲಿಯಲ್ಲಿ ೪ ಎಕರೆ, ಕಾರವಾರ, ಹುಬ್ಬಳ್ಳಿ ರೋಡ್ ಮಾವನೂರ ಕ್ಯಾಂಪಸ್ ೧೯೩ ಎಕರೆ. ಅಂಕೋಲಾದಲ್ಲಿ ೧೭ ಎಕರೆ. ೨೦೦೮ರಲ್ಲಿ ಹುಬ್ಬಳ್ಳಿಯ ಗೋಕುಲ ರೋಡ್‌ನಲ್ಲಿ ೫ ಎಕರೆ. ಹುಬ್ಬಳ್ಳಿಯ ಉಣಕಲ್ಲ ೬ ಎಕರೆ ಮತ್ತು ೬ ಗುಂಟೆ. ರಾಮಪುರ ಹುಬ್ಬಳ್ಳಿಯಲ್ಲಿ ೧೪ ಎಕರೆ ೨ ಗುಂಟೆ. ಹುಬ್ಬಳ್ಳಿ ತಾಲೂಕಿನ ಕುತ್ತಗುಂಪೆ ಹುಣಸಿ ೩೪ ಎಕರೆ. ಬೈಲಹೊಂಗಲದಲ್ಲಿ ೬ ಎಕರೆ ೬ ಗುಂಟೆ. ಹಿರೇಕೊಡಿ ಚಿಕ್ಕೋಡಿ ೪ ಎಕರೆ ೨೨ ಗುಂಟೆ. ಬೆಳಗಾವಿಯ ಕಂಗ್ರಾಳಿ ಬಿ. ಕೆ. ೬ ಗುಂಟೆ. ಭೂತರಾಯನಹಟ್ಟಿ ತಾಲೂಕ ಬೆಳಗಾವಿ ೩ ಎಕರೆ ೨೪ ಗುಂಟೆ. ಹಲಗಾ ತಾಲೂಕು ಬೆಳಗಾವಿ ೨೬ ಎಕರೆ ೨೬ ಗುಂಟೆ. ಹೀಗೆ ಪ್ರಮುಖ ನಗರಗಳಲ್ಲಿ ಏರುತ್ತಿರುವ ಭೂಮಿಯ ಬೆಲೆಯ ಮಧ್ಯದಲ್ಲಿ ಕೋರೆಯವರು

ನೂರಾರು ಎಕರೆಗಳನ್ನು ಖರೀದಿಸಿದ್ದು, ಸಂಸ್ಥೆಯು ಭವಿಷತ್ತಿನಲ್ಲಿ ಇನ್ನೂ ಅನೇಕ ಹೊಸ ಬಗೆಯ ಕೋರ್ಸ್‌ಗಳನ್ನು, ಕಾಲೇಜುಗಳನ್ನು ಪ್ರಾರಂಭಿಸುವ ಸಲುವಾಗಿ ಈ ಭೂಮಿಯನ್ನು ಮೀಸಲಿಟ್ಟಿದ್ದಾರೆ. ಇದು ಅವರ ದೂರದೃಷ್ಟಿಯ ಸಂಕೇತವಾಗಿದೆ. ಹೀಗೆ ಕೆ.ಎಲ್.ಇ. ಆಸ್ತಿಯನ್ನು ದ್ವಿಗುಣಗೊಳಿಸಿದ್ದಾರೆ. ಇದಲ್ಲದೆ ದಾನಿಗಳಿಂದ ಇತರ ಶಿಕ್ಷಣ ಸಂಸ್ಥೆಗಳು ನೂರಾರು ಎಕರೆ ಪ್ರದೇಶಗಳನ್ನು ಕೋರೆಯವರ ನಾಯಕತ್ವ ಮೆಚ್ಚಿ ವಿಲೀನಗೊಳಿಸಿದ್ದಾರೆ. ಇದರಿಂದ ಸಂಸ್ಥೆಯ ಆಸ್ತಿಯು ಅಗಾಧ ಪ್ರಮಾಣದಲ್ಲಿ ಹೆಚ್ಚಿಗೆ ಆಗಲು ಕಾರಣವಾಗಿದೆ. ಇದಲ್ಲದೇ, ಕೆ.ಎಲ್.ಇ. ಸಂಸ್ಥೆಯ ಒಟ್ಟು ಆಸ್ತಿಯ ವಿವರ ಹೀಗಿದೆ[೮೨]

೧. ಬೆಳಗಾವಿ ಲಿಂಗರಾಜ್ ಕಾಲೇಜು ಕ್ಯಾಂಪಸ್ ೨೫ ಎಕರೆ.

೨. ಬೆಳಗಾವಿಯ ಜೆ. ಎಸ್. ಎಸ್. ವಿಶ್ವವಿದ್ಯಾಲಯ (ಮೆಡಿಕಲ್ ಕಾಲೇಜು) ಕ್ಯಾಂಪಸ್, ೯೬ ಎಕರೆ.

೩. ಬೆಳಗಾವಿಯ ಆಯುರ್ವೇದ ಕಾಲೇಜು, ೧೧ ಎಕರೆ.

೪. ಬೆಳಗಾವಿಯ ಇಂಜಿನಿಯರಿಂಗ್ ಕಾಲೇಜು, ೧೬ ಎಕರೆ.

೫. ಬೆಳಗಾವಿಯ ಧರ್ಮಶಾಲೆ ನಿವೇಶನ, ೩೬ ಗುಂಟೆ.

೬. ಬೆಳಗಾವಿಯ ಅಲತಗಿ ಕಡೋಲಿ, ೫೦ ಎಕರೆ.

೭. ಹುಬ್ಬಳ್ಳಿ ಬಿ. ವಿ. ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜು, ೯೯ ಎಕರೆ.

೮. ಜಗದ್ಗುರು ಗಂಗಾಧರ ಕಾಮರ್ಸ್ ಕಾಲೇಜ್ ಕ್ಯಾಂಪಸ್, ೯ ಎಕರೆ, ೨೫ ಗುಂಟೆ.

೯. ಹುಬ್ಬಳ್ಳಿಯ ಕೃಷ್ಣಪುರ ಬಡಾವಣೆ ಜೆ. ಸಿ. ನಗರ ೧ಎಕರೆ, ೨೦ ಗುಂಟೆ.

೧೦. ಬೆಂಗಳೂರು ಎಸ್. ನಿಜಲಿಂಗಪ್ಪ ಕಾಲೇಜು ಕ್ಯಾಂಪಸ್, ೨ ಎಕರೆ, ೨೦ ಗುಂಟೆ.

೧೧. ಹಾವೇರಿಯ ಜೆ. ಎಚ್. ಕಾಲೇಜು ಕ್ಯಾಂಪಸ್, ೪೩ ಎಕರೆ.

೧೨. ಗದಗ ಜಗದ್ಗುರು ತೋಂಟದಾರ್ಯ ಕಾಲೇಜ್ ಕ್ಯಾಂಪಸ್, ೩೫ ಎಕರೆ.

೧೩. ಗದಗ ಕೃಷಿ ಜಮೀನು, ೭ ಎಕರೆ.

೧೪. ಧಾರವಾಡ ಆರ್.ಎಲ್.ಎಸ್. ಹೈಸ್ಕೂಲ್ ಕಾಲೇಜ್ ಕ್ಯಾಂಪಸ್. ೭ ಎಕರೆ.

೧೫. ಸವದತ್ತಿ ಕರಿಕಟ್ಟಿ ಕೃಷಿ ಜಮೀನು, ೪ ಎಕರೆ, ೪ ಗುಂಟೆ.

೧೬. ಅಥಣಿ ಕಾಲೇಜ್ ಹಾಗೂ ಹೈಸ್ಕೂಲ್ ಕ್ಯಾಂಪಸ್, ೩೧ ಎಕರೆ.

೧೭. ಚಿಕ್ಕೋಡಿ ಬಸವಪ್ರಭು ಕೋರೆ ಕಾಲೇಜ್ ಕ್ಯಾಂಪಸ್, ೨೦ ಎಕರೆ. ೭ ಗುಂಟೆ.

೧೮. ನಿಪ್ಪಾಣಿ ಜಿ. ಆಯ್. ಬಾಗೇವಾಡಿ ಕಾಲೇಜು ಕ್ಯಾಂಪಸ್, ೧೦ ಎಕರೆ, ೭ ಗುಂಟೆ.

೧೯. ನಿಪ್ಪಾಣಿ ಜತ್ರಾಟ, ೩ ಎಕರೆ, ೪ ಗುಂಟೆ

೨೦. ಗೋಕಾಕ ಹೈಸ್ಕೂಲ್ ಕ್ಯಾಂಪಸ್, ೭ ಎಕರೆ.

೨೧. ಅಂಕಲೋ ಬಬ್ರುವಾಡ, ೨ ಎಕರೆ.

೨೨. ಸೊಲ್ಲಾಪುರ, ೩ ಎಕರೆ, ೨ ಗುಂಟೆ.

೨೩. ಬಾರ್ಸಿ, ೧ ಎಕರೆ, ೪ ಗುಂಟೆ.

೨೪. ಮಾಲೂರು, ೩ ಎಕರೆ, ೨ ಗುಂಟೆ.

ಇತ್ತೀಚೆಗೆ ೨೦೦೮ರಲ್ಲಿ ವಿಲೀನಗೊಂಡ ಸಂಸ್ಥೆಗಳ ಆಸ್ತಿ[೬೩]

೨೫. ರಾಣೆಬೆನ್ನೂರ ಹನುಮನ ಮಟ್ಟಿ ಗ್ರಾಮಸೇವಾ ಸಂಸ್ಥೆಯ ಶಿಕ್ಷಣ ಸಂಸ್ಥೆ, ೫೭ ಎಕರೆ, ೨೦ ಗುಂಟೆ.

೨೬. ಮಹಾಲಿಂಗಪೂರ ಚೆನ್ನಗೊಂಟೇಶ್ವರ ಶಿಕ್ಷಣ ಸಂಸ್ಥೆ, ೧೦ ಎಕರೆ.

ಕೆ.ಎಲ್.ಇ. ಸಂಸ್ಥೆಯು ತನ್ನ ಶೈಕ್ಷಣಿಕ ವೇಗಕ್ಕೆ ಪೂರಕವಾಗಿ ವಿವಿಧ ನಗರಗಳಲ್ಲಿ ಆಸ್ತಿಯನ್ನು ಹೆಚ್ಚಿಸುತ್ತಿರುವುದು. ಅಭಿವೃದ್ಧಿಯ ಹಾಗೆ ದೂರದೃಷ್ಟಿಯ ಪ್ರತೀಕವಾಗಿದೆ. ಈ ಕಾರಣಕ್ಕಾಗಿಯೇ ಶ್ರೀ ಕೋರೆಯವರು ವಿಶಿಷ್ಟವಾದ ಸ್ಥಾನದಲ್ಲಿ ನಿಲ್ಲಲು ಸಾಧ್ಯವಾಗುತ್ತದೆ.

ಕೆ.ಎಲ್.ಇ. ಸಂಸ್ಥೆಯ ಸಾಧನೆಯನ್ನು ನೋಡಿದಾಗ ಮೈ ಪುಳಕಿತವಾಗುವುದು. ಇದು ಹೇಗೆ ಸಾಧ್ಯವಾಯಿತು ಎಂಬ ವಿಷಯ ಸಾಮಾನ್ಯರಿಗೆ ತಲೆ ತಿನ್ನುತ್ತದೆ. ಇಂಥ ಒಂದು ಸಂಸ್ಥೆಯನ್ನು ಜಾಗತಿಕಮಟ್ಟದತ್ತ ಒಯ್ಯುವಂಥ ಶಕ್ತಿ ಅದ್ಭುತವಾದದ್ದು. ೨೧೧ ಕಾಲೇಜುಗಳು, ಪ್ರೌಢಶಾಲೆಗಳನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಒಂದು ಪುಟ್ಟ ರಾಜ್ಯದ ಆಡಳಿತ ನಡೆಸಿದ ಹಾಗೆ ಆಗುತ್ತದೆ.[೬೪] ೭೫ ಸಾವಿರ ವಿದ್ಯಾರ್ಥಿಗಳು, ೯ ಸಾವಿರ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಯ ಚುಕ್ಕಾಣಿ ಹಿಡಿಯುವುದೆಂದರೆ ಸಾಮಾನ್ಯವೇನಲ್ಲ. ಎಲ್ಲ ಸಂಸ್ಥೆಗಳಿಗೂ ಆಧುನಿಕತೆಯನ್ನು ಒದಗಿಸುವ ಮೂಲಕ ವಿಶ್ವವಿದ್ಯಾಲಯಗಳಿಗೆ ಮಾನ್ಯತೆ ಸಿಗುವಂತೆ ಮಾಡಿದ ಸಾಹಸ ಕೋರೆಯವರ ಶಕ್ತಿ ಸಾಮರ್ಥ್ಯ ಬೆರಗಾಗುವಂತಹದು.

ಹಲವಾರು ಸಂಸ್ಥೆಯ ಕಾಲೇಜುಗಳು ಸ್ವಾಯತ್ತತೆ ಹೊಂದುವಂತೆ ಮಾಡಿ, ಗರಿಷ್ಠ ಪ್ರಮಾಣದ ಮಾನ್ಯತೆಗಳನ್ನು ದೊರಕುವಂತೆ ಮಾಡಿದ ಇವರು, ಶೈಕ್ಷಣಿಕ ಲೋಕವೇ ವಿಸ್ಮಯ ರೀತಿಯಲ್ಲಿ ನೋಡುವ ರೀತಿ ಮಾಡಿದ್ದಾರೆ. ಹೀಗೆ ಯಾರೂ ಊಹಿಸದ, ಸಾಧಿಸದ ಸಾಧನೆಯನ್ನು ಕೇವಲ ೨೫ ವರ್ಷಗಳಲ್ಲಿ ಮಾಡುವುದರ ಮೂಲಕ ಶೈಕ್ಷಣಿಕ ಕ್ರಾಂತಿಯನ್ನು ಮಾಡಿದ್ದಾರೆ. ಅಪರೂಪದ ಸಾಧನೆಯನ್ನು ಮೆಚ್ಚಿ ಅವರನ್ನು ಹುಡುಕಿಕೊಂಡು ಬಂದ ಪುರಸ್ಕಾರಗಳು ಹಲವಾರು. ಅವುಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೌರವ ಡಾಕ್ಟರೇಟ್ ೨೦೦೬ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸುವರ್ಣ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ. ಶೈಕ್ಷಣಿಕವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೊಸಭಾಷೆ ಬರೆದ ಕೀರ್ತಿ ಕೋರೆಯವರದು. ಇದರಿಂದ ಸಹಸ್ರಾರು ವಿದ್ಯಾರ್ಥಿಗಳ ಬಾಳು ಬೆಳಗಿದ ಕೀರ್ತಿಗೆ ಭಾಜನರಾಗಿದ್ದಾರೆ. ಇದು ಒಂದು ಸಂಸ್ಥೆಯ ದಾಖಲೆಯಾಗಿದೆ.[೬೫]

ಈ ಶೈಕ್ಷಣಿಕ ಸಾಧನೆಗಾಗಿ ತಮ್ಮ ರಾಜಕೀಯ ಜೀವನದಲ್ಲಿ ಎಷ್ಟು ಎತ್ತರಕ್ಕೆ ಬೆಳೆಯಬೇಕಾಗಿತ್ತೊ, ಅಷ್ಟು ಬೆಳೆಯಲು ಅಸಾಧ್ಯವಾಯಿತು. ರಾಜಕೀಯದ ಮೂಲಕ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿ ಅವರ ಶ್ರಮ ಸಾರ್ಥಕವೆನಿಸುತ್ತದೆ. ಇದಕ್ಕೆ ಅವರಲ್ಲಿಯ ಪ್ರಾಮಾಣಿಕತೆ, ಸರಳತೆ, ದೃಢ ನಿರ್ಧಾರ, ಅಚಲವಾದ ನಿಲುವುಗಳು, ಸಾಧಿಸುವ ಛಲ, ವೇಳೆಗೆ ನೀಡುವ ಮಹತ್ವ, ಶಿಸ್ತು, ಇತ್ಯಾದಿ ಅಂಶಗಳು ಕಾರಣವಾಗಿವೆ. ಇದಕ್ಕೆ ಆಡಳಿತ ಮಂಡಳಿಯ ಸಹಕಾರ ಹಾಗೂ ಸಿಬ್ಬಂದಿಯು ಇವರ ವೇಗಕ್ಕನುಗುಣವಾಗಿ ನೀಡುವ ಸಹಕಾರವೂ ಒಂದು ಕಾರಣವಾಗಿದೆ.

ಗಡಿಯಲ್ಲಿ ಕನ್ನಡ ಪರಿಸರ ನಿರ್ಮಾಣವಾಗುವಂತೆ ನೋಡಿಕೊಂಡ ಗೌರವವು ಇವರಿಗೆ ಸಲ್ಲುತ್ತದೆ. ದೇಶದ ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರೀ ಪ್ರಭಾಕರ ಕೋರೆಯವರ ಸ್ಥಾನ ಮಾತ್ರ ಚಿರಸ್ಥಾಯಿ ಆಗಿದೆ. ಹಾಗೆ ಮುಂದಿನ ತಲೆಮಾರಿನ ಜನಾಂಗಕ್ಕೂ ಅನುಕರಣೀಯ ಎನಿಸುತ್ತಾರೆ.

ಕೆ.ಎಲ್.ಇ. ಸಂಸ್ಥೆಯ ಇತರ ಒಟ್ಟು ಅಂಗಸಂಸ್ಥೆಗಳು

ಅ.ನಂ.	ಸಂಸ್ಥೆಯ ಹೆಸರು	ಸ್ಥಾಪನೆ
	ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸಂಸ್ಥೆಗಳು :	
1.	ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ.	1933
2.	ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.	1958
3.	ಕೆ.ಎಲ್.ಇ. ಸಂಸ್ಥೆಯ ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ.	1947
4.	ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮತ್ತು ಎಚ್.ಎಸ್.ಕೆ. ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	1952
5.	ಕೆ.ಎಲ್.ಇ. ಸಂಸ್ಥೆಯ ಪಿ. ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	1957
6	ಕೆ.ಎಲ್.ಇ. ಸಂಸ್ಥೆಯ ಜಗದ್ಗುರು ತೋಂಟದಾರ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ.	1958
7.	ಕೆ.ಎಲ್.ಇ. ಸಂಸ್ಥೆಯ ಜಿ. ಆಯ್. ಬಾಗೇವಾಡಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ.	1961
8.	ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಹಾವೇರಿ.	1963
9.	ಕೆ.ಎಲ್.ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, ಬೆಂಗಳೂರು.	1963
10.	ಕೆ.ಎಲ್.ಇ. ಸಂಸ್ಥೆಯ ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮೀಜಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಅಥಣಿ.	1968
11.	ಕೆ.ಎಲ್.ಇ. ಸಂಸ್ಥೆಯ ಬಸವಪ್ರಭು ಕೋರೆ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಿಕ್ಕೋಡಿ.	1969
12.	ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.	1973
13.	ಕೆ.ಎಲ್.ಇ. ಸಂಸ್ಥೆಯ ಶ್ರೀಮಂತ ವ್ಹಿ. ಎಸ್. ಬೆಳ್ಳುಬ್ಬಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ	1977
14.	ಕೆ.ಎಲ್.ಇ. ಸಂಸ್ಥೆಯ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ.	1985
15.	ಕೆ.ಎಲ್.ಇ. ಸಂಸ್ಥೆಯ ಮಹಿಳಾ ಮಹಾವಿದ್ಯಾಲಯ, ಅಂಕೋಲಾ.	2001
16.	ಕೆ.ಎಲ್.ಇ. ಸಂಸ್ಥೆಯ ರಾಜಾ-ರಾಜೇಶ್ವರಿ ಮಹಿಳಾ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ರಾಣೇಬೆನ್ನೂರು	1991
17.	ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಕಲಾ ಮತ್ತು ಡಿ. ಡಿ. ಶಿರೋಳ ವಾಣಿಜ್ಯ ಮಹಾವಿದ್ಯಾಲಯ, ಮಹಾಲಿಂಗಪೂರ.	1987
	ಕೆ.ಎಲ್.ಇ. ವಿಶ್ವವಿದ್ಯಾಲಯ ಬೆಳಗಾವಿ :	
18.	ಕೆ.ಎಲ್.ಇ. ಸಂಸ್ಥೆಯ ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾವಿ.	1963
19.	ಕೆ.ಎಲ್.ಇ. ವಿಶ್ವನಾಥ ಕತ್ತಿ ದಂತ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.	1985
20.	ಕೆ.ಎಲ್.ಇ. ಸಂಸ್ಥೆಯ ಶುಶ್ರೂಷಾ ಮಹಾವಿದ್ಯಾಲಯ, ಬೆಳಗಾವಿ.	1987
21.	ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.	1968
22.	ಕೆ.ಎಲ್.ಇ. ಸಂಸ್ಥೆಯ ಸರದಾರ ವ್ಹಿ. ವ್ಹಿ. ಪಾಟೀಲ ಔಷಧ ಮಹಾವಿದ್ಯಾಲಯ, ಬೆಂಗಳೂರು.	1976
23.	ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	1985
24.	ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು.	1992
25.	ಕೆ.ಎಲ್.ಇ. ಸಂಸ್ಥೆಯ ಫಿಜಿಯೋಥೆರಪಿ ಮಹಾವಿದ್ಯಾಲಯ, ಬೆಳಗಾವಿ.	1994
26.	ಕೆ.ಎಲ್.ಇ. ಸಂಸ್ಥೆಯ ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯ, ಬೆಳಗಾವಿ.	1933
27.	ಕೆ.ಎಲ್.ಇ. ಸಂಸ್ಥೆಯ ಸಂಗೀತ ಶಾಲೆ, ಬೆಳಗಾವಿ.	2008
	ಆರೋಗ್ಯ ವಿಜ್ಞಾನ ಸಂಸ್ಥೆಗಳು :	
28.	ಕೆ.ಎಲ್.ಇ. ಸಂಸ್ಥೆಯ ದಂತ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು.	1992
29.	ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ನಿಪ್ಪಾಣಿ.	1992
30.	ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಗದಗ.	1992
31.	ಕೆ.ಎಲ್.ಇ. ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯ, ಅಂಕೋಲಾ	2005
32.	ಕೆ.ಎಲ್.ಇ. ಸಂಸ್ಥೆಯ ಸಾಂಪ್ರದಾಯಿಕ ಔಷಧ ಸಂಶೋಧನಾ ಕೇಂದ್ರ (ಔಷಧ ವಿಜ್ಞಾನ ಮಹಾವಿದ್ಯಾಲಯ) ಹುಬ್ಬಳ್ಳಿ	2002
33.	ಕೆ.ಎಲ್.ಇ. ಸಂಸ್ಥೆಯ ಶುಶ್ರೂಷಾ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	2003
34.	ಕೆ.ಎಲ್.ಇ. ಸಂಸ್ಥೆಯ ಶುಶ್ರೂಷಾ ವಿಜ್ಞಾನ ಮಹಾವಿದ್ಯಾಲಯ, ಅಂಕೋಲಾ.	2003
35.	ಕೆ.ಎಲ್.ಇ. ಸಂಸ್ಥೆಯ ಶುಶ್ರೂಷಾ ವಿಜ್ಞಾನ ಮಹಾವಿದ್ಯಾಲಯ, ದಾಂಡೇಲಿ.	2004
36.	ಕೆ.ಎಲ್.ಇ. ಸಂಸ್ಥೆಯ ಫಿಜಿಯೋಥೆರಪಿ ಮಹಾವಿದ್ಯಾಲಯ, ಹುಬ್ಬಳ್ಳಿ.	2004
37.	ಕೆ.ಎಲ್.ಇ. ಸಂಸ್ಥೆಯ ನಿಸರ್ಗೋಪಚಾರ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.	2004
	ಆರೋಗ್ಯ ಆರೈಕೆ ಸಂಸ್ಥೆಗಳು :	
38.	ಕೆ.ಎಲ್.ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರ, ಬೆಳಗಾವಿ.	1986
39.	ಕೆ.ಎಲ್.ಇ. ವಿಶ್ವನಾಥ ಕತ್ತಿ ದಂತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ.	1985
40.	ಕೆ.ಎಲ್.ಇ. ಸಂಸ್ಥೆಯ ದಂತ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.	1992
41.	ಕೆ.ಎಲ್.ಇ. ಸಂಸ್ಥೆಯ ಡಾ. ಕಮಲ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಅಂಕೋಲಾ.	1979
42.	ಕೆ.ಎಲ್.ಇ. ಸಂಸ್ಥೆಯ ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ.	1938
43.	ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ.	1938
44.	ಕೆ.ಎಲ್.ಇ. ಸಂಸ್ಥೆಯ ತುರ್ತು ಚಿಕಿತ್ಸಾ ನಿಗಾ ಘಟಕ, ಲಕ್ಷ್ಮೀ ಕಾಂಪ್ಲೆಕ್ಸ್, ಪಿ.ಬಿ. ರಸ್ತೆ, ಹುಬ್ಬಳ್ಳಿ	2002
45.	ಕೆ.ಎಲ್.ಇ. ಸಂಸ್ಥೆಯ ಹಾರ್ಟ ಫೌಂಡೇಶನ್, ಬೆಳಗಾವಿ	2002
46.	ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ತುರ್ತು ಚಿಕಿತ್ಸಾ ನಿಗಾ ಘಟಕ, ಗೋಕಾಕ.	2003
47.	ಕೆ.ಎಲ್.ಇ. ಸಂಸ್ಥೆಯ ಕಿಡ್ನಿ ಫೌಂಡೇಶನ್, ಬೆಳಗಾವಿ.	2003
48.	ಕೆ.ಎಲ್.ಇ. ಸಂಸ್ಥೆಯ ಹೃದಯ ಆಸ್ಪತ್ರೆ, ಹುಬ್ಬಳ್ಳಿ	2003
49.	ಕೆ.ಎಲ್.ಇ. ಸಂಸ್ಥೆಯ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಅಥಣಿ.	2003
50.	ಕೆ.ಎಲ್.ಇ. ಸಂಸ್ಥೆಯ ಬಸವೇಶ್ವರ ಆಸ್ಪತ್ರೆ, ಜಮಖಂಡಿ	2007

ಅ.ನಂ.	ಸಂಸ್ಥೆಯ ಹೆಸರು	ಸ್ಥಾಪನೆ
	ತಾಂತ್ರಿಕ ಸಂಸ್ಥೆಗಳು :	
51.	ಕೆ.ಎಲ್.ಇ. ಸಂಸ್ಥೆಯ ಬಿ. ವ್ಹಿ. ಭೂಮರಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ.	1947
52.	ಕೆ.ಎಲ್.ಇ. ಸಂಸ್ಥೆಯ ಡಾ. ಎಂ. ಎಸ್. ಶೇಷಗಿರಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಉದ್ಯಮಬಾಗ, ಬೆಳಗಾವಿ	1979
53.	ಕೆ.ಎಲ್.ಇ. ಸಂಸ್ಥೆಯ ಸಿ. ಬಿ. ಕೋರೆ ಪಾಲಿಟೆಕ್ನಿಕ್, ಚಿಕ್ಕೋಡಿ.	1984
54.	ಕೆ.ಎಲ್.ಇ. ಸಂಸ್ಥೆಯ ಸಿ. ಬಿ. ಕೊಳ್ಳಿ ಪಾಲಿಟೆಕ್ನಿಕ್, ಹಾವೇರಿ.	1984
55.	ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಹುಬ್ಬಳ್ಳಿ.	1984
56.	ಕೆ.ಎಲ್.ಇ. ಸಂಸ್ಥೆಯ ಫ್ಯಾಶನ್ ಟೆಕ್ನಾಲಜಿ ಅ್ಯಂಡ ಅಪೇರಲ್ ಸಂಸ್ಥೆ, ಬೆಂಗಳೂರು.	2002
57.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ ಪಿ. ಸಿ. ಜಾಬಿನ ವಿಜ್ಞಾನ ಮಹಾವಿದ್ಯಾಲಯ ಆವರಣ, ಹುಬ್ಬಳ್ಳಿ.	1999
58.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಜೆ. ಟಿ. ಕಾಲೇಜ ಆವರಣ, ಗದಗ.	1999
59.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಆರ್.ಎಲ್ ವಿಜ್ಞಾನ ಸಂಸ್ಥೆ ಬೆಳಗಾವಿ.	1999
60.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಎಸ್. ನಿಜಲಿಂಗಪ್ಪ ಕಾಲೇಜ ಆವರಣ, ಬೆಂಗಳೂರು.	2000
61.	ಕೆ.ಎಲ್.ಇ. ಸಂಸ್ಥೆಯ ಎಂ.ಸಿ.ಎ. ಬಿ. ವ್ಹಿ. ಭೂಮರಡ್ಡಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ.	1999
62.	ಕೆ.ಎಲ್.ಇ. ಸಂಸ್ಥೆಯ ಎಂ.ಸಿ.ಎ. ಡಾ. ಎಂ. ಎಸ್. ಶೇಷಗಿರಿ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ.	1999
63.	ಕೆ.ಎಲ್.ಇ. ಸಂಸ್ಥೆಯ ಎಂ.ಸಿ.ಎ. ಎಸ್. ನಿಜಲಿಂಗಪ್ಪ ಕಾಲೇಜ, ಬೆಂಗಳೂರು.	2000
64.	ಕೆ.ಎಲ್.ಇ. ಸಂಸ್ಥೆಯ ಕೈಗಾರಿಕಾ ತರಬೇತಿ ಸಂಸ್ಥೆ, ಗೋಕಾಕ.	2003
65.	ಕೆ.ಎಲ್.ಇ. ಸಂಸ್ಥೆಯ ಜಾಬ್ ಓರಿಯಂಟೆಡ್ ಕೋರ್ಸ, ಜಿ. ಎ. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಬೆಳಗಾವಿ.	1978
66.	ಕೆ.ಎಲ್.ಇ. ಸಂಸ್ಥೆಯ ಜಾಬ್ ಓರಿಯಂಟೆಡ್ ಕೋರ್ಸ, ಜಿ. ಎಚ್. ಕಾಲೇಜ, ಹಾವೇರಿ.	1995
67.	ಕೆ.ಎಲ್.ಇ. ಸಂಸ್ಥೆಯ ಜಾಬ್ ಓರಿಯಂಟೆಡ್ ಕೋರ್ಸ, ಶ್ರೀಮತಿ ಶಾರದಾದೇವಿ ಕವಿಂಗ ಪ.ಪೂ. ಕಾಲೇಜ, ಅಂಕಲಿ.	1984
68.	ಕೆ.ಎಲ್.ಇ. ಸಂಸ್ಥೆಯ ಫ್ಯಾಶನ್ ಟೆಕ್ನಾಲಜಿ ಅ್ಯಂಡ ಅಪ್ಪರಲ್ ಡಿಜಾಯಿನ್; ಬೆಳಗಾವಿ.	2006
69.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಬಿ. ಕೆ. ಕಾಲೇಜ, ಚಿಕ್ಕೋಡಿ	2006
70.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಎಸ್.ಎಸ್.ಎಂ.ಎಸ್. ಕಾಲೇಜ, ಅಥಣಿ.	2007
71.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಜಿ. ಆಯ್. ಬಾಗೇವಾಡಿ ಕಾಲೇಜ, ನಿಪ್ಪಾಣಿ.	2007
72.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಜಿ. ಎಚ್. ಕಾಲೇಜ, ಹಾವೇರಿ.	2007
73.	ಕೆ.ಎಲ್.ಇ. ಸಂಸ್ಥೆಯ ಬಿ.ಸಿ.ಎ. ಸಂಸ್ಥೆ, ಎಸ್. ವ್ಹಿ. ಎಸ್. ಬೆಳ್ಳುಬ್ಬಿ ಕಾಲೇಜ, ಸವದತ್ತಿ,	2008
74.	ಕೆ.ಎಲ್.ಇ. ಸಂಸ್ಥೆಯ ಕೆ.ಎಲ್.ಇ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ, ಗೋಕುಲ ರೋಡ, ಹುಬ್ಬಳ್ಳಿ.	2008
75.	ಕೆ.ಎಲ್.ಇ. ಸಂಸ್ಥೆಯ ಕೆ.ಎಲ್.ಇ. ಕಾಲೇಜ ಆಫ್ ಇಂಜನೀಯರಿಂಗ್ ಟೆಕ್ನಾಲಾಜಿ, ಚಿಕ್ಕೋಡಿ.	2008
76.	ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಬೈಲಹೊಂಗಲ.	2008
77.	ಕೆ.ಎಲ್.ಇ. ಸಂಸ್ಥೆಯ ಪಾಲಿಟೆಕ್ನಿಕ್, ಮಹಾಲಿಂಗಪೂರ.	2008
78.	ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಐ.ಟಿ.ಸಿ., ಮಹಾಲಿಂಗಪೂರ.	2001
	ವ್ಯವಹಾರ ಆಡಳಿತ ನಿರ್ವಹಣಾ ಸಂಸ್ಥೆಗಳು :	
79.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ, ವಿದ್ಯಾನಗರ, ಹುಬ್ಬಳ್ಳಿ	1996
80.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಲಿಂಗರಾಜ ಕಾಲೇಜ ಆವರಣ, ಬೆಳಗಾವಿ	1996
81.	ಕೆ.ಎಲ್.ಇ. ಸಂಸ್ಥೆಯ ಆಡಳಿತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹುಬ್ಬಳ್ಳಿ.	1998
82.	ಕೆ.ಎಲ್.ಇ. ಸಂಸ್ಥೆಯ ಎಂ.ಬಿ.ಎ. ಸಂಸ್ಥೆ, ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, ಬೆಂಗಳೂರು	1998
83.	ಕೆ.ಎಲ್.ಇ. ಸಂಸ್ಥೆಯ ಪ್ರವಾಸೋದ್ಯಮ ಆಡಳಿತ ಸಂಸ್ಥೆ, ಎಸ್. ನಿಜಲಿಂಗಪ್ಪ ಕಾಲೇಜ, ಬೆಂಗಳೂರು.	2000
84.	ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ ಆಫ್ ಹೊಟೆಲ್ ಮ್ಯಾನೇಜಮೆಂಟ ಮತ್ತು ಕೇಟರಿಂಗ್ ಟೆಕ್ನಾಲಜಿ, ಎಸ್. ನಿಜಲಿಂಗಪ್ಪ ಕಾಲೇಜ, ಬೆಂಗಳೂರ.	1991
85.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಬಿ. ಕೆ. ಕಾಲೇಜ, ಚಿಕ್ಕೋಡಿ	2007
86.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಜೆ. ಟಿ. ಕಾಲೇಜ, ಗದಗ.	2007
87.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ ಶ್ರೀ ಮೃತ್ಯುಂಜಯ ಕಾಲೇಜ, ಧಾರವಾಡ.	2008
88.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ, ಜಿ. ಆಯ್. ಬಾಗೇವಾಡಿ ಕಾಲೇಜ, ನಿಪ್ಪಾಣಿ	2008
89.	ಕೆ.ಎಲ್.ಇ. ಸಂಸ್ಥೆಯ ಬಿ.ಬಿ.ಎ. ಸಂಸ್ಥೆ, ಎಸ್.ಎಸ್.ಎಂ.ಎಸ್. ಕಾಲೇಜ, ಅಥಣಿ.	2008
90.	ಕೆ.ಎಲ್.ಇ. ಸಂಸ್ಥೆಯ ಎಂ.ಬಿ.ಏ. ಸಂಸ್ಥೆ ಹುಬ್ಬಳ್ಳಿ	2008
91.	ಕೆ.ಎಲ್.ಇ. ಸಂಸ್ಥೆಯ ಎಂ.ಬಿ.ಎ. ಸಂಸ್ಥೆ ಉದ್ಯಮಬಾಗ, ಬೆಳಗಾವಿ	2009
92.	ಕೆ.ಎಲ್.ಇ. ಸಂಸ್ಥೆಯ ಕೆ. ಎಫ್. ಪಾಟೀಲ ಬಿ.ಬಿ.ಎ. ಸಂಸ್ಥೆ ರಾಣೆಬೆನ್ನೂರ	2009
	ಕೃಷಿ ವಿಜ್ಞಾನ :	
93.	ಕೆ.ಎಲ್.ಇ. ಸಂಸ್ಥೆಯ ಕೃಷಿ ತರಬೇತಿ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ	1999
	ಕಾನೂನು ಮಹಾವಿದ್ಯಾಲಯಗಳು :	
94.	ಕೆ.ಎಲ್.ಇ. ಸಂಸ್ಥೆಯ ಗುರುಸಿದ್ದಪ್ಪ ಕೋತಂಬ್ರಿ ಕಾನೂನು ಮಹಾವಿದ್ಯಾಲಯ, ಹುಬ್ಬಳ್ಳಿ.	1974
95.	ಕೆ.ಎಲ್.ಇ. ಸಂಸ್ಥೆಯ ಎಸ್. ಎ. ಮಾನ್ವಿ ಕಾನೂನು ಮಹಾವಿದ್ಯಾಲಯ, ಗದಗ	1974
96.	ಕೆ.ಎಲ್.ಇ. ಸಂಸ್ಥೆಯ ಬಿ. ವ್ಹಿ. ಬೆಲ್ಲದ ಕಾನೂನು ಮಹಾವಿದ್ಯಾಲಯ, ಲಿಂಗರಾಜ ಕಾಲೇಜ ಆವರಣ, ಬೆಳಗಾವಿ.	1975
97.	ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಬೆಂಗಳೂರು.	1975
98.	ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಚಿಕ್ಕೋಡಿ	1999
	ಶಿಕ್ಷಣ ಮಹಾವಿದ್ಯಾಲಯಗಳು	
99.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ	1986
100.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಬೆಂ[illegible]	[illegible]

ಅ.ನಂ.	ಸಂಸ್ಥೆಯ ಹೆಸರು	ಸ್ಥಾಪನೆ
101.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಲಿಂಗರಾಜ ಮಹಾವಿದ್ಯಾಲಯ ಆವರಣ, ಬೆಳಗಾವಿ.	2004
102.	ಕೆ.ಎಲ್.ಇ. ಸಂಸ್ಥೆಯ ಶ್ರೀಮತಿ ಯಶೋದಾದೇವಿ ಗಂಗಾಧರ ಕುಲಗುಡೆ ಶಿಕ್ಷಣ ಮಹಾವಿದ್ಯಾಲಯ, ಅಥಣಿ.	2004
103.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಅಂಕೋಲಾ.	2004
104.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಜಿ. ಐ. ಬಾಗೇವಾಡಿ ಮಹಾವಿದ್ಯಾಲಯ ಆವರಣ, ನಿಪ್ಪಾಣಿ.	2004
	ಶಿಕ್ಷಕರ ತರಬೇತಿ ಸಂಸ್ಥೆಗಳು :	
105.	ಕೆ.ಎಲ್.ಇ. ಸಂಸ್ಥೆಯ ಶಿ. ಶಿ. ಬಸವನಾಳ ಶಿಕ್ಷಕರ ತರಬೇತಿ ಸಂಸ್ಥೆ, ಬೆಳಗಾವಿ.	1939
106.	ಕೆ.ಎಲ್.ಇ. ಸಂಸ್ಥೆಯ ಜಗದ್ಗುರು ಗುರುಸಿದ್ಧೇಶ್ವರ ಶಿಕ್ಷಕರ ತರಬೇತಿ ಸಂಸ್ಥೆ, ಹುಬ್ಬಳ್ಳಿ.	1947
107.	ಕೆ.ಎಲ್.ಇ. ಸಂಸ್ಥೆಯ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆ, ಅಂಕೋಲಾ.	1964
108.	ಕೆ.ಎಲ್.ಇ. ಸಂಸ್ಥೆಯ ಅಂಗನವಾಡಿ ಶಿಕ್ಷಕರ ತರಬೇತಿ ಕೇಂದ್ರ, ಅಂಕೋಲಾ.	1982
109.	ಕೆ.ಎಲ್.ಇ. ಸಂಸ್ಥೆಯ ಶಿಶುವಿಹಾರ ಶಿಕ್ಷಕರ ತರಬೇತಿ ಕೇಂದ್ರ, ಮೂಲೂರ.	1986
110.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಲಿಂಗರಾಜ ಮಹಾವಿದ್ಯಾಲಯ ಆವರಣ, ಬೆಳಗಾವಿ.	2004
111.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಖಾನಾಪೂರ.	2004
112.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅಂಕಲಿ.	2004
113.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಹಾವೇರಿ.	2004
114.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಗಂಗಾವತಿ.	2004
115.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅಥಣಿ.	2005
116.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅವರ್ಸಾ–ಅಂಕೋಲಾ.	2005
117.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಅಕ್ಕಲಕೋಟ (ಮಹಾರಾಷ್ಟ್ರ).	2007
118.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಸೊಲ್ಲಾಪೂರ (ಮಹಾರಾಷ್ಟ್ರ).	2007
119.	ಕೆ.ಎಲ್.ಇ. ಸಂಸ್ಥೆಯ ಶಿಕ್ಷಕರ ತರಬೇತಿ ಸಂಸ್ಥೆ (ಡಿ.ಎಡ್.), ಇಚಲಕರಂಜಿ (ಮಹಾರಾಷ್ಟ್ರ).	2007
	ಪದವಿಪೂರ್ವ ಮಹಾವಿದ್ಯಾಲಯಗಳು :	
120.	ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಪದವಿಪೂರ್ವ ಮಹಾವಿದ್ಯಾಲಯ, ಬೆಳಗಾವಿ.	1933
121.	ಕೆ.ಎಲ್.ಇ. ಸಂಸ್ಥೆಯ ಜಿ. ಎ. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಬೆಳಗಾವಿ.	1916
122.	ಕೆ.ಎಲ್.ಇ. ಸಂಸ್ಥೆಯ ಆರ್.ಎಲ್.ಎಸ್. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಧಾರವಾಡ.	1922
123.	ಕೆ.ಎಲ್.ಇ. ಸಂಸ್ಥೆಯ ಎಸ್. ಕೆ. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಸವದತ್ತಿ.	1935
124.	ಕೆ.ಎಲ್.ಇ. ಸಂಸ್ಥೆಯ ಶ್ರೀಮತಿ ಶಾರದಾದೇವಿ ಕೋರೆ ಸಂ. ಪ. ಪೂ. ಮಹಾವಿದ್ಯಾಲಯ, ಅಂಕಲಿ.	1946
125.	ಕೆ.ಎಲ್.ಇ. ಸಂಸ್ಥೆಯ ಜಗದ್ಗುರು ಗಂಗಾಧರ ಪದವಿಪೂರ್ವ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	1947
12[illegible].	ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಪ. ಪೂ. ಕಲಾ ಮತ್ತು ಎಚ್.ಎಸ್.ಕೆ. ಪ. ಪೂ. ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	1952
127.	ಕೆ.ಎಲ್.ಇ. ಸಂಸ್ಥೆಯ ಪಿ. ಸಿ. ಜಾಬಿನ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.	1957
128.	ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.	1958
129.	ಕೆ.ಎಲ್.ಇ. ಸಂಸ್ಥೆಯ ಜಗದ್ಗುರು ತೋಂಟದಾರ್ಯ ಪ. ಪೂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ.	1958
130.	ಕೆ.ಎಲ್.ಇ. ಸಂಸ್ಥೆಯ ಜಿ.ಆಯ್. ಬಾಗೇವಾಡಿ ಪ. ಪೂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ನಿಪ್ಪಾಣಿ.	1961
131.	ಕೆ.ಎಲ್.ಇ. ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿಪೂರ್ವ ಮಹಾವಿದ್ಯಾಲಯ, ಹಾವೇರಿ.	1963
132.	ಕೆ.ಎಲ್.ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಪದವಿಪೂರ್ವ ಮಹಾವಿದ್ಯಾಲಯ, ಬೆಂಗಳೂರು.	1963
133.	ಕೆ.ಎಲ್.ಇ. ಸಂಸ್ಥೆಯ ಎಸ್.ಎಸ್.ಎಂ.ಎಸ್. ಪ.ಪೂ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಅಥಣಿ.	1968
134.	ಕೆ.ಎಲ್.ಇ. ಸಂಸ್ಥೆಯ ಬಸವಪ್ರಭು ಕೋರೆ ಪದವಿಪೂರ್ವ ಮಹಾವಿದ್ಯಾಲಯ, ಚಿಕ್ಕೋಡಿ.	1969
135.	ಕೆ.ಎಲ್.ಇ. ಸಂಸ್ಥೆಯ ಪದವಿಪೂರ್ವ ಮಹಾವಿದ್ಯಾಲಯ, ಗೋಕಾಕ.	1987
136.	ಕೆ.ಎಲ್.ಇ. ಸಂಸ್ಥೆಯ ಸ್ವತಂತ್ರ ಪದವಿಪೂರ್ವ ಮಹಾವಿದ್ಯಾಲಯ, ಬೆಂಗಳೂರು.	1995
137.	ಕೆ.ಎಲ್.ಇ. ಸಂಸ್ಥೆಯ ಮಹಿಳಾ ಪದವಿಪೂರ್ವ ಮಹಾವಿದ್ಯಾಲಯ, ಅಂಕೋಲಾ.	1999
138.	ಕೆ.ಎಲ್.ಇ. ಸಂಸ್ಥೆಯ ಸ್ವತಂತ್ರ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ, ಗಂಗಾವತಿ.	2001
139.	ಕೆ.ಎಲ್.ಇ. ಸಂಸ್ಥೆಯ ಪದವಿಪೂರ್ವ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, [illegible]	2003
140.	ಕೆ.ಎಲ್.ಇ. ಸಂಸ್ಥೆಯ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ, ಖಾನಾಪೂರ.	2004
141.	ಕೆ.ಎಲ್.ಇ. ಸಂಸ್ಥೆಯ ಪದವಿಪೂರ್ವ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಶಿರಗುಪ್ಪಿ.	2007
142.	ಕೆ.ಎಲ್.ಇ. ಸಂಸ್ಥೆಯ ಪದವಿಪೂರ್ವ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕುಕನೂರ.	2007
143.	ಕೆ.ಎಲ್.ಇ. ಸಂಸ್ಥೆಯ ಸ್ವತಂತ್ರ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ, ನಾಗರಬಾವಿ, ಬೆಂಗಳೂರು.	2007
144.	ಕೆ.ಎಲ್.ಇ. ಸಂಸ್ಥೆಯ ರಾಜ–ರಾಜೇಶ್ವರಿ ಹೆಣ್ಣು ಮಕ್ಕಳ ಸಂ. ಪ. ಪೂ. ಮಹಾವಿದ್ಯಾಲಯ, ರಾಣೆಬೆನ್ನೂರ.	1980
145.	ಕೆ.ಎಲ್.ಇ. ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯ, ಹಾನಗಲ್ಲ.	2008
146.	ಕೆ.ಎಲ್.ಇ. ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯ, ರಾಯಬಾಗ.	2008
147.	ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪದವಿ ಪೂರ್ವ ಮಹಾವಿದ್ಯಾಲಯ, ಮಹಾಲಿಂಗಪೂರ.	1979
	ಪ್ರೌಢಶಾಲೆಗಳು :	
148.	ಕೆ.ಎಲ್.ಇ. ಸಂಸ್ಥೆಯ ಅಣ್ಣಪ್ಪ ಕಾಡಾದಿ ಪ್ರೌಢ ಶಾಲೆ, ಸೊಲ್ಲಾಪೂರ. (ಮಹಾರಾಷ್ಟ್ರ)	1937
149.	ಕೆ.ಎಲ್.ಇ. ಸಂಸ್ಥೆಯ ಸಿಲ್ವರ್ ಜ್ಯುಬಿಲಿ ಪ್ರೌಢ ಶಾಲೆ, ಬಾರ್ಶಿ (ಮಹಾರಾಷ್ಟ್ರ)	1941
150.	ಕೆ.ಎಲ್.ಇ. ಸಂಸ್ಥೆಯ ಮಂಗ್ರೂಳೆ ಪ್ರೌಢ ಶಾಲೆ, ಅಕ್ಕಲಕೋಟ (ಮಹಾರಾಷ್ಟ್ರ)	1952
151.	ಕೆ.ಎಲ್.ಇ. ಸಂಸ್ಥೆಯ ಸಿ. ಎಸ್. ಕಿತ್ತೂರ ಪ್ರೌಢ ಶಾಲೆ, ಅಥಣಿ.	1958
152.	ಕೆ.ಎಲ್.ಇ. ಸಂಸ್ಥೆಯ ಸಿ. ಎಸ್. ಅಂಗಡಿ ಬಾಲಕಿಯರ ಪ್ರೌಢ ಶಾಲೆ, ಗೋಕಾಕ	1962
153.	ಕೆ.ಎಲ್.ಇ. ಸಂಸ್ಥೆಯ ವಾಸುದೇವರಾವ ಕಟಬೇಕರ ಬಾಲಕಿಯರ ಪ್ರೌಢ ಶಾಲೆ, ಅಂಕೋಲಾ	1962
154.	ಕೆ.ಎಲ್.ಇ. ಸಂಸ್ಥೆಯ ಪಿ. ಆರ್. ಚಿಕ್ಕೋಡಿ ಮಾಧ್ಯಮಿಕ ಶಾಲೆ, ಗಳತಗಾ, ತಾ. ಚಿಕ್ಕೋಡಿ, ಜಿ. ಬೆಳಗಾವಿ	1965
155.	ಕೆ.ಎಲ್.ಇ. ಸಂಸ್ಥೆಯ ಬಿ. ಬಿ. ಮಮದಾಪೂರ ಬಾಲಕಿಯರ ಪ್ರೌಢ ಶಾಲೆ, ಸವದತ್ತಿ.	1970

ಅ.ನಂ.	ಸಂಸ್ಥೆಯ ಹೆಸರು	ಸ್ಥಾಪನೆ
156.	ಕೆ.ಎಲ್.ಇ. ಸಂಸ್ಥೆಯ ಎಂ. ಆರ್. ಸಾಖರೆ ಇಂಗ್ಲೀಷ ಮಿಡಿಯಮ್ ಸ್ಕೂಲ, ಹುಬ್ಬಳ್ಳಿ.	1974
157.	ಕೆ.ಎಲ್.ಇ. ಸಂಸ್ಥೆಯ ಶ್ರೀಮತಿ ವ್ಹಿ. ನಂಜಮ್ಮ ಪ್ರೌಢ ಶಾಲೆ, ಮಾಲೂರು.	1981
158.	ಕೆ.ಎಲ್.ಇ. ಸಂಸ್ಥೆಯ ಎಚ್. ಎಫ್. ಕಟ್ಟಿಮನಿ ಕನ್ನಡ ಮಾಧ್ಯಮ ಪ್ರೌಢ ಶಾಲೆ, ಹುಬ್ಬಳ್ಳಿ.	2002
159.	ಕೆ.ಎಲ್.ಇ. ಸಂಸ್ಥೆಯ ಕೆ. ಜಿ. ಆ್ಯಂಡ ಇಂಗ್ಲೀಷ ಮಾಧ್ಯಮ ಸ್ಕೂಲ, ನಿಪ್ಪಾಣಿ.	1983
160.	ಕೆ.ಎಲ್.ಇ. ಸಂಸ್ಥೆಯ ಅಂತರ್‌ರಾಷ್ಟ್ರೀಯ ಶಾಲೆ, ಬೆಂಗಳೂರು.	2002
161.	ಕೆ.ಎಲ್.ಇ. ಸಂಸ್ಥೆಯ ಶ್ರೀಮತಿ ಚಂದ್ರಕಲಾ ಭೀಮರಾವ್ ರಣಮೊಡೆ ಇಂಗ್ಲೀಷ ಮಾಧ್ಯಮ ಶಾಲೆ, ಅಥಣಿ.	2005
162.	ಕೆ.ಎಲ್.ಇ. ಸಂಸ್ಥೆಯ ಆಂಗ್ಲ ಮಾಧ್ಯಮಾ ಪ್ರೌಢ ಶಾಲೆ, ಗದಗ.	2005
163.	ಕೆ.ಎಲ್.ಇ. ಸಂಸ್ಥೆಯ ಆಂಗ್ಲ ಮಾಧ್ಯಮಾ ಪ್ರೌಢ ಶಾಲೆ, ಮಾಲೂರು.	2006
164.	ಕೆ.ಎಲ್.ಇ. ಸಂಸ್ಥೆಯ ರಾಜ–ರಾಜೇಶ್ವರಿ ಹೆಣ್ಣುಮಕ್ಕಳ ಪ್ರೌಢ ಶಾಲೆ, ರಾಣೆಬೆನ್ನೂರು.	1962
165.	ಕೆ.ಎಲ್.ಇ. ಸಂಸ್ಥೆಯ ಮಾಡೆಲ್ ಹೈಯರ್ ಸೆಕೆಂಡರಿ ಸ್ಕೂಲ್, ಹನುಮನಮಟ್ಟಿ	1960
166.	ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪ್ರೌಢ ಶಾಲೆ, ಮಹಾಲಿಂಗಪೂರ.	1950
	ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ಶಾಲೆಗಳು :	
167.	ಕೆ.ಎಲ್.ಇ. ಸಂಸ್ಥೆಯ ಬಿ. ಎಸ್. ಹಂಚಿನಾಳ ಕನ್ನಡ ಪ್ರಾಥಮಿಕ ಶಾಲೆ, ಬೆಳಗಾವಿ.	1943
168.	ಕೆ.ಎಲ್.ಇ. ಸಂಸ್ಥೆಯ ಶಿಶುವಿಹಾರ, ಕಾಲೇಜ ರಸ್ತೆ, ಬೆಳಗಾವಿ.	1960
169.	ಕೆ.ಎಲ್.ಇ. ಸಂಸ್ಥೆಯ ಶಿಶುವಿಹಾರ, ಅಂಕೋಲಾ.	1969
170.	ಕೆ.ಎಲ್.ಇ. ಸಂಸ್ಥೆಯ ಪ್ರಾಯೋಗಿಕ ಪ್ರಾಥಮಿಕ ಶಾಲೆ, ಅಂಕೋಲಾ.	1970
171.	ಕೆ.ಎಲ್.ಇ. ಸಂಸ್ಥೆಯ ಎಚ್. ಎಫ್. ಕಟ್ಟಿಮನಿ ಕನ್ನಡ ಪ್ರಾಥಮಿಕ ಶಾಲೆ, ಹುಬ್ಬಳ್ಳಿ.	1983
172.	ಕೆ.ಎಲ್.ಇ. ಸಂಸ್ಥೆಯ ಶಿಶುವಿಹಾರ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಮಾಲೂರು.	1989
173.	ಕೆ.ಎಲ್.ಇ. ಸಂಸ್ಥೆಯ ಸಾತಗೌಡ ಚನಗೌಡ ಪಾಟೀಲ ಕನ್ನಡ ಮಾಧ್ಯಮ ಕಾನ್ವೆಂಟ ಶಾಲೆ, ಅಂಕಲಿ.	1989
174.	ಕೆ.ಎಲ್.ಇ. ಸಂಸ್ಥೆಯ ಸಿಲ್ವರ್ ಜ್ಯುಬಲಿ ಪ್ರಾಥಮಿಕ ಶಾಲೆ, ಬಾರ್ಶಿ (ಮಹಾರಾಷ್ಟ್ರ)	1990
175.	ಕೆ.ಎಲ್.ಇ. ಸಂಸ್ಥೆಯ ಸಿಲ್ವರ್ ಜ್ಯುಬಲಿ ಕಿಂಡರಗಾರ್ಟನ್, ಬಾರ್ಶಿ (ಮಹಾರಾಷ್ಟ್ರ)	1990
176.	ಕೆ.ಎಲ್.ಇ. ಸಂಸ್ಥೆಯ ಡಾ. ದಯಾನಂದ ಹಿರೇಮಠ ಕನ್ನಡ ಮಾಧ್ಯಮ ಕಾನ್ವೆಂಟ ಶಾಲೆ, ಕೆರೂರ.	1990
177.	ಕೆ.ಎಲ್.ಇ. ಸಂಸ್ಥೆಯ ಬಾಲ ಸಂಸ್ಕಾರ ಕೇಂದ್ರ, ಅಕ್ಕಲಕೋಟ (ಮಹಾರಾಷ್ಟ್ರ)	1992
178.	ಕೆ.ಎಲ್.ಇ. ಸಂಸ್ಥೆಯ ಆಂಗ್ಲ ಮಾಧ್ಯಮಾ ಶಾಲೆ, ಹಾವೇರಿ.	1998
179.	ಕೆ.ಎಲ್.ಇ. ಸಂಸ್ಥೆಯ ಕನ್ನಡ ಪ್ರಾಥಮಿಕ ಶಾಲೆ, ಗದಗ.	1998
180.	ಕೆ.ಎಲ್.ಇ. ಸಂಸ್ಥೆಯ ಕನ್ನಡ ಪ್ರಾಥಮಿಕ ಶಾಲೆ, ಸವದತ್ತಿ	1998
181.	ಕೆ.ಎಲ್.ಇ. ಸಂಸ್ಥೆಯ ಶ್ರೀಮತಿ ಚಂದ್ರಕಲಾ ಭೀಮರಾವ್ ರಣಮೊಡೆ ಆಂಗ್ಲ ಮಾಧ್ಯಮ ಶಾಲೆ, ಅಥಣಿ.	1998
182.	ಕೆ.ಎಲ್.ಇ. ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆ, ಮಂಜುನಾಥ ನಗರ, ಹುಬ್ಬಳ್ಳಿ.	2002
183.	ಕೆ.ಎಲ್.ಇ. ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆ, ಜುಳೆ, ಸೊಲ್ಲಾಪೂರ (ಮಹಾರಾಷ್ಟ್ರ)	2002
184.	ಕೆ.ಎಲ್.ಇ. ಸಂಸ್ಥೆಯ ಶಾಲೆ, ಗೋಕಾಕ.	2003
185.	ಕೆ.ಎಲ್.ಇ. ಸಂಸ್ಥೆಯ ಅಂತಾರಾಷ್ಟ್ರೀಯ ಶಾಲೆ, ಲಿಂಗರಾಜ ಮಹಾವಿದ್ಯಾಲಯ ಆವರಣ, ಬೆಳಗಾವಿ.	2004
186.	ಕೆ.ಎಲ್.ಇ. ಸಂಸ್ಥೆಯ ಶಾಲೆ, ಆರ್. ಎಲ್. ಎಸ್. ಸಂ. ಪ.ಪೂ. ಮಹಾವಿದ್ಯಾಲಯ ಆವರಣ, ಧಾರವಾಡ.	2005
187.	ಕೆ.ಎಲ್.ಇ. ಸಂಸ್ಥೆಯ ಸಿ.ಬಿ.ಎಸ್.ಸಿ. ಶಾಲೆ, ನಿಪ್ಪಾಣಿ.	2005
188.	ಕೆ.ಎಲ್.ಇ. ಸಂಸ್ಥೆಯ ಪ್ರಾಥಮಿಕ ಶಾಲೆ, ಸೊಲ್ಲಾಪೂರ (ಮಹಾರಾಷ್ಟ್ರ)	2005
189.	ಕೆ.ಎಲ್.ಇ. ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆ, ಮಾಲೂರು.	2006
190.	ಕೆ.ಎಲ್.ಇ. ಸಂಸ್ಥೆಯ ಪ್ರಾಥಮಿಕ ಶಾಲೆ, ಅಂಕಲಿ.	2006
191.	ದಿ ಬ್ಯಾನಿಯನ್ ರನ್ನಬಾಯ ಕೆ.ಎಲ್.ಇ. ಸೊಸಾಯಿಟಿ, ಬೆಳಗಾವಿ.	2007
192.	ಕೆ.ಎಲ್.ಇ. ಸಂಸ್ಥೆಯ ರಾಜ–ರಾಜೇಶ್ವರಿ ಬಾಲವಾಡಿ, ರಾಣೆಬೆನ್ನೂರು.	1987
193.	ಕೆ.ಎಲ್.ಇ. ಸಂಸ್ಥೆಯ ರಾಜ–ರಾಜೇಶ್ವರಿ ಲೋವರ ಪ್ರೈಮರಿ ಸ್ಕೂಲ, ರಾಣೆಬೆನ್ನೂರು.	1987
194.	ಕೆ.ಎಲ್.ಇ. ಸಂಸ್ಥೆಯ ರಾಜ–ರಾಜೇಶ್ವರಿ ಹೈಯರ ಪ್ರೈಮರಿ ಸ್ಕೂಲ, ರಾಣೆಬೆನ್ನೂರು.	1973
195.	ಕೆ.ಎಲ್.ಇ. ಸಂಸ್ಥೆಯ ಕೆ.ಎಲ್.ಇ. ಶಾಲೆ, ನಾಗರಭಾವಿ–ಬೆಂಗಳೂರು.	2008
196.	ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪ್ರಾಥಮಿಕ ಶಾಲೆ, ಮಹಾಲಿಂಗಪೂರ	2000
197.	ದಿ ಬ್ಯಾನಿಯಾನ ಸ್ಕೂಲ ರನ್ನ ಬಾಯ ಕೆ.ಎಲ್.ಇ. ಸೊಸೈಟಿ, ಬಿ.ವ್ಹಿ.ಬಿ. ಕಾಲೇಜ ಆವರಣ, ಹುಬ್ಬಳ್ಳಿ	2009
198.	ಕೆ.ಎಲ್.ಇ. ಸಂಸ್ಥೆಯ ಟೊಡ್ಲರ್ಸ್ ಅಕಾಡೆಮಿ, ಅಂಕಲಿ	2009
	ಇತರ ಸಂಸ್ಥೆಗಳು :	
199.	ಕೆ.ಎಲ್.ಇ. ಸಂಸ್ಥೆಯ ವಸತಿ ನಿಲಯಗಳು, ಲಿಂಗರಾಜ ಕಾಲೇಜ ಆವರಣ, ಬೆಳಗಾವಿ.	1925
200.	ಕೆ.ಎಲ್.ಇ. ಸಂಸ್ಥೆಯ ತೋಂಟದಾರ್ಯ ಮುದ್ರಣಾಲಯ, ಹುಬ್ಬಳ್ಳಿ.	1925
201.	ಕೆ.ಎಲ್.ಇ. ಸಂಸ್ಥೆಯ ಎಲ್. ಕೆ. ಖೋತ ಜಿಮಖಾನಾ ಹಾಲ್, ಅಥಣಿ.	1986
202.	ಕೆ.ಎಲ್.ಇ. ಸಂಸ್ಥೆಯ ಕುಟುಂಬ ಸಲಹಾ ಕೇಂದ್ರ, ಅಂಕೋಲಾ.	1989
203.	ಕೆ.ಎಲ್.ಇ. ಸಂಸ್ಥೆಯ ವಸತಿ ನಿಲಯ, ಬೆಂಗಳೂರು.	1996
204.	ಕೆ.ಎಲ್.ಇ. ಸಂಸ್ಥೆಯ ಕಾರ್ಯನಿರತ ಮಹಿಳೆಯರ ವಸತಿ ನಿಲಯ, ಗೋಕಾಕ.	1996
205.	ಕೆ.ಎಲ್.ಇ. ಸಂಸ್ಥೆಯ ಕಾರ್ಯನಿರತ ಮಹಿಳಯರ ವಸತಿನಿಲಯ, ಅಂಕೋಲಾ.	2003
206.	ಕೆ.ಎಲ್.ಇ. ಸಂಸ್ಥೆಯ ಧರ್ಮಶಾಲೆ, ಕೆ.ಎಲ್.ಇ.ಎಸ್. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಆವರಣ, ಬೆಳಗಾವಿ.	2003
207.	ಕೆ.ಎಲ್.ಇ. ಸಂಸ್ಥೆಯ ಮಹಾತ್ಮಾ ಗಾಂಧಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿ ನಿಲಯ, ಹನುಮನಮಟ್ಟಿ	1977
208.	ಕೆ.ಎಲ್.ಇ. ಸಂಸ್ಥೆಯ ರಾಜ–ರಾಜೇಶ್ವರಿ ಅಸಹಾಯಕ ಹೆಣ್ಣುಮಕ್ಕಳ ಪೋಷಣಾಲಯ, ರಾಣೇಬೆನ್ನೂರು.	1971
209.	ಕೆ.ಎಲ್.ಇ. ಸಂಸ್ಥೆಯ ವಸತಿ ನಿಲಯಗಳು ಮತ್ತು ರೆಸಿಡೆನ್ಸಿಯಲ್ ಕ್ವಾರ್ಟರರ್ಸ, ಜೆ.ಎನ್.ಎಂ.ಸಿ. ಆವರಣ, ಬೆಳಗಾವಿ.	1965
210.	ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಕಲ್ಟಿ ಡೆವ್ಹಲಪಮೆಂಟ್, ಬೆಳಗಾವಿ.	2009

ಅಡಿ ಟಿಪ್ಪಣಿಗಳು :

೧. ಸಂಪಾದಕರು ಶ್ರೀ ಬಿ. ಎಸ್. ಗವಿಮಠ, ಶ್ರೀ ಎ. ಆರ್. ಪಾಟೀಲ : 'ಕೆ.ಎಲ್.ಇ. ಸೊಸೈಟಿ ಸಂಪುಟ -೧'', ಪುಟ ೧೩-೧೪, ಪ್ರಸಾರಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಲಿಂಗರಾಜ ಕಾಲೇಜ್ ರೋಡ್, ಬೆಳಗಾವಿ. ೨೦೦೨.

೨. ಅದೇ ಪುಟ ೧೦.

೩. ಅದೇ ಪುಟ ೧೬.

೪. ಅದೇ ಪುಟ ೧೭.

೫. ಅದೇ ಪುಟ ೩೪

೬. ಸಂಪಾದಕರು ಬಿ. ಎಸ್. ಗವಿಮಠ 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಪುಟ ೮-೯, ಪ್ರಕಾಶನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ. ೧೯೯೫.

೭. ಅದೇ ಪುಟ ೧೩-೧೪.

೮. ಅದೇ ಪುಟ ೧೧-೧೨.

೯. ಸಂಪಾದಕರು ಬಿ. ಎಸ್. ಗವಿಮಠ 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಪುಟ ೧೦, ಪ್ರಕಾಶನ, ೧೯೯೫ ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ.

೧೦. ಅದೇ ಪುಟ ೪೩-೪೪.

೧೧. ಸಂಪಾದಕರು ಯುಗಪುರುಷರ ಹಸ್ತಪ್ರತಿ, ಪ್ರಕಾಶನ ಕೆ.ಎಲ್.ಇ. ಪ್ರಸಾರಂಗ, ಬೆಳಗಾವಿ.

೧೨. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೭, ಪುಟ ೭.

೧೩. ಡಾ. ವ್ಹಿ. ವ್ಹಿ. ಹೆಬ್ಬಳ್ಳಿ 'ಲಾಂಛನಕೆ ಶರಣೆಂಬೆ' ೨೦೦೭, ಪುಟ ೩೭, ೩೮, ೩೯, ಪ್ರಕಾಶನ ಪ್ರಸಾರಂಗ, ಕೆ.ಎಲ್.ಇ. ಸಂಸ್ಥೆ ಬೆಳಗಾವಿ.

೧೪. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೭, ಪುಟ ೩.

೧೫. ಅದೇ ಪುಟ ೪೬, ೪೭, ೪೮.

೧೬. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೯, ಪುಟ ೬.

೧೭. ಕೆ.ಎಲ್.ಇ. ಸೊಸೈಟಿಯ ಸ್ವರ್ಣಮಹೋತ್ಸವದ ಸಂಚಿಕೆ, ಪುಟ ೧೦. ೧೯೬೯.

೧೮. ಕೆ.ಎಲ್.ಇ. ಸೊಸೈಟಿಯ ವಜ್ರಮಹೋತ್ಸವ, ಸ್ಮರಣ ಸಂಚಿಕೆ, ೧೯೭೯, ಪುಟ ೧೫.

೧೯. ಕೆ.ಎಲ್.ಇ. ಸೊಸೈಟಿಯ ಸಂಪುಟ -೧, ಸಂಪಾದಕರು ಶ್ರೀ ಬಿ. ಎಸ್. ಗವಿಮಠ, ಶ್ರೀ ಎ. ಆರ್. ಪಾಟೀಲ, ಪುಟ ೨೩೪, ೨೩೫. ೨೦೦೨.

೨೦. ಸಂಪಾದಕರು ಪ್ರೊ. ವಿ. ಬಿ. ಹಿರೇಮಠ, ಪ್ರಭಾಂಕಲಿ, ಕೋರೆ ಅವರ ಅಭಿನಂದನಾ ಗ್ರಂಥ, ಕೆ.ಎಲ್.ಇ. ನೇತಾರ ಅಂಕಣ, ಲೇಖಕರು ಡಾ. ಎ. ಎಂ. ಪಠಾಣ, ಪುಟ ೩೫. ೧೯೯೯.

೨೧. ವಿಶ್ವೇಶ್ವರ ಭಟ್ 'ನೂರೆಂಟು ಮಾತು' ಅಂಕಣ. ಎಲ್ಲ ಓರೆಕೋರೆ ದಾಟ ಕೆ.ಎಲ್.ಇ.ಯನ್ನು ಬಾನೆತ್ತರಕ್ಕೆ ಬೆಳೆಸಿದ ಕೋರೆ, ವಿಜಯ ಕರ್ನಾಟಕ ಪತ್ರಿಕೆ, ದಿನಾಂಕ ೧೪-೧೦-೨೦೦೮, ಪುಟ ೬

೨೨. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೧, ಪುಟ ೩.

೨೩. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೭, ಪುಟ ೩, ೪.

೨೪. ದಿನಾಂಕ ೫-೨-೨೦೦೯ರ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ಪುಟ ೫.

೨೫. ದಿನಾಂಕ ೭-೨-೨೦೦೯ರ ವಿಜಯ ಕರ್ನಾಟಕ, ಕನ್ನಡ ದಿನಪತ್ರಿಕೆ, ಪುಟ ೧.

೨೬. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ಪುಟ ೪.

೨೭. ಕೆ.ಎಲ್.ಇ. ಸಂಸ್ತೆಯ ಕಾನ್ವೆಂಟ್, ಅಥಣಿ ಆಡಿಟ್ ವರದಿ, ೨೦೦೮, ಪುಟ ೭.

೨೮. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೪, ಪುಟ ೭.

೨೯. ಕೆ.ಎಲ್.ಇ. ಸಂಸ್ಥೆಯ ಶಿಕ್ಷಕ ತರಬೇತಿ ಡಿ.ಎಡ್. ಸಂಸ್ಥೆ, ಅಥಣಿ ವಾರ್ಷಿಕ ವರದಿ, ೨೦೦೭, ಪುಟ ೩.

೩೦. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೮, ಪುಟ ೧೧.

೩೧. ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಬೆಂಗಳೂರು, ಇದರ ವಾರ್ಷಿಕ ವರದಿ ೨೦೦೬, ಪುಟ ೭.

೩೨. ಕೆ.ಎಲ್.ಇ ಸಂಸ್ಥೆಯ ಕೃಷಿ ಮತ್ತು ಸಂಶೋಧನಾ ಕೇಂದ್ರ, ಬೆಳಗಾವಿ, ವಾರ್ಷಿಕ ವರದಿ, ೨೦೦೭, ಪುಟ ೩.

೩೩. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೮, ಪುಟ ೧೧.

೩೪. ಪ್ರಥಮ ವಾರ್ಷಿಕ ವರದಿ, ಕೆ.ಎಲ್.ಇ. ಇಂಜಿನಿಯರಿಂಗ್ ಕಾಲೇಜು, ಚಿಕ್ಕೋಡಿ, ೨೦೦೮, ಪುಟ ೭.

೩೫. ಕೆ.ಎಲ್.ಇ. ಸಂಸ್ಥೆಯ 'ಯೋಗಿ' ವಾರ್ಷಿಕ ವರದಿ, ಎಸ್.ಎಸ್.ಯು.ಎಸ್. ಮಹಾವಿದ್ಯಾಲಯ, ೨೦೦೮, ಪುಟ ೪.

೩೬. ಕೆ.ಎಲ್.ಇ. ಸಂಸ್ಥೆಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು, ವಾರ್ಷಿಕ ವರದಿ, ೨೦೦೭, ಪುಟ ೧೦

೩೭. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೯, ಪುಟ ೧೧೧.

೩೮. ಸಂಯುಕ್ತ ಕರ್ನಾಟಕ, ೧-೭-೨೦೦೯, ಪುಟ ೫.

೩೯. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ವಾರ್ಷಿಕ ವರದಿ, ೨೦೦೮, ಪುಟ ೨

೪೦. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೮, ಪುಟ ೪.

೪೧. ೨೦, ೨೨-೧೦-೨೦೦೯ ರಂದು ಕ್ಷೇತ್ರಕಾರ್ಯವನ್ನು ಕೆ.ಎಲ್.ಇ. ಸಂಸ್ಥೆಗಳಾದ ಅಥಣಿ, ಚಿಕ್ಕೋಡಿ, ಬೆಳಗಾವಿ, ಗದಗ ವಸತಿ ನಿಲಯಗಳಿಗೆ ಭೆಟಿಕೊಟ್ಟು, ಖುದ್ದಾಗಿ ಪರಿಶೀಲಿಸಿ ಕಂಡುಕೊಂಡ ಮಾಹಿತಿ ಪ್ರಕಾರ.

೪೩. ಕೆ.ಎಲ್.ಇ. ವಾರ್ಷಿಕ ವರದಿ, ೨೦೦೮, ಪುಟ ೧೯.

೪೪. ಕೆ.ಎಲ್.ಇ. ವಾರ್ಷಿಕ ವರದಿ, ೨೦೦೭, ಪುಟ ೧೧೧.

೪೫. ವಿಜಯ ಕರ್ನಾಟಕ ದಿನಪತ್ರಿಕೆ, ೫-೨-೨೦೦೯, ಪುಟ ೫.

೪೬. ಡಾ. ವ್ಹಿ. ವ್ಹಿ. ಹುಬ್ಬಳ್ಳಿ ಲಾಂಛನಕೆ ಶರಣೆಂಬೆ, ಪ್ರಸಾರಂಗ ಕೆ.ಎಲ್.ಇ. ಸಂಸ್ಥೆ ಬೆಳಗಾವಿ, ಪುಟ ೬೫. ೨೦೦೭.

೪೭. ಡಾ. ವ್ಹಿ. ವ್ಹಿ. ಹುಬ್ಬಳ್ಳಿ ಲಾಂಛನಕೆ ಶರಣೆಂಬೆ, ಪ್ರಸಾರಂಗ ಕೆ.ಎಲ್.ಇ. ಸಂಸ್ಥೆ ಬೆಳಗಾವಿ, ಪುಟ ೬೫. ೨೦೦೭.

೪೮. ಕೆ.ಎಲ್.ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಕಾಲೇಜು, ಬೆಂಗಳೂರು, ೨೦೦೧, ವಾರ್ಷಿಕ ವರದಿ, ಪುಟ ೩.

೪೯. ವಿಜಯ ಕರ್ನಾಟಕ ದಿನಪತ್ರಿಕೆ, ಯೋಗ ಸಂದೇಶ ವಿಶೇಷ ಪುರವಣಿ, ಬುಧವಾರ ೭-೨೦೦೯, ಪುಟ ೨.

೫೦. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೧, ಪುಟ ೨.

೫೧. ದಿನಾಂಕ ೨೦-೮-೨೦೦೮ರಲ್ಲಿ ಶ್ರೀ ವಿಜಯ ಜಾಧವರನ್ನು ಸಂದರ್ಶನ ಮಾಡಿದಾಗ ಹೇಳಿದ ಅಂಶಗಳು.

೫೨. ಡಾ. ಬಸವರಾಜ್ ಜಗಜಂಪಿ ದಿನಾಂಕ ೧೦-೯-೨೦೦೮ರಂದು ಕೋರೆಯವರ ಪ್ರತಿಭಾವಂತ ಸಿಬ್ಬಂದಿಯನ್ನು ಪ್ರೋತ್ಸಾಹಿಸುವ ಬಗ್ಗೆ ಕುರಿತು ಸಂದರ್ಶನದಲ್ಲಿ ಹೇಳಿದ್ದು.

೫೪. ಕೆ.ಎಲ್.ಇ. ಸೊಸೈಟಿ, ಸಂಪುಟ-೧, ೨೦೦೨, ಪುಟ ೨೨೭, ಸಂಪಾದಕರು ಜಿ. ಎಸ್. ಗವಿಮಠ ಮತ್ತು ಎ. ಆರ್. ಪಾಟೀಲ.

೫೫. ಪ್ರಜಾವಾಣಿ ಕನ್ನಡ ದಿನಪತ್ರಿಕೆ, ದಿನಾಂಕ ೫-೧-೨೦೦೮, ಪುಟ ೩.

೫೬. ಸಂಯುಕ್ತ ಕರ್ನಾಟಕ ಕನ್ನಡ ದಿನಪತ್ರಿಕೆ, ದಿನಾಂಕ ೧೪-೮-೨೦೦೮, ಪುಟ ೩.

೫೭. ೧೦-೮-೨೦೦೮ ರಿಂದ ೨೧-೮-೨೦೦೮ರವರೆಗೆ ಕ್ಷೇತ್ರ ಕಾರ್ಯವನ್ನು ಕೆ.ಎಲ್.ಇ. ಸಂಸ್ಥೆಯ ಬೆಳಗಾವಿ.

ಚಿಕ್ಕೋಡಿ, ಬೆಂಗಳೂರು ಸಂದರ್ಶನ ನಡೆಸಿ ಪಡೆದ ಮಾಹಿತಿ ಪ್ರಕಾರ.

೫೮. ದಿನಾಂಕ ೨೦-೮-೨೦೦೮ ರಿಂದ ೨೫-೮-೨೦೦೮ರಲ್ಲಿ ಕೆ.ಎಲ್.ಇ. ಸಂಸ್ಥೆ ಗದಗ, ನಿಪ್ಪಾಣಿ, ಬೆಂಗಳೂರು, ಬೆಳಗಾವಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಖುದ್ದು ಪರಿಶೀಲಿಸಿ ಪಡೆದ ಮಾಹಿತಿ.

೫೯. ಉಕ್ಕಿನ ಮನುಷ್ಯ ವಿಶೇಷ ಪುರವಣೆ, ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ ೧-೬-೨೦೦೯, ಪುಟ ೩.

೬೦. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೪, ಪುಟ ೨.

೬೧. ಕೆ.ಎಲ್.ಇ. ಸಂಸ್ಥೆಯ ಬಿ. ವ್ಹಿ. ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜು ವಾರ್ಷಿಕ ವರದಿ, ೨೦೦೮, ಪುಟ ೩.

೬೨. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೬, ಪುಟ ೪.

೬೩. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೫, ಪುಟ ೩.

೬೪. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೮, ಪುಟ ೩.

೬೫. ಕೆ.ಎಲ್.ಇ. ೯೧ನೆ ಸಂಸ್ಥಾಪನ ದಿನಾಚರಣೆ, ಶ್ರೀ ಬಿ. ಎಸ್. ಮಾಳವಾಡ, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ೧೫-೧೨-೨೦೦೬, ಪುಟ ೬.

೬೬. ಕೆ.ಎಲ್.ಇ. ವಾರ್ಷಿಕ ವರದಿ, ೨೦೦೮, ಪುಟ ೫೯.

೬೭. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ, ೨೦೦೪, ಪುಟ ೧೦.

೬೮. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೮, ಪುಟ ೨.

೬೯. ದಿನಾಂಕ ೨೨-೬-೨೦೦೮, ಕನ್ನಡ ಪ್ರಭ ದಿನಪತ್ರಿಕೆ, ಪುಟ ೩.

೭೦. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ, ೨೦೦೫, ಪುಟ ೨.

೭೧. ದಿನಾಂಕ ೭-೧೦-೨೦೦೯, ಸಂಯುಕ್ತ ಕರ್ನಾಟಕ ಕನ್ನಡ ದಿನಪತ್ರಿಕೆ, ಪುಟ ೪.

೭೨. ಬಿ. ಎಸ್. ಗವಿಮಠ, ಸಂಪಾದಕರು, ಸ್ಪಂದನ ರಾಜ್ಯೋತ್ಸವ ಪ್ರಶಸ್ತಿ ವಿಭೂಷಿತ ಅಂಕಣ, ಡಾ. ಬಸವರಾಜ ಜಗಜಂಪಿ, ಪುಟ ೫೯, ೨೦೦೬.

೭೩. ಕನ್ನಡ ಪ್ರಭಾ ಪತ್ರಿಕೆ, ೨೫-೯-೨೦೦೬, ಪುಟ ೧.

೭೪. ೦೪-೧-೨೦೦೮, ಕನ್ನಡ ಪ್ರಭಾ ಪತ್ರಿಕೆ, ಪುಟ ೩.

೭೫. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೬, ಪುಟ ೩.

೭೬. ಸಂಪಾದಕರು ಶ್ರೀ ಬಿ. ಎಸ್. ಗವಿಮಠ, ಶ್ರೀ ಎ. ಆರ್. ಪಾಟೀಲ, ಕೆ.ಎಲ್.ಇ. ಸೊಸೈಟಿ ಸಂಪುಟ – ೧, ೨೦೦೨, ಪುಟ ೨೩೪, ೨೩೫. ಪ್ರಸಾರಂಗ ಕೆ.ಎಲ್.ಇ. ಪ್ರಕಟಣೆ.

೭೭. ಪ್ರಜಾವಾಣಿ ಕನ್ನಡ ದಿನಪತ್ರಿಕೆ, ೨೬-೬-೦೪, ಪುಟ ೧.

೭೮. ಸಂಯುಕ್ತ ಕರ್ನಾಟಕ ೧೩-೯-೦೬, ಪುಟ ೪.

೭೯. ೧೧-೪-೨೦೦೬, ಪ್ರಜಾವಾಣಿ ಕನ್ನಡ ದಿನಪತ್ರಿಕೆ, ಪುಟ ೩.

೮೦. ಕೆ.ಎಲ್.ಇ. ಸಂಸ್ಥೆಯ ೨೦೦೨ರಿಂದ ೨೦೦೮ರವರೆಗೆ ವಾರ್ಷಿಕ ವರದಿಯನ್ನು ಪರಿಶೀಲಿಸಿ ಪಡೆದ ಮಾಹಿತಿಗಳು.

೮೧. ಪ್ರಜಾವಾಣಿ ಕನ್ನಡ ದಿನಪತ್ರಿಕೆ, ೧೪-೧೨-೨೦೦೮, ಪುಟ ೨.

೮೨. ಕನ್ನಡಪ್ರಭ ದಿನಪತ್ರಿಕೆ, ೧೨-೭-೦೯, ಪುಟ ೩.

೮೩. ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ ೭-೨-೦೯, ಪುಟ ೧೦.

೮೪. ಕನ್ನಡ ಪ್ರಭಾ ದಿನಪತ್ರಿಕೆ ಪ್ರಕಟಣೆ, ೨೬-೬-೦೮, ಪುಟ ೩.

೮೫. ಕೆ.ಎಲ್.ಇ. ವಾರ್ಷಿಕ ವರದಿ, ೨೦೦೮, ಪುಟ ೬೨.

೮೬. ಕೆ. ಎಲ್. ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೯, ಪುಟ-೧ ರಿಂದ ೪.

ಅಧ್ಯಾಯ : ಐದು

ಡಾ. ಪ್ರಭಾಕರ ಕೋರೆಯವರ ರಾಜಕೀಯ ಸಾಧನೆಗಳು



ಅಧ್ಯಾಯ : ಐದು

ಕೋರೆಯವರ ರಾಜಕೀಯ ಸಾಧನೆಗಳು

ಗಡಿ ಭಾಗದ ಬೆಳಗಾವಿ ಜಿಲ್ಲೆಯ ಪ್ರಮುಖ ನಾಯಕರಾಗಿ ನಾಲ್ಕು ದಶಕಗಳಿಂದ ತಮ್ಮ ಪ್ರಭಾವವನ್ನು ಬೀರುತ್ತ , ರಾಜ್ಯದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿದ ಡಾ. ಪ್ರಭಾಕರ ಕೋರೆ ಶ್ರೇಷ್ಠ ನಾಯಕರ ಸಾಲಿನಲ್ಲಿ ನಿಲ್ಲುತ್ತಾರೆ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೊಸ ಭಾಷ್ಯ ಬರೆದ ಕೀರ್ತಿ ಕೋರೆಯವರದು. ಒಬ್ಬ ರಾಜಕೀಯ ಮುತ್ಸದ್ಧಿಯು ಹೌದು. ಕಾಲಕ್ಕೆ ತಕ್ಕಂತೆ ಅವರು ನಿರ್ಧರಿಸುವ ರಾಜಕೀಯ ನಡೆ ಹಲವರನ್ನು ಚಕಿತಗೊಳಿಸಿದ್ದು ಉಂಟು. ರಾಜಕೀಯದ ಮೂಲಕ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಕ್ರಾಂತಿಯನ್ನು ಮಾಡಿದವರು.

ತಾವು ಬೆಳೆದ ಪ್ರದೇಶದ ಅಭಿವೃದ್ಧಿಗಾಗಿಯೇ ಚಿಂತಿಸುವ ಶ್ರೀ ಪ್ರಭಾಕರ ಕೋರೆಯವರು ತಮ್ಮ ಕನಸುಗಳ ಅನುಷ್ಠಾನಕ್ಕಾಗಿ ಹಲವಾರು ಹೋರಾಟಗಳನ್ನು ಮಾಡಿ, ಜನಪ್ರಿಯತೆಯನ್ನು ಗಳಿಸಿದವರು. ಈ ಕಾರಣಕ್ಕಾಗಿಯೇ ರಾಷ್ಟ್ರದ ಹಾಗೂ ರಾಜ್ಯದ ನಾಯಕರನ್ನು ತಮ್ಮ ಪ್ರದೇಶಕ್ಕೆ ಕರೆಸಿ ಈ ಭಾಗದ ಸಮಸ್ಯೆಗಳ ಅರಿವು ಮೂಡಿಸುತ್ತಿರುವುದು ಇವರು ತಮ್ಮ ಕ್ಷೇತ್ರದ ಜನರ ಹಾಗೂ ಪ್ರದೇಶದ ಕುರಿತು ಎಂತಹ ಕಳಕಳಿ ಹೊಂದಿದ್ದಾರೆ ಎನ್ನುವುದನ್ನು ತೋರಿಸುತ್ತದೆ. ೨೦೦೬ ರಲ್ಲಿ ವಿಧಾನ ಮಂಡಲ ಅಧಿವೇಶನವನ್ನು ಪ್ರಥಮ ಬಾರಿಗೆ ರಾಜ್ಯಧಾನಿಯಿಂದ ಹೊರಗೆ, ಬೆಳಗಾವಿಯಲ್ಲಿ ತಮ್ಮ ನೇತೃತ್ವದಲ್ಲಿ ಯಶಸ್ವಿಯಾಗಿ ಸಂಘಟಿಸಿದ ಸಾಧನೆ ಇವರದು. ೨೦೦೯ ರಲ್ಲಿ ಪುನಃ ಎರಡನೇ ಬಾರಿಗೆ ಅಧಿವೇಶನ ನಡೆಸಲು ಶ್ರಮಿಸಿದ ಶ್ರೀ ಪ್ರಭಾಕರ ಕೋರೆಯವರ ಕಾರ್ಯ ಉತ್ತರ ಕರ್ನಾಟಕದ ಅಭಿವೃದ್ಧಿಗೆ ದಿಕ್ಸೂಚಿಯಾಗಿದೆ.[೧]

ಸಮಾಜದ ಎಲ್ಲ ವರ್ಗಗಳ ಜನರನ್ನು ಸಮಾನವಾಗಿ ಕಾಣುವ ಇವರು ಒಬ್ಬ ಜ್ಯಾತ್ಯಾತೀತ ನಾಯಕರೂ ಹೌದು. ಜನರು ಕಷ್ಟದಲ್ಲಿದ್ದಾಗ ತ್ವರಿತವಾಗಿ ಸ್ಪಂದಿಸುವ ಮಾನವೀಯ ಗುಣದ ಮೇರು ನಾಯಕರಾದ ಡಾ. ಪ್ರಭಾಕರ ಕೋರೆಯವರು, ತಾವು ಇರುವ ರಾಜಕೀಯ ಪಕ್ಷಗಳಿಗೆ ಬಲಾಢ್ಯವಾದ ಶಕ್ತಿಯನ್ನು ತಂದು ಕೊಟ್ಟವರು. ಪಕ್ಷ ವಹಿಸಿದ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿ ನಾಯಕರ ವಿಶ್ವಾಸಕ್ಕೆ ಪಾತ್ರರಾದವರು. ರಾಜ್ಯಸಭೆಯ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಪ್ರಸ್ತುತ ಎರಡನೇ ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿ, ಜನಸೇವೆಯಲ್ಲಿ ನಿರತರಾಗಿದ್ದಾರೆ.[೨]

ಅನೇಕ ಸಹಕಾರಿ ಸಂಘಗಳ ಸಂಸ್ಥಾಪಕರಾಗಿ ನಾಲ್ಕು ದಶಕಗಳ ಕಾಲ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಸಾಮಾನ್ಯ ಜನರ ಸಲುವಾಗಿ ಕಾರ್ಯ ಮಾಡುತ್ತಿರುವ ಶ್ರೀಯುತರು ಜನನಾಯಕರಾಗಿ

ರೂಪಗೊಂಡಿದ್ದಾರೆ. ಡಾ. ಪ್ರಭಾಕರ ಕೋರೆಯವರ ಕುರಿತು ಈ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಪ್ರಭಾಕರ ಕೋರೆಯವರ ಮೇಲೆ ಕುಟುಂಬದ ರಾಜಕೀಯ ಪ್ರಭಾವ :

ಡಾ. ಪ್ರಭಾಕರ ಕೋರೆಯರು ರಾಜಕೀಯ ಕುಟುಂಬದ ಹಿನ್ನೆಲೆ ಉಳ್ಳವರು. ಅವರ ತಂದೆಯವರು ಸ್ವಾತಂತ್ರ್ಯ ಹೋರಾಟಗಾರರು. ೧೯೩೪ ರಲ್ಲಿ ಗಾಂಧೀಜಿಯವರು ಹರಿಜನ ಪತ್ರಿಕೆಗೆ ಸಂಬಂಧಿಸಿದಂತೆ ಅಂಕಲಿಗೆ ಬಂದಾಗ ಶ್ರೀ ಲಿಂಗೈಕ್ಯ ಬಸವಪ್ರಭು ಕೋರೆಯವರೇ ಆತಿಥ್ಯವನ್ನು ವಹಿಸಿಕೊಂಡಿದ್ದರು. ಬಿಹಾರ ಭೂಕಂಪ ಪರಿಹಾರ ನಿಧಿಗಾಗಿ ಡಾ. ಬಾಬು ರಾಜೇಂದ್ರ ಪ್ರಸಾದವರು ಆಗಮಿಸಿದ್ದಾಗ ಶ್ರೀಯುತರು ಉದಾರವಾಗಿ ದೇಣಿಗೆ ನೀಡಿದವರು.[೩] ಸೇವಾದಳದ ಶಿಬಿರವನ್ನು ಏರ್ಪಡಿಸಿದ್ದರು ಮತ್ತು ಹರಿಜನರೊಂದಿಗೆ ಸಹ ಭೋಜನ ಮಾಡಿ, ಸಮಾನತೆಯ ಸಂದೇಶವನ್ನು ಎತ್ತಿ ಹಿಡಿದವರು. ಕರ್ನಾಟಕ ಏಕೀಕರಣಕ್ಕಾಗಿಯೂ ಶ್ರೀಯುತರು ದುಡಿದವರು. ಹಲವಾರು ಜನರಿಗೆ ಆರ್ಥಿಕ ಸಹಾಯ ಮಾಡಿದ್ದರು. ಹಾಗೆಯೇ ಹಳ್ಳಿ ಹಳ್ಳಿಯ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಒದಗಿಸುತ್ತಿದ್ದರು. ಒಂದು ರೀತಿಯಲ್ಲಿ ಅವರ ಮನೆ ನ್ಯಾಯಾಲಯವಾಗಿತ್ತು. ನಂತರ ಇವರ ಹಿರಿಯ ಮಗ ಚಿದಾನಂದ ಕೋರೆಯವರು ಕೂಡಾ ಸಕ್ರಿಯ ರಾಜಕೀಯದಲ್ಲಿ ಇದ್ದವರು.

೧೯೫೭ ರಲ್ಲಿ ಕಾಗವಾಡ ವಿದಾನ ಸಭೆಯ ಚುನಾವಣೆಗೆ ಸ್ಪರ್ಧಿಸಿದ್ದರು. ನಂತರ ಚಿಕ್ಕೋಡಿ ಸಮೀಪ ರೈತರ ಅನುಕೂಲಕ್ಕಾಗಿ ಶ್ರೀಕೃಷ್ಣಾ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿಸಿದರು. ಹಾಗೆಯೇ ಕರ್ನಾಟಕ ಏಕೀಕರಣಕ್ಕಾಗಿ ಕನ್ನಡದ ವಾತಾವರಣವನ್ನು ಪ್ರಬಲಗೊಳಿಸಲು ಸುಮಾರು ೨೫೦೦ ಜನರ ಬೃಹತ್ ಸಮಾವೇಶವನ್ನು ಅಂಕಲಿಯಲ್ಲಿ ಏರ್ಪಡಿಸಿದರು. ಅದರಲ್ಲಿ ಮಾನ್ಯ ಶ್ರೀ ಎಸ್.ನಿಜಲಿಂಗಪ್ಪ, ಚೆನ್ನಬಸಪ್ಪ ಅಂಬಲಿ, ರಾವ್‌ಬಹೂದ್ದರ ಅಂಗಡಿ ಮತ್ತು ಪದ್ಮಾವತಿ ಅಂಗಡಿ, ಹಳ್ಳಿಕೇರಿ ಗುದ್ಲೆಪ್ಪ ಮೊದಲಾದವರು ಭಾಗವಹಿಸಿದ್ದರು.[೪]

ನಂತರ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಹೀಗೆ ಮೊದಲಿನಿಂದಲೂ ಅಂಕಲಿಯ ಕೋರೆ ಮನೆತನ ರಾಜಕೀಯದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಈ ಮನೆತನದ ರಾಜಕೀಯ ಸಹಜವಾಗಿ ಬಾಲ್ಯದಿಂದಲೇ ಶ್ರೀ ಪ್ರಭಾಕರ ಕೋರೆಯವರ ಮೇಲೆ ಪರಿಣಾಮ ಬೀರಿದೆ. ಆಗಾಗ ಪ್ರಮುಖ ರಾಜಕೀಯ ಮುಖಂಡರು ಮನೆಗೆ ಭೇಟಿ ಕೊಟ್ಟಾಗ ಶ್ರೀ ಪ್ರಭಾಕರ ಕೋರೆಯವರ ಪರಿಚಯ ಅವರೊಂದಿಗೆ ಸಹಜವಾಗಿತ್ತು. ಒಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಕುಟುಂಬದ ಪಾತ್ರ ಹಿರಿದಾಗಿರುತ್ತದೆ. ಈ ಅಂಶ ಶ್ರೀ ಪ್ರಭಾಕರ ಕೋರೆಯವರ ಪಾಲಿಗೆ ಅಕ್ಷರಶಃ ಸತ್ಯವಾಗಿದೆ.

ಶ್ರೀ ಕೋರೆಯವರ ಮೇಲೆ ಪ್ರಭಾವ ಬೀರಿದ ರಾಜಕೀಯ ನಾಯಕರು :

ಡಾ. ಪ್ರಭಾಕರ ಕೋರೆಯವರ ಮೇಲೆ ಪ್ರಭಾವ ಬೀರಿದ ಪ್ರಮುಖ ರಾಜಕೀಯ ನಾಯಕರೆಂದರೆ– ಎಸ್.ನಿಜಲಿಂಗಪ್ಪ, ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಜೀವಗಾಂಧಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಜೆ.ಎಚ್.ಪಟೇಲ, ಕೇಂದ್ರ ಸಚಿವ ಶ್ರೀ ಶರದ ಪವಾರ, ಅಲ್ಲದೇ ತಮ್ಮ ರಾಜಕೀಯ ಗುರು ಕೇಂದ್ರದ

ಮಾಜಿ ಸಚಿವರಾದ ಬಿ.ಶಂಕರಾನಂದ. ಇವತ್ತು ಶ್ರೀ ಪ್ರಭಾಕರ ಕೋರೆಯವರ ನಾಯಕತ್ವವನ್ನು ಕಂಡಾಗ ಅವರ ರಾಜಕೀಯ ನಿರ್ಧಾರಗಳು ಹೊರಬಿದ್ದ ಬಿಸಿ ಗುಂಡಿನಂತಿರುತ್ತದೆ. ಹಿಂಬಾಲಿಸಲಾಗದವರಿಗೆ ಇದು ರುಚಿಸುವದಿಲ್ಲಾ. ಅಂಥವರು ಕೋರೆ ಒಳಗಡೆ ಅಡಗಿರುವ ಶ್ರೀ ವಿರೇಂದ್ರ ಪಾಟೀಲರ ಆಡಳಿತ ಕೌಶಲ, ರಾಮಕೃಷ್ಣ ಹೆಗಡೆಯವರ ಬುದ್ಧಿ ಚಾತುರ್ಯ, ಎಸ್.ನಿಜಲಿಂಗಪ್ಪನವರ ಪ್ರಾಮಾಣಿಕತೆ ಹಾಗೂ ರಾಷ್ಟ್ರಭಕ್ತಿ, ಜೆ.ಎಚ್.ಪಟೇಲರ ದಿಟ್ಟತನ, ಶ್ರೀ ಎಚ್.ಡಿ.ದೇವೇಗೌಡರಂತೆ ರೈತರ ಬಗ್ಗೆ ಇರುವ ಕಳಕಳಿಯನ್ನು ಗುರುತಿಸುವಲ್ಲಿ ಸೋಲುತ್ತಾರೆ. ಕರ್ನಾಟಕ ರಾಜಕೀಯದಲ್ಲಿ ಕೋರೆಯವರ ಮಾತಿಗೆ ಗೌರವ ಇದೆ. ಶ್ರೀ ಪ್ರಭಾಕರ ಕೋರೆಯವರು ಕಾಂಗ್ರೆಸ್ ಪಕ್ಷದಿಂದಲೇ ರಾಜಕೀಯ ಜೀವನ ಪ್ರಾರಂಭಿಸಿದವರು ಆದರೆ ಇತರ ಪಕ್ಷದ ನಾಯಕರನ್ನು ಸೇಡಿನ ಮನೋಭಾವನೆಯಿಂದ ಕಂಡವರಲ್ಲ. ಇಂದು ಪ್ರಭಾಕರ ಕೋರೆಯವರು ಅಜಾತ ಶತ್ರುಗಳಾಗಿ ರಾಜಕೀಯ ರಂಗದಲ್ಲಿ ಬೆಳೆದು ಬರಲು ಈ ಸ್ವಭಾವ ಕಾರಣವಾಗಿದೆ.

ಕೋರೆಯವರು ನಿಷ್ಠೆವಹಿಸಿ ಕಾರ್ಯ ನೆರವೇರಿಸುವುದರ ಮೂಲಕ ಬಿ.ಶಂಕರಾನಂದರ ಕಾರ್ಯ ಭಾರವನ್ನು ಕಡಿಮೆಗೊಳಿಸುವಲ್ಲಿ ಶ್ರಮಿಸಿದರು. ಬಿ.ಶಂಕರಾನಂದರ ಜೊತೆ ಕೋರೆಯವರು ಉತ್ತಮ ಬಾಂಧವ್ಯ ಉಳಿಸಿಕೊಂಡು ಬಂದರು.[೫]

ಶ್ರೀ ಪ್ರಭಾಕರ ಕೋರೆಯವರ ರಾಜಕೀಯ ಜೀವನದ ಪ್ರವೇಶ :

ಡಾ. ಪ್ರಭಾಕರ ಕೋರೆಯವರ ರಾಜಕೀಯ ಜೀವನ ಒಂದು ರೀತಿಯಲ್ಲಿ ಶ್ರೇಷ್ಠ ನಾಯಕರ ರಾಜಕೀಯ ಪ್ರವೇಶದ ಸಂದರ್ಭದಂತೆಯೇ ಇವರ ರಾಜಕೀಯ ಜೀವನವು ಪ್ರಾರಂಭವಾಗಿದೆ. ಅಂದಿನ ಪ್ರಧಾನಮಂತ್ರಿಯಾದ ಇಂದಿರಾಗಾಂಧಿ ನಿಧನಾನಂತರ ರಾಜೀವಗಾಂದೀ ರಾಜಕೀಯ ಕ್ಷೇತ್ರಕ್ಕೆ ಒಲ್ಲದ ಮನಸ್ಸಿನಿಂದ ಬೆಂಬಲಿಗರ ಒತ್ತಾಯದ ಮೇರೆಗೆ ಆ ಸ್ಥಾನವನ್ನು ತುಂಬಲು ಬಂದಂತೆ ಶ್ರೀ ಪ್ರಭಾಕರ ಕೋರೆಯವರು ಕೂಡ ಅವರ ಸಹೋದರರಾದ ಚಿದಾನಂದ ಕೋರೆಯವರ ನಿಧನದ ನಂತರ ಬೆಂಬಲಿಗರ ಒತ್ತಾಯದ ಮೇರೆಗೆ ಈ ಕ್ಷೇತ್ರಕ್ಕೆ ಬರುವಂತಾಯಿತು. ಇವರು ರಾಜಕೀಯದಿಂದ ಸಂಪೂರ್ಣ ದೂರವೇನು ಇರಲಿಲ್ಲ. ಅಣ್ಣ ಚಿದಾನಂದ ಕೋರೆಯವರಿಗೆ ರಾಜಕೀಯದಲ್ಲಿ ಬೆನ್ನಲುಬಾಗಿ ಸಹಾಯ ಮಾಡುತ್ತಿದ್ದರು. ಅವರ ಪ್ರತಿಯೊಂದು ನಿರ್ಣಯದಲ್ಲಿ ಶ್ರೀ ಪ್ರಭಾಕರ ಕೋರೆಯವರ ಸಲಹೆ ಇರುತ್ತಿತ್ತು.[೬]

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಶ್ರೀ ಪ್ರಭಾಕರ ಕೋರೆಯವರು ಬಾಲ್ಯದಿಂದಲೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಬಂದವರು. ಶಿಕ್ಷಣ ಪಡೆಯುವಾಗ ಅವರು ವಹಿಸಿದ ಪ್ರಮುಖ ನಾಯಕತ್ವ ಎಂದರೆ – ಗೋಗಟೆ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ. ಖ್ಯಾತ ಕಾನೂನು ತಜ್ಞ ಪಾಲ್ಖಿವಾಲಾ ಅವರನ್ನು ಸ್ವತಃ ಮುಂಬಯಿಗೆ ಹೋಗಿ ಆಮಂತ್ರಿಸಿ. ಕಾಲೇಜಿನ ವಾರ್ಷಿಕ ಸಮ್ಮೇಳನವನ್ನು ಅದ್ಧೂರಿಯಾಗಿ ಸಂಘಟಿಸುವ ಮೂಲಕ ತಾವೊಬ್ಬ ಭವಿಷತ್ತಿನ ಶ್ರೇಷ್ಠ ನಾಯಕ ಎನ್ನುವುದನ್ನು ತೋರಿದರು. ಕಾಲೇಜಿನ

ಶೈಕ್ಷಣಿಕ ಪ್ರವಾಸವನ್ನು ಸಂಯೋಜನೆ ಮಾಡಿ, ಭಾರತದ ಮಹಾನಗರಗಳನ್ನು ಮಹಾವಿದ್ಯಾಲಯದ ಎಲ್ಲ ಸ್ನೇಹಿತರೊಂದಿಗೆ ದರ್ಶನ ಮಾಡಿದರು. ಈ ಕಾರ್ಯವನ್ನು ಗಮನಿಸಿದಾಗ ಅವರೊಬ್ಬ ಮಹಾನ್ ಸಂಘಟನಾಕಾರರು ಎನ್ನುವುದು ರುಜುವಾತು ಆಗುತ್ತದೆ.[೭]

೧೯೭೦ Expo ಜಪಾನ ಪ್ರವಾಸದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ತಂಡದ ನೇತೃತ್ವ ವಹಿಸಿದ್ದ ಶ್ರೀ ಪ್ರಭಾಕರ ಕೋರೆಯವರು ಜಪಾನ ಪ್ರವಾಸ ಕೈಕೊಂಡರು. ಈ ಸಂದರ್ಭದಲ್ಲಿಯೇ ಥೈಲ್ಯಾಂಡ್, ಹಾಂಕಾಂಗ್ ದೇಶಗಳಿಗೆ ಭೇಟಿಕೊಟ್ಟು ಬಂದ ನಂತರ ಸ್ನೇಹಿತರೊಂದಿಗೆ ವಿದೇಶ ಪ್ರವಾಸದ ಅನುಭವ ಹಂಚಿಕೊಳ್ಳುತ್ತಾ ನಮ್ಮ ಪ್ರದೇಶವನ್ನು ಆ ದೇಶಗಳಂತೇ ಅಭಿವೃದ್ಧಿಪಡಿಸಬೇಕು ಎಂದು ನಿರ್ಧರಿಸಿದ್ದರು. ಅವರ ನಿರ್ಧಾರದಂತೆ ತಮ್ಮ ಪ್ರದೇಶದ ಅಭಿವೃದ್ಧಿಗೆ ಅವರು ಶ್ರಮಿಸಿದ ರೀತಿಯನ್ನು ಕಂಡಾಗ ತಾವು ಕಂಡ ಕನಸಿನಂತೆ ಮುಂದೆ ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಶ್ರಮಿಸುತ್ತಿರುವ ಇವರು ಈಗ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

ಪ್ರಥಮ ಸಾರ್ವತ್ರಿಕ ಚುನಾವಣೆ ಎದುರಿಸಿದ್ದು :

ಕರ್ನಾಟಕ ವಿಧಾನ ಸಭೆಗೆ ನಡೆದ ೧೯೮೩ರ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಶ್ರೀ ಪ್ರಭಾಕರ ಕೋರೆಯವರು ಸ್ಪರ್ಧಿಸಿದರು. ಇದು ಇವರ ಪ್ರಥಮ ಸಾರ್ವತ್ರಿಕ ಚುನಾವಣೆಯಾಗಿತ್ತು. ಆ ಸಮಯದಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಶ್ರೀ ರಾಮಕೃಷ್ಣ ಹೆಗಡೆ ಅವರ ಪ್ರಭಾವ ಗಾಢವಾಗಿತ್ತು ಮತ್ತು ಜನತಾ ಪಕ್ಷದ ಪರ ಅಲೆ ಅಪಾರವಾಗಿತ್ತು.

ಈ ಹಂತದಲ್ಲಿ ಶ್ರೀ ಪ್ರಭಾಕರ ಕೋರೆಯವರು ಜನತಾ ಪಕ್ಷದ ಅಭ್ಯರ್ಥಿಯಾದ ಮಾಂಜರಿಯ ಕಲ್ಲಪ್ಪ ಮಗೆನ್ನವರ ವಿರುದ್ಧ ನೇರ ಸ್ಪರ್ಧೆ ಒಡ್ಡಿದರು. ಬಹುಜನರ ಅನಿಸಿಕೆ ಶ್ರೀ ಪ್ರಭಾಕರ ಕೋರೆಯವರೇ ಗೆಲ್ಲುತ್ತಾರೆ ಎನ್ನುವುದಾಗಿತ್ತು. ಆದರೆ ಫಲಿತಾಂಶ ಪ್ರಕಟಗೊಂಡಾಗ ಶ್ರೀ ಕೋರೆಯವರು ಕೂದಲೆಳೆಯಷ್ಟು ಅಂತರದ ಮತಗಳಿಂದ ಪರಾಭವಗೊಂಡರು. ಇದರಿಂದ ಬೆಂಗಲಿಗರಿಗೆ ಭಾರಿ ನಿರಾಶೆಯಾಯಿತು. ಆಗ ಕಾಂಗ್ರೆಸ್ ಪಕ್ಷದ ಟಿಕೇಟಿಗಾಗಿ ಬಾರೀ ಬೇಡಿಕೆ ಇತ್ತು. ಆದರೆ ಪಕ್ಷದ ಹೈಕಮಾಂಡ್ ಅನೇಕ ಹಿರಿಯರನ್ನು ಬಿಟ್ಟು ಯುವಕರಾದ ಶ್ರೀ ಪ್ರಭಾಕರ ಕೋರೆಯವರಿಗೆ ಟಿಕೇಟ್ ನೀಡಿದ್ದು, ಅವರ ಪ್ರಭಾವ ಹಾಗೂ ಸಂಘಟನಾಶಕ್ತಿ ಎಂತಹದು ಎಂಬುದು ತಿಳಿದುಬರುವ ಅಂಶವಾಗಿದೆ.

ಭಾರತವು ಪ್ರಜಾಪ್ರಭುತ್ವದ ದೊಡ್ಡ ದೇಶ. ಆದರೆ ಇಲ್ಲಿ ಅನಕ್ಷರಸ್ಥರ ಸಂಖ್ಯೆಯೇ ಅಧಿಕವಾಗಿದೆ. ಇವರಿಗೆ ಚುನಾವಣೆಯ ಮಹತ್ವ ಆಗ ಅಷ್ಟಾಗಿ ಇರಲಿಲ್ಲ. ಅದು ಅಲ್ಲದೇ ಮತದಾನ ಮಾಡುವುದು ಹೇಗೆ ಎಂಬುದು ಅವರಿಗೆ ತಿಳಿಯದ ಕಾರಣ ಹೆಚ್ಚು ಮತಗಳು ಕುಲಗೆಟ್ಟ ಮತಗಳ ಪಟ್ಟಿಗೆ ಸೇರಿದವು. ಈ ಅಂಶವೂ ಸಹ ಕೋರೆಯವರ ಸೋಲಿಗೆ ಒಂದು ಪ್ರಬಲ ಕಾರಣವಾಯಿತು. ಇದರ ಜೊತೆಗೆ ಜನತಾ ಪಕ್ಷದ ಶ್ರೀ ರಾಮಕೃಷ್ಣ ಹೆಗಡೆಯವರ ವೈಯಕ್ತಿಕ ವರ್ಚಸ್ಸಿನ ಪ್ರಭಾವದ ಅಲೆಯಲ್ಲಿ ಸ್ವಲ್ಪ ಮತಗಳಿಂದ ಶ್ರೀ ಪ್ರಭಾಕರ ಕೋರೆಯವರು

ಪರಾಭವಗೊಂಡರು.[೮] 'ಇಂದಿನ ಸೋಲು ಮುಂದಿನ ಗೆಲುವಿನ ಸೋಪಾನ' ಎಂಬ ಅನುಭವ ವಾಣಿಯಂತೆ ಶ್ರೀ ಪ್ರಭಾಕರ ಕೋರೆಯವರು ಎದೆಗುಂದದೆ ಕಾರ್ಯ ಪ್ರವೃತ್ತರಾದರು.

"ರಾಷ್ಟ್ರ ಸೇವೆಯೆಂಬುದು ದುರ್ಗಮ, ಎಲೆ ಹೃದಯ
ಅದ ಕುರಿತು ಮಾತನಾಡುವುದು ಸುಲಭ
ರಾಷ್ಟ್ರ ಭಕ್ತಿಯ ಹಾದಿ ತುಳಿದವರು ಸಹಿಸಿದಕ್ಕೆ ಅಸಂಖ್ಯ ಸಂಕಷ್ಟಗಳು"[೯]

ಎಂಬ ದೇಶಾಭಿಮಾನಿ ಭಗತ್‌ಸಿಂಗ್‌ನಿಗೆ ಪ್ರಿಯವಾದ ಹಾಡು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ಶ್ರೀ ಪ್ರಭಾಕರ ಕೋರೆಯವರು ಚುನಾವಣೆಯಲ್ಲಿ ಸೋಲು ಕಂಡರೂ ನಿಜ ಜೀವನದಲ್ಲಿ ಎಂದೂ ಸೋಲು ಅನುಭವಿಸಲಿಲ್ಲ. ಈ ಸಂದರ್ಭದಲ್ಲಿ ಪ್ರತಿಷ್ಠಿತ ಕೆ.ಎಲ್.ಇ.ಸಂಸ್ಥೆಯ ನಿರ್ದೇಶಕರ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ೧೦೦೦೦ ಮತಗಳನ್ನು ಗಳಿಸಿ ಜಯಶಾಲಿಯಾದರು. ಇವರ ಪ್ರತಿಸ್ಪರ್ಧಿಗೆ ಕೇವಲ ೬೯ ಮತಗಳು ಬಂದಿದ್ದವು. ಇದು ಶ್ರೀ ಕೋರೆಯವರ ಮೇಲೆ ಸಂಸ್ಥೆಯ ಸದಸ್ಯರು ಇರಿಸಿದ ಪ್ರೀತಿ, ಅಭಿಮಾನ ಎಂತಹದು ಎನ್ನುವುದನ್ನು ತೋರಿಸುತ್ತದೆ.

೧೯೮೪ ರ ಚುನವಣೆಯಲ್ಲಿ ಜಯಶಾಲಿಯಾಗಿ ಪ್ರಥಮ ಬಾರಿಗೆ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾದರು. ಮುಂದೆ ಅಲ್ಲಿಂದ ಹಿಂದೆ ತಿರುಗಿ ನೋಡಲೇ ಇಲ್ಲ. ಆಗ ಅವರಿಗೆ ಕೇವಲ ೩೭ ವರ್ಷ. ಶ್ರೀ ಪ್ರಭಾಕರ ಕೋರೆಯವರು ಮುಂದೆ ಸತತವಾಗಿ ಅನೇಕ ಬಾರಿ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಒಂದು ದಾಖಲೆಯೇ ಸರಿ. ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತಮ್ಮ ಸ್ವಂತ ಕುಟುಂಬದ ಆಸ್ತಿಯನ್ನಾಗಿ ಮಾಡಿಕೊಂಡವರೆ ಅಧಿಕ. ಈ ದಿನಮಾನದಲ್ಲಿ ಶ್ರೀ ಪ್ರಭಾಕರ ಕೋರೆಯವರು ಪ್ರಜಾಸತ್ತಾತ್ಮಕವಾಗಿ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಸಿ ಸದಸ್ಯರಿಂದಲೇ ಆಯ್ಕೆಯಾಗುತ್ತಾ ಬಂದಿದ್ದಾರೆ. ಇವರಲ್ಲಿ ಹಲವರು ಸೋತು ಹೊಸ ಮುಖಗಳು ಬಂದರೂ ಕೋರೆಯವರು ಮಾತ್ರ ತಮ್ಮ ಸ್ಥಾನದಲ್ಲಿ ಮುಂದುವರೆದಿದ್ದು ವಿಶೇಷವಾಗಿದೆ.

ಇಂದು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆಯುವಂತೆ ಸಂಸ್ಥೆಯನ್ನು ಅಭಿವೃದ್ಧಿ ಪಡಿಸಿದ ಕೋರೆಯವರ ಪ್ರಮಾಣಿಕತೆ, ದೃಢ ನಿರ್ಧಾರ, ದಕ್ಷನಾಯಕತ್ವಕ್ಕೆ ನಿಚ್ಚಳ ನಿದರ್ಶನವಾಗಿದೆ.[೧೦] ಈ ಅವಧಿಯಲ್ಲಿಯೇ ನಿಪ್ಪಾಣಿಯ ತಂಬಾಕು, ಬೀಡಿ ಕಾರ್ಮಿಕರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಹೋರಾಟ ಮಾಡಿ, ಜನನಾಯಕರಾದರು. ಈ ಹೋರಾಟಗಳು ಕೋರೆಯವರಿಗೆ ಜನಪ್ರಿಯತೆಯನ್ನು ತಂದುಕೊಟ್ಟವು. ಚಿಕ್ಕೋಡಿ ರೋಟರಿ ಕ್ಲಬ್‌ನ ಸಕ್ರಿಯ ಸದಸ್ಯರಾಗಿ, ಅಂಕಲಿ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿಯಾಗಿ[೧೧] ಅವರ ಮುಂದಿನ ನಡೆಗೆ ಗಟ್ಟಿ ನೆಲೆಗಟ್ಟನ್ನು ಒದಗಿಸಿದವು. ಅವುಗಳ ಮೂಲಕ ಸಾಮಾಜಿಕವಾಗಿ ಸಾಕಷ್ಟು ಒಳ್ಳೆಯ ಕಾರ್ಯಗಳನ್ನು ಮಾಡುವ ಮೂಲಕ ಜನಪ್ರಿಯತೆಯನ್ನು ಪಡೆದುಕೊಂಡರು.

ಪ್ರಭಾಕರ ಕೋರೆಯವರು ತಮ್ಮ ಕಾರ್ಯದಕ್ಷತೆಯಿಂದ ಸಾಮಾಜಿಕವಾಗಿ ಸಾಕಷ್ಟು ಕಾರ್ಯಗಳನ್ನು ಮಾಡುವ

ಮೂಲಕ ಜನಪ್ರಿಯತೆ ಗಳಿಸಿದರು. ಅದರಲ್ಲಿ ತಂಬಾಕು ಬೆಳೆಗಾರರು ನಿಪ್ಪಾಣಿ ಸಂಕೇಶ್ವರ, ಚಿಕ್ಕೋಡಿ, ಭಾಗಗಳಲ್ಲಿ ಅಧಿಕ ಪ್ರಮಾಣದಲ್ಲಿ ಈ ಬೆಳೆಯನ್ನು ಒಂದು ಪ್ರಮುಖ ವಾಣಿಜ್ಯ ಬೆಳೆಯನ್ನಾಗಿ ಬೆಳೆಯುತ್ತಾರೆ. ಆದರೆ ಅವರು ಬೆಳೆದ ಫಲಕ್ಕೆ ತಕ್ಕ ಬೆಂಬಲ ಬೆಲೆಸಿಗದೆ, ದಲ್ಲಾಳಿಗಳಿಂದ ನಷ್ಟವನ್ನು ಅನುಭವಿಸುತ್ತಿದ್ದರು. ಇದನ್ನು ಪರಿಹರಿಸುವಲ್ಲಿ ಒಬ್ಬ ಶ್ರೇಷ್ಠ ನಾಯಕನ ಅವಶ್ಯಕತೆ ಇತ್ತು. ಇದನ್ನು ತಿಳಿದ ಕೋರೆಯವರು ರೈತರ ಕಷ್ಟಗಳನ್ನು ಪರಿಹರಿಸುವದಕ್ಕಾಗಿ ನಿಪ್ಪಾಣಿಯ ತಂಬಾಕು, ಬೀಡಿ ವರ್ತಕರ ಮಹಾಮಂಡಳವನ್ನು ಸ್ಥಾಪಿಸಿ, ರೈತರ ಹಾಗೂ ವ್ಯಾಪಾರಿಗಳ ಮಧ್ಯೆ ಕೊಂಡಿಯಾಗಿ ರೈತರಿಗೆ ಅನ್ಯಾಯವಾಗದಂತೆ ಯೋಗ್ಯ ಬೆಂಬಲ ಬೆಲೆ ಸಿಗುವಂತೆ ಮಾಡಲು, ಹೋರಾಟ ಮಾಡಿ ನ್ಯಾಯ ಒದಗಿಸಿದರು. ಆ ಮೂಲಕ ತಾವೊಬ್ಬ ರೈತ ನಾಯಕ ಎಂಬುದನ್ನು ನಿರೂಪಿಸಿದರು.

ಕಾಂಗ್ರೆಸ್ ಪಕ್ಷದ ಸಕ್ರಿಯ ಸದಸ್ಯರು :

೧೯೭೬ ರಿಂದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ೨೦೦೮ರ ವರೆಗೆ ಸೇವೆ ಸಲ್ಲಿಸಿ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ಅವಿಶ್ರಾಂತವಾಗಿ ಶ್ರಮಿಸಿದರು. ಬಹು ಸಂಖ್ಯೆಯಲ್ಲಿರುವ ಲಿಂಗಾಯತ ಸಮಾಜದವರು ಕಾಂಗ್ರೆಸ್ ಪಕ್ಷದಿಂದ ದೂರ ಸರಿದು ೧೯೮೩ ರಲ್ಲಿ ಜನತಾ ಪಕ್ಷದ ಕಡೆಗೆ ಒಲವು ತೋರಿದರು. ಈ ಭಾಗದಲ್ಲಿ ಅ ಮತಗಳನ್ನು ಗಟ್ಟಿಯಾಗಿ ಹಿಡಿದು ಕಾಂಗ್ರೆಸ್ ಪಕ್ಷಕ್ಕೆ ಲಭಿಸುವಂತೆ ಮಾಡುವಲ್ಲಿ ಶ್ರೀ ಕೋರೆಯವರ ಶ್ರಮ ಅಧಿಕವಾಗಿದೆ.

ಕೇಂದ್ರದಲ್ಲಿ ಸಾಕಷ್ಟು ಪ್ರಭಾವ ಹೊಂದಿದ ಬಿ.ಶಂಕರಾನಂದರು, ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಜೀವಗಾಂಧಿ, ಪಿ.ವಿ.ನರಸಿಂಹರಾವ್ ಸಂಪುಟದಲ್ಲಿ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸಿದವರು. ಶ್ರೀ ಪ್ರಭಾಕರ ಕೋರೆಯವರ ಮೇಲೆ ರಾಜಕೀಯವಾಗಿ ಬಿ.ಶಂಕರಾನಂದರ ಪ್ರಭಾವ ಸಾಕಷ್ಟು ಇತ್ತು. ಬಿ.ಶಂಕರಾನಂದರನ್ನು ಕೊನೆ ಘಳಿಗೆಯಲ್ಲಿ ತಮ್ಮ ಕೆ.ಎಲ್.ಇ.ಸಂಸ್ಥೆಯ ಆಸ್ಪತ್ರೆಯಲ್ಲಿ ಇರಿಸಿ, ಸ್ವಂತ ಮುತುವರ್ಜಿವಹಿಸಿ ಅವರ ಆರೋಗ್ಯ ಸುಧಾರಣೆಗೆ ನಿಗಾವಹಿಸಿ, ತಮ್ಮ ರಾಜಕೀಯ ಗುರುವಿನ ಋಣ ತೀರಿಸಿದರು. ಇಲ್ಲಿ ಗಮನಿಸುವ ಅಂಶವೇನೆಂದರೆ ತಾವು ಮೇಲಕ್ಕೇರಿದ ನಂತರ ಹಲವು ರಾಜಕಾರಣಿಗಳು ತಮ್ಮ ಮೂಲವನ್ನು ಮರೆಯುತ್ತಾರೆ. ಆದರೆ ಶ್ರೀ ಕೋರೆಯವರು ಬೇರೆ ಪಕ್ಷದಲ್ಲಿದ್ದರೂ ಸಹಿತ ಬಿ.ಶಂಕರಾನಂದರನ್ನು ಕೊನೆಯವರೆಗೂ ನೋಡಿಕೊಂಡರು. ತಮಗೆ ಸಹಾಯ ಮಾಡಿದ ನಾಯಕನಿಗೆ ಗೌರವದಿಂದ ಕಂಡರು.[೧೨]

ಮಾಜಿ ಸಚಿವರಾದ ಎ.ಬಿ.ಪಾಟೀಲ (ಸಂಕೇಶ್ವರ), ಪ್ರಕಾಶ ಹುಕ್ಕೇರಿ (ಯಕ್ಸಂಬಾ), ವೀರಕುಮಾರ ಪಾಟೀಲ, ಎಸ್.ಬಿ.ಸಿದ್ನಾಳ, ಶಹಜಾನ ಡೋಂಗರಗಾವ ಮತ್ತಿತರರ ಚುನಾವಣೆಗಳಲ್ಲಿ ಡಾ. ಪ್ರಭಾಕರ ಕೋರೆಯವರ ಶ್ರಮವೂ ಇದೆ. ಹೀಗೆ ತಳಮಟ್ಟದಿಂದ ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಶ್ರಮಿಸಿದ ಶ್ರೀ ಕೋರೆಯವರ ಶಕ್ತಿಯನ್ನು ತಿಳಿಯಬಹುದು.

ನಂತರ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಶ್ರೀ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ೧೭೮ ಸ್ಥಾನಗಳನ್ನು ಗೆದ್ದು ಅಭೂತಪೂರ್ವ ಸಾಧನೆ ಮಾಡಿತು. ಇದರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷದ ಉತ್ತಮ ಸಾಧನೆಗೆ ಶ್ರಮಿಸಿದ

ಡಾ. ಪ್ರಭಾಕರ ಕೋರೆಯವರ ಸಂಘಟನಾ ಶಕ್ತಿಯನ್ನು ಪಕ್ಷ ಗುರುತಿಸಿ ೧೯೯೨ ರಲ್ಲಿ ಅರವನ್ನು ರಾಜ್ಯಸಭೆಯ ಸದಸ್ಯರಾಗಿ ನೇಮಿಸಿತು.[೧೩]

ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್.ಬಂಗಾರಪ್ಪ, ಶ್ರೀ ಎಸ್. ನಿಜಲಿಂಗಪ್ಪ ಹಾಗೂ ಎಸ್.ಎಂ.ಕೃಷ್ಣರ ವಲಯದಲ್ಲಿ ಗುರುತಿಸಿಕೊಂಡಿದ್ದ ಕೋರೆಯವರನ್ನು ರಾಜ್ಯಸಭೆಯ ಸದಸ್ಯರನ್ನಾಗಿ ಮಾಡಲು ಎಲ್ಲರೂ ಒಟ್ಟಾಗಿ ಸಮ್ಮಿತಿಸಿದ್ದು ವಿಶೇಷವಾಗಿತ್ತು. ಅಲ್ಲದೇ ದಿ.ರಾಜೀವಗಾಂಧಿ, ಪಿ.ವಿ.ನರಸಿಂಹರಾವ್‌ರೊಂದಿಗೆ ಆತ್ಮಿಯತೆಯನ್ನು ಶ್ರೀ ಕೋರೆಯವರು ಬೆಳೆಸಿಕೊಂಡಿದ್ದರು. ಅದರಲ್ಲಿ ಬಿ.ಶಂಕರಾನಂದರು, ಶ್ರೀ ಕೋರೆಯವರಿಗ ಗಾಡ್‌ಫಾದರ್ ಆಗಿ ನಿಂತರು. ಇದಕ್ಕೆ ಶರದ ಪವಾರ ಆದಿಯಾಗಿ ಎಲ್ಲರೂ ಬೆಂಬಲಿಸಿದ್ದ ಶ್ರೀ ಪ್ರಭಾಕರ ಕೋರೆಯವರ ಘನತೆಗೆ ತಕ್ಕುದಾದ ಮರ್ಯಾದೆಯಾಗಿತ್ತು. ನಂತರ ರಾಜ್ಯಸಭಾ ಸದಸ್ಯರಾಗಿ ಕರ್ನಾಟಕದ ಹಲವಾರು ಸಮಸ್ಯೆಗಳನ್ನು ಕುರಿತು ರಾಜ್ಯ ಸಭೆಯಲ್ಲಿ ಧ್ವನಿ ಎತ್ತಿದ್ದರು. ಹಲವು ಹೋಸ ಯೋಜನೆಗಳನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾದರು. ರಾಜ್ಯಸಭಾ ಸದಸ್ಯರಾಗಿ ಉತ್ತಮ ಸಂಸದೀಯ ಪಟು ಎಂದು ಗುರುತಿಸಿಕೊಂಡರು. ಸಂಸತ್ತಿನ ವಿವಿಧ ಸ್ಥಾಯಿ ಸಮಿತಿಗಳಾದ ರಕ್ಷಣಾ ಟೆಲಿಕಾಂ, ಆರೋಗ್ಯ, ರೈಲ್ವೆ ಭಾರತದಲ್ಲಿ ಏಡ್ಸ ಸಮಸ್ಯೆ ಕುರಿತು ಅಧ್ಯಯನ ಸಮಿತಿ, ಯೋಜನೆ ಹಾಗೂ ವಾಸ್ತುಶಿಲ್ಪ, ಗೃಹ ಮಂಡಳಿ, ಹಿಂದಿ ಪ್ರಸಾರ ಸಮಿತಿ, ಸಂಸದೀಯ ಸ್ಥಾಯಿ ಸಮಿತಿಗಳಲ್ಲಿ ಕಾರ್ಯವಹಿಸಿದರು.[೧೪]

೧) ರಕ್ಷಣಾ ಸಲಹಾ ಸಮಿತಿ: ರಕ್ಷಣಾ ಸಲಹಾ ಸಮಿತಿಗೆ ಆಯ್ಕೆಯಾದರು. ದೇಶದ ರಕ್ಷಣೆಗೆ ಹಾಗೇ ಹೆಚ್ಚುತ್ತಿರುವ ಆಂತರಿಕ ಮತ್ತು ಬಾಹ್ಯ ಗಲಭೆಗಳನ್ನು ನಿಯಂತ್ರಿಸಲೂ ದೇಶವನ್ನು ಕಾಡುತ್ತಿರುವ ಭಯೋತ್ಪಾದನೆಯನ್ನು ನಿಯಂತ್ರಿಸಿ ದೇಶದಲ್ಲಿ ಶಾಂತಿ ಹಾಗೇ ಸುವ್ಯವಸ್ಥೆಗೆ ಹಲವಾರು ಉಪಯುಕ್ತ ಸಲಹೆಗಳನ್ನು ನೀಡಿ, ಇತರರ ಗಮನ ಸೆಳೆಯುವಲ್ಲಿ ಶ್ರೀ ಪ್ರಭಾಕರ ಕೋರೆಯವರು ಯಶಸ್ಸು ಕಂಡರು.

೨) ಟೆಲಿಕಾಂ ಸಮಿತಿ : ದೇಶದಲ್ಲಿ ದೂರ ಸಂಪರ್ಕ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ಆಗಬೇಕು. ವಿಶೇಷವಾಗಿ ಭಾರತ ಗ್ರಾಮೀಣ ಪ್ರದೇಶಗಳಲ್ಲಿನ ಜನರಿಗೆ ದೂರ ಸಂಪರ್ಕದ ಸೇವೆ ಲಭಿಸಬೇಕು ಎನ್ನುವ ಹಂಬಲ ಉಳ್ಳ ಶ್ರೀ ಕೋರೆಯವರು ಈ ತಮ್ಮ ಆಶೆಯಂತೆ ಭಾರತೀಯ ಸಂಸ್ಥೆಯ ಟೆಲಿಕಾಂ ಸಲಹ ಸಮಿತಿಯ ಸದಸ್ಯರಾಗಿ ಉಪಯುಕ್ತ ಸೇವೆ ಸಲ್ಲಿಸಿದರು.

೩) ಆರೋಗ್ಯ ಸ್ಥಾಯಿ ಸಮಿತಿ : ಶ್ರೀ ಪ್ರಭಾಕರ ಕೋರೆಯವರ ಆರೋಗ್ಯ ಸಂಸದೀಯ ಸ್ಥಾಯಿ ಸಮಿತಿ ಸದಸ್ಯರಾಗಿ ಅಮೋಘ ಕಾಣಿಕೆ ಸಲ್ಲಿಸಿದ್ದಾರೆ. ವಿಶೇಷವಾಗಿ ಆರೋಗ್ಯ ಕ್ಷೇತ್ರದಲ್ಲಿ ದೇಶಗಳಲ್ಲಿಯೇ ಮಾದರಿ ಆಸ್ಪತ್ರೆಯನ್ನು ಬೆಳಗಾವಿಯಲ್ಲಿ ಸ್ಥಾಪಿಸಲು ಹಲವಾರು ರಾಷ್ಟ್ರಗಳಿಗೆ ಭೇಟಿ ನೀಡಿದ್ದ ಅನುಭವ ಶ್ರೀ ಪ್ರಭಾಕರ ಕೋರೆಯವರಿಗೆ ಇತ್ತು. ಅಲ್ಲದೇ ಬಿ.ಶಂಕರಾನಂದರು ಆರೋಗ್ಯ ಸಚಿವರಾಗಿದ್ದಾಗ ಅವರ ಕ್ಷೇತ್ರದಲ್ಲಿನ ಅನುಭವವನ್ನು ಆರೋಗ್ಯ ಕ್ಷೇತ್ರದಲ್ಲಿನ ಸುಧಾರಣೆಗೆ ಬಳಸಿಕೊಂಡರು.

ಚಿಕ್ಕೋಡಿ ತಾಲೂಕಿನ ಕಣಗಲಾದಲ್ಲಿ ಹಿಂದೂಸ್ತಾನ ಲೆಟೆಕ್ಸ್ ಲಿಮಿಟೆಡ್ ೨೦ ಎಕರೆ ಪ್ರದೇಶದಲ್ಲಿ ನಿರೋಧ ತಯಾರಿಕಾ ಘಟಕವನ್ನು ಸ್ಥಾಪಿಸಲು ಶ್ರೀ ಪ್ರಭಾಕರ ಕೋರೆಯವರು ಕೇಂದ್ರ ಸಚಿವ ಬಿ.ಶಂಕರಾನಂದರಿಗೆ ನೆರವಾದರು. ಹೀಗೆ ಆರೋಗ್ಯ ಇಲಾಖೆಯಲ್ಲಿ ಹಲವಾರು ಯೋಜನೆ ಜಾರಿಗೊಳಿಸುವಲ್ಲಿ ಶ್ರೀ ಪ್ರಭಾಕರ ಕೋರೆಯವರ ಸಲಹೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿತ್ತು ಎನ್ನುವುದನ್ನು ನಾವು ಗುರುತಿಸಬಹುದಾಗಿದೆ.

೪) ಭಾರತದಲ್ಲಿ ಏಡ್ಸ್ ಸಮಸ್ಯೆ ಕುರಿತು ಅಧ್ಯಯನ ಸಮಿತಿ : ಭಾರತದಲ್ಲಿ ವ್ಯಾಪಕವಾಗುತ್ತಿರುವ ಏಡ್ಸ ಮಹಾಮಾರಿ ರೋಗದ ನಿಯಂತ್ರಣಕ್ಕಗಿ ಶ್ರೀ ಪ್ರಭಾಕರ ಕೋರೆಯವರು ಈ ಸಮಿತಿಯಲ್ಲಿದ್ದರು. ವ್ಯಾಪಕ ಅಧ್ಯಯನ ಮಾಡಿ ಹಲವಾರು ಉಪಯುಕ್ತ ಸಲಹೆಗಳನ್ನು ನೀಡಿ, ಏಡ್ಸ ರೋಗದ ಬಗ್ಗೆ ತಿಳುವಳಿಕೆ ಹಾಗೆ ನಿಯಂತ್ರಣದ ಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರದ ಕಾರ್ಯಕ್ರಮಕ್ಕಾಗಿ ಶ್ರಮಿಸಿದವರು.

೫) ರೈಲ್ವೆ ಇಲಾಖೆಯ ಸ್ಥಾಯಿ ಸಮಿತಿ : ಭಾರತೀಯ ಸಂಸತ್ತಿನ ರೈಲ್ವೆ ಇಲಾಖೆಯ ಸ್ಥಾಯಿ ಸಮಿತಿಯ ಸದಸ್ಯರಾಗಿ ಡಾ. ಪ್ರಭಾಕರ ಕೋರೆಯವರು ರಾಜ್ಯಕ್ಕೆ ಹಲವು ಹೊಸ ರೈಲು ಯೋಜನೆ ತರಲು ಶ್ರಮಿಸಿದರು. ಕರ್ನಾಟಕದವರೇ ಆದ ಶ್ರೀ ಸಿ.ಕೆ.ಜಾಫರ್ ಶರೀಫ್ ರೈಲ್ವೆ ಸಚಿವರಾಗಿದ್ದರು. ಶ್ರೀ ಜಾಫರ್ ಶರೀಫರು ರೈಲ್ವೆ ಸಚಿವರಾಗಿದ್ದಾಗಲೇ ಬ್ರಾಡ್‌ಗ್ರೇಜ್ ಕಾರ್ಯ ಪ್ರಾರಂಭವಾಯಿತು. ಇದರಿಂದ ಸೊಲ್ಲಾಪುರ, ಗದಗ ಮುಂತಾದ ಹೊಸ ಬ್ರಾಡ್‌ಗ್ರೇಜ್ ಕಾರ್ಯಗಳು ಆರಂಭವಾದವು. ಈ ಹಂತದಲ್ಲಿ ರೈಲ್ವೆಯ ಸುರಕ್ಷತೆ ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ವೇಗದೂತ ರೈಲುಗಳ ಪ್ರಾರಂಭ, ಹೊಸ ರೈಲು ಸೇವೆಗಳ ಪ್ರಾರಂಭ, ರೈಲ್ವೆ ನಿಲ್ದಾಣಗಳನ್ನು ಗಣಕೀಕೃತಗೊಳಿಸುವುದು. ಹಾಗೇ ಸ್ವಚ್ಛತೆಗೆ ಪ್ರಾಮುಖ್ಯತೆ ನೀಡುವುದು. ಹೀಗೆ ಹಲವಾರು ವಿಷಯಗಳಲ್ಲಿ ಡಾ. ಪ್ರಭಾಕರ ಕೋರೆಯವರು ಉಪಯುಕ್ತ ಸಲಹೆಗಳನ್ನು ನೀಡಿದರು.

೬) ಗೃಹ ಮಂಡಳಿ ಸಲಹಾ ಸಮಿತಿ : ಭಾರತದಲ್ಲಿ ಬಡಜನತೆಗೆ ಸರ್ಕಾರದ ಆಶ್ರಯದಲ್ಲಿ ಉಚಿತವಾಗಿ ಮನೆಗಳ ನಿರ್ಮಾಣ ಹಾಗೂ ಅವುಗಳು ಯಾವ ರೀತಿಯ ಮಾದರಿಯಾಗಿ ಇರಬೇಕು ಎನ್ನುವದರ ಬಗ್ಗೆ ಹಾಗೂ ರಾಜ್ಯ ಸರಕಾರದ ಪಾಲುದಾರಿಕೆ ಮುಂತಾದ ವಿಷಯಗಳಲಿ ಸೂಕ್ತವಾದ ಸಲಹೆಗಳನ್ನು ನೀಡುವ ಮೂಲಕ ಭಾರತದ ನವಗ್ರಾಮದ ನಿರ್ಮಾಣಕ್ಕೆ ಡಾ. ಪ್ರಭಾಕರ ಕೋರೆಯವರು ಶ್ರಮಿಸಿದರು.

೭) ಹಿಂದಿ ಪ್ರಚಾರ ಸ್ಥಾಯಿ ಸಮಿತಿ : ಭಾರತೀಯ ಸಂಸದೀಯ ಸಮಿತಿಯ ಹಿಂದಿ ಪ್ರಚಾರ ಸಮಿತಿಯ ಸದಸ್ಯರಾಗಿ ರಾಷ್ಟ್ರ ಭಾಷೆಯನ್ನು ವ್ಯಾಪಕವಾಗಿ ಅಳವಡಿಸಿ, ಹಾಗೂ ಅದರ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ನೀಡಿ ರಾಷ್ಟ್ರ ಭಾಷಾ ಪ್ರೇಮವನ್ನು ಮೆರೆದವರು ಡಾ. ಪ್ರಭಾಕರ ಕೋರೆಯವರು.

೮) ಯೋಜನಾ ಮತ್ತು ವಾಸ್ತುಶಿಲ್ಪ ಶಾಲೆಯ ಸಾಮಾನ್ಯ ಪರಿಷತ್ತಿನ ಸಂಸದೀಯ ಸ್ಥಾಯಿ ಸಮಿತಿಯ ಸದಸ್ಯ :

ಭಾರತೀಯ ವಾಸ್ತುಶಿಲ್ಪದ ರಕ್ಷಣೆ ಅವುಗಳ ಜೀರ್ಣೋದ್ಧಾರಕ್ಕಾಗಿ ಹಲವಾರು ಉಪಯುಕ್ತ ಸಲಹೆಗಳನ್ನು

ನೀಡುವ ಮೂಲಕ ಭಾರತೀಯ ಪ್ರಾಚೀನ ಪರಂಪರೆಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ಕೇಂದ್ರ ಸರಕಾರ ಯೋಜನಾ ಸಮಿತಿಯ ಸದಸ್ಯರ ಆಡಳಿತದಲ್ಲಿನ ಪಾರದರ್ಶಕತೆ ಹಾಗೂ ಮೂಲಭೂತ ಸೌಲಭ್ಯಕ್ಕೆ ಆದ್ಯತೆ ಹಾಗೂ ಕೃಷಿ ಹೆಚ್ಚಿನ ಆದ್ಯತೆ ನೀಡುವಂತೆ ವಿಷಯುಕ್ತ ಸಲಹೆಗಳನ್ನು ನೀಡಿದರು. ಅನಗತ್ಯ ವೆಚ್ಚವನ್ನು ತಗ್ಗಿಸುವ ಸಲಹೆ ನೀಡುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದರು.

ರಾಜ್ಯಸಭಾ ಸದಸ್ಯರಾಗಿ ಭಾರತೀಯ ಸಂಸದೀಯ ಸಮಿತಿಯ ವಿವಿಧ ಸಮಿತಿಗಳ ಕೆಲಸ ಮಾಡಿ ದೇಶದ ಅಭಿವೃದ್ಧಿಗೆ ತಮ್ಮದೆ ಆದ ಕೊಡುಗೆ ನೀಡಿದರು.

ಒಬ್ಬ ಸುಸಂಸ್ಕೃತ ವಿದ್ಯಾವಂತ ವ್ಯಾಪಕ ವಿದೇಶಿ ಪ್ರವಾಸದ ಅನುಭವ ಹೊಂದಿರುವವರು ಸಂಸತ್ತಿನ ಸದಸ್ಯರಾಗಿದ್ದರೆ ವಿವಿಧ ಕ್ಷೇತ್ರಗಳಲ್ಲಿ ನಿಪುಣತೆಯನ್ನು ಹೊಂದಿರುವ ವ್ಯಕ್ತಿಗಳಿಂದ ಸಾಕಷ್ಟು ಪ್ರಯೋಜನ ಪಡೆಯಲು ಸಾಧ್ಯ ಎನ್ನುವುದಕ್ಕೆ ಡಾ. ಪ್ರಭಾಕರ ಕೋರೆಯವರೇ ಉತ್ತಮ ನಿದರ್ಶನವಾಗಿದ್ದಾರೆ.[೧೫]

ಸಂಸದರ ಅನುದಾನದ ಸಮರ್ಪಕ ಬಳಕೆ :

ಡಾ. ಪ್ರಭಾಕರ ಕೋರೆಯವರು ರಾಜ್ಯಸಭಾ ಸದಸ್ಯರಾಗಿ ತಮ್ಮ ಕ್ಷೇತ್ರದ ಸಂಸತ್ತಿನ ಸದಸ್ಯರ ನಿಧಿಯಿಂದ ಹಲವಾರು ಅಭಿವೃದ್ಧಿಪರ ಕಾರ್ಯಗಳಿಗೆ ಹಣಕಾಸಿನ ನೆರವನ್ನು ಒದಗಿಸುವ ಮೂಲಕ ಸಾಮಾಜಿಕ ಕಾರ್ಯಗೈದಿದ್ದಾರೆ. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಅಂಕಲಿ ಗ್ರಾಮದ ಪಂಚಾಯತ್ ಕಟ್ಟಡ ಕಾರ್ಯಕ್ಕೆ ಹಣವನ್ನು ಒದಗಿಸಿ ಅದನ್ನು ಒಂದು ಮಾದರಿ ಗ್ರಾಮ ಪಂಚಾಯತಿ ಕಟ್ಟಡವನ್ನಾಗಿ ನಿರ್ಮಾಣ ಮಾಡಿದ ಶ್ರೇಯಸ್ಸು ಶ್ರೀಯುತರದು. ಸಮುದಾಯ ಭವನ ನಿರ್ಮಾಣಕ್ಕೆ ತಮ್ಮ ಸಂಸದರ ನಿಧಿಯಿಂದ ಹಣ ಬಿಡುಗಡೆಗೊಳಿಸಿ ಚಾಲನೆ ನೀಡಿದರು.

ಅಂಕಲಿ ಹಾಗೂ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಹೋಗುವ ಕ್ರಾಸಿಗೆ ಹೊಂದಿಕೊಂಡು ಚಿಕ್ಕೋಡಿ, ಬಿಜಾಪುರ ರಾಜ್ಯ ಹೆದ್ದಾರಿಗೆ ಬಸ್.ತಂಗುದಾಣ, ಅಂಕಲಿ ಗ್ರಾಮದಲ್ಲಿ ಬಸ್ ನಿಲ್ದಾಣಕ್ಕೆ ಸಂಸದರ ನಿಧಿಯಿಂದ ಹಣ ಬಿಡುಗಡೆಗೊಳಿಸಿ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸುವ ಕಾರ್ಯ ಮಾಡಿದ್ದಾರೆ. ಅಲ್ಲದೆ ಜಾತಿ–ಮತ ಎನ್ನದೆ ಮಂದಿರ ಮಸೀದಿಗಳಿಗೂ ಸಂಸದರ ನಿಧಿಯಿಂದ ಅನೇಕ ದೇವಾಲಯ ಶಾಲೆಯ ಕೊಠಡಿಗಳು ಹಾಗೂ ಅವುಗಳ ಕಂಪೌಂಡಗಳು ಗ್ರಾಮೀಣ ಪ್ರದೇಶದ ರಸ್ತೆಗಳ ನಿರ್ಮಾಣಕ್ಕೆ ನೆರವಾಗಿದ್ದಾರೆ. ಅಂಕಲಿ ಗ್ರಾಮದಲ್ಲಿ ಸುಸಜ್ಜಿತ ಟಾರ್ ರಸ್ತೆಗಳನ್ನು ನಿರ್ಮಿಸಿದ್ದಾರೆ. ಒಳಚರಂಡಿಗಳನ್ನು ನಿರ್ಮಾಣ ಮಾಡಿದ್ದು ಬಹುಶಃ ಈಗ ಜಾರಿಯಲ್ಲಿ ಇರುವ ಸರಕಾರದ ಮಹತ್ವದ ಯೋಜನೆಯಾದ ಸುವರ್ಣ ಗ್ರಾಮೋದಯ ಯೋಜನೆಗಳಲ್ಲಿನ ಎಲ್ಲ ಅಂಶಗಳನ್ನು ಡಾ. ಪ್ರಭಾಕರ ಕೋರೆಯವರು ಒಂದು ದಶಕದ ಮೊದಲೇ ಅಂಕಲಿ ಗ್ರಾಮದಲ್ಲಿ ಪ್ರಯೋಗ ಮಾಡಿದ್ದು ನಿಜಕ್ಕೂ ಮಾದರಿಯಾಗಿದೆ. ಅಂಕಲಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸುವ ಮೂಲಕ ಜನರ ಬಹುದಿನದ ಬೇಡಿಕೆಯನ್ನು ಈಡೇರಿಸಿದ್ದಾರೆ. ಕೃಷ್ಣಾ ನದಿಯಿಂದ ಅಂಕಲಿ ಗ್ರಾಮಕ್ಕೆ ದಿನನಿತ್ಯ ನೀರು ಜನರಿಗೆ ದೊರಕುವಂತೆ ಮಾಡಿದರು.

ಚಿಕ್ಕೋಡಿ ಪಟ್ಟಣಕ್ಕೂ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಲು ಪ್ರಯತ್ನಿಸಿ, ಸತತವಾಗಿ ಹೋರಾಟ ಮಾಡಿದ ಪ್ರಯತ್ನದ ಫಲವಾಗಿ ಈ ಯೋಜನೆ ಈಗ ಪ್ರಗತಿಯಲ್ಲಿ ಇದೆ.

ಚಿಕ್ಕೋಡಿ ತಾಲೂಕಿನಲ್ಲಿ ಸುಮಾರು ೨,೫೦೦ ಜನ ಬಡ ಜನತೆಗಾಗಿ ಉಚಿತವಾದ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳಲು ಸಹಾಯ ಮಾಡಿದರು. ಈ ವಿಚಾರದಲ್ಲಿ ಯಾವುದೇ ಜಾತಿ, ಮತ ಎನ್ನದೇ ಸಮಾಜದ ಎಲ್ಲ ವರ್ಗದ ಬಡ ಜನರಿಗೆ ಸಹಾಯ ಮಾಡಿದರು. ಡಾ. ಪ್ರಭಾಕರ ಕೋರೆಯವರ ಜನಪರ ಕಾರ್ಯಗಳ ಬಗ್ಗೆ ಹಾಗೆ ಜನರ ಬೇಡಿಕೆಗಳನ್ನು ಈಡೇರಿಸುವಲ್ಲಿ ತೋರುವ ನೈಜ ಬದ್ಧತೆ ತೋರಿಸಿದರು.

ರಾಜಕೀಯ ನಾಯಕರು ನೈಜವಾಗಿ ಅಭಿವೃದ್ಧಿಗೆ ಬದ್ಧತೆಯನ್ನು ತೋರಿಸಿದರೆ ಎಂತಹ ಕಷ್ಟದ ಕೆಲಸಗಳು ಸುಲಭವಾಗುತ್ತವೆ ಮತ್ತು ಜನರ ಬಹು ದಿನಗಳ ಬೇಡಿಕೆಗಳು ಈಡೇರುತ್ತವೆ.ಅಭಿವೃದ್ಧಿಯ ವಿಷಯ ಬಂದಾಗ ರಾಜಕೀಯ ಬೆರೆಸಬಾರದು ಎನ್ನುವ ತತ್ವಕ್ಕೆ ಕೋರೆಯವರು ಉತ್ತಮ ನಿದರ್ಶನವಾಗಿದ್ದಾರೆ. [೧೬]

ಡಾ. ಪ್ರಭಾಕರ ಕೋರೆಯವರು ಭಾರತೀಯ ಸಹಕಾರಿ ಕೈಗಾರಿಕೆಗಳ ಆಮದು ಮತ್ತು ರಫ್ತು ನಿಯಮಿತ, ನವದೆಹಲಿ ಇದರ ನಿರ್ದೇಶಕರಾಗಿ ನೇಮಕಗೊಂಡು, ಭಾರತೀಯ ಕೈಗಾರಿಕಾ ವಲಯದ ಅಭಿವೃದ್ಧಿಗೆ ಶ್ರಮಿಸಿದರು. ದೇಶಿಯ ವಸ್ತುಗಳ ವಿದೇಶಿ ರಫ್ತಿನ ಪ್ರಮಾಣವೂ ಹೆಚ್ಚಾಗುವಂತೆ ಹಾಗೆಯೇ ಪರದೇಶಗಳ ಕೈಗಾರಿಕೆಗಳು ಒಡ್ಡುವ ಸವಾಲುಗಳಿಗೆ ಪ್ರತಿಯಾಗಿ ಗುಣಮಟ್ಟಕ್ಕೆ ಆದ್ಯತೆ ನೀಡುವಂತೆ ಮಾಡಲು ಶ್ರಮಿಸಿದರು. ಜೊತೆಗೆ ರಾಜ್ಯದಲ್ಲಿ ಹೊಸ ಕೈಗಾರಿಕೆಗಳು ಹರಿದುಬರಲು ಪ್ರೋತ್ಸಾಹಿಸಿದರು.[೧೭]

ಕೋರೆಯವರು ಭಾರತೀಯ ಸಹಕಾರಿ ಕೈಗಾರಿಕೆಗಳ ಆಮದು ಮತ್ತು ರಪ್ತು ನಿಯಮಿತ, ನವದೆಹಲಿ ಇದರ ನಿರ್ದೇಶಕರಾಗಿ ನೇಮಕಗೊಂಡು ಭಾರತೀಯ ಕೈಗಾರಿಕಾ ವಲಯದ ಅಭಿವೃದ್ಧಿಗೆ ಶ್ರಮಿಸಿದರು. ದೇಶಿಯ ವಸ್ತುಗಳು ವಿದೇಶಿ ರಫ್ತಿನ ಪ್ರಮಾಣವು ಹೆಚ್ಚಾಗುವಂತೆ ಮಾಡುವಲ್ಲಿ ಸಲಹೆ ನೀಡಿದರು. ಹಾಗೂ ಹೊರ ದೇಶಗಳ ಕೈಗಾರಿಕೆಗಳು ಒಡ್ಡುವ ಸವಾಲುಗಳಿಗೆ ಪ್ರತಿಯಗಿ ಗುಣಮಟ್ಟಕ್ಕೆ ಆದ್ಯತೆ ನೀಡುವಂತೆ ಶ್ರಮಿಸಿದರು.

ರಾಜ್ಯ ಸಭಾ ಸದಸ್ಯರಾಗಿ ಕೋರೆಯವರು ಕೇಂದ್ರ ಮಟ್ಟದಲ್ಲಿ ಸಾಕಷ್ಟು ಪ್ರಭಾವವನ್ನು ಬೆಳಸಿಕೊಂಡವರು. ಆಗಿನ ಪ್ರಧಾನ ಮಂತ್ರಿಯಾದ ಶ್ರೀ ಪಿ.ವಿ.ನರಸಿಂಹರಾವರೊಂದಿಗೆ ನಿಕಟ ಸಂಪರ್ಕವನ್ನು ಅವರು ಹೊಂದಿದ್ದರು. ಕೇಂದ್ರ ಸಚಿವರ ಮಟ್ಟದಲ್ಲಿ ಪ್ರಭಾವ ಹೊಂದಿದ್ದರು. ಒಂದು ದಿನ ಡಾ. ಪ್ರಭಾಕರ ಕೋರೆಯವರು ಹೊಸ ಕಾರಿನಲ್ಲಿ ಧಾರವಾಡ ದಕ್ಷಿಣ ಕ್ಷೇತ್ರದ ಸಂಸದರಾದ ಆಯ್.ಜಿ.ಸನದಿಯವರೊಂದಿಗೆ ನವದೆಹಲಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ರಸ್ತೆಯ ಬದಿಗೆ ಕಾರು ಇದ್ದದ್ದನ್ನು ಪೋಲೀಸರು ಆಕ್ಷೇಪಿಸಿದರು. ಆಗ ಕೋರೆಯವರು ಸಂಸತ್ತಿನ ಸದಸ್ಯ ಈಗಲೇ ಇಲ್ಲಿಂದ ಹೋಗಲಿದ್ದೇನೆ ಎಂದರು. ಅವರು ಆಗದು ಎಂದು ಕಾರನ್ನು ತೆಗೆದುಕೊಂಡು ಹೋಗಿಯೇ ಬಿಟ್ಟರು. ಒಂದು ನಿಮಿಷ ತಡ ಮಾಡದೇ ಕೋರೆಯವರು ಆಗಿನ ರಾಷ್ಟ್ರದ ಗೃಹಮಂತ್ರಿಗಳಾದ ಶ್ರೀ ಎಸ್.ಬಿ.ಚವ್ಹಾಣರಿಗೆ ಕಂಪ್ಲೇಂಟ್ ಕೊಟ್ಟಾಗ, ಪೋಲೀಸ್ ಅಧಿಕಾರಿಗಳು ಇವರ ಕಾಲಿಗೆ ಬಿದ್ದು ಸಸ್ಪೆಂಡ್ ಆಗುವುದನ್ನು ತಪ್ಪಿಸಿಕೊಂಡುದನ್ನು

ಈ ಘಟನೆಯಿಂದ ತಿಳಿಯಬಹುದು.[೧೮] ಕೇಂದ್ರ ಮಟ್ಟದಲ್ಲಿ ಕೋರೆಯವರು ಯಾವ ರೀತಿ ಪ್ರಭಾವ ಹೊಂದಿದ್ದರು ಎನ್ನುವುದನ್ನು ತಿಳಿಯಬಹುದು.

೧೯೯೦ ರ ದಶಕದಲ್ಲಿ ಶ್ರೀ ಕೃಷ್ಣ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯವರು ಡಾ. ಪ್ರಭಾಕರ ಕೋರೆಯವರನ್ನು ಸರ್ವಾನುಮತದಿಂದ ನಿರ್ದೇಶಕರಾಗಿ ಆರಿಸಿದರು. ನಂತರ ಕಾರ್ಖಾನೆಯ ಅಧ್ಯಕ್ಷರನ್ನಾಗಿಯೂ ನೇಮಕ ಮಾಡಿದರು. ಕಾರ್ಖಾನೆ ಅದ್ಭುತವಾಗಿ ಪ್ರಗತಿ ಹೊಂದುವಂತೆ ಡಾ. ಪ್ರಭಾಕರ ಕೋರೆಯವರು ಅಭಿವೃದ್ಧಿ ಪಡಿಸಿದರು. ನಂತರ ಚುನಾವಣೆಯಲ್ಲಿ ಡಾ. ಪ್ರಭಾಕರ ಕೋರೆಯವರ ನೇತೃತ್ವದ ಗುಂಪಿಗೆ ಕಾರ್ಖಾನೆಯ ಶೇರನ್ನು ಹೊಂದಿರುವ ರೈತ ಮತದಾರರು ಅಮೋಘ ಜಯವನ್ನು ತಂದುಕೊಟ್ಟರು. ಈ ಅವಧಿಯಲ್ಲಿ ಈ ಕಾರ್ಖಾನೆಯು ದಕ್ಷಿಣ ಭಾರತದ ಶ್ರೇಷ್ಠ ಸಹಕಾರಿ ಸಕ್ಕರೆ ಕಾರ್ಖಾನೆಯೆಂದು ಪ್ರಶಸ್ತಿಯನ್ನು ಪಡೆಯಿತು. ಡಾ. ಪ್ರಭಾಕರ ಕೋರೆಯವರಿಗೆ ಲಭಿಸಿದ ಪ್ರಶಸ್ತಿಯೆಂದೇ ರೈತಾಪಿ ವರ್ಗ ಹರ್ಷ ವ್ಯಕ್ತಪಡಿಸಿತು.[೧೯] ನಿರಂತರವಾಗಿ ಇಲ್ಲಿಯವರೆಗೆ ಕಾರ್ಖಾನೆ ಆಡಳಿತ ಮಂಡಳಿಯವರು ಡಾ. ಪ್ರಭಾಕರ ಕೋರೆಯವರ ನೇತೃತ್ವದಲ್ಲಿಯೇ ಚುನಾವಣೆಯಲ್ಲಿ ಆಯ್ಕೆಯಾಗುತ್ತಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯನೆಸಿದೆ. ಅದೇ ಅವಧಿಯಲ್ಲಿ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಯ ಮಹಾಮಂಡಲದ ನಿರ್ದೇಶಕರಾಗಿ ನೇಮಕಗೊಂಡರು. ರಾಷ್ಟ್ರ ಮಟ್ಟದಲ್ಲಿ ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕೆ ಹಲವಾರು ವರ್ಷಗಳಿಂದ ಶ್ರಮಿಸುತ್ತಿದ್ದಾರೆ: ಸದ್ಯ ೨೦೧೦ ರಿಂದ ಈ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡಿರುವ ಇವರು ರಾಜ್ಯದ ಪ್ರಥಮ ವ್ಯಕ್ತಿಯೆನೆಸಿದ್ದಾರೆ.[೨೦] ಕೇಂದ್ರದಲ್ಲಿ ಈಗ ಸದ್ಯಕ್ಕೆ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರವಿದೆ. ಅದೂ ಅಲ್ಲದೆ ಮಹರಾಷ್ಟ್ರದ ಸಕ್ಕರೆ ಕಾರ್ಖಾನೆಗಳ ಮಾಲಿಕರ ಪ್ರಭಾವ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆ ಮಹಾಮಂಡಳದಲ್ಲಿ ಅಧಿಕ ಪ್ರಮಾಣದಲ್ಲಿದೆ. ಅದರಲ್ಲಿಯೂ ವಿಶೇಷವಾಗಿ ಮರಾಠಿ ಸಮುದಾಯದವರು ಹೆಚ್ಚಾಗಿದ್ದಾರೆ. ಅವರು ಕಾಂಗ್ರೆಸ್ ಹಾಗೂ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ಬೆಂಬಲಿಗರಾಗಿದ್ದರೂ ಕೂಡ ಡಾ. ಪ್ರಭಾಕರ ಕೋರೆಯವರು ಈಗ ಬಿ.ಜೆ.ಪಿ. ಪಕ್ಷದವರಾದರೂ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದನ್ನು ನೋಡಿದಾಗ, ಅವರ ವ್ಯಕ್ತಿತ್ವ ಪಕ್ಷಾತೀತವಾಗಿದ್ದು ಎಷ್ಟೊಂದು ಪ್ರಭಾವಶಾಲಿಯಾಗಿದೆಯೆಂದು ಗುರುತಿಸಬಹುದು. ಸಾಕಷ್ಟು ಪ್ರಭಾವ ಹೊಂದಿದ್ದ ಡಾ. ಕೋರೆಯವರು ೧೯೯೬ ರಲ್ಲಿ ತಮ್ಮ ರಾಜ್ಯ ಸಭಾಸದಸ್ಯತ್ವದ ಅವಧಿ ಮುಗಿಯುವುದಕ್ಕೆ ಇನ್ನೂ ಒಂದು ವರ್ಷವಿರುವಾಗಲೇ ಲೋಕಸಭೆಗೆ ಸಾರ್ವತ್ರಿಕ ಚುನಾವಣೆ ಘೋಷಣೆಯಾಯಿತು. ಆಗ ನಾಲ್ಕು ಬಾರಿ ಸಂಸತ್ತಿನ ಸದಸ್ಯರಾಗಿ ಆಯ್ಕೆಯಾಗಿ ತಮ್ಮದೆಯಾದ ಕಾಂಗ್ರೆಸ್ ಪಕ್ಷದ ಹೈಕಮಾಂಡಿನ ಮೇಲೆ ವಿಶೇಷ ಛಾಪು ಮೂಡಿಸಿದ್ದ ಶ್ರೀ ಎಸ್.ಬಿ.ಸಿದ್ನಾಳರನ್ನು ಹಿಂದಕ್ಕೆ ಸರಿಸಿ ಕಾಂಗ್ರೆಸ್ ಪಕ್ಷದ ಟಿಕೆಟ ಗಿಟ್ಟಿಸುವದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದರೆ ಕೋರೆಯವರ ಪ್ರಭಾವದ ಮುಂದೆ ಶ್ರೀ ಎಸ್.ಬಿ.ಸಿದ್ನಾಳರು ಹಾಲಿ ಸಂಸದರು ಹಾಗೂ ಸತತವಾಗಿ ನಾಲ್ಕು ಬಾರಿ ಸಂಸತ್ತಿಗೆ ಸದಸ್ಯರಾಗಿ ಆಯ್ಕೆಯಾದವರು ಎನ್ನುವ ಕಾರಣಗಳನ್ನು ಹಿಂದಕ್ಕೆ ಸರಿಸಿ ಕಾಂಗ್ರೆಸ್ ಪಕ್ಷದ ಟಿಕೇಟನ್ನು ಬೆಳಗಾವಿ ಲೋಕಸಭೆಯಿಂದ ಡಾ. ಪ್ರಭಾಕರ

ಕೋರೆಯವರು ಪಡೆದಿದ್ದರು. ಕರ್ನಾಟಕವಲ್ಲದೆ ದೆಹಲಿ ಮಟ್ಟದಲ್ಲೂ ಹಲವಾರು ರಾಜಕೀಯ ನಾಯಕರು ಅಚ್ಚರಿಯನ್ನು ವ್ಯಕ್ತಪಡಿಸಿದರು. ಡಾ. ಪ್ರಭಾಕರ ಕೋರೆಯವರ ಪ್ರಭಾವವನ್ನು ಕಂಡು ಬೆರಗಾದರು. ಇತ್ತ ಬೆಳಗಾವಿಯಿಂದ ಡಾ. ಪ್ರಭಾಕರ ಕೋರೆಯವರ ಹೆಸರು ಹಾಲಿ ಸಂಸದ ಎಸ್.ಬಿ.ಸಿದ್ನಾಳರವರ ಬದಲಿಗೆ ಘೋಷಿಸಿದಾಗ ಅನೇಕರು ಹುಬ್ಬೇರಿಸಿದ್ದುಂಟು. ಆದರೆ ಕೋರೆಯವರ ಸಾಮರ್ಥ್ಯ ಮತ್ತು ಪ್ರಭಾವವನ್ನು ಕಂಡು ಅಭಿಮಾನಿ ವಲಯದಲ್ಲಿ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.[೨೧]

ಇದೇ ಸಂದರ್ಭದಲ್ಲಿ ೧೯೯೬ರ ಬೆಳಗಾವಿ ಲೋಕಸಭೆ ಚುನಾವಣೆ ದೇಶದಲ್ಲಿಯೇ ಒಂದು ದಾಖಲೆಯೆನಿಸಿತು. ಸುಮಾರು ೩೦೦ ಕ್ಕೂ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಿಸುವ ಮೂಲಕ ಇಡೀ ದೇಶದ ಜನರ ಗಮನವನ್ನು ತನ್ನತ್ತ ಸೆಳೆದುಕೊಂಡಿತ್ತು. ಮತ ಪತ್ರಗಳ ಬದಲಿಗೆ ಪುಸ್ತಕ ರೂಪದಲ್ಲಿ ಮುದ್ರಿಸಲಾಗಿತ್ತು. ಮತದಾನ ಮಾಡಲು ಸಾಮಾನ್ಯ ಮತ ಪೆಟ್ಟಿಗೆ ಬದಲಿಗೆ ಬ್ಯಾರೆಲ್‌ಗಳನ್ನು ಬಳಸಲಾಯಿತು. ಅಭ್ಯರ್ಥಿಗಳನ್ನು ಗುರುತಿಸಿ ಮತದಾನ ಮಾಡಲು ಮತದಾರರಿಗೆ ಹೆಚ್ಚಿನ ಕಾಲವಧಿಯನ್ನು ನಿಗದಿಪಡಿಸಲಾಯಿತು.[೨೨] ಈ ರೀತಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಡಾ. ಪ್ರಭಾಕರ ಕೋರೆಯವರ ಪ್ರತಿಸ್ಪರ್ಧಿಯಾಗಿದ್ದವರು ಆಗಿನ ಜನತಾದಳ ಸರ್ಕಾರದಲ್ಲಿ ಹಿರಿಯ ಲೋಕೋಪಯೋಗಿ ಸಚಿವರಾಗಿದ್ದ ಶ್ರೀ ಶಿವಾನಂದ ಕೌಜಲಗಿ ಅವರನ್ನು ಎದುರಿಸಿದರು. ಮಂತ್ರಿ ಪದವಿ ಅದರಲ್ಲೂ ಲೋಕೋಪಯೋಗಿ ಇಲಾಖೆಯಂಥ ಮಹತ್ವದ ಖಾತೆಯನ್ನು ಬಿಟ್ಟು ಯಾಕೆ ಸ್ಪರ್ಧಿಸುತ್ತಾರೆ ಎನ್ನುವ ಅಭಿಪ್ರಾಯ ಶ್ರೀ ಶಿವಾನಂದ ಕೌಜಲಗಿ ಅವರ ಆಪ್ತವಲಯದಲ್ಲಿ ಕೇಳಿ ಬಂದಿತ್ತು. ಆದರೆ ಜನತಾದಳ ಪಕ್ಷದ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಚ್.ಡಿ.ದೇವೇಗೌಡರು ತಮ್ಮ ರಾಜಕೀಯ ತಂತ್ರಗಾರಿಕೆಯನ್ನು ಇಲ್ಲಿ ಪ್ರದರ್ಶಿಸಿದರು. ತಮ್ಮದೇ ಸರಕಾರ ರಾಜ್ಯದಲ್ಲಿ ಅಧಿಕಾರದಲ್ಲಿರುವುದರಿಂದ ಅದು ಅಲ್ಲದೇ ಡಾ. ಪ್ರಭಾಕರ ಕೋರೆಯವರು ಒಬ್ಬ ಬಲಿಷ್ಠ ಅಭ್ಯರ್ಥಿಯೆಂದು ಮನಗಂಡಿದ್ದರು. ಅದಕ್ಕಾಗಿಯೇ ಅವರಿಗೆ ಪ್ರಬಲ ಅಭ್ಯರ್ಥಿಯಾಗಿ ನೀವೇ ಸೂಕ್ತವೆಂದು ನಿರ್ಣಯಿಸಿದರು. ಹಾಗೆಯೇ ಹೆಚ್ಚಿನ ಸಂಖ್ಯೆಯಲ್ಲಿರುವ ಲಿಂಗಾಯತ ಸಮುದಾಯದ ಮತಗಳನ್ನು ಸೇಳೆಯಲು ಇದು ಅನಿವಾರ್ಯವೆಂದು ನಿರ್ಣಯಿಸಿತು. ಡಾ. ಪ್ರಭಾಕರ ಕೋರೆಯವರು ಹಾಗೂ ಶ್ರೀ ಶಿವಾನಂದ ಕೌಜಲಗಿಯವರ ನಡುವೆ ನಡೆದ ನೇರ ಸ್ಪರ್ದೆಯಲ್ಲಿ ಡಾ. ಪ್ರಭಾಕರ ಕೋರೆಯವರು ತೀವ್ರ ಪೈಪೋಟಿ ನೀಡಿ ಅಲ್ಪ ಮತಗಳಿಂದ ಸೋಲನ್ನನುಭವಿಸಿದರು.[೨೩]

ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಯಾವ ಬಗೆಯ ವಾಮ ಮಾರ್ಗದ ಮೂಲಕ ಗೆಲ್ಲಬಹುದು ಮತ್ತು ಪ್ರಭಾವಿ ಮುಖಂಡರನ್ನು ಸೋಲಿಸಲು ಯಾವ ಬಗೆಯ ರಣತಂತ್ರ ರೂಪಿಸುತ್ತಾರೆ ಎಂಬುದಕ್ಕೆ ೧೯೯೬ರ ಬೆಳಗಾವಿಯ ಚುನಾವಣೆಯೇ ಒಂದು ನಿದರ್ಶನವಾಗಿದೆ. ೧೯೯೬ರ ಚುನಾವಣೆಯಲ್ಲಿ ಡಾ. ಪ್ರಭಾಕರ ಕೋರೆಯವರು ಸೋಲನ್ನು ಕಂಡರೂ ಎದೆಗುಂದದೇ ಜನಪರ ಕಾರ್ಯಕ್ಕೈಗೊಂಡರು. ಸಂಘಟನಾ ಸಾಮರ್ಥ್ಯ ಡಾ. ಪ್ರಭಾಕರ ಕೋರೆಯವರ ವರ್ಚಸ್ಸನ್ನು ಪಕ್ಷ ಗುರುತಿಸಿ ೧೯೯೭ ಮತ್ತು ೨೦೦೭ ರಲ್ಲಿ ಗೋವಾ ರಾಜ್ಯ

ವಿಧಾನಸಭೆ ಚುನಾವಣೆಯಲ್ಲಿ AICC ಯ ಚುನಾವಣೆಯ ನಿರೀಕ್ಷಕರಾಗಿ ನೇಮಕಗೊಳಿಸಿತು. ಡಾ. ಪ್ರಭಾಕರ ಕೋರೆಯವರು ಗೋವಾದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಚುನಾವಣಾ ಪ್ರಚಾರದ ಅಭ್ಯರ್ಥಿಗಳ ಗೆಲುವಿಗೆ ಕಾರ್ಯತಂತ್ರ ರೂಪಿಸಿ ಪಕ್ಷ ಉತ್ತಮ ಸಾಧನೆ ಮಾಡುವಲ್ಲಿ ಶ್ರಮಿಸಿದರು.[೨೪]

೧೯೯೯ ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಪುನಃ ಅಧಿಕಾರ ಪಡೆಯಬೇಕೆಂಬ ಉತ್ಸಾಹದಲ್ಲಿತ್ತು. ಮುಖ್ಯಮಂತ್ರಿ ಜಿ.ಎಚ್.ಪಟೇಲರ ಉತ್ತಮ ಆಡಳಿತ, ನಿಧಾನವಾಗಿ ರಾಜ್ಯಾದ್ಯಂತ ಹಬ್ಬುತ್ತಿರುವ ಭಾರತೀಯ ಜನತಾ ಪಕ್ಷದ ಪ್ರಭಾವದಲ್ಲಿ ಸ್ವಂತ ಶಕ್ತಿಯ ಮೇಲ ಸರ್ಕಾರ ರಚಿಸುವುದು. ಅಲ್ಲದೆ ಉತ್ತರ ಕರ್ನಾಟಕದಲ್ಲಿ ಪ್ರಭಾವಿ ಲಿಂಗಾಯತ ಸಮುದಾಯದ ಮತಗಳಿಸುವಲ್ಲಿ ಕಾಂಗ್ರೆಸ ಪಕ್ಷಕ್ಕೆ ಕಠಿಣ ಸವಾಲಾಗಿತ್ತು. ಈ ಸಂದರ್ಭದಲ್ಲಿ ಪಕ್ಷ ಉತ್ತರ ಕರ್ನಾಟಕದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಆಯ್ಕೆ ಸಮಿತಿಯ ನಿರೀಕ್ಷಕರಾಗಿ ಆಗಿ ನೇಮಕಗೊಂಡರು ಹೈಕಮಾಂಡಿನ ನಿರೀಕ್ಷೆಯಂತೆ ಕಾರ್ಯ ಮಾಡಿ, ಮೆಚ್ಚಿಗೆ ಪಡೆದರು.[೨೫]

ಗಮನಿಸುವ ಅಂಶವೆಂದರೆ ಡಾ. ಪ್ರಭಾಕರ ಕೋರೆಯವರು ಹಾಗೂ ಶ್ರೀ ಶಿವಾನಂದ ಕೌಜಲಗಿಯವರ ಮಧ್ಯೆ ಸ್ಪರ್ಧೆ ಇದ್ದರೂ ಇಬ್ಬರಲ್ಲಿಯ ಆತ್ಮೀಯತೆ ಮಾತ್ರ ವಿರಸಕ್ಕೆ ದಾರಿಯಾಗದೆ, ಒಳ್ಳೆಯ ಬಾಂಧವ್ಯವು ಇಲ್ಲಿಯವರೆಗೂ ಮುಂದುವರೆದಿದೆ. ಪಕ್ಷ ರಾಜಕೀಯ ಚುನಾವಣೆಯಲ್ಲಿ ರಾಜಕೀಯಕ್ಕಿಂತ, ಡಾ. ಪ್ರಭಾಕರ ಕೋರೆಯವರ ವ್ಯಕ್ತಿತ್ವ ಭಿನ್ನವಾಗಿರುವುದನ್ನು ಗುರುತಿಸಬಹುದು. ಮತ್ತು ಲೋಕಸಭಾ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿ ಅಭ್ಯರ್ಥಿಗಳು ಸ್ಪರ್ಧಿಸಿದ್ದು, ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ತರಲು ಪ್ರೇರೇಪಿಸಿತು.

೧೯೯೯ ರಲ್ಲಿ ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಉತ್ತರ ಕರ್ನಾಟಕ ಕಾಂಗ್ರೆಸ ಪಕ್ಷದ ಅಭ್ಯರ್ಥಿಗಳ ಆಯ್ಕೆ ಸಮಿತಿಯ ನಿರೀಕ್ಷಕರಾಗಿ ಕಾಂಗ್ರೆಸ ಪಕ್ಷದ ಹೈಕಮಾಂಡಿನ ಮೆಚ್ಚಿಗೆ ಪಡೆದರು.[೨೬]

೧೯೯೯ ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ ಪಕ್ಷ ಪುನಃ ಅಧಿಕಾರ ಪಡೆಯಬೇಕಿತ್ತು. ಆ ಹಂತದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಪಕ್ಷದ ಅಧ್ಯಕ್ಷ ಸ್ಥಾನದ ಆಯ್ಕೆಗಾಗಿ ರಾಜ್ಯದ ೨ ಪ್ರಬಲ ಕೋಮುಗಳಾದ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಕ್ಕೆ ನೀಡಬೇಕು ಎನ್ನುವ ಬೇಡಿಕೆಯಿತ್ತು, ಅದಲ್ಲಿಯೂ ಶ್ರೀ ಎಸ್.ಎಂ.ಕೃಷ್ಣಾ ಒಕ್ಕಲಿಗ ಸಮುದಾಯದಿಂದ ಮತ್ತು ಹಿರಿಯ ಮುಖಂಡ ಶ್ರೀ ಎಂ.ರಾಜಶೇಖರಮೂರ್ತಿ ಲಿಂಗಾಯತ ಸಮುದಾಯದಿಂದ ತೀವ್ರ ಪೈಪೋಟಿ ನಡೆಸಿದರು. ಆಗ ಪಕ್ಷದ ಹೈಕಮಾಂಡ ಶ್ರೀ ಎಸ್.ಎಂ.ಕೃಷ್ಣಾರಿಗೆ ನಾಯಕತ್ವ ವಹಿಸಿತು. ಆಗ ಅದರಿಂದ ಬೇಜಾರುಗೊಂಡ ಶ್ರೀ ಎಂ.ರಾಜಶೇಖರ ಮೂರ್ತಿಯವರು ಭಾರತೀಯ ಜನತಾ ಪಕ್ಷ ಸೇರಿದರು. ಭಾರತೀಯ ಜನತಾ ಪಕ್ಷ ಪ್ರಬಲವಾಗುತ್ತಿರುವ ಅಂಶವನ್ನು ಗುರುತಿಸಿ ಮುಖ್ಯಮಂತ್ರಿ ಜಿ.ಎಚ್.ಪಟೇಲರು ಲಿಂಗಾಯತರು ಬಹುಸಂಖ್ಯೆಯಲ್ಲಿ ಜನತಾದಳ ಹಾಗೂ ಬಿಜೆಪಿಯಲ್ಲಿ ಗುರ್ತಿಸಿಕೊಳ್ಳುವುದರಿಂದ ಕಾಂಗ್ರೆಸ ಪಕ್ಷ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವುದು. ಅದರಲ್ಲೂ ಉತ್ತರ ಕರ್ನಾಟಕದ ಪ್ರಬಲ ಲಿಂಗಾಯತ ಸಮುದಾಯದ ಮತಗಳನ್ನು ಗಳಿಸುವುದು ಕಾಂಗ್ರೆಸ ಪಕ್ಷಕ್ಕೆ ಕಠಿಣ ಸವಾಲಾಗಿತ್ತು. ಈ ಸಂದರ್ಭದಲ್ಲಿ ಪಕ್ಷ ಲಿಂಗಾಯತ ಸಮುದಾಯದ ನಾಯಕ

ಡಾ. ಪ್ರಭಾಕರ ಕೋರೆಯವರ ಮೇಲೆ ಜವಾಬ್ದಾರಿ ಹೊರಿಸುವ ರಾಜಕೀಯ ಜಾಣತನದ ತಂತ್ರಗಾರಿಕೆ ಅನುಸರಿಸಿತು. ಕೋರೆಯವರು ಉತ್ತರ ಕರ್ನಾಟಕ ಜಿಲ್ಲೆಗಳನ್ನು ಸುತ್ತಿ ಸೂಕ್ತವಾದ ಅಭ್ಯರ್ಥಿಗಳ ಹೆಸರನ್ನು ಶಿಫಾರಸ್ಸು ಮಾಡಿದರು. ಆಗ ಕಾಂಗ್ರೆಸ್ ಪಕ್ಷ ನಿರೀಕ್ಷೆಯನ್ನು ಮೀರಿ ಸಾಧನೆ ಮಾಡಿ ಸ್ವಂತಃ ಬಲದಿಂದ ಸರ್ಕಾರ ರಚಿಸಿತು. ಇದರಲ್ಲಿ ಗಮನಿಸುವ ಇನ್ನೊಂದು ಅಂಶವೆಂದರೆ ಪ್ರಬಲ ಲಿಂಗಾಯತ ಕ್ಷೇತ್ರಗಳಲ್ಲಿ ಬೆಳಗಾವಿ, ವಿಜಾಪೂರ, ಬಾಗಲಕೋಟೆ, ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷ ಮುನ್ನಡೆ ಸಾಧಿಸಿದ್ದು, ಡಾ. ಪ್ರಭಾಕರ ಕೋರೆಯವರ ತಂತ್ರಗಾರಿಕೆ ಕಾರಣವಾಗಿತ್ತು.

ಅಥಣಿ ವಿಧಾನ ಸಭೆಯಿಂದ ಶಹಜಹಾನ ಡೊಂಗರಗಾವ, ನಿಪ್ಪಾಣಿಯಿಂದ ಮಹಾಂತೇಶ ಕವಟಗಿಮಠ ಮೊದಲಾದವರು ಸ್ಪರ್ಧಿಸುವ ಅವಕಾಶ ಪಡೆದರು. ಇದು ಡಾ. ಪ್ರಭಾಕರ ಕೋರೆಯವರನ್ನು ಕಾಂಗ್ರೆಸ್ ಪಕ್ಷ ಎಷ್ಟೊಂದು ಸಮರ್ಪಕವಾಗಿ ಬಳಸಿಕೊಂಡು, ಅದರ ಪ್ರಯೋಜನ ಪಡೆಯುವಲ್ಲಿ ಯಶಸ್ವಿಯಾಯಿತೆಂಬುದಕ್ಕೆ ಉತ್ತಮ ನಿದರ್ಶನವಾಗಿದೆ. ಡಾ. ಪ್ರಭಾಕರ ಕೋರೆಯವರು ಬರಿ ಬೆಳಗಾವಿ ಜಿಲ್ಲೆ ಅಷ್ಟೆ ಅಲ್ಲದೆ ಬಹುತೇಕ ಉತ್ತರ ಕರ್ನಾಟಕದ ಲಿಂಗಾಯತರ ಮೇಲೆ ಬೀರಿದ ಪ್ರಭಾವವನ್ನು ಗುರುತಿಸಬಹುದಾಗಿದೆ. ಇವರ ಈ ಕಾರ್ಯ ವೈಖರಿ ಪಕ್ಷದ ಸಂಘಟನೆಯಲ್ಲಿ ಪಟ್ಟ ಶ್ರಮವನ್ನು ಗುರುತಿಸಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀಮತಿ ಸೋನಿಯಾಗಾಂಧಿಯವರು ಹಾಗೂ ಆಗಿನ ಮುಖ್ಯಮಂತ್ರಿ ಶ್ರೀ ಎಸ್.ಎಂ.ಕೃಷ್ಣಾರವರು ಡಾ. ಪ್ರಭಾಕರ ಕೋರೆಯವರನ್ನು ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ನೇಮಕ ಮಾಡಿದರು.[೨೭]

ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸದಸ್ಯತ್ವಕ್ಕಾಗಿ ಕಾಂಗ್ರೆಸ್ ಪಕ್ಷದಲ್ಲಿ ಭಾಗಿ ಪೈಪೋಟಿಯೇ ಏರ್ಪಟ್ಟಿತು. ೧೯೯೯ ರ ಚುನಾವಣೆಯಲ್ಲಿ ಉತ್ತರ ಕರ್ನಾಟಕದಲ್ಲಿ ಪಕ್ಷದ ಸಾಧನೆಯ ಹಿಂದೆ ಡಾ. ಪ್ರಭಾಕರ ಕೋರೆಯವರ ಶ್ರಮವು ಇದೆ ಎನ್ನುವುದುನ್ನು ಪಕ್ಷ ಮನಗಂಡಿತ್ತು. ಡಾ. ಪ್ರಭಾಕರ ಕೋರೆಯವ ವಿಧಾನ ಪರಿಷತ್ತಿನ ಸದಸ್ಯರಾಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಅಂಕಲಿಯಲ್ಲಿ ಶಿವಾಲಯವನ್ನು ಕಟ್ಟಿಸಿದರು. ಕಲ್ಯಾಣ ಮಂಟಪವನ್ನು ತಮ್ಮ ವಿಧಾನ ಪರಿಷತ್ತಿನ ಸದಸ್ಯರ ಅನುದಾನದಿಂದ ನಿರ್ಮಾಣ ಮಾಡಿದರು. ಹಾಗೂ ಅಂಕಲಿಯಲ್ಲಿ ಮತ್ತು ಚಿಕ್ಕೋಡಿಯಲ್ಲಿ ಕೆ.ಇ.ಬಿ. ಸ್ಟೇಶನ್ ಪ್ರಾರಂಭಿಸಿದರು.

ಗ್ರಾಮೀಣ ಪ್ರದೇಶದ ರಸ್ತಗಳಿಗೆ ಸಮುದಾಯಭವನ, ಬಡವರಿಗೆ ಮನೆಗಳ ನಿರ್ಮಾಣಕ್ಕೆ ತಮ್ಮ ಅನುದಾನವನ್ನು ಸದುಪಯೋಗ ಪಡಸಿಕೊಂಡ ಡಾ. ಪ್ರಭಾಕರ ಕೋರೆಯವರು ಸಾಮಾಜಿಕ ಕಾರ್ಯಗಳಿಗೆ ಹಣ ಒದಗಿಸಿ, ಜನರ ಪ್ರೀತಿಗೆ ಪಾತ್ರರಾದರು.

ಉತ್ತರ ಕರ್ನಾಟಕದ ಬಹುದಿನಗಳ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮತ್ತು ಇಲ್ಲಿನ ಬಹುದಿನಗಳ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವಿಧಾನ ಪರಿಷತ್ತಿನಲ್ಲಿ ಹಲವಾರು ಸಂದರ್ಭಗಳಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಧ್ವನಿ ಎತ್ತಿದರು. ಪಕ್ಷಭೇದ ಮರೆತು ಉತ್ತರ ಕರ್ನಾಟಕದ ಶಾಸಕರನ್ನು ಕಟ್ಟಿಕೊಂಡು

ಸರ್ಕಾರದ ಮೇಲೆ ಒತ್ತಡ ತರಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಅದರಲ್ಲೂ ಚಿಕ್ಕೋಡಿ ಪಟ್ಟಣದ ಬಹುದಿನದ ಬೇಡಿಕೆಯಾದ ಶಾಶ್ವತ ಕುಡಿಯುವ ನೀರು ಯೋಜನೆಯ ಕಾರ್ಯವನ್ನು ಪ್ರಾರಂಭಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಅಂತಯೇ ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಸದನದಲ್ಲಿ ಹೋರಾಟ ಮಾಡಿದರು. ಚಿಕ್ಕೋಡಿಗೆ ನೂತನ ಜಿಲ್ಲೆಯ ಸ್ಥಾನಮಾನಕ್ಕೂ ಒತ್ತಾಯಿಸುತ್ತಲೇ ಬಂದು, ಕೊನೆಗೆ ವಿಭಾಗೀಯ ಸ್ಥಾನ ದೊರೆಯುವಂತೆ ಮಾಡಿದರು. ಇನ್ನೇನು ಜಿಲ್ಲೆಯಾಗಿ ಘೋಷಣೆ ಆಗುತ್ತದೆ ಎನ್ನುವ ಮಟ್ಟಿಗೆ ಆ ಕಾರ್ಯದಲ್ಲಿ ಡಾ. ಪ್ರಭಾಕರ ಕೋರೆಯವರು ಸರ್ಕಾರದ ಮೇಲೆ ಒತ್ತಡ ತಂದಿದರು. ಹೀಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ತಮ್ಮ ಪ್ರದೇಶದ ನೆನೆಗುದಿಗೆ ಬಿದ್ದಿದ್ದ ಹಲವಾರು ಯೋಜನೆಗಳಿಗೆ ಚಾಲನೆ ದೊರಕಿಸಿದರು. ಅವುಗಳು ಪೂರ್ಣಗೊಳ್ಳುವಂತೆಯೂ ನೋಡಿಕೊಂಡರು.[೨೮] ಇದು ಕೋರೆಯವರು ವಿದಾನ ಪರಿಷತ್ತಿನ ಸದಸ್ಯರಾಗಿ ಮಾಡಿದ ಅಭಿವೃದ್ಧಿ ಕಾರ್ಯಗಳ ಕೆಲವು ಉದಾಹರಣೆಗಳು.

ಬೆಳಗಾವಿಯ ವಿಶೇಷ ವಿಧಾನ ಮಂಡಲದ ಐತಿಹಾಸಿಕ ಅಧಿವೇಶನದ ಸೂತ್ರಧಾರಿ ಡಾ. ಪ್ರಭಾಕರ ಕೋರೆಯವರು :

೨೦೦೬ ರಲ್ಲಿ ಅಂದಿನ ಜೆ.ಡಿ.ಎಸ್., ಬಿ.ಜೆ.ಪಿ. ಸಮ್ಮಿಶ್ರ ಸರ್ಕಾರದ ಅಂದಿನ ಮುಖ್ಯಮಂತ್ರಿಯಾಗಿದ್ದು, ಶ್ರೀ ಎಚ್.ಡಿ.ಕುಮಾರಸ್ವಾಮಿ ಉತ್ತರ ಕರ್ನಾಟಕದ ಕೇಂದ್ರ ಸ್ಥಾನದಲ್ಲಿ ವಿಧಾನ ಮಂಡಲ ಅಧಿವೇಶನ ನಡೆಸಬೇಕೆಂದು ನಿರ್ಧಾರ ಮಾಡಿದರು. ಅದರಲ್ಲಿ ೨೦೦೨ ರಲ್ಲಿ ಉತ್ತರ ಕರ್ನಾಟಕದ ಈ ಹಂತದಲ್ಲಿಯೇ ಬೆಳಗಾವಿಯಲ್ಲಿ ಮರಾಠಿಗರು, ಅದರಲ್ಲಿ ಎಂ.ಇ.ಎಸ್.ಹಾಗೇ ಮಹಾರಾಷ್ಟ್ರ ಸರ್ಕಾರಗಳು ವಿನಾಕಾರಣ ಬೆಳಗಾವಿ ಗಡಿ ಭಾಗದ ಸಮಸ್ಯೆಯನ್ನು ಕೆದಕುವ ಕಾರ್ಯ ಮಾಡುತ್ತಿದ್ದು, ಈ ಹಂತದಲ್ಲಿ ಬೆಳಗಾವಿಯಲ್ಲಿಯೇ ಅಧಿವೇಶನ ನಡೆಸಬೇಕು. ಡಾ. ಪ್ರಭಾಕರ ಕೋರೆಯವರ ಸಂಘಟನಾ ಸಾಮರ್ಥ್ಯ ಮತ್ತು ದೈತ್ಯ ಕೆ.ಎಲ್.ಇ.ಸಂಸ್ಥೆಯ ಸಹಕಾರ ಮನಗಂಡ ಶ್ರೀ ಕುಮಾರಸ್ವಾಮಿಯವರು ಡಾ. ಪ್ರಭಾಕರ ಕೋರೆಯವರನ್ನು ಬೆಂಗಳೂರಿಗೆ ಕರೆಸಿ, ತಮ್ಮ ಈ ವಿಚಾರವನ್ನು ಅವರ ಮುಂದೆ ಇಟ್ಟಾಗ, ಡಾ. ಪ್ರಭಾಕರ ಕೋರೆಯವರಿಗೆ ಎಲ್ಲಿಲ್ಲದ ಸಂತೋಷ. ನಮ್ಮ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಯಾವ ತ್ಯಾಗಕ್ಕೂ ಸಿದ್ಧ ಎಂದು ಶ್ರೀ ಕುಮಾರಸ್ವಾಮಿಯವರಿಗೆ ಅಭಯ ಹಸ್ತ ನೀಡಿದರು. (ಕೇವಲ ಒಂದು ವಾರದ ಅವಧಿಯಲ್ಲಿಯೇ ಅಂದರೆ ೧೬-೯-೨೦೦೬ರ ಬೆಂಗಳೂರಿನಲ್ಲಿನ ಸಭೆಯ ನಿರ್ಣಯದಂತೆ ದಿನಾಂಕ೨೫-೯-೨೦೦೬ ರಂದು ಅಧಿವೇಶನ ಪ್ರಾರಂಭವಾಗಬೇಕಿತ್ತು.[೨೯] ಒಂದು ವಾರದ ಅವಧಿಯಲ್ಲಿ ಡಾ. ಪ್ರಭಾಕರ ಕೋರೆಯವರು ಐತಿಹಾಸಿಕ, ವಿಧಾನ ಮಂಡಲದ ಅಧಿವೇಶನದ ಸಂಪೂರ್ಣ ಜವಾಬ್ದಾರಿ ಹೊತ್ತು, ಯುದ್ಧೋಪಾದಿಯಲ್ಲಿ ಅಧಿವೇಶನದ ತಯಾರಿಗೆ ಸಕಲ ಸಿದ್ಧತೆಯನ್ನು ಮಾಡಿದರು. ಇದರಿಂದ ಶ್ರೀ ಕುಮಾರಸ್ವಾಮಿಯಯವರು ಸರ್ಕಾರದ ಜನಪ್ರಿಯತೆ ಹೆಚ್ಚಾಗುತ್ತದೆ ಎಂದು ಇದಕ್ಕೆ ಅವಕಾಶ ಮಾಡಿಕೊಡಬೇಡಿ ಎಂಬ ಅದೇಶ ಬರತೊಡಗಿದವು. ಏಕೆಂದರೆ ಇಲ್ಲಿಯವರಿಗೆ ಯಾವ ಮುಖ್ಯಮಂತ್ರಿಗಳು ಕೈಗೊಳ್ಳದ ಈ ಮಹತ್ವದ ಜನಪ್ರಿಯ ನಿರ್ಧಾರವು ಇದಾಗಿತ್ತು. ಆದರೆ ಡಾ. ಪ್ರಭಾಕರ ಕೋರೆಯವರು ನಮ್ಮ ಉತ್ತರ ಕರ್ನಾಟಕದ ಜನತೆಗೆ

ಇದರಿಂದ ಪ್ರಯೋಜನವಾಗುತ್ತದೆ ಎಂದು ಯಾವುದೇ ಒತ್ತಡಗಳಿಗೆ ಒಳಗಾಗದೆ ವಿಧಾನ ಮಂಡಳದ ಐತಿಹಾಸಿಕ ಅಧಿವೇಶನದ ಸಂಪೂರ್ಣವಾಗಿ ಜವಾಬ್ದಾರಿಯನ್ನು ಹೊತ್ತು, ಅಧಿವೇಶನದ ತಯಾರಿಗೆ ಸಕಲ ಸಿದ್ಧತೆಯನ್ನು ಮಾಡಲು ಮಾಡತೊಡಗಿದರು.[೩೦] ಡಾ. ಪ್ರಭಾಕರ ಕೋರೆಯವರು ಈ ಅಧಿವೇಶನದ ಯಶಸ್ಸಿಗೆ ಟೊಂಕ ಕಟ್ಟಿ ನಿಂತರು. ಕನ್ನಡ ಪರ ಹೋರಾಟಗಾರರು ಹಾಗೆ ಸಂಘಟನೆಗಳು ಮುಂಬಲ-ಬೆಂಬಲ ನೀಡಿದವು. ಹಗಲು-ರಾತ್ರಿಯನ್ನದೆ ಅಧಿವೇಶನದ ಎಲ್ಲ ಕಾರ್ಯ ಚಟುವಟಿಕೆಯನ್ನು ಮಾಡಿದರು. ಆಗ ಅವರಿಗೆ ಜಿಲ್ಲಾ ಅಧಿಕಾರಿಗಳಾದ ಶ್ರೀಮತಿ ಶಾಲಿನಿ ರಜನೀಶ, ವಿಶೇಷ ಅಧಿಕಾರಿ ಶ್ರೀ ಎಸ್.ಎಂ. ಜಾಮದಾರರು ಕೈಜೋಡಿಸಿದರು. ಕುಂದಾನಗರಿ ಬೆಳಗಾವಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಯಿತು. ರಾಜಧಾನಿಯೇ ಬೆಳಗಾವಿಗೆ ಬಂದ ಸಂಭ್ರಮ ಕಾಣತೊಡಗಿತು. ಕನ್ನಡದ ಬಾವುಟಗಳು ಹಾರಾಡತೊಡಗಿದವು. ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಕಟ್ಟಡಗಳು 'ನವವಧುವಿನಂತೆ' ಸಿಂಗಾರಗೊಂಡವು. 'ಅಭಿಮಾನವೊಂದೆ ಕುಲಂ' ಎನ್ನವಂತೆ ಇಲ್ಲಿನ ಎಲ್ಲ ನಾಗರಿಕರು ಈ ಅಧಿವೇಶನವನ್ನು ಸ್ವಾಗತಿಸಿದರು. ಹಾಗೂ ಈ ಅಧಿವೇಶನದಿಂದ ಈ ಭಾಗದ ಅಭಿವೃದ್ಧಿಯಾಗುದೆಂಬ ಕನಸುಗಳನ್ನು ತುಂಬಿಕೊಂಡರು.[೩೧]

ಕೆ.ಎಲ್.ಇ.ಸಂಸ್ಥೆಯ ಜವಾಹರಲಾಲ್ ನೆಹರು ವೈದ್ಯಕೀಯ ಕಾಲೇಜಿನ ಆವರಣದಲ್ಲಿನ ಡಾ. ಬಿ.ಎಸ್.ಜೀರಗೆ ಸ್ಮಾರಕ ಸಭಾಭವನ, ವಿಧಾನ ಸಭೆಯಾಗಿ ಪರಿವರ್ತಿಸಲಾಯಿತು. ವಿಧಾನ ಪರಿಷತ್ತನ್ನು ಈ ಮೊದಲು ರಂಗಮಂದಿರದ ಸಭಾಭವನದಲ್ಲಿ ನಡೆಯಿಸಬೇಕೆಂದು ನಿರ್ಣಯಿಸಲಾಯಿತು. ಆದರೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಕಲಾಪಗಳು ಒಂದೆ ಸ್ಥಳದಲ್ಲಿ ನಡೆಯುವುದು ಯೋಗ್ಯ ಎನ್ನುವ ಕಾರಣಕ್ಕಾಗಿ ನಂತರ ಅದನ್ನು ಶರೀರ ಶಾಸ್ತ್ರ ವಿಭಾಗದ ವಿಶಾಲ ಪ್ರಾಂಗಣದಲ್ಲಿ ಬೆಂಗಳೂರಿನಲ್ಲಿರುವ ವಿಧಾನಸಭೆಯಂತೆ ತದ್ರೂಪ ನಿರ್ಮಾಣಗೊಂಡವು. ಮೆಡಿಕಲ್ ಕಾಲೇಜಿನ ಮುಂಭಾಗದ ಕೊಠಡಿಗಳೇ ಸಚಿವಾಲಯದ ಸಿಬ್ಬಂದಿಗೆ ಸಿದ್ಧಗೊಂಡವು. ಶಾಸಕರಿಗಾಗಿ ಅಕ್ಕಮಹಾದೇವಿ, ನೀಲಾಂಬಿಕಾ, ಗಂಗಾಬಿಕಾ ಮತ್ತು ವೈದ್ಯಕೀಯ ವಿದ್ಯಾರ್ಥಿಗಳ ಅಂತರಾಷ್ಟ್ರೀಯ ಗುಣಮಟ್ಟದ ವಸತಿನಿಲಯಗಳಲ್ಲಿ ವ್ಯವಸ್ಥೆಯನ್ನು ಮಾಡಲಾಯಿತು. ಈ ಐತಿಹಾಸಿಕ ಅಧಿವೇಶನದ ಪ್ರಾರಂಭದ ದಿನ. ಈ ಅಧಿವೇಶನದ ಪ್ರಮುಖ ರೂವಾರಿ ಅಂದಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ಹಾಗೂ ಸಚಿವರನ್ನು ಬೆಳಗಾವಿ ನಗರಗಳಲ್ಲಿ ಭವ್ಯ ಮೆರವಣಿಗೆಯ ಮೂಲಕ ಸದನಕ್ಕೆ ಕರೆ ತರುವ ದೃಶ್ಯ, ಜನ ಮಾನಸದಲ್ಲಿ ಇನ್ನು ಹಚ್ಚು ಹಸಿರಾಗಿ ಉಳಿದಿದೆ.[೩೨]

ವಿಧಾನ ಪರಿಷತ್ತಿನ ಸದಸ್ಯರು ಆಗಿದ್ದ ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಎಳೆ ಎಳೆಯಾಗಿ ಸದನದ ಮುಂದೆ ಬಿಡಿಸಿ ಇಟ್ಟರು. ನಂತರ ಅವುಗಳ ಕಾರ್ಯ ಸಾಧನೆಯ ಬಗ್ಗೆಯೂ ಸದನದಲ್ಲಿ ವಿಸ್ತೃತವಾದ ಚರ್ಚೆಯಲ್ಲಿ ಭಾಗವಹಿಸಿದರು. ಇದೇ ಸಮಯದಲ್ಲಿ ಕೆ.ಎಲ್.ಇ.ಸಂಸ್ಥೆಯ ಆವರಣ ಇಲ್ಲಿನ ಸೌಲಭ್ಯಗಳನ್ನು ಕಂಡು, ಶಾಸಕರು, ಸಚಿವರು ಡಾ. ಪ್ರಭಾಕರ ಕೋರೆಯವರಿಗೆ ವಿಶೇಷವಾಗಿ ಅವರನ್ನು ಅಭಿನಂದಿಸಿ ಒಂದು ಸಂಸ್ಥೆಯನ್ನು ಹೇಗೆ ಅಭಿವೃದ್ಧಿ ಪಡಿಸಬೇಕು ಎನ್ನುವುದಕ್ಕೆ ತಾವುಗಳೆ ಮಾದರಿ ಎಂದು ಮುಕ್ತವಾಗಿ ಪ್ರಶಂಸಿಸಿದರು.

ಬೆಳಗಾವಿಯ ವಿಶೇಷ ವಿಧಾನ ಮಂಡಲ ಅಧಿವೇಶನ – ೨೦೦೬ರ ಅಧಿವೇಶನದ ಪರಿಣಾಮಗಳು :

ಈ ಐತಿಹಾಸಿಕ ಅಧಿವೇಶನದಲ್ಲಿ ಡಾ. ನಂಜುಂಡಪ್ಪ ಸಮಿತಿಯು ಸಲ್ಲಿಸುತ್ತಿರುವ ವರದಿಯ ವಿಸ್ತೃತ ಚರ್ಚೆಯಾಗಿ ಅದಕ್ಕಾಗಿ ಪ್ರತ್ಯೇಕವಾಗಿ ಅನುದಾನ ಒದಗಿಸುವ ಚಿಂತನೆ ಮಾಡಲಾಯಿತು.

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ವಿಶೇಷವಾಗಿ ಬಜೆಟಿನಲ್ಲಿ ಹಣ ತೆಗೆದು ಇಡುವ ಬಗ್ಗೆಯೂ ತೀರ್ಮಾನ ಕೈಗೊಳ್ಳಲಾಯಿತು. ಹಾಗೆ ಉತ್ತರ ಕರ್ನಾಟಕದ ರೈತರ ಅನುಕೂಲಕ್ಕಾಗಿ ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣಾ ಬಿ.ಸ್ಕೀಮ್ ಯೋಜನೆಯ ಅನುಷ್ಠಾನ, ಕೆರೆ ನೀರು ತುಂಬುವ ಯೋಜನೆಗೆ ಹಾಗೆ ಗುತ್ತಿ ಬಸವಣ್ಣ ಐತ ನೀರಾವರಿ ಯೋಜನೆಗಳು ತುಂಗಭದ್ರಾ ಕಾಲುವೆಗಳು ದುರಸ್ತಿಗಾಗಿ ಹಣ ನಿಗದಿ, ಅಲ್ಲದೇ ರಸ್ತೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ಕುಡಿಯಲು ನೀರು ಪೂರೈಕೆ ಯೋಜನೆ, ಶಾಲಾ ಕಾಲೇಜುಗಳ ಸ್ಥಾಪನೆ ಇತ್ಯಾದಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅಲ್ಲದೆ ೨೦೦೨ ರಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಶ್ರೀ ಎಂ.ನಂಜುಂಡಪ್ಪನವರ ಸಮಿತಿಯು ಸುಮಾರು ೧೬೦೦ ಕೋಟಿ ರೂಪಾಯಿಗಳನ್ನು ಅಭಿವೃದ್ಧಿಗೆ ಶಿಫಾರಸ್ಸು ಇಡುವಂತೆ ಮಾಡಿತ್ತು.[೩೩] ಈ ಉದ್ದೇಶವನ್ನು ಈಡೇರಿಸಿಕೊಡಬೇಕು. ಹಾಗೂ ಸಮಿತಿಯ ವರದಿಯನ್ನು ಹಂತ ಹಂತವಾಗಿ ಅನುಸ್ಠಾನಗೊಳಿಸುವುದಕ್ಕಾಗಿ ಮತ್ತು ಉತ್ತರ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗಾಗಿ ಈ ವಿಶೇಷ ಅಧಿವೇಶನದಲ್ಲಿಯೇ ಅಂದಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿಯವರು ಸುಮಾರು ೧೫೦೦ ಕೋಟಿ ರೂಪಾಯಿಗಳ ಯೋಜನೆಗಳನ್ನು ಪ್ರಕಟಿಸಿದರು. ಇದರಿಂದಾಗಿ ಉತ್ತರ ಕರ್ನಾಟಕದ ಬಹುದಿನಗಳಿಂದ ನೆನೆಗುದಿಗೆ ಬಿದ್ದಿದ್ದ, ನಾನಾ ಯೋಜನೆಗಳು ಪ್ರಾರಂಭಿಸಲು ಸಹಾಯವಾಯಿತು.[೩೪]

ನಂತರ ಬಜೆಟ್‌ನಲ್ಲಿ ೨೫೦೦ ಕೋಟಿ ರೂಪಾಯಿಗಳನ್ನು ಈ ನಂಜುಂಡಪ್ಪ ವರದಿಯ ಅನುಷ್ಠಾನಕ್ಕಾಗಿ ತೆಗೆದು ಇರಿಸಿದ್ದು, ಬೆಳಗಾವಿ ವಿಶೇಷ ಅಧಿವೇಶನದ ಪರಿಣಾಮ.[೩೫] ಉತ್ತರ ಕರ್ನಾಟಕದ ಅಭಿವೃದ್ಧಿಗೆ ಈ ಅಧಿವೇಶನವು ಒಂದು ದಿಕ್ಸೂಚಿಯಾಯಿತು ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಶ್ರೀಕಾರ ಹಾಕಿಸುವಲ್ಲಿ ಮಹತ್ವದ ಪಾತ್ರ ವಹಿಸಿದ ನೈಜ ಅಭಿವೃದ್ಧಿ ಪರ ನಾಯಕ ಎನ್ನುವುದನ್ನು ಖಾತ್ರಿ ಪಡಿಸಿದರು.

ಪ್ರಮುಖವಾಗಿ ಶಾಶ್ವತವಾಗಿ ಬೆಳಗಾವಿಯನ್ನು ಎರಡನೆಯ ರಾಜ್ಯದ ರಾಜ್ಯಧಾನಿಯನ್ನಾಗಿ, ಇಲ್ಲಿಯೇ ಪ್ರತಿ ವರ್ಷ ಚಳಿಗಾಲದ ಅಧಿವೇಶನ ನಡೆಯಬೇಕು. ಅದಕ್ಕಾಗಿ ಇಲ್ಲಿ ಶಾಶ್ವತವಾಗಿ ಅಧಿವೇಶನ ನಡೆಸಲು 'ಸುವರ್ಣ ವಿಕಾಸ ಸೌಧ ನಿರ್ಮಾಣ ಮಾಡಬೇಕು' ಎಂದು ಡಾ. ಪ್ರಭಾಕರ ಕೋರೆಯವರು ಒತ್ತಾಯಕ್ಕೂ ಸರಕಾರವು ಸ್ಪಂದಿಸಿತ್ತು. ಹೀಗೆ ಈ ಅಧಿವೇಶನವು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೊಸ ದಿಕ್ಸೂಚಿಯಾಗಿ ಪರಿಣಮಿಸಿತು.[೩೬]

ಡಾ. ಪ್ರಭಾಕರ ಕೋರೆಯವರು ಒಂದು ಅದ್ಭುತ ಸಂಘಟನಾ ಶಕ್ತಿಯೆಂಬುದನ್ನು ಇನ್ನೊಮ್ಮೆ ಸಾಬೀತುಪಡಿಸಿ ಎಲ್ಲರು ಶ್ರೀ ಕುಮಾರಸ್ವಾಮಿಯವರ ಜೊತೆಗೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸ್ವಪಕ್ಷ ಕಾಂಗ್ರೇಸ್ ಆದೇಶವನ್ನು ಧಿಕ್ಕರಿಸಿ, ಬೆಳಗಾವಿಯ ವಿಧಾನ ಮಂಡಲ ಅಧಿವೇಶನಕ್ಕೆ ಪೂರ್ಣ ಬೆಂಬಲ ನೀಡಿ, ಉತ್ತರ ಕರ್ನಾಟಕದ

ಅಭಿವೃದ್ಧಿಗಾಗಿ ಅವರು ವಹಿಸಿದ ಶ್ರಮವನ್ನು ಕಂಡು ನೈಜವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಹೊಂದಿರುವ ಕಳಕಳಿಯನ್ನು ಕಂಡು ಜನಸಾಮಾನ್ಯರು ಕೂಡಾ ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದುದು ಸಾಮಾನ್ಯವಾಗಿತ್ತು. ಇದು ಡಾ. ಪ್ರಭಾಕರ ಕೋರೆಯವರ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರಗು ನೀಡಿತು. ಹಾಗೆ ಇಲ್ಲಿಯವರಿಗೂ ಬೆಳಗಾವಿಯ ಜಿಲ್ಲೆಯ ರಾಜಕೀಯದಲ್ಲಿ ಡಾ. ಪ್ರಭಾಕರ ಕೋರೆಯವರು ಕಾಂಗ್ರೆಸ್ ಪಕ್ಷಕ್ಕೆ ಒಂದು ಶಕ್ತಿಯಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸಿದರು.

೨೦೦೭ ರಲ್ಲಿ ಉತ್ತರ ಕರ್ನಾಟಕದ ವಿಧಾನ ಸಭೆಗೆ ಮಧ್ಯಂತರ ಚುನಾವಣೆಯನ್ನು ಘೋಷಿಸಿದಾಗ ಇದೇ ಮೊದಲ ಸಲ ಕ್ಷೇತ್ರ ಮರುವಿಂಗಡಣೆಗೆ ಅನುಗುಣವಾಗಿ ಚುನಾವಣೆ ನಡೆಯಬೇಕಾಗಿರುವುದರಿಂದ ಬಹು ವರ್ಷಗಳ ಕಾಲ ಚಿಕ್ಕೋಡಿ ಕ್ಷೇತ್ರವು ಮೀಸಲು ಕ್ಷೇತ್ರವಾಗಿತ್ತು. ಈಗದು ಸಾಮಾನ್ಯ ಕ್ಷೇತ್ರವಾಗಿ ಬದಲಾವಣೆ ಹೊಂದಿರುವುದರಿಂದ ಸಹಜವಾಗಿ ತವರು ಕ್ಷೇತ್ರದಿಂದಲೇ ತಾವು ಸ್ಪರ್ಧಿಸಬೇಕು ಎಂದು ಅಭಿಮಾನಿ ವಲಯದಲ್ಲಿ ಅಭಿಪ್ರಾಯ ಕೇಳಿ ಬಂದಿತ್ತು. ಅಷ್ಟೊತ್ತಿಗೆ ಡಾ. ಪ್ರಭಾಕರ ಕೋರೆಯವರ ವಿಧಾನ ಪರಿಷತ್ತಿನ ಅವಧಿಯೂ ಮುಗಿದಿತ್ತು. ತಮ್ಮ ತವರು ಕ್ಷೇತ್ರವಾದ ಚಿಕ್ಕೋಡಿ ತಾಲೂಕಿಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದ, ಕೋರೆಯವರು, ಸಾಮಾನ್ಯ ಕ್ಷೇತ್ರವಾದ ನಂತರ ಬಹುದಿನಗಳ ಬಯಕೆಯಂತೆ ಸಹಜವಾಗಿ ಕಾಂಗ್ರೆಸ್ ಪಕ್ಷದ ಟಿಕೇಟ ಆಕಾಂಕ್ಷಿಯಾಗಿದ್ದರು. ಅದು ಸಹಜವೂ ಆಗಿತ್ತು. ಆದರೆ ಪಕ್ಷದ ಹೈಕಮಾಂಡನ ಹಾಲಿ ಶಾಸಕರು ಎನ್ನುವ ಕಾರಣದ ನೆಪ ಒಡ್ಡಿ ಡಾ. ಪ್ರಭಾಕರ ಕೋರೆಯವರಿಗೆ ಟಿಕೇಟ ನಿರಾಕರಿಸಿತ್ತು. ಇದು ಡಾ. ಪ್ರಭಾಕರ ಕೋರೆಯವರಿಗೆ ರಾಜಕೀಯ ಜೀವನದಲ್ಲಿ ಆದ ಒಂದು ಪ್ರಮುಖ ನಿರಾಶೆಯ ಸನ್ನಿವೇಶ ಸಾಕಷ್ಟು ಬೇಸರ ಕೂಡಾ ಅನ್ನಿಸಿತು. ಇಷ್ಟು ವರ್ಷಗಳ ಕಾಲ ಪಕ್ಷಕ್ಕಾಗಿ ದುಡಿದರೂ ಪಕ್ಷದ ಟಿಕೇಟ್ ಕೈತಪ್ಪಿ ಹೋಗಿದ್ದು ಕೋರೆಯವರಿಗೆ ಮಾತ್ರ ಮರೆಯಲಾದ ಕಹಿ ಘಟನೆಯಾಗಿತ್ತು.

೨೦೦೬ರ ವಿಧಾನ ಮಂಡಲ ಅಧಿವೇಶನಕ್ಕೆ ಸ್ಥಳಾವಕಾಶ ಕೊಡಬೇಡಿ ಎಂದು ಪಕ್ಷದ ಆದೇಶವನ್ನು ಡಾ. ಪ್ರಭಾಕರ ಕೋರೆಯವರು ಧಿಕ್ಕರಿಸಿದ್ದಾರೆ ಎನ್ನುವ ಒಂದು ಅಂಶವೂ ಕಾರಣ ಎನ್ನುವುದನ್ನು ಇದರಿಂದ ತಿಳಿಯಬಹುದು. ತಮ್ಮ ಪ್ರದೇಶದ ಅಭಿವೃದ್ಧಿಗೆ ಹಾಗೇ ಉತ್ತರ ಕನಾಟಕದ ಅಭಿವೃದ್ಧಿಗಾಗಿ ತಾವು ಸ್ಥಳಾವಕಾಶವನ್ನು ಕಲ್ಪಿಸಿದ್ದು, ನಮ್ಮ ಜನರ ಒಳತಿಗಾಗಿ ಎನ್ನುವ ಡಾ. ಪ್ರಭಾಕರ ಕೋರೆಯವರ ಮಾತಿಗೆ ಬೆಲೆ ಇಲ್ಲದೆ. ಪ್ರಸ್ತುತ ರಾಜಕೀಯ ವ್ಯವಸ್ಥೆಯು ಅಭಿವೃದ್ಧಿಕ್ಕಿಂತ ಪಕ್ಷದ ಹಿತವೇ ಮುಖ್ಯ ಎನ್ನುವ ವಿಚಾರ ಪ್ರಾಮುಖ್ಯತೆ ಸಿಕ್ಕಿರುವುದಂತೂ ಒಳ್ಳೆಯ ಆದರ್ಶ ರಾಜಕೀಯ ಲಕ್ಷಣವಂತೂ ಅಲ್ಲ. ಇದರಿಂದ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಡಾ. ಪ್ರಭಾಕರ ಕೋರೆಯವರು ಮಾಡಿದ ತ್ಯಾಗ ಮಾತ್ರ ಪಕ್ಷದ ಟಿಕೇಟಗಿಂತಲೂ ಶ್ರೇಷ್ಠ.

೨೦೦೮ರ ಕರ್ನಾಟಕದ ವಿಧಾನ ಸಭೆಯಿಂದ ನಾಲ್ಕು ಸ್ಥಾನಗಳಿಗಾಗಿ ರಾಜ್ಯಸಭಾ ಚುನಾವಣೆಯ ಘೋಷಣೆ ಆಯಿತು. ಸುಲಭವಾಗಿ ಒಂದು ಸ್ಥಾನವನ್ನು ಕಾಂಗ್ರೆಸ್ ಪಕ್ಷ ಗೆಲ್ಲಬಹುದಾಗಿತ್ತು. ನಂತರ ೨ನೇ ಸ್ಥಾನವನ್ನು ಗೆಲ್ಲುವ ಸಾಧ್ಯತೆ ಹೆಚ್ಚಾಗಿತ್ತು. ಜೆ.ಡಿ.ಎಸ್.ಪಕ್ಷದ ಮೇಲಿಂದ ಅದು ಅಲ್ಲದೇ ಬಹುತೇಕವಾಗಿ ಲಿಂಗಾಯತ ಸಮುದಾಯದವರು

ಬಿ.ಜೆ.ಪಿ. ಪಕ್ಷದ ಹಿಂದೆಯೇ ಇದ್ದುದು. ಹೀಗಾಗಿ ಲಿಂಗಾಯತ ಸಮುದಾಯದಲ್ಲಿ ಪ್ರಬಲರಿಗೆ ಅವಕಾಶ ಕಲ್ಪಿಸಬೇಕು ಎನ್ನುವ ಅಭಿಪ್ರಾಯ ಕೇಳಿ ಬಂದಿತ್ತು. ಮತ್ತು ೨೦೦೭ ರಲ್ಲಿನ ಚಿಕ್ಕೋಡಿ ವಿಧಾನ ಸಭೆಯ ಚುನಾವಣೆಯಲ್ಲಿ ಪಕ್ಷದ ಟಿಕೇಟ ಹಂಚಿಕೆಯಾದಾಗ ಪಕ್ಷದ ಟಿಕೇಟ ಸಿಗದೇ ಅಸಮಾಧಾನಗೊಂಡಿದ್ದ, ಡಾ. ಪ್ರಭಾಕರ ಕೋರೆಯವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಲಾಗುತ್ತದೆ ಎನ್ನುವ ಭರವಸೆಯನ್ನು ಪಕ್ಷವು ನೀಡಿತ್ತು. ಆದರೆ ಕಾಂಗ್ರೆಸ್ ಪಕ್ಷವು ತನ್ನ ಆಶ್ವಾಸನೆಯನ್ನು ಉಳಿಸಿಕೊಳ್ಳುವ ಗೋಜಿಗೆ ಹೋಗದೆ, ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಎಸ್.ಎಂ.ಕೃಷ್ಣ ಅವರಿಗೆ ಅವರನ್ನು ಹಾಗೂ ಉದ್ಯಮಿ ಅನಿಲ ಲಾಡರಿಗೆ ಪಕ್ಷದ ಟಿಕೇಟ್‌ನ್ನು ಖಾತ್ರಿಪಡಿಸಿತ್ತು. ಇದರಿಂದಾಗಿ ಎರಡನೇ ಸಲವೂ ಕಾಂಗ್ರೆಸ್ ಪಕ್ಷದ ಈ ಧೋರಣೆಯು ಡಾ. ಪ್ರಭಾಕರ ಕೋರೆಯವರ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು. ಬಿ.ಜೆ.ಪಿ. ಪಕ್ಷವು ಡಾ. ಪ್ರಭಾಕರ ಕೋರೆಯವರನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ನಂತರ ಅವರಿಗೆ ರಾಜ್ಯ ಸಭಾ ಚುನಾವಣೆಗೆ ತಕ್ಷಣ ಅಭ್ಯರ್ಥಿಯಾಗಿ ಘೋಷಣೆ ಮಾಡಿ, ರಾಜಕೀಯ ಲಾಭ ಪಡೆಯುವಲ್ಲಿ ಯಶಸ್ವಿಯಾಯಿತು.[೩೭]

ಉತ್ತರ ಕರ್ನಾಟಕದಲ್ಲಿ ಬಿ.ಜೆ.ಪಿ. ಪಕ್ಷಕ್ಕೆ ಆನೆಬಲ :

ನಾಲ್ಕು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಇದ್ದು, ಪಕ್ಷ ತ್ಯಜಿಸುವುದು ಡಾ. ಪ್ರಭಾಕರ ಕೋರೆಯವರಿಗೆ ಒಂದು ರೀತಿಯಲ್ಲಿ ಮನಸ್ಸಿಗೆ ತೀವ್ರವಾದ ಬೇದ ಉಂಟಾಗಿತ್ತು. ಆದರೆ ಡಾ. ಪ್ರಭಾಕರ ಕೋರೆಯವರ ಈ ನೋವು ಕಾಂಗ್ರೆಸ ಪಕ್ಷದ ನಾಯಕರಿಗೆ ಅರ್ಥವಾಗದೇ ಹೋಗಿದ್ದು ವಿಪರ್ಯಾಸವೇ ಸರಿ. ಹೀಗೆ ಭಾರತೀಯ ಜನತಾ ಪಕ್ಷ ಸೇರಿದ ಡಾ. ಪ್ರಭಾಕರ ಕೋರೆಯವರು ಎರಡನೆಯ ಅವಧಿಗೆ ೨೦೦೮ ರಲ್ಲಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದರು. ನಂತರ ಡಾ. ಪ್ರಭಾಕರ ಕೋರೆಯವರ ಶಕ್ತಿಯನ್ನು ಗುರುತಿಸಿದ ಭಾರತೀಯ ಜನತಾ ಪಕ್ಷವು ಅವರನ್ನು ರಾಜ್ಯ ಬಿ.ಜೆ.ಪಿ. ಘಟಕದ ಹಿರಿಯ ಉಪಾಧ್ಯಕ್ಷರನ್ನಾಗಿ ನೇಮಿಸಿ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಆಘಾತವನ್ನು ನೀಡಲು ವೇದಿಕೆ ಸಿದ್ಧಪಡಿಸಿತು.[೩೮] ಕಾಂಗ್ರೆಸ್ಸಿನ ವಿಧಾನ ಪರಿಷತ್ತಿನ ಸತೀಶ ಜಾರಕಿಹೋಳಿ ಅವರು ಯಮಕನಮರಡಿ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾದ ನಂತರ ತೆರವಾದ ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಉಪಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದಿಂದ ಶಶಿಕಾಂತ ನಾಯಕರನ್ನು ಕಣಕ್ಕೆ ಇಳಿಸಿ, ಜಿಲ್ಲಾದ್ಯಂತ ಮಿಂಚಿನಂತೆ ಸಂಚರಿಸಿ ತಮ್ಮ ನೇತೃತ್ವದಲ್ಲಿಯೇ ಕಾಂಗ್ರೆಸ್ಸ ಪಕ್ಷದ ಹಿಡಿತದಲ್ಲಿ ಇದ್ದ, ಕ್ಷೇತ್ರವನ್ನು ಸುಮಾರು ೧೪೧೮ ಮತಗಳ ಅಂತರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಶ್ರೀ ಎಸ್.ಸಿ.ಮಾಳಗಿ ಅವರನ್ನು ಸೋಲಿಸಿ ಕಮಲ ಅರಳುವಂತೆ ಮಾಡಿದರು. ಇಲ್ಲಿ ಒಟ್ಟು ೪೯೫೮ ಮತಗಳನ್ನು ಬಿ.ಜೆ.ಪಿ. ಪಕ್ಷ ಪಡೆದಿತ್ತು.[೩೯] ಇತ್ತ ಧಾರವಾಡ ಕ್ಷೇತ್ರದಿಂದ ಬಿ.ಜೆ.ಪಿ. ಪಕ್ಷದ ಶಿವರಾಜ ಸಜ್ಜನವರು ಕಾಂಗ್ರೆಸ್ ಪಕ್ಷದ ಶ್ರೀನಿವಾಸ ಮಾನೆ ಅವರನ್ನು ಸುಮಾರು ೬೫೫ ಮತಗಳಿಂದ ಸೋಲಿಸಿ ಇಲ್ಲಿಯೂ ಭಾರತೀಯ ಜನತಾ ಪಕ್ಷ ಗೆಲುವಿಗೆ ಕಾರಣವಾದರು.[೪೦]

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಹೊಡೆತ ನೀಡಿದರು. ಡಾ. ಪ್ರಭಾಕರ ಕೋರೆಯವರು ಇದು ಭಾರತೀಯ ಜನತಾ ಪಕ್ಷಕ್ಕೆ ಒಂದು ಬಂಫರ್ ಫಲಿತಾಂಶವೂ. ಡಾ. ಪ್ರಭಾಕರ ಕೋರೆಯವರ ಸಾಮರ್ಥ್ಯದಿಂದ ಲಭಿಸಿತು.

ನಂತರ ಧಾರವಾಡ ದಕ್ಷಿಣ ಪದವೀದರ ಕ್ಷೇತ್ರದಲ್ಲಿ ಶ್ರೀ ಎಚ್.ಕೆ.ಪಾಟೀಲರು ಗದಗ ವಿಧಾನ ಸಭೆಗೆ ಸ್ಪರ್ಧಿಸಲು ತಮ್ಮ ವಿಧಾನ ಪರಿಷತ್ತಿನ ಸ್ಥಾನಕ್ಕಾಗಿ ರಾಜೀನಾಮೆಯನ್ನು ನೀಡಿದರು. ಆದರೆ ಗದಗನಲ್ಲಿ ಎಚ್.ಕೆ.ಪಾಟೀಲರು ಸೋಲನ್ನು ಅನುಭವಿಸಿದರು. ಕಾರಣ ಮತ್ತೆ ನಡೆದ ವಿಧಾನ ಪರಿಷತ್ತಿನ ಮರು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪರ್ಧಿಸಿದರು. ಆಗ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯನ್ನಾಗಿ ಶ್ರೀ ಮೋಹನ ಲಿಂಬಿಕಾಯಿ ಅವರನ್ನು ಕಣಕ್ಕೆ ಇಳಿಸಿ ಅದರ ಜವಾಬ್ದಾರಿಯನ್ನು ಡಾ. ಪ್ರಭಾಕರ ಕೋರೆಯವರ ಮೇಲೆ ಹೊರಿಸಲಾಯಿತು. ಸತತವಾಗಿ ಈ ಕ್ಷೇತ್ರದಿಂದ ಗೆದ್ದು ಬಂದಿದ್ದ ಶ್ರೀ ಎಚ್.ಕೆ.ಪಾಟೀಲರನ್ನು ಸೋಲಿಸುವುದು ಅಷ್ಟು ಸುಲಭವಾಗಿರಲಿಲ್ಲ. ಡಾ. ಪ್ರಭಾಕರ ಕೋರೆಯವರು ಧಾರವಾಡ, ಗದಗ, ಹಾವೇರಿ, ಅಂಕೋಲಾ ಮತ್ತಿತರ ಕಡೆಗೆ ಮಿಂಚಿನಂತೆ ಸಂಚಾರ ಮಾಡಿ ತಮ್ಮ ಸಂಸ್ಥೆಯ ಅಂಗ ಸಂಸ್ಥೆಗಳ ಸಿಬ್ಬಂದಿಗೆ ಆದೇಶ ಮಾಡಿದ ಫಲವಾಗಿ ಪದವೀಧರ ಕ್ಷೇತ್ರದಲ್ಲಿ ನೀರಿಕ್ಷೆ ಮೀರಿ ಶ್ರೀ ಮೋಹನ ಲಿಂಬಿಕಾಯಿಯವರು ೩,೩೦೦ ಮತಗಳಿಂದ ಗೆಲ್ಲುವಂತೆ ಮಾಡಿ, ಇಲ್ಲಿಯೂ ಒಬ್ಬ ಬಲಿಷ್ಠ ನಾಯಕರನ್ನು ಸೋಲಿಸಿರುವುದಲ್ಲದೇ ಕಾಂಗ್ರೆಸ್ ಪಕ್ಷದಿಂದ ಈ ಸ್ಥಾನವನ್ನು ಕಿತ್ತು ಬಿ.ಜೆ.ಪಿ. ಪಕ್ಷಕ್ಕೆ ತಂದುಕೊಟ್ಟು ಗೆಲುವಿನ ರೂವಾರಿಯಾದರು. ಈ ಎರಡು ಚುನಾವಣೆಗಳ ಫಲಿತಾಂಶದಿಂದ ಡಾ. ಪ್ರಭಾಕರ ಕೋರೆಯವರಿಂದ ಭಾರತೀಯ ಜನತಾ ಪಕ್ಷ ಪ್ರಯೋಜನ ಪಡದರೆ ಕಾಂಗ್ರೆಸ್ ಪಕ್ಷ ಭಾರೀ ಹಾನಿಯನ್ನು ಅನುಭವಿಸಿತು.[೪೧]

ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಭಾರತೀಯ ಜನತಾ ಪಕ್ಷ ಅಮೋಘ ಸಾಧನೆ ಮಾಡಲು ಡಾ. ಪ್ರಭಾಕರ ಕೋರೆಯವರ ಬಲಿಷ್ಠ ನಾಯಕತ್ವವೇ ಕಾರಣ ಎನ್ನುವುದರಲ್ಲಿ ಸಂದೇಹವೇ ಇರಲಿಲ್ಲ.

ಭಾರತೀಯ ಜನತಾ ಪಕ್ಷ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಯಲ್ಲಿ ಸಾಕಷ್ಟು ಪ್ರಮಾದವನ್ನು ಮಾಡಿತ್ತು. ಲಿಂಗಾಯತರಲ್ಲದೆ ಅಲ್ಪಸಂಖ್ಯಾತರ ಕೋಮಿನವರಾದ ಬಣಜಿಗ ಸಮುದಾಯಕ್ಕೆ ಸೇರಿದ ೬ ಜನರಿಗೆ ಪಕ್ಷದ ಟಿಕೇಟ ಕೊಡಲಾಯಿತು.

ಹಾಗೆಯೇ ಹಾವೇರಿಯಲ್ಲಿ ಶಿವಕುಮಾರ ಉದಾಸಿ, ಚಿಕ್ಕೋಡಿಯಲ್ಲಿ ರಮೇಶ ಕತ್ತಿ ಹಾಗೂ ಶಿವಮೊಗ್ಗದಲ್ಲಿ ಮುಖ್ಯಮಂತ್ರಿಯವರ ಪುತ್ರರಿಗೆ ಟಿಕೇಟ ನೀಡಿದ್ದು ಅಂತೂ ಬಿ.ಜೆ.ಪಿ. ಪಕ್ಷದ ಮೂಲ ಕಾರ್ಯಕರ್ತರಿಗೆ ಭಾರೀ ಅಸಮಾಧಾನಕ್ಕೆ ಕಾರಣವಾಗಿತ್ತು. ಅಲ್ಲದೇ ೮೦ ಲಕ್ಷ ಸಮುದಾಯದ ಪ್ರಬಲ ಪಂಚಮಸಾಲಿ ಸಮಾಜವನ್ನು ನಿರ್ಲಕ್ಷಿಸಲಾಗಿದೆ ಎನ್ನುವ ಅಪಸ್ವರ ಕೇಳಬರತೊಡಗಿದವು. ಹಾಗೆ ಕುಟುಂಬ ರಾಜಕಾರಣಕ್ಕೆ ಆಸ್ಪದ ನೀಡಿ ಬೆಳಗಾವಿ

ಕ್ಷೇತ್ರದಿಂದ ಸುರೇಶ ಅಂಗಡಿಯವರನ್ನು ಚಿಕ್ಕೋಡಿ ಕ್ಷೇತ್ರದಿಂದ, ರಮೇಶ ಕತ್ತಿ ಹಾವೇರಿಯಿಂದ ಶಿವಕುಮಾರ ಉದಾಸಿಯವರು ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದು, ಮತ್ತು ಇವರ ತಂದೆಯವರು ರಾಜ್ಯದಲ್ಲಿ ಸಚಿವರಾಗಿದ್ದು, ಹಾಗೇ ಉಮೇಶ ಕತ್ತಿಯವರು ಸಚಿವರಾಗಿದ್ದು ಅಲ್ಲದೆ ಬೇರೆಯವರಿಗೆ ಅವಕಾಶ ಕಲ್ಪಿಸಿ ಕೊಡಬೇಕಿತ್ತು. ಎನ್ನುವ ಭಾವನೆ ಸಹಜವಾಗಿ ಬಿ.ಜೆ.ಪಿ. ಪಕ್ಷದ ಮೂಲ ಕಾರ್ಯಕರ್ತರಿಗೆ ವಿಶೇಷವಾಗಿ ಪಂಚಮಸಾಲಿ ಸಮಾಜಕ್ಕೆ ಅನ್ಯಾಯ ಮಾಡಲಾಗಿದೆ ಎನ್ನುವ ಅಪಸ್ವರ ಎಲ್ಲೆಡೆ ಮಹತ್ವ ಪಡೆಯಲು ಪ್ರಾರಂಭವಾಯಿತು.[೪೨] ಈ ಹಂತದಲ್ಲಿ ಉತ್ತರ ಕರ್ನಾಟಕದ ಪ್ರಭಾವಿ ಮುಖಂಡ ಶ್ರೀ ಬಸನಗೌಡ ಪಾಟೀಲ (ಯತ್ನಾಳರು) ಪ್ರಚಾರದಿಂದ ತಟಸ್ಥರಾಗಿ ಉಳಿಯುವ ಬೆದರಿಕೆ ಹಾಕಿದರು. ಈ ಮೇಲಿನ ಅಂಶಗಳಿಂದ ಭಾರತೀಯ ಜನತಾ ಪಕ್ಷ ಗೆಲ್ಲುವುದು ಅಷ್ಟ ಸುಲಭವಂತೂ ಆಗಿರಲಿಲ್ಲ. ಈ ಹಂತದಲ್ಲಿ ಡಾ. ಪ್ರಭಾಕರ ಕೋರೆಯವರು ರಂಗ ಪ್ರವೇಶ ಮಾಡಿದರು. ಮೊದಲು ಪಕ್ಷ ಬಿಡುವ ತಯಾರಿಯಲ್ಲಿ ಇದ್ದ ಶ್ರೀ ಬಸನಗೌಡ ಪಾಟೀಲರನ್ನು ಮನ ಒಲಿಸಿದರು. ಮತ್ತು ಪಕ್ಷದ ಪರ ಪ್ರಚಾರ ಮಾಡುವಂತೆ ಮಾಡುವಲ್ಲಿ ಸಫಲವಾದರು. ಡಾ. ಪ್ರಭಾಕರ ಕೋರೆಯವರ ಈ ಪ್ರಯತ್ನದ ಫಲವಾಗಿ ವಿಜಾಪೂರ, ಬಾಗಲಕೋಟೆಯ ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಇನ್ನೇನು ಕಾಂಗ್ರೆಸ್ ಪಕ್ಷ ಗೆದ್ದೆಬಿಟ್ಟಿತು ಎನ್ನುವ ಹಂತದಲ್ಲಿ ಯತ್ನಾಳರ ಪ್ರಚಾರದಿಂದ ವಾತಾವರಣವೇ ಬದಲಾಗಿ ಮತ್ತೆ ಈ ಎರಡು ಕ್ಷೇತ್ರಗಳನ್ನು ಬಿ.ಜೆ.ಪಿ. ಪಕ್ಷ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಡಾ. ಪ್ರಭಾಕರ ಕೋರೆಯವರ ಸಂಧಾನದ ಫಲ ಎನ್ನಬಹುದು.[೪೩]

ಇನ್ನು ತಮ್ಮ ಸ್ವಂತ ಜಿಲ್ಲೆಯಾದ ಬೆಳಗಾವಿಯ ಪರಿಸ್ಥಿತಿ ತೀರ ಭಿನ್ನವಾಗಿತ್ತು. ಬೆಳಗಾವಿಯಲ್ಲಿ ಮರಾಠಿಗರ ಸಭೆಯಲ್ಲಿ ಭಗವಾಧ್ವಜ ಹಾರಿಸಿದ ಶ್ರೀ ಸುರೇಶ ಅಂಗಡಿಯವರ ವಿರುದ್ಧ ಕನ್ನಡ ಪರ ಸಂಘಟನೆಗಳು ರಸ್ತೆಗೆ ಇಳಿದು ವಿರೋಧ ಮಾಡತೊಡಗಿದವು. ಮುಖ್ಯಮಂತ್ರಿಗಳ ಸಮಾರಂಭದಲ್ಲಿ ಕೂಡ ಕಪ್ಪು ಬಾವುಟ ಪ್ರದರ್ಶನಗಳಂತಹ ಪ್ರತಿಭಟನೆ ಪ್ರಾರಂಭವಾದವು. ಅದರಲ್ಲೂ ಪ್ರಭಾವಿ ಮುಖಂಡ ಶ್ರೀ ಎ. ಬಿ. ಪಾಟೀಲರು ಜ್ಯಾತ್ಯಾತೀತ ಜನತಾ ದಳದಿಂದ ಸ್ಪರ್ಧಿಸಿದ್ದು, ಇಬ್ಬರು ಲಿಂಗಾಯತ ಸಮುದಾಯದವರ ಮತ ಒಡೆದು ಕುರುಬ ಸಮಾಜದ ಕಾಂಗ್ರೆಸ್ಸಿನ ಅಮರಸಿಂಹ ಪಾಟೀಲರು ಗೆಲ್ಲುತ್ತಾರೆ ಎನ್ನುವ ಲೆಕ್ಕಾಚಾರ ಶುರುವಾಯಿತು. ಈ ಹಂತದಲ್ಲಿ ಡಾ. ಪ್ರಭಾಕರ ಕೋರೆಯವರು ಲಿಂಗಾಯತ ಸಮುದಾಯದವರನ್ನು ಅದರಲ್ಲೂ ವಿಶೇಷವಾಗಿ ಪಂಚಮಸಾಲಿ ಸಮಾಜದವರ ಮನ ಒಲಿಸಿ ಕನ್ನಡ ಪರ ಸಂಘಟನೆಗಳ ಮನ ಒಲಿಸಿ, ಶ್ರೀ ಸುರೇಶ ಅಂಗಡಿಯವರು ಗೆಲ್ಲುವಂತೆ ನೋಡಿಕೊಂಡರು. ಬಹುತೇಕ ಸೋತೇ ಹೋದರು ಎನ್ನುವ ಲೆಕ್ಕಾಚಾರದಲ್ಲೂ ಸುರೇಶ ಅಂಗಡಿಯವರು ದಾಖಲೆಯ ೧ ಲಕ್ಷಕ್ಕೂ ಅಧಿಕ ಮತಗಳಿಂದ ಗೆದ್ದಿದ್ದು ಮತ್ತು ಎ.ಬಿ.ಪಾಟೀಲರಿಗೆ ಕೇವಲ ೩೬ ಸಾವಿರ ಮತಗಳು ಬಂದಿದ್ದನ್ನು ಕಂಡಾಗ ಎಲ್ಲರೂ ಇದು ಡಾ. ಪ್ರಭಾಕರ ಕೋರೆಯವರ ಮ್ಯಾಜಿಕ್ ಎಂದೇ ಅಭಿಪ್ರಾಯಪಟ್ಟರು.[೪೪]

ಇತ್ತ ತಮ್ಮ ಸ್ವಕ್ಷೇತ್ರವಾದ ಚಿಕ್ಕೋಡಿಯಲ್ಲಂತೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ. ಬೆಳಗಾವಿಯಂತೆ ಲಿಂಗಾಯತರಲ್ಲಿಯೇ ಪ್ರಬಲ ಸಮುದಾಯದ ಪಂಚಮಸಾಲಿ ಜನಾಂಗದ ಮತ್ತು ನಾಲ್ಕು ಬಾರಿ

ವಿಧಾನ ಸಭೆಗೆ ಆಯ್ಕೆಯಾದ ಮಾಜಿ ಸಚಿವ ಹಾಲಿ ಶಾಸಕ ಶ್ರೀ ಪ್ರಕಾಶ ಹುಕ್ಕೇರಿಯವರಿಗೆ ಕಾಂಗ್ರೆಸ್ ಪಕ್ಷ ಟಿಕೇಟ ನೀಡಿತ್ತು. ಅಲ್ಲದೇ ಇಲ್ಲಿ ಜೆ.ಡಿ.ಎಸ್. ಪಕ್ಷ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿತ್ತು. ಹೀಗೆ ಇಲ್ಲಿ ಜ್ಯಾತ್ಯಾತೀತ ಮತ ಬ್ಯಾಂಕನ್ನು ಒಂದುಗೊಡಿಸಲು ಬಿಜೆ.ಪಿ. ಪಕ್ಷ ಗೆಲ್ಲುವಂತೆ ತಂತ್ರ ರೂಪಿಸಿಸಲಾಗಿತ್ತು. ಅಲ್ಲದೇ ಈಗಾಗಲೇ ರಮೇಶ ಕತ್ತಿಯವರು ಅಲ್ಪಸಂಖ್ಯಾತ ಬಣಜಿಗ ಸಮುದಾಯದವರು, ಶ್ರೀ ಪ್ರಕಾಶ ಹುಕ್ಕೇರಿಯವರು ಪ್ರಬಲ ಪಂಚಮಸಾಲಿ ಜನಾಂಗಕ್ಕೆ ಸೇರಿದವರು. ಹೀಗಾಗಿ ಶ್ರೀ ಪ್ರಕಾಶ ಹುಕ್ಕೇರಿಯವರ ಗೆಲುವು ನಿಶ್ಚಿತ ಎನ್ನುವ ವಾತಾವರಣವಿದ್ದಾಗ ಇದನ್ನು ಸವಾಲಾಗಿ ಸ್ವೀಕರಿಸಿದ ಡಾ. ಪ್ರಭಾಕರ ಕೋರೆಯವರು ಚುನಾವಣೆಯ ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡು ಸುಮಾರು ೬೦೦ ಹಳ್ಳಿಗಳಲ್ಲಿ ಮಿಂಚಿನಂತೆ ಪ್ರಚಾರ ನಡೆಸಿ, ಶ್ರೀ ರಮೇಶ ಕತ್ತಿಯವರು ಗೆಲ್ಲುವಂತೆ ನೋಡಿಕೊಂಡರು. ಇಲ್ಲಿ ಮೇಲ್ನೋಟಕ್ಕೆ ಶ್ರೀ ಪ್ರಕಾಶ ಹುಕ್ಕೇರಿ ಮತ್ತು ಶ್ರೀ ರಮೇಶ ಕತ್ತಿಯವರ ನಡುವ ಸ್ಪರ್ಧೆ ಇದ್ದರೂ ನೇರವಾಗಿ ಡಾ. ಪ್ರಭಾಕರ ಕೋರೆ ಹಾಗೂ ಶ್ರೀ ಪ್ರಕಾಶ ಹುಕ್ಕೇರಿ ಅವರ ನಡುವಿನ ಜಿದ್ದಾ ಜಿದ್ದಿನ ಕಣವಾಗಿತ್ತು. ಆ ಚಿಕ್ಕೋಡಿ ಲೋಕಸಭಾ ಫಲಿತಾಂಶವು ಪ್ರಕಟಗೊಂಡಾಗ ಎಲ್ಲರೂ ಇದು ಡಾ. ಪ್ರಭಾಕರ ಕೋರೆಯವರ ಗೆಲುವು ಎಂದೇ ಚುನಾವಣೆಯ ಫಲಿತಾಂಶವನ್ನು ವಿಶ್ಲೇಷಿಸತೊಡಗಿದರು. ಅಲ್ಲಿ ೫೫ ಸಾವಿರ ಮತಗಳಿಂದ ಶ್ರೀ ಪ್ರಕಾಶ ಹುಕ್ಕೇರಿಯವರು ಸೋಲು ಅನುಭವಿಸಲು ಡಾ. ಪ್ರಭಾಕರ ಕೋರೆಯವರೇ ಕಾರಣ ಎನ್ನುವುದು ಸ್ಪಷ್ಟವಾಗಿತ್ತು.[೪೫]

ಕುಟುಂಬ ರಾಜಕೀಯ ಒಂದೇ ಸಮುದಾಯಕ್ಕೆ ಬಿ.ಜೆ.ಪಿ. ಪಕ್ಷದ ಟಿಕೇಟ್ ಕೊಡಿಸಿ ಬಿ.ಜೆ.ಪಿ.ಯ ಪಕ್ಷದ ಮೂಲ ಕಾರ್ಯಕರ್ತರನ್ನು ಹಾಗೇ ಪ್ರಬಲ ಪಂಚಮಸಾಲಿ ಜನಾಂಗದ ಅಸಮಾಧಾನವಲ್ಲದೆ ಕಾಂಗ್ರೆಸ್ ಪಕ್ಷಕ್ಕೆ ಜೆ.ಡಿ.ಎಸ್. ಪಕ್ಷದ ಬೆಂಬಲ ಈ ಎಲ್ಲ ಅಂಶಗಳನ್ನು ಹಿಂದಕ್ಕೆ ಸರಿಸಿ, ಭಾರತೀಯ ಜನತಾ ಪಕ್ಷದ ಕಮಲ ಅರುಳುವಂತೆ ಮಾಡಲು ಕೋರೆಯವರು ಅನುಸರಿಸಿದ ರಾಜಕೀಯ ತಂತ್ರಗಾರಿಕೆ ಫಲವಾಗಿ ಭಾರತೀಯ ಜನತಾ ಪಕ್ಷ ಮತ್ತೊಮ್ಮೆ ಬಂಪರ ಫಲಿತಾಂಶ ಪಡೆದರೆ, ಇತ್ತ ಕಾಂಗ್ರೆಸ್ ಪಕ್ಷವು ಬಾರೀ ಹಾನಿಯನ್ನು ಅನುಭವಿಸಬೇಕಾಯಿತು.

ಗಮನಿಸುವ ಅಂಶವೆಂದರೆ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದವರು ಪ್ರಭಾಕರ ಕೋರೆಯವರ ಮಾತಿಗೆ ಬೆಲೆಕೊಟ್ಟು ಬಿ.ಜೆ.ಪಿ. ಅಭ್ಯರ್ಥಿಯ ಪರ ಕೆಲವರು ಮತ ಚಲಾಯಿಸಿದ್ದು, ವಿಶೇಷವಾಗಿತ್ತು. ಅಂದರೆ ಡಾ. ಪ್ರಭಾಕರ ಕೋರೆ ಸಾಹೇಬರನ್ನು ನೋಡಿ ಮತ ಹಾಕುತ್ತೇವೆ ಪಕ್ಷ ನೋಡಿ ಅಲ್ಲ. ವ್ಯಕ್ತಿಯನ್ನು ನೋಡಿಯೂ ಅಲ್ಲ ಎನ್ನುವ ಅಭಿಪ್ರಾಯವು ಆ ಸಮುದಾಯದವರಿಂದ ಕೇಳಿ ಬಂದಾಗ ಡಾ. ಪ್ರಭಾಕರ ಕೋರೆಯವರದು ಜಾತಿ ಧರ್ಮವನ್ನು ಮೀರಿದ ವ್ಯಕ್ತಿತ್ವ ಎಂತಹದು ಎನ್ನುವುದು ತಿಳಿದುಬರುತ್ತದೆ.[೪೬]

ನಂತರ ಬೆಳಗಾವಿಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಸಾಕಷ್ಟು ಜನ ಸ್ಪರ್ಧಾಕಾಂಕ್ಷಿಗಳು ಇದ್ದರೂ ಅದರಲ್ಲಿ ಹಾಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಶಿಕಾಂತ ನಾಯಕರನ್ನು ಬದಲಿಸಿ ಬೇರೆಯವರಿಗೆ ಟಿಕೆಟ್ ನೀಡುವುದು ಸುಲಭವಾಗಿರಲಿಲ್ಲ. ಅದರಲ್ಲೂ ಮತ್ತೆ ಪಂಚಮಸಾಲಿ ಜನಾಂಗದ

ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎನ್ನುವ ಭಯ ಇತ್ತು. ಹಾಗಿದ್ದು ಡಾ. ಪ್ರಭಾಕರ ಕೋರೆಯವರು ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡು ತಮ್ಮ ಅನುಯಾಯಿಯಾದ ಶ್ರೀ ಮಹಾಂತೇಶ ಕವಟಗಿಮಠರಿಗೆ ಟಿಕೆಟ್ ಕೊಡಿಸಿದರು.[೪೭] ಇವರ ಗೆಲುವು ಡಾ. ಪ್ರಭಾಕರ ಕೋರೆಯವರಿಗೆ ಪ್ರತಿಷ್ಠೆಯಾಗಿತ್ತು. ಒಂದು ಕಡೆ ಹಾಲಿ ಪರಿಷತ್ತಿನ ಸದಸ್ಯರಾದ ಶ್ರೀ ಶಶಿಕಾಂತ ನಾಯಕರಿಗೆ ಟಿಕೆಟ್ ತಪ್ಪಿಸಿದ್ದು, ಇತ್ತ ಜೆ.ಡಿ.ಎಸ್.ನಿಂದ ಪ್ರಬಲ ಪಂಚಮಸಾಲಿ ಜನಾಂಗದ ಹಿರಿಯ ಲಿಂಗರಾಜ ಪಾಟೀಲರಿಗೆ ಟಿಕೇಟ ನೀಡಿ ಒಂದು ಬಗೆಯ ರಾಜಕೀಯ ತಂತ್ರಗಾರಿಕೆಯನ್ನು ಅನುಸರಿಸಿತ್ತು. ಅತ್ತ ಕಾಂಗ್ರೆಸ್ಸನಿಂದ ಹಾಲಿ ಸದಸ್ಯ ಜೈನ ಸಮಾಜದ ವೀರಕುಮಾರ ಪಾಟೀಲರ ಮಧ್ಯ ಲಿಂಗಾಯತ ಜಂಗಮ ಸಮಾಜದ ಶ್ರೀ ಮಹಾಂತೇಶ ಕವಟಗಿಮಠರ ಗೆಲುವು ಸುಲಭವಾಗಿರಲಿಲ್ಲ. ಇದೇ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ ಚುನಾವಣೆಗೆ ಪಕ್ಷೇತರಾಗಿ ಸ್ಪರ್ಧಿಸಿ ಬಿ.ಜೆ.ಪಿ.ಗೆ ಅತಂಕ ಒಡ್ಡಿದ ಬಂಡಾಯ ಅಭ್ಯರ್ಥಿಗಳಾದ ಅಥಣಿಯ ಮಾಜಿ ಶಾಸಕರಾದ ಶ್ರೀ ಶಹಜಾನ ಡೊಂಗರಗಾಂವ, ಭೆಂಡಿಗೇರಿಯ ಚಂದ್ರಶೇಖರ ಅಂಗಡಿ ಹಾಗೂ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಾದ ಎಸ್.ಎಫ್. ದೊಡ್ಡಗೌಡ್ರ ಇವರೊಂದಿಗೆ ಡಾ. ಪ್ರಭಾಕರ ಕೋರೆಯವರು ನಿರಂತರ ಮಾತುಕತೆಯನ್ನು ನಡೆಸಿ ಇವರುಗಳ ನಾಮ ಪತ್ರಗಳನ್ನು ವಾಪಸ್ ಪಡೆಯುವಂತೆ ಮನ ಒಲಿಸುವಲ್ಲಿ ಯಶಸ್ವಿಯಾಗಿ ಬಿ.ಜೆ.ಪಿ. ಪಕ್ಷದಲ್ಲಿ ಉಲ್ಬಣಿಸಿದ್ದ ಬಂಡಾಯವನ್ನು ಚಿವುಟಿ ಹಾಕಿಸುವಲ್ಲಿ ಯಶಸ್ವಿಯಾದರು.[೪೮]

ಚುನಾವಣೆಯಲ್ಲಿ ಜಿಲ್ಲಾಯಾದ್ಯಂತ ಪ್ರಚಾರ ಕೈಗೊಂಡು ತಾವು ಹೊತ್ತುಕೊಂಡ ಜವಾಬ್ದಾರಿಯನ್ನು ಶ್ರೀ ಮಹಾತೇಶ ಕವಟಗಿಮಠರನ್ನು ಗೆಲ್ಲಿಸುವ ಮೂಲಕ ಯಶಸ್ವಿಯಾಗಿ ನಿರ್ವಹಿಸಿದರು. ಈ ಮೂಲಕ ಡಾ. ಪ್ರಭಾಕರ ಕೋರೆಯವರು ಈ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಬಿ.ಜೆ.ಪಿ. ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸುವ ಮೂಲಕ ತಮ್ಮ ಸಾಮರ್ಥ್ಯ ಎಂತಹದು ಎನ್ನುವುದುನ್ನು ಇನ್ನೊಮ್ಮೆ ಸಾಬೀತು ಪಡಿಸಿದರು.[೪೯]

ಪರಿಷತ್ತಿನ ಚುನಾವಣೆಯ ಮುಂಚೆ ನಡೆದ ಹುಕ್ಕೇರಿ ಹಾಗೂ ಅರಭಾವಿ ವಿಧಾನಸಭೆಯ ಉಪಚುನಾವಣೆಯಲ್ಲೂ ಸಚಿವರಾದ ಶ್ರೀ ಉಮೇಶ ಕತ್ತಿ ಹಾಗೂ ಬಾಲಚಂದ್ರ ಜಾರಕಿಹೋಳಿಯವರ ಪರ ವ್ಯಾಪಕ ಪ್ರಚಾರ ನಡೆಸಿದರು. ಶ್ರೀ ಉಮೇಶ ಕತ್ತಿಯವರು ದಾಖಲೆ ೮೫,೬೫೨ ಮತಗಳನ್ನು ಪಡೆದು ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ಸಿನ ಜಯಪ್ರಕಾಶ ನಲವಡಿಯವರನ್ನು ೬೭,೬೬೪ ಮತಗಳಿಂದ ಸೋಲಿಸಿದರು. ಹಾಗೆಯೇ ಅರಭಾವಿ ಕ್ಷೇತ್ರದಲ್ಲಿ ಬಾಲಚಂದ್ರ ಜಾರಕಿಹೋಳಿಯವರು ತಮ್ಮ ಪ್ರತಿಸ್ಪರ್ಧಿ ವಿವೇಕರಾವ್ ಪಾಟೀಲರಗಿಂತ ೩೨,೭೩೦ ಮತಗಳಿಂದ ಆಯ್ಕೆಗೊಳ್ಳುವಲ್ಲಿ ಡಾ. ಪ್ರಭಾಕರ ಕೋರೆಯವರ ಶ್ರಮ ಅಧಿಕವಾಗಿದೆ.[೫೦]

ಡಾ. ಪ್ರಭಾಕರ ಕೋರೆಯವರು ಭಾರತೀಯ ಜನತಾ ಪಕ್ಷಕ್ಕೆ ಉತ್ತರ ಕರ್ನಾಟಕದಲ್ಲಿ ಒಂದು ಪ್ರಬಲ ಶಕ್ತಿಯಾಗಿ ನಿಂತರು. ಲೋಕಸಭೆಯ ಚುನಾವಣೆಯಿಂದ ಹಿಡಿದು ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಎರಡು ಚುನಾವಣೆಯಲ್ಲೂ ಕೂಡಾ ಭಾರತೀಯ ಜನತಾ ಪಕ್ಷದ ಕಮಲ ಅರಳುವಂತೆ ಮಾಡಿದ ಕೋರೆಯವರು ವಿಶೇಷವಾಗಿ ಕಾಂಗ್ರೆಸ್ ಪಕ್ಷಕ್ಕೆ ಭಾಗದಲ್ಲಿ ದೊಡ್ಡ ಹೊಡೆತ ನೀಡಿದರು ಎಂದೇ ವ್ಯಾಖ್ಯಾನಿಸಲಾಗುತ್ತದೆ.

ಈ ಮೇಲಿನ ಅಂಶಗಳಿಂದ ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ ಎಂತಹ ಪ್ರಭಾವಿ ನಾಯಕ ಎನ್ನುವುದನ್ನು ಖಚಿತಪಡಿಸುತ್ತದೆ. ಮೊದಲ ಬಾರಿಗೆ ೨೦೦೮ ರಲ್ಲಿ ಪಕ್ಷಾಂತರಿ ಎನ್ನಿಸಿಕೊಂಡ ಡಾ. ಪ್ರಭಾಕರ ಕೋರೆಯವರು ತಮ್ಮ ರಾಜಕೀಯ ಜೀವನದಲ್ಲಿ ಎರಡನೆಯ ಇನಿಂಗ್ಸ್‌ನ್ನು ಭಾರತೀಯ ಜನತಾ ಪಕ್ಷದಿಂದ ಪ್ರಾರಂಭಿಸಿದರು. ಎರಡನೆಯ ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಆ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಆ ಪಕ್ಷಕ್ಕೆ ಉತ್ತರ ಕರ್ನಾಟಕದಲ್ಲಿ ಆನೆಬಲ ತಂದುಕೊಟ್ಟವರು. ಡಾ. ಪ್ರಭಾಕರ ಕೋರೆಯವರು ಮನಸ್ಸು ಮಾಡಿದರೆ ಚುನಾವಣೆಯ ಫಲಿತಾಂಶವನ್ನೇ ತಿರುವು ಮುರುವು ಮಾಡಬಲ್ಲರು ಎನ್ನುವುದಕ್ಕೆ ಈ ಮೇಲಿನ ಚುನಾವಣೆಗಳ ಫಲಿತಾಂಶಗಳೇ ಉತ್ತರ ನೀಡುತ್ತವೆ.

ಶ್ರೀ ಕೃಷ್ಣಾ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯ ಚುನಾವಣೆಯಲ್ಲಿ ತಮ್ಮ ಗುಂಪಿನವರನ್ನು ಸತತವಾಗಿ ಗೆಲ್ಲಿಸುತ್ತಿರುವ ಡಾ. ಪ್ರಭಾಕರ ಕೋರೆಯವರು ಸದ್ಯ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ, ನವದೆಹಲಿ ಇದರ ಅಧ್ಯಕ್ಷರಾಗಿ ನೇಮಕಗೊಂಡಿರುವರು. ಕರ್ನಾಟಕ ರಾಜಕೀಯದಲ್ಲಿ ಒಂದು ಹೆಮ್ಮೆ ಪಡುವ ಸಂಗತಿಯಾಗಿದೆ.

ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಡಾ. ಪ್ರಭಾಕರ ಕೋರೆಯವರ ಕೊಡುಗೆಗಳು :

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ ಹಿನ್ನೆಲೆ : ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯೆಂಬುದು ಕರ್ನಾಟಕವನ್ನು ೧೯೫೬ ರಿಂದಲೂ ಕಾಡುತ್ತಿರುವ ಸಮಸ್ಯೆಯಾಗಿದೆ. ಕರ್ನಾಟಕ ರಾಜ್ಯದ ಉದಯದೊಂದಿಗೆ ಜನ್ಮವೆತ್ತ ರೋಗ ಇದಾಗಿದೆ. ವಾಸ್ತವವಾಗಿ ಇದು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ವಿಶಿಷ್ಟವಾದ ಸಮಸ್ಯೆಯೇನಲ್ಲ ಆಂಧ್ರ ಪ್ರದೇಶದಲ್ಲಿ (ತೆಲಂಗಾಣ) ಮಹಾರಾಷ್ಟ್ರದಲ್ಲಿ (ಮರಾಠವಾಡ), ಗುಜರಾತಿನಲ್ಲಿ (ಕಚ್ ಪ್ರದೇಶ), ಒರಿಸ್ಸಾದಲ್ಲಿ (ಪಶ್ಚಿಮ ಭಾಗ) ಇಂತಹ ಸಮಸ್ಯೆಯಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯನ್ನು ಚಾರಿತ್ರಿಕವಾಗಿ ಪರಿಭಾವಿಸಿಕೊಳ್ಳಬೇಕಾಗುತ್ತದೆ. ಇಂದು ನಾವು ಯಾವ ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ವರ್ಗೀಕರಿಸುತ್ತಿದ್ದೇವೆಯೋ ಅವು ಒಂದು ರೀತಿಯ ಚಾರಿತ್ರಿಕ ವಿಕಲತೆಗೆ ಒಳಗಾಗಿರುವುದು ಸ್ಪಷ್ಟವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತುಶಾಹಿ ಆಡಳಿತಕ್ಕೆ ಮತ್ತು ಅಭಿವೃದ್ಧಿಗೆ ಒಳಪಡದಿದ್ದ ಪ್ರದೇಶಗಳೇ ಇಂದು ಹಿಂದುಳಿದಿರುವ ಸ್ಥಿತಿಯಲ್ಲಿವೆ.[೫೧]

ಉತ್ತರ ಕರ್ನಾಟಕದ ಪ್ರದೇಶಗಳು ಹಿಂದುಳಿದ ಪ್ರದೇಶಗಳಾಗಿ ಉಳಿದಿವೆ. ಮೈಸೂರು ಭಾಗದ ದಕ್ಷಿಣ ಕರ್ನಾಟಕ ಪ್ರದೇಶವು ಈ ಹಿಂದುಳಿದ ಪ್ರದೇಶಗಳಿಗಿಂತ ಹೆಚ್ಚು ಅನುಕೂಲತೆಗಳನ್ನು ಪಡೆಯುತ್ತಾ ಹೋಯಿತು. ಆಗ ಈ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯು ತೀವ್ರ ಸ್ವರೂಪ ಪಡೆಯಲಾರಂಭಿಸಿತು.[೫೨]

ಕರ್ನಾಟಕದ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆ ಇರುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಕರ್ನಾಟಕ ಸರಕಾರದ ಯೋಜನಾ ಇಲಾಖೆಯು ಪ್ರಕಟಿಸಿರುವ ಕರ್ನಾಟಕದ

ಮಾನವ ಅಭಿವೃದ್ಧಿ ಕುರಿತ ಎರಡು ವರದಿಗಳು ೧೯೯೯ ಮತ್ತು ೨೦೦೬ ನಮ್ಮ ಮುಂದೆ ಇವೆ. ಕೇಂದ್ರ ಯೋಜನಾ ಆಯೋಗವು ೨೦೦೬ ರರಲ್ಲಿ ಪ್ರಕಟಿಸಿರುವ 'ಕರ್ನಾಟಕ ಅಭಿವೃದ್ಧಿ ವರದಿ' ನಮ್ಮ ಮುಂದಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ಕರ್ನಾಟಕದಲ್ಲಿ ೨೦೦೦ ಇಸ್ವಿಯಲ್ಲಿ ನೇಮಕಗೊಂಡ ಶ್ರೀ ಎಸ್.ನಂಜುಂಡಪ್ಪನವರ ಸಮಿತಿಯು ಎರಡು ವರ್ಷಗಳ ಕಾಲ ಉತ್ತರ ಕರ್ನಾಟಕ ಪ್ರದೇಶವನ್ನು ಸುತ್ತಿ, ೨೦೦೨ ರಲ್ಲಿ ಒಟ್ಟು ೩೪ ಅಧ್ಯಯನಗಳಲ್ಲಿ ೧೦೦೦ ಪುಟಗಳಷ್ಟು ವಿಸ್ತೃತವಾದ ವರದಿಯನ್ನು ಸರಕಾರಕ್ಕೆ ಸಲ್ಲಿಸಿತ್ತು.[೫೩]

ಒಂದೇ ರಾಜ್ಯದಲ್ಲಿ ಸಾಕ್ಷರತೆಯ ಪ್ರಮಾಣ ಒಂದು ತಾಲೂಕಿನಲ್ಲಿ ಶೇ. ೮೦ ರಷ್ಟು ಇದ್ದರೆ, ಇನ್ನೊಂದು ತಾಲೂಕಿನಲ್ಲಿ ಶೇ. ೪೦% ರಷ್ಟು ಇದೆ. ತಲಾ ಆದಾಯ ವಾರ್ಷಿಕವಾಗಿ ಒಂದು ಜಿಲ್ಲೆಯಲ್ಲಿ ರೂ. ೪೦ ಸಾವಿರ ಇದ್ದರೆ, ಮತ್ತೊಂದು ಜಿಲ್ಲೆಯಲ್ಲಿ ರೂ. ೧೩ ಸಾವಿರದಷ್ಟು ಕಡಿಮೆ ಇದೆ. ಅದೇ ರೀತಿ ನೀರಾವರಿ ಪ್ರದೇಶಗಳಲ್ಲಿ ರಸ್ತೆ ಮತ್ತು ಶಾಲಾ ಕಾಲೇಜುಗಳಲ್ಲಿಯೂ ಈ ಪ್ರಕಾರದ ಅಸಮಾನತೆಯನ್ನು ಈ ಆಯೋಗ ಗುರುತಿಸಿದೆ. ೧೧೪ ತಾಲೂಕುಗಳನ್ನು ಹಿಂದುಳಿದ ತಾಲೂಕಗಳೆಂದು ಗುರುತಿಸಿ ಅಲ್ಲಿಯ ಅಭಿವೃದ್ಧಿಗಾಗಿ ೧೬ ಸಾವಿರ ಕೋಟಿ ರೂಪಾಯಿಗಳನ್ನು ಸರಕಾರವು ಪ್ರತ್ಯೇಕವಾಗಿ ತೆಗೆದಿರಿಸಬೇಕು ಹಾಗೂ ಈ ಹಣವನ್ನು ೨೦೦೩ ರಿಂದ ೨೦೧೦ರ ಒಳಗೆ ಈ ಎಂಟು ವರ್ಷದ ಅವಧಿಯಲ್ಲಿಯೇ ಬಳಸಬೇಕೆಂದು ಶಿಫಾರಸ್ಸು ಮಾಡಿತು. ಅಲ್ಲದೆ ದಕ್ಷಿಣ ಕರ್ನಾಟಕಕ್ಕೆ ಶೇ. ೪೦ ಹಿಂದುಳಿದ ಉತ್ತರ ಕರ್ನಾಟಕಕ್ಕೆ ಶೇ. ೬೦ ರಷ್ಟು ಅನುದಾನ ನಿಗದಿ ಪಡಿಸಬೇಕೆಂದು ಶಿಫಾರಸ್ಸು ಮಾಡಿತು.[೫೪] ಹೀಗೆಯೇ ಈ ವರದಿಯ ಆಧಾರದ ಮೇಲೆ ಸರಕಾರಗಳು ಎಚ್ಚೆತ್ತು ಕಾರ್ಯ ಮಾಡತೊಡಗಿದವು. ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಮಳೆಗಾಲದಲ್ಲಿ ನೆರೆ ಹಾವಳಿ, ಬೇಸಿಗೆಯಲ್ಲಿ ಕುಡಿಯಲು ನೀರು ಸಿಗದೆ ನೆರೆ ರಾಜ್ಯಗಳಿಗೆ ಜನ ಉದ್ಯೋಗವಿಲ್ಲದೆ ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ವಿಜಾಪುರ, ಬಾಗಲಕೋಟೆ, ರಾಯಚೂರ, ಗುಲ್ಬರ್ಗಾ, ಕೊಪ್ಪಳ ಜಿಲ್ಲೆಗಳ ನೀರಾವರಿಗಾಗಿ ಕೃಷ್ಣಾ ನೀರಾವರಿ ಯೋಜನೆ ತ್ವರಿತಗತಿಯಿಂದ ಸಾಗದೇ ವಿಳಂಬವಾಗುತ್ತಿರುವದು ಹಾಗೂ ತುಂಗಭದ್ರಾ ನಾಲಾ ಯೋಜನೆಯ ದುರಸ್ಥಿ ಕಾರ್ಯಗಳು ಆಮೆ ಗತಿಯಲ್ಲಿ ಸಾಗುತ್ತಿರುವದರಿಂದ ರಾಯಚೂರ, ಕೊಪ್ಪಳ ಜಿಲ್ಲೆಯ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಾಗೆಯೇ ಬಿಜಾಪೂರ ಜಿಲ್ಲೆಯ ಇಂಡಿ ಹಾಗೂ ಸಿಂದಗಿ ತಾಲೂಕಿನ ರೈತರ ಜೀವನಾಡಿ ನೀರಾವರಿ ಯೋಜನೆಗಳಾದ ಗುತ್ತಿ ಬಸವಣ್ಣ, ಚಿಮ್ಮಲಗಿ ಏತ ನೀರಾವರಿ ಯೋಜನೆಗಳು ಪೂರ್ಣವಾಗದೆ ರೈತರ ಕಷ್ಟ ಮುಂದುವರೆದಿದೆ. ಈ ಯೋಜನೆಗಳು ಆಮೆ ಗತಿಯಲ್ಲಿ ಸಾಗಿರುವುದಕ್ಕೆ ಪ್ರಮುಖ ಕಾರಣಗಳೆಂದರೆ – ನಮ್ಮ ಅಧಿಕಾರಿಗಳಲ್ಲಿನ ಬೇಜವಾಬ್ದಾರಿ ಹಾಗೂ ಭ್ರಷ್ಟಾಚಾರ ಇತ್ಯಾದಿ ಅಂಶಗಳನ್ನು ಗುರುತಿಸಬಹುದಾಗಿದೆ.[೫೫]

ಈ ಉತ್ತರ ಕರ್ನಾಟಕದ ಸಮಸ್ಯೆಗಳ ಪರಿಹಾರಕ್ಕೆ ಮುಕ್ತಿ ದೊರೆಯಬೇಕು. ಹಾಗೂ ಡಾ. ನಂಜುಂಡಪ್ಪನವರ ಸಮಿತಿಯ ಶಿಫಾರಸ್ಸುಗಳನ್ನು ಪೂರ್ಣ ಅನುಷ್ಠಾನಕ್ಕಾಗಿ ಡಾ. ಪ್ರಭಾಕರ ಕೋರೆಯವರು ಶ್ರಮಿಸುತ್ತಾ ಬಂದಿದ್ದಾರೆ.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಡಾ. ಪ್ರಭಾಕರ ಕೋರೆಯವರ ದೃಷ್ಟಿಕೋನ ಹಾಗೂ ಬೆಳಗಾವಿ ಅಧಿವೇಶನಗಳ ಯೋಜನೆಗಳು :

ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಕೋರೆಯವರು ಸದಾ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ರಾಜ್ಯಸಭಾ ಸದಸ್ಯರಾಗಿ ಸಂಸತ್ತಿನಲ್ಲಿಯೇ ಈ ಪ್ರದೇಶದ ಬಗ್ಗೆ ಧ್ವನಿ ಎತ್ತಿದ್ದಾರೆ. ಅಲ್ಲದೆ ವಿಧಾನ ಪರಿಷತ್ತಿನ ಸದಸ್ಯರಾಗಿ ಉತ್ತರ ಕರ್ನಾಟಕದ ಶಾಸಕರ ಮಿತ್ರರನ್ನು ಒಂದು ಗೂಡಿಸಿ ಸರ್ಕಾರದ ಮೇಲೆ ಒತ್ತಡ ತಂದು ಈ ಭಾಗದ ಬಹುದಿನಗಳ ಸಮಸ್ಯೆಗಳನ್ನು ಬಗೆಹರಿಸಲು ಹಾಗೆಯೇ ಯೋಜನೆಗಳನ್ನು ಪ್ರಾರಂಭಿಸುವ ಅವುಗಳಿಗೆ ಹೆಚ್ಚಿನ ಸಹಾಯಧನ ಪಡೆಯಲು ನಿರಂತರವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಹಾಗೂ ರಾಷ್ಟ್ರದ ಅನೇಕ ನಾಯಕರನ್ನು ಅದರಲ್ಲೂ ಪ್ರಧಾನ ಮಂತ್ರಿಯಿಂದ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವರನ್ನು ಈ ಭಾಗಕ್ಕೆ ಕರೆಸಿ ಇಲ್ಲಿನ ಸಮಸ್ಯೆಗಳ ನೈಜ ಚಿತ್ರಣದ ಅರಿವು ಮೂಡಿಸುವ ಕಾರ್ಯವನ್ನು ಡಾ. ಪ್ರಭಾಕರ ಕೋರೆಯವರು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ.

ಬೆಳಗಾವಿ ವಿಶೇಷ ವಿಧಾನ ಮಂಡಳದ ಅಧಿವೇಶನಗಳ ಪರಿಣಾಮ ಹಾಗೂ ಇವುಗಳಲ್ಲಿ ಡಾ. ಪ್ರಭಾಕರ ಕೋರೆಯವರ ಪಾತ್ರ :

೨೦೦೬ ರಲ್ಲಿ ಅಂದಿನ ಯಾವ ಮುಖ್ಯಮಂತ್ರಿ ಶ್ರೀ ಕುಮರಸ್ವಾಮಿಯವರಿಗೆ ಡಾ. ಪ್ರಭಾಕರ ಕೋರೆಯವರು ಬೆಳಗಾವಿಯಲ್ಲಿನ ಐತಿಹಾಸಿಕ ಅಧಿವೇಶನ ನಡೆಸಲು ಟೊಂಕಕಟ್ಟಿ ದುಡಿದು ಯಶಸ್ವಿಯಾದರು. ಈ ಅಧಿವೇಶನದಲ್ಲಿ ಸುಮಾರು ೧೫೦೦ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಅಂದಿನ ಸರಕಾರ ಘೋಷಣೆ ಮಾಡಿತು. ನಂತರ ಮುಂಗಡ ಪತ್ರದಲ್ಲಿ ೨೫೦೦ ಕೋಟಿ ಹಣವನ್ನು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಹಾಗೂ ಶ್ರೀ ಡಾ. ಎಂ.ನಂಜುಂಡಪ್ಪನವರ ವರದಿಯ ಅನುಷ್ಠಾನಕ್ಕಾಗಿ ಹಣವನ್ನು ತೆಗೆದಿರಿಸಲಾಯಿತು. ಡಾ. ಪ್ರಭಾಕರ ಕೋರೆಯವರು ಆಗ ಕಾಂಗ್ರೇಸ್ ಪಕ್ಷದಲ್ಲಿದ್ದರೂ ಆ ಪಕ್ಷದ ಆದೇಶವನ್ನು ಉಲ್ಲಂಘಿಸಿ ಬೆಳಗಾವಿಯಲ್ಲಿ ತಮ್ಮ ನೇತೃತ್ವದ ಕೆ.ಎಲ್.ಇ. ಸಂಸ್ಥೆಯಲ್ಲಿ ಈ ಐತಿಹಾಸಿಕ ಅಧಿವೇಶನವನ್ನು ನಡೆಯುವಂತೆ ಮಾಡಿದ ಪರಿಣಾಮ ಇಷ್ಟೊಂದು ಹಣ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹರಿದುಬರಲು ಕಾರಣವಾಯಿತು. ಅಲ್ಲದೆ ಸದನದಲ್ಲಿಯೂ ಕೂಡ ಈ ಭಾಗದ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಡಿಸಿದ ಕೋರೆಯವರು ಸರಕಾರದ ಗಮನವನ್ನು ಸೆಳೆಯುವಲ್ಲಿ ಸಫಲರಾದರು.[೫೬]

ನಂತರ ಶಾಶ್ವತ ಅಧಿವೇಶನ ಬೆಳಗಾವಿಯಲ್ಲಿಯೇ ವರ್ಷಕ್ಕೊಮ್ಮೆಯಾದರೂ ನಡೆಯಬೇಕು. ಆಗ ಇಲ್ಲಿನ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಚರ್ಚಿಸಲು ಹಾಗೂ ಬಗೆಹರಿಸಲು ಸಾಧ್ಯವೆನ್ನುವದನ್ನು ಸ್ಪಷ್ಟ ಪಡಿಸಿದ ಡಾ. ಪ್ರಭಾಕರ ಕೋರೆಯವರು ಆ ನಿಟ್ಟಿನಲ್ಲಿ ಒತ್ತಡ ತಂದು ಬೆಳಗಾವಿಯನ್ನು ರಾಜ್ಯದ ಎರಡನೆಯ ರಾಜಧಾನಿಯನ್ನಾಗಿ ಮಾಡುವ ಪ್ರಯತ್ನದಲ್ಲಿ ಮುಂದುವರೆದರು. ಈ ನಿಟ್ಟಿನಲ್ಲಿ ಬೆಳಗಾವಿಯಲ್ಲಿ 'ಸುವರ್ಣ ವಿಕಾಸ ಸೌಧ' ನಿರ್ಮಾಣಕ್ಕೆ ೨೫೦ ಕೋಟಿ ಹಣವನ್ನು ಸರಕಾರ ಘೋಷಿಸುವಂತೆ ಮಾಡಿದರು.[೫೭]

ನಂತರ ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧ ನಿರ್ಮಾಣಕ್ಕೆ ಜಾಗದ ಸಮಸ್ಯೆ ಬಂದಾಗ ಅಂದಿನ ಸರಕಾರದ ಗೃಹ ಸಚಿವರಾದ ಶ್ರೀ ಎಂ.ಪಿ.ಪ್ರಕಾಶ ಅವರಿಗೆ ೧೦೦ ಎಕರೆ ಜಾಗವನ್ನು ಮುಕ್ಕಟೆಯಾಗಿ ಕೊಡುತ್ತೇವೆ. ಚಿಕ್ಕೋಡಿಯಲ್ಲಿಯೇ ಸುವರ್ಣ ಸೌಧ ನಿರ್ಮಿಸಿ ಎಂದು ಹೇಳಿದ್ದು, ಅವರು ಈ ಪ್ರದೇಶದ ಬಗ್ಗೆ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಹೊಂದಿರುವ ವಿಶೇಷ ಕಳಕಳಿ ಎಂತಹದು ಎಂಬುದನ್ನು ಇದರಿಂದ ಗುರುತಿಸಬಹುದು.[೫೮]

ಅದೇ ಪ್ರಕಾರ ವಿಶೇಷವಾಗಿ ದಕ್ಷಿಣ ಕರ್ನಾಟಕದ ಭಾಗದ ಶಾಸಕರು ಹಾಗೂ ಸಚಿವರು ಉತ್ತರ ಕರ್ನಾಟಕದ ಮಾದರಿಯ ಆಹಾರ ಸೇವನೆಯಿಂದ ಖುಷಿ ವ್ಯಕ್ತಪಡಿಸಿದರು. ಸಾರಿಗೆ ಸಚಿವ ಆರ್.ಅಶೋಕರವರು 'ಉತ್ತರ ಕರ್ನಾಟಕದ ಊಟ ಬಹಳ ರುಚಿಕರ. ಆರೋಗ್ಯದ ದೃಷ್ಟಿಯಿಂದಲೂ ಅತ್ಯುತ್ತಮ. ನಾವು ಸಾಮಾನ್ಯವಾಗಿ ಅನ್ನದ ಪದಾರ್ಥಗಳನ್ನು ತಿನ್ನುತ್ತೇವೆ. ಆದರೆ ಇಂದಿನ ಊಟದಲ್ಲಿದ್ದ ಸಜ್ಜಿ ರೊಟ್ಟಿ, ಎಣ್ಣೆಗಾಯಿ, ಚಟ್ನಿಗಳು ನಮಗೆ ಬಹಳ ಹಿಡಿಸಿದವು' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.[೫೯] ಹೀಗೆ ನಾನಾ ತರಹದ ಭಕ್ಷ ಭೋಜ್ಯಗಳಿಂದ ಪುಳಕಿತರಾಗಿದ್ದ ಶಾಸಕರು ಸಚಿವರಿಗೆ ಊಟದೊಂದಿಗೆ ಸಂಗೀತವನ್ನು ಆಲಿಸುವ ವ್ಯವಸ್ಥೆಯನ್ನು ಕಲ್ಪಿಸಿದ್ದ ಡಾ. ಪ್ರಭಾಕರ ಕೋರೆಯವರು ಒಬ್ಬ ಅಚ್ಚು ಕಟ್ಟಾದ ಸಂಘಟನಾಕಾರರಾಗಿ ಹಾಗೂ ಉತ್ತರ ಕರ್ನಾಟಕದ ಜನತೆ ಅತಿಥಿ ಸತ್ಕಾರಕ್ಕೆ ಹೆಸರುವಾಸಿಯಾದದ್ದನ್ನು ಈ ಮೂಲಕ ಖಾತ್ರಿ ಪಡಿಸಿದರು. ನಾವು ಏನನ್ನಾದರೂ ಪಡೆಯಬೇಕು ಎಂದಾಗ ಮೊದಲು ನಾವು ಯಾರಿಂದ ಪಡೆಯುತ್ತೇವೆಯೋ. ಅವರನ್ನು ತೃಪ್ತಿ ಪಡಿಸಬೇಕು ಎನ್ನುವ ಜಾಣ್ಮೆ ಡಾ. ಪ್ರಭಾಕರ ಕೋರೆಯವರದಾಗಿತ್ತು. ಹೀಗಾಗಿ ಆಡಳಿತ ಪಕ್ಷದ ಹಾಗೂ ವಿರೋಧ ಪಕ್ಷದ ಶಾಸಕರನ್ನು ಹಾಗೂ ಸಚಿವರನ್ನು ಪ್ರತಿಪಕ್ಷದ ನಾಯಕರುಗಳನ್ನು ಹಾಗೂ ಮುಖ್ಯಮಂತ್ರಿಗಳಿಂದ ಅಧಿಕಾರಿಗಳವರೆಗೆ ಎಲ್ಲರಿಗೂ ಯಾವುದೇ ಕೊರತೆ ಅನ್ನಿಸದಂತೆ ಎಲ್ಲ ಸೌಕರ್ಯಗಳನ್ನು ಒದಗಿಸಿ ತೃಪ್ತಿ ಪಡಿಸಿದರು.

೨೦೦೬ ರಲ್ಲಿ ತ್ವರಿತವಾಗಿ ಅಧಿವೇಶನ ನಡೆಸಲು ಶಾಸಕರು ಹಾಗೂ ಸಚಿವರನ್ನು ಜನರಿಂದ ಸ್ವಲ್ಪ ದೂರಪಿರಿಸಲಾಗಿತ್ತು. ಆದರೆ ೨೦೦೯ರ ಅಧಿವೇಶನದಲ್ಲಿ ಜಿಲ್ಲಾ ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ಫಿಜಿಯೊಥೆರಪಿ ಕಾಲೇಜಿನಲ್ಲಿ ಎಲ್ಲ ಸಚಿವರಿಗೆ ಸಾರ್ವಜನಿಕರ ದೂರು ಆಲಿಸಲು ಪ್ರತ್ಯೇಕ ಕಾರ್ಯಾಲಯದ ವ್ಯವಸ್ಥೆ ಮಾಡಲಾಗಿತ್ತು. ಭದ್ರತಾ ವ್ಯವಸ್ಥೆಯ ನೆಪದಿಂದ ೨೦೦೬ರ ಅಧಿವೇಶನದಲ್ಲಿ ಈ ಸೌಲಭ್ಯದಿಂದ ಜನರು ವಂಚಿತರಾಗಿದ್ದರು. ಈ ಸಲ ದೂರದ ಬೆಂಗಳೂರಿಗೆ ಹೋಗಿ ಸಂಬಂಧಿಸಿದ ಇಲಾಖೆಯ ಸಚಿವರನ್ನು ನಮ್ಮ ಉತ್ತರ ಕರ್ನಾಟಕದ ಜನತೆ ಭೆಟ್ಟಿಯಾಗುವ ವ್ಯವಸ್ಥೆಯನ್ನು ಈ ಅಧಿವೇಶನದಲ್ಲಿ ಮಾಡುವುದರೊಂದಿಗೆ ಜನಸಾಮಾನ್ಯರಿಗೆ ತಮ್ಮ ಜನ ಪ್ರತಿನಿಧಿಗಳ ಹಾಗೂ ಸಚಿವರನ್ನು ಖುದ್ದಾಗಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಅವರೊಂದಿಗೆ ಹಂಚಿಕೊಳ್ಳುವ ಅವಕಾಶವನ್ನು ಒದಗಿಸಿದ ಶ್ರೀ ಪ್ರಭಾಕರ ಕೋರೆ ಜನರ ಇಚ್ಛೆ ಈಡೇರಿಸಿಕೊಟ್ಟಿರುವರು.[೬೦]

ಹೀಗೆ ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕದ ಜನರಿಗೆ ಮುಕ್ತವಾಗಿ ತಮ್ಮ ಅಹವಾಲುಗಳನ್ನು

ತಿಳಿಸುವ ಅವಕಾಶ ಒದಗಿಸಬೇಕೆಂದು ಅವರ ಬಯಕೆ ಆಗಿತ್ತು. ಆ ಪ್ರಕಾರವಾಗಿ ಜನರಿಗೆ ಅವಕಾಶ ಒದಗಿಸಿಕೊಡುವುದರ ಮೂಲಕ ಸರಕಾರವೇ ಜನರ ಮನೆಯ ಬಾಗಿಲಿಗೆ ಬಂದ ಅನುಭವ ಜನರದ್ದಾಗಿತ್ತು. ಮತ್ತು ತಮ್ಮ ಭಾಗದ ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಸದನದಲ್ಲಿ ಹೇಗೆ ಮಂಡಿಸುತ್ತಾರೆ ಮತ್ತು ಸದನ ಕಲಾಪಗಳು ಹೇಗೆ ನಡೆಯುತ್ತವೆ ಎನ್ನುವ ಕುತೂಹಲ ಜನಸಾಮಾನ್ಯರಿಗೆ ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇತ್ತು.

ಆ ನಿಟ್ಟಿನಲ್ಲಿ ನಮ್ಮ ಬೆಳಗಾವಿಯಲ್ಲಿಯೇ ಅಧಿವೇಶನ ನಡೆಯುವುದರಿಂದ ಅದನ್ನು ವೀಕ್ಷಿಸಲು ಬರುತ್ತಿದ್ದರು. ಅವರಿಗಾಗಿ ಯಾವುದೇ ತೊಂದರೆಯಾಗದ ರೀತಿಯಲ್ಲಿ ಪಾಸುಗಳನ್ನು ವಿತರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಸಮೀಪದಿಂದ ಅಧಿವೇಶನ ನೋಡಿದ ಭಾಗ್ಯ ಜನರಿಗೆ ಒದಗಿತು; ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಹ ಅಧಿವೇಶನವನ್ನು ಸಮೀಪದಿಂದ ವೀಕ್ಷಿಸಿ ಸಂತಸಪಟ್ಟರು.[೬೧]

೨೦೦೯ರ ಅಧಿವೇಶನದಲ್ಲಿ ಒಂದು ವಿಶೇಷವಿತ್ತು. ಅದು ಏನೆಂದರೆ ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಒಂದೇ ಸದನದ ಸದಸ್ಯರಾಗಿ ಒಂದೇ ಪಕ್ಷದಿಂದ ಪತಿ–ಪತ್ನಿಯರು ಆಯ್ಕೆಯಾಗಿ ಭಾಗವಹಿಸಿರುವುದು ಒಂದು ದಾಖಲೆಯನಿಸಿತ್ತು.[೬೨] ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಪತ್ನಿ ಅನಿತಾ ಕುಮಾರಸ್ವಾಮಿಯವರು ವಿಧಾನ ಸಭೆಯ ಉಪಚುನಾವಣೆಯಲ್ಲಿ ಮಧುಗಿರಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವೀರರಾಣಿ ಕಿತ್ತೂರ ಚೆನ್ನಮ್ಮ ನಾಡಿನಲ್ಲಿ ಅವರು ಪ್ರಮಾಣವಚನ ಸ್ವೀಕರಿಸಿದ್ದು ಒಂದು ದಾಖಲೆ ಎನಿಸಿತ್ತು.[೬೩] ಅಲ್ಲದೆ, ಇದೇ ಅಧಿವೇಶನದಲ್ಲಿ ಒಂದೇ ಕುಟುಂಬದ ಸದಸ್ಯರು ಹಾಜರಾಗಿ ಮತ್ತೊಂದು ವಿಶೇಷತೆಗೆ ಕಾರಣವಾದರು. ಬೆಳಗಾವಿಯ ಜಾರಕಿಹೊಳಿ ಕುಟುಂಬದ ಶ್ರೀ ಸತೀಶ ಜಾರಕಿಹೊಳಿ, ರಮೇಶ ಜಾರಕಿಹೊಳಿ ಅಲ್ಲದೆ, ದೇವೇಗೌಡರ ಕುಟುಂಬದ ಶ್ರೀ ಎಚ್. ಡಿ. ಕುಮಾರಸ್ವಾಮಿ, ಶ್ರೀ ಎಚ್. ಡಿ. ರೇವಣ್ಣ, ಶ್ರೀಮತಿ ಅನಿತಾ ಕುಮಾರಸ್ವಾಮಿ ಹೀಗೆ ಒಂದೇ ಕುಟುಂಬದ ಸದಸ್ಯರು ಸದನದಲ್ಲಿ ಭಾಗವಹಿಸಿದ್ದು ವಿಶೇಷವಾಗಿದೆ. ಅದು ಅಲ್ಲದೆ ಇವರೆಲ್ಲರೂ ವಿಧಾನ ಸಭೆಯ ಸದಸ್ಯರು ಎನ್ನುವುದು ಕೂಡಾ ಇನ್ನೊಂದು ವಿಶೇಷತೆಗೆ ಕಾರಣವಾಗಿತ್ತು.[೬೪]

ಸದನ ಪ್ರಾರಂಭದ ಎರಡು ದಿನಗಳು ಸಂಪೂರ್ಣವಾಗಿ ಗಣಿ, ಅರಣ್ಯ ಪ್ರದೇಶದ ಆಕ್ರಮಣಕ್ಕೆ ಸಂಬಂಧಿಸಿದಂತೆ ಚರ್ಚೆಯಲ್ಲಿಯೇ ಆರೋಪ – ಪ್ರತ್ಯಾರೋಪಗಳಿಗೆ ಉಭಯ ಸದನ ಮೀಸಲಾಗಿದ್ದನ್ನು ಕಂಡು, ಉತ್ತರ ಕರ್ನಾಟಕದ ಶಾಸಕರು ಪಕ್ಷಾತೀತವಾಗಿ ಸದನದಲ್ಲಿ ಕರಪತ್ರಗಳನ್ನು ಪ್ರದರ್ಶಿಸಿ, ಉತ್ತರ ಕರ್ನಾಟಕದ ಅಭಿವೃದ್ಧಿಯ ವಿಷಯಗಳಿಗೆ ಆದ್ಯತೆ ನೀಡಿ ಎಂದು ಸದನದ ಗಮನ ಸೆಳೆದದ್ದು ವಿಶೇಷವಾಗಿತ್ತು. ಅದರಲ್ಲಿ ವಿಶೇಷವಾಗಿ ಆನಂದ ಮಾಮನಿ, ಸಿದ್ದು ಸವದಿ, ಸಂಜಯ ಪಾಟೀಲ ಮತ್ತಿತರರು ಧ್ವನಿಗೂಡಿಸಿದರು. ಹೀಗೆ ಈ ಅಧಿವೇಶನವು ಉತ್ತರ ಕರ್ನಾಟಕದ ಜನತೆಯು ಹಾಗೂ ಜನಪ್ರತಿನಿಧಿಗಳು ಎಷ್ಟೊಂದು ನಿರೀಕ್ಷೆಯಲ್ಲಿ ಇದ್ದರು ಎನ್ನುವುದನ್ನು ಸಾಬೀತುಪಡಿಸುತ್ತದೆ.[೬೫]

ಈ ಬೆಳಗಾವಿಯ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಎಳೆ–ಎಳೆಯಾಗಿ ಹಾಗೆಯೇ ಈ

ಭಾಗದ ಜನಪ್ರತಿನಿಧಿಗಳು ಸದನದಲ್ಲಿ ಮಂಡಿಸುವ ವಿಚಾರಗಳನ್ನು ಕೇಳಲು ಸುವರ್ಣ ಅವಕಾಶ ಕಲ್ಪಿಸಿದ ಈ ಅಧಿವೇಶನ ನಿಜಕ್ಕೂ ಉತ್ತರ ಕರ್ನಾಟಕದ ಜನರ ಒಂದು ಸೌಭಾಗ್ಯವೆಂದು ಅರ್ಥೈಸಲಾಯಿತು.

ಇದೇ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಶ್ರೀ ವೀರಣ್ಣ ಮತ್ತಿಕಟ್ಟಿಯವರು ವಿಧಾನ ಪರಿಷತ್ತಿನ ಸಭಾಪತಿಗಳಾಗಿದ್ದು, ಹಾಗೆಯೇ ಜಗದೀಶ ಶೆಟ್ಟರ್ ಅವರು ವಿಧಾನ ಸಭಾಧ್ಯಕ್ಷರಾಗಿರುವುದು ಕೂಡಾ ಒಂದು ವಿಶೇಷತೆಗೆ ಕಾರಣವಾಯಿತು. ಏಕೆಂದರೆ ಈ ಇಬ್ಬರು ಉತ್ತರ ಕರ್ನಾಟಕದವರೇ ಆಗಿರುವುದರಿಂದ ಇಬ್ಬರು ಉತ್ತರ ಕರ್ನಾಟಕದಲ್ಲಿ ಅಧಿವೇಶನ ತಮ್ಮ ಅವಧಿಯಲ್ಲಿ ನಡೆಯುತ್ತಿರುವುದಕ್ಕೆ ಈ ಇಬ್ಬರಿಗೂ ಒಂದು ಬಗೆಯ ಅಭಿಮಾನ, ಹೆಮ್ಮೆ ಎನಿಸುತ್ತದೆ.[೬೬]

ಈ ಐತಿಹಾಸಿಕ ಅಧಿವೇಶನಕ್ಕೆ ಮಹಾರಾಷ್ಟ್ರ ರಾಜ್ಯದ ತಕರಾರು :

ಬೆಳಗಾವಿಯಲ್ಲಿ ಐತಿಹಾಸಿಕ ವಿಧಾನ ಮಂಡಲ ಅಧಿವೇಶನವನ್ನು ತಡೆಯಲು ಇನ್ನಿಲ್ಲದ ವ್ಯರ್ಥ ಪ್ರಯತ್ನಕ್ಕೆ ಇಲ್ಲಿನ ಎಂ.ಈ.ಎಸ್.ಸಂಘಟನೆ ಹಾಗೂ ಮಹಾರಾಷ್ಟ್ರದ ಪ್ರಮುಖ ರಾಜಕೀಯ ನಾಯಕರು ಪ್ರಯತ್ನಿಸಿದ್ದು ಮಾತ್ರ ಖಂಡನೀಯ. ಬೆಳಗಾವಿಯಲ್ಲಿ ೨೦೦೬ರ ಅಧಿವೇಶನದಲ್ಲಿಯೂ ತಡೆ ಒಡ್ಡಲು ವಿಫಲ ಪ್ರಯತ್ನ ನಡೆಸಿದ್ದು ಈ ಮರಾಠಿ ಪರ ಸಂಘಟನೆಗಳು. ಈ ಸಮಯದಲ್ಲಿ ಅದನ್ನು ಪುನರಾವರ್ತನೆ ಮಾಡಲು ಪ್ರಯತ್ನಿಸಿದರು. ಅಧಿವೇಶನ ಪ್ರಾರಂಭದ ದಿನ ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಹಾಗೆಯೇ ಮುಖ್ಯಮಂತ್ರಿಯಾಗಿ ಇಡೀ ಸಚಿವರನ್ನು ಭವ್ಯ ಮೆರವಣಿಗೆ ಮೂಲಕ ಸಭೆಗೆ ಕರೆತರುವ ಸಂಭ್ರಮ ಒಂದು ಕಡೆ ಇದ್ದರೆ ಇತ್ತ ಇದಕ್ಕೆ ಕಪ್ಪು ಚುಕ್ಕಿಯಾಗುವಂತೆ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರು.

ಬೆಳಗಾವಿಯ ಲೇಲೆ ಮೈದಾನದಲ್ಲಿ ಮಹಾಮೇಳ ನಡೆಸಲು ಯತ್ನಿಸಿದ ೧೦೦ ಕ್ಕೂ ಹೆಚ್ಚು ಜನರನ್ನು ಪೋಲೀಸರು ಬಂಧಿಸಿದರು. ನಿಷೇದಾಜ್ಞೆಯನ್ನು ಉಲ್ಲಂಘಿಸಿ ಕಲ್ಲು ತೂರಾಟ ನಡೆಸಿದ ಘಟನೆಯೇ ಬಂಧನಕ್ಕೆ ಕಾರಣವಾಗಿತ್ತು. ಇದರಿಂದ ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್ಸುಗಳನ್ನು ಬೆಂಕಿ ಹಚ್ಚಿ, ತಗಾದೆ ತೆಗೆದು ಅಶಾಂತಿಯ ವಾತಾವರಣ ಉಂಟು ಮಾಡಲು ಪ್ರಯತ್ನಿಸಿದ ಮಹಾರಾಷ್ಟ್ರದ ಶಿವಸೇನಾ ಪಕ್ಷದ ಕಾರ್ಯಕರ್ತರು ಅಲ್ಲದೇ ಶಿವಸೇನಾ ವರಿಷ್ಠ ಶ್ರೀ ಬಾಳ ಠಾಕ್ರೆಯವರು ಬೆಳಾಗಾವಿಯನ್ನು ಕೇಂದ್ರಾಡಳಿತ ಪ್ರದೇಶ ಮಾಡಿ ಎಂದು ಕೇಂದ್ರ ಸರಕಾರಕ್ಕೆ ಅಗ್ರಹಿಸಿದಲ್ಲದೇ ಇತ್ತ ಶಿವಸೇನಾ ಮುಖಂಡರ ಹೇಳಿಕೆಗೆ ಪೂರಕವಾಗುವಂತೆ ಮಹಾರಾಷ್ಟ್ರ ವಿಧಾನ ಸಭೆಯ ಪ್ರತಿಪಕ್ಷ ನಾಯಕರಾದ ರಾಮದಾಸ ಕದಂ ಅವರು ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ ಹಮ್ಮಿಕೊಂಡಿದ್ದ "ಹುತಾತ್ಮ ದಿನ" ಕಾರ್ಯಕ್ರಮದಲ್ಲಿ ಭಾಗವಹಿಸಿ, ಕರ್ನಾಟಕದಲ್ಲಿ ಮರಾಠಿಗರ ಮೇಲೆ ದೌರ್ಜನ್ಯವಾಗುತ್ತಿದೆ ಎಂದು ಪ್ರಚೋದನಾಕಾರಿ ಭಾಷಣ ಮಾಡಿ ಪರಿಸ್ಥಿತಿಯನ್ನು ವಿಕೋಪಕ್ಕೆ ತಳ್ಳುವ ಕಾರ್ಯ ಮಾಡಿದ್ದರು.[೬೭]

ಮಹಾರಾಷ್ಟ್ರ ರಾಜ್ಯದ ನಾಯಕರ ಈ ಧೋರಣೆಯನ್ನು ರಾಜ್ಯದ ಮುಖ್ಯ ಮಂತ್ರಿಯಾಗಿ ಇಡೀ ಸದನ

ಒಕ್ಕೊರಲಿನಿಂದ ಖಂಡಿಸಿದ್ದು, ಕನ್ನಡಿಗರ ಏಕತೆ ಹಾಗೂ ಬೆಳಗಾವಿ ಪ್ರದೇಶದ ಬಗ್ಗೆ ಇರುವ ಅಭಿಮಾನ ತೋರ್ಪಡಿಸಿದರು. ಮಹಾಜನ ವರದಿಯಂತೆ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂದು ಘೋಷಿಸಲ್ಪಟ್ಟರೂ ವಿನಾಕಾರಣ ಗಡಿ ವಿವಾದವನ್ನು ಕೆದಕಿ ಮಹಾರಾಷ್ಟ್ರದ ನಾಯಕರು ರಾಜಕೀಯ ಲಾಭ ಪಡೆಯುವ ಯತ್ನ ಮಾಡುತ್ತಿರುವುದು ನೆರೆಯ ರಾಜ್ಯಗಳ ಸೌಹಾರ್ದಕ್ಕೆ ದಕ್ಕೆ ತರುವ ಅಂಶವೆನ್ನುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಬೆಳಗಾವಿಯಲ್ಲಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಕಲ್ಲು ತೂರಾಟ ನಡೆಸಿದ ಪರಿಣಾಮ ಅದನ್ನು ನಿಯಂತ್ರಿಸಲು ಪೋಲೀಸರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಯಕರ್ತರನ್ನು ಬಂಧಿಸಿದ್ದರೂ ಅದನ್ನು ದೊಡ್ಡ ವಿಷಯವನ್ನಾಗಿಸಿ ಮರಾಠಿಗರ ಮೇಲೆ ಕರ್ನಾಟಕದಲ್ಲಿ ದೌರ್ಜನ್ಯ ನಡೆಯುತ್ತಿದೆ ಎಂದು ಅಪಪ್ರಚಾರ ನಡೆಸಿದ ಮಹಾರಾಷ್ಟ್ರದ ರಾಜಕೀಯ ನಾಯಕರ ವರ್ತನೆ ಮಾತ್ರ ಒಕ್ಕೂಟ ವ್ಯವಸ್ಥೆಯನ್ನು ಹಾಳುಗೆಡವುದರ ಪ್ರಯತ್ನವೆಂದೇ ಅರ್ಥೈಸಲಾಗುತ್ತದೆ.

ಇಡೀ ಉತ್ತರ ಕರ್ನಾಟಕವೇ ಅದರಲ್ಲೂ ವಿಶೇಷವಾಗಿ ಬೆಳಗಾವಿ ನಗರ ಹಾಗೂ ಸುತ್ತಲಿನ ಜನರು ಹಬ್ಬದ ಸಂಭ್ರಮದಲ್ಲಿದ್ದಾಗ ಈ ರೀತಿಯ ಬೆಳವಣಿಗೆ ಮಾತ್ರ ಕೆಲ ಮರಾಠಿ ಜನರಿಗೂ ಮಹಾರಾಷ್ಟ್ರದ ಏಕೀಕರಣ ಸಮಿತಿಯ ಈ ವರ್ತನೆಯಿಂದ ಅಸಮಾದಾನಕ್ಕೆ ಕಾರಣವಾಗಿತ್ತು. ಈ ನಿಟ್ಟಿನಲ್ಲಿ ನಿರೀಕ್ಷೆಯ ಮಟ್ಟದಲ್ಲಿ ಜನರು ಇದಕ್ಕೆ ಬೆಂಬಲಿಸದೇ ಇರುವುದು ಸ್ಪಷ್ಟವಾಗುತ್ತದೆ. ಇದೊಂದು ಅಭಿವೃದ್ಧಿಯ ವಿರೋಧ ಭಾವನೆ ಸಂಕುಚಿತ ಸ್ವಭಾವದ ಜನರ ವ್ಯರ್ಥ ಪ್ರಯತ್ನವೆಂದೇ ವಿಶ್ಲೇಷಿಸಲಾಗುತ್ತದೆ.

ಬೆಳಗಾವಿ ಐತಿಹಾಸಿಕ ಅಧಿವೇಶನಕ್ಕೆ ಕೇವಲ ಜನ ಸಾಮಾನ್ಯರಲ್ಲದೆ ಇಡೀ ಕರ್ನಾಟಕದ ಮತ್ತು ದೇಶಾದ್ಯಂತ ಈ ಅಧಿವೇಶನವು ತನ್ನತ್ತ ನೋಡುವಂತೆ ಮಾಡಿತ್ತು. ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರು ಹಾಗೂ ಚಿತ್ರ ನಟಿಯಾದ ಜಯಮಾಲಾರವರು ಈ ಅಧಿವೇಶನಕ್ಕೆ ಸಾಕ್ಷಿಯಾಗಲು ಬೆಳಗಾವಿಗೆ ಆಗಮಿಸಿ ಕೆ.ಎಲ್.ಇ. ಸಂಸ್ಥೆಯ ಆವರಣದಲ್ಲಿನ ಅಧಿವೇಶನವನ್ನು ಕುತೂಹಲದಿಂದ ವೀಕ್ಷಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಮೂಲತಃ ಬೆಂಗಳೂರಿನಲ್ಲಿ ವಾಸವಾಗಿರುವ ಇವರು ಅಲ್ಲಿಯ ಅಧಿವೇಶನಕ್ಕೆ ಹಾಜರಾಗದೆ ಬೆಳಗಾವಿಯ ಅಧಿವೇಶನಕ್ಕೆ ಆಗಮಿಸಿ ವೀಕ್ಷಿಸಿರುವುದು ಎಂತಹ ಪ್ರಭಾವ ಬೀರಿತ್ತು ಎನ್ನುವುದು ಗಮನಾರ್ಹ. ಅಲ್ಲದೆ ಡಾ. ಪ್ರಭಾಕರ ಕೋರೆಯವರು ಅವರನ್ನು ಸ್ವಾಗತಿಸಿ ಅಧಿವೇಶನದ ವ್ಯವಸ್ಥೆಯ ಬಗೆಗೆ ಖುದ್ದಾಗಿ ತೋರಿಸಿದರು. ಜಯಮಾಲಾರವರು ಡಾ. ಪ್ರಭಾಕರ ಕೋರೆಯವರ ಸಂಘಟನಾ ಜಾಣ್ಮೆಯನ್ನು ಕಂಡು ಮುಕ್ತವಾಗಿ ಅಭಿನಂದಿಸಿದರು. ಅಲ್ಲದೇ ಕನ್ನಡದ ಪ್ರಸಿದ್ಧ ಪತ್ರಿಕೆಯಾದ ವಿಜಯ ಕರ್ನಾಟಕದ ಸಂಪಾದಕರಾದ ವಿಶ್ವೇಶ್ವರ ಭಟ್ಟ, ನಾಡೋಜ ಪಾಟೀಲ ಪುಟ್ಟಪ್ಪ ಮತ್ತು ಚೆನ್ನವೀರ ಕಣವಿ, ಡಾ. ಎಂ. ಎಂ. ಕಲಬುರ್ಗಿ ಮೊದಲಾದ ಸಾಹಿತಿಗಳು ಕೂಡ ಆಗಮಿಸಿ ಸದನವನ್ನು ವೀಕ್ಷಿಸಿದ್ದು ಹೆಮ್ಮೆಯ ಸಂಗತಿಯೆನಿಸಿತು.[೬೮]

ಹೀಗೆ ನಾಡಿನ ಸಾಹಿತಿಗಳು, ಪತ್ರಿಕೆಯ ಸಂಪಾದಕರು ಜನಸಾಮಾನ್ಯರಿಂದ ಹಿಡಿದು ಶ್ರೇಷ್ಠ ವ್ಯಕ್ತಿಗಳವರೆಗೆ ಎಲ್ಲರೂ ಬೆಳಗಾವಿ ಅಧಿವೇಶನವನ್ನು ಹಾಗೂ ಅಲ್ಲಿಯ ಸೌಲಭ್ಯಗಳನ್ನು ಹಾಗೂ ವಿಧಾನ ಸಭೆಯ ಕಲಾಪದ ಸಿದ್ಧತೆಗೆ ಮಾಡಿದ ವ್ಯವಸ್ಥೆಯನ್ನು ನೋಡಿ ಡಾ. ಪ್ರಭಾಕರ ಕೋರೆಯವರನ್ನು ಅಭಿಮಾನದಿಂದ ಹಸ್ತಲಾಘವ

ಮಾಡಿ ಅಭಿನಂದಿಸಿದ್ದು ಸಾಮಾನ್ಯವಾಗಿತ್ತು.

ಈ ಒಂದು ಐತಿಹಾಸಿಕ ಘಳಿಗೆಯಿಂದ ಡಾ. ಪ್ರಭಾಕರ ಕೋರೆಯವರು ೨೫ರ ಯುವಕರಂತೆ ತಾವೇ ಮುಂದೆ ನಿಂತು ಪ್ರತಿಯೊಬ್ಬ ಜನಪ್ರತಿನಿಧಿಗಳನ್ನು ಕಂಡು ಸಮಸ್ಯೆಗಳನ್ನು ಆಲಿಸುತ್ತಿದ್ದರು. ಅಷ್ಟೇ ಅಲ್ಲದೇ ಮುಂಜಾನೆ ವಾಯುವಿಹಾರದ ಸಮಯದಲ್ಲೂ ಶಾಸಕ ಮಿತ್ರರೊಂದಿಗೆ ಬೆರೆತು ಅಪಾರ ಬೇಡಿಕೆಗಳನ್ನು ತಿಳಿದುಕೊಳ್ಳುತ್ತಿದ್ದರು. ಅಷ್ಟೊಂದು ಶ್ರಮ ತೆಗೆದುಕೊಂಡಿದ್ದನ್ನು ಕಂಡು ಎಲ್ಲರಲ್ಲೂ ಡಾ. ಪ್ರಭಾಕರ ಕೋರೆಯವರ ಬಗ್ಗೆ ಪ್ರೀತಿ ಅಭಿಮಾನ ಹೆಚ್ಚಾಗುವಂತೆ ಮಾಡಿತು. ಅಲ್ಲದೇ ಹಳೆಯ ಮೈಸೂರು ವಿಭಾಗದ ಹಾಗೂ ಮಲೆನಾಡಿನ ಶಾಸಕರರಿಗೆ ಇಲ್ಲಿನ ವಾತಾವರಣ ಹಿತಕರವೆನಿಸಿತ್ತು. ಶಾಸಕ ಟಿ.ಬಿ. ಜಯಚಂದ್ರರವರು ಬೆಳಗಾವಿಯು ಹಸಿರಿನಿಂದ ಕಂಗೊಳಿಸುತ್ತಿದೆ. ಇದು ಎರಡನೆಯ ರಾಜಧಾನಿಯಾಗುವ ಎಲ್ಲ ಲಕ್ಷಣಗಳನ್ನು ಹೊಂದಿದೆ. ಅಲ್ಲದೆ ಇದನ್ನು ಹಾಗೆಯೇ ಉಳಿಸಿಕೊಂಡು ಹೋಗಬೇಕೆಂದರು. ಹಾಗೆಯೇ ಇದಕ್ಕೆ ಧ್ವನಿ ಗೂಡಿಸಿದ ಶಾಸಕರಾದ ನೆ.ಲ.ನರೇಂದ್ರಬಾಬು, ರೇಣುಕಾಚಾರ್ಯರವರು ಒಂದು ವಿದ್ಯಾಸಂಸ್ಥೆ ಆವರಣವು ವಾಯುವಿಹಾರಕ್ಕಾಗಿ ಸುಂದರವಾದ ಉದ್ಯಾನವನ, ಹುಲ್ಲು ಹಾಸಿಗೆಯ ಮೈದಾನ ಹೇಳಿ ಮಾಡಿಸಿದಂತೆ ಇದೆ ಎಂದು ಇದನ್ನು ಅಭಿವೃದ್ಧಿ ಪಡಿಸಿದ ಡಾ. ಪ್ರಭಾಕರ ಕೋರೆಯವರನ್ನು ಅಭಿನಂದಿಸಲು ಮರೆಯಲಿಲ್ಲ. ಈ ಸಮಯದಲ್ಲಿ ಇವರೊಂದಿಗೆ ಡಾ. ಪ್ರಭಾಕರ ಕೋರೆಯವರು ವ್ಯಾಯಾಮ ಮಾಡುತ್ತ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ತಾವು ಕೂಡಾ ಸಹಮತವನ್ನು ಸದನದಲ್ಲಿ ವ್ಯಕ್ತಪಡಿಸುತ್ತೇವೆ ಎಂದು ಹೇಳಿ ಎಲ್ಲರೂ ಅದಕ್ಕೆ ನಿಮ್ಮ ಭಾಗದ ಸಮಸ್ಯೆಗಳಿಗೆ ನಾವು ಧ್ವನಿಗೂಡಿಸುತ್ತೇವೆ ಎಂದು ಹೇಳುವುದರ ಮೂಲಕ ಕರ್ನಾಟಕದ ಅಖಂಡತೆಯ ಭಾವನೆ ಗಟ್ಟಿಗೊಳ್ಳಲು ಪ್ರೇರಣೆ ಆಗಿರುವಂತೆ ಕಾಣುತ್ತಿತ್ತು.[೬೯]

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಡಾ. ಪ್ರಭಾಕರ ಕೋರೆಯವರ ಕೊಡುಗೆಗಳು :

ಡಾ. ಪ್ರಭಾಕರ ಕೋರೆಯವರು ತಮ್ಮ ಪ್ರದೇಶದ ಅಭಿವೃದ್ಧಿಯ ಬಗೆಗೆ ಬಾಲ್ಯದಿಂದಲೇ ಕನಸುಗಳನ್ನು ಕಟ್ಟಿಕೊಂಡು ಬಂದವರು. ತಾವು ಪದವಿ ವಿದ್ಯಾರ್ಥಿಯಾಗಿದ್ದಾಗಲೇ ಜಪಾನ, ಹಾಂಕಾಂಗ್, ಥೈಲ್ಯಾಂಡ ಪ್ರದೇಶಗಳಿಗೆ ಭೇಟಿಕೊಟ್ಟು ಅಲ್ಲಿಯಂತೆ ನಮ್ಮ ಪ್ರದೇಶವು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಬೇಕೆಂದು ಮನದಾಸೆಯನ್ನು ತಮ್ಮ ಕಾಲೇಜಿನ ಸ್ನೇಹಿತರೊಂದಿಗೆ ವಿದೇಶಿ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳುತ್ತ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ತಾವು ನೇತೃತ್ವವಹಿಸಿದ ಶೈಕ್ಷಣಿಕ ಸಂಸ್ಥೆಯನ್ನು ಆಧುನಿಕ ಜಗತ್ತಿಗೆ ಅನುಗುಣವಾಗಿ ವಿದೇಶಿ ಮಾದರಿಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿ ಪಡಿಸಿ ಶೈಕ್ಷಣಿಕ ಕ್ಷೇತ್ರದಲ್ಲಿ ಇಂದು ಎಲ್ಲ ಬಗೆಯ ವೃತ್ತಿ ಆಧಾರಿತ ಕೋರ್ಸುಗಳನ್ನು ಗ್ರಾಮೀಣ ಭಾಗದಲ್ಲೂ ಆರಾಧಿಸಿ ಎಲ್ಲ ಸೌಲಭ್ಯಗಳನ್ನು ಒದಗಿಸುವ ಮೂಲಕ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದ್ದಾರೆ.

ಆರೋಗ್ಯ ಕ್ಷೇತ್ರದಲ್ಲಿ ವಿಶ್ವದರ್ಜೆಯ ಆರೋಗ್ಯ ಕೇಂದ್ರವನ್ನು ಬೆಳಗಾವಿಯಲ್ಲಿ ಸ್ಥಾಪಿಸುವ ಮೂಲಕ ಲಕ್ಷಾಂತರ ರೋಗಿಗಳು ವಿದೇಶಗಳಿಗೆ ಹಾಗೂ ನೆರೆ ರಾಜ್ಯಗಳಿಗೆ ಆರೋಗ್ಯದ ಉಪಚಾರಕ್ಕಾಗಿ ಹೋಗುವ ತೊಂದರೆಯಿಂದ

ಪಾರು ಮಾಡಿದರು. ಸಹಕಾರಿ ಕ್ಷೇತ್ರದಲ್ಲೂ ಕೃಷ್ಣಾ ದೂಧ ಗಂಗಾ ಸಕ್ಕರೆ ಕಾರ್ಖಾನೆಯನ್ನು ಅಭಿವೃದ್ಧಿ ಪಡಿಸುವ ಮೂಲಕ ವಿಶೇಷವಾಗಿ ಹಿಂದುಳಿದ ಭಾಗದಲ್ಲಿ ಹೊಸ ಭರವಸೆಯನ್ನು ಮೂಡಿಸಿದರು. ಸಹಕಾರಿ ಸಂಘಗಳನ್ನು ಸ್ಥಾಪಿಸುವ ಮೂಲಕ ರೈತರ ಬಡವರ ಆರ್ಥಿಕ ಸಂಕಷ್ಟಕ್ಕೆ ಪರಿಹಾರ ಸೂಚಿಸುವ ಕಾರ್ಯ ಮಾಡಿದರು. ರಾಜ್ಯ ಸಭೆಯ ಸದಸ್ಯರಾಗಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತಿದರು. ರಾಷ್ಟ್ರಪತಿಯಿಂದ ಹಿಡಿದು ಪ್ರಧಾನ ಮಂತ್ರಿಗಳು, ರಾಜ್ಯದ ರಾಜ್ಯಪಾಲರು, ಮುಖ್ಯ ಮಂತ್ರಿಗಳಲ್ಲದೇ ಕೇಂದ್ರದ ಹಾಗೂ ರಾಜ್ಯದ ಪ್ರಭಾವಿ ಸಚಿವರನ್ನು ಈ ಭಾಗಕ್ಕೆ ಕರೆಯಿಸಿ ಇಲ್ಲಿಯ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಡುವ ಕಾರ್ಯ ಮಾಡುತ್ತಲೇ ಬಂದಿದ್ದಾರೆ.

ವಿಧಾನ ಪರಿಷತ್ತಿನ ಸದಸ್ಯರಾಗಿ ಉತ್ತರ ಕರ್ನಾಟಕದ ಶಾಸಕ ಮಿತ್ರರನ್ನು ಕಟ್ಟಿಕೊಂಡು ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ನಿರಂತರ ಹೋರಾಟ ಮಾಡುತ್ತಲೇ ಬಂದಿದ್ದಾರೆ ದಶಕದಿಂದ ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆಯಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದರು. ೨೦೦೬ ರಲ್ಲಿ ಆಗಿನ ಯುವ ಮುಖ್ಯಮಂತ್ರಿ ಕುಮಾರಸ್ವಾಮಿ ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆಸಲು ಉದ್ದೇಶಿಸಿದಾಗ ಡಾ. ಪ್ರಭಾಕರ ಕೋರೆಯವರು ಸ್ವ ಪಕ್ಷದಲ್ಲಿಯೇ ವಿರೋಧ ವ್ಯಕ್ತವಾದರೂ ಅದನ್ನು ಲೆಕ್ಕಿಸದೆ ಅಧಿವೇಶನವನ್ನು ಕೇವಲ ಒಂದು ವಾರದಲ್ಲಿಯೇ ಸಂಘಟಿಸುವ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮುನ್ನುಡಿ ಬರೆದರು. ಆಗಿನ ಸರಕಾರ ೧೫೦೦ ಕೋಟಿ ಹಣವನ್ನು ತೆಗೆದಿರಿಸಿತ್ತು. ನಂತರ ಮುಂಗಡ ಪತ್ರದಲ್ಲಿ ೨೫೦೦ ಕೋಟಿ ಹಣವನ್ನು ತೆಗೆದಿರಿಸಿತ್ತು. ಅಲ್ಲದೇ ಬೆಳಗಾವಿಯಲ್ಲಿ ಶಾಶ್ವತ ಅಧಿವೇಶನ ನಡೆಸಲು ಅನುವಾಗುವಂತೆ ಸುವರ್ಣ ಸೌಧ ನಿರ್ಮಾಣಕ್ಕೆ ಡಾ. ಪ್ರಭಾಕರ ಕೋರೆಯವರು ಸತತ ಪ್ರಯತ್ನ ಮಾಡಿದ ಪರಿಣಾಮ ಸರಕಾರ ಹಸಿರು ನಿಶಾನೆ ತೋರಿಸಿತ್ತು.[೨೦]

ಬೆಳಗಾವಿಯಲ್ಲಿ ಸುವರ್ಣ ಸೌಧ ಕಟ್ಟಡದ ಅಡಿಗಲ್ಲು ಹಾಕುವವರಿಗೂ ನಿರಂತರವಾಗಿ ಪ್ರಯತ್ನಿಸಿ, ಯಶಸ್ಸು ಕಂಡ ಇವರು ನಂತರ ಸುವರ್ಣ ಸೌಧ ಕಟ್ಟಡಕ್ಕೆ ಎರಡನೇ ಬಾರಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಂದ ದಿನಾಂಕ ೨೨-೧-೨೦೦೭ ರಂದು ಅಡಿಗಲ್ಲು ಹಾಕಿಸುವಲ್ಲಿ ಹಾಗೂ ಅದಕ್ಕಾಗಿ ಹಣ ಮಂಜೂರು ಮಾಡಿಸುವಲ್ಲಿ ಯಶಸ್ವಿಯಾದರು.[೨೧] ನಂತರ ಕಟ್ಟಡ ಕಾಮಗಾರಿಯನ್ನು ಬೆಳಗಾವಿಯ ಹಲಗಾ ಬಸ್ತವಾಡ ಗ್ರಾಮದ ಹತ್ತಿರ ದಿನಾಂಕ ೩-೮-೨೦೦೮ ರಂದು ಅಂದಾಜು ೨೩೦ ಕೋಟಿ ವೆಚ್ಚದ ಸುವರ್ಣ ಸೌಧ ನಿರ್ಮಾಣಕ್ಕೆ ರಾಜ್ಯ ಸಭಾ ಸದಸ್ಯರಾದ ಡಾ. ಪ್ರಭಾಕರ ಕೋರೆಯವರು ಭೂಮಿ ಪೂಜೆ ನೆರವೇರಿಸಿದರು. ಕಟ್ಟಡ ನಿರ್ಮಾಣ ಕಾರ್ಯವನ್ನು ವಹಿಸಿಕೊಂಡಿರುವ ಪುಣೆಯ ಶಿರ್ಕೆ ಕನ್‌ಸ್ಟ್ರಕ್ಷನ್ ಟೆಕ್ನಾಲಾಜಿ ಸಂಸ್ಥೆಯವರು ನಿವೇಶನವನ್ನು ವಶಕ್ಕೆ ತೆಗೆದುಕೊಂಡು, ವಿದ್ಯುಕ್ತವಾಗಿ ಕಾರ್ಯ ಪ್ರಾರಂಭಿಸಿದರು. ಪ್ರಸ್ತುತ ವರ್ಷ ೧೦೦ ಕೋಟಿ ರೂ. ಸರಕಾರದ ಅನುದಾನವನ್ನು ಒದಗಿಸಿದೆ. ಈ ಕಟ್ಟಡವನ್ನು ಒಟ್ಟು ೧೬೧೩೮ ಚದರು ಮೀಟರ್ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ. ನೆಲಮಹಡಿ ಸೇರಿದಂತೆ ಒಟ್ಟು ೩ ಮಹಡಿಗಳನ್ನು ಈ ಕಟ್ಟಡ ಹೊಂದಲಿದೆ. ನೆಲ ಮಹಡಿಯಲ್ಲಿ ಬ್ಯಾಂಕ್ವೆಟ್ ಹಾಲ್, ವಿ.ಐ.ಪಿ.ಲಾಂಜ್, ೧೧ ಸಚಿವರ ಕೊಠಡಿಗಳು ಸೆಕ್ರೆಟರಿ ಚೇಂಬರ್, ಪೋಸ್ಟ್ ಆಫೀಸ್, ಪೋಲೀಸ್ ಕಂಟ್ರೋಲ್

ರೂಮ್ ಹಾಗೂ ಪೋಲೀಸ್ ಕಛೇರಿಯನ್ನು ಹೊಂದಿರುತ್ತದೆ. ಮೊದಲನೆ ಮಹಡಿಯಲ್ಲಿ ಸೆಂಟ್ರಲ್ ಹಾಲ್, ಲಾಂಜ್, ಅಸೆಂಬ್ಲಿ ಹಾಲ್, ಸ್ಪೀಕರ್, ಡೆಪ್ಯೂಟಿ ಸ್ಪೀಕರ ಕೊಠಡಿ, ಕೌನ್ಸಿಲ್ ಹಾಲ್ ಸೇರಿದಂತೆ ಸಚಿವರ ಕೊಠಡಿಗಳಿರುತ್ತವೆ.

ಎರಡನೇ ಮಹಡಿಯಲ್ಲಿ ೧೫ ಸಚಿವರ ಕೊಠಡಿಗಳು ಸೇರಿದಂತೆ ಬೇರೆ ಬೇರೆ ಅಧಿಕಾರಿಗಳ ಕೊಠಡಿಗಳು ಹಾಗೂ ಕಛೇರಿಗಳು, ಮೂರನೇ ಮಹಡಿಯಲ್ಲಿ ಕಾನ್ಫರೆನ್ಸ್ ಹಾಲ್, ಮುಖ್ಯಮಂತ್ರಿಗಳ ಸಚಿವಾಲಯ ಕಛೇರಿ, ೧೦ ಸಚಿವರ ಕಛೇರಿ ಸೇರಿದಂತೆ ಬೇರೆ ಬೇರೆ ಕಛೇರಿಗಳು ಇರುತ್ತವೆ.[೭೨] ಈ ಸಂದರ್ಭದಲ್ಲಿ ಡಾ. ಪ್ರಭಾಕರ ಕೋರೆಯವರು ಭೂಮಿ ಪೂಜೆ ನಡೆಸಿ ೨೩೦ ಕೋಟಿ ವೆಚ್ಚದಲ್ಲಿ ಸುಸಜ್ಜಿತವಾದ ಬೆಂಗಳೂರಿನ ವಿಧಾನ ಸೌಧದ ಮಾದರಿಯಲ್ಲಿ ಬೆಳಗಾವಿಯಲ್ಲಿ ಸುವರ್ಣ ಸೌಧ ನಿರ್ಮಾಣ ಕಾರ್ಯ ಪ್ರಾರಂಭಿಸುವಲ್ಲಿ ಯಶಸ್ವಿಯಾದರು. ಆ ಮೂಲಕ ತಮ್ಮ ಕನಸಿನಂತೆ ಹಾಗೂ ಜನರ ಬಯಕೆಯಂತೆ ಬೆಳಗಾವಿಗೆ ಎರಡನೇ ರಾಜಧಾನಿ ಪಟ್ಟ ದೊರಕುವ ಸುವರ್ಣ ಸಂದರ್ಭಕ್ಕೆ ನಾಂದಿ ಹಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಪ್ರಭಾಕರ ಕೋರೆಯವರು ಈ ಭಾಗದ ಜನರ ಕನಸು ನನಸಾಗಿದ್ದು, ೧೮ ತಿಂಗಳೊಳಗಾಗಿಯೇ ಈ ಕಟ್ಟಡವನ್ನು ನಿರ್ಮಾಣ ಮಾಡಿ, ಈ ಭಾಗದ ಸಮಗ್ರ ಅಭಿವೃದ್ಧಿಗೆ ನೆರವಾಗುವಂತೆ ಮಾಡಲಾಗುವುದು. ಅಲ್ಲದೆ ಲೋಕಸಭೆಯ ಒಂದು ಅಧಿವೇಶನವನ್ನು ದಕ್ಷಿಣ ಭಾರತದಲ್ಲಿ ನಡೆಸಲು ಚಿಂತನೆ ನಡೆಸಲಾಗುತ್ತಿದ್ದು, ಈ ಸೌಧ ನಿರ್ಮಾಣವಾದರೆ ಆ ಅಧಿವೇಶನವನ್ನು ಇಲ್ಲಿಯೇ ನಡೆಸಬಹುದೆಂದು ಮಹದಾಸೆ ವ್ಯಕ್ತಪಡಿಸಿದರು. ಇದರಿಂದ ಗೊತ್ತಾಗುವ ಅಂಶವೆಂದರೆ ಲೋಕಸಭಾ ಅಧಿವೇಶನವನ್ನು ಈ ಭಾಗದಲ್ಲಿಯೇ ನಡೆಸಬೇಕೆಂಬ ಆಶೆಯನ್ನು ಡಾ. ಪ್ರಭಾಕರ ಕೋರೆಯವರು ಹೊಂದಿರುವುದು ಈ ಪ್ರದೇಶದ ಬಗ್ಗೆ ಅವರು ಹೊಂದಿರುವ ಅಭಿಮಾನ ಎಂತಹದು ಎಂಬುದನ್ನು ತೋರಿಸುತ್ತದೆ.[೭೩]

ಹೀಗೆ ಡಾ. ಪ್ರಭಾಕರ ಕೋರೆಯವರು ೨೦೦೬ ರಲ್ಲಿ ಅಧಿವೇಶನ ನಡೆಸಲಿಕ್ಕೆ ಸ್ಥಳಾವಕಾಶ ಕೊಡದೇ ಹೋಗಿದ್ದರೆ ಹಾಗೂ ಅದರ ಸಂಪೂರ್ಣ ಜವಾಬ್ದಾರಿ ವಹಿಸಿಕೊಳ್ಳದೇ ಹೋಗಿದ್ದರೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇಷ್ಟೊಂದು ಯೋಜನೆಗಳು ಹರಿದು ಬರಲು ಸಾಧ್ಯವಾಗುತ್ತಿತ್ತೇ? ಎನ್ನುವ ಅನುಮಾನ ಮಾತ್ರ ನಿಜ ಅನಿಸುತ್ತದೆ. ಡಾ. ಪ್ರಭಾಕರ ಕೋರೆಯವರ ನಿಸ್ವಾರ್ಥ ತ್ಯಾಗಮಯ ಪರಿಶ್ರಮ ಫಲವಾಗಿ ಮಹಾರಾಷ್ಟ್ರದ ವಿದರ್ಭದ ನಾಗಪೂರದಲ್ಲಿ ನಡೆಯದಂತೆ ವರ್ಷದಲ್ಲಿ ಒಂದು ಅಧಿವೇಶನ ಉತ್ತರ ಕರ್ನಾಟಕದಲ್ಲಿ ಇನ್ನು ಮುಂದೆ ನಡೆಯುತ್ತದೆ. ಈ ಅಧಿವೇಶನದಿಂದ ಬೆಟ್ಟದಂತಹ ಸಮಸ್ಯೆಗಳು ಕ್ರಮೇಣವಾಗಿ ಕರಗಿ ಅಭಿವೃದ್ಧಿಯ ಫಲ ಹರಿಯುತ್ತದೆ ಎನ್ನುವ ಆಶಾಭಾವವನ್ನು ಮೂಡಿಸಿರುವದಂತೂ ನಿಜ. ಈ ಮೂಲಕ ಡಾ. ಪ್ರಭಾಕರ ಕೋರೆಯವರು ಪಟ್ಟ ಶ್ರಮಕ್ಕೆ ಹಾಗೂ ನೈಜ ಜನಪರ ಕಾರ್ಯಗಳಿಂದ ರಾಜಕೀಯ ಇಚ್ಛಾಶಕ್ತಿಯ ನಾಯಕರು ಎನ್ನುವ ಭಾವನೆ ಮೂಡಿಸುವಲ್ಲಿ ಸಫಲವಾಗಿದೆ.

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳು :

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಡಾ. ಪ್ರಭಾಕರ ಕೋರೆಯವರ ಬಹುದಿನಗಳ ಕನಸಿನಂತೆ ೨೦ ಅಂಶಗಳ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ದಿನಾಂಕ ೨೩-೧-೨೦೦೯ ರಂದು ಉತ್ತರ ಕರ್ನಾಟಕದ ಪಕ್ಷಾತೀತ ಜನ ಪ್ರತಿನಿಧಿಗಳನ್ನು

ಕೂಡಿಸಿಕೊಂಡು ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೆ ಮನವಿ ಸಲ್ಲಿಸಿದರು.ಅವು ಈ ಕೆಳಗಿನಂತಿವೆ.

೧) ಹೈದರಾಬಾದ ಕರ್ನಾಟಕಕ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಸಂವಿಧಾನದ ೩೭೧ರ ವಿಧಿಯಡಿ ವಿಶೇಷ ಸೌಲಭ್ಯ ಒದಗಿಸಬೇಕು.

೨) ಉತ್ತರ ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಯಾದ ಕೃಷ್ಣಾ ನದಿಯಡಿ ಬರುವ ಸಂಪೂರ್ಣ ಭಾಗಕ್ಕೆ ನೀರು ಹರಿಸಬೇಕು.

೩) ಮಳೆಗಾಲದಲ್ಲಿ ಕೃಷ್ಣಾನದಿಯ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕುವ ಸಂತ್ರಸ್ತರ ಗ್ರಾಮಗಳನ್ನು ಶಾಶ್ವತವಾಗಿ ಸ್ಥಳಾಂತರಿಸಬೇಕು.

೪) ಕೃಷ್ಣಾ ನದಿ ಹಿನ್ನೀರಿನಿಂದ ಉಂಟಾಗಿರುವ ಜವುಳು ಹಿಡಿದಿರುವ ಭೂಮಿ ರಕ್ಷಣೆಗೆ ಕ್ರಮ ಕೈಕೊಳ್ಳಬೇಕು.

೫) ಗುಲ್ಬರ್ಗಾ-ಬೆಳಗಾವಿ ಮಧ್ಯ ರೈಲು ಸಂಪರ್ಕ ಕಲ್ಪಿಸಬೇಕು.

೬) ಧಾರವಾಡ, ಕಿತ್ತೂರ, ಬೆಳಗಾವಿ ಮಧ್ಯ ರೈಲು ಸಂಪರ್ಕ ಕಲ್ಪಿಸಬೇಕು.

೭) ವಿಶ್ವಪ್ರಸಿದ್ಧ ಪಟ್ಟದಕಲ್ಲು, ಬದಾಮಿ, ವಿಜಾಪೂರ, ಹಲಸಿಯ ನರಸಿಂಹ ದೇವಾಲಯಗಳನ್ನು ಅಭಿವೃದ್ಧಿ ಪಡಿಸಿ ಅಂತರ್‌ರಾಷ್ಟ್ರೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಬೇಕು.

೮) ಹಿಡಕಲ್ ಹಾಗೂ ಮಲಪ್ರಭಾ ಜಲಾಶಯಗಳ ಉದ್ಯಾನವನ್ನು ಬೃಂದಾವನ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹಿಸಬೇಕು.

೯) ಉತ್ತರ ಕರ್ನಾಟಕದ ಸೂಕ್ತ ಸ್ಥಳಗಳಲ್ಲಿ ಐ.ಐ.ಟಿ. ಸ್ಥಾಪಿಸಬೇಕು.

೧೦) ಹಾವೇರಿ ಜಿಲ್ಲೆಯ ಬಂಕಾಪುರದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ ಆರಂಭಿಸಬೇಕು.

೧೧) ವಿಜಾಪೂರ, ಬಾಗಲಕೋಟೆ ಹಾಗೆ ಬೆಳಗಾವಿ ಜಿಲ್ಲೆಗಳಲ್ಲಿ ತೋಟಗಾರಿಕಾ ಸಂಸ್ಕರಣ ಘಟಕ ಆರಂಭಿಸಬೇಕು.

೧೨) ೧೨ ಫಲ-ಪುಷ್ಪಗಳ ಉದ್ದಿಮೆಗಳ ಅಭಿವೃದ್ಧಿಗೆ ಅಂತರ್ ರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಶೀತಲ ಗೃಹ ನಿರ್ಮಿಸಬೇಕು.

೧೩) ವಿಜಾಪೂರ ಮಹಿಳಾ ವಿಶ್ವವಿದ್ಯಾಲಯದ ಕಕ್ಷೆಗೆ ರಾಜ್ಯದ ಎಲ್ಲಾ ಮಹಿಳಾ ಕಾಲೇಜುಗಳನ್ನು ಸೇರಿಸಬೇಕು.

೧೪) ಬೆಳಗಾವಿಯ ರಾಣಿ ಚೆನ್ನಮ್ಮ ಸ್ನಾತಕೋತ್ತರ ಕೇಂದ್ರ ಪೂರ್ಣ ಪ್ರಮಾಣದ ಸ್ವತಂತ್ರ ವಿಶ್ವವಿದ್ಯಾಲಯವಾಗಬೇಕು.

೧೫) ಹುಬ್ಬಳ್ಳಿ ಬೆಳಗಾವಿಯ ಅಭಿವೃದ್ಧಿಗೆ ಪೂರಕವಾಗಿ ಕಿತ್ತೂರ ಸಮೀಪ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಬೇಕು.

೧೬) ಅಥಣಿ ತಾಲೂಕಿನ ನೀರಾವರಿ ಯೋಜನೆಗಳಾದ ಕರಿಮಸೂತಿ, ಐನಾಪೂರ ಯೋಜನೆಗಳನ್ನು ಪ್ರಾರಂಭಿಸಬೇಕು.[೭೪]

೧೭) ಬಿಜಾಪೂರ ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಕಲ್ಪಿಸುವ ಮಹಾತ್ವಾಕಾಂಕ್ಷೆಯ ಎರಡು ನೀರಾವರಿ ಯೋಜನೆಗಳಾದ ಚಿಮ್ಮಲಗಿ ಹಾಗೂ ಗುತ್ತಿ ಬಸವಣ್ಣ ಯೋಜನೆಗಳಿಗೆ ತ್ವರಿತವಾಗಿ ಹಣ ಬಿಡುಗಡೆಗೊಳಿಸುವುದು.

೧೮) ಚಿಕ್ಕೋಡಿ ತಾಲೂಕನ್ನು ಜಿಲ್ಲೆಯಾಗಿ ಪರಿವರ್ತಿಸಬೇಕು.

೧೯) ಬೆಳಗಾವಿ ನಗರದ ಸಮಗ್ರ ಅಭಿವೃದ್ಧಿಗಾಗಿ ೩೦೦ ಕೋಟಿ ಹಣವನ್ನು ಬಿಡುಗಡೆಗೊಳಿಸಬೇಕು.

೨೦) ೨೦೦೬-೦೭ ಸಾಲಿನಲ್ಲಿ ಬೆಳೆದ ಹಾಗೆ ಸಕ್ಕರೆ ಕಾರ್ಖಾನೆಗಳಿಗೆ ಸಾಗಾಣೆಯಾಗದೇ ಉಳಿದ ಕಬ್ಬು ಬೆಳೆ ಹಾನಿಗೆ ಪರಿಹಾರವನ್ನು ಸರ್ಕಾರ ಶೀಘ್ರವಾಗಿ ಬಿಡುಗಡೆಗೊಳಿಸಬೇಕು.

ಇತರ ಯೋಜನೆಗಳು.

೨೧) ಉತ್ತರ ಕರ್ನಾಟಕದ ಪ್ರಮುಖ ಪಟ್ಟಣಗಳ ಕುಡಿಯುವ ಶಾಶ್ವತ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಬೇಕು.

೨೨) ಕಳಸಾ ಬಂಡೂರಿ ನಾಲಾ ಯೋಜನೆಯನ್ನು ಶೀಘ್ರವಾಗಿ ಪ್ರಾರಂಭಿಸಿ ಆ ಭಾಗದ ಜನರ ಬಹುದಿನಗಳ ಕನಸನ್ನು ಈಡೇರಿಸಬೇಕು. ಮತ್ತು ತುಂಗಭದ್ರಾ ಕಾಲುವೆಯ ದುರಸ್ತಿ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಬೇಕು.

೨೩) ಉತ್ತರ ಕರ್ನಾಟಕ ಜಿಲ್ಲೆಗಳಿಗೆ ನಿರಂತರ ವಿದ್ಯುತ್ ಪೂರೈಸುವ ಕಾರ್ಯವಾಗಬೇಕು. ಅಲ್ಲದೇ ಈ ಭಾಗದ ಉದ್ಯೋಗ ಅವಕಾಶ ಒದಗಿಸುವ ನಿಟ್ಟಿನಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಬೇಕು.

೨೪) ಬಹುದಿನಗಳ ಬೇಡಿಕೆಗಳಾದ ಕುಡಚಿ-ಬಾಗಲಕೋಟೆ, ವಿಜಾಪೂರ-ಅಥಣಿ ಮತ್ತು ಶೇಡಬಾಳ ರೈಲು ಮಾರ್ಗಗಳನ್ನು ರಾಜ್ಯ ಸರಕಾರ ಹಾಗೆಯೇ ಕೇಂದ್ರ ರೈಲು ಇಲಾಖೆ ಕೈರ್ಯಾಡ್ ಒಪ್ಪಂದದಲ್ಲಿ ಈ ರೈಲು ಯೋಜನೆ ಪ್ರಾರಂಭಿಸಿ ಈ ಭಾಗದ ಜನರ ಸಂಚಾರಕ್ಕೆ ಹಾಗೂ ಹಣ್ಣು, ತರಕಾರಿ ಇತರ ವಸ್ತುಗಳ ಸಾಗಾಣಿಕೆಗೆ ಅನುಕೂಲ ಒದಗಿಸಬೇಕು.

೨೫) ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ಬಿಜಾಪೂರ, ಗುಲ್ಬರ್ಗಾ, ಬೀದರ, ಬಾಗಲಕೋಟ, ರಾಯಚೂರ ನಗರಗಳಲ್ಲಿ ವಿಮಾನ ನಿಲ್ದಾಣ ಕಾರ್ಯ ಆರಂಭಿಸಿ ಅಲ್ಲಿನ ಜನರಿಗೆ ನಿತ್ಯ ವಿಮಾನಯಾನ ಸೇವೆ ಒದಗಿಸಬೇಕು.

೨೬) ಅಕ್ಕಲಕೋಟ್ ಜತ್ತ ಮುಂತಾದ ಗಡಿನಾಡು ಕನ್ನಡಿಗರ ಸಮಸ್ಯೆಗಳನ್ನು ಬಗೆಹರಿಸಬೇಕು.

೨೭) ಬೆಳಗಾವಿಗೆ ರಾಜ್ಯದ ಎರಡನೇ ರಾಜಧಾನಿ ಸ್ಥಾನಮಾನವನ್ನು ಅಧಿಕೃತವಾಗಿ ಘೋಷಿಸಬೇಕು.

೨೮) ಉತ್ತರ ಕರ್ನಾಟಕದ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು. ಗ್ರಾಮೀಣ ರಸ್ತೆಗಳನ್ನು ನಿರ್ಮಿಸಲು ಯೋಜನೆ ರೂಪಿಸಬೇಕು.

೨೯) ಡಾ. ಎಂ.ನಂಜುಂಡಪ್ಪನವರ ವರದಿಯನ್ನು ಕಾಲಮಿತಿ ಒಳಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕಾಗಿ

ವಿಶೇಷವಾಗಿ ಮುಂಗಡ ಪತ್ರದಲ್ಲಿ ಹಣವನ್ನು ಕಾಯ್ದಿರಿಸಬೇಕು. ಅಗತ್ಯ ಬಿದ್ದರೆ ಕೇಂದ್ರ ಸರಕಾರದ ಮೇಲೆ ಒತ್ತಡ ತಂದು ಅನುಧಾನ ಪಡೆದು ಆ ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು.[೨೫]

ಹೀಗೆ ಪ್ರಮುಖ ಅಂಶಗಳ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಪಡಿಸಿ ಮುಖ್ಯ ಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೆ ಡಾ. ಪ್ರಭಾಕರ ಕೋರೆಯವರು ಮನವಿ ಸಲ್ಲಿಸಿದರು. ಅಷ್ಟೆ ಅಲ್ಲದೆ ನಿರಂತರ ಮೂರು ದಶಕಗಳ ಕಾಲ ಈ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಗಮನ ಸೆಳೆದರು.

ರಾಜ್ಯಸಭೆ ಸದಸ್ಯರಾಗಿ ಸಂಸತ್ತಿನಲ್ಲಿ ಹಾಗೆಯೇ ವಿಧಾನ ಪರಿಷತ್ತಿನ ಸದಸ್ಯರಾಗಿ ತಾವು ಶಾಸಕಾಂಗ ಸಭೆಯಲ್ಲಿಯೂ ಈ ಬಗ್ಗೆ ಹಲವಾರು ಬಾರಿ ಧ್ವನಿ ಎತ್ತಿದವರು ಶ್ರೀ ಪ್ರಭಾಕರ ಕೋರೆಯವರು.

ಈ ಪ್ರಮುಖ ಅಂಶಗಳನ್ನೊಳಗೊಂಡ ಡಾ. ಪ್ರಭಾಕರ ಕೋರೆಯವರು ಸೂಚಿಸಿದ ಕಾರ್ಯಕ್ರಮಗಳಿಂದ ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸುವುದು ಸ್ಪಷ್ಟವಾಗಿದೆ. ಈ ಭಾಗದ ಅಭಿವೃದ್ಧಿಗೆ ಅವರ ಬದ್ಧತೆ, ತೋರುತ್ತಿರುವ ಕಾಳಜಿ ಮಾತ್ರ ರಾಜಕೀಯ ನಾಯಕರಿಗೆ ಒಂದು ಆದರ್ಶ ಎನ್ನಬಹುದು ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಯ ಹರಿಕಾರರೆಂದೆ ಕೋರೆಯವರನ್ನು ನಾವು ಗುರುತಿಸಬಹುದು.

ಡಾ. ಪ್ರಭಾಕರ ಕೋರೆಯವರ ಅಭಿಪ್ರಾಯದಂತೆ ಈ ಯೋಜನೆಗಳು ಜೀವಿತ ಅವಧಿಯಲ್ಲಿ ಪೂರ್ಣಗೊಂಡರೆ ಅದಕ್ಕಿಂತ ಸೌಭಾಗ್ಯ ಮತ್ತೇನು ಇದೆ ಎನ್ನುತ್ತಾರೆ.[೨೬] ಒಬ್ಬ ರಾಜಕೀಯ ನಾಯಕನಿಗೆ ನೈಜವಾಗಿ ಅಭಿವೃದ್ಧಿಯ ಬಗ್ಗೆ ಇರುವ ಕಳಕಳಿ ಎಂತಹದು ಎಂಬುದನ್ನು ಸಾಬೀತು ಪಡಿಸುತ್ತದೆ.

೨೦೦೯ರ ಬೆಳಗಾವಿ ವಿಧಾನ ಮಂಡಲ ಅಧಿವೇಶನದಿಂದ ಉತ್ತರ ಕರ್ನಾಟಕದ ಅಭಿವೃದ್ಧಿಯ ದೃಷ್ಟಿಯಿಂದಾದ ಪ್ರಯೋಜನಗಳು :

ಬೆಳಗಾವಿ ವಿಧಾನ ಮಂಡಲ ಅಧಿವೇಶನವು ದಿನಾಂಕ ೧೬-೧-೨೦೦೯ ರಂದು ಪ್ರಾರಂಭವಾಯಿತು. ಈ ಅಧಿವೇಶನದಲ್ಲಿ ಜಂಟಿ ಸದನವನ್ನು ಉದ್ದೇಶಿಸಿ ರಾಜ್ಯ ಪಾಲರಾದ ರಾಮೇಶ್ವರ ಠಾಕೂರ್‌ರವರು ಮಾತನಾಡುತ್ತಾ ಹಿಂದುಳಿದ ಪ್ರದೇಶವಾದ ಹೈದರಾಬಾದ ಕರ್ನಾಟಕ್ಕೆ ವಿಶೇಷ ಸ್ಥಾನಮಾನ ನೀಡಲು ಅನುಕೂಲವಾಗುವಂತೆ ಸಂವಿಧಾನದ ೩೭೧ನೇ ವಿಧಿಗೆ ತಿದ್ದುಪಡಿ ತರಲು ಕೇಂದ್ರ ಸರಕಾರಕ್ಕೆ ಒತ್ತಡ ಹೇರಿದರು. ಹಾಗೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದ ಹೈದರಾಬಾದ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಶಾಸನಬದ್ಧ ಪ್ರಯತ್ನ ಅಗತ್ಯ. ಇದಕ್ಕೆ ಸಂವಿಧಾನ ತಿದ್ದುಪಡಿ ಆಗಬೇಕು. ಇದನ್ನು ಮಾಡಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ರಾಜ್ಯದ ಬಡ ಕುಟುಂಬಗಳಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಆರೋಗ್ಯ ವಿಮೆ ಮೂಲಕ ಗರಿಷ್ಠ ರೂ. ೧.೫ ಲಕ್ಷ ರೂಪಾಯಿಗಳವರೆಗೆ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ ರೂಪಿಸಲಾಗುತ್ತಿದೆ. ಮೊದಲ

ಹಂತದಲ್ಲಿ ಈ ಯೋಜನೆಯನ್ನು ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ವಿಭಾಗದ ಸುಮಾರು ೧೬ ಲಕ್ಷ ಬಡ ಕುಟುಂಬಗಳನ್ನು ಮತ್ತು ನಂತರದ ವರ್ಷಗಳಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲ ಬಡ ಕುಟುಂಬಗಳಿಗೆ ವಿಸ್ತರಿಸುವುದಾಗಿ ಹೇಳಿ ಸರಕಾರ ಮುಂದಿನ ಯೋಜನೆಗಳನ್ನು ಪ್ರಕಟಿಸಿತು.[೭೭]

ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶಗಳಾದ ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಉತ್ತರ ಕರ್ನಾಟಕದ ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯದ ಸ್ಥಾಪನೆಗೆ ಸುಗ್ರೀವಾಜ್ಞೆ ಹೊರಡಿಸಲಾಯಿತು. ಅಧಿವೇಶನದಲ್ಲಿ ಈ ಸಂಬಂಧ ಮಸೂದೆ ಮಂಡಿಸಲಾಗುವುದು ಎಂದು ತಿಳಿಸಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಈ ಅಧಿವೇಶನ ಸಾಕಷ್ಟು ಪರಿಣಾಮ ಬೀರುತ್ತದೆ ಎನ್ನುವ ಕುರುಹನ್ನು ಅಧಿವೇಶನದ ಪ್ರಾರಂಭದ ಮೊದಲ ದಿನವೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದರು.[೭೮]

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆ :

ಬೆಳಗಾವಿ ವಿಧಾನ ಮಂಡಲ ಅಧಿವೇಶನದ ಫಲಶ್ರುತಿಯಿಂದಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸದನದಲ್ಲಿ ಸದಸ್ಯರ ಒಕ್ಕೂರಲಿನ ಒತ್ತಾಯದ ಹಿನ್ನೆಲೆಯಲ್ಲಿ ದಿನಾಂಕ ೧೮-೧-೨೦೦೯ ರಂದು ಅಭಿವೃದ್ಧಿ ಆಯುಕ್ತರಾದ ಶಾಂತಕುಮಾರಿ ಅವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ನಡೆಯಿಸಿ, ಸುಮಾರು ೪ ತಾಸುಗಳಿಗಿಂತ ಹೆಚ್ಚು ಹೊತ್ತು ಅಧಿಕಾರಿಗಳ ಮಟ್ಟದಲ್ಲಿ ಸುದೀರ್ಘ ಚರ್ಚೆಯ ನಂತರ ಉತ್ತರ ಕರ್ನಾಟಕದಲ್ಲಿನ ಯೋಜನೆಗಳ ಪಟ್ಟಿ ಸಿದ್ಧಗೊಳಿಸಿದ ಮುಖ್ಯಮಂತ್ರಿ ಯುಡಿಯೂರಪ್ಪನವರಿಗೆ ಅದನ್ನು ಸಲ್ಲಿಸಲಾಯಿತು. ಈ ಸಮಯದಲ್ಲಿಯೇ ಡಾ. ಪ್ರಭಾಕರ ಕೋರೆಯವರ ನೇತೃತ್ವದ ೨೦ ಅಂಶಗಳ ಕಾರ್ಯಕ್ರಮಗಳನ್ನು ಕೂಲಂಕುಷವಾಗಿ ಚರ್ಚಿಸಿ ಈ ಪಟ್ಟಿಯಲ್ಲಿ ಕೆಲವು ಪ್ರಮುಖ ಅಂಶಗಳನ್ನು ಸೇರಿಸುವಲ್ಲಿ ಡಾ. ಪ್ರಭಾಕರ ಕೋರೆಯವರು ಯಶಸ್ವಿಯಾದರು.[೭೯]

ಈ ಉನ್ನತ ಅಧಿಕಾರಿಗಳು ಸಿದ್ಧಪಡಿಸಿದ ಯೋಜನೆಗಳನ್ನು ಬೆಳಗಾವಿಯಲ್ಲಿ ೨೨-೧-೨೦೦೯ ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯು ಕೈಗೊಂಡ ಯೋಜನೆಗಳು, ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಸರಕಾರ ಘೋಷಿಸಿದ ನಾನಾ ಯೋಜನೆಗಳನ್ನು ಒಟ್ಟು ೫೦೦ ಕೋಟಿ ರೂ.ಗಳ ವೆಚ್ಚದಲ್ಲಿ ಕೈಕೊಳ್ಳಲು ಸಚಿವ ಸಂಪುಟ ಒಪ್ಪಿಗೆ ನೀಡಿತು.

ಉತ್ತರ ಕರ್ನಾಟಕದ ಜಿಲ್ಲೆಗಳಾದ ವಿಜಾಪೂರ, ಬೆಳಗಾವಿ, ಬಾಗಲಕೋಟ, ಧಾರವಾಡ, ಹಾವೇರಿ, ಗದಗ ಹಾಗೂ ಹೈದರಾಬಾದ ಕರ್ನಾಟಕ ಭಾಗದ ಗುಲ್ಬರ್ಗಾ, ಕೊಪ್ಪಳ, ರಾಯಚೂರಗಳಲ್ಲಿ ಒಟ್ಟು ೨೨.೮೭೩ ಮಾಜಿ ದೇವದಾಸಿಯರಿದ್ದು ಈ ಪೈಕಿ ೧೧.೮೯೨ ಮಂದಿ ವಸತಿ ರಹಿತರಾಗಿದ್ದಾರೆ. ಈ ಮೇಲಿನ ಜಿಲ್ಲೆಗಳಿಗೆ ತಲಾ ೨೫೦ ಮನೆಗಳಂತೆ ಇವುಗಳಿಗೆ ೪೦ ಸಾವಿರ ಹಣವನ್ನು ನಿಗದಿಪಡಿಸಿ ಇದಕ್ಕಾಗಿ ೧೦ ಕೋಟಿ ಹಣವನ್ನು ಒದಗಿಸಿದೆ.

ಒಟ್ಟು ೨೫೦೦೦ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದೆ. ಗದಗದಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪಿಸಲು ಹಾಗೂ ಉತ್ತರ ಕರ್ನಾಟಕದಲ್ಲಿ ಸಾವಿರ ಹಾಲು ಉತ್ಪಾದಕರ ಸಂಘ ರಚನೆ ಮಾಡುವುದು, ಬೆಳಗಾವಿಯಲ್ಲಿ ಸೈಜಿಂಗ್ ಘಟಕ ಸ್ಥಾಪನೆ, ಸವದತ್ತಿ ಎಲ್ಲಮ್ಮ ದೇವಾಲಯದ ಸಮಗ್ರ ಅಭಿವೃದ್ಧಿಗೆ ಪ್ರಾಧಿಕಾರ ರಚಿಸುವುದು, ಹಿಡಕಲ್‌ದಲ್ಲಿ ಕೆ.ಆರ್.ಎಸ್. ಮಾದರಿಯಲ್ಲಿ ಬೃಂದಾವನವನ್ನು ನಿರ್ಮಿಸುವುದು, ಧಾರವಾಡದಲ್ಲಿರುವ ಮಾನಸಿಕ ಆಸ್ಪತ್ರೆಯನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು.

ಬೆಳಗಾವಿ ಜಿಲ್ಲೆಯ ಐನಾಪೂರ, ಕರಿಮಸೂತಿ ಏತ ನೀರಾವರಿಗಳು ಹಾಗೂ ಶಹಪುರ, ಬೋನಾಳ ಕೆರೆ ಏತ ನೀರಾವರಿ ಯೋಜನೆಗಳಲ್ಲದೆ, ಉತ್ತರ ಕರ್ನಾಟಕದ ೫೫೦೦ ಕಿ.ಮೀ. ರಸ್ತೆಗಳ ಅಭಿವೃದ್ಧಿಯ ಒಪ್ಪಿಗೆಗಾಗಿ ಯೋಜನೆಗಳನ್ನು ತಯಾರಿಸಿತು. ಅದೇ ರೀತಿಯಾಗಿ ನೇಕಾರರ ಕೈ ಮಗ್ಗಗಳ ನಿಗಮಗಳಿಗೆ ೫ ಕೋಟಿ ಹಣವನ್ನು ಸಹಾಯ ಧನವಾಗಿ ನೀಡುವ ಕ್ರಿಯಾ ಯೋಜನೆ ಸಿದ್ಧಪಡಿಸಲಾಯಿತು.[೮೦]

ಬೀದರ, ಬೆಳಗಾವಿ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಸರಕಾರಿ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ೩೨.೫೦ ಕೋಟಿ ಹಣವನ್ನು ನೀಡಲು ತೀರ್ಮಾನಿಸಿತ್ತು. ಬೀದರನಲ್ಲಿ ಹಾಲೀ ೫೦೦ ಹಾಸಿಗೆಯ ಆಸ್ಪತ್ರೆಗೆ ೨೦ ಕೋಟಿ, ಹಾಗೂ ಬೆಳಗಾವಿಯಲ್ಲಿ ೭೫೦ ಹಾಸಿಗೆಯ ಸಾಮರ್ಥ್ಯದ ಆಸ್ಪತ್ರೆಯನ್ನು ೧೦೦೦ ಹಾಸಿಗೆಗೆ ಏರಿಸಲು ೧೨.೫೦ ಕೋಟಿ ಹಣವನ್ನು ಒದಗಿಸಲು ಹಾಗೂ ಧಾರವಾಡ ಮಾನಸಿಕ ಆಸ್ಪತ್ರೆಯನ್ನು ಬೆಂಗಳೂರಿನ ನಿಮಾನ್ಸ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ೧೦ ಕೋಟಿ ಹಣವನ್ನು ಒದಗಿಸಿದೆ.

ಬೆಳಗಾವಿಯ ಸುವರ್ಣ ಸೌಧ ನಿರ್ಮಾಣಕ್ಕೆ ೨೩೦ ಕೋಟಿ ರೂ.ಗಳನ್ನು ಹಾಗೂ ಗಡಿ ಭಾಗಗಳ ಸಮಗ್ರ ಅಭಿವೃದ್ಧಿಗಾಗಿ ಗಡಿ ಪ್ರಾಧಿಕಾರ ರಚನೆ ಹಾಗೂ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಕ್ರಮ ಕೈಕೊಂಡಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮ ದೇವಾಲಯದ ಸಮಗ್ರ ಅಭಿವೃದ್ಧಿಗಾಗಿ ಪ್ರಾಧಿಕಾರ ರಚನೆ ಮಾಡಿ ೫೦ ಕೋಟಿ ರೂ.ಗಳನ್ನು ಒದಗಿಸುವ ನಿರ್ಣಯವನ್ನು ಕೈಕೊಳ್ಳಲಾಯಿತು.

ಸಮಗ್ರ ಕುಡಿಯುವ ನೀರು ಮತ್ತು ನೈರ್ಮಲೀಕರಣ ಯೋಜನೆಗಳನ್ನು ಪ್ರಾಯೋಗಿಕವಾಗಿ ಬಿಜಾಪೂರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕೈಕೊಳ್ಳಲು ೫೦ ಲಕ್ಷ ಕೋಟಿ ರೂ. ಗಳನ್ನು ಮಂಜೂರು ಮಾಡಲು ನಿರ್ಧರಿಸಿದೆ. ಹಿಪ್ಪರಗಿ ನೀರಾವರಿ ಯೋಜನೆಯಲ್ಲಿ ಐನಾಪೂರ, ಕರಿಮಸೂತಿ ಯೋಜನೆಗಳಿಗೆ ೧೧೦.೫೮ ಕೋಟಿ ರೂ.ಗಳ ವೆಚ್ಚದಲ್ಲಿ ಹಾಗೂ ಶಹಪುರ ಉಪನಾಲೆಯಿಂದ ನೀರು ತಲುಪದಿರುವ ಪ್ರದೇಶಗಳಿಗೆ ನೀರು ಪೂರೈಕೆಗೆ ಬೋನಾಳ್ ಕೆರೆ ಏತ ನೀರಾವರಿ ಯೋಜನೆಗೆ ಅನುಮೋದನೆ ನೀಡಿತು.[೮೧] ಹೀಗೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನೇಕ ಯೋಜನೆಗಳಿಗೆ ಸಚಿವ ಸಂಪುಟ ತಾತ್ವಿಕ ಅನುಮೋದನೆ ನೀಡುವ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೊಸ ಭರವಸೆಯನ್ನು ಈ ಅಧಿವೇಶನ ಮೂಡಿಸಿತ್ತು.

ದಿನಾಂಕ ೨೪.೧.೨೦೦೯ ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯುರಪ್ಪನವರು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಸಚಿವ ಸಂಪುಟ ನಿರ್ಣಯಗಳನ್ನು ಹೊರತು ಪಡಿಸಿ, ಮತ್ತೆ ೧೨ ಯೋಜನೆಗಳಿಗೆ ೮೪೬ ಕೋಟಿ ರೂ.ಗಳನ್ನು ಬೆಳಗಾವಿ ಅಧಿವೇಶನದಲ್ಲಿಯೇ ಘೋಷಿಸಿದರು. ಅವುಗಳಲ್ಲಿ ಉತ್ತರ ಕರ್ನಾಟಕದ ೮೪೮ ಗ್ರಾಮಗಳಿಗೆ ಫ್ಲೋರೈಡ್ ಮುಕ್ತ ಕುಡಿಯುವ ನೀರಿನ ಪೂರೈಕೆಗೆ ೬೦೦ ಕೋಟಿ ರೂಪಾಯಿ, ಧಾರವಾಡ-ಬೆಳಗಾವಿ ನೇರ ಸಂಪರ್ಕ ಕಲ್ಪಿಸಲು ಹಾಗೂ ಕುಡಚಿ-ಬಾಗಲಕೋಟ, ಗದಗ-ಹಾವೇರಿ, ಆಲಮಟ್ಟಿ-ಕೊಪ್ಪಳ ರೇಲ್ವೆ ಯೋಜನೆಗಳಿಗೆ ಒಟ್ಟು ಸರಕಾರದ ಪಾಲು ಶೇ. ೮೦. ಬೆಳಗಾವಿ ನಗರಕ್ಕೆ ವರ್ತುಲ ರಸ್ತೆ, ಒಳಚರಂಡಿ ಯೋಜನೆ ಸೇರಿದಂತೆ ಒಟ್ಟು ೨೮೦ ಕೋಟಿ ರೂಪಾಯಿ ವೆಚ್ಚದ ವಿವಿಧ ಯೋಜನೆಗಳನ್ನು ಸಹ ಘೋಷಿಸಿದರು. ಸಂಪುಟದ ತೀರ್ಮಾನ ಮತ್ತು ಹೊಸ ಕಾರ್ಯಕ್ರಮ ಸೇರಿ ಒಟ್ಟು ೧೪೬೪ ಕೋಟಿ ರೂಪಾಯಿಗಳ ವೆಚ್ಚದ ಯೋಜನೆಗಳನ್ನು ರೂಪಿಸಿದರು.

ವಿಜಾಪುರ ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಕಲ್ಪಿಸುವ ಮಹತ್ವಾಕಾಂಕ್ಷೆಯ ಎರಡು ಏತ ನೀರಾವರಿ ಯೋಜನೆಗಳನ್ನು ವಿವಿಧ ಕಾಮಗಾರಿ ಕೈಗೆತ್ತಿಕೊಳ್ಳಲು ಸರಕಾರ ೧೯೧.೨೦ ಕೋಟಿ ರೂ.ಗಳನ್ನು ಮುಂದಿನ ಹಣಕಾಸು ವರ್ಷದಲ್ಲಿ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು. ಈ ಪೈಕಿ ಚಿಮ್ಮಲಗಿ ಯೋಜನೆಯ ಹೆಡ್‌ವರ್ಕ್ಸ್ ಏತ ಕಾಲುವೆಗೆ ೬೩.೨೦ ಕೋಟಿ ರೂಪಾಯಿ ಮತ್ತು ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯ ಕಾಲುವೆ ಕಾಮಗಾರಿಗೆ ರೂ. ೧೨೮ ಕೋಟಿ ನೀಡುವುದಾಗಿ ಹೇಳಿದರು.

ಉತ್ತರ ಕರ್ನಾಟಕದ ೮೪೮ ಗ್ರಾಮಗಳಲ್ಲಿ ಜನರು ಬಳಸುವ ನೀರಿನಲ್ಲಿ ಫ್ಲೋರೈಡ ಅಂಶ ಅಧಿಕ ಇದ್ದು. ಈ ಜನತೆಗೆ ಉತ್ತಮ ಗುಣಮಟ್ಟದ ನೀರು ಒದಗಿಸುವ ಉದ್ದೇಶದಿಂದ ೭೮ ಯೋಜನೆಗೆಳನ್ನು ಕೈಕೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಗಳ ಒಟ್ಟು ವೆಚ್ಚ ರೂ. ೬೦೦ ಕೋಟಿ.

ಕಬ್ಬು ಬೆಳೆಗಾರರಿಗೆ ಅನುಕೂಲವಾಗುವಂತೆ ಮುಧೋಳದಲ್ಲಿ ಬೆಲ್ಲ ಸಂಸ್ಕರಣಾ ಕೇಂದ್ರ ಮತ್ತು ಮಾರಾಟ ಸ್ಥಾಪನೆಗೆ ೫ ಕೋಟಿ ರೂ.ಗಳನ್ನು, ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರ ಸ್ಥಾಪನೆಗೆ ೫ ಕೋಟಿ, ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಮೆಣಸಿನಕಾಯಿ, ಮಸಾಲೆ, ದಿನಸಿ ಕಾರ್ಖಾನೆಗಳಿಗೆ ಮತ್ತು ಸ್ಪೈಸ್ ಪಾರ್ಕ ಸ್ಥಾಪನೆಗೆ ೧೦ ಕೋಟಿ, ಬಸವಂತಪುರದಲ್ಲಿ ಅಟೋಪಾರ್ಕ ಸ್ಥಾಪನೆಗೆ ರೂ. ೧೦ ಕೋಟಿ ನೀಡಲಾಗಿದೆ. ಬರಗಿ ಸಲಾಗಪುರ ಅಲ್ಲದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಅರಣ್ಯ ಮತ್ತು ಗುಡ್ಡಗಾಡು ಪ್ರದೇಶವಿದ್ದು, ಈ ಜಿಲ್ಲೆಯಲ್ಲಿ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು ರೂ. ೧೮ ಕೋಟಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು. ಕಾರವಾರದಲ್ಲಿ ಪ್ರವಾಸಿ ತಾಣವಾದ ಜಾಗೂರ ಬೀಚ್ ಅನ್ನು ಅಭಿವೃದ್ಧಿ ಪಡಿಸಲು ರೂ. ೨ ಕೋಟಿ, ಅಲ್ಲದೆ ಬೆಳಗಾವಿ ನಗರದ ವಿಶೇಷ ಅಭಿವೃದ್ಧಿಗೆ ೨೮೦ ಕೋಟಿ ರೂಪಾಯಿ, ವಿವಿಧ ಕಾರ್ಯಕ್ರಮಗಳಿಗಾಗಿ ೧೫೦೦ ಕೋಟಿ ವೆಚ್ಚದ ೩೮ ಕಿ.ಮೀ. ಪಟೇಲ ರಸ್ತೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಿ ಸರಕಾರ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲು ೫ ಕೋಟಿ ಹಣ ನೀಡಿದೆ. ನಗರ ಒಳಚರಂಡಿ ವ್ಯವಸ್ಥೆಗೆ ೧೨೦

ಕೋಟಿ ರೂ. ಜಿಲ್ಲೆಯಲ್ಲಿ ಫೌಂಡ್ರಿ ಘಟಕಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬೆಳಗಾವಿ ತಾಲೂಕಿನ ಮಚ್ಚೆ ಎಂಬ ಗ್ರಾಮದಲ್ಲಿ ೫೦೦ ಎಕರೆ ಪ್ರದೇಶದಲ್ಲಿ ಫೌಂಡ್‌ರಿ ಈಸ್ಟರ್ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದಲ್ಲದೆ, ತೋಟಗಾರಿಕಾ ಉತ್ಪನ್ನಗಳಿಗೆ ಹೆಚ್ಚು ಮೌಲ್ಯ ದೊರೆಯುವಂತೆ ಮಾಡಲು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಸಂಯೋಗದೊಂದಿಗೆ ಸುಗಮ ತೋಟಗಾರಿಕಾ ಉತ್ಪನ್ನಗಳ ಮಾರುಕಟ್ಟೆ ಸ್ಥಾಪನೆಗೆ ಸಹಾಯಧನ ನೀಡುವ ಭರವಸೆಯನ್ನು ಸರಕಾರ ನೀಡಿತು.[೮೨]

ಬೆಳಗಾವಿ ಜಿಲ್ಲೆಯಲ್ಲಿರುವ ಪ್ರಮುಖ ಐತಿಹಾಸಿಕ ಸ್ಥಳಗಳ ಸಮಗ್ರ ಅಭಿವೃದ್ಧಿಗಾಗಿ ೫೦ ಕೋಟಿ ರೂ.ಗಳನ್ನು, ಹಾಗೂ ಪ್ರಮುಖ ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿ ಪಡಿಸಲು ಪ್ರವಾಸೋಧ್ಯಮ ಇಲಾಖೆ ನಿರ್ಧರಿಸಿತು. ಸುಮಾರು ೫೦ ಕೋಟಿ ರೂ.ಗಳ ಪ್ಯಾಕೇಜ್ ಅನ್ನು ಇದೇ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಪ್ರವಾಸೋದ್ಯಮ ಸಚಿವ ಗಾಲಿ ಜನಾರ್ಧನ ರೆಡ್ಡಿಯವರು ಸದನದಲ್ಲಿ ಘೋಷಿಸಿದರು.

ಗಡಿ ಭಾಗದ ೫೨ ತಾಲೂಕುಗಳ ಸಮಗ್ರ ಅಭಿವೃದ್ಧಿಗಾಗಿ ಗಡಿ ಪ್ರಾಧಿಕಾರ ರಚಿಸುವ ಮಸೂದೆಯನ್ನು ಈ ಸಂದರ್ಭದಲ್ಲಿಯೇ ಮಂಡಿಸಿ ಒಪ್ಪಿಗೆ ಪಡೆಯಲಾಯಿತು. ಇದರಿಂದ ಹಲವಾರು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಈ ಗಡಿ ಭಾಗದ ತಾಲೂಕುಗಳ ಹೊಸ ಭರವಸೆಯನ್ನು ಈ ಅಧಿವೇಶನ ಮೂಡಿಸಿತು. ೧೯೬೬ ರಲ್ಲಿ ನೇಮಕಗೊಂಡ ಮಹಾಜನ ಆಯೋಗದ ವರದಿಯನ್ನು ಉಭಯ ಸದನಗಳಲ್ಲಿ ಸರ್ವಾನುಮತದಿಂದ ಯಥಾವತ್ತಾಗಿ ಅನುಷ್ಠಾನಕ್ಕೆ ತರಬೇಕೆಂದು ಕೇಂದ್ರ ಸರಕಾರಕ್ಕೆ ಒತ್ತಾಯಿಸುವ ನಿರ್ಣಯವನ್ನು ಸದನದಲ್ಲಿ ಮಂಡಿಸುವ ಮೂಲಕ ಬೆಳಗಾವಿ ವಿಷಯದಲ್ಲಿ ವಿನಾಕಾರಣ ತಗಾದೆ ತೆಗೆಯುವ ಮಹಾರಾಷ್ಟ್ರ ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿ ಕೆಲಸವನ್ನು ಅಖಂಡ ಕರ್ನಾಟಕದ ಏಕತೆಯ ಬಗ್ಗೆ ಮತ್ತೊಮ್ಮೆ ಅಭಿಮಾನ ಪ್ರದರ್ಶಿಸಲು ಈ ಅಧಿವೇಶನ ಪ್ರಮುಖ ಕಾರಣವಾಯಿತು.[೮೩]

ಹೀಗೆ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಈ ಎರಡು ಐತಿಹಾಸಿಕ ಬೆಳಗಾವಿ ವಿಧಾನ ಮಂಡಲ ಅಧಿವೇಶನಗಳು ನೆನೆಗುದಿಗೆ ಬಿದ್ದಿರುವ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತರುವದಕ್ಕೆ ಒಪ್ಪಿಗೆ ನೀಡುವ ಕಾರ್ಯದಲ್ಲಿ ಸಾಕಷ್ಟು ಪ್ರಯೋಜನ ಪಡೆಯಿತು. ಆದರೆ ಈ ಯೋಜನೆಗಳು ಪೂರ್ಣಗೊಂಡು ಜನಸಾಮಾನ್ಯರಿಗೆ ತಲುಪುವ ಕಾರ್ಯವಾಗಬೇಕಿದೆ. ಈ ಯೋಜನೆಗಳು ಬರಿ ಘೋಷಣೆಯಾಗಿ ಉಳಿಯದೆ ಕಾರ್ಯರೂಪದಲ್ಲಿ ಬರಬೇಕು.

೨೦೦೬ ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಎಚ್.ಡಿ.ಕುಮಾರಸ್ವಾಮಿಯವರು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ೧೫೦೦ ಕೋಟಿ ಯೋಜನೆಗಳನ್ನು ಪ್ರಕಟಿಸಿದರು. ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಎಂ.ನಂಜುಡಪ್ಪನವರ ವರದಿಯ ಅನುಷ್ಠಾನಕ್ಕಾಗಿ ಬೆಳಗಾವಿಯಲ್ಲಿಯೇ ವಿಧಾನ ಮಂಡಲ ಅಧಿವೇಶನ ನಡೆಸಿದರು. ಈ ಕಾರ್ಯಕ್ಕೆ ಮತ್ತಷ್ಟು ಬಲ ತಂದಂತೆ ಆಗುತ್ತದೆ ಹಾಗೂ ವರ್ಷದಲ್ಲಿ ಒಂದು ಬಾರಿ ಈ ಭಾಗದಲ್ಲಿ ಅಧಿವೇಶನ ನಡೆದರೆ ಈ ಭಾಗದ ಸಮಸ್ಯೆಗಳನ್ನು ಒಂದೊಂದಾಗಿ ಬಗೆಹರಿಸಲಾಗುತ್ತದೆ ಎಂಬುದನ್ನು ಸ್ವೈಜ ಉತ್ತರ ಕರ್ನಾಟಕದ

ಅಭಿವೃದ್ಧಿಗೆ ಕಾಳಜಿ ತೋರಿಸಿ ಈ ಅಧಿವೇಶನಕ್ಕೆ ಹಸಿರು ನಿಶಾನೆ ತೋರುವ ಮೂಲಕ, ಈ ಮೊದಲು ರಾಜ್ಯದ ಯಾವುದೇ ಸರಕಾರಗಳು ಮತ್ತು ಮುಖ್ಯಮಂತ್ರಿಗಳು ಮಾಡದೇ ಇರುವ ಈ ಮಹತ್ವದ ಸಾಧನೆಯನ್ನು ಎಚ್.ಡಿ.ಕುಮಾರಸ್ವಾಮಿಯವರು ಮಾಡಿದ್ದು,[೮೪] ಅದಕ್ಕೆ ಬೆನ್ನಲುಬಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಯಾವ ತ್ಯಾಗಕ್ಕೂ ಸಿದ್ಧ ಎನ್ನುವ ಮೂಲಕ ಕುಮಾರಸ್ವಾಮಿಯವರಿಗೆ ಸಾಥ ನೀಡಿದ ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೊಸ ದಿಕ್ಕನ್ನು ತೋರಿಸಿದರು. ನಂತರ ಶಾಶ್ವತ ಅಧಿವೇಶನ ಬೆಳಗಾವಿಯಲ್ಲೇ ನಡೆಯಲಿಕ್ಕೆ ಸುವರ್ಣ ಸೌಧ ನಿರ್ಮಾಣ ಕಾರ್ಯವನ್ನು ಸತತ ಪ್ರಯತ್ನದ ಮೂಲಕ ಕಾರ್ಯ ಆರಂಭಿಸಿ ಈ ಭಾಗದ ಜನರ ಕನಸನ್ನು ನನಸಾಗಲು ಪ್ರೇರಣೆ ಒದಗಿಸಿದರು.

ಬೆಳಗಾವಿ ಅಧಿವೇಶನದ ಪರಿಣಾಮಗಳು :

೧. ಉತ್ತರ ಕರ್ನಾಟಕದಲ್ಲಿ ವಿಧಾನ ಮಂಡಲ ಅಧಿವೇಶನ ನಡೆಯಬೇಕೆಂಬ ಜನರ ಬಹುದಿನಗಳ ಕನಸು ಈಡೇರಿದೆ.

೨. ಬೆಳಗಾವಿಯಲ್ಲಿಯೂ ಶಾಶ್ವತವಾಗಿ ವರ್ಷಕ್ಕೆ ಒಂದು ಸಲವಾದರೂ ಅಧಿವೇಶನ ನಡೆಯಬೇಕೆಂಬುದು ಜನರ ಭಾವನೆ. ಈಗ ಅದು ಸುವರ್ಣ ಸೌಧ ನಿರ್ಮಾಣದ ಕಾಮಗಾರಿ ಪ್ರಾರಂಭವಾಗುವ ಮೂಲಕ ಜನರ ಆ ಕನಸು ಈಡೇರುವ ನಿಟ್ಟಿನಲ್ಲಿ ಕಾರ್ಯ ಪ್ರಗತಿಯಲ್ಲಿದೆ.

೩. ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಉತ್ತರ ಕರ್ನಾಟಕದ ಅನೇಕ ನೀರಾವರಿ ಯೋಜನೆಗಳು ಹಾಗೂ ಉತ್ತರ ಕರ್ನಾಟಕದ ಪ್ರಮುಖ ಪಟ್ಟಣಗಳ ಕುಡಿಯುವ ನೀರಿನ ಯೋಜನೆಗಳಿಗೆ ಒಪ್ಪಿಗೆ ಹಾಗೂ ಅನುದಾನ ಈ ಅಧಿವೇಶನದ ಪರಿಣಾಮ ಲಭಿಸಿದೆ. ಇಲ್ಲಿನ ಐತಿಹಾಸಿಕ ಸ್ಥಳಗಳ ಪುನರುಜ್ಜೀವನಕ್ಕೆ ಹಾಗೂ ಉತ್ತರ ಕರ್ನಾಟಕದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಮೂಲಭೂತ ಸಮಸ್ಯೆಗಳಾದ ರಸ್ತೆ, ವಿದ್ಯುತ್, ನೀರು ಹಾಗೂ ಅಗತ್ಯವಾದ ವಿಶ್ವವಿದ್ಯಾಲಯಗಳ ಹಾಗೂ ಕೈಗಾರಿಕೆಗಳ ಸ್ಥಾಪನೆಗೆ, ಈಗಿರುವ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಈ ಅಧಿವೇಶನ ಒಂದು ರೀತಿಯಲ್ಲಿ ದಿಕ್ಸೂಚಿಯಾಯಿತು.

೪. ಗಡಿ ಭಾಗಗಳ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ಮೂಲಕ ಸುಮಾರು ೫೨ ಗಡಿ ತಾಲೂಕುಗಳ ಸಮಗ್ರ ಅಭಿವೃದ್ಧಿಗೆ ಈ ಅಧಿವೇಶನ ಸಹಾಯಕವಾಯಿತು.

೫. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಡಾ. ಎಂ.ನಂಜುಂಡಪ್ಪನವರು ೨೦೦೨ರ ವರದಿಯ ಶಿಫಾರಸ್ಸಿನಂತೆ ೧೧೪ ತಾಲೂಕುಗಳ ಅಭಿವೃದ್ಧಿಗೆ ಹಾಗೂ ಈ ವರದಿ ಅನುಷ್ಠಾನಕ್ಕೆ ಈ ಅಧಿವೇಶನ ಮತ್ತಷ್ಟು ಪ್ರೇರಣೆ ಒದಗಿಸಿತು.

೬. ಬೆಳಗಾವಿ ಗಡಿ ಸಮಸ್ಯೆಯನ್ನು ಮಹಾರಾಷ್ಟ್ರ ಸರಕಾರ ವಿನಾಕಾರಣ ಪದೇ ಪದೇ ಕೆದಕುವ ಮೂಲಕ ಸಂಘರ್ಷಕ್ಕೆ ಎಡೆ ಮಾಡಿರುವದನ್ನು ಇಡೀ ಕರ್ನಾಟಕದ ಎಲ್ಲ ಭಾಗದ ಸದಸ್ಯರು ಒಕ್ಕೊರಲಿನಿಂದ ಮಹಾಜನ

ವರದಿಯೇ ಅಂತಿಮ ಎಂದು ಸದನದಲ್ಲಿ ಸರ್ವಸಮ್ಮತ ನಿರ್ಣಯ ಅಂಗೀಕರಿಸುವ ಮೂಲಕ ಕೇಂದ್ರ ಸರಕಾರಕ್ಕೆ ಸ್ಪಷ್ಟ ಸಂದೇಶ ತಲುಪಿಸಲು ಹಾಗೂ ಕನ್ನಡಿಗರಲ್ಲಿ ಭಾಷೆಯ ಅಭಿಮಾನ ಮೂಡಿಸುವಲ್ಲಿ ತಕ್ಕ ಮಟ್ಟಿಗೆ ಪರಿಣಾಮ ಬೀರಿತು.

೭. ಬೆಳಗಾವಿ ನಗರ ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ೧೦೦ ಕೋಟಿ ರೂ.ಗಳ ಅನೇಕ ಯೋಜನೆಗಳಿಗೆ ಹಣ ಬಿಡುಗಡೆಗೊಳಿಸಿದ ಹಿನ್ನೆಲೆಯಲ್ಲಿ ಬೆಳಗಾವಿ ನಗರದ ಮೂಲಭೂತ ಸೌಕರ್ಯ ಹೆಚ್ಚಿಸಲು ಹಾಗೂ ಜಿಲ್ಲೆಯ ಅನೇಕ ವರ್ಷಗಳ ಜನರ ಬೇಡಿಕೆಗಳನ್ನು ಈಡೇರಿಸುವಲ್ಲಿ ಮಹತ್ವದ ಹೆಜ್ಜೆಗಳನ್ನು ಇರಿಸುವ ಮೂಲಕ ಈ ಅಧಿವೇಶನವು ದಾರಿ ದೀಪವಾದವು.[೮೫]

೮. ಬೆಳಗಾವಿಯಲ್ಲಿಯೇ ಅಧಿವೇಶನ ನಡೆಯುತ್ತಿರುವುದರಿಂದ ಉತ್ತರ ಕರ್ನಾಟಕದ ಜನ ದೂರದ ಬೆಂಗಳೂರಿಗೆ ಹೋಗಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವುದರಿಂದ ಆಗುವ ತೊಂದರೆಗಳನ್ನು ಈ ಅಧಿವೇಶನ ತಪ್ಪಿಸಿತು ಹಾಗೂ ಜನರು ಸಮೀಪದಿಂದ ಅಧಿವೇಶನ ನೋಡುವ ಭಾಗ್ಯ ಜಿಲ್ಲೆಯ ಜನತೆಗೆ ಒದಗಿತು.

೯. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಹಾಗೂ ಪ್ರಾದೇಶಿಕ ಅಸಮಾನತೆ ಎಂಬ ಅಪಸ್ವರವನ್ನು ಭವಿಷತ್ತಿನಲ್ಲಿ ಅಳಿಸಿ ಹಾಕುವಲ್ಲಿ ಈ ಅಧಿವೇಶನವು ಒಂದು ವೇದಿಕೆ ಆಯಿತು. ದಕ್ಷಿಣ ಭಾಗದ ಜನ ಪ್ರತಿನಿಧಿಗಳು ಈ ಭಾಗದಲ್ಲಿ ಅಧಿವೇಶನಕ್ಕಾಗಿಯೇ ಆಗಮಿಸುವ ಮೂಲಕ ಒಂದು ರೀತಿಯ ಭಾವನಾತ್ಮಕ ಸಂಬಂಧ ಗಟ್ಟಿಕೊಳ್ಳಲು ಹಾಗೂ ಸಮಗ್ರ ಕರ್ನಾಟಕ ಒಂದೇ ಎಂಬ ಧ್ವನಿಗೆ ಶಕ್ತಿಗೆ ಬರಲು ಈ ಅಧಿವೇಶನಗಳು ಸ್ಪೂರ್ತಿಯಾದವು.

೧೦. ಈ ಮೇಲಿನ ಹಲವಾರು ಪರಿಣಾಮಗಳನ್ನು ಅವಲೋಕಿಸಿದಾಗ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮುನ್ನುಡಿಯನ್ನು ಬರೆಯಲು ಈ ಅಧಿವೇಶನವನ್ನು ನಡೆಸಲು ಧೈರ್ಯ ಮಾಡಿದ ಅಂದಿನ ಮುಖ್ಯಮಂತ್ರಿ ಶ್ರೀ ಎಚ್.ಡಿ.ಕುಮಾರ ಸ್ವಾಮಿಯವರನ್ನು ಉತ್ತರ ಕರ್ನಾಟಕದ ಜನತೆ ಸದಾ ಹೃದಯ ಪೂರ್ವಕವಾಗಿ ಗೌರವಿಸುವಂತೆ ಮಾಡಿದ್ದು, ಈ ಅಧಿವೇಶನ ಯಶಸ್ವಿಯಾಗಿ ನಡೆಯಲು ತಮ್ಮ ಮನೆಯ ಕಾರ್ಯಕ್ರಮಕ್ಕಿಂತ ಹೆಚ್ಚು ಎಂದು ತಿಳಿದು ಉತ್ತರ ಕರ್ನಾಟಕದ ಭಾಗದ ಅಭಿವೃದ್ಧಿಗೆ ಇದೊಂದು ದಿಕ್ಸೂಚಿ ಆಗಬೇಕೆಂದು ಹಗಲಿರುಳು ಶ್ರಮಿಸಿದ ಡಾ. ಪ್ರಭಾಕರ ಕೋರೆಯವರನ್ನು ಜನತೆ ತಮ್ಮ ಸ್ಮೃತಿ ಪಟಲದಲ್ಲಿ ಸದಾಸ್ಮರಣೀಯರನ್ನಾಗಿಸಿಕೊಂಡಿದ್ದು ಮಾತ್ರ ನಿಜ.

೧೧. ಉತ್ತರ ಕರ್ನಾಟಕದ ಬಹುದಿನಗಳ ಸಮಸ್ಯೆಗಳೆಲ್ಲ ಕೆಲ ದಿನ ಕೆಲ ವರ್ಷಗಳಲ್ಲಿ ಈ ಅಧಿವೇಶನಗಳಿಂದ ಮುಕ್ತಿ ಪಡೆಯುತ್ತವೆ ಎನ್ನುವುದು ನಿಜವಲ್ಲದಿದ್ದರೂ ಆ ನಿಟ್ಟಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ರಾಜಕೀಯ ಹಿತಾಸಕ್ತಿಯನ್ನು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಒಂದು ಶಕ್ತಿಯನ್ನು ತುಂಬುವ ಕಾರ್ಯವಂತೂ ಖಂಡಿತ ಆಯಿತಲ್ಲದೆ ಭವಿಷತ್ತಿನಲ್ಲಿ ಈ ಭಾಗದ ಅಭಿವೃದ್ಧಿಗೆ ಒಂದು ಭದ್ರಬುನಾದಿಯನ್ನು ಹಾಕಿದವು ಎಂಬುದನ್ನು ಮಾತ್ರ ನಾವು ಒಪ್ಪಿಕೊಳ್ಳಲೇಬೇಕು.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಡಾ. ಪ್ರಭಾಕರ ಕೋರೆಯವರ ಕೊಡುಗೆಗಳಲ್ಲಿ ಈ ಐತಿಹಾಸಿಕ ವಿಧಾನ

ಮಂಡಲ ಅಧಿವೇಶನ ಅತೀ ಮಹತ್ವದ್ದು. ಒಂದು ವೇಳೆ ೨೦೦೬ ರಲ್ಲಿಯೇ ಡಾ. ಪ್ರಭಾಕರ ಕೋರೆಯವರು ಈ ಅಧಿವೇಶನಕ್ಕೆ ಸ್ಥಳಾವಕಾಶ ನೀಡದೇ ಹೋಗಿದ್ದಲ್ಲಿ ಇಲ್ಲವೇ ಜವಾಬ್ದಾರಿಯನ್ನು ಹೊತ್ತುಕೊಳ್ಳುವಲ್ಲಿ ಹಿಂದೆ ಸರಿದಿದ್ದರೆ ಖಂಡಿತಾ ಇದು ಸಾಧ್ಯವಿತ್ತೆ ಎನ್ನುವ ಅನುಮಾನ ಕಾಡದೇ ಇರದು. ತಮ್ಮ ಬಾಲ್ಯದಿಂದಲೇ ಉತ್ತರ ಕರ್ನಾಟಕದ ಜನರ ಸಮಸ್ಯೆಗಳನ್ನು ಸಮೀಪದಿಂದ ಕಂಡಿದ್ದ ಶ್ರೀ ಪ್ರಭಾಕರ ಕೋರೆಯವರು ನಂತರ ಇವುಗಳ ಪರಿಹಾರಕ್ಕಾಗಿ ರಾಜ್ಯ ಸಭಾ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ ಸದನದ ಮೂಲಕ ಹಾಗೂ ಸದನದ ಹೊರಗೆ ನಿಂತು ಹಲವು ಸಲ ಸರಕಾರದ ಗಮನ ಸೆಳೆಯುವ ಪ್ರಯತ್ನ ಮಾಡುತ್ತಲೇ ಬಂದಿದ್ದರು. ಈ ಅಧಿವೇಶನಗಳು ಅವರ ಪ್ರಯತ್ನಕ್ಕೆ ಯಶಸ್ಸು ಒದಗಿಸುವ ದೃಷ್ಟಿಯಿಂದ ಬಂದೊದಗಿದ ಒಂದು ಉತ್ತಮ ಅವಕಾಶ ಎಂದು ತಿಳಿದು ಇವುಗಳ ಯಶಸ್ವಿಗೆ ಶ್ರಮಿಸಿದ ಶ್ರೀ ಪ್ರಭಾಕರ ಕೋರೆಯವರು ಈ ಅಧಿವೇಶನದ ಬಗ್ಗೆ ಸ್ವತಃ ಶ್ರೀ ಪ್ರಭಾಕರ ಕೋರೆಯವರು ಪತ್ರಿಕಾ ಸ್ನೇಹಿತರೊಂದಿಗೆ ಹಂಚಿಕೊಂಡ ಅಭಿಪ್ರಾಯ ಹೀಗಿದೆ. ಎರಡನೇ ಬಾರಿ ಇಲ್ಲಿ ಅಧಿವೇಶನ ನಡೆಸುವುದಕ್ಕೆ ಆನಂದವಾಗಿದೆ. ಕೆ.ಎಲ್.ಇ. ಸಂಸ್ಥೆ ಆತಿಥ್ಯ ವಹಿಸಿದ್ದು ಸಂಸ್ಥೆಯ ಕಾರ್ಯಾಧ್ಯಕ್ಷನಾದ ನನ್ನಲ್ಲಿ ಹೆಮ್ಮೆ ಮೂಡಿಸಿದೆ. ಶಾಸಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ವ್ಯವಸ್ಥೆ ಮಾಡಿದ್ದು, ಮನೆಯಿಂದ ಹೊರಗೆ ಇದ್ದೇನೆ ಎಂಬ ಭಾವನೆ ಬರದಂತಹ ವ್ಯವಸ್ಥೆ ಇಲ್ಲಿದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಮೂಲ ಸೌಕರ್ಯ ಒದಗಿಸುವ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪೂರಕವಾಗಿವೆ ಈ ಭಾಗದ ಸಮಸ್ಯೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಗಬೇಕು ಎನ್ನುವದು ನಮ್ಮ ನಂಬಿಕೆ[೮೬] ಎನ್ನುವ ಅವರ ಹೇಳಿಕೆಯಿಂದ ಅರ್ಥವಾಗುತ್ತದೆ ಡಾ. ಪ್ರಭಾಕರ ಕೋರೆಯವರು ಉತ್ತರ ಕರ್ನಾಟಕದ ಬಗ್ಗೆ ಹೊಂದಿರುವ ನೈಜ ಕಾಳಜಿ ಎಂತಹದು ಎಂಬುವದನ್ನು ತಿಳಿಸುತ್ತದೆ. ಡಾ. ಪ್ರಭಾಕರ ಕೋರೆಯವರು ತಮ್ಮ ಪ್ರದೇಶದ ಅಭಿವೃದ್ಧಿ ಬಗ್ಗೆ ಹೊಂದಿರುವ ಕಳಕಳಿಯಿಂದಾಗಿ ಮುಂದಿನ ಪೀಳಿಗೆಗೆ ಆದರ್ಶ ಪ್ರಾಯರಾಗಿ ನಿಲ್ಲುತ್ತಾರೆ.

ಡಾ. ಪ್ರಭಾಕರ ಕೋರೆಯವರ ನಾಯಕತ್ವದಲ್ಲಿ ಯಶಸ್ವಿಗೊಂಡ ಸಮಾವೇಶಗಳು:

ಡಾ. ಪ್ರಭಾಕರ ಕೋರೆಯವರು ವಿದ್ಯಾರ್ಥಿ ದಿಸೆಯಲ್ಲಿಯೇ ನಾಯಕತ್ವ ವಹಿಸಿಕೊಂಡು ಕಾಲೇಜಿನ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಸಂಘಟಿಸಲು ಶ್ರಮಿಸಿದವರು. ಸಮ್ಮೇಳನಗಳನ್ನು ಸಂಘಟಿಸುವ ಕಲೆಯನ್ನು ಕೋರೆಯವರು ಬಾಲ್ಯದಲ್ಲಿಯೇ ಕರಗತ ಮಾಡಿಕೊಂಡವರು. ನಂತರ ತಮ್ಮ ರಾಜಕೀಯ ಜೀವನದ ಪ್ರಾರಂಭದಿಂದ ಅನೇಕ ಸಮಾವೇಶಗಳನ್ನು ತಮ್ಮ ನಾಯಕತ್ವದಲ್ಲಿ ಯಶಸ್ವಿಗೊಳಿಸಿದವರು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೆಯಾದ ವಿಶೇಷ ಛಾಪು ಮೂಡಿಸಿದವರು. ೧೯೯೨ ರಲ್ಲಿ ಬೆಳಗಾವಿಯ ಅಖಿಲ ಭಾರತ ವೀರಶೈವ ಮಹಾಸಭೆಯ ೨೧ನೇ ಮಹಾ ಅಧಿವೇಶನವನ್ನು ಅಂದಿನ ಉಪರಾಷ್ಟ್ರಪತಿಗಳಾದ ಡಾ. ಶಂಕರ ದಯಾಳ ಶರ್ಮಾರವರನ್ನು ಆಹ್ವಾನಿಸುವ ಮೂಲಕ ಕಾರ್ಯಕ್ರಮವನ್ನು ಅದ್ದೂರಿಯಾಗಿ ಸಂಘಟಿಸಿದರು.

ಈ ಅಧಿವೇಶನವು ವೀರಶೈವ ಒಳಪಂಗಡದ ಜಾತಿಗಳಲ್ಲಿ ಬಲವಾಗುತ್ತಿದ್ದ ಉಪ ಜಾತಿಗಳ ಬಗ್ಗೆ ಅಭಿಮಾನ

ಹೆಚ್ಚಾಗುತ್ತಿರುವುದಕ್ಕೆ ಪ್ರತಿಯಾಗಿ ಮತ್ತೆ ವೀರಶೈವ ಸಮಾಜ ಒಂದೆ ಎಂಬ ಭಾವನೆ ಬಲಗೊಳ್ಳಲು ಈ ಅಧಿವೇಶನ ಕಾರಣವಾಯಿತು. ಆ ನಿಟ್ಟಿನಲ್ಲಿ ಕೋರೆಯವರು ತಕ್ಕ ಮಟ್ಟಿಗೆ ಯಶಸ್ವಿಯಾದರು. ವೀರಶೈವ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅವುಗಳ ಪರಿಹಾರಕ್ಕೆ ಮಾಡಬೇಕಾದ ಕಾರ್ಯಗಳ ಬಗ್ಗೆಯೂ ಈ ಮಹಾ ಅಧಿವೇಶನ ಸಾಕಷ್ಟು ಪ್ರಭಾವ ಬೀರಿತು.[೮೭]

೧೯೯೭ ರಲ್ಲಿ ಅಂಕಲಿ ಎಜುಕೇಷನ್ ಸೊಸೈಟಿಯ ಸೀಲ್ವರ ಜ್ಯುಬಲಿ ಸಮಾರಂಭ ಪ್ರಭಾಕರ ಕೋರೆಯವರ ೫೦ನೇ ವರ್ಷದ ಹುಟ್ಟುಹಬ್ಬ ಹಾಗೂ ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ೫೦ ವರ್ಷಗಳ ಸಂಭ್ರಮ ಆಚರಣೆ ಹಾಗೂ ಅಂಕಲಿ ಕೋ-ಆಪರೇಟಿವ್ ಸೊಸೈಟಿಯ ಸ್ಥಾಪನೆ ಎಲ್ಲ ಕಾರ್ಯಕ್ರಮಗಳನ್ನು ಒಟ್ಟಾಗಿ ೧೨ ನವ್ಹೆಂಬರ್ ೧೯೯೭ ರಂದು ನಡೆಸಲು ನಿರ್ಣಯಿಸಲಾಯಿತು. ಇದರ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ಪ್ರಭಾಕರ ಕೋರೆಯವರು ವಹಿಸಿಕೊಂಡರು. ಆ ಕಾರ್ಯಕ್ರಮಕ್ಕೆ ಅಂಕಲಿ ಗ್ರಾಮವನ್ನು ತಳಿರು-ತೋರಣ ಸ್ವಾಗತ ಕಮಾನುಗಳಿಂದ ಸಿಂಗರಿಸಲಾಗಿತ್ತು. ಆ ದಿನ ಕಾರ್ಯಕ್ರಮಕ್ಕೆ ವಿಶಾಲವಾದ ಪೆಂಡಾಲನ್ನು ಅಂಕಲಿ ಎಜ್ಯುಕೇಷನ್ ಸೊಸೈಟಿಯ ಶಾಲಾ ಅವರಣದಲ್ಲಿ ನಿರ್ಮಿಸಲಾಗಿತ್ತು.

ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಗಣ್ಯ ನಾಯಕರು ಸಭೆಗೆ ಆಗಮಿಸಿ ಈ ಅದ್ಭುತ ಸ್ಮರಣೀಯ ಸಮಾರಂಭವನ್ನು ಕಂಡು ಶ್ರೀ ಪ್ರಭಾಕರ ಕೋರೆಯವರಿಗೆ ೫೦ ವರ್ಷಗಳು ತುಂಬಿದ ಸಂದರ್ಭದಲ್ಲಿ ಶ್ರೀ ಪ್ರಭಾಕರ ಕೋರೆಯವರು ಸಾಧಿಸಿದ ಸಾಧನೆಗಳ ಗುಣಗಾನ ಮಾಡಿದರು. ಹೆಚ್ಚಿನ ಸಾಧನೆ ಮಾಡಲೆಂದು ಶುಭ ಕೋರಿದರು. ಸುಮಾರು ೨೫ ಸಾವಿರ ಜನ ಈ ಸಮಾರಂಭದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.[೮೮]

೧೯೯೯ ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ೫ನೇ ಶರಣ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಶ್ರೀ ಪ್ರಭಾಕರ ಕೋರೆಯವರು ನಾಡಿನ ಶರಣ ಸಾಹಿತ್ಯ ಪ್ರಚಾರಕ್ಕೆ ಇಂದಿನ ಯುಗದಲ್ಲಿ ಶರಣ ಸಾಹಿತ್ಯ ಬಸವಾದಿ ಶಿವ ಶರಣರ ವಿಚಾರಗಳ ಪ್ರಸ್ತುತಿಗಾಗಿ ಈ ಸಮ್ಮೇಳನವನ್ನು ಮಾಡುವ ಮೂಲಕ, ವಚನ ಸಾಹಿತ್ಯ, ಶರಣರ ವಿಚಾರಗಳು ಇಂದಿನ ಆಧುನಿಕ ಮಾನವ ಜೀವನಕ್ಕೆ ಎಷ್ಟೊಂದು ಅವಶ್ಯಕವಾದವುಗಳೆಂದು ಚಿಂತನೆ ಹಾಗೂ ಅವಲೋಕನಕ್ಕೆ ದಾರಿ ಮಾಡಿಕೊಟ್ಟರು. ಡಾ. ಪ್ರಭಾಕರ ಕೋರೆಯವರು ಶಿವ ಶರಣರ ಉದಾತ್ತ ಆದರ್ಶಗಳ ಪ್ರಚಾರಕ್ಕೆ ಕೈ ಜೋಡಿಸುವ ಮೂಲಕ ವಿಶಿಷ್ಟ ರಾಜಕೀಯ ನಾಯಕರೆನಿಸಿಕೊಂಡರು.

೨೦೦೧ ರಲ್ಲಿ ಕೊಣ್ಣೂರು ನಾಟಕ ಕಂಪನಿಯ ಶತಮಾನೋತ್ಸವ ಕಾರ್ಯಕ್ರಮವನ್ನು ತಮ್ಮ ನೇತೃತ್ವದಲ್ಲಿಯೇ ಯಶಸ್ವಿಗೊಳಿಸಿದರು. ೨೦೦೩ ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿ ಕನ್ನಡದ ತೇರನ್ನು ಎಳೆಯುವ ಮೂಲಕ ನಾಡು-ನುಡಿಯ ಪ್ರೇಮವನ್ನು ಮೆರೆದರು. ಕನ್ನಡ ಸ್ವಾರಸ್ವತ ಲೋಕವೇ ಅಚ್ಚರಿ ಪಡುವಂತೆ ಕನ್ನಡ ಜಾತ್ರೆಯನ್ನು ಅದ್ದೂರಿಯಾಗಿ ಸಂಘಟನೆ ಮಾಡುವ

ಮೂಲಕ ಬೆಳಗಾವಿಯ ಗಡಿ ಭಾಗದಲ್ಲಿ ಕನ್ನಡದ ಕಂಪನ್ನು ಮತ್ತಷ್ಟು ಗಟ್ಟಿಗೊಳಿಸಲು ಹಾಗೂ ಕನ್ನಡ ದೀಪವನ್ನು ಗಡಿಯಲ್ಲಿ ಬೆಳಗಲು ಕಾರಣರಾದರು. ಜೊತೆಗೆ ತಮ್ಮ ನಾಡು–ನುಡಿ ಸಾಹಿತ್ಯದ ಅಭಿಮಾನವನ್ನು ತೋರಿಸಿದರು.

೨೦೦೬ ಮತ್ತು ೨೦೦೯ ರಲ್ಲಿ ಬೆಳಗಾವಿಯಲ್ಲಿ ಐತಿಹಾಸಿಕ ವಿಧಾನ ಮಂಡಲ ಅಧಿವೇಶನವನ್ನು ತಮ್ಮ ನೇತೃತ್ವದಲ್ಲಿಯೇ ಅದ್ದೂರಿಯಾಗಿ ಸಂಘಟಿಸಿ ಅಧಿವೇಶನದ ಯಶಸ್ವಿಗೆ ಶ್ರಮಿಸಿದ ಕೋರೆಯವರು ಆ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಶ್ರೀಕಾರ ಹಾಕಿದರು.[೯]

ಹೀಗೆ ತಮ್ಮ ನಾಯಕತ್ವದಲ್ಲಿಯೇ ತಾವೊಬ್ಬ ಚತುರ ಸಂಘಟನಾಕಾರ ಎಂಬುದನ್ನು ತೋರಿಸಿದರು ಸಮಾಜದ ವಿವಿಧ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಇತರ ರಾಜಕೀಯ ನಾಯಕರಿಗಿಂತ ತಾವು ಭಿನ್ನ ಎಂದು ಮನವರಿಕೆ ಮಾಡಿಕೊಟ್ಟರು. ಅಂತೆಯೇ ತಮ್ಮ ವ್ಯಕ್ತಿತ್ವದಿಂದ ಕೋರೆಯವರು ಇತರ ರಾಜಕೀಯ ನಾಯಕರಿಗೆ ಆದರ್ಶ ಪ್ರಾಯವಾಗಿದ್ದಾರೆ.

ಡಾ. ಪ್ರಭಾಕರ ಕೋರೆಯವರು ಸದಾ ಜನರ ಮಧ್ಯ ಇರುವ ಹಾಗೂ ಜನರ ಸಮಸ್ಯೆಗಳನ್ನು ಅಲಿಸುವ ನೈಜ ಜನನಾಯಕರೆನಿಸಿದವರು ಸುತ್ತಲಿನ ಹತ್ತಾರು ಹಳ್ಳಿಯ ಜನರ ನ್ಯಾಯ ಪಂಚಾಯತ್ ಮಾಡುವರು. ಅವರ ತಂದೆಯವರಾದ ಲಿಂ. ಬಸವಪ್ರಭು ಕೋರೆ ಹಾಗೂ ಸಹೋದರ ಲಿಂ.ಚಿದಾನಂದ ಕೋರೆಯವರಿಂದಲೂ ಬಂದ ಪದ್ಧತಿ ಇದಾಗಿತ್ತು.

ಈ ಪದ್ಧತಿಯನ್ನು ಈಗಲೂ ಶ್ರೀ ಪ್ರಭಾಕರ ಕೋರೆಯವರು ಮುಂದೆವರೆಸಿಕೊಂಡು ನಡೆದಿದ್ದಾರೆ. ಜನರ ಕೌಟಂಬಿಕ ಕಲಹ, ಅಣ್ಣ–ತಮ್ಮಂದಿರ ಸಮಸ್ಯೆ, ಜಮೀನಿನ ತಕರಾರು, ಇತ್ಯಾದಿ ಜನರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸುವ ಕಾರ್ಯ ಮಾಡುತ್ತಿರುವದಲ್ಲದೆ. ಸಹಾಯ ಕೇಳಿ ಬಂದವರಿಗೂ ಆತ್ಮೀಯತೆಯಿಂದ ನೋಡಿ ಸಮಾಧಾನವಾಗಿ ಅವರ ಸಮಸ್ಯೆ ಆಲಿಸಿ ಪರಿಹಾರ ಸೂಚಿಸುತ್ತಾರೆ. ಶ್ರೀ ಪ್ರಭಾಕರ ಕೋರೆಯವರು ಮನೆಯಲ್ಲಿದ್ದರೆ ಸದಾ ಜನಜಂಗುಳಿಯಿಂದ ಮನೆ ತುಂಬಿರುತ್ತದೆ. ಹೀಗೆ ಜನರ ಮಧ್ಯೆ ಇದ್ದುಕೊಂಡೆ ತಮ್ಮ ಜೀವನ ಕಳೆಯುತ್ತಾರೆ ಎಲ್ಲ ಜನರ ಪ್ರತಿಯೊಂದು ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ.

ಜಾತ್ಯಾತೀತ ನಾಯಕತ್ವ :

"ಭಾರತದ ಸಂವಿಧಾನದ ಘೋಷಣೆಯಂತೆ ಭಾರತವು ಜಾತ್ಯಾತೀತ ರಾಷ್ಟ್ರವಾಗಿದೆ. ಎಲ್ಲ ಧರ್ಮ. ಜಾತಿ ಮತ್ತು ಸಮುದಾಯಗಳಿಗೆ ಇಲ್ಲಿ ಸಮಾನ ಸ್ಥಾನಮಾನಗಳಿವೆ. ಧರ್ಮದ ಆಧಾರದ ಮೇಲೆ ಭಾರತವು ನಿರ್ಮಾಣವಾಗಿಲ್ಲ. ಭಾರತದಲ್ಲಿ ಯಾವ ಧರ್ಮವು ಶ್ರೇಷ್ಠವಲ್ಲ. ಕನಿಷ್ಠವೂ ಅಲ್ಲ. ಎಲ್ಲರಿಗೆ ಅವರವರ ಧರ್ಮ. ಜಾತಿ ಮತ್ತು ಭಾಷೆಗಳನ್ನು ಗೌರವಯುತವಾಗಿ ಬೆಳೆಸುವ ಹಾಗೂ ಉಳಿಸುವ ಮುಕ್ತ ಸ್ವಾತಂತ್ರ್ಯವನ್ನು ಕಲ್ಪಿಸಲಾಗಿದೆ. ಜೊತೆಗೆ ಇತರ ಧರ್ಮಗಳನ್ನು ಗೌರವಿಸುವ ಭಾವನೆಗಳನ್ನು ಬೆಳೆಸಿಕೊಳ್ಳಲು ಅನುಕೂಲತೆಗಳಿವೆ" ಭಾರತವು ಜಾತ್ಯಾತೀತ

ಸಿದ್ಧಾಂತಕ್ಕೆ ಉತ್ತಮ ನಿದರ್ಶನವಾಗಿದೆ.

'ನಿಮ್ಮ ಸಾವಿನ ನಂತರವು ನಿಮ್ಮನ್ನು ಜನರು ಮರೆಯಲಾಗದೆ ಉಳಿಯುವಂತಾಗಲು ಓದಲು ಅರ್ಹವಾದಂತಹದನ್ನು ಬರೆಯಿರಿ ಅಥವಾ ಬರೆಯಲು ಅರ್ಹವಾದಂತಹ ಕಾರ್ಯವನ್ನಾದರು ಮಾಡಿರಿ' ಎಂಬ ಅನುಭವದ ಮಾತನ್ನು ಹೇಳಿದ ಅಮೇರಿಕೆಯ ಬೆಂಜಮಿನ್ ಫ್ರ್ಯಾಂಕಲಿನ್‌ರವರ ವಿಚಾರಗಳು ಶ್ರೀ ಪ್ರಭಾಕರ ಕೋರೆಯವರ ನಾಯಕತ್ವಕ್ಕೆ ಸ್ಪಷ್ಟವಾಗಿ ಅನ್ವಯವಾಗುತ್ತವೆ. ಅವರ ಉನ್ನತ ಮೌಲ್ಯಗಳನ್ನು ಅಳವಡಿಸಿಕೊಂಡು ರಾಜಕೀಯ ನಾಯಕರಾಗಿ ಬೆಳೆಯಲು ಅರ್ಹವಾದಂತಹ ಸಾಧನೆ ಮಾಡಿದವರ ಸಾಲಿಗೆ ಸೇರುತ್ತಾರೆ.

ಶ್ರೀ ಪ್ರಭಾಕರ ಕೋರೆಯವರು ಮೇಲ್ವರ್ಗದ ವೀರಶೈವ ಲಿಂಗಾಯತರು. ಆದರೆ ಅವರು ತಮ್ಮನ್ನು ಒಬ್ಬ ಲಿಂಗಾಯತ ಸಮುದಾಯದ ನಾಯಕ ಎಂದು ತೋರಿಸಿಕೊಂಡವರಲ್ಲ, ಕೋರೆಯವರು ಧರ್ಮ, ಜಾತಿ ಮತ್ತು ಸಮುದಾಯಗಳ ಜನರನ್ನು ಮಾನವೀಯ ಅನುಕಂಪದಿಂದ ಕಂಡವರು.

ಬಡವ – ಶ್ರೀಮತ, ಸಣ್ಣವರು–ದೊಡ್ಡವರು ಎಂಬ ಯಾವುದೇ ಬೇದ–ಭಾವ ಮಾಡದೇ ಎಲ್ಲರ ಏಳ್ಗೆಗಾಗಿ ದುಡಿದವರು. ನಿರ್ಮಲ ಮನಸ್ಸುಳ್ಳ ಎಲ್ಲವನ್ನು ಶುಭ್ರವಾಗಿಯೇ ಕಾಣುವ ವ್ಯಕ್ತಿಯಾಗಿರುತ್ತಾರೆಂಬ ಅನುಭವದ ಮಾತು ಅವರಿಗೆ ಅಕ್ಷರಶಃ ಒಪ್ಪುವಂತಹದಾಗಿದೆ. ಅವರು ತಮ್ಮ ಜೀವನದಲ್ಲಿ ಜಾತಿಗಾಗಿ ಹೋರಾಟಮಾಡಿದವರಲ್ಲ. ನೀತಿಗಾಗಿ, ನ್ಯಾಯಕ್ಕಾಗಿ ಹೋರಾಟ ಮಾಡುತ್ತಾ ಜಾತ್ಯಾತೀತ ನಾಯಕರೆನಿಸಿಕೊಂಡವರು.[೬೦]

ಭಾರತದಲ್ಲಿ ಕಂಡು ಬರುವ ಹಿಂದು, ಮುಸ್ಲಿಂ, ಜೈನ, ಕ್ರೈಸ್ತ ಎಲ್ಲ ಧರ್ಮೀಯರನ್ನು ಹಾಗೇ ಪರಿಶಿಷ್ಟ ಜಾತಿ, ಜನಾಂಗದವರನ್ನು ಕೂಡಾ ಸಮಾನ ದೃಷ್ಟಿ ಕೋನದಿಂದ ನೋಡುತ್ತಿರುವ ಶ್ರೀ ಪ್ರಭಾಕರ ಕೋರೆಯವರು ಆಕಸ್ಮಿಕ ಘಟನೆಯಲ್ಲಿ ಸೋದರ ಸಂಬಂಧಿಯಿಂದ ಗುಂಡೇಟಿಗೆ ತುತ್ತಾಗಿ ಸಾವು ಬದುಕಿನ ಮಧ್ಯೆ ಕೆ.ಎಲ್.ಇ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯಾದ್ಯಂತ ಮಸೀದಿ ಮತ್ತು ಚರ್ಚಗಳಲ್ಲಿ ಮುಸ್ಲಿಂ ಹಾಗೂ ಕ್ರೈಸ್ತ ಬಾಂಧವರು ಅವರು ಬದುಕಿ ಬರಲಿ ಎಂದು ಪ್ರಾರ್ಥಿಸಿದ್ದನ್ನು ಕಂಡಾಗ ನಿಜವಾಗಿ ಅವರ ಬಗ್ಗೆ ಎಲ್ಲ ಧರ್ಮೀಯರು ಎಷ್ಟು ಗೌರವ ಹೊಂದಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಬೆಳಗಾವಿಯ ಮುಸ್ಲಿಂ ಸಮುದಾಯದ ಶ್ರೀ ಎಂ.ಜಿ.ಇಸ್ಮಾಯಿಲ್‌ರವರು ಕೆ.ಎಲ್.ಇ. ಆಸ್ಪತ್ರೆಗೆ ಬಂದು ಬರೆದುಕೊಟ್ಟು ನನ್ನ ದೇಹದ ಯಾವುದೇ ಅಮೂಲ್ಯವಾದ ಭಾಗವನ್ನು ತೆಗೆದು ಶ್ರೀ ಪ್ರಭಾಕರ ಕೋರೆಯವರಿಗೆ ಬೇಕಾದರೆ ಹಾಕಿ ಅವರು ಬದುಕಿ ಉಳಿದರೆ ಸಾಕು ಎಂದು ತಿಳಿಸಿ ತಮ್ಮ ಪ್ರೀತಿಯನ್ನು ಶ್ರೀ ಪ್ರಭಾಕರ ಕೋರೆಯವರ ಮೇಲೆ ತೋರಿಸಿದ ಈ ಅಲ್ಪಸಂಖ್ಯಾತ ಸಮಾಜದ ವ್ಯಕ್ತಿಯಿಂದ ಗೊತ್ತಾಗುತ್ತದೆ.[೬೧] ಕೇವಲ ಹಿಂದೂಗಳಷ್ಟೇ ಅಲ್ಲ ಅವರಲ್ಲಿ ಲಿಂಗಾಯತರಷ್ಟೆ ಅಲ್ಲಿ ಉಳಿದ ಧರ್ಮೀಯವರು ತಮ್ಮ ಪ್ರೀತಿಯನ್ನು ತೋರಿಸಿದ್ದಾರೆ.

ತಮ್ಮ ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಜೀವನದಲ್ಲಿ ಅವರು ಎಂದಿಗೂ ಜಾತೀಯತೆಯನ್ನು

ಮಾಡದೇ ಎಲ್ಲ ವರ್ಗದ ಕೋಮಿನ ಜನರಿಗಾಗಿ ಶ್ರಮಿಸಿದವರು. ತಮ್ಮ ಕೆ.ಎಲ್.ಇ. ಶಿಕ್ಷಣ ಸಂಸ್ಥೆಯಲ್ಲಿ ಅರ್ಹತೆಯನ್ನು ಪ್ರಮುಖ ಮಾನದಂಡವನ್ನಾಗಿಸುವ ಮೂಲಕ ಸಮಾಜದ ಎಲ್ಲ ವರ್ಗದ ಜನರಿಗೆ ಉದ್ಯೋಗ ಅವಕಾಶ ಒದಗಿಸುವ ಮೂಲಕ ಜಾತ್ಯಾತೀತ ತತ್ವವನ್ನು ಎತ್ತಿ ಹಿಡಿದವರು.

ಬದುಕಿನುದ್ದಕ್ಕೂ ಸಮಾಜದ ಎಲ್ಲ ವರ್ಗಗಳ ಹಿತಾಸಕ್ತಿಯನ್ನು ಬಯಸುತ್ತಾ ಅವರ ಏಳ್ಗೆಗೆ ದುಡಿಯುವ ಮೂಲಕ ಶ್ರೀ ಪ್ರಭಾಕರ ಕೋರೆಯವರು ಒಬ್ಬ ಜಾತ್ಯತೀತ ಧರ್ಮ ನಿರಪೇಕ್ಷ ರಾಜಕೀಯ ನಾಯಕರಾಗಿ ರೂಪುಗೊಂಡಿದ್ದಾರೆ.

ಪಕ್ಷಾತೀತ ನಾಯಕರಾಗಿ ಶ್ರೀ ಪ್ರಭಾಕರ ಕೋರೆಯವರು ಪಕ್ಷದ ನಾಯಕರೊಂದಿಗೆ ಹೊಂದಿರುವ ಸಂಬಂಧಗಳು:

ಶ್ರೀ ಪ್ರಭಾಕರ ಕೋರೆಯವರು ಪಕ್ಷಾತೀತ ನಾಯಕರೆನಿಸಿಕೊಂಡವರು. ತಾವು ಕಾಂಗ್ರೆಸ್ ಪಕ್ಷದಿಂದಲೇ ರಾಜಕೀಯ ಜೀವನವನ್ನು ಪ್ರಾರಂಭಿಸಿದರೂ ಸಹ ಚುನಾವಣೆಯಲ್ಲಿ ಮಾತ್ರ ಪಕ್ಷದ ಪರನಿಂತು ಚುನಾವಣೆಯ ನಂತರ ಪಕ್ಷ ರಾಜಕೀಯ ಮಾಡದೇ ಎಲ್ಲರನ್ನೂ ವಿಶ್ವಾಸದಿಂದ ಕಾಣುವ ಈ ಸ್ವಭಾವದಿಂದಲೇ ಅವರನ್ನು ರಾಜಕೀಯದಲ್ಲಿ ಅಜಾತ ಶತ್ರು ಎನ್ನುವ ಪಟ್ಟಕ್ಕೆ ಕರೆತಂದು ನಿಲ್ಲಿಸಿದೆ. ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ಉನ್ನತ ಮಟ್ಟದ ನಾಯಕರವರೆಗೂ ಪಕ್ಷಾತೀತ ಸಂಬಂಧವನ್ನು ಹೊಂದಿದ್ದಾರೆ. ಆ ಮೂಲಕ ಆದರ್ಶ ರಾಜಕೀಯ ಪರಂಪರೆಯನ್ನು ಅನುಸರಿಸುವದರ ಮೂಲಕ ವಿಶಿಷ್ಟ ನಾಯಕರಾಗಿ ಕಾಣಿಸುತ್ತಾರೆ. ಚುನಾವಣೆಗಳು ಮುಗಿದ ನಂತರ ವಿರೋಧ ಪಕ್ಷದ ಕಾರ್ಯಕರ್ತರನ್ನು ಅಷ್ಟೆ ಆತ್ಮೀಯತೆಯಿಂದ ನೋಡುವ ಇವರು ರಾಜಕೀಯವನ್ನು ನೋಡದೆ ಅವರ ಕಷ್ಟಕ್ಕೆ ಸ್ಪಂಧಿಸಿ ಕಾರ್ಯ ಮಾಡಿ ಎಲ್ಲರ ವಿಶ್ವಾಸವನ್ನು ಗಳಿಸುತ್ತಾ ಬಂದಿದ್ದಾರೆ.

ಶ್ರೀ ಪ್ರಭಾಕರ ಕೋರೆಯವರು ಎಲ್ಲ ಪಕ್ಷದ ನಾಯಕರೊಂದಿಗೂ ಆತ್ಮೀಯ ಸಂಬಂಧ ಇಟ್ಟುಕೊಂಡವರು ಮುಖ್ಯವಾಗಿ ಚುನಾವಣೆಯಲ್ಲಿ ಮಾತ್ರ ಪಕ್ಷ ರಾಜಕೀಯ ಮಾಡಬೇಕು. ಚುನಾವಣೆಯ ನಂತರ ಎಲ್ಲರೂ ಕೂಡಿ ಜನರ ಮತ್ತು ಪ್ರದೇಶಗಳ ಅಭಿವೃದ್ಧಿಗೆ ಶ್ರಮಿಸಬೇಕು ಎನ್ನುವ ಉದಾತ್ತ ಆದರ್ಶವನ್ನು ಹೊಂದಿದ್ದರು. ಇಂತಹ ಆದರ್ಶ ಪ್ರಜಾಪಭುತ್ವ ರಾಜಕೀಯ ವ್ಯವಸ್ಥೆಗೆ ಇದು ಒಂದು ಆದರ್ಶಪ್ರಾಯವಾಗಿದೆ.

ಶ್ರೀ ಪ್ರಭಾಕರ ಕೋರೆಯವರ ಈ ಮೌಲ್ಯಗಳನ್ನು ಇಂದಿನ ಭಾರತೀಯ ರಾಜಕೀಯ ನಾಯಕರು ಮೈಗೂಡಿಸಿಕೊಂಡರೆ ಒಂದು ಆದರ್ಶ ಮೌಲ್ಯಾಧಾರಿತ ರಾಜಕೀಯ ವ್ಯವಸ್ಥೆಯನ್ನು ನಿರ್ಮಾಣ ಮಾಡಬಹುದು. ಅಂತೆಯೇ ಜನತಾ ಪರಿವಾರದ ಪಕ್ಷದ ನಾಯಕರುಗಳಾದ ಮಾಜಿ ಪ್ರಧಾನಿ ಎಚ್.ಡಿ.ದೇವೆಗೌಡರು, ಶ್ರೀ ದಿ.ರಾಮಕೃಷ್ಣ ಹೆಗಡೆಯವರು, ಶ್ರೀ ಎಸ್.ಆರ್.ಬೊಮ್ಮಾಯಿಯವರು ಹಾಗೂ ಶ್ರೀ ಎಚ್.ಡಿ.ಕುಮಾರಸ್ವಾಮಿಯವರೊಂದಿಗೆ ಕೂಡಾ ಉತ್ತಮ ಸಂಬಂಧ ಇಟ್ಟುಕೊಂಡು ಬಂದಿದ್ದಾರೆ. ಭಾರತೀಯ ಜನತಾ ಪಕ್ಷದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಜೊತೆಗೆ ಅಷ್ಟೇ ಆತ್ಮೀಯ ಸಂಬಂಧ ಹೊಂದಿರುವ ಶ್ರೀ ಕೋರೆಯವರು ಆ ಮೂಲಕ ಸರಕಾರಗಳು ಬದಲಾದರೂ

ಅಗ್ರಗಣ್ಯ ನಾಯಕರೊಂದಿಗೆ ಉತ್ತಮ ಒಡನಾಟವನ್ನು ಹೊಂದಿದ್ದರು.

ರಾಷ್ಟ್ರಮಟ್ಟದಲ್ಲಿ ಮಾಜಿ ಪ್ರಧಾನಿ ದಿ.ರಾಜೀವಗಾಂಧಿ, ದಿ. ಪಿ.ವಿ.ನರಸಿಂಹರಾವ್, ಶರದ ಪವಾರ, ಮಾಜಿ ಸಚಿವ ಎಸ್.ಬಿ.ಚವ್ಹಾಣ, ಪೃಥ್ವಿರಾಜ ಚವ್ಹಾಣ ರಾಜ್ಯದ ಕಾಂಗ್ರೆಸ್ ನಾಯಕರುಗಳಾದ ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ, ಶ್ರೀ ವೀರೇಂದ್ರ ಪಾಟೀಲ, ಎಸ್.ಬಂಗಾರಪ್ಪ, ವೀರಪ್ಪ ಮೊಯಲಿ, ಜೆ. ಎಚ್. ಪಟೇಲ್, ಎಸ್.ಎಂ.ಕೃಷ್ಣ, ದಿ. ಬಿ.ಶಂಕರಾನಂದ, ಎನ್.ಧರ್ಮಸಿಂಗ ಅವರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ.

ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಇತರೇ ನಾಯಕರುಗಳಾದ ಶ್ರೀ ಎಂ.ರಾಜಶೇಖರ ಮೂರ್ತಿ, ದಿ. ಬಿ.ಕೆ.ಗುಡದಿನ್ನಿ, ಆಸ್ಕರ ಫರ್ನಾಂಡಿಸ್, ಶ್ರೀ ಆರ್.ವಿ.ದೇಶಪಾಂಡೆ, ಶ್ರೀ ಡಿ.ಬಿ.ಚಂದ್ರೇಗೌಡ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀಮತಿ ರಾಣಿ ಸತೀಶ್, ಆಯ್.ಜಿ.ಸನದಿ, ಶ್ರೀ ಕೆ.ಎಚ್.ರಂಗನಾಥ, ಶ್ರೀ ಜಾಫರ್ ಶರೀಫ್, ಎಸ್.ಬಿ.ಸಿದ್ನಾಳ ಇನ್ನೂ ಅನೇಕ ಕಾಂಗ್ರೆಸ್ ನಾಯಕರೊಂದಿಗೆ ಆತ್ಮೀಯ ಸಂಬಂಧವನ್ನು ಕೋರೆಯವರು ಹೊಂದಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷದ ಅಧಿನಾಯಕಿಯಾದ ಶ್ರೀಮತಿ ಸೋನಿಯಾ ಗಾಂಧಿ ಅವರೊಂದಿಗೂ ಆತ್ಮೀಯ ಒಡನಾಟ ಹೊಂದಿದ್ದರು. ಕೋರೆಯವರು ಗುಂಡೇಟಿನಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಪ್ರಧಾನಿ ಮನಮೋಹನ್ ಸಿಂಗ್, ಕಾಂಗ್ರೆಸ್ ಅಧ್ಯಕ್ಷ ಸೋನಿಯಾ ಗಾಂಧಿ ಫೋನ ಮೂಲಕ ಆರೋಗ್ಯ ವಿಚಾರಿಸಿದ್ದನ್ನು ಕಂಡಾಗ ಇವರು ಹೊಂದಿದ ಸಂಬಂಧ ಎಂತಹದು ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಕೇಂದ್ರ ಸಚಿವ ಪ್ರಫುಲ್ ಪಟೇಲ, ಮಾಜಿ ಸಚಿವ ಅನಂತ ಕುಮಾರ, ಶ್ರೀ ಬಸನಗೌಡ ಪಾಟೀಲ ಯತ್ನಾಳ, ಬಾಬಾಗೌಡ ಪಾಟೀಲ, ಮಹಾರಾಷ್ಟ್ರದ ಪ್ರಮುಖ ಸಕ್ಕರೆ ಉದ್ದಿಮೆದಾರ ರತ್ನಪ್ಪಣ್ಣ ಕುಂಬಾರ, ಅಲ್ಲದೆ ರಾಜ್ಯದ ಸಚಿವರಾದ ಶ್ರೀ ಜಗದೀಶ ಶೆಟ್ಟರ್, ಡಾ. ವಿ.ಎಸ್.ಆಚಾರ್ಯ, ಶ್ರೀ ಉಮೇಶ ಕತ್ತಿ, ಕೆ.ಎಸ್.ಈಶ್ವರಪ್ಪ, ಹಾಗೂ ಸಂಸದರಾದ ಸುರೇಶ ಅಂಗಡಿ, ಡಿ.ವಿ.ಸದಾನಂದ ಗೌಡ, ವಿಧಾನ ಪರಿಷತ್ ಸದಸ್ಯರಾದ ವಿಜಯ ಸಂಕೇಶ್ವರ, ಮಾಜಿ ಸಚಿವರಾದ ಎ.ಬಿ.ಪಾಟೀಲ, ಮಲ್ಲಾರಿಗೌಡ ಪಾಟೀಲ, ಶ್ರೀ ಶಶಿಕಾಂತ ನಾಯಕ ಮುಂತಾದವರೊಂದಿಗೆ ಸ್ನೇಹದಿಂದಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಾಗೂ ಬೆಳಗಾವಿಯ ಜಿಲ್ಲೆಯ ಕಾಂಗ್ರೆಸ್, ಬಿಜೆ.ಪಿ. ಜನತಾ ಪಕ್ಷದ ಪರಿವಾರದವರ ಮುಖಂಡರೊಂದಿಗೆ ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು ಹಾಗೂ ಸ್ಥಳೀಯ ಸಂಸ್ಥೆಯ ಜನ ಪ್ರತಿನಿಧಿಗಳೊಂದಿಗೆ ಉತ್ತಮ ಸಂಬಂಧ ಹೊಂದುವ ಮೂಲಕ ಯಾವುದೇ ಪಕ್ಷದ ಸರಕಾರವಿದ್ದರೂ ತಮ್ಮ ಪ್ರದೇಶದ ಮತ್ತು ಕೆ.ಎಲ್.ಇ. ಸಂಸ್ಥೆಯ ಕೆಲಸ ಕಾರ್ಯಗಳು ಸುಗಮವಾಗಿ ಆಗುವಂತೆ ನೋಡಿಕೊಳ್ಳುವರು.[೨]

ವಿಧಾನ ಪರಿಷತ್ತಿನ ಸದಸ್ಯರೊಂದಿಗೆ ಉತ್ತಮ ಸಂಬಂಧವನ್ನು ಹೊಂದುವ ಮೂಲಕ ಪಕ್ಷಾತೀತ ನಾಯಕರಾಗಿ ಎಲ್ಲರ ವಿಶ್ವಾಸಕ್ಕೂ ಶ್ರೀ ಪ್ರಭಾಕರ ಕೋರೆಯವರು ಪಾತ್ರರಾದರು. ಆ ಮೂಲಕ ತಾವು ಪ್ರದೇಶದ ಅಭಿವೃದ್ಧಿಗಾಗಿ ಹಾಗೂ ತಾವು ನೇತೃತ್ವ ವಹಿಸಿದ ಕೆ.ಎಲ್.ಇ. ಸಂಸ್ಥೆಯು ಬೃಹತ್ ಪ್ರಮಾಣದಲ್ಲಿ ಬೆಳೆದು ನಿಲ್ಲಲು ಕಾರಣರಾದರು.

ಕೆ.ಎಲ್.ಇ. ಸಂಸ್ಥೆಯ ಮೂಲಕ ಶಿಕ್ಷಣ ಸುಧಾರಣೆಗಾಗಿ ಹಾಗೂ ಬೆಳವಣಿಗೆಗೆ ಸಹಸ್ರಾರು ಬಡ ವರ್ಗದ

ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮೀಸಲು ಇರಿಸುವ ಮೂಲಕ ತಮ್ಮ ರಾಜಕೀಯ ಜೀವನದಲ್ಲಿ ಉನ್ನತ ಸ್ಥಾನದವರೆಗೆ ತಲುಪುವ ಅವಕಾಶದಿಂದ ವಂಚಿತರಾದ ಶ್ರೀ ಪ್ರಭಾಕರ ಕೋರೆಯವರು ರಾಜಕೀಯವನ್ನು ಕೇವಲ ಅಧಿಕಾರಕ್ಕಾಗಿ ಬಳಸಿಕೊಳ್ಳುವಲ್ಲಿ ಕೋರೆಯವರು ರಾಜಕೀಯವನ್ನು ಶೈಕ್ಷಣಿಕ ಹಾಗೂ ಸಮಾಜದ ಅಭಿವೃದ್ಧಿಗೆ ಬಳಸಿಕೊಂಡು ವಿಶೇಷ ಆದರ್ಶಪ್ರಾಯ ರಾಜಕೀಯ ನಾಯಕರೆನಿಸಿಕೊಂಡರು.

ಕೋರೆಯವರು ಇಂದು ರಾಜಕೀಯದಲ್ಲಿ ಹಲವು ಮಹತ್ವದ ಹುದ್ದೆಗಳನ್ನು ಪಡೆಯಬಹುದಿತ್ತು. ಆದರೆ ಅವರು ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ನಗರ, ಗ್ರಾಮೀಣ ಪ್ರದೇಶದ ಬಡ ಮಧ್ಯಮ ವರ್ಗದ ಮಕ್ಕಳಿಗಾಗಿಯೇ ವಿವಿಧ ಬಗೆಯ ವೃತ್ತಿ ಆಧಾರಿತ ಕೋರ್ಸುಗಳ ಶಿಕ್ಷಣ ದೊರಕಿಸಿಕೊಡಬೇಕು. ಆ ಮೂಲಕ ಸಮಾಜದ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಉನ್ನತಿ ಸಾಧಿಸಬೇಕು ಎನ್ನುವ ಉದಾತ್ತ ಗುರಿಯನ್ನು ಸಾಧಿಸಿದವರು.

ಪ್ರಭಾಕರ ಕೋರೆಯವರು ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳ ಅಭಿವೃದ್ಧಿಗೆ ತಮ್ಮ ರಾಜಕೀಯದಲ್ಲಿ ಏರಬೇಕಾದ ಸ್ಥಾನಕ್ಕೆ ತಲುಪದೇ ಇದ್ದರೂ, ಸಮಾಜದಲ್ಲಿ ಶಾಶ್ವತವಾದ ಸ್ಥಾನವನ್ನು ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಣೆಯಿಂದ ಪಡೆದುಕೊಂಡಿದ್ದಾರೆ. ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಣೆಗಾಗಿ ರಾಜಕೀಯವನ್ನು ಬಳಸಿಕೊಂಡವರು. ರಾಜಕೀಯ ಅಧಿಕಾರದಿಂದ ಏರಬೇಕಾದ ಉನ್ನತ ಹುದ್ದೆಗಳನ್ನು ತ್ಯಾಗ ಮಾಡಿದವರೆಂದೇ ಹೇಳಬಹುದು.

ಶ್ರೀ ಪ್ರಭಾಕರ ಕೋರೆಯವರು ಬೆಳೆಸಿದ ಅನೇಕ ಜನ ನಾಯಕರು ರಾಜ್ಯದಲ್ಲಿ ಸಚಿವರಾಗಿ ರಾಜಕೀಯವಾಗಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಶ್ರೀ ಕೋರೆಯವರ ವ್ಯಕ್ತಿತ್ವಕ್ಕೆ ತಕ್ಕುದಾದ ರಾಜಕೀಯ ಸ್ಥಾನಮಾನ ಸಿಗಲಿಲ್ಲ ಎನ್ನುವ ಬೇಸರ ಎಲ್ಲ ಅಭಿಮಾನಿಗಳದ್ದು.

ಕರ್ನಾಟಕ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಕೆಲ ನಾಯಕರು ಅರ್ಹತೆ ಹೊಂದಿದ್ದರೂ ಉನ್ನತ ರಾಜಕೀಯ ಸ್ಥಾನಮಾನ ಸಿಗದೇ ಅವಕಾಶದಿಂದ ವಂಚಿತರಾದ ಹಲವು ನಾಯಕರ ಸಾಲಿನಲ್ಲಿ ಶ್ರೀ ಪ್ರಭಾಕರ ಕೋರೆಯವರು ನಿಲ್ಲುತ್ತಾರೆ.

ಡಾ. ಪ್ರಭಾಕರ ಕೋರೆಯವರ ಸಂದರ್ಶನ :

ಪ್ರಶ್ನೆ-೧: ನಿಮ್ಮ ರಾಜಕೀಯ ಪ್ರವೇಶಕ್ಕೆ ಪ್ರೇರಣೆ ಏನು?

ಉತ್ತರ : ನನಗೆ ರಾಜಕೀಯ ಕ್ಷೇತ್ರ ಹೊಸದಲ್ಲ, ತಂದೆಯವರು ಸ್ವಾತಂತ್ರ ಹೋರಾಟಗಾರರು ಹಾಗೂ ಸುತ್ತಲಿನ ಹತ್ತಾರು ಹಳ್ಳಿಯ ಜನರ ವ್ಯಾಜ್ಯಗಳನ್ನು ಬಗೆಹರಿಸುತ್ತಿದ್ದರು. ಅತ್ತ ನನ್ನ ತಾಯಿಯ ಮನೆತನದವರು ರಾಯಬಾಗದ ಪಾಟೀಲರು ಗೌಡರ ಮನೆತನ ಅಲ್ಲಿ ಆ ಕುಟುಂಬ ಊರಿಗೆ ಪ್ರಮುಖವಾಗಿತ್ತು. ರಾಷ್ಟ್ರದ ಹಾಗೂ ರಾಜ್ಯದ ಹಲವು ಜನ ರಾಜಕೀಯ ನಾಯಕರು ಭೇಟಿ ಕೊಡುತ್ತಿದ್ದಾಗ ಅವರ ಸಂಪರ್ಕ

ನನಗಾಯಿತು. ನಂತರ ಅಣ್ಣ ಚಿದಾನಂದ ಕೋರೆಯವರ ರಾಜಕೀಯ ಜೀವನಕ್ಕೆ ಬೆನ್ನಲುಬು ಆಗಿ ಕಾರ್ಯ ಮಾಡಿದೆ. ಅವರ ನಿಧನದ ನಂತರ ಜನರ ಒತ್ತಾಯದ ಮೇಲೆ ರಾಜಕೀಯ ರಂಗವನ್ನು ಪ್ರವೇಶಿಸಬೇಕಾಯಿತು. ನಂತರ ಕೆ.ಎಲ್.ಇ. ಸಂಸ್ಥೆಯ ಅಧ್ಯಕ್ಷಗಿರಿಯ ಸ್ಥಾನದ ಚುನಾವಣೆಯಲ್ಲಿ ಬಂದ ವಿಜಯವು ಮತ್ತಷ್ಟು ರಾಜಕೀಯ ರಂಗ ಆಕರ್ಷಿಸುವಂತೆ ಮಾಡಿತು.

ಪ್ರಶ್ನೆ–೨ : ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ನಿಮ್ಮ ನಿಲುವು ಏನು?

ಉತ್ತರ : ಮೊದಲಿನಿಂದಲೂ ನಾನು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಯಾಗಬೇಕು ಎನ್ನುವ ಮನೋಭಾವನೆಯನ್ನು ಇಟ್ಟುಕೊಂಡವನು. ಆ ದಿಶೆಯಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಲೇ ಬಂದವನು. ರಾಜ್ಯಸಭೆ ಸದಸ್ಯನಾಗಿದ್ದಾಗ ಸಂಸತ್ತಿನಲ್ಲಿ ಹಾಗೂ ಕೇಂದ್ರ ಸರಕಾರದ ಮಟ್ಟದಲ್ಲಿ ಹಲವಾರು ಸಚಿವರನ್ನು ಕಂಡು ಈ ಕುರಿತು ಮನವರಿಕೆ ಮಾಡುತ್ತಲೇ ಇರುವೆ. ವಿಧಾನ ಪರಿಷತ್ತ ಸದಸ್ಯನಾಗಿ ರಾಜ್ಯ ಶಾಸನ ಸಭೆಯಲ್ಲೂ ಈ ವಿಷಯ ಕುರಿತು ಹಲವಾರು ಬಾರಿ ಸದನದ ಒಳಗೆ ಮತ್ತು ಹೊರಗೆ ಧ್ವನಿ ಎತ್ತಿದ್ದೇನೆ. ನಂಜುಂಡಪ್ಪನವರ ವರದಿಯ ಅನುಷ್ಠಾನಕ್ಕೆ ಪ್ರಯತ್ನಿಸಿದ ಫಲ ಎನ್ನುವಂತೆ ಅಂದಿನ ಸಮ್ಮಿಶ್ರ ಸರ್ಕಾರ ೨೦೦೬ ರಲ್ಲಿ ಬೆಳಗಾವಿಯಲ್ಲಿ ಐತಿಹಾಸಿಕ ಅಧಿವೇಶನ ಮಾಡಲು ನಿರ್ಣಯಿಸಿದಾಗ ಅತೀ ಸಂತೋಷದಿಂದ ಒಪ್ಪಿಕೊಂಡು ಅದು ಯಶಸ್ವಿಯಾಗುವಂತೆ ಶ್ರಮಿಸಿದೆ. ಕಾರಣ ಇದರಿಂದ ಈ ಭಾಗದ ಸಮಸ್ಯೆಗಳನ್ನು ಬಗೆಹರಿಸುವ ವಿಶ್ವಾಸ. ಈ ಕುರಿತು ನಾನು ಹಲವು ಸಲ ಪ್ರಯತ್ನಿಸಿದ್ದೆ. ಕೊನೆಗೆ ಅಂದಿನ ಮುಖ್ಯಮಂತ್ರಿಗಳಾದ ಎಚ್.ಡಿ.ಕುಮಾರಸ್ವಾಮಿ ಮತ್ತು ಇಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸರಕಾರಗಳು ಬೆಳಗಾವಿಯಲ್ಲಿಯೇ ಶಾಶ್ವತ ಅಧಿವೇಶನ ನಡೆಸಲು ನಿರ್ಣಯಿಸಿದರು. ಇದು ನಮ್ಮ ಸೌಭಾಗ್ಯವೇ ಸರಿ.

ಪ್ರಶ್ನೆ–೩ : ನಿಮ್ಮ ರಾಜಕೀಯ ಜೀವನದಲ್ಲಿನ ಕಹಿ ಘಟನೆಗಳನ್ನು ಹೇಳುವಿರಾ?

ಉತ್ತರ : ೧೯೮೩ ರಲ್ಲಿ ಸದಲಗಾ ವಿಧಾನ ಸಭೆ ಚುನಾವಣೆಗೆಯಲ್ಲಿ ಸ್ವಲ್ಪ ಮತಗಳಿಂದ ಸೋತದ್ದು ಹಾಗೂ ೧೯೮೯ರ ಬೆಳಗಾವಿ ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಮತಗಳ ಅಂತರದ ಸೋಲು. ಸ್ವಲ್ಪ ಮನಸ್ಸಿಗೆ ಬೇಸರ ತರುವ ಫಲಿತಾಂಶಗಳಾದರೂ ಆಗಿನ ಸಮಯದಲ್ಲಿ ಜನತಾ ಪಕ್ಷದ ಗಾಢವಾದ ಪ್ರಭಾವದಲ್ಲಿ ಕಡಿಮೆ ಮತಗಳ ಸೋಲನ್ನು ಕಂಡದ್ದು ಒಂದು ರೀತಿಯಲ್ಲಿ ಆತ್ಮ ವಿಶ್ವಾಸವನ್ನು ಗಟ್ಟಿಗೊಳಿಸಿದವು. ೨೦೦೬ ರಲ್ಲಿ ಚಿಕ್ಕೋಡಿ ವಿಧಾನ ಸಭೆಯಿಂದ ಕಾಂಗ್ರೆಸ್ ಪಕ್ಷದ ಟಿಕೇಟ್ ಬಯಸಿದ್ದೆ ಅದು ಸಹಜವು ಆಗಿತ್ತು. ಇಲ್ಲಿಯವರೆಗೂ ಮೀಸಲು ಕ್ಷೇತ್ರವಾಗಿದ್ದು ಅದು ಈಗ ಸಾಮಾನ್ಯ ಕ್ಷೇತ್ರವಾಗಿ ಬದಲಾಯಿತು. ಆದರೆ ಪಕ್ಷ ನನಗೆ ಅವಕಾಶ ಕಲ್ಪಿಸದೆ ಇರುವುದು ಬಹಳಷ್ಟು ಮನಸ್ಸಿಗೆ ನೋವನ್ನುಂಟು ಮಾಡಿತು. ನಮ್ಮದೇ ಸ್ವಂತ ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ಜನರ ಸೇವೆ ಮಾಡಿದ್ದೆ. ಹೀಗಾಗಿ ಪಕ್ಷ ನನಗೆ

ಅವಕಾಶ ಕೊಡಬೇಕಿತ್ತು. ಹಲವಾರು ವರ್ಷಗಳವರಿಗೆ ಪಕ್ಷದ ಸಂಘಟನೆಗಾಗಿ ಶ್ರಮಿಸಿದ ಬದಲಿಗೆ ಕುತಂತ್ರದಿಂದ ಟಿಕೇಟ ಕೈ ತಪ್ಪಿ ಹೋಗಿದ್ದು ಸಹ ಮನಸ್ಸಿಗೆ ಬೇಸರ ತಂದದ್ದು ನಿಜ. ಇನ್ನೊಂದು ಬೇಸರದ ಸಂಗತಿ ಏನೆಂದರೆ ೨೦೦೬ ರಲ್ಲಿ ವಿಧಾನ ಸಭೆಯ ಟಿಕೇಟ್ ನಿರಾಕರಿಸಿದಾಗ ಮುಂದೆ ಅವಕಾಶ ನಿಡುತ್ತೇವೆಂದು ಪಕ್ಷ ಭರವಸೆ ನೀಡಿತ್ತು. ನಂತರ ೨೦೦೮ ರಲ್ಲಿ ರಾಜ್ಯ ಸಭೆಗೆ ನಡೆದ ಚುನಾವಣೆಗೆ ಕಾಂಗ್ರೆಸ್ ನಾಯಕರು ನನ್ನನ್ನು ಅಲಕ್ಷಿಸಿದ್ದು, ನಿಷ್ಠಾವಂತನಾಗಿ ಪಕ್ಷದ ಸಂಘಟನೆಗೆ ದುಡಿದ ನನಗೆ ಈ ಎರಡು ವಿಶೇಷ ಸಂದರ್ಭಗಳಲ್ಲಿ ಪಕ್ಷ ಪರಿಗಣಿಸದೆ ಇರುವುದು ಸಹಜವಾಗಿ ಅಸಮಾಧಾನಕ್ಕೆ ಕಾರಣವಾಗಿತ್ತು.

ಪ್ರಶ್ನೆ-೪: ಪಕ್ಷಾಂತರ ರಾಜಕೀಯವನ್ನು ವಿರೋಧಿಸುತ್ತಿದ್ದ ತಾವುಗಳು ಈಗ ಪಕ್ಷಾಂತರಿ ಎಂಬ ಹಣೆಪಟ್ಟ ಕಟ್ಟಿಕೊಂಡಿದ್ದು ಸರಿಯೇ?

ಉತ್ತರ : ಹೌದು ನಾನು ಮೊದಲಿನಿಂದಲೂ ಒಂದೇ ಪಕ್ಷಕ್ಕೆ ನಿಷ್ಠೆ ಹೊಂದಿದವನು. ಆದರೆ ಪರಿಸ್ಥಿತಿಗೆ ಅನುಗುಣವಾಗಿ ಕೆಲವೊಮ್ಮೆ ಈ ರೀತಿಯ ನಿರ್ಣಯಗಳು ರಾಜಕೀಯದಲ್ಲಿ ಅನಿವಾರ್ಯವಾಗುತ್ತವೆ. ೨೦೦೬ ರಲ್ಲಿ ಚಿಕ್ಕೋಡಿ ವಿಧಾನಸಭೆಗೆ ಪಕ್ಷ ಟಿಕೇಟ್ ನಿರಾಕರಿಸಿತ್ತು. ನಂತರ ೨೦೦೮ ರಲ್ಲಿ ರಾಜ್ಯ ಸಭೆಯ ಸ್ಥಾನಕ್ಕಾಗಿ ಅವಕಾಶ ಕೊಡಲು ಪಕ್ಷ ನಿರಾಕರಿಸಿದಾಗ ಬೆಂಬಲಿಗರ ಒತ್ತಾಯ ಹಾಗೂ ಪಕ್ಷದ ಧೋರಣೆಯಿಂದ ಬೇಸತ್ತು ಕಾಂಗ್ರೆಸ್ ಪಕ್ಷದಿಂದ ಭಾರತೀಯ ಜನತಾ ಪಕ್ಷಕ್ಕೆ ಸೇರುವ ಅನಿವಾರ್ಯವಾಯ್ತು ಸನ್ನಿವೇಶಕ್ಕೆ ಕಾಂಗ್ರೆಸ್ ಪಕ್ಷದ ನಾಯಕರೇ ಕಾರಣರಾದರು. ದೇಶದ ರಾಜಕೀಯದಲ್ಲಿ ಹಲವು ಬಗೆಯ ನಾಯಕರು ಈ ರೀತಿಯ ರಾಜಕೀಯ ನೀತಿಯನ್ನು ಅನುಸರಿಸಿದ್ದಾರೆ. ಪರಿಸ್ಥಿತಿಗೆ ತಕ್ಕಂತೆ ನಿರಂತರ ೪ ದಶಕಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿದ್ದು ನಂತರ ಪಕ್ಷ ತೊರೆಯುವುದು ಮನಸ್ಸಿಗೆ ಒಂದು ರೀತಿಯ ಬೇಸರ ಅನ್ನಿಸಿದರೂ ಬೆಂಬಲಿಗರ ಹಿತಾಸಕ್ತಿಯನ್ನು ಗಮನಿಸಿದಾಗ ಅದು ಸರಿಯಾದ ನಿರ್ಣಯವೇ ಆಗಿತ್ತು.

ಪ್ರಶ್ನೆ-೫: ಭಾರತೀಯ ಜನತಾ ಪಕ್ಷದಲ್ಲಿ ತಮ್ಮ ಸ್ಥಾನಮಾನವೇನು?

ಉತ್ತರ : ಭಾರತೀಯ ಜನತಾ ಪಕ್ಷವು ಸೂಕ್ತವಾದ ಸ್ಥಾನವನ್ನು ನೀಡಿದೆ. ಪಕ್ಷ ಸೇರಿದ ನಂತರ ರಾಜ್ಯಸಭೆ ಸದಸ್ಯರನ್ನಾಗಿಸುವ ಮೂಲಕ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರನ್ನಾಗಿಸುವ ಮೂಲಕ ನನ್ನ ಬೆಂಬಲಿಗರ ಶಕ್ತಿಯ ಲಾಭ ಆ ಪಕ್ಷಕ್ಕೆ ಲಭಿಸಿದೆ. ವಿಧಾನ ಪರಿಷತ್ತಿನ ಮತ್ತು ಲೋಕಸಭೆ ಚುನಾವಣೆಗಳಲ್ಲಿನ ಫಲಿತಾಂಶಗಳೇ ಇವುಗಳಿಗೆ ಸೂಕ್ತ ಉತ್ತರವಾಗಿವೆ.

ಪ್ರಶ್ನೆ-೬: ಕೋಮುವಾದಿ ಪಕ್ಷ ಎನ್ನುವ ಬಿ.ಜೆ.ಪಿ.ಗೆ ಸೇರಿದ ಮೇಲೆ ನಿಮ್ಮ ಜಾತ್ಯಾತೀತ ಇಮೇಜಿಗೆ ಧಕ್ಕೆ ಬರಲಿಲ್ಲವೇ?

ಉತ್ತರ : ಭಾರತೀಯ ಜನತಾ ಪಕ್ಷವು ಕೂಡಾ ಇವತ್ತು ಉದಾರ ನೀತಿಯನ್ನು ಅನುಸರಿಸುತ್ತಿದೆ. ಅಲ್ಲದೆ ನಾನು ಬಿ.ಜೆ.ಪಿ.ಗೆ ಸೇರಿದ ನಂತರವು ಅನೇಕ ಜನ ಅಲ್ಪಸಂಖ್ಯಾತ ಸಮುದಾಯದವರು ಆ ಪಕ್ಷಕ್ಕೆ ಬೆಂಬಲ ಸೂಚಿಸಿದ್ದಾರೆ. ಇಲ್ಲಿ ಕೋಮುವಾದಕ್ಕಿಂತ ಪ್ರದೇಶದ ಅಭಿವೃದ್ಧಿಯೇ ಮುಖ್ಯ ತತ್ವ ಎನ್ನುವದಕ್ಕೆ ಅಂಟಿಕೊಂಡವನು ನಾನು. ಎಂದಿಗೂ ನಂಬಿದ ತತ್ವ ಸಿದ್ಧಾಂತ ಜಾತ್ಯಾತೀತ ನೀಲುವುಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ.

ಪ್ರಶ್ನೆ-೭ : ಎಲ್ಲ ರಾಜಕೀಯ ಪಕ್ಷಗಳ ನಾಯಕರರೊಂದಿಗೆ ಒಳ್ಳೆಯ ಸಂಬಂಧ ಹೊಂದಿರುವ ನಿಮ್ಮ ಗುಟ್ಟೇನು?

ಉತ್ತರ : ಚುನಾವಣೆಯಲ್ಲಿ ಮಾತ್ರ ಪಕ್ಷ ರಾಜಕರಣ ಮಾಡಬೇಕು. ಚುನಾವಣೆಯ ನಂತರ ಪ್ರದೇಶದ ಅಭಿವೃದ್ಧಿಗಾಗಿ ಎಲ್ಲರೂ ಕೂಡಿಯೇ ಕಾರ್ಯ ಮಾಡಬೇಕು. ಅಭಿವೃದ್ಧಿಯಲ್ಲಿ ರಾಜಕೀಯ ಮಾಡುವದರಿಂದ ಜನರ ಹಾಗೂ ಪ್ರದೇಶದ ಅಭಿವೃದ್ಧಿ ವಿಳಂಬವಾಗುತ್ತದೆ. ಇವತ್ತು ಕೆ.ಎಲ್.ಇ. ಸಂಸ್ಥೆಯು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ತಕ್ಕ ಸಾಧನೆ ಮಾಡಲು ಎಲ್ಲ ಪಕ್ಷಗಳ ಸರಕಾರದ ಸಹಾಯವು ಇದೆ. ಒಳ್ಳೆಯ ಸಂಬಂಧ ಇಟ್ಟುಕೊಂಡ ಫಲವಾಗಿ ಇವತ್ತು ಎಲ್ಲರೂ ಹೆಮ್ಮೆ ಪಡುವಂತೆ ಕೆ.ಎಲ್.ಇ. ಸಂಸ್ಥೆಯು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಯನ್ನೆ ಮಾಡಲು ಸಾಧ್ಯವಾಯಿತು. ಉತ್ತರ ಕರ್ನಾಟಕದ ಬಹುದಿನಗಳ ಸಮಸ್ಯೆಗಳಿಗೆ ಆದ್ಯತೆ ಸಿಗಬೇಕಾದರೆ ಈ ರೀತಿಯ ಸಂಬಂಧ ಅನಿವಾರ್ಯವಾಗಿತ್ತು.

ಪ್ರಶ್ನೆ-೮ : ಈ ನಿಮ್ಮ ಬೇರೆ ಪಕ್ಷದ ನಾಯಕರೊಂದಿಗೆ ಸಂಬಂಧದಿಂದ ಸ್ವಪಕ್ಷದಲ್ಲಿ ನಿಮ್ಮ ಬೆಳವಣಿಗೆಗೆ ಅಡ್ಡಿ ಆಯಿತು ಎನ್ನಿಸುವುದಿಲ್ಲವೆ?

ಉತ್ತರ : ಖಂಡಿತ ಇಲ್ಲ ಇದೊಂದು ಉತ್ತಮ ಆದರ್ಶ ಪರಂಪರೆ. ಚುನಾವಣೆಯ ನಂತರ ಪರಸ್ಪರ ಸಂಬಂಧದಿಂದಲೇ ರಾಜ್ಯದ ಅಭಿವೃದ್ಧಿಯನ್ನು ಸಾಧಿಸಬೇಕು. ಈ ಸಮಯದಲ್ಲಿ ನನ್ನ ವಿರೋಧಿ ನಾಯಕರು ಈ ರೀತಿಯ ಲಾಭ ಪಡೆದಿರಬಹುದು. ನನಗೆ ಹಿನ್ನೆಡೆ ಮಾಡಲಿಕ್ಕೆ ಈ ರೀತಿಯ ತಂತ್ರವನ್ನು ಅನುಸರಿಸಬಹುದು. ಆದರೆ ಇದರಿಂದ ನನಗೆ ಬೇಸರ ಇಲ್ಲ. ಏಕೆಂದರೆ ನನಗೆ ನನ್ನ ಪ್ರದೇಶದ ಅಭಿವೃದ್ಧಿ ಹಾಗೂ ಸಂಸ್ಥೆಯ ಅಭಿವೃದ್ಧಿಯ ಮೂಲಕ ಜನರಿಗೆ ಒಳ್ಳೆಯದನ್ನು ಮಾಡಿದ ತೃಪ್ತಿ ಇದೆ. ಅಧಿಕಾರಕ್ಕಿಂತ ಜನರ ಬೇಡಿಕೆಗಳನ್ನು ಈಡೇರಿಸುವ ಕಾರ್ಯ ಮಾಡಿದ್ದರ ಬಗ್ಗೆ ಹೆಮ್ಮೆ ಇದೆ.

ಪ್ರಶ್ನೆ-೯ : ಕುಟುಂಬ ರಾಜಕಾರಣಕ್ಕೆ ತಾವು ಹೊರತಾಗಿಲ್ಲ ಅನ್ನಿಸುತ್ತಿಲ್ಲವೆ?

ಉತ್ತರ : ಯಾರು ಈ ದೇಶದಲ್ಲಿ ಕುಟುಂಬ ರಾಜಕಾರಣ ಮಾಡಿಲ್ಲ. ಇಷ್ಟಕ್ಕೂ ನಮ್ಮ ತಂದೆ ಹಾಗೂ ಅಣ್ಣನವರು ಸಮಾಜ ಸೇವೆಯ ಮೂಲಕವೇ ರಾಜಕೀಯವನ್ನು ಅನುಸರಿಸಿದವರು. ದೇಶದ ಸ್ವಾತಂತ್ರ್ಯಕ್ಕಾಗಿ. ಹಾಗೂ ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರು. ಹಾಗೆಯೇ ನಾನು ಕೂಡಾ ಜನರ ಅಭಿವೃದ್ಧಿಯನ್ನೇ

ಮೂಲ ಗುರಿಯನ್ನಾಗಿ ಇಟ್ಟುಕೊಂಡು ಜನರ ಒತ್ತಾಯದ ಮೇರೆಗೆ ರಾಜಕೀಯಕ್ಕೆ ಬಂದವನು. ಅಲ್ಲದೆ ೬ನೇ ಬಾರಿಯೂ ಜನರ ಆರ್ಶೀವಾದದಿಂದಲೇ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷನಾಗಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದೇನೆ, ಇನ್ನೂ ನನ್ನ ಮಗ ಅಮೀತ ಪದವೀಧರ. ಜನರ ಒತ್ತಾಯದ ಮೇರೆಗೆ ಅದು ಜನರಿಂದಲೇ ಅವನು ರಾಜಕೀಯಕ್ಕೆ ಬಂದಿದ್ದಾನೆ. ಶ್ರೀ ದೂಧಗಂಗಾ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆ ಇರಬಹುದು. ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿಯು ಇರಬಹುದು ಚುನಾವಣೆಯಲ್ಲಿ ಜನರಿಂದ ನೇರವಾಗಿ ಚುನಾಯಿತನಾಗಿದ್ದಾನೆ. ಅರ್ಹತೆ ಹಾಗೂ ಜನರ ವಿಶ್ವಾಸವಿದ್ದರೆ ಕುಟುಂಬದ ಸದಸ್ಯರು ರಾಜಕೀಯ ಮಾಡುವುದರಲ್ಲಿ ತಪ್ಪೇನು ಅನ್ನಿಸುತ್ತಿಲ್ಲ. ಅದು ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಹೊಸ ಪರಂರಪೆಯಂತೂ ಖಂಡಿತವಲ್ಲ, ಅದು ಎಲ್ಲರಿಗೂ ತಿಳಿದ ವಿಷಯವೇ ಸರಿ.

ಪ್ರಶ್ನೆ-೧೦ : ನಿಮ್ಮ ಸಾಧನೆಗೆ ಸ್ಫೂರ್ತಿ ಯಾರು?

ಉತ್ತರ : ಇವು ನನ್ನ ಸಾಧನೆಗಳೆಂದು ಭಾವಿಸುವುದಿಲ್ಲ ಬದಲಾಗಿ ನನ್ನ ಕರ್ತವ್ಯವೆಂದು ತಿಳಿದಿರುವೆ. ನನ್ನ ತಂದೆ ತಾಯಿಯವರ ಆರ್ಶೀವಾದ ಹಾಗೂ ಪತ್ನಿ ಆಶಾರವರ ಸದಾ ಸ್ಫೂರ್ತಿ ಮತ್ತು ಬೆಂಬಲವು ಕಾರಣವಾಗಿದೆ. ಜನರ ಹಾಗೂ ಸ್ನೇಹಿತರ, ಅಭಿಮಾನಿಗಳ ಪ್ರೀತಿ. ಮಾಡಿದ ಜನಪರ ಕಾರ್ಯಗಳೇ ಶ್ರೀ ರಕ್ಷೆ ಅಲ್ಲದೆ ಮನೆಯಲ್ಲಿ ಪತ್ನಿ ಆಶಾದೇವಿಯವರು ಮನೆಯ ಮತ್ತು ಮಕ್ಕಳ ಜವಾಬ್ದಾರಿಯನ್ನು ಹೊತ್ತುಕೊಂಡು ನನಗೆ ಸಮಾಜ ಸೇವೆಯಲ್ಲಿ ತೊಡಗಲು ಅನುಕೂಲ ಒದಗಿಸಿದ್ದು ಮತ್ತೊಂದು ಕಾರಣ. ಬೇಸರವಾದ ಸಂದರ್ಭಗಳಲ್ಲಿ ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದು. ನನ್ನ ಸಾಧನೆಗಳ ಹಿಂದೆ ಅವಳ ಪಾತ್ರ ಪ್ರಮುಖವಾದದ್ದು, ಸಂಸ್ಥೆಯ ಬೆಳವಣಿಗೆಯಲ್ಲಿ ಆಡಳಿತ ಮಂಡಳಿಯ ಸದಸ್ಯರ ಹಾಗೂ ಸಿಬ್ಬಂದಿಯ ಸಹಕಾರವು ಇವತ್ತು ಸಾಕಷ್ಟು ಪ್ರಗತಿ ಹೊಂದಲು ಸಾಧ್ಯವಾಯಿತು. ಇನ್ನೂ ಮಾಡಬೇಕಾದ ಅಭಿವೃದ್ಧಿ ಕಾರ್ಯಗಳು ಸಾಕಷ್ಟು ಇವೆ. ಇದಕ್ಕೆ ದೈವಿ ಕೃಪೆ ಅಭಿಮಾನಿಗಳ ಪ್ರೋತ್ಸಾಹದಿಂದ ಇನ್ನೂ ದುಪ್ಪಟ್ಟು ಸಾಧಿಸುವ ಮತ್ತೆ ಸಮಾಜಕ್ಕೆ ಉಪಯುಕ್ತವಾಗುವ ಹಂಬಲ ಇದ್ದೆ ಇದೆ.

ಪ್ರಶ್ನೆ-೧೧ : ನಿಮ್ಮನ್ನು ಕೊಲೆ ಮಾಡುವ ಕೆಟ್ಟ ಪ್ರಸಂಗ ಒದಗಿ ಬಂದದ್ದರ ಬಗ್ಗೆ ನಿಮ್ಮ ನಿಲುವೇನು?

ಉತ್ತರ : ಅದೊಂದು ಆಕಸ್ಮಿಕ ಘಟನೆ. ನಾನು ಶತ್ರುಗಳಿಗೂ ಕೂಡಾ ಕೇಡನ್ನು ಮಾಡದ ಮನಸ್ಸು ನನ್ನದು. ಆ ಘಟನೆಯ ನಂತರ ಜನರು ನನ್ನ ಬಗೆಗೆ ತೋರಿಸಿದ ಕಾಳಜಿ ಹಾಗೂ ದೈವಿ ಕೃಪೆಯಿಂದ ಬದುಕಿ ಉಳಿದೆ. ಜನರು ಮಠ ಮಂದಿರ ಚರ್ಚುಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ನನ್ನ ಬದುಕಿಗಾಗಿ ಪ್ರಾರ್ಥಿಸಿದ ಸಂಗತಿಗಳಿಂದಲೇ ನಾನು ಬದುಕಿ ಉಳಿದೆ. ಜನರ ಈ ಋಣಭಾರವನ್ನು ಈ ಜನ್ಮದಲ್ಲಿ ತೀರಿಸುತ್ತೇನೆಯೋ ಎನ್ನುವ ಅನುಮಾನ ನನ್ನದು. ಅವರು ತೋರಿದ ಪ್ರೀತಿ ಅಭಿಮಾನಕ್ಕೆ ನಾನು ಸದಾ ಋಣಿ. ಇದರಿಂದಾಗಿ ಇನ್ನಷ್ಟು ಜನಪರ ಕೆಲಸ ಮಾಡಲು ಸ್ಫೂರ್ತಿಯಾಯಿತು.

ಪ್ರಶನೆ-೧೨ : ಪ್ರಸ್ತುತ ರಾಜಕೀಯ ವ್ಯವಸ್ಥೆಯ ಸುಧಾರಣೆಗೆ ನಿಮ್ಮ ಸಲಹೆ ಏನು?

ಉತ್ತರ : ರಾಜಕೀಯ ಎನ್ನುವದು ಒಂದು ಚದುರಂಗದಾಟ. ಆದರೆ ಪ್ರಸ್ತುತ ನಡೆಯುತ್ತಿರುವ ರಾಜಕೀಯ ವ್ಯವಸ್ಥೆಯಲ್ಲಿನ ಲೋಪಗಳನ್ನು ತಿದ್ದಲು ಕೆಲ ಸುಧಾರಣೆಗಳ ಅಗತ್ಯವಿದೆ. ಚುನಾವಣೆಯಲ್ಲಿ ಸಾಮಾನ್ಯರು, ಪ್ರಜ್ಞಾವಂತರು ಗೆಲ್ಲುವಂತಹ ವಾತಾವರಣ ನಿರ್ಮಾಣವಾಗಬೇಕು. ಚುನಾವಣೆಯಲ್ಲಿ ಹಣದ ಪ್ರಭಾವ ಕಡಿಮೆ ಆಗಬೇಕು. ರಾಜಕೀಯ ನಾಯಕರಲ್ಲಿ ತಮ್ಮ ಸ್ವಾರ್ಥಕ್ಕಿಂತ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ಕೊಡಬೇಕು. ಸರಕಾರ ರಚನೆಯಾದ ಮೇಲೆ ೫ ವರ್ಷ ಪೂರ್ಣಾವಧಿ ಪೂರೈಸುವ ವ್ಯವಸ್ಥೆಯ ಕಾನೂನು ಆಗಬೇಕು. ಪದೇ ಪದೇ ನಡೆಯುವ ಚುನಾವಣೆಯಿಂದ ಸರಕಾರದ ಬೊಕ್ಕಸಕ್ಕೆ ಹೊರೆಯಲ್ಲದೆ ಅಭಿವೃದ್ಧಿಗೂ ಹಿನ್ನಡೆ ಆಗುತ್ತದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಮಾಡುವುದು ಒಳ್ಳೆಯದು. ರಾಜಕೀಯ ನಾಯಕರುಗಳು ಚುನಾವಣೆಯ ನಂತರ ತಮ್ಮ ಎಲ್ಲ ಮನಸ್ತಾಪಗಳನ್ನು, ಪಕ್ಷ ರಾಜಕಾರಣವನ್ನು ಹಾಗೂ ಸ್ವಾರ್ಥ ರಾಜಕಾರಣವನ್ನು ಬದಿಗಿರಿಸಬೇಕು. ಅಭಿವೃದ್ಧಿಯ ವಿಷಯದಲ್ಲಿ ರಾಜಕೀಯ ಇಚ್ಛಾ ಶಕ್ತಿಯ ಕೊರತೆಯನ್ನು ನೀಗಿಸಬೇಕು. ರಾಜಕೀಯ ಹಾಗೂ ಆಡಳಿತದಲ್ಲಿ ಭ್ರಷ್ಟಾಚಾರವನ್ನು ಹೋಗಲಾಡಿಸಬೇಕು ಈ ಅಂಶಗಳಿಂದ ಪ್ರಸ್ತುತ ರಾಜಕೀಯವು ದೂರವಾಗಬೇಕು. ಆದ್ಯತೆ ಯುವಕರಿಗೆ ಮತ್ತು ಮಹಿಳೆಯರಿಗೆ ರಾಜಕೀಯದಲ್ಲಿ ಹೆಚ್ಚಿನ ಸ್ಥಾನಮಾನ ಸಿಗಬೇಕು. ಪ್ರಜ್ಞಾವಂತ ನಾಗರಿಕರು ರಾಜಕೀಯದಿಂದ ಹಿಂದೆ ಸರಿಯದೇ ರಾಜಕೀಯದಲ್ಲಿ ಭಾಗವಹಿಸುವ ಮೂಲಕ ಈ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ತಿದ್ದಲು ಚಿಂತನೆ ನಡೆಸಬೇಕು. ಹಾಗೂ ರಾಜಕೀಯ ಪಕ್ಷಗಳು ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸುಸಂಸ್ಕೃತ ಹಾಗೂ ಸುಶಿಕ್ಷಿತ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು. ಜನರು ಚುನಾವಣಾ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಭಾಗವಹಿಸಿ, ಕಡ್ಡಾಯವಾಗಿ ಮತದಾನ ಮಾಡಬೇಕು. ಇದು ಆರೋಗ್ಯ ಪೂರ್ಣ ಪ್ರಜಾಪ್ರಭುತ್ವಕ್ಕೆ ಮಹತ್ವದ ಅಂಶವಾಗಿದೆ. ಚುನಾವಣೆಯಲ್ಲಿ ಜಾತಿ ರಾಜಕಾರಣದ ಬದಲು ಅಭಿವೃದ್ಧಿ ರಾಜಕಾರಣದ ವಿಶಾಲ ಮನೋಭಾವನೆ ಬೆಳೆಯಬೇಕು. ಈ ಅಂಶಗಳನ್ನು ಒಮ್ಮೆಲೆ ಜಾರಿಗೆ ತರಲು ಸಾಧ್ಯವಾಗದಿದ್ದರೂ ನಿಧಾನವಾಗಿಯಾದರೂ ಇವುಗಳ ಕಾರ್ಯಾನುಷ್ಠಾನ ಸಾಧ್ಯವಿದೆ.

ಪ್ರಶ್ನೆ-೧೩ : ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಯ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಉತ್ತರ : ನನ್ನ ೨೫ ವರ್ಷಗಳ ಸಂಸ್ಥೆಯ ಸೇವೆಯಲ್ಲಿ ಏನಾಗಿದೆ ಏನಿಲ್ಲ, ಎಂಬುದನ್ನು ಜನರೇ ಹೇಳಬೇಕು. ಅದು ವಿಸ್ತರಿಸಿದ ರೀತಿ, ಹಬ್ಬಿದ ಪರಿ, ಅದರ ವೇಗವನ್ನು ಹೇಳಿಕೊಂಡರೆ ಮೈ ಜುಮ್ಮೆನಿಸುತ್ತದೆ. ಸಂಸ್ಥೆಯ ಇತರ ಪಧಾಧಿಕಾರಿಗಳನ್ನೂ, ನಿರ್ದೇಶಕರ ಸಹಕಾರವನ್ನು ಇಲ್ಲಿ ಮರೆಯಲಾಗದು. ಅವರೆಲ್ಲರೂ ಕೈ ಜೋಡಿಸಿದ್ದರಿಂದಲೇ ಇಷ್ಟೆಲ್ಲಾ ಆಯಿತು. ಎಂಬತ್ತರ ದಶಕದಲ್ಲಿ ಬೆಂಗಳೂರ ಮತ್ತು ಮಂಗಳೂರ

ಬಿಟ್ಟರೆ ಕರ್ನಾಟಕದಲ್ಲಿ ಬೇರೆ ದಂತ ವೈದ್ಯಕೀಯ ಮಹಾವಿದ್ಯಾಲಗಳಿರಲಿಲ್ಲ, ಕೆ.ಎಲ್.ಇ. ಸಂಸ್ಥೆಯು ಆ ಕೊರತೆಯನ್ನು ನೀಗಿಸಿತು. ಆರೋಗ್ಯ, ಕೃಷಿ, ಇಂಜನೀಯರಿಂಗ್ ವೃತ್ತಿಪರ ಕೋರ್ಸುಗಳನ್ನು ಒಳಗೊಂಡು ಈ ಕಾಲಮಾನಕ್ಕೆ ಉಪಯೋಗವಾಗುವ ಮತ್ತು ಕರ್ನಾಟಕ ರಾಜ್ಯದಲ್ಲಿ ಇಲ್ಲದ ಕೋರ್ಸು ಕಾಲೇಜುಗಳ ಆರಂಭಕ್ಕೆ ಮೊದಲು ಆದ್ಯತೆ ನೀಡಲಾಯಿತು. ಅದರ ಫಲವಾಗಿ ಕೆ.ಎಲ್.ಇ. ಆಸ್ಪತ್ರೆ ಇಂದು ಜಾಗತಿಕ ನಕ್ಷೆಯಲ್ಲಿ ಗುರುತಿಸಿಕೊಂಡಿದೆ. ಕಳೆದ ೨೫ ವರ್ಷಗಳಲ್ಲಿ ಕೆ.ಎಲ್.ಇ. ಸಂಸ್ಥೆಯ ಬೆಳವಣಿಗೆಗಿಂತಲೂ ಅದರ ಎರಡಷ್ಟು ಮುಂದಿನ ೧೦ ವರ್ಷದಲ್ಲಿ ಮಾಡುವ ಆಸೆ ನನ್ನದು.

ಪ್ರಶ್ನೆ–೧೪ : ಯುವಕರ ಭವಿಷ್ಯದ ಬಗ್ಗೆ ಏನು ಹೇಳುತ್ತೀರಿ?

ಉತ್ತರ : ೨೧ನೇ ಶತಮಾನದ ಸ್ಪರ್ಧಾತ್ಮಕ ಜಗತ್ತಿಗೆ ಯುವಕರನ್ನು ಸಿದ್ಧಪಡಿಸಬೇಕಿದೆ. ಅದನ್ನು ಕೆ.ಎಲ್.ಇ. ಸಂಸ್ಥೆಯ ಮೂಲಕ ಈ ಕಾರ್ಯವನ್ನು ಮಾಡಲಾಗುತ್ತಿದೆ. ಮತ್ತು ಇಂದಿನ ಯುವ ಜನಾಂಗ ಮೂಲ ಸಂಸ್ಕೃತಿಯನ್ನು ಮರೆತಿರುವುದು ವಿಷಾದನೀಯ, ಆರೋಗ್ಯವಂತ ಯುವಕರು ಸದೃಢ ದೇಶವನ್ನು ಕಟ್ಟಬಲ್ಲರು. ಆ ನಿಟ್ಟಿನಲ್ಲಿ ಯುವ ಜನಾಂಗ ಮಾದಕ ವಸ್ತುಗಳಿಂದ ದೂರವಿರಬೇಕು. ಸುಸಂಸ್ಕೃತ ಹಾಗೂ ಆರೋಗ್ಯ ಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಇದು ದೇಶದ ಅಭಿವೃದ್ಧಿಗೆ ಮಹತ್ವದ ಸಾಧನ ಈ ಹಿನ್ನಲೆಯಲ್ಲಿ ಯುವಕರು ಒಂದು ವ್ಯವಸ್ಥಿತ ಕಾರ್ಯ ಸೂಚಿಯಿಂದ ನಿಶ್ಚಯಿಸಿದ ಗುರಿಯನ್ನು ತಲುಪಲು ಪ್ರಯತ್ನಶೀಲರಾಗಿ ಕಾರ್ಯ ಮಾಡಬೇಕು. ಜಗತ್ತಿನಲ್ಲಾಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿರಬೇಕು. ಅಂದಾಗ ಮಾತ್ರ ಅವರ ಭವಿಷ್ಯವು ಉಜ್ವಲವಾಗುವದು. ನಗರಗಳಂತೆಯೇ ಗ್ರಾಮೀಣ ಪ್ರದೇಶದ ಯುವಕರು ಆಧುನಿಕ ಸ್ಪರ್ಧಾ ಜಗತ್ತಿಗೆ ಸೂಕ್ತವಾದ ತಯಾರಿಯನ್ನು ಮಾಡಿಕೊಳ್ಳಬೇಕು. ಅದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಹಕಾರ ಸಂಘ ಸಂಸ್ಥೆಗಳು ಒದಗಿಸುವ ಕಾರ್ಯದ ವೇಗ ಪಡೆಯಬೇಕು.

ಹೀಗೆ ಡಾ. ಪ್ರಭಾಕರ ಕೋರೆಯವರು ತಮ್ಮ ಸಂದರ್ಶನದಲ್ಲಿ ತಮ್ಮ ೩೫ ವರ್ಷಗಳ ಸುದೀರ್ಘವಾದ ರಾಜಕೀಯ ಜೀವನದಲ್ಲಿ ಮಾಡಿದ ಕಾರ್ಯ ಮತ್ತು ಮುಂದೆ ಮಾಡಬೇಕಾದುದರ ಬಗ್ಗೆ ಮುಕ್ತವಾಗಿ ಅಭಿಪ್ರಾಯಗಳನ್ನು ಹಂಚಿಕೊಂಡರು. ತಾವು ಕಂಡ ಕನಸುಗಳ ಅವುಗಳ ಈಡೇರಿಕೆಗಾಗಿ ಮಾಡಿದ ಪ್ರಯತ್ನ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಅವರು ಹೊಂದಿದ ನೈಜ ಕಳಕಳಿ ಎಂತಹದು ಎಂಬುದನ್ನು ವಿವರಿಸಿದರು ಹಾಗೂ ಪ್ರಸ್ತುತ ರಾಜಕೀಯ ವ್ಯವಸ್ಥೆಯ ಸುಧಾರಣೆಗಾಗಿ ಸಲಹೆಗಳನ್ನು ನೀಡುವುದರ ಜೊತೆಗೆ ಯುವಕರ ಭವಿಷ್ಯತ್ತಿನ ಮುಂತಾದ ಬಗ್ಗೆ ಸಂಗತಿಗಳನ್ನು ಸಂಕ್ಷಿಪ್ತವಾಗಿ ಆದರೆ ಅರ್ಥಪೂರ್ಣವಾಗಿ ಮಾತನಾಡಿರುವರು.

ಈ ನಿಟ್ಟಿನಲ್ಲಿ ರಾಜಕೀಯ ವ್ಯವಸ್ಥೆಯಲ್ಲಿ ಆಗಬೇಕಾದ ಸುಧಾರಣೆ ಚುನಾವಣೆಗಳಲ್ಲಿನ ದೋಷಗಳಿಗೆ ಸಂವಾದಾತ್ಮಕವಾಗಿ ಶ್ರೀ ಪ್ರಭಾಕರ ಕೋರೆಯವರ ಚಿಂತನೆಗಳು ಹೊಸ ಚಿಂತನೆಗಳಿಗೆ ದಾರಿ ದೀಪವಾಗಿವೆ.

ಅಭಿವೃದ್ಧಿಯ ಬಗ್ಗೆ ನಾಯಕರು ತೋರಬೇಕಾದ ಕಳಕಳಿ ಹಾಗೂ ಪಕ್ಷ ರಾಜಕೀಯಕ್ಕಿಂತ ಅಭಿವೃದ್ಧಿ ರಾಜಕೀಯ ಮೇಲು ಎನ್ನುವ ಶ್ರೀ ಪ್ರಭಾಕರ ಕೋರೆಯವರ ಅಭಿಪ್ರಾಯಗಳು ಅಕ್ಷರಶಃ ದಾರಿ ದೀಪವಾಗಿದೆ. ಕರ್ನಾಟಕವು ಕಂಡ ಶ್ರೇಷ್ಠ ನಾಯಕರುಗಳಲ್ಲಿ ಶ್ರೀ ಪ್ರಭಾಕರ ಕೋರೆಯವರಿಗೂ ಸೂಕ್ತವಾದ ಸ್ಥಾನವಿದೆ ಎಂಬುದಕ್ಕೆ ಅವರ ಅಭಿಪ್ರಾಯಗಳ ಸ್ಪಷ್ಟ ನಿದರ್ಶನಗಳಾಗಿವೆ.

ಅಡಿ ಟಿಪ್ಪಣಿಗಳು :

೧. ವಿಜಯ ಕರ್ನಾಟಕ, ಕನ್ನಡ ದಿನಪತ್ರಿಕೆ ಪು–೧, ದಿನಾಂಕ ೧–೭–೨೦೦೮.

೨. ಲೋಕ ದರ್ಶನ, ದಿನ ಪತ್ರಿಕೆ, ಪು–೫, ದಿನಾಂಕ ೧–೭–೨೦೦೯.

೩. ವಿ.ಬಿ.ಹಿರೇಮಠ 'ಪ್ರಭಾಂಕಲಿ' ಅಭಿನಂದನ ಗ್ರಂಥ, ಪು–೧೨೩, ಪ್ರಕಾಶನ ಕೋರೆ, ಅಭಿನಂದನಾ ಸಮಿತಿ, ಚಿಕ್ಕೋಡಿ, ೧೯೯.

೪. ವಿ.ಬಿ.ಹಿರೇಮಠ 'ಪ್ರಭಾಂಕಲಿ' ಅಭಿನಂದನ ಗ್ರಂಥ, ಪು–೯೫, ಪ್ರಕಾಶನ ಕೋರೆ, ಅಭಿನಂದನಾ ಸಮಿತಿ, ಚಿಕ್ಕೋಡಿ, ೧೯೯.

೫. ದಿನಾಂಕ ೨೬–೭–೨೦೦೯ ರಂದು ಕೇಂದ್ರ ಮಾಜಿ ಸಚಿವ ಬಿ.ಶಂಕರಾನಂದ ಅವರು ಸಂದರ್ಶನದಲ್ಲಿ ಹೇಳಿದ್ದು.

೬. ದಿನಾಂಕ ೨೦–೮–೨೦೦೮ ರಂದು ಶ್ರೀ ಬಾಬಾಸಾಬ ಮೋಹತೆ ದಿವಾನಜಿ, ಅಂಕಲಿ ಸಂದರ್ಶನಲ್ಲಿ ಹೇಳಿದ್ದು.

೭. ದಿನಾಂಕ ೨೧–೮–೨೦೦೮ ರಂದು ವಿಜಯ ಜಾಧವ ಬೆಳಗಾವಿ ಸಂದರ್ಶನದಲ್ಲಿ ಹೇಳಿದ್ದು.

೮. ಈಶ್ವರ ಜಕಾತೆ, ಅಂಕಲಿ, ದಿನಾಂಕ ೧೯–೮–೨೦೦೮ ರಂದು ಸಂದರ್ಶನದಲ್ಲಿ ಹೇಳಿದ್ದು.

೯. ಡಾ. ಎಂ.ಎನ್.ವಾಲಿ 'ಹುಟ್ಟ ಹೋರಾಟಗಾರರು ಭುವನೇಶ್ವರಿ' ಪ್ರಕಾಶನ, ವಿಜಾಪೂರ, ೨೦೦೬, ಪು–೭೩

೧೦. ಸಂಪಾದಕರು, ಬಿ.ಎಸ್.ಗವಿಮಠ, 'ಸ್ಪಂಧನ', ೨೦೦೮, ಪು–೧೦೨, ಶ್ರೀ ಕೋರೆಯವರ ೬೦ ಜನ್ಮದಿನ ಅಭಿನಂದನ ಸಮಿತಿ, ಪ್ರಕಾಶಕರು.

೧೧. ಡಾ. ವ್ಹಿ.ಬಿ.ಹಿರೇಮಠ, 'ಪ್ರಭಾಂಕಲಿ', ಪು–೨೦೭, ಶ್ರೀ ಕೋರೆಯವರರ ೫೦ನೇ ಅಭಿನಂದನಾ ಗ್ರಂಥ, ೧೯೯೯.

೧೨. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಪು–೯, ದಿನಾಂಕ ೨೧–೧೧–೨೦೦೯

೧೩. ಕನ್ನಡ ಪ್ರಭಾ ಪತ್ರಿಕೆ, ಪು–೩, ದಿನಾಂಕ ೨೨–೭–೨೦೦೮.

೧೪. ಪ್ರಾ.ಬಿ.ಎಸ್.ಗವಿಮಠ, ಪು–೧೧೧, 'ಸ್ಪಂದನ' ಅಭಿನಂದನಾ ಗ್ರಂಥ, ೨೦೦೮.

೧೫. ಡಾ. ಪ್ರಭಾಕರ ಕೋರೆಯವರು ಸಂದರ್ಶನದಲ್ಲಿ ಹೇಳಿದ್ದು. ದಿನಾಂಕ ೨೦–೧೧–೨೦೦೯ ರಂದು

೧೬. ಶ್ರೀ ಮೋಹನ ಚಿಕ್ಕಲಿ, ಡಾ. ಪ್ರಭಾಕರ ಕೋರೆಯವರ ಅಪ್ತ ಸಹಾಯಕರು, ದಿನಾಂಕ ೧೯–೯–೨೦೦೯ ರಂದು ಪಡೆದ ಮಾಹಿತಿಯ ಪ್ರಕಾರ.

೧೭. ಪ್ರೊ. ಐ.ಜಿ.ಸನದಿ, ಮಾಜಿ ಸಂಸದರು, ಧಾರವಾಡ 'ಕ್ರಿಯಾಶೀಲ' ಅಂಕಣ, 'ಸ್ಪಂದನ' ಕೋರೆಯವರ ಅಭಿನಂದನಾ ಗ್ರಂಥ, ಪು–೨೩, ೧೯೯೯.

೧೮. ಶ್ರೀ ಕೃಷ್ಣಾ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ವಾರ್ಷಿಕ ವರದಿ ೧೯೯೪, ಪು–೨

೧೯. ವಿಜಯ ಕರ್ನಾಟಕ ದಿನಪತ್ರಿಕೆ, ದಿ. ೧–೮–೨೦೧೦, ಪು–೩

೨೦. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ದಿ. ೨೦–೭–೧೯೯೬,ಪು–೩

೨೧. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ದಿ. ೧೦–೫–೧೯೯೬, ಪು–೩

೨೨. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ದಿ. ೨೦-೫-೧೯೯೬, ಪು-೩

೨೩. ಕೇಂದ್ರ ಮಾಜಿ ಸಚಿವ ಬಿ.ಶಂಕರಾನಂದರು ಸಂದರ್ಶನದಲ್ಲಿ ಹೇಳಿದ್ದು ದಿನಾಂಕ ೧೦-೯-೨೦೦೮ ರಂದು ಅಥವಾ ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆ, ದಿ. ೭-೧-೨೦೦೯, ಪು-೨

೨೪. ಶಹಾಜಾನ ಡೋಂಗರಗಾಂವ, ದಿನಾಂಕ ೧೦-೮-೨೦೦೮ ರಂದು ಸಂದರ್ಶನದಲ್ಲಿ ಹೇಳಿದ್ದು.

೨೫. 'ಜನಸೇವಕ ವಿಶೇಷ ಪುರವಣಿ' ಕನ್ನಡ ಪ್ರಭ' ದಿನಪತ್ರಿಕೆ, ಪು-೪, ದಿನಾಂಕ ೨೨-೭-೨೦೦೮.

೨೬. ಶ್ರೀ ಮೋಹನ ಚಿಕ್ಕಲಿ, ಡಾ. ಪ್ರಭಾಕರ ಕೋರೆಯವರ ಅಪ್ತ ಸಹಾಯಕರಿಂದ ಪಡೆದ ಮಾಹಿತಿಯ ಪ್ರಕಾರ. ದಿನಾಂಕ ೧೮-೮-೨೦೦೮ ರಂದು

೨೭. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಪುಟ-೧. ದಿನಾಂಕ ೧೯-೯-೨೦೦೬.

೨೮. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಪುಟ-೫. ದಿನಾಂಕ ೨೫-೯-೨೦೦೬.

೨೯. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಪುಟ-೫, (ಎಂ. ನಾಗರಾಜ) ದಿನಾಂಕ ೧೯-೯-೨೦೦೬.

೩೦. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೫, ದಿನಾಂಕ ೨೪-೯-೨೦೦೬.

೩೧. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಪು-೧, ೫

೩೨. ವಿಶೇಷ ವರದಿ, ಪ್ರಜಾವಾಣಿ ಪತ್ರಿಕೆ, ಪುಟ-೫. ದಿನಾಂಕ ೨೫-೯-೨೦೦೬.

೩೩. ಕನ್ನಡ ಪ್ರಭಾ, ದಿನಪತ್ರಿಕೆ, ಪು-೧, ದಿನಾಂಕ ೧-೧೦-೨೦೦೬.

೩೪. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೨, ದಿನಾಂಕ ೨೨-೧-೨೦೦೯.

೩೫. ಸಂಯುಕ್ತ ಕರ್ನಾಟಕ, ಕನ್ನಡ ದಿನಪತ್ರಿಕೆ, ಪು-೧, ದಿನಾಂಕ ೧-೧೦-೨೦೦೬.

೩೬. ನಾಡೋಜ ಕನ್ನಡ ದಿನಪತ್ರಿಕೆ, ಪು-೫, ದಿನಾಂಕ ೨೪-೯-೨೦೦೬.

೩೭. ಡಾ. ಪ್ರಭಾಕರ ಕೋರೆಯವರು ದಿನಾಂಕ ೧೧-೨-೨೦೦೮ ರಂದು ಸಂದರ್ಶನದಲ್ಲಿ ಹೇಳಿದ್ದು.

೩೮. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ದಿನಾಂಕ ೪-೧೧-೨೦೦೮, ಪು-೧

೩೯. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ದಿನಾಂಕ ೨೨-೧೨-೨೦೦೯, ಪು-೩.

೪೦. ದಿನಾಂಕ ೨೨-೧೧-೨೦೦೯ರಂದು ಶ್ರೀ ಮೋಹನ ಲಿಂಬಿಕಾಯಿ, ವಿಧಾನಪರಿಷತ್ ಸದಸ್ಯರು, ಸಂದರ್ಶನದಲ್ಲಿ ಹೇಳಿದ್ದು.

೪೧. ವಿಜಯ ಕರ್ನಾಟಕ ದಿನ ಪತ್ರಿಕೆ, ಪು-೫, ದಿನಾಂಕ ೧೭-೪-೨೦೦೯.

೪೨. ವಿಜಯ ಕರ್ನಾಟಕ ದಿನ ಪತ್ರಿಕೆ, ಪು-೧ ಮತ್ತು ೪, ದಿನಾಂಕ ೧೭-೫-೨೦೦೯

೪೩. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ಪು-೫ ದಿನಾಂಕ ೧೭-೫-೨೦೦೯.

೪೪. ಕನ್ನಡಪ್ರಭಾ ದಿನ ಪತ್ರಿಕೆ, ಪು-೩, ದಿನಾಂಕ ೧೭-೫-೨೦೦೯.

೪೫. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ಪು-೨, ದಿನಾಂಕ ೧೮-೪-೨೦೦೯.

೪೬. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ಪು-೫, ದಿನಾಂಕ ೧೭-೧-೨೦೦೯.

೪೭. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ಪು-೧. ೩, ದಿನಾಂಕ ೨೨-೧೨-೨೦೦೯.

೪೮. ವಿಜಯ ಕರ್ನಾಟಕ ದಿನಪತ್ರಿಕೆ, ಪು-೧೦, ದಿನಾಂಕ, ೫-೧೨-೨೦೦೯.

೪೯. ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ, ಪು-೧ ಮತ್ತು ೪, ದಿನಾಂಕ ೩೧-೧೨-೨೦೦೮.

೫೦. ಡಾ. ಟಿ.ಆರ್. ಚಂದ್ರಶೇಖರ 'ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಮತ್ತು ಉನ್ನತಾಧಿಕಾರಿಗಳ ಸಮಿತಿ, ವರದಿ, ಪ್ರಕಾಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨, ೨೦೦೮.

೫೧. ಅದೇ ಪುಟ.

೫೨. ಅದೇ ಪುಟ-೪.

೫೩. ಅದೇ ಪುಟ-೨೧.

೫೪. ಪ್ರೊ. ಸತೀಶ ಕೆ.ಪಾಟೀಲ 'ಲೋಕದರ್ಶನ' ಕನ್ನಡ ದಿನ ಪತ್ರಿಕೆ, ಲೇಖನ-ಸುಂದರ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ, ದಿನಾಂಕ ೮-೮-೨೦೦೯, ಪು-೩

೫೫. ಎಂ.ನಾಗರಾಜ ವಿಶೇಷ ವರದಿ, ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೪, ದಿನಾಂಕ ೨೨-೧-೨೦೦೯.

೫೬. ಹಿರಿಯ ಪತ್ರಕರ್ತರಾದ ಡಾ. ಸರ್ಜೂ ಕಾಟ್ಕರ್‌ರವರು ಸಂದರ್ಶನದಲ್ಲಿ ಹೇಳಿದ್ದು. ದಿನಾಂಕ ೧೦-೮-೨೦೦೮.

೫೭. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧, ದಿನಾಂಕ ೧೪-೨-೨೦೦೯.

೫೮. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೫ ದಿನಾಂಕ ೧೭-೧-೨೦೦೯.

೫೯. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೫, ದಿನಾಂಕ ೧೬-೧-೨೦೦೯.

೬೦. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೫, ದಿನಾಂಕ ೨೪-೧-೨೦೦೯.

೬೧. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧, ದಿನಾಂಕ ೧೬-೧-೨೦೦೯.

೬೨. ಪ್ರಜಾವಾಣಿ ದಿನಪತ್ರಿಕೆ, ಪುಟ-೫. ದಿನಾಂಕ ೨೪-೧-೨೦೦೯.

೬೩. ಪ್ರಜಾವಾಣಿ ದಿನಪತ್ರಿಕೆ, ಪುಟ-೮. ದಿನಾಂಕ ೨೦-೧-೨೦೦೯.

೬೪. ಪ್ರಜಾವಾಣಿ ದಿನಪತ್ರಿಕೆ, ಪುಟ-೫. ದಿನಾಂಕ ೨೦-೧-೨೦೦೯.

೬೫. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧, ದಿನಾಂಕ ೧೭-೧-೨೦೦೯.

೬೬. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೩, ದಿನಾಂಕ ೧೮-೧-೨೦೦೯.

೬೭. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೫, ದಿನಾಂಕ ೨೩-೧-೨೦೦೯.

೬೮. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೫, ದಿನಾಂಕ ೧೮-೧-೨೦೦೯.

೬೯. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧ ಮತ್ತು ೨, ದಿನಾಂಕ ೨೮-೧೦-೨೦೦೬.

೭೦. ಜಾಹಿರಾತು. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧೩, ದಿನಾಂಕ ೨೧-೧-೨೦೦೯.

೭೧. ಸಂಯುಕ್ತ ಕರ್ನಾಟಕ ಕನ್ನಡ ದಿನ ಪತ್ರಿಕೆ, ಪು-೭, ದಿನಾಂಕ ೩-೮-೨೦೦೯.

೭೨. ಸಂಯುಕ್ತ ಕರ್ನಾಟಕ ಕನ್ನಡ ದಿನ ಪತ್ರಿಕೆ, ಪು-೭, ದಿನಾಂಕ ೩-೮-೨೦೦೯.

೭೩. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೩, ದಿನಾಂಕ ೨೩-೧-೨೦೦೯.

೭೪. ವಿಜಯ ಕರ್ನಾಟಕ, ಕನ್ನಡ ದಿನ ಪತ್ರಿಕೆ, ಪು-೫, ದಿನಾಂಕ ೨೩-೧-೨೦೦೯.

೭೫. ಡಾ. ಪ್ರಭಾಕರ ಕೋರೆಯವರು ಸಂದರ್ಶನದಲ್ಲಿ ಹೇಳಿದ್ದು., ದಿನಾಂಕ ೧೯-೨-೨೦೦೯.

೭೬. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೨, ದಿನಾಂಕ ೨೨-೧-೨೦೦೯.

೭೭. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧, ದಿನಾಂಕ ೧೬-೧-೨೦೦೯.

೭೮. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಪು-೧, ದಿನಾಂಕ ೧೯-೧-೨೦೦೯.

೭೯. ಪ್ರಜಾವಾಣಿ ಕನ್ನಡ ದಿನ ಪತ್ರಿಕೆ ಪುಟ-೧, ದಿನಾಂಕ ೨೩.೧.೨೦೦೯.

೮೦. ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆ ಪುಟ ೮; ಪ್ರಜಾವಾಣಿ ಪುಟ-೮, ದಿನಾಂಕ ೨೩.೧.೨೦೦೯.

೮೧. ಪ್ರಜಾವಾಣಿ ಕನ್ನಡ ದಿನ ಪತ್ರಿಕೆ ಪುಟ-೧, ದಿನಾಂಕ ೨೫.೧.೨೦೦೯.

೮೨. ಪ್ರಜಾವಾಣಿ ಕನ್ನಡ ದಿನ ಪತ್ರಿಕೆ ಪುಟ-೫, ದಿನಾಂಕ ೨೫.೧.೨೦೦೯.

೮೩. ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆ ಪುಟ ೧-೪, ದಿನಾಂಕ ೧.೬.೨೦೦೬.

೮೪. ಪ್ರಜಾವಾಣಿ ಕನ್ನಡ ದಿನ ಪತ್ರಿಕೆ ಪುಟ-೩, ದಿನಾಂಕ ೨೩.೧.೨೦೦೯.

೮೫. ಪ್ರಜಾವಾಣಿ ಕನ್ನಡ ದಿನ ಪತ್ರಿಕೆ ಪುಟ-೪, ದಿನಾಂಕ ೧೬.೧.೨೦೦೯.

೮೬. ಸಂಪಾದಕರು ಬಿ.ಎಸ್.ಗವಿಮಠ 'ಸ್ಪಂದನ' ಪುಟ-೧೦, ಶ್ರೀ ಪ್ರಭಾಕರ ಕೋರೆಯವರ ಅಭಿನಂದನ ಗ್ರಂಥ, ೨೦೦೭,

೮೭. 'ಉಕ್ಕಿನ ಮನುಷ್ಯ' ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆಯ ವಿಶೇಷ ಪುರವಣಿ ೧.೮.೨೦೦೮ ಪುಟ-೩.

೮೮. ದಿನಾಂಕ ೨೨.೬.೨೦೦೮ ಕನ್ನಡ ದಿನ ಪತ್ರಿಕೆ ಜನ ಸೇವಕ ವಿಶೇಷ ಪುರವಣಿ, ಪು-೩.

೮೯. ಶ್ರೀ ಅಜೀಜಸೇಠ್ ಶಾಸಕರು ಬೆಳಗಾವ ದಿನಾಂಕ ೧೦.೧೧.೨೦೦೯ ರಂದು ಸಂದರ್ಶನದಲ್ಲಿ ಹೇಳಿದ್ದು.

೯೦. ಸಂಪಾದಕರು ಬಿ.ಎಸ್.ಗವಿಮಠ 'ಸ್ಪಂದನ' ಪುಟ-೧೨೬, ಶ್ರೀ ಕೋರೆಯವರು ೬೦ನೇ ಅಭಿನಂದನ ಗ್ರಂಥ ೨೦೦೭.

೯೧. ಶ್ರೀ. ಆರ್.ವ್ಹಿ.ದೇಶಪಾಂಡೆ (ಹಳಿಯಾಳ) ಅಧ್ಯಕ್ಷರು ಕರ್ನಾಟಕದ ಪ್ರದೇಶ ಕಾಂಗ್ರೇಸ್ ಸಮಿತಿ ಬೆಂಗಳೂರು ದಿನಾಂಕ ೧೮.೧.೨೦೦೯ ರಂದು ಸಂದರ್ಶನದಲ್ಲಿ ಹೇಳಿದ್ದು.

೯೨. ಶ್ರೀ ಎಂ.ಪಿ.ಪ್ರಕಾಶ, ಮಾಜಿ ಮುಖ್ಯಮಂತ್ರಿಗಳು (ಹಡಗಲಿ) ದಿನಾಂಕ ೧೮.೧೦.೨೦೦೯ ರಂದು ಸಂದರ್ಶನದಲ್ಲಿ ಹೇಳಿದ್ದು.

ಅಧ್ಯಾಯ : ಆರು

ಶ್ರೀ ಪ್ರಭಾಕರ ಕೋರೆಯವರ ಸಹಕಾರ, ಆರೋಗ್ಯ, ಸಾಮಾಜಿಕ ಕೊಡುಗೆಗಳು

ಅಧ್ಯಾಯ : ಆರು

ಕೋರೆಯವರ ಸಹಕಾರ, ಆರೋಗ್ಯ, ಸಾಮಾಜಿಕ ಕೊಡುಗೆಗಳು

ಸಾಹಿತ್ಯಿಕ–ಧಾರ್ಮಿಕ ಕ್ಷೇತ್ರಗಳಲ್ಲಿನ ಕೊಡುಗೆಗಳು :

ಆಡು ಮುಟ್ಟದ ಗಿಡವಿಲ್ಲ ಎನ್ನುವಂತೆ ಶ್ರೀ ಪ್ರಭಾಕರ ಕೋರೆಯವರ ಸಾಧನಾ ಕ್ಷೇತ್ರಗಳು ಹಲವು. ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವರ ಅಮೋಘ ಸಾಧನೆಯ ಜೊತೆಗೆ ಸಹಕಾರ, ಆರೋಗ್ಯ ಕ್ಷೇತ್ರಗಳಲ್ಲಿಯೂ ಅವರ ಸಾಧನೆ ಚಕಿತಗೊಳಿಸುವಂತಹದು. ಇದರ ಜೊತೆಗೆ ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಬಗೆಯ ಸೇವೆಯನ್ನು ಸಲ್ಲಿಸುವ ಮೂಲಕ ಶ್ರೀ ಪ್ರಭಾಕರ ಕೋರೆಯವರ ಸಮಾಜದ ಅಗತ್ಯಕ್ಕೆ ಅನುಗುಣವಾಗಿ ತಮ್ಮ ಸೇವಾ ಕ್ಷೇತ್ರವನ್ನು ವಿಸ್ತರಿಸುತ್ತಾ, ಎಲ್ಲ ವಲಯದ ಜನರನ್ನು ತೃಪ್ತಿಪಡಿಸುವ ಹಾಗೂ ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡುವ ಈ ವಿಶಿಷ್ಟ ಮನೋಭಾವದ ರಾಜಕಿಯ ನಾಯಕರು ದೊರೆಯುವುದು ಅಪರೂಪಕ್ಕೆ ಒಬ್ಬರು. ಶ್ರೀ ಪ್ರಭಾಕರ ಕೋರೆಯವರು ಆರೋಗ್ಯ ಹಾಗೂ ಸಹಕಾರ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯ ಮಾರ್ಗ ಮುಂದಿನ ಪೀಳಿಗೆಗೆ ದಾರಿದೀಪ. ಈ ಮೇಲಿನ ಕ್ಷೇತ್ರಗಳಲ್ಲಿ ಶ್ರೀ ಪ್ರಭಾಕರ ಕೋರೆಯವರು ಸಾಧನೆಯನ್ನು ಗೈದು, ಆ ಮೂಲಕ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ಸಹಕಾರ ಕ್ಷೇತ್ರದಲ್ಲಿನ ಶ್ರೀ ಪ್ರಭಾಕರ ಕೋರೆಯವರ ಸಾಧನೆಗಳು :

ದೇಶದ ಸ್ವಾತಂತ್ರ್ಯ ಪೂರ್ವದ ಇತಿಹಾಸದಲ್ಲಿ ಸ್ವಾತಂತ್ರ್ಯಾಂದೋಲನದ ಜೊತೆ ಜೊತೆಗೆ ಸಹಕಾರ ಆಂದೋಲನದ ಹೆಜ್ಜೆಯನ್ನು ಗುರುತಿಸಿತ್ತು. ಕೃಷಿ ಕ್ಷೇತ್ರದಲ್ಲಿ ಸಹಕಾರ ಪದ್ಧತಿಯನ್ನು ಆಚರಣೆಯಲ್ಲಿ ತರಲು ಈ ಶತಮಾನದ ಪ್ರಾರಂಭದಲ್ಲಿ ಪ್ರಥಮವಾಗಿ ಯತ್ನಿಸಲಾಯಿತು. ಈ ಕ್ಷೇತ್ರದ ಚಿಕ್ಕ ಹಿಡುವಳಿದಾರರ ಪರಿಸ್ಥಿತಿ ಶೋಚನೀಯವಾಗಿತ್ತು. ರೈತರು ಅಧಿಕ ಸಾಲದ ಭಾರ, ತಮ್ಮ ಭೂಮಿಯಲ್ಲಿ ಯಾವುದೇ ಸುಧಾರಣೆ ಮಾಡಲು ಸಾಧ್ಯವಿಲ್ಲದ ಸ್ಥಿತಿಯನ್ನು ಗಮನಿಸಿ, ಇವರು ೧೯೦೪ರಲ್ಲಿ ಸಹಕಾರಿ ಆಂದೋಲನಕ್ಕೆ ಚಾಲನೆಯಿತ್ತರು.

ಶ್ರೀ ಪ್ರಭಾಕರ ಕೋರೆಯವರು ಆಗರ್ಭ ಶ್ರೀಮಂತ ಕುಟುಂಬದಿಂದ ಬಂದವರು. ಅವರ ತಂದೆ ದಿ. ಬಸವಪ್ರಭು ಕೋರೆಯವರು. ಹತ್ತಾರು ಹಳ್ಳಿಯ ಜನರಿಗೆ ಆರ್ಥಿಕ ಸಹಾಯ ಒದಗಿಸುವ ಇವರ ಮನೆ ಒಂದು ಬ್ಯಾಂಕು ಆಗಿತ್ತು. ನಂತರ ಅವರು ಸಹಜವಾಗಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮದ ಹಿಂದೆ ಕುಟುಂಬದ ಪ್ರಭಾವ ತಕ್ಕಮಟ್ಟಿಗೆ ಆಗಿದೆ ಎನ್ನುವದನ್ನು ನಾವು ಗಮನಿಸಲೇಬೇಕಾಗುತ್ತದೆ. ಜನರು ಆರ್ಥಿಕವಾಗಿ ಸ್ವಾವಲಂಬಿ ಜೀವನ ನಡೆಸಬೇಕು. ಅವರ ಅಗತ್ಯ ಉದ್ಯೋಗಕ್ಕೆ ಆರ್ಥಿಕ ನೆರವು ಬಹಳಷ್ಟು ಎನ್ನುವುದನ್ನು ಮನಗಂಡು, ಚಿಕ್ಕೋಡಿಯ

ಕೃಷ್ಣಾ ಧೂದಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಿ, ಆ ಕಾರ್ಖಾನೆಯ ಲಾಭ ಹೆಚ್ಚಿಸಿದಲ್ಲದೇ, ಅದರಿಂದ ಸಹಸ್ರಾರು ರೈತರ ಬಾಳಿಗೆ ಸಂಜೀವಿನಿ ಆಗುವಂತೆ ಮಾಡಿದವರು ಕೋರೆಯವರು. ರೈತರು, ಬಡವರನ್ನು ಗಮನದಲ್ಲಿಟ್ಟುಕೊಂಡು ಅಂಕಲಿ ಗ್ರಾಮದಲ್ಲಿ ಅರ್ಬನ್ ಬ್ಯಾಂಕ್ ಸ್ಥಾಪಿಸುವ ಮೂಲಕ ಈ ಜನರ ಆರ್ಥಿಕ ಸ್ಥಿತಿ ಸುಧಾರಿಸಲು ಸಾಕಷ್ಟು ಶ್ರಮಿಸಿದರು. ಹಲವಾರು ಸಹಕಾರಿ ಸಂಘಗಳು ಕಷ್ಟಕ್ಕೆ ಸಿಲುಕಿದಾಗ ಅವುಗಳ ಪುನಶ್ಚೇತನಕ್ಕೆ ಸಹಾಯ ಹಸ್ತ ಚಾಚಿದವರು. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎನ್ನುವ ಘನ ಉದ್ದೇಶವನ್ನು ಇಟ್ಟುಕೊಂಡು ತಮ್ಮ ಪತ್ನಿ ಆಶಾ ಇವರ ನಾಯಕತ್ವದಲ್ಲಿ ಬೆಳಗಾವಿಯಲ್ಲಿ ರಾಣಿ ಚೆನ್ನಮ್ಮ ಮಹಿಳಾ ಬ್ಯಾಂಕು ಸ್ಥಾಪಿಸಿ, ಮಹಿಳೆಯರ ಆರ್ಥಿಕ ಪ್ರಗತಿಗೆ ದಾರಿ ಒದಗಿಸಿದರು. ಇವುಗಳಲ್ಲಿ ಮೊದಲನೆಯ ಭಾಗ ಚಿಕ್ಕೋಡಿ. ಶ್ರೀ ಕೃಷ್ಣಾ ಧೂದಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಶ್ರೀ ಪ್ರಭಾಕರ ಕೋರೆಯವರು ಸಾಧಿಸಿದ ಅಮೋಘ ಸಾಧನೆ ಹಾಗೂ ಸಲ್ಲಿಸಿದ ಅನುಪಮ ಸೇವೆ ಹೀಗಿವೆ.

ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ, ಚಿಕ್ಕೋಡಿ :

"ಸರ್ವೇಜನಾಃ ಸುಖಿನೋಭವಂತು" ಪರಸ್ಪರ ಸಹಾಯವೇ ಸಹಕಾರದ ಮಂತ್ರ, ಕೂಡಿ ದುಡಿದು, ಕೂಡಿ ತಿನ್ನುವುದು. ಸಮನಾಗಿ ಕರ್ತವ್ಯ ನಿರ್ವಹಿಸಿ, ಸಮನಾಗಿ ಹಂಚಿಕೊಂಡು, ಸಮೃದ್ಧ ಸುಖ ಜೀವನ ಹೊಂದುವುದು ಸಹಕಾರದ ಗುಣಧರ್ಮ. ಜಗತ್ತಿನಲ್ಲಿ ಅಪರಿಮಿತ ಸಂಪನ್ಮೂಲ ಅಡಗಿದೆ. ಅದರ ಸರಿಯಾದ ಬಳಕೆ ಸದ್ವಿನಿಯೋಗ, ಅದರಿಂದ ಮಾನವ ಕುಲದ ಕಲ್ಯಾಣ ಸಾಧ್ಯ. ಆರ್ಥಿಕವಾಗಿ ಬಲಿಷ್ಠರಾದಾಗ ಸಮಾಜದ ಅನಿಷ್ಟಗಳು ದೂರವಾಗುತ್ತವೆ. ಸಹಕಾರಿ ರಂಗದಲ್ಲಿ ಬಂಡವಾಳ ಹೂಡಿಕೆ ಒಂದು ಸಾಧನ, ವ್ಯವಸ್ಥಿತ ವಿತರಣೆಯೂ ಇಲ್ಲಿ ಮುಖ್ಯ, ಇಲ್ಲಿ ಎಲ್ಲರೂ ಸಮಾನರು, ಈ ತತ್ವವನ್ನು ಹಿಡಿದೇ ಶ್ರೀಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯು ಚಿಕ್ಕೋಡಿಯಲ್ಲಿ ರೈತರ ಅಭ್ಯುದಯಕ್ಕೆ ಹುಟ್ಟಿಕೊಂಡಿತು.

ಕಾರ್ಖಾನೆಯ ಇತಿಹಾಸ :

ಕೃಷ್ಣಾ ಹಾಗೂ ಧೂಧಗಂಗಾ ನದಿಗಳ ಸುತ್ತಲಿನ ಭೂಮಿಯಲ್ಲಿ ಹೊನ್ನು ಬೆಳೆಯನ್ನು ಬೆಳೆಯುವ ಉದ್ದೇಶ ಬೆಳಗಾವಿಯ ಗಡಿಭಾಗದ ಚಿಕ್ಕೋಡಿಯ ರೈತರದಾಗಿತ್ತು. ೧೯೬೫–೬೬ರ ಪೂರ್ವದಲ್ಲಿಯೇ ಕರ್ನಾಟಕ ರಾಜ್ಯದ ಉತ್ತರ ಕರ್ನಾಟಕದ ಬೆಳಗಾವಿ ಮತ್ತು ವಿಜಾಪೂರ ಜಿಲ್ಲೆಗಳು ಮಹಾರಾಷ್ಟ್ರ ರಾಜ್ಯದ ಕೊಲ್ಲಾಪೂರ ಜಿಲ್ಲೆಯ ರೈತರು ಆರ್ಥಿಕ ಬೆಳೆ ಬೆಳೆಯುವ ಮೂಲಕ ವೈಯುಕ್ತಿಕ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ತೊಡಗಬೇಕೆಂಬ ನಿರ್ಣಯಕ್ಕೆ ಬಂದಿದ್ದರು. ಇದು ಚಿಕ್ಕೋಡಿ ಭಾಗದಲ್ಲಿ ಸಹಕಾರಿ ಗಾಳಿ ಬೀಸಲು ಸಾಧ್ಯವಾಯಿತು. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಇಚಲಕರಂಜಿಯ ಸಕ್ಕರೆ ಕಾರ್ಖಾನೆಯ ಚೇರಮನ್‌ರಾಗಿದ್ದ ಶ್ರೀ ರತ್ನಪ್ಪ ಕುಂಬಾರ ಹಾಗೂ ಸಂಕೇಶ್ವರ ಸಕ್ಕರೆ ಕಾರ್ಖಾನೆಯ ಅಂದಿನ ಚೇರಮನ್‌ರಾಗಿದ್ದ ಶ್ರೀ ಅಪ್ಪಣ್ಣಗೌಡ ಪಾಟೀಲರು ಸಹಕಾರಿ ಚಳುವಳಿಯಿಂದಲೇ ರೈತರ ಅಭ್ಯುದಯ ಸಾಧ್ಯವೆಂದು ಅರಿತು ತಮ್ಮ ಕ್ಷೇತ್ರಗಳಲ್ಲಿ ಯಶಸ್ವಿಯಾಗಿದ್ದರು. ಚಿಕ್ಕೋಡಿ ಭಾಗದಲ್ಲಿಯೂ

ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಹುಟ್ಟುಹಾಕುವ ಯೋಜನೆಗೆ ಒತ್ತು ನೀಡಿದ್ದರು. ಆದರೆ ಅದಕ್ಕೆ ಸರಿಯಾದ ಚಾಲನೆ ದೊರೆಯದೇ ಯಶಸ್ವಿಯಾಗಲಿಲ್ಲ. ೧೯೬೯ರಲ್ಲಿ ಅಂದಿನ ಚೀಫ್ ಪ್ರಮೋಟರ್ ಆಗಿದ್ದ ಚಿಕ್ಕೋಡಿಯ ಶ್ರೀ ಶಾಂತಪ್ಪಣ್ಣಾ ಮಿರ್ಜಿಯವರು ರಾಯಬಾಗದಲ್ಲಿ ಸಭೆ ನಡೆಸಿ ಮರಳುವಾಗ ಅಂಕಲಿಯ ಸುಪ್ರಸಿದ್ಧ ಮನೆತನದ ಶ್ರೀ ಚಿದಾನಂದ ಕೋರೆಯವರಿಗೆ ಭೇಟಿಯಾಗಿ, ಚಿಕ್ಕೋಡಿಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಮುಂದಿಟ್ಟರು. ಬೆಲ್ಲದ ವ್ಯಾಪಾರಸ್ಥರಾಗಿದ್ದ ಶ್ರೀ ಚಿದಾನಂದ ಕೋರೆಯವರು ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದಲ್ಲಿ ಸಹಕಾರಿ ಚಳುವಳಿ ಸಾಫಲ್ಯ ಪಡೆದದ್ದನ್ನು ನೋಡಿ, ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆಯ ತಮ್ಮ ಕನಸನ್ನು ನನಸನ್ನಾಗಿ ಮಾಡಲು ಸಿದ್ಧರಾದರು. ಕೃಷ್ಣಾ ಧೂಧಗಂಗಾ ನದಿಗಳ ಪರಿಸರದ ರೈತರು ಶ್ರಮ ಜೀವಿಗಳೆಂದು, ಇಲ್ಲಿ ಬೆಳೆಯುವ ಕಬ್ಬು ಬೆಲ್ಲಕ್ಕಿಂತ ಸಕ್ಕರೆ ಮಾಡಲು ಉಪಯೋಗಿಸಿದರೆ ಕೃಷಿಕನ ಆರ್ಥಿಕ ಮಟ್ಟ ಸುಧಾರಣೆಯಾದೀತೆಂಬ ಕಳಕಳಿಯಿಂದಲೇ ತಮ್ಮ ತಂದೆ ಶ್ರೀ ಬಸವಪ್ರಭು ಕೋರೆಯವರ ಕನಸನ್ನು ಕೂಡ ಸಾಕಾರಗೊಳಿಸುವ ಉದ್ದೇಶದಿಂದ ಈ ಬೃಹತ್ ಯೋಜನೆಗೆ ಕೈಹಾಕಿದರು. ಶ್ರೀಮಾನ್ ಎಸ್. ವೈ. ಮಿರ್ಜಿ ಹಾಗೂ ಶ್ರೀಮಾನ್ ಚಿದಾನಂದ ಕೋರೆ ಅವರ ಹಿರಿತನದಲ್ಲಿ ೩೧ ಜನ ಗಣ್ಯ ಸಹಕಾರಿ ಕಾರ್ಯಕರ್ತರನ್ನೊಳಗೊಂಡ ಪ್ರವರ್ತಕರು ಅತ್ಯಂತ ದಕ್ಷತೆಯಿಂದ ಚಿಕ್ಕೋಡಿ ತಾಲೂಕಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲೇಬೇಕೆಂಬ ನಿರ್ಧಾರ ಕೈಗೊಂಡು ಕಾರ್ಯಪ್ರವೃತ್ತರಾದರು.[೧]

ಅಂತೆಯೇ ಸ್ನೇಹಿತರೊಡಗೂಡಿ ಕಾರ್ಖಾನೆಯ ಕೆಲಸಕ್ಕಾಗಿ ಜನೆವರಿ ೬ ೧೯೬೯ರಲ್ಲಿ ಅಂದಿನ ಸಹಕಾರ ಮಂತ್ರಿ ಶ್ರೀ ಪಿ. ಎಂ. ನಾಡಗೌಡರನ್ನು ಭೇಟಿಯಾಗಿ, ಉದ್ದೇಶಿತ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಅವಶ್ಯಪಿರುವ ಸಹಾಯ, ಸಹಕಾರಗಳನ್ನು ಕೋರಿ, ಅವರಿಂದ ಭರವಸೆ ಪಡೆದುಕೊಂಡು ಬಂದರು. ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ವಿರೇಂದ್ರ ಪಾಟೀಲರು ಹಾಗೂ ಔದ್ಯೋಗಿಕ ಮಂತ್ರಿ ಶ್ರೀ ಎಂ. ವಿ. ರಾಜಶೇಖರ ಮೂರ್ತಿ ಇವರ ಸಹಾಯವೂ ಸಿಕ್ಕಿತು. ಅದರಿಂದಾಗಿ ಜನೇವರಿ ೧೦ರಂದು ಬೇಡಿಕಿಹಾಳದಲ್ಲಿ; ದಿನಾಂಕ ೧೧ರಂದು ಅಂಕಲಿಯಲ್ಲಿ ಸಭೆ ಕೂಡಿಸಿ ಶೇರು ಸಂಗ್ರಹ ಕಾರ್ಯವನ್ನು ಆರಂಭಿಸಿದರು. ಶ್ರೀ ಎಂ. ಕೆ. ಕವಟಗಿಮಠ, ಶ್ರೀ ಸಿ. ಬಿ. ಕೋರೆ, ಪದ್ಮಭೂಷಣ ಶ್ರೀ ಡಿ. ಸಿ. ಶಹಾ, ಶ್ರೀ ಎಸ್. ವೈ ಮಿರ್ಜಿ ಇವರ ಪ್ರಯತ್ನದ ಫಲವಾಗಿ ಫೆಬ್ರುವರಿ ೨೮, ೧೯೬೯ರವರೆಗೆ ಸುಮಾರು ೧೦ ಲಕ್ಷ ರೂ. ಶೇರು ಹಣ ಕೂಡಿತು. ದಿನಾಂಕ ೧-೩-೧೯೬೯ರಂದು ಬೆಂಗಳೂರಿಗೆ ಹೋಗಿ ಸರ್ಕಾರದ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಲಾಯಿತು. ಅಲ್ಲದೇ ದಿನಾಂಕ ೫-೩-೧೯೬೯ರಂದು ಕಾರ್ಖಾನೆಯನ್ನು ನೋಂದಾಯಿಸಲಾಯಿತು. ಸಹಕಾರಿ ಸಂಘಗಳ ಅಂದಿನ ರಜಿಸ್ಟ್ರಾರರಾಗಿದ್ದು ಶ್ರೀ ಸಿ. ಎ. ಜಮಖಂಡಿಮಠ ಅವರ ಸಹಾಯವೂ ದೊರೆಯಿತು. ಮುಂದೆ ೭-೩-೧೯೬೯ರಂದು ರಾಜ್ಯ ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ಲೈಸೆನ್ಸಿಗಾಗಿ ಅರ್ಜಿ ಸಲ್ಲಿಸಲಾಯಿತು. ಅರ್ಜಿ ಸಲ್ಲಿಸುವಲ್ಲಿ ಅಂದಿನ ಚಿಕ್ಕೋಡಿ ಭಾಗದ ಲೋಕಸಭಾ ಸದಸ್ಯರು ಹಾಗೂ ನಂತರ ಕೇಂದ್ರ ಮಂತ್ರಿಗಳೂ ಆದ ಶ್ರೀ ಬಿ. ಶಂಕರಾನಂದ ಅವರ ಸಹಕಾರವನ್ನು ಪಡೆಯಲಾಯಿತು.[೨]

ಚಿಕ್ಕೋಡಿ ತಾಲೂಕಿನಲ್ಲಿ ಸಕ್ಕರೆ ಕಾರ್ಖಾನೆಗೆ ನಿವೇಶನ ಶೋಧನೆ ನಡೆದು, ಚಿಕ್ಕೋಡಿಯಿಂದ ೯ ಮೈಲುಗಳ ಅಂತರದಲ್ಲಿದ್ದ, ಅಂಕಲಿ ಯಕ್ಸಂಬಾ ನಗರಗಳ ಮಧ್ಯದ ನಣದಿ ಗ್ರಾಮದ ಸೀಮೆಯೊಳಗೆ ಭೂಮಿಯನ್ನು ಪಡೆದುಕೊಂಡು ಕಾರ್ಖಾನೆಯ ಶಂಕುಸ್ಥಾಪನೆಯನ್ನು ನೆರವೇರಿಸಲಾಯಿತು. ಈ ಸಮಯದಲ್ಲಿ ಆಗಲೇ ಸಹಕಾರಿ ಕ್ಷೇತ್ರದಲ್ಲಿ ದುಡಿದ ಮಹನೀಯರನೇಕರು ಸಹಾಯ ಹಸ್ತಚಾಚಿದರು. ಸಂಕೇಶ್ವರ ಸಕ್ಕರೆ ಕಾರ್ಖಾನೆಯ ಚೇರಮನ್ನರಾಗಿದ್ದ ಶ್ರೀ ಅಪ್ಪಣ್ಣಗೌಡ ಪಾಟೀಲರು ಬೆನ್ನೆಲುಬಾಗಿ ನಿಂತು, ಅಡಿಗಡಿಗೆ ಧೈರ್ಯವನ್ನು ನೀಡಿ ಹುರಿದುಂಬಿಸುತ್ತಿದ್ದರು. ಸಂಕೇಶ್ವರದ 'ಹೀರಾ ಶುಗರ್ಸ್'ದಿಂದ ೧೦ ಲಕ್ಷ ರೂ.ಗಳಷ್ಟು ಹಣವನ್ನು ರೈತರಿಗೆ ಸಾಲಕೊಟ್ಟು ಕಾರ್ಖಾನೆಯ ಸದಸ್ಯರಾಗಲು ಕೇಳಿಕೊಂಡರು. ಆಗಲೇ ದಕ್ಷಿಣ ಮಹಾರಾಷ್ಟ್ರದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದ ಶ್ರೀ ರತ್ನಪ್ಪಣ್ಣಾ ಕುಂಬಾರ ಅವರು ಶ್ರೀ ಚಿದಾನಂದ ಕೋರೆ ಅವರ ಮೇಲೆ ತಮ್ಮ ಕೃಪಾದೃಷ್ಟಿ ಬೀರಿ ಆಶೀರ್ವದಿಸಿದರು. ಓಡಿಸ್ಸಾ ರಾಜ್ಯದ ಅಂದಿನ ರಾಜ್ಯಪಾಲರಾಗಿದ್ದ ಶ್ರೀಮಾನ್ ಬಿ. ಡಿ. ಜತ್ತಿ ಅವರ ಸಹಾಯಹಸ್ತವೂ, ಮಾರ್ಗದರ್ಶನವೂ ದೊರೆಯಿತು.[೩]

ಈ ಎಲ್ಲ ಪ್ರಯತ್ನ ಹಾಗೂ ಅನೇಕರು ಸಹಕರಿಸಿದ ಫಲವಾಗಿ ಸಂಘಕ್ಕೆ ದಿನಾಂಕ ೧೬-೧೦-೧೯೭೦ರಂದು ಪರವಾನಿಗೆ (ಲೈಸನ್ಸು) ದೊರೆಯಿತು. ಸದ್ಯದ ಕಾರ್ಖಾನೆ ನಿರ್ಮಾಣವಾಗಿರುವ ನಣದಿ ಸೀಮೆಯಲ್ಲಿರುವ ನಿವೇಶನದ ಬಗ್ಗೆ ೧೯೭೧ರಲ್ಲಿ ರಾಜ್ಯ ಸರಕಾರದಿಂದ ತಡೆಯಾಜ್ಞೆ ಬಂದು, ಕಾರ್ಯಸ್ಥಗಿತಗೊಂಡದ್ದರಿಂದ ಕಾರ್ಖಾನೆಯನ್ನು ಕಟ್ಟುವ ಕಾರ್ಯ ಸಂಪೂರ್ಣ ನಿಂತುಹೋಗಿ, ಹೆಚ್ಚಿನ ತೊಂದರೆಯನ್ನು ಅನುಭವಿಸಬೇಕಾಯಿತು. ಇಂಥ ಪ್ರಸಂಗದಲ್ಲಿ ಸಂಚಾಲಕ ಮಂಡಳಿ ತೀರ ನೊಂದ ಮನಸ್ಸಿನಿಂದ ತಮ್ಮ ಪ್ರಯತ್ನವನ್ನು ಬೇರೆ ವಿಚಾರಗಳತ್ತ ಹೊರಳಿಸಿದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ. ದೇವರಾಜ ಅರಸ್ ಅವರಿಗೆ ದಿನಾಂಕ ೩೧-೨-೧೯೭೭ರಂದು ಪುನಃ ಮನವಿ ಸಲ್ಲಿಸಿ, ಕಾರ್ಖಾನೆಯ ನಿವೇಶನ ಸ್ವಾಧೀನಪಡಿಸಿಕೊಳ್ಳುವಲ್ಲಿ ಸಂಭವಿಸಿದ ವಿಳಂಬವನ್ನು ಹಾಗೂ ಅದರಿಂದ ಕಾರ್ಖಾನೆಗೆ ಸಂಭವಿಸಬಹುದಾದ ಹಾನಿಯನ್ನು ವಿವರಿಸಿ, ಈ ಮೊದಲು ಖರೀದಿಸಲಾದ ನಣದಿ ಹದ್ದಿನಲ್ಲಿರುವ ನಿವೇಶನ, ಈಗ ಕಾರ್ಖಾನೆ ನಿರ್ಮಾಣಗೊಂಡಿರುವ ರಿ. ಸ. ನಂ. ೧೮೪, ೧೮೫ ಮತ್ತು ೧೮೬ ಇದನ್ನು ಮಂಜೂರು ಮಾಡಿ ಅದಕ್ಕನುಗುಣವಾಗಿ ಅವಶ್ಯಕಂಡಲ್ಲಿ ಕಾರ್ಖಾನೆಯ ಲೈಸನ್ಸ್‌ದಲ್ಲಿ ಸೂಕ್ತ ಬದಲಾವಣೆಯನ್ನು ಮಾಡಿಯಾದರೂ ಕೇಂದ್ರ ಸರಕಾರದಿಂದ ಮನ್ನಣೆಯನ್ನು ಪಡೆದು, ಈ ಕಾರ್ಖಾನೆಯ ಕೆಲಸ ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಬಿನ್ನವಿಸಿಕೊಳ್ಳಲಾಯಿತು. ಸೂಕ್ತ ಮಾರ್ಪಾಡು ಮಾಡಿ ನಣದಿ ಹದ್ದಿನಲ್ಲಿಯ ಈ ಸ್ಥಳದಲ್ಲಿ ಅಂದರೆ ರಿ.ಸ.ನಂ. ೧೮೪,೧೮೫ ಮತ್ತು ೧೮೬ರಲ್ಲಿ ಕಾರ್ಖಾನೆಯ ನಿವೇಶವನ್ನು ನಿಗದಿಪಡಿಸಿ, ಮಂಜೂರು ಬರುವ ಪೂರ್ವದಲ್ಲಿಯೇ ಕಾರ್ಖಾನೆಯನ್ನು ಕಟ್ಟುವ ಕಾರ್ಯ ಪ್ರಾರಂಭವಾಯಿತು. ಈ ಕೆಲಸದಲ್ಲಿ ಪೂರ್ಣ ಆಸ್ಥೆವಹಿಸಿ ಕಾರ್ಯ ಪ್ರಾರಂಭಿಸಲು ಮಾರ್ಗದರ್ಶನ ಮಾಡಿದ ಹಾಗೇಯೇ ಸಕಾಲಕ್ಕೆ ಪ್ರೋತ್ಸಾಹ ನೀಡಿ ನಮಗೆ ಅಗಣಿತ ಸಹಾಯ ಮಾಡಿದ ದಿವಂಗತ ಶ್ರೀಮಾನ್ ದೇವರಾಜ ಅರಸ್‌ರವರು ದಿಲ್ಲಿಯವರೆಗೆ ಸ್ವತಃ ಹೋಗಿ ಅಂದಿನ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿ ಅವರನ್ನು ನೇರವಾಗಿ ಭೇಟಿಯಾದರು. ಕಾರ್ಖಾನೆಯ

ಔದ್ಯಮಿಕ ಲೈಸೆನ್ಸ್ ೩-೯-೧೯೭೫ರಂದು ಕೇಂದ್ರ ಸರ್ಕಾರದಿಂದ ಆಡಳಿತಮಂಡಳಿಯ ಕೈ ಸೇರಿತು. ಇದು ಕಾರ್ಖಾನೆಯ ಇತಿಹಾಸದಲ್ಲಿಯೇ ಸುವರ್ಣ ಅಕ್ಷರಗಳಿಂದ ಬರೆದಿಡುವಂಥ ಘಟನೆಯಾಗಿದೆ.[೪]

ಅಂತೆಯೇ ೧೯೬೯ರಲ್ಲಿ ಕಾರ್ಖಾನೆಯನ್ನು ಕಟ್ಟುವ ವಿಳಂಬ ಹಾಗೂ ಅಡ್ಡಿ-ಆತಂಕಗಳು ಸಂಭವಿಸದಂತೆ ಸಂಚಾಲಕ ಮಂಡಳಿಯವರು ಸದಾ ಜಾಗೃತಿ ವಹಿಸಿ ಅತ್ಯಂತ ಪರಿಶ್ರಮದಿಂದ, ಹಾಗೆಯೇ ಕಳಕಳಿಯಿಂದಲೂ ಕಾರ್ಯಮಾಡಿದ್ದು ಶ್ಲಾಘನೀಯವಾಗಿದೆ. ಅಂದು ಯುವಕರೇ ಅಧಿಕವಾಗಿ ಸಂಚಾಲಕ ಮಂಡಳಿಯಲ್ಲಿದ್ದ ಶ್ರೀಮಾನ್ ಸಿ. ಬಿ. ಕೋರೆ ಚೇರ್‌ಮನ್ನರಾಗಿ, ಶ್ರೀಮಾನ್ ಎಂ. ಕೆ. ಕವಟಗಿಮಠ ವಾಯ್ಸ್ ಚೇರ್‌ಮನ್ನರಾಗಿ, ಶ್ರೀ ಎಸ್. ವಾಯ್. ಮಿರ್ಜಿ, ಪದ್ಮಭೂಷಣ ಶ್ರೀ ಡಿ. ಸಿ. ಶಹಾ, ಶ್ರೀ ಎಸ್. ಬಿ. ಜೊಲ್ಲೆ, ಶ್ರೀ ಆರ್. ಎಂ. ಪಾಟೀಲ, ಶ್ರೀ ಕಲ್ಲನಗೌಡ ತಮ್ಮನಗೌಡ ಪಾಟೀಲ, ಶ್ರೀ ಆರ್. ಆರ್. ಪಾಟೀಲ, ಶ್ರೀ ದಾದು ಲಕ್ಷ್ಮಣ ಕಾಟೆ, ಶ್ರೀ ಎಂ.ಎಂ. ಮುತಾಲಿಕ್ ದೇಸಾಯಿ, ಶ್ರೀ ಎಸ್. ಎಸ್. ಪಾಟೀಲ, ಶ್ರೀ ಎಂ. ಬಿ. ವಾಲಿ, ಶ್ರೀ ಬಿ. ಪಿ. ಬಸಪ್ಪ, ಶ್ರೀ ಬಿ. ಬಿ. ಪಾಟೀಲ (ವ್ಯವಸ್ಥಾಪಕ ನಿರ್ದೇಶಕರು) ಶ್ರೀ ಬಿ. ಎ. ಶಾಹೀರ ಡೈರೆಕ್ಟರ್ ಹಾಗೂ ಮೊದಲಾದ ಪ್ರಮೋಟರ್‌ರಿಂದ ಬಹುಬೇಗನೆ ಮೈಕೊಡವಿ ಎದ್ದುನಿಂತಿತು.

ದಿನಾಂಕ ೦೬-೧೧-೧೯೭೪ರಂದು ಆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಅವರ ಅಧ್ಯಕ್ಷತೆಯಲ್ಲಿ, ಆಗಿನ ಭಾರತ ಸರಕಾರದ ಉಪರಾಷ್ಟ್ರಪತಿಗಳಾಗಿದ್ದ ಶ್ರೀಮಾನ್ ಬಿ. ಡಿ. ಜತ್ತಿ ಅವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡು ಕಾರ್ಖಾನೆ ಕಾರ್ಯಾರಂಭ ಮಾಡಿ, ತನ್ನ ಮೊದಲ ಹೆಜ್ಜೆಯನ್ನು ಮೂಡಿಸಿತು.

೧೯೭೪, ೭೫ರ ಸಾಲಿನಿಂದ ಪ್ರತಿ ದಿನ ೧೨೫೦ ಮೆಟ್ರಿಕ್ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯದೊಂದಿಗೆ ತನ್ನ ಪ್ರಥಮ ಪ್ರಾಯೋಗಿಕ ಹಂತದಲ್ಲಿಯೇ ೧ ಲಕ್ಷ ಚೀಲ ಸಕ್ಕರೆಯನ್ನು ಉತ್ಪಾದಿಸಿ, ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಂತರ ಸುಮಾರು ೮ ವರ್ಷಗಳ ಕಾಲ ನಿರಂತರ ಕಾರ್ಖಾನೆಯ ಅಭಿವೃದ್ಧಿಗೆ ಶ್ರೀ ಚಿದಾನಂದ ಕೋರೆಯವರು ಅಧ್ಯಕ್ಷರಾಗಿ, ಸಹಕಾರಿಗಳು ಮತ್ತು ಕಾರ್ಮಿಕರ ಜೊತೆಗೂಡಿ ದುಡಿದ ಅವರ ನಿಸ್ವಾರ್ಥದ ಅವಿರತ ಪರಿಶ್ರಮ ಇಂದಿನ ಕಾರ್ಖಾನೆಯ ಶ್ರೇಯಸ್ಸಿಗೆ ಸುಭದ್ರ ಬುನಾದಿಯನ್ನು ಹಾಕಿದುದಲ್ಲದೇ, ೨೦೦೦ ಟಿ.ಸಿ.ಡಿ. ವಿಸ್ತರಣೆಗೆ ಅರ್ಜಿ ಸಲ್ಲಿಸಿದ ಅವರ ಶ್ರಮದ ಫಲವಾಗಿದೆ.[೫]

ಹೀಗೆ ೭೦ರ ದಶಕದಲ್ಲಿ ಉತ್ತರ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಯನ್ನು ಮಹಾರಾಷ್ಟ್ರದ ಸಹಕಾರಿ ಚಳುವಳಿ ಹಾಗೂ ಕರ್ನಾಟಕದ ಗಡಿಭಾಗದಲ್ಲಿನ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಈ ಕಾರ್ಖಾನೆಯನ್ನು ಸ್ಥಾಪಿಸುವುದರ ಮೂಲಕ ಅನೇಕ ವರ್ಷಗಳಿಂದ ಬೆಲ್ಲವನ್ನು ಉತ್ಪಾದಿಸಿ ಹೆಚ್ಚಿನ ಆದಾಯ ಪಡೆಯದೇ ಸಂಕಷ್ಟಕ್ಕೆ ಸಿಲುಕುತ್ತಿದ್ದ ರೈತರಿಗೆ ವರದಾನವಾಗಿ ಈ ಕಾರ್ಖಾನೆಯು ಕಬ್ಬು ಬೆಳೆಗಾರರಿಗೆ ಹೊಸ ಭರವಸೆಯನ್ನು ಒದಗಿಸಿತ್ತು. ಕೃಷ್ಣಾನದಿ ಭಾಗದಲ್ಲಿ ನೀರು ವಿಪುಲವಾಗಿರುವುದರಿಂದ ಹಾಗೆಯೇ ಫಲವತ್ತಾದ ಭೂಮಿಯೂ ಆಗಿರುವುದರಿಂದ ಕಬ್ಬು ಬೆಳೆಗೆ ಕಾರ್ಖಾನೆಯ ಮೂಲಕ ಹೆಚ್ಚಿನ ಆದಾಯ ಪಡೆದು. ರೈತರು ತಮ್ಮ ಬದುಕನ್ನು ಸುಂದರವಾಗಿ

ಕಟ್ಟಿಕೊಳ್ಳಲು ಈ ಕಾರ್ಖಾನೆಯು ಪ್ರಯೋಜನಕಾರಿಯಾಯಿತು.

ಕಾರ್ಖಾನೆಯ ಆಧುನೀಕ ಶಿಲ್ಪಿ ಡಾ. ಪ್ರಭಾಕರ ಕೋರೆಯವರು :

೧೯೮೪ರಲ್ಲಿ ಶ್ರೀ ಚಿದಾನಂದ ಕೋರೆಯವರು ನಿಧನ ಹೊಂದಿದ ನಂತರ ಜನರು ಹಾಗೂ ಕಾರ್ಖಾನೆಯ ಸರ್ವ ಸದಸ್ಯರು ಶ್ರೀ ಪ್ರಭಾಕರ ಕೋರೆಯವರು ನಾಯಕತ್ವವಹಿಸಿಕೊಳ್ಳಬೇಕು ಎಂದಾಗ, ಅವರ ನೇತೃತ್ವದಲ್ಲಿಯೇ ಚುನಾವಣೆ ನಡೆಯಿತು. ೧೯೯೦ರ ದಶಕದ ನಂತರ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳ ಸ್ಥಿತಿಗತಿಯಲ್ಲಿ ಸಾಕಷ್ಟು ಏರುಪೇರುಗಳಾದವು. ಸಕ್ಕರೆ ಕಾರ್ಖಾನೆಗಳು ಸಂಕಷ್ಟಕ್ಕೆ ಸಿಲುಕಿದವು. ಆಗ ಶ್ರೀ ಪ್ರಭಾಕರ ಕೋರೆಯವರು, ಕಾರ್ಖಾನೆಗೆ ಲಾಭ ಹೆಚ್ಚಿಸುವ ದೃಷ್ಟಿಯಿಂದ ಪರ್ಯಾಯ ಯೋಜನೆಗಳನ್ನು ಪ್ರಾರಂಭಿಸಿದರು. ಕಾರ್ಖಾನೆಯು ದಿನಂಪ್ರತಿ ಕಬ್ಬು ಅರಿಯುವ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೆಯೇ ರೈತರಿಗೆ ಸೂಕ್ತವಾದ ತರಬೇತಿ ಕೊಡುವ ಮೂಲಕ ಕಬ್ಬಿನ ಇಳುವರಿ ಹೆಚ್ಚಾಗುವಂತೆ ಮಾಡಬೇಕು ಮತ್ತು ಕಾರ್ಖಾನೆಯಲ್ಲಿ ಡಿಸ್ಟಿಲರಿ ಈಥನಾಲ್ ಘಟಕ ಸ್ಥಾಪಿಸಬೇಕು. ಹಾಗೂ ವಿದ್ಯುತ್ತನ್ನು ಉತ್ಪಾದಿಸಬೇಕು, ಅಲ್ಲದೇ ಪಾಕೇಟ್ ತಯಾರಿಕಾ ಘಟಕಗಳನ್ನು ಸ್ಥಾಪಿಸಿ, ಕಾರ್ಖಾನೆಯ ಲಾಭ ಹೆಚ್ಚಿಸಬೇಕು ಎಂದು ನಿರ್ಣಯಿಸಿದ ಶ್ರೀ ಪ್ರಭಾಕರ ಕೋರೆಯವರು, ಕಾರ್ಖಾನೆಯ ನೇತೃತ್ವವಹಿಸಿದ ನಂತರದ ಕಾರ್ಖಾನೆಯ 'ಸುವರ್ಣಯುಗ'ದ ಪ್ರಾರಂಭ ಎಂದೇ ಅರ್ಥೈಸಲಾಗುತ್ತದೆ.

ಕಾರ್ಖಾನೆಯಲ್ಲಿ ಹೊಸ ಯೋಜನೆಗಳನ್ನು ಹಾಕಿಕೊಳ್ಳಲು ಕೇಂದ್ರ ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಪಡೆಯುವುದು ಅಷ್ಟು ಸುಲಭವೇನೂ ಆಗಿರಲಿಲ್ಲ. ೧೯೯೦ರ ದಶಕದಲ್ಲಿ ಶ್ರೀ ಪ್ರಭಾಕರ ಕೋರೆಯವರು ಸಂಸತ್ ಸದಸ್ಯರಾಗಿದ್ದರಿಂದ ಹಾಗೂ ಕೇಂದ್ರ ಸರ್ಕಾರದ ಮಟ್ಟದಲ್ಲಿ ಮತ್ತು ರಾಜ್ಯ ಸರ್ಕಾರದೊಂದಿಗೆ ಉತ್ತಮ ಸಂಬಂಧ ಹೊಂದಿದ ಪರಿಣಾಮವಾಗಿ ಕಾರ್ಖಾನೆಯಲ್ಲೂ ಹೊಸ ಯೋಜನೆಗಳಾದ ವಿದ್ಯುತ್, ಸ್ಪಿರಿಟ್, ಈಥನಾಲ್ ಘಟಕ ಸ್ಥಾಪನೆಗೆ ಹಾಗೂ ೨೦೦೦ ಮೆಟ್ರಿಕ್ ಟನ್ ಕಬ್ಬು ಅರೆಯುವ ಸಾಮರ್ಥ್ಯವನ್ನು, ಪ್ರತಿದಿನ ೫,೮೦೦ ಮೆಟ್ರಿಕ್ ಟನ್‌ಗೆ ಪ್ರತಿದಿನ ಹೆಚ್ಚಿಸಲು ಶ್ರೀ ಪ್ರಭಾಕರ ಕೋರೆಯವರ ಶ್ರಮದ ಫಲವಾಗಿ ಕಾರ್ಖಾನೆಗೆ ಪರವಾನಿಗೆ ಸಿಕ್ಕಿತು.[೬] ಅದೇ ಕಾರ್ಖಾನೆಯು ಹಿಂದಿನ ಆರ್ಥಿಕ ತೊಂದರೆಗಳನ್ನೆಲ್ಲಾ ತೊಡೆದು ಹಾಕಿತಲ್ಲದೇ, ಪ್ರತಿದಿನ ಕಬ್ಬು ಅರಿಯುವ ಸಾಮರ್ಥ್ಯವನ್ನು ೩೫೦೦ರವರೆಗೆ ಹೆಚ್ಚಿಸುವಲ್ಲಿ ಕಾರಣರಾದರು. ಶ್ರೀ ಪ್ರಭಾಕರ ಕೋರೆಯವರ ದೂರದೃಷ್ಟಿ ಹಾಗೂ ಅವಿಶ್ರಾಂತ ದುಡಿಮೆಯ ಫಲವಾಗಿಯೇ ಈ ಕಾರ್ಖಾನೆಗೆ ಹೊಸ ಆಯಾಮ ಒದಗಿಸಿತು. ವಿಶ್ವಮುಕ್ತ ವ್ಯಾಪಾರ ಒಡಂಬಡಿಕೆಯ ಒಪ್ಪಂದದಿಂದಾಗಬಹುದಾದ ಪರಿಣಾಮಗಳನ್ನು ಸಕಾಲದಲ್ಲಿಯೇ ಊಹಿಸಿ ಬರಬಹುದಾದ ಸಂಕಷ್ಟಗಳಿಗೆ ಪರಿಹಾರ ಕಂಡುಹಿಡಿದು, ಸಕ್ಕರೆ ಕಾರ್ಖಾನೆಗಳು ಹಾಗೂ ಕಬ್ಬು ಬೆಳೆಗಾರರ ಉಳಿವಿಗಾಗಿ ಪರ್ಯಾಯ ಆದಾಯ ಮೂಲಗಳನ್ನು ಗುರುತಿಸಿ, ಕಾರ್ಖಾನೆಗೆ ಹೊಸ ಪರಿಕಲ್ಪನೆಗಳನ್ನು ರೂಪಿಸಿ ಅನುಷ್ಠಾನದಲ್ಲಿ ತಂದಿರುವ ಕೀರ್ತಿ ಶ್ರೀ ಪ್ರಭಾಕರ ಕೋರೆಯವರದು. ಇವರ ಯೋಜನೆಗಳ ಫಲವಾಗಿ ಈ ಕಾರ್ಖಾನೆಯು ಸಾಧನೆಗಳ ಶಿಖರಕ್ಕೇರಿದೆ. ಇಂದು ದೇಶದ ಪ್ರಗತಿಶೀಲ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ

ಕಾರ್ಖಾನೆಯು ಒಂದು ಎನ್ನುವ ಹೆಮ್ಮೆಯನ್ನು ಈ ಕಾರ್ಖಾನೆಯು ಪಡೆಯಬೇಕಾದರೆ, ಶ್ರೀ ಪ್ರಭಾಕರ ಕೋರೆಯವರ ದೂರದೃಷ್ಟಿ, ಪ್ರಾಮಾಣಿಕತೆ, ಮುಂದಾಲೋಚನೆಗಳೇಕಾರಣ. ನುಡಿದಂತೆ ನಡೆದು, ಕೊಟ್ಟ ಭರವಸೆಗಳನ್ನು ಚಾಚು ತಪ್ಪದೇ ಕೃತಿಯಲ್ಲಿ ತಂದ ಶ್ರೀ ಪ್ರಭಾಕರ ಕೋರೆಯವರ ಕರ್ತವ್ಯ ಶಕ್ತಿಯನ್ನು ರೈತಾಪಿ ವರ್ಗ ಮನಸಾರೆ ಮೆಚ್ಚಿದೆ. ೧೯೮೪ ರಿಂದ ೨೦೦೮ರವರೆಗೆ ನಡೆದ ಕಾರ್ಖಾನೆಯ ಸಂಚಾಲಕ ಮಂಡಳಿಯ ಚುನಾವಣೆಯಲ್ಲಿ ಶ್ರೀ ಪ್ರಭಾಕರ ಕೋರೆಯವರ ನೇತೃತ್ವದ ತಂಡ ಗೆಲ್ಲುತ್ತಿರುವುದೇ ಇದಕ್ಕೆ ಒಂದು ಸ್ಪಷ್ಟ ನಿದರ್ಶನವಾಗಿದೆ.[೭]

ಶ್ರೀ ಪ್ರಭಾಕರ ಕೋರೆಯವರ ನೇತೃತ್ವದಲ್ಲಿ ಕಾರ್ಖಾನೆಯ ಆಡಳಿತ ಮಂಡಳಿಯವರು ಕಬ್ಬಿನ ಉಪ ಉತ್ಪಾದನೆಗಳನ್ನು ಈ ಕೆಳಗಿನ ಲಾಭಕರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದ್ದಾರೆ.

ಡಿಸ್ಟಿಲರಿ / ಈಥನಾಲ್ ಘಟಕದ ಸ್ಥಾಪನೆ :

ಸಕ್ಕರೆ ಕಾರ್ಖಾನೆಗಳು ಬರೀ ಕಬ್ಬನ್ನು ಅರೆದು ಸಕ್ಕರೆ ಉತ್ಪಾದನೆಯಿಂದ ಸಂಕಷ್ಟಕ್ಕೆ ಸಿಲುಕಿ, ಆರ್ಥಿಕವಾಗಿ ಸಾಕಷ್ಟು ಹಾನಿಯನ್ನು ಅನುಭವಿಸತೊಡಗಿದವು. ಈ ಕಾರಣಕ್ಕಾಗಿಯೇ ಇಂದು ಕರ್ನಾಟಕ ರಾಜ್ಯದಲ್ಲಿ ಅನೇಕ ಸಕ್ಕರೆ ಕಾರ್ಖಾನೆಗಳು ಆರ್ಥಿಕ ಹೊರೆ ತಾಳದೇ, ಕಾರ್ಮಿಕರಿಗೆ ಸಂಬಳ ಒದಗಿಸುವುದು ಹಾಗೂ ರೈತರಿಗೆ ಸಕಾಲದಲ್ಲಿ ಬಿಲ್‌ನ್ನು ಪೂರೈಸುವುದು ಆಗದೆ, ಎಷ್ಟೋ ಕಾರ್ಖಾನೆಗಳು ದಿವಾಳಿ ಅಂಚಿನಲ್ಲಿ ಬಂದು ನಿಂತಿರುವುದನ್ನು ಕಾಣುತ್ತೇವೆ. ಇದರಿಂದ ಪಾರು ಮಾಡಿ, ಸಕ್ಕರೆ ಕಾರ್ಖಾನೆಯನ್ನು ಲಾಭದಲ್ಲಿ ಕೊಂಡೊಯ್ಯುವ ಸಾಧನಗಳನ್ನು ಶೋಧಿಸಿ, ಆ ಮೂಲಕ ಇಂದು ನಿರಂತರವಾಗಿ ಯಶಸ್ಸಿನತ್ತ ದಾಪುಗಾಲು ಹಾಕುತ್ತಿರುವ ಕೆಲವೇ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಈ ಕಾರ್ಖಾನೆಯೂ ಒಂದಾಗಬೇಕಾದರೆ ಶ್ರೀ ಪ್ರಭಾಕರ ಕೋರೆಯವರ ಸಾಧನಗಳ ಮೂಲಕ ಕಾರ್ಖಾನೆಯ ಹಾನಿಯನ್ನು ತುಂಬಿಕೊಳ್ಳುವ ಮುಂದಾಲೋಚನೆಯನ್ನು ಮಾಡಿದರು. ಅದರ ಭಾಗವಾಗಿಯೇ ವಸಂತದಾದಾ ಸಕ್ಕರೆ ಸಂಸ್ಥೆ ಪುಣೆ ಇವರ ತಾಂತ್ರಿಕ ಮಾರ್ಗದರ್ಶನದಲ್ಲಿ ಕಾಕಂಬಿಯಾಧಾರಿತ ೩೦ ಕೆ.ಎಚ್.ಪಿ. ಡಿಸ್ಟಿಲರಿ ಘಟಕವನ್ನು ರೂ. ೭.೭೧ ಕೋಟಿ ವೆಚ್ಚದಲ್ಲಿ ಸ್ಥಾಪಿಸಿ, ಅಕ್ಟೋಬರ್ ೨೦೦೨ರಿಂದ ಗುಣಮಟ್ಟದ ಸ್ಪಿರಿಟ್ ಉತ್ಪಾದಿಸಲು ಪ್ರಾರಂಭಿಸಿದರು. ಇದುವರೆಗೆ ೫.೫೦ ಕೋಟಿ ಲೀಟರಿಗೂ ಹೆಚ್ಚು ನಿರ್ಯಾತ ಗುಣಮಟ್ಟದ ಸ್ಪಿರಿಟ್ ಉತ್ಪಾದಿಸಿ ಮಾರಾಟ ಮಾಡುತ್ತಿರುವುದರಿಂದ ಈ ಘಟಕದಿಂದ ಕಾರ್ಖಾನೆಗೆ ಹೆಚ್ಚಿನ ಆರ್ಥಿಕ ಬೆಂಬಲ ಸಿಗುವಂತೆ ನೋಡಿಕೊಂಡರು. ಹಾಗೆಯೇ ಕೇಂದ್ರ ಸರ್ಕಾರದ ಇಂಧನ ನೀತಿಯಂತೆ ಈಥನಾಲ್ ಮಿಶ್ರಿತ ಪೆಟ್ರೋಲ್ ಬಳಕೆಯನ್ನು ಅನುಲಕ್ಷಿಸಿ, ಶ್ರೀ ಪ್ರಭಾಕರ ಕೋರೆಯವರು ೩೦ ಕೆ.ಎಚ್.ಪಿ.ಡಿ ಈಥನಾಲ್ ಘಟಕವನ್ನು ಸ್ಥಾಪಿಸಲು ಕ್ರಮಕೈಗೊಂಡು, ಸುಸಜ್ಜಿತವಾದ ಯಂತ್ರೋಪಕರಣಗಳನ್ನು ಅಳವಡಿಸಿ, ನಿಗದಿತ ಅವಧಿಯ ಒಳಗೆ ಕಾಮಗಾರಿಯನ್ನು ಮುಗಿಸಿ, ಕಾರ್ಖಾನೆಯ ಆದಾಯಕ್ಕೆ ಮತ್ತಷ್ಟು ಬಲ ಒದಗಿಸಿದ ಕೀರ್ತಿ ಶ್ರೀ ಪ್ರಭಾಕರ ಕೋರೆಯವರದ್ದು.

ಇದಲ್ಲದೆ ರಾಜ್ಯ ಸರ್ಕಾರದ ಇತ್ತೀಚಿನ ನೀತಿಯಂತೆ ಸಾರಾಯಿ ಘಟಕ ಪ್ರಾರಂಭಿಸುವ ಆಲೋಚನೆ ಮಾಡಿದ ಶ್ರೀ ಪ್ರಭಾಕರ ಕೋರೆಯವರು, ತಕ್ಷಣ ಕಾರ್ಯ ಪ್ರವೃತ್ತರಾಗಿ ರಾಜ್ಯ ಸರ್ಕಾರದಿಂದ ಅನುಮತಿ ಪಡೆದು

ಸುಮಾರು ೪೫ ಲಕ್ಷ ರೂಪಾಯಿ ವೆಚ್ಚದಲ್ಲಿ ಸಾರಾಯಿ ಪಾಕೇಟ್ ತಯಾರಿಕಾ ಘಟಕವನ್ನು ಪ್ರಾರಂಭಿಸುವ ಮೂಲಕ ಕಾರ್ಖಾನೆಯ ಮತ್ತೊಂದು ಕಳಸಪ್ರಾಯ ಸಾಧನೆಗೆ ಕಾರಣರಾದರು. ಇದನ್ನು ಸೆಪ್ಟೆಂಬರ್ ೨೦೦೫ರಲ್ಲಿ ಒಳ್ಳೆಯ ಗುಣಮಟ್ಟದ ಕಾಮಗಾರಿ ಹಾಗೂ ಯಂತ್ರೋಪಕರಣವನ್ನು ಅಳವಡಿಸಿ ಪ್ರಾರಂಭಿಸಿದರು.[೮]

ಮಹತ್ವಾಕಾಂಕ್ಷೆಯ ೩೦.೭ ಮೆಗಾ ವ್ಯಾಟ್ ಕೊ ಪಾವರ್ ಪ್ರೊಜೆಕ್ಟ್ :

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ರಾಜ್ಯ ವಿದ್ಯುತ್ ಸಮಸ್ಯೆಯಿಂದಾಗಿ ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದೆ. ವಿದ್ಯುತ್‌ನ ಸಮಸ್ಯೆಯಿಂದ ಅನೇಕ ಕೈಗಾರಿಕೆಗಳು ಕರ್ನಾಟಕದಲ್ಲಿ ತಮ್ಮ ಕಾರ್ಖಾನೆಗಳನ್ನು ಸ್ಥಾಪಿಸಲು ಹಿಂದೇಟು ಹಾಕುತ್ತಿವೆ. ಈ ಸಮಸ್ಯೆಯನ್ನು ಸೂಕ್ಷ್ಮವಾಗಿ ಗಮನಿಸಿ ಶ್ರೀ ಪ್ರಭಾಕರ ಕೋರೆಯವರು ಸಕ್ಕರೆ ಕಾರ್ಖಾನೆಯನ್ನು ವಿದ್ಯುತ್ ಸಮಸ್ಯೆಯಿಂದ ಪಾರುಮಾಡಬೇಕು ಹಾಗೂ ಚಿಕ್ಕೋಡಿ ತಾಲೂಕಿನ ರೈತರು ಅದರಲ್ಲೂ ಕಬ್ಬು ಬೆಳೆಗಾರರು ವಿದ್ಯುತ್ ಸಮಸ್ಯೆಯಿಂದ ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದ ಸಂಗತಿಯನ್ನು ಹಾಗೂ ನೀರಿನ ಸೌಲಭ್ಯವಿದ್ದರೂ ವಿದ್ಯುತ್‌ನ ಸಮಸ್ಯೆಯಿಂದ ರೈತರು ಬೆಳೆದ ಬೆಳೆಗಳು ಒಣಗುವ, ಕಡಿಮೆ ಇಳುವರಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಸ್ವತಃ ರೈತಾಪಿ ಮಧ್ಯದಲ್ಲಿಯೇ ಕೃಷಿಕ ಕುಟುಂಬದ ಸದಸ್ಯರಾಗಿರುವ ಶ್ರೀ ಪ್ರಭಾಕರ ಕೋರೆಯವರು ಅರಿತುಕೊಂಡು ಈ ಸಮಸ್ಯೆ ಈ ರೀತಿಯ ನಿರಂತರ ವಿದ್ಯುತ್‌ನ ಸಮಸ್ಯೆಯಿಂದ ಸಕ್ಕರೆ ಕಾರ್ಖಾನೆಯೂ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗಮನಿಸಿ, ಈ ಎರಡು ಸಮಸ್ಯೆಗಳಲ್ಲಿ ಕಾರ್ಖಾನೆಗೆ ನಿರಂತರ ವಿದ್ಯುತ್ ಒದಗಿಸಬೇಕು, ಅದರ ಜೊತೆಗೆ ರೈತರಿಗೂ ಅನುಕೂಲವಾಗುವಂತೆ ಮತ್ತು ವಿದ್ಯುತ್ ಸಮಸ್ಯೆಯಿಂದ ಅವರನ್ನು ಪಾರುಮಾಡಬೇಕೆಂದು ಬಯಸಿದರು.. ಇದರಿಂದ ಕಾರ್ಖಾನೆಯ ಲಾಭವೂ ಹೆಚ್ಚಾಗುತ್ತದೆ. ಈ ಉದ್ದೇಶಗಳನ್ನು ಇಟ್ಟುಕೊಂಡು ಶ್ರೀ ಪ್ರಭಾಕರ ಕೋರೆಯವರು ತಮ್ಮ ಮಹತ್ವಾಕಾಂಕ್ಷೆಯ ಯೋಜನೆಯಾದ ೩೦.೭ ಮೆಗಾವ್ಯಾಟ್ ಕೋಜನ್ ಪಾವರ್ ಪ್ರೊಜೆಕ್ಟನ್ನು ತನ್ನ ಯೋಜಿತ ವಿದ್ಯುತ್ ಉತ್ಪಾದಿಸಿ ೨೫-೩-೨೦೦೪ ರಿಂದ ಕೆ.ಪಿ.ಟಿ.ಸಿ.ಎಲ್. ಚಿಕ್ಕೋಡಿ ಗ್ರಿಡ್‌ಗೆ ಪೂರೈಸುತ್ತದೆ. ರಾಜ್ಯ ಸರ್ಕಾರದ ಖಾತ್ರಿಯೊಂದಿಗೆ ಹುಡ್ಕೋ ಬೆಂಗಳೂರು ಹಾಗೂ ಕೇಂದ್ರ ಸರಕಾರದ ಸಕ್ಕರೆ ಅಭಿವೃದ್ಧಿ ನಿಧಿ ಇವರ ಅವಧಿಯ ಸಾಲದ ನೆರವಿನೊಂದಿಗೆ ಒಟ್ಟು ೫೫.೬೦ ಕೋಟಿ ಬಂಡವಾಳ ಹೂಡಿ ಯೋಜನಾ ವೆಚ್ಚದಲ್ಲಿ ಹೆಚ್ಚಳ ಇಲ್ಲದೇ ಕೇವಲ ೧೫ ತಿಂಗಳಲ್ಲಿ ಈ ಬೃಹತ್ ಯೋಜನೆಯ ಪೂರೈಕೆಗೆ ರೂ. ೨೫ ಲಕ್ಷಗಳ ಸಬ್ಸಿಡಿ ಪಡೆಯಲು ಈ ಘಟಕವೂ ಅರ್ಹತೆ ಹೊಂದಿದೆ. ಇಲ್ಲಿಯವರೆಗಿನ ಈ ಘಟಕದ ಅವಧಿಯ ಸಾಲ, ಸಾಲದ ಕಂತು ಹಾಗೂ ಬಡ್ಡಿಗಳನ್ನು ತೀರಿಸಿದೆ. ಇದು ಶ್ರೀ ಪ್ರಭಾಕರ ಕೋರೆಯವರ ಪ್ರಾಮಾಣಿಕತೆ, ಕಾರ್ಯದಕ್ಷತೆಗೆ ಸಾಕ್ಷಿಯಾಗಿದೆ. ಇವತ್ತು ಎಷ್ಟೋ ಕಾರ್ಖಾನೆಗಳು ಪಡೆದ ಸಾಲವನ್ನು ತೀರಿಸದೇ ದಿವಾಳಿ ಅಂಚಿನಲ್ಲಿರುವುದನ್ನು ನಾವು ಕಾಣುತ್ತೇವೆ. ಇನ್ನೂ ಸಹವಿದ್ಯುತ್ ಘಟಕದ ೧೨೫ ಟಿ.ಪಿ.ಎಚ್. ಸಾಮರ್ಥ್ಯದ ಸಹ ವಿದ್ಯುತ್ ಘಟಕದ ಬಾಯ್ಲರವು ಸಕ್ಕರೆ ಘಟಕ ಹಾಗೂ ಈಥನಾಲ್ ಘಟಕಗಳ ಸ್ಟೀಮ್ ಮತ್ತು ವಿದ್ಯುತ್ ಅವಶ್ಯಕತೆಗಳನ್ನು ನೀಗಿಸುತ್ತಿರುವುದರಿಂದ ಉತ್ಪಾದನೆಯ ವೆಚ್ಚದಲ್ಲಿ ಸಾಕಷ್ಟು ಕಡಿತ ಸಾಧಿಸಲಾಗುತ್ತದೆ. ಈ ಘಟಕವನ್ನು

೨೧-೦೪-೨೦೦೭ರಂದು ಅಂದಿನ ಕರ್ನಾಟಕದ ಜನಪ್ರಿಯ ಯುವ ಮುಖ್ಯಮಂತ್ರಿಗಳಾದ ಶ್ರೀ ಎಚ್. ಡಿ. ಕುಮಾರಸ್ವಾಮಿಯವರನ್ನು ಕರೆಸಿ, ಕಾರ್ಖಾನೆಯ ಆವರಣದಲ್ಲಿ ಬೃಹತ್ ಸಾರ್ವಜನಿಕ ಸಮಾರಂಭವನ್ನು ಸಂಘಟಿಸುವ ಮೂಲಕ ಈ ಯೋಜನೆಯನ್ನು ೨೧-೦೪-೨೦೦೭ ರಂದು ನಾಡಿಗೆ ಸಮರ್ಪಿಸಿದ ಕೀರ್ತಿಯು ಶ್ರೀ ಕೋರೆಯವರದಾಗಿದೆ.

ಅದೇ ದಿನದಂದು ಡಿಸ್ಟಲರಿ ಘಟಕವನ್ನು ಅಂದಿನ ಪ್ರತಿಪಕ್ಷ ನಾಯಕರಾದ ಶ್ರೀ ಎಚ್. ಕೆ. ಪಾಟೀಲರಿಂದ ಹಾಗೂ ಈಥನಾಲ್ ಘಟಕವನ್ನು ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ಆರ್. ವಿ. ದೇಶಪಾಂಡೆ ಅವರು ಉದ್ಘಾಟಿಸಿದರು. ಅಂದಿನ ಸಮಾರಂಭಕ್ಕೆ ಸಹಸ್ರಾರು ರೈತರು ಕಾರ್ಖಾನೆಯ ಸದಸ್ಯರು, ಈ ಮೂರು ಬೃಹತ್ ಯೋಜನೆಗಳನ್ನು ಕಾರ್ಖಾನೆಯಲ್ಲಿ ಪ್ರಾರಂಭಿಸಿ, ಕಾರ್ಖಾನೆಯ ಲಾಭ ಹೆಚ್ಚಿಸುವುದಲ್ಲದೇ, ಅಪರೋಕ್ಷವಾಗಿ ಸಾಕಷ್ಟು ನಿರುದ್ಯೋಗಿ ಯುವಕರಿಗೆ ಉದ್ಯೋಗದ ಭಾಗ್ಯ ಕಲ್ಪಿಸಿದರು ಎಂದು ಜನರು ಶ್ರೀ ಪ್ರಭಾಕರ ಕೋರೆಯವರ ಬಗ್ಗೆ ಮುಕ್ತವಾಗಿ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.[೯]

ರೈತರ ಅಭಿವೃದ್ಧಿಗೆ ಶ್ರೀ ಪ್ರಭಾಕರ ಕೋರೆಯವರು ಹಾಕಿಕೊಂಡ ವಿನೂತನ ಯೋಜನೆಗಳು :

ಆಧುನಿಕ ಯುಗದಲ್ಲಿ ರೈತರು ಕೃತಕ ರಾಸಾಯನಿಕ ಗೊಬ್ಬರವನ್ನು ವ್ಯಾಪಕವಾಗಿ ಬಳಸಿ, ಭೂಮಿಯ ಫಲವತ್ತತೆಗೆ ಧಕ್ಕೆ ತಂದುಕೊಳ್ಳುವ ಮೂಲಕ ಸಕ್ಕರೆ ಅಂಶ ಕಡಿಮೆ ಹಾಗೂ ಕಬ್ಬಿನ ಇಳುವರಿಯಿಂದಾಗಿ ಸಾಕಷ್ಟು ಹಾನಿಯನ್ನು ಅನುಭವಿಸುತ್ತಿದ್ದರು, ಇದಕ್ಕೆ ರೈತರಲ್ಲಿನ ತಿಳುವಳಿಕೆಯ ಕೊರತೆ ಹಾಗೂ ವೈಜ್ಞಾನಿಕ ಪದ್ಧತಿಯ ಬಗ್ಗೆ ಮಾಹಿತಿ ಇಲ್ಲದೇ ಇರುವುದು ಒಂದು ಅಂಶ ಎನ್ನುವುದನ್ನು ಶ್ರೀ ಪ್ರಭಾಕರ ಕೋರೆಯವರು ತಿಳಿದುಕೊಂಡು, ಕಡಿಮೆ ಅವಧಿಯಲ್ಲಿ ಹೆಚ್ಚು ಇಳುವರಿ ಕೊಡುವ ಮಾರ್ಗಗಳನ್ನು ರೈತರಿಗೆ ಸೂಕ್ತವಾದ ಮಾಹಿತಿಯೊಂದಿಗೆ ಕೊಡಿಸಬೇಕು ಎಂದು ನಿರ್ಣಯಿಸಿದರು.

ಕಬ್ಬು ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ, ರೈತರಿಗೆ ಸೂಕ್ತವಾದ ಮಾರ್ಗದರ್ಶನವನ್ನು ಈ ಕೇಂದ್ರದ ಮೂಲಕ ನೀಡಬೇಕು ಹಾಗೂ ಇದರಿಂದ ರೈತರಿಗೆ ಯಾವ ತಳಿಯ ಕಬ್ಬನ್ನು ಯಾವ ಸಮಯದಲ್ಲಿ ಬೆಳೆದರೆ ಸೂಕ್ತ, ಅದಕ್ಕೆ ಅಗತ್ಯವಾದ ಯಾವ ಗೊಬ್ಬರವನ್ನು ಯಾವ ಸಮಯದಲ್ಲಿ ಮತ್ತು ಎಷ್ಟು ಪ್ರಮಾಣದಲ್ಲಿ ಬಳಕೆ ಮಾಡಬೇಕು ಹಾಗೂ ಬೆಳೆ ರೋಗದ ನಿಯಂತ್ರಣಕ್ಕೆ ಉಪಾಯ ಮುಂತಾದ ಸಂಗತಿಗಳನ್ನು ಅಧ್ಯಯನ ಮಾಡಿ, ವೈಜ್ಞಾನಿಕವಾಗಿ ರೈತರಿಗೆ ಸಲಹೆ ಕೊಡುವುದು ಸೂಕ್ತ ಎಂದು ಕೆ.ಎಲ್.ಇ. ಸಂಸ್ಥೆಯ ಮೂಲಕ ಈ ಸಂಶೋಧನಾ ಕೇಂದ್ರವನ್ನು ಅಂಕಲಿಯಲ್ಲಿ ಸ್ಥಾಪಿಸಿದರು.[೧೦]

ಕಬ್ಬು ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರ ಅಂಕಲಿ :

ಕೆ.ಎಲ್.ಇ. ಸಂಸ್ಥೆಯ ಕೃಷಿ ಸಂಶೋಧನಾ ಮತ್ತು ತರಬೇತಿ ಶಾಲೆ. ಇವರ ಸಹಯೋಗದಲ್ಲಿ ಅಂಕಲಿ

ಗ್ರಾಮಕ್ಕೆ ಹೊಂದಿಕೊಂಡು ಕಾರ್ಖಾನೆಯ ಮಾಲೀಕತ್ವದ ೫೩ ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಅಲ್ಲಿ ಸುಸಜ್ಜಿತ ಕಬ್ಬು ಅಭಿವೃದ್ಧಿ ಹಾಗೂ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದರು. ಹೆಚ್ಚು ಸಕ್ಕರೆ ಅಂಶವುಳ್ಳ ಹಾಗೂ ಕಡಿಮೆ ಅವಧಿಯಲ್ಲಿ ಬೆಳೆಯುವ ೧೬ ವಿವಿಧ ತಳಿಗಳ ಕಬ್ಬನ್ನು ಅಭಿವೃದ್ಧಿಪಡಿಸಿ, ಕಬ್ಬ ಬೆಳೆಗಾರ ಸದಸ್ಯರಿಗೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಹಂಚಲಾಗುತ್ತದೆ. ಮಣ್ಣು, ನೀರು, ಬೀಜ ಮತ್ತು ಕೃಷಿ ಪರಿಕರಗಳ ಪರಿಕ್ಷೆಗಾಗಿ ಒಂದು ಸುಸಜ್ಜಿತ ಪ್ರಯೋಗಾಲಯವನ್ನು ಸ್ಥಾಪಿಸಿದ್ದಾರೆ. ಇತ್ತೀಚೆಗೆ ಅಂದರೆ ೨೦೦೭-೨೦೦೮ನೇ ಸಾಲಿನಲ್ಲಿ ದಕ್ಷಿಣ, ಪಶ್ಚಿಮ ಮಹಾರಾಷ್ಟ್ರ ಭಾಗದಿಂದ ಅತೀ ವೇಗದಲ್ಲಿ ಪಸರಿಸುತ್ತಿದ್ದ, ಬಿಳಿ ಉಣ್ಣೆ ರೋಗವನ್ನು ಕರ್ನಾಟಕದ ಗಡಿಭಾಗದಲ್ಲಿ ಪರಿಣಾಮಕಾರಿಯಾಗಿ ನಿಗ್ರಹಿಸಿದ್ದರಿಂದ, ರಾಜ್ಯದ ಒಳನಾಡಿನ ಕಬ್ಬಿಗೆ ಆಗುತ್ತಿದ್ದ ಹೆಚ್ಚಿನ ಪ್ರಮಾಣದ ಅನಾಹುತವನ್ನು ತಡೆಗಟ್ಟುವ ಪ್ರಯತ್ನ ಮಾಡಿದ್ದಾರೆ. ಆಯಾ ಹಳ್ಳಿಗಳಲ್ಲಿ ಹಾಗೂ ಕೃಷಿ ಕೇಂದ್ರದಲ್ಲಿ ಆಗಾಗ ನುರಿತ ಕೃಷಿ ತಜ್ಞರಿಂದ ರೈತರ ಕೃಷಿ ಅಭಿವೃದ್ಧಿಗಾಗಿ ತರಬೇತಿ ನೀಡುತ್ತಿರುವುದರಿಂದ ಈ ಭಾಗದ ರೈತರು ಸಾಕಷ್ಟು ಕೃಷಿ ತಂತ್ರಜ್ಞಾನದ ಉಪಯುಕ್ತ ಮಾಹಿತಿ ಪಡೆಯುತ್ತಿದ್ದಾರೆ.

ಈ ಪ್ರಯತ್ನವನ್ನು ಕಂಡು ದಕ್ಷಿಣ ಭಾರತದ ಸಕ್ಕರೆ ತಂತ್ರಜ್ಞರ ಸಂಸ್ಥೆ ದಕ್ಷಿಣ ಭಾರತದ ಉತ್ತಮ ಕೃಷಿ ಕೇಂದ್ರಕ್ಕೆ ನೀಡಲಾಗುವ 'ಪಾರ್ಥ ಸಾರಥಿ ಅವಾರ್ಡ್'ನ್ನು ನೀಡಿ ಪುರಸ್ಕರಿಸಿದ್ದಾರೆ.[೧೧]

ಇದು ಕೋರೆಯವರು ಕಾರ್ಖಾನೆಯ ಅಭಿವೃದ್ಧಿಗಾಗಿ ಮಾಡಿದ ಕಾರ್ಯಕ್ಕೆ ಸಂದ ಗೌರವವಾಗಿದೆ. ಈ ಸಂಶೋಧನಾ ಕೇಂದ್ರದಿಂದ ಇಲ್ಲಿಯವರೆಗೂ ಅನೇಕ ರೈತರು ಅದರಲ್ಲೂ ಕಬ್ಬು ಬೆಳೆಗಾರರು ಸಾಕಷ್ಟು ಪ್ರಯೋಜನ ಪಡೆದು, ತಮ್ಮ ಕಬ್ಬಿನ ಇಳುವರಿಯನ್ನು ಹೆಚ್ಚಿಸಿಕೊಂಡು ಲಾಭಗಳಿಸಿದ್ದಾರೆ. ಆ ಮೂಲಕ ಈ ರೈತಾಪಿ ವರ್ಗದ ಜನರು ಶ್ರೀ ಪ್ರಭಾಕರ ಕೋರೆಯವರನ್ನು ಸದಾ ಸ್ಮರಣೀಯರನ್ನಾಗಿರಿಸಿಕೊಂಡಿದ್ದಾರೆ. ಇದಲ್ಲದೇ ಇನ್ನೂ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ರೈತರ ಸಲುವಾಗಿ ಹಾಗೂ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾರ್ಮಿಕ ವರ್ಗದವರ ಕಲ್ಯಾಣಕ್ಕಾಗಿ ಜಾರಿಗೊಳಿಸಿದ್ದಾರೆ.

೧. ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ರೈತರು ಹಾಗೂ ಕಾರ್ಮಿಕರ ಸಲುವಾಗಿ ಎಲ್ಲ ಅನುಕೂಲತೆಗಳುಳ್ಳ ಒಂದು ಸುಂದರ ಸಮುದಾಯ ಭವನವನ್ನು ನಿರ್ಮಿಸಿ, ರಿಯಾಯಿತಿ ದರದಲ್ಲಿ ಅವರ ಉಪಯೋಗಕ್ಕೆ ಅಣಿಗೊಳಿಸಿದ್ದಾರೆ. ಇಲ್ಲಿ ರೈತರಿಗೆ ಮುಕ್ತ ಚರ್ಚೆ ಹಾಗೂ ವಿಚಾರ ವಿನಿಮಯಕ್ಕೆ ಅವಕಾಶ ಒದಗಿಸಲಾಗಿದೆ.

೨. ಯಶಸ್ವಿನಿ ಮೆಡಿಕಲ್ (ವೈದ್ಯಕೀಯ) ಇನ್ಸುರೆನ್ಸ್ ಸ್ಕೀಮಿನಲ್ಲಿ ೧೫೦೦ಕ್ಕೂ ಹೆಚ್ಚು ಸದಸ್ಯ ರೈತರ ಆರೋಗ್ಯದ ಬಗ್ಗೆ ಕಾಳಜಿವಹಿಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ.

೩. ಅಪಘಾತ ವಿಮೆ ಯೋಜನೆಯಲ್ಲಿ ಕಾರ್ಖಾನೆಯ ಸಮಸ್ತ ರೈತರು ಹಾಗೂ ಕಾರ್ಮಿಕರನ್ನು ಒಳಪಡಿಸಿ, ಆಪತ್ಕಾಲಿಕ ದುರ್ಘಟನೆಗೆ ಬಲಿಯಾಗಿ ಅಕಾಲಿಕ ಮರಣ ಹೊಂದುವವರಿಗೆ ರೂ. ೫೦,೦೦೦ಗಳ ಪರಿಹಾರವನ್ನು

ನೀಡುವ ವ್ಯವಸ್ಥೆಯನ್ನು ಶ್ರೀ ಕೋರೆಯವರು ಮಾಡಿದ್ದಾರೆ.

೪. ಭಾರತ ಪೆಟ್ರೋಲಿಯಂ ಕಾರ್ಪೋರೇಶನ್‌ರವರ ಸಹಯೋಗದೊಂದಿಗೆ ರೈತರ ಮತ್ತು ಕಾರ್ಮಿಕರಿಗಾಗಿ ರಿಯಾಯಿತಿ ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ಒದಗಿಸಿ, ಅವರ ಮನೆಗಳಲ್ಲಿ ಹೊಗೆರಹಿತ ಒಲೆ ವ್ಯವಸ್ಥೆಯನ್ನು ಮಾಡಿಕೊಡುವ ಮೂಲಕ ಪರಿಸರ ಪ್ರೇಮವನ್ನು ಮೆರೆದ ಹೆಗ್ಗಳಿಕೆ ಶ್ರೀ ಕೋರೆಯವರದ್ದಾಗಿದೆ.

೫. ಕಾರ್ಖಾನೆಯ ಸಾಮರ್ಥ್ಯದ ಹೆಚ್ಚುವರಿಯೊಂದಿಗೆ ಉಪ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿರುವುದರಿಂದ ಸಹಜವಾಗಿ ಬೇಕಾಗುವ ಹೆಚ್ಚಿನ ತಾಂತ್ರಿಕ ನಿರ್ವಹಣೆ ಹಾಗೂ ಕಾರ್ಮಿಕರ ತರಬೇತಿಗಾಗಿ ಒಂದು ಮಾನವ ಸಂಪನ್ಮೂಲ ಇಲಾಖೆಯನ್ನು ಪ್ರಾರಂಭಿಸಿದ್ದಾರೆ. ಇದರಿಂದ ಕಾರ್ಮಿಕರ ಸಂಖ್ಯಾ ಗಾತ್ರವನ್ನು ಕಡಿಮೆಗೊಳಿಸಿ, ಸಿಬ್ಬಂದಿಯ ವೆಚ್ಚದಲ್ಲಿ ಮಿತವ್ಯಯ ಸಾಧಿಸುವ ಮೂಲಕ ಕಾರ್ಖಾನೆಗೆ ಅನಗತ್ಯವಾಗಿ ಬೀಳುವ ಆರ್ಥಿಕ ಹೊರೆಯಿಂದ ಪಾರು ಮಾಡಿದ ಕೀರ್ತಿ ಶ್ರೀ ಪ್ರಭಾಕರ ಕೋರೆಯವರದ್ದಾಗಿದೆ.

೬. ಸಕಾಲದಲ್ಲಿ ಕಬ್ಬು ಕಡಿದು ರೈತರಿಗೆ ಅನುಕೂಲವಾಗಲೆಂದು ಕಾರ್ಖಾನೆಗೆ ಪೂರೈಸುವಲ್ಲಿ, ಪ್ರತಿ ವರ್ಷ ರಸ್ತೆಗಳ ದುರಸ್ತಿ ಕಾರ್ಯ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ.

೭. ಕಾರ್ಖಾನೆಯ ಕಾರ್ಯಕ್ಷೇತ್ರದ ಬೇರೆ ಬೇರೆ ಊರುಗಳಲ್ಲಿ ಕಬ್ಬಿನ ಬೀಜ, ಗೊಬ್ಬರ, ಹಸಿರೆಲೆ ಗೊಬ್ಬರ ಇತ್ಯಾದಿ ಪೂರೈಕೆಗೂ ಪ್ರತಿವರ್ಷ ಕ್ರಮ ಕೈಗೊಳ್ಳುತ್ತಾ ಬಂದಿದ್ದಾರೆ.

೮. ಸದಸ್ಯರು ತಮ್ಮ ಜಮೀನುಗಳಿಗೆ ನೀರಾವರಿ ಸೌಕರ್ಯ ಏರ್ಪಡಿಸಿಕೊಳ್ಳಲು ಪೈಪ್‌ಲೈನ್ ಯೋಜನೆಗಳಿಗೆ, ಕೊಳವೆ ಬಾವಿ ಕೊರೆಯಿಸಲು ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಸಾಲ ಪಡೆದು ಅರ್ಹ ಫಲಾನುಭವಿ ಸದಸ್ಯರಿಗೆ ಸುಲಭವಾಗಿ ನೀಡಿದ್ದಾರೆ. ಸದಸ್ಯರು ತಮ್ಮ ಕೃಷಿ ಅಭಿವೃದ್ಧಿಯ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳಲು ಸದಸ್ಯರಿಗೆ ತಲಾ ರೂ ೨೫,೦೦೦ ಗಳವರೆಗೆ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ವಾಣಿಜ್ಯ ಬ್ಯಾಂಕುಗಳಿಂದ ಕೊಡಿಸುವ ಮೂಲಕ ರೈತರಿಗೆ ಆರ್ಥಿಕ ಸಹಾಯ ಒದಗಿಸಿದ್ದಾರೆ.

೯. ಕಾರ್ಖಾನೆಯಲ್ಲಿ ಈ ಮೇಲಿನ ರೈತರ ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡು ಹಣವನ್ನು ಖರ್ಚು ಮಾಡಿದ್ದರು. ಸಕಾಲದಲ್ಲಿಯೇ ರೈತರು ಪೂರೈಸಿದ ಕಬ್ಬಿನ ಬಿಲ್‌ಗಳನ್ನು ಪಾವತಿಸುತ್ತಾ, ಈ ಭಾಗದಲ್ಲಿಯೇ ಒಂದು ಮಾದರಿ ಸಕ್ಕರೆ ಕಾರ್ಖಾನೆಯನ್ನಾಗಿಸಿದ ಹೆಗ್ಗಳಿಕೆ ಶ್ರೀ ಪ್ರಭಾಕರ ಕೋರೆಯವರದ್ದಾಗಿದೆ.

೧೦. ಕಾರ್ಖಾನೆಯ ಕಾರ್ಯಕ್ಷೇತ್ರದಲ್ಲಿಯ ರೈತರ ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳಿಗೆ ಧನ ಸಹಾಯ ನೀಡುವ ಮೂಲಕ ಹಾಗೂ ಕಾರ್ಖಾನೆಯ ನಿವೇಶನದಲ್ಲಿಯೇ ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಪ್ರಾರಂಭಿಸಿ. ಸದಸ್ಯರ ಮಕ್ಕಳ ಶಿಕ್ಷಣಕ್ಕೆ ಸಹಾಯಧನ ಕೊಡುವ ಮೂಲಕ ಮಾನವೀಯತೆಯನ್ನು ಮೆರೆದ ಶ್ರೇಯಸ್ಸು ಶ್ರೀ ಪ್ರಭಾಕರ ಕೋರೆಯವರದ್ದಾಗಿದೆ.

೧೧. ಈ ಕಾರ್ಖಾನೆಯ ಪ್ರದೇಶದಲ್ಲಿ ಭಾಗದಲ್ಲಿ ಬಂದ ನೆರೆ ಹಾವಳಿಯ ಸಂದರ್ಭದಲ್ಲಿ ರೈತರ ಸಂಕಷ್ಟಗಳಿಗೆ ಸ್ಪಂದಿಸಿದ ಶ್ರೀ ಕೋರೆಯವರು ವೈದ್ಯಕೀಯ ಹಾಗೂ ಗಂಜಿ ಕೇಂದ್ರಗಳನ್ನು ತೆರೆದು ಮಾನವೀಯ ಮೌಲ್ಯಗಳನ್ನು ಮೆರೆದಿದ್ದಾರೆ. ಖುದ್ದಾಗಿ ಮುಂದೆ ನಿಂತು, ಕಾರ್ಖಾನೆಯ ಸಿಬ್ಬಂದಿಯ ಮೂಲಕ ಯಾವ ತೊಂದರೆಯೂ ಉಂಟಾಗದಂತೆ ಕ್ರಮ ಕೈಗೊಳ್ಳುವ ಮೂಲಕ ನೆರೆ ಹಾವಳಿಯಿಂದ ಬಾಧಿತ ರೈತಾಪಿ ವರ್ಗದ ಕಣ್ಣೀರು ಒರೆಸುವ ಕಾರ್ಯಮಾಡಿ, ಎಲ್ಲರಿಂದಲೂ ಮೆಚ್ಚುಗೆಯನ್ನು ಗಳಿಸಿದ್ದಾರೆ.[೧೨]

ಅಂತೆಯೇ ಈ ಕಾರ್ಖಾನೆಯು ಕಾರ್ಮಿಕ ವರ್ಗದವರು ಅತ್ಯಂತ ಸಂತೃಪ್ತಿಯಿಂದ ಸೇವೆಯನ್ನು ಸಲ್ಲಿಸುತ್ತ, ಕಾರ್ಖಾನೆಯ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದಾರೆ. ಕಳೆದ ೩೮ ವರ್ಷಗಳ ಇತಿಹಾಸದಲ್ಲಿ ಒಂದು ದಿನವೂ ಕಾರ್ಮಿಕ ವರ್ಗದವರು ಆಡಳಿತ ಮಂಡಳಿಯ ವಿರುದ್ಧ ಸಂಘರ್ಷದ ದಾರಿ ತುಳಿದಿಲ್ಲ, ಬದಲಾಗಿ ಈ ಕಾರ್ಖಾನೆಯ ಆವರಣದಲ್ಲಿರುವ ಸಮುದಾಯ ಭವನಕ್ಕೆ ಲಕ್ಷಾಂತರ ರೂ.ಗಳ ಉದಾರ ವಂತಿಗೆಯನ್ನು ನೀಡಿರುವುದು ವಿಶೇಷವಾಗಿದೆ. ಇಂದು ನಾವು ಕಾರ್ಖಾನೆಯ ಆಡಳಿತ ಮಂಡಳಿಯವರೊಂದಿಗೆ ಕಾರ್ಖಾನೆಗಳ ಕಾರ್ಮಿಕರು ವೇತನ ಹೆಚ್ಚಳಕ್ಕಾಗಿ, ಸರಿಯಾಗಿ ವೇತನ ಕೊಡದ ಸಲುವಾಗಿ ಹಾಗೂ ಬೋನಸ್ ಹಣ ಈ ಎಲ್ಲಾ ಸಮಸ್ಯೆಗಳಿಂದ ಆಡಳಿತ ಮಂಡಳಿಯ ವಿರುದ್ಧ ಹೋರಾಟ ಮಾಡುತ್ತಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಆದರೆ ಇಲ್ಲಿ ಶ್ರೀ ಕೋರೆಯವರ ನಾಯಕತ್ವವು ಎಲ್ಲರಿಗಿಂತ ಭಿನ್ನ ಎನ್ನುವುದಕ್ಕೆ ಇದೊಂದು ನಿದರ್ಶನ. ಆಡಳಿತ ಮಂಡಳಿಯವರು ಸಿಬ್ಬಂದಿಯೊಂದಿಗೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳುವಂತೆ ಮಾಡಿದ ಶ್ರೀ ಕೋರೆಯವರ ನಾಯಕತ್ವವು ಇತರರಿಗೆ ಮಾದರಿ ಎನ್ನಿಸದೇ ಇರದು.[೧೩]

ಕಾರ್ಖಾನೆಯಲ್ಲಿ ಕೋರೆಯವರು ಆಡಳಿತದ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕಿದ್ದಾರೆ. ಈ ವಿಷಯದಲ್ಲಿ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಂಡಿದ್ದರ ಪರಿಣಾಮ ಇವತ್ತು ಕಾರ್ಖಾನೆಯ ಲಾಭದಾಯಕವಾಗಿ ಮುನ್ನಡೆಯಲು ಕಾರಣವಾಗಿದೆ. ಮಂಜೂರಿಯಾದ ಒಟ್ಟು ೬೨೪ ಹುದ್ದೆಗಳು ಇದ್ದರೂ, ಇಲ್ಲಿನ ಕಾರ್ಮಿಕರ ಸಂಖ್ಯೆ ೭೧೯. ಅಗತ್ಯಕ್ಕಿಂತ ಹೆಚ್ಚಾಗಿ ನೌಕರರನ್ನು ಭರ್ತಿಮಾಡದೆ ಉಳಿತಾಯ ಮಾಡುವ ಮೂಲಕ ಕಾರ್ಖಾನೆಗೆ ಬೀಳುವ ಹೆಚ್ಚುವರಿ ಆರ್ಥಿಕ ಹೊರೆಯಿಂದ ಪಾರು ಮಾಡುದ್ದಾರೆ.[೧೪]

ಕಾರ್ಖಾನೆಯನ್ನು ಸಹಕಾರ ಸಂಸ್ಥೆಯಾಗಿ ಮಾರ್ಪಾಡು ಮಾಡಿಸುವಲ್ಲಿ ಶ್ರೀ ಪ್ರಭಾಕರ ಕೋರೆಯವರ ಪಾತ್ರ :

ಕಾರ್ಖಾನೆಯಲ್ಲಿ ಅನುಷ್ಠಾನಗೊಳಿಸಿದ ಈಥನಾಲ್, ಸಾರಾಯಿ ಉತ್ಪಾದನಾ ಯಂತ್ರೋಪಕರಣಗಳನ್ನೊಳಗೊಂಡ ಡಿಸ್ಟಿಲರಿ, ಘಟಕದ ಸಾಮರ್ಥ್ಯಕ್ಕೆ ತಕ್ಕಂತೆ ಕಾಕಂಜಿ ಹಾಗೂ ೩೦.೭ ಮೆಗಾವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕಕ್ಕೆ ಹಂಗಾಮಿನಲ್ಲಿ ಮಾತ್ರವಲ್ಲದೇ ಹೆಚ್ಚಿನ ಅವಧಿಗೆ ಬಗ್ಯಾಸ್ ಪೂರೈಸುವ ಸಂಪೂರ್ಣ ಹೊಣೆಗಾರಿಕೆಯು ಕೋರೆಯವರ ಮೇಲಿತ್ತು. ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಸಲಹೆಯಂತೆ ಕಾರ್ಖಾನೆಯು ಕಾರ್ಯ ಕ್ಷೇತ್ರವನ್ನು ರಾಜ್ಯದ ಸಮೀಪದ ಗಡಿಗೆ ಹೊಂದಿಕೊಂಡಿರುವ ಕೃಷ್ಣಾ ನದಿಗೆ ಪರಿಸರದ ಪ್ರದೇಶಗಳಲ್ಲಿ ವಿಪುಲವಾಗಿ ಕಬ್ಬು ಬೆಳೆಯುವ ಪ್ರದೇಶಕ್ಕೆ ಅಂದರೆ ಮಹಾರಾಷ್ಟ್ರ ರಾಜ್ಯದ ಕೆಲವು ಗ್ರಾಮಗಳಿಗೆ

ವಿಸ್ತರಿಸುವ ಕ್ರಮ ಕೈಗೊಳ್ಳಲಾಯಿತು. ಕಾರ್ಖಾನೆಯನ್ನು ಕೇಂದ್ರ ಸರ್ಕಾರದ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ನೊಂದಾಯಿಸುವ ಪ್ರಸ್ತಾವನೆ ಸಲ್ಲಿಸಿದ ಶ್ರೀಯುತರು, ಅದಕ್ಕೆ ತಮ್ಮ ಪ್ರಭಾವ ಬೀರಿ ಒಪ್ಪಿಗೆಯನ್ನು ಪಡೆಯಲು ಯಶಸ್ವಿಯಾದರು. ಈ ಒಪ್ಪಿಗೆ ದೊರೆಯಲು ಇನ್ನೊಂದು ಕಾರಣವೆಂದರೆ, ಶ್ರೀ ಪ್ರಭಾಕರ ಕೋರೆಯವರು. ೧೯೯೪ರಿಂದ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಯ ಮಹಾಮಂಡಲದ ನಿರ್ದೇಶಕರಾಗಿ ಅನೇಕ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವುದು. ಇದರ ಅಧ್ಯಕ್ಷರಾಗಿ ಶ್ರೀ ಕೋರೆಯವರು ಮಹಾರಾಷ್ಟ್ರ, ಉತ್ತರ ಪ್ರದೇಶದಂತಹ ಕಬ್ಬಿನ ವ್ಯವಹಾರದಲ್ಲಿ ಅಧಿಕ ಪ್ರಮಾಣದಲ್ಲಿ ಲಾಭ ಗಳಿಸಿದೆ. ರಾಜಕಾರಣಿಗಳನ್ನು ಹಿಂದಕ್ಕೆ ಸರಿಸಿ, ಆ ಸ್ಥಾನವನ್ನು ಪಡೆದಿದ್ದಾರೆ. ಇದು ಅವರ ವ್ಯಕ್ತಿತ್ವಕ್ಕೆ ಸಂದ ಸೂಕ್ತ ಗೌರವವಾಗಿದೆ.

ಕಾರ್ಖಾನೆಯ ಕಾರ್ಯ ಕ್ಷೇತ್ರವನ್ನು ಚಿಕ್ಕೋಡಿ ರಾಯಬಾಗ. ಅಥಣಿ, ಜಮಖಂಡಿ ಅಲ್ಲದೆ ನೆರೆಯ ಮಹಾರಾಷ್ಟ್ರದ ಕಾಗಲ್ ಮತ್ತು ಶಿರೋಳ್ ತಾಲೂಕಿನ ಗ್ರಾಮಗಳನ್ನೊಳಗೊಂಡ ೧೧೪ ಗ್ರಾಮಗಳ ವ್ಯಾಪ್ತಿಗೆ ವಿಸ್ತರಿಸುವ ಮೂಲಕ ಸುಮಾರು ೨೫,೬೩೦ ರೈತರನ್ನು ಹೊಸದಾಗಿ ಕಾರ್ಖಾನೆಯ ಸದಸ್ಯರನ್ನಾಗಿ ಮಾಡಿ, ಅವರ ಮೂಲಕ ಸುಮಾರು ೧೩.೧೯ ಕೋಟಿ ಶೇರ್ ಬಂಡವಾಳ ಕೂಡಿಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ.[೧೫]

ಕರ್ನಾಟಕ ರಾಜ್ಯದ ಹಲವಾರು ಸಕ್ಕರೆ ಕಾರ್ಖಾನೆಗಳು ತಮ್ಮ ಪ್ರದೇಶಗಳಲ್ಲಿ ಬೆಳೆದ ಕಬ್ಬನ್ನು ಪೂರ್ಣ ಪ್ರಮಾಣದಲ್ಲಿ ಅರೆಯದೆ ರೈತರಿಗೆ ತೊಂದರೆ ಕೊಡುವ ಈ ಸಂದರ್ಭದಲ್ಲಿ ಕಾರ್ಖಾನೆಯನ್ನು ತಮ್ಮ ಪ್ರದೇಶದೊಂದಿಗೆ ಹೋರ ರಾಜ್ಯದವರೆಗೂ ವಿಸ್ತರಿಸುವ ಮೂಲಕ ಶ್ರೀ ಕೋರೆಯವರು ಅದ್ಭುತವನ್ನು ಸಾಧಿಸಿದ್ದಾರೆ. ಪ್ರಾಮಾಣಿಕತೆ ಅದಮ್ಯ ವಿಶ್ವಾಸದ ಜೊತೆಗೆ ಅವರು ಕಾರ್ಮಿಕರ ಯೋಗಕ್ಷೇಮದ ಬಗ್ಗೆ ಹೊಂದಿರುವ ಕಳಕಳಿಯ ಪರಿಣಾಮವಾಗಿ ಇದು ಸಾಧ್ಯವಾಗಿದೆ. ಹೀಗೆ ಶ್ರೀ ಕೋರೆಯವರು ಹಲವಾರು ವಿಷಯಗಳಲ್ಲಿ ಆದರ್ಶರಪ್ರಾಯರಾಗಿ ನಿಲ್ಲುತ್ತಾರೆ.

ಶ್ರೀ ಪ್ರಭಾಕರ ಕೋರೆಯವರ ದೂರದೃಷ್ಟಿ, ಪ್ರಾಮಾಣಿಕತೆಯ ಪರಿಶ್ರಮದ ಫಲವಾಗಿ ಇಂದು ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯು ದೇಶದ ಅತ್ಯುತ್ತಮ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಒಂದು ಎಂಬ ಹೆಗ್ಗಳಿಕೆ ಗಳಿಸಿದೆ. ಇದಕ್ಕೆ ರಾಜ್ಯ ಮತ್ತು ದೇಶ ವಿದೇಶಗಳ ಅನೇಕ ಪ್ರಶಸ್ತಿಗಳು ಈ ಕಾರ್ಖಾನೆಯ ಪ್ರಗತಿಯನ್ನು ಕಂಡು ಹುಡುಕಿಕೊಂಡು ಬಂದಿವೆ.

೧. ೧೯೯೪-೯೫ರ ಸಾಲಿನಲ್ಲಿ ರಾಷ್ಟ್ರದಲ್ಲಿಯೇ ಹೆಚ್ಚಿನ ಸಕ್ಕರೆ ಇಳುವರಿಯ ಸಾಧನೆಗಾಗಿ ರಾಷ್ಟ್ರೀಯ ಸಕ್ಕರೆ ಕಾರ್ಖಾನೆಗಳ ಮಹಾಮಂಡಳಿ, ನವದೆಹಲಿ ಇವರ "ಕೇನ್ ಡೆವ್ಹಲಪ್‌ಮೆಂಟ್ ಅವಾರ್ಡ್" ಬಂದಿದೆ. ಇದು ದಕ್ಷಿಣ ಭಾರತದ ಶ್ರೇಷ್ಠ ಸಕ್ಕರೆ ಕಾರ್ಖಾನೆ ಎಂಬ ಬಿರುದಿಗೆ ಪಾತ್ರವಾಗಿದ್ದು ಶ್ರೀ ಪ್ರಭಾಕರ ಕೋರೆಯವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎನ್ನುವುದು ಅವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿದೆ.

೨. ೨೦೦೧-೨೦೦೨ರ ಸಾಲಿಗೆ ದಕ್ಷಿಣ ಭಾರತದಲ್ಲಿ ಗರಿಷ್ಠ ಸಕ್ಕರೆ ಇಳುವರಿಯ ಸಾಧನೆಗಾಗಿ ಪ್ರಶಸ್ತಿ ಪದಕ ಪಡೆದುಕೊಂಡಿದೆ. ಅದಲ್ಲದೇ ಉತ್ಕೃಷ್ಟ ಮುಖ್ಯ ಅಭಿಯಂತ. ಉತ್ಕೃಷ್ಟ ಮುಖ್ಯ ರಸಾಯನ ತಜ್ಞ ಹಾಗೂ

ಉತ್ಕೃಷ್ಟ ವ್ಯವಸ್ಥಾಪಕ ನಿರ್ದೇಶಕ ಪಾರಿತೋಷಕಗಳನ್ನು ರಾಜ್ಯದ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಲದಿಂದ ಪಡೆದುಕೊಂಡಿದೆ.

೩. ರಾಷ್ಟ್ರೀಯ ಸಹಕಾರ ರಂಗದಲ್ಲಿಯೇ ಮೊದಲನೆಯದಾದ ಈ ಕಾರ್ಖಾನೆಯ ೩೦.೭ ಮೆಗಾವ್ಯಾಟ್ ವಿದ್ಯುತ್ ಘಟಕಕ್ಕೆ ಕರ್ನಾಟಕ ರಾಜ್ಯದ ಕೆ.ಎಲ್.ಇ.ಡಿ.ಎಲ್.ನವರು "ರಾಜೀವ್‌ಗಾಂಧಿ ಅಕ್ಷಯ ಉರ್ಜಾದಿವಸ'ದಂದು 'ಎಕ್ಸ್‌ಲೆನ್ಸಿ ಅವಾರ್ಡ್'ನ್ನು ನೀಡಿ ಗೌರವಿಸಿದ್ದಾರೆ.

೪. ೨೦೦೪-೨೦೦೫ರಲ್ಲಿ ದಕ್ಷಿಣ ಭಾರತದ ಸಕ್ಕರೆ ಸಂಸ್ಥೆಯವರಿಂದ (ನೆಸ್ಟ್) ರಾಷ್ಟ್ರೀಯ ಪುರಸ್ಕಾರವನ್ನು ಪಡೆದಿದೆ.

೫. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಬೆಂಗಳೂರು ಇವರು "ಕೃಷ್ಣ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯು ಹೊಸ ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಸಂಪೂರ್ಣವಾಗಿ ಅಳವಡಿಸಿದ ಕಾರ್ಖಾನೆ" ಎಂದು ೨೦೦೫-೨೦೦೬ರಲ್ಲಿ ಗುರುತಿಸಿದೆ. ಇದರಿಂದ ತಿಳಿದು ಬರುತ್ತದೆ. ಶ್ರೀ ಕೋರೆಯವರು ಪರಿಸರದ ಬಗ್ಗೆ, ವಾಯು ಮಾಲಿನ್ಯದ ಬಗ್ಗೆ ವಹಿಸುತ್ತಿರುವ ಕಾಳಜಿ ಎಂತಹದು ಎಂಬುದು ಇದಲ್ಲದೆ, ಕಾರ್ಖಾನೆಯ ಆವರಣದಲ್ಲಿ ಸುಂದರವಾದ ಹೂದೋಟ, ಗಿಡಮರ, ಉದ್ಯಾನವನ, ಸುಸಜ್ಜಿತವಾದ ರಸ್ತೆ ಇತ್ಯಾದಿ ಸೌಲಭ್ಯಗಳಿಂದ ನೋಡುಗರನ್ನು ಆಕರ್ಷಿಸುವಂತೆ ಮಾಡಿದ್ದಾರೆ.

೬. ಅಮೇರಿಕಾ ದೇಶದ ಸಂಸ್ಥೆಯಾದ ಎ.ಕ್ಯೂ.ಎಸ್.ಆರ್. (A.Q.S.R.) ಇವರು ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯು ಉತ್ಪಾದಿಸಿದ ಸಕ್ಕರೆಯನ್ನು ಪರಿಶೀಲಿಸಿ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವಂತಹ ಉತ್ಕೃಷ್ಟವಾದ ಸಕ್ಕರೆ ಎಂದು ಪರಿಗಣಿಸಿ, ತಮ್ಮ ಸಂಸ್ಥೆಯಿಂದ I.S.O.೯೦೦೧-೨೦೦೦ ಪ್ರಮಾಣ ಪತ್ರ ನೀಡಿ ಗೌರವಿಸಿದೆ.[೧೬]

ಈ ಮೇಲಿನ ಪ್ರಶಸ್ತಿಗಳು ಮತ್ತು ಪ್ರಮಾಣ ಪತ್ರಗಳು ಸಾರಿಹೇಳುವ ಸಂದೇಶವೆಂದರೆ, ಒಂದು ಸಕ್ಕರೆ ಕಾರ್ಖಾನೆಯು ಯಾವ ರೀತಿ ಇರಬೇಕು ಎನ್ನುವುದಕ್ಕೆ ಶ್ರೀ ಕೃಷ್ಣ ಧೂಧಗಂಗಾ, ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯು ಮಾದರಿಯಾಗಿದೆ. ಒಂದು ಕಾರ್ಖಾನೆಯನ್ನು ಹೇಗೆ ಅಭಿವೃದ್ಧಿಪಡಿಸಬೇಕು ಎನ್ನುವುದಕ್ಕೆ ಶ್ರೀ ಪ್ರಭಾಕರ ಕೋರೆಯವರು ಮಾದರಿಯೆನಿಸುತ್ತಾರೆ. ಹೀಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿಯೇ ಕಾರ್ಖಾನೆಯ ಕೀರ್ತಿಯನ್ನು ಹೆಚ್ಚಿಸಿದ ಶ್ರೀ ಪ್ರಭಾಕರ ಕೋರೆಯವರು ಚಿಕ್ಕೋಡಿ ಭಾಗದ ರೈತರ ಆಶಾಕಿರಣವಾಗಿದ್ದಾರೆ. ರೈತರ ಹಾಗೂ ಕಾರ್ಮಿಕರ ಯೋಗಕ್ಷೇಮದ ಜೊತೆಗೆ ಕಾರ್ಖಾನೆಯ ಪ್ರಗತಿಯೂ ಕೋರೆಯವರನ್ನು ಮತ್ತಷ್ಟು ಎತ್ತರಕ್ಕೆ ಬೆಳೆಸಲು ಕಾರಣವಾಗಿದೆ.

ಕಾರ್ಖಾನೆಗೆ ಕಬ್ಬನ್ನು ಪೂರೈಸಿದ ರೈತರನ್ನು ಬಿಲ್‌ಗಾಗಿ ಅಲೆದಾಡಿಸುವ ಕಾರ್ಖಾನೆಗಳೇ ಹೆಚ್ಚಾಗಿರುವ ಇಂದಿನ ದಿನಗಳಲ್ಲಿ, ಇದಕ್ಕೆ ಪ್ರತಿಯಾಗಿ ಶ್ರೀ ಕೋರೆಯವರು ಈ ರೈತರ ಬಗ್ಗೆ ಹೊಂದಿರುವ ಕಳಕಳಿ ಎಂತಹದು ಎನ್ನುವುದನ್ನು ಈ ಒಂದು ಉದಾಹರಣೆಯು ಸ್ಪಷ್ಟಪಡಿಸುತ್ತದೆ. ಭಾರತ ಸರಕಾರದ ಸಕ್ಕರೆ ಮಾರಾಟದ ಮೇಲಿನ

ಅನೇಕ ನಿಬಂಧನೆಗಳಿಂದಾಗಿ ಪ್ರತಿ ವರುಷ ಕಬ್ಬು ಪೂರೈಸಿದ ರೈತರಿಗೆ ಪೂರೈಕೆಯಾದ ೧೦ ರಿಂದ ೧೫ ದಿನಗಳೊಳಗಾಗಿ ಹಣ ಪಾವತಿ ಮಾಡಬೇಕಾದರೆ, ಸಕ್ಕರೆ ಗೋಡಾವನ್‌ಗಳ ಮೇಲೆ ಜಿಲ್ಲಾ ಸಹಕಾರಿ ಬ್ಯಾಂಕ್ (ಡಿ.ಸಿ.ಸಿ.)ಗಳಿಂದ ಅಡವಿನ ಸಾಲ ಪಡೆಯುವುದು ಎಲ್ಲ ಸಕ್ಕರೆ ಕಾರ್ಖಾನೆಯವರು ಅನುಸರಿಸುತ್ತಿರುವ ನೀತಿ. ಆದರೆ ಕ್ರಿ. ಶ. ೨೦೦೧–೨೦೦೨ರಲ್ಲಿ ದಿವಾಳಿಯ ಅಂಚಿನದಲ್ಲಿದ್ದ ಕೆಲ ಸಹಕಾರಿ ಕಾರ್ಖಾನೆಗಳ ಕಾರಣವಾಗಿ ಕರ್ನಾಟಕದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಇಂಥ ಅಡವಿನ ಸಾಲ ಕೊಡಬೇಕಾದರೆ ಸರಕಾರದ ಗ್ಯಾರಂಟಿ ಕೊಡಬೇಕು ಎಂಬ ಕಟ್ಟಳೆ ವಿಧಿಸಿದವು. ಆಗ ಕೋರೆಯವರು ಕೆನರಾ ಮತ್ತಿತರ ರಾಷ್ಟ್ರೀಕೃತ ಬ್ಯಾಂಕುಗಳನ್ನು ಸಂಪರ್ಕಿಸಿದರು. ಆದರೆ ಬ್ಯಾಂಕಿನವರು ಅದಕ್ಕೆ ಹೊಸ ನಿರ್ಭಂಧನೆ ಹಾಕಿದರು. ಈ ಸಾಲಕ್ಕೆ ಶ್ರೀ ಪ್ರಭಾಕರ ಕೋರೆಯವರು ವೈಯಕ್ತಿಕವಾಗಿ ಬ್ಯಾಂಕ್‌ಗೆ ಗ್ಯಾರಂಟಿ ನೀಡಬೇಕು ಎಂದರು. ಕೋರೆಯವರು ಮುಕ್ತ ಮನಸ್ಸಿನಿಂದ ತಯಾರಾದರು. ಸಾಲವೇನೋ ದೊರೆತು ರೈತರ ಸಂಕಷ್ಟ ಪರಿಹಾರವಾಯಿತು. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ತಮ್ಮದು ಕೋಟ್ಯಾಂತರ ಆಸ್ತಿಯಿದ್ದರೂ ಕಂಪನಿಯೊಂದನ್ನು ನಿರ್ಮಿಸಿ, ಆ ಕಂಪನಿಯನ್ನು ಉದ್ದೇಶ ಪೂರ್ವಕವಾಗಿಯೇ, ಪರಿಸ್ಥಿತಿಯ ವಿಕೋಪದಿಂದಾಗಿಯೋ ದಿವಾಳಿ ಎಬ್ಬಿಸಿ, ಅದರಿಂದ ಕೋಟಿ, ಕೋಟಿ ಬಾಚಿಕೊಳ್ಳುವವರಿದ್ದಾರೆ. ಆದರೆ ಕೋರೆಯವರು ಪರಿಸ್ಥಿತಿಯ ಒತ್ತಡದಿಂದಾಗಿ ಸಂಕಷ್ಟದಲ್ಲಿದ್ದ ಸಕ್ಕರೆ ಕಾರ್ಖಾನೆಗೆ ಸ್ವಂತದ ಆಸ್ತಿಯನ್ನು ಗ್ಯಾರಂಟಿ ನೀಡಲು ಸಿದ್ಧರಾಗಿದ್ದಾರೆ. ತಮ್ಮನ್ನು ನಂಬಿ ಕಬ್ಬು ಪೂರೈಸಿದ ರೈತ ಮಿತ್ರರಿಗೆ ಹಣ ಪಾವತಿಸಲು ಹಣಕಾಸಿನ ಕೊರತೆಯಾದಾಗ ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದರೆ ಅವರಿಗೆ ವಾರ್ಷಿಕ ಶೇ. ೧೫ ಬಡ್ಡಿ ನೀಡಬೇಕು. ಇಂಥ ಸನ್ನಿವೇಶ ಉದ್ಭವಿಸಿದಾಗ ರಾಷ್ಟ್ರೀಕೃತ ಬ್ಯಾಂಕುಗಳನ್ನು ಸಂಪರ್ಕಿಸಿ, ವೈಯಕ್ತಿಕವಾಗಿ ಬ್ಯಾಂಕ್‌ಗೆ ಗ್ಯಾರಂಟಿ ನೀಡಿ, ವಾರ್ಷಿಕ ಶೇ. ೯ ಬಡ್ಡಿಯಂತೆ ಸಾಲ ಪಡೆದು ಕಬ್ಬು ಪೂರೈಸಿದವರಿಗೆ ಬಿಲ್ ಪಾವತಿಸುವಲ್ಲಿ ಯಶಸ್ವಿಯಾದದ್ದು ಶ್ರೀ ಪ್ರಭಾಕರ ಕೋರೆಯವರ ಘನವಾದ ವ್ಯಕ್ತಿತ್ವದ ಪ್ರದರ್ಶನವಾಗಿದೆ. ತಮ್ಮ ಸ್ವಂತದ ಆಸ್ತಿಯನ್ನು ರೈತರ ಸಲುವಾಗಿ ಬ್ಯಾಂಕಿನಲ್ಲಿ ಅಡವಿಟ್ಟು ಬಿಲ್ ಪಾವತಿಸುವ ಈ ಘಟನೆಯಿಂದ ಕೋರೆಯವರು ಬರೀ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ರಾಜಕೀಯ ನಾಯಕರಲ್ಲ, ನೈಜವಾಗಿ ರೈತರ ಬಗ್ಗೆ ಅವರ ಏಳ್ಗೆಯ ಬಗ್ಗೆ ಕಳಕಳಿ ಹೊಂದಿರುವ ರೈತಾಪಿ ವರ್ಗದವರು ಎನ್ನುವುದು ಇದರಿಂದ ಗೊತ್ತಾಗುತ್ತದೆ. ಹಾಗೇ ಈ ಘಟನೆಯು ಪ್ರತಿಯೊಬ್ಬ ರಾಜಕೀಯ ನಾಯಕರಿಗೆ ಕಾರ್ಖಾನೆಗಳ ಮುಖ್ಯಸ್ಥರಿಗೆ ಒಂದು ಆದರ್ಶಪ್ರಾಯವಾಗಿದೆ, ಅನುಕರಣೀಯವಾಗಿದೆ.[೧೭]

ಈ ಕಾರ್ಖಾನೆಯಿಂದಾಗಿ ಸುಮಾರು ೨೫ ಸಾವಿರ ಜನರಿಗೆ ಪ್ರತ್ಯಕ್ಷ–ಪರೋಕ್ಷವಾಗಿ ಉದ್ಯೋಗ ಒದಗಿಸಿ, ಈ ಜನವರ್ಗದ ಪಾಲಿಗೆ ಅನ್ನದಾತರಾಗಿದ್ದಾರೆ. ಆ ಮೂಲಕ ಈ ಭಾಗದ ನಿರುದ್ಯೋಗಿಗಳಿಗೆ ಉದ್ಯೋಗದ ಭಾಗ್ಯ ದಯಪಾಲಿಸಿದ ಕೀರ್ತಿ ಶ್ರೀ ಪ್ರಭಾಕರ ಕೋರೆಯವರಿಗೆ ಸಲ್ಲುತ್ತದೆ.

ಹಾಗೆಯೇ ಅನೇಕ ಸಹಕಾರಿ ಸಂಘ, ಸಂಸ್ಥೆಗಳು ಹಾನಿಯಿಂದಾಗಿ ಮುಚ್ಚುವ ಸ್ಥಿತಿಯನ್ನು ತಲುಪಿದಾಗ ಅವುಗಳಿಗೆ ಉದಾರವಾದ ಧನಸಹಾಯ ಒದಗಿಸುವ ಮೂಲಕ ಅವುಗಳ ಪುನರ್ ಚೇತನಕ್ಕೆ ಕಾರಣವಾಗಿದೆ. ಶ್ರೀ ಪ್ರಭಾಕರ ಕೋರೆಯವರು ಇವುಗಳಿಗೆ ಕೆಲ ಉತ್ತಮ ಉದಾಹರಣೆಗಳೆಂದರೆ ಯಮಕನ ಮರಡಿ ಕ್ರೆಡಿಟ್ ಸೊಸೈಟಿಗ

ಮತ್ತು ಕಡಕೋಳ ಅರ್ಬನ್ ಬ್ಯಾಂಕುಗಳು ನಷ್ಟದಿಂದಾಗಿ ಮುಳುಗುತ್ತಿದ್ದಾಗ ಶ್ರೀ ಕೋರೆಯವರು ನೀಡಿದ ಸಹಾಯ, ಅವರ ಸಹಕಾರ, ತತ್ವ ನಿಷ್ಠೆಗೆ, ನಿಚ್ಚಳ ನಿದರ್ಶನವಷ್ಟೇ ಅಲ್ಲದೇ ಈ ಸಹಕಾರಿ ಸಂಸ್ಥೆಗಳನ್ನು ಪುನರ್‌ಚೇತನಗೊಳಿಸಿ ಅವುಗಳನ್ನು ನಂಬಿ ಜೀವಿಸುತ್ತಿರುವ ಅನೇಕ ಗ್ರಾಹಕ ವರ್ಗದವರ ನೆಮ್ಮದಿಗೂ ಕಾರಣವಾಗಿದ್ದಾರೆ.

ಇನ್ನೊಂದು ಸಂದರ್ಭದಲ್ಲಿ ಶ್ರೀ ಕೃಷ್ಣಾ ಧೂಧಗಂಗಾ, ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ವಿದ್ಯುತ್ ಘಟಕ ಸ್ಥಾಪಿಸಲು ಯೋಚಿಸಿದಾಗ ೫೫ ಕೋಟಿ ರೂ.ಗಳು ಬೇಕಾಗಿತ್ತು. ಆಗ ಏನು ಮಾಡಬೇಕೆಂಬ ಚಿಂತೆಯಾದಾಗ, ಅದಕ್ಕೆ ಸ್ವತಃ ಶ್ರೀ ಕೋರೆಯವರು ಮುಂದಾಗಿ, ಹುಡ್ಕೋದವರ ಕರಾರಿನಂತೆ ಶ್ರೀ ಕೋರೆಯವರ ಮೇಲೆಯೇ ೩೯ ಕೋಟಿ ರೂ.ಗಳನ್ನು ಸಾಲ ಕೊಟ್ಟಿರುವುದನ್ನು ನೋಡಿದಾಗ ಕೋರೆಯವರ ವ್ಯಕ್ತಿತ್ವವದ ಅರಿವು ಆಗದಿರಲಾರದು.[೧೮]

ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸುವಲ್ಲಿ ಶ್ರೀ ಕೋರೆಯವರ ಪಾತ್ರ :

ಗ್ರಾಮೀಣ ಪ್ರದೇಶದ ಬಡವರ, ಮಧ್ಯಮ ವರ್ಗದ ಹಾಗೂ ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು, ಅವರು ಕೈಗೊಳ್ಳುವ ಉದ್ಯೋಗಕ್ಕೆ ಹಾಗೂ ರೈತರ ಸಾಂಪ್ರದಾಯಿಕ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಲು ಕೃಷಿ ಯಂತ್ರೋಪಕರಣ ಖರೀದಿಗೆ ಹಾಗೂ ಬಂಜರು ಭೂಮಿಯನ್ನು ನೀರಾವರಿಯನ್ನಾಗಿ ಪರಿವರ್ತಿಸಲು ರೈತರಿಗೆ ಆರ್ಥಿಕ ಸಹಾಯಕ್ಕೆ ಹಾಗೂ ಸ್ವಾವಲಂಬಿ ಜೀವನ ನಡೆಸಲಿಕ್ಕೆ ಅನುಕೂಲ ಕಲ್ಪಿಸಬೇಕೆಂಬ ಮಹದಾಸೆಯನ್ನು ಇಟ್ಟುಕೊಂಡು, ಅಂಕಲಿ ಗ್ರಾಮದಲ್ಲಿ ೧೯೮೮ರಲ್ಲಿ ಅಂಕಲಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸಾಯಿಟಿಯನ್ನು ಸ್ಥಾಪಿಸಿದರು. ಸ್ಥಿತಿವಂತರ ಮನವೊಲಿಸಿ ಬ್ಯಾಂಕಿನಲ್ಲಿ ಅಗಾಧ ಪ್ರಮಾಣದಲ್ಲಿ ಠೇವಣಿ ಹಾಗೂ ಶೇರುಗಳನ್ನು ಸಂಗ್ರಹಿಸಿದ ಶ್ರೀ ಕೋರೆಯುವರು, ಇವತ್ತು ಈ ಬ್ಯಾಂಕು ಕರ್ನಾಟಕದ ಉತ್ತಮ ಸಹಕಾರಿ ಬ್ಯಾಂಕುಗಳಲ್ಲಿ ಒಂದು ಎಂದು ಗುರುತಿಸಿಕೊಳ್ಳುವಂತೆ ಅದನ್ನು ಅಭಿವೃದ್ಧಿ ಪಡಿಸಿದರು. ಶ್ರೀ ಕೋರೆಯವರು ಈ ಮೂಲಕ ಸಹಸ್ರಾರು ಜನರಿಗೆ ಆರ್ಥಿಕ ಸಹಾಯ ಕಲ್ಪಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಇಂದು ಈ ಬ್ಯಾಂಕು ಬೃಹತ್ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿ, ಅಂಕಲಿ ಗ್ರಾಮವನ್ನು ಹೊರತು ಪಡಿಸಿ, ಇತರೆ ೬ ಬೇರೆ ಬೇರೆ ಗ್ರಾಮ, ನಗರಗಳಲ್ಲಿ ತನ್ನ ಶಾಖೆಗಳ ಮೂಲಕ ಗ್ರಾಹಕರಿಗೆ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಈ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಶ್ರೀ ಪ್ರಭಾಕರ ಕೋರೆಯವರು ಇದನ್ನು ೨೦೦೭ ರಿಂದ ಸೌಹಾರ್ದ ಕಾಯ್ದೆಯಡಿ ಪರಿವರ್ತನೆ ಮಾಡಿದರು. ಈಗ ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಅಂಕಲಿ ಎಂದು ಪುನರ್ ನಾಮಕರಣವಾಗಿದೆ. ಈ ಬ್ಯಾಂಕಿನ ಅಭಿವೃದ್ಧಿಗೆ ಹಾಗೂ ಈ ಬ್ಯಾಂಕಿನ ಸಹಸ್ರಾರು ಸದಸ್ಯರಿಗೆ ಆರ್ಥಿಕ ಸಹಾಯ ಮಾಡಿದ ಶ್ರೀ ಪ್ರಭಾಕರ ಕೋರೆಯವರನ್ನು ಚಿರಸ್ಥಾಯಿಯನ್ನಾಗಿಸುವ ಕಾರ್ಯವನ್ನು ಬ್ಯಾಂಕಿನ ಸರ್ವ ಸದಸ್ಯರು ಸರ್ವಸಮ್ಮತವಾಗಿ ನಿರ್ಧಾರ ಕೈಗೊಂಡು ಅವರ ಹೆಸರನ್ನು ಬ್ಯಾಂಕಿಗೆ ಇಡುವ ಮೂಲಕ ಗೌರವ ಸಲ್ಲಿಸುವ ಕಾರ್ಯ ಮಾಡಿದ್ದಾರೆ.[೧೯]

ಈ ಬ್ಯಾಂಕು ೨೦೦೭ ಮತ್ತು ೨೦೦೮ನೇ ಸಾಲಿನ ವರದಿ ಪ್ರಕಾರ, ಈ ಬ್ಯಾಂಕು ಈಗ ಒಟ್ಟು ೨೮೭೧ ಸದಸ್ಯರನ್ನು ಹೊಂದಿದ್ದು, ಒಟ್ಟು ಶೇ. ೬ ಬಂಡವಾಳದಲ್ಲಿ ೭೬.೧೧.೬೩೦ ನ್ನು ಹೊಂದಿದೆ. ಒಟ್ಟು ಈ ಬ್ಯಾಂಕಿನಲ್ಲಿ

ಕಾಯ್ದಿಟ್ಟ ನಿಧಿ, ಕಟ್ಟಡದ ನಿಧಿ, ನೌಕರರ ಕ್ಷೇಮನಿಧಿ, ಶಿಕ್ಷಣಕ್ಕಾಗಿ ಹಾಗೂ ಎನ್.ಪಿ.ಎ. ನಿಧಿ, ಇನ್ನುಳಿದ ನಿಧಿ ಸೇರಿ ಒಟ್ಟು ೪,೭೫,೫೮೦೦೦ ಜಮಾ ಇರುತ್ತದೆ.

ಶ್ರೀ ಪ್ರಭಾಕರ ಕೋರೆಯವರ ನಾಯಕತ್ವದಲ್ಲಿ ಗ್ರಾಹಕ ಸದಸ್ಯರು ವಿಶ್ವಾಸವಿರಿಸಿ, ದಾಖಲೆಯ ಪ್ರಮಾಣದಲ್ಲಿ ಠೇವಣಿ ರೂಪದಲ್ಲಿ ಹಣ ಹಾಗೂ ಬಂಗಾರವನ್ನು ಬ್ಯಾಂಕಿನಲ್ಲಿ ಇಟ್ಟಿದ್ದಾರೆ.[೨೦]

ಇವತ್ತು ಕರ್ನಾಟಕ ರಾಜ್ಯದಲ್ಲಿ ಜನರು ಬ್ಯಾಂಕುಗಳಲ್ಲಿನ ಅವ್ಯವಹಾರ ಹಾಗೂ ಬ್ಯಾಂಕುಗಳ ದಿವಾಳಿಯಿಂದಾಗಿ ವಿಶ್ವಾಸ ಕಳೆದುಕೊಳ್ಳುತ್ತಿರುವ ಈ ಸಮಯದಲ್ಲಿ ಒಂದು ಸೌಹಾರ್ದ ಕ್ರೆಡಿಟ್ ಬ್ಯಾಂಕಿನಲ್ಲಿ ೨೨ ಕೋಟಿಗೂ ಮಿಕ್ಕಿ ಹಣವನ್ನು ಜನರು ಠೇವಣಿ ರೂಪದಲ್ಲಿ ಇಟ್ಟಿರುವುದು ಶ್ರೀ ಪ್ರಭಾಕರ ಕೋರೆಯವರು ಪ್ರಾಮಾಣಿಕತೆಗೆ ಹಾಗೂ ವಿಶ್ವಾಸಕ್ಕೆ ಜನರು ಇರಿಸಿದ ನಂಬಿಕೆ, ವಿಶ್ವಾಸ ಎಂತಹದು ಎನ್ನುವುದನ್ನು ಇದು ಸ್ಪಷ್ಟಪಡಿಸುತ್ತದೆ. ೩೧-೩-೨೦೦೮ಕ್ಕೆ ಮುಕ್ತಾಯವಾದ ವರದಿಯಂತೆ ಒಟ್ಟು ಗ್ರಾಹಕರಿಗೆ ಈ ಬ್ಯಾಂಕಿನ ಮೂಲಕ ೧೦ ಕೋಟಿ, ೬೬ ಲಕ್ಷ, ೪೦ ಸಾವಿರ ರೂಪಾಯಿಗಳಷ್ಟು ಹಣವನ್ನು ವಿವಿಧ ರೀತಿಯ ಸಾಲಗಳನ್ನು ಹಂಚಲಾಯಿತು. ೨೦೦೮ರ ಸಾಲಿನ ಕೊನೆಗೆ ಒಟ್ಟು ಗುಂತಾವಣಿಯಲ್ಲಿ ೧೭ ಕೋಟಿ ೫೩ ಲಕ್ಷ ೩೬ ಸಾವಿರದಷ್ಟು ಇದೇ ೨೦೦೭ಕ್ಕೆ ಒಟ್ಟು ೪೫ ಲಕ್ಷ ೩೩ ಸಾವಿರದಷ್ಟು ಲಾಭಾಂಶವನ್ನು ಈ ಬ್ಯಾಂಕು ಸಾಧಿಸಿದೆ. ಇಲ್ಲಿ ಗಮನಿಸುವ ಅಂಶವೆಂದರೆ, ಕರ್ನಾಟಕ ರಾಜ್ಯದಲ್ಲಿ ಬ್ಯಾಂಕುಗಳು ಹಾನಿಯನ್ನು ಅನುಭವಿಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಶ್ರೀ ಕೋರೆಯವರ ದಕ್ಷತೆ ಹಾಗೂ ಪ್ರಾಮಾಣಿಕತೆಯ ಫಲವಾಗಿ ಈ ಬ್ಯಾಂಕು ಪ್ರತಿ ವರ್ಷ ಲಾಭದಲ್ಲಿ ಮುನ್ನಡೆಯುತ್ತಿದೆ.

ಈ ಬ್ಯಾಂಕಿನ ಒಟ್ಟು ವಾರ್ಷಿಕ ವಹಿವಾಟು ೧೭೩ ಕೋಟಿಯಷ್ಟು ಆಗಿದೆ. ಈ ಮೂಲಕ ಕರ್ನಾಟಕ ರಾಜ್ಯಾದ್ಯಂತ ಈ ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನು ಹೊಂದುವಂತೆ ಮಾಡಲು ಎನ್.ಪಿ.ಎಚ್. ತೆಗೆದಿರಿಸಿರುವ ರಾಜ್ಯದ ಕೆಲವೇ ಬ್ಯಾಂಕುಗಳಲ್ಲಿ ಇದು ಒಂದಾಗಿದೆ.[೨೧]

ಬ್ಯಾಂಕಿನ ಅಭಿವೃದ್ಧಿಗಾಗಿ ಹಾಗೂ ಶಾಖೆಗಳ ವಿಸ್ತರಣೆಯಲ್ಲಿ ಶ್ರೀ ಕೋರೆಯವರ ಪಾತ್ರ :

ಶ್ರೀ ಪ್ರಭಾಕರ ಕೋರೆಯವರ ದೂರದೃಷ್ಟಿ ಹಾಗೂ ಬ್ಯಾಂಕನ್ನು ಆಧುನಿಕವಾಗಿ ಅಭಿವೃದ್ಧಿಪಡಿಸುವ ದಿಸೆಯಲ್ಲಿ ಚಿಂತನೆಯನ್ನು ನಡೆಸಿ, ಅಂಕಲಿ ಗ್ರಾಮದಲ್ಲಿ ಬ್ಯಾಂಕಿನ ಪ್ರಧಾನ ಕಚೇರಿಯ ಕಟ್ಟಡವನ್ನು ಸುಮಾರು ೫೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡಿ, ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ ಸುಂದರ ಕಟ್ಟಡವನ್ನು ನಿರ್ಮಿಸಿ ಬ್ಯಾಂಕು ತನ್ನ ಸ್ವಂತ ಜಾಗದಲ್ಲಿ ತನ್ನದೇ ಆದ ಕಟ್ಟಡದಲ್ಲಿ ಕೆಲಸ ನಿರ್ವಹಿಸುವಂತೆ ಮಾಡಿದ ಶ್ರೇಯಸ್ಸು ಕೋರೆಯವರದಾಗಿದೆ. ಇದಲ್ಲದೆ ಈ ಬ್ಯಾಂಕಿನ ಸೇವೆಯನ್ನು ಇತರ ಕಡೆ ಜನರಿಗೂ ಲಭಿಸಲಿ ಎನ್ನುವ ಉದ್ದೇಶದಿಂದ ಶ್ರೀ ಕೋರೆಯವರು ಈ ಹೊಸ ಬ್ಯಾಂಕಿನ ಶಾಖೆಗಳನ್ನು ಸ್ಥಾಪಿಸಿದರು. ೧. ಚೆಂದುರಿನ ಶಾಖೆ. ೨. ಕರೂರ ಶಾಖೆ. ೩. ಗಂಗಾ ಸುಗರ, ೪. ದಿಗ್ಗೇವಾಡಿ, ೫ ಬೆಳಗಾವಿಯ ೬. ಚಿಕ್ಕೋಡಿ, ೭. ಬೆಳಗಾವಿಯ ಕಾಲೇಜು ರಸ್ತೆ ಹೀಗೆ ಅಂಕಲಿಯಲ್ಲಿರುವ ಬ್ಯಾಂಕಿನ ಪ್ರಧಾನ ಕಚೇರಿಯನ್ನು ಹೊರತು ಪಡಿಸಿ, ೭ ಹೊಸ ಬ್ಯಾಂಕಿನ ಶಾಖೆಗಳನ್ನು

ತೆಗೆಯುವ ಮೂಲಕ ಬ್ಯಾಂಕಿನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿದ ಶ್ರೇಯಸ್ಸು ಶ್ರೀ ಕೋರೆಯವರದಾಗಿದೆ. ಇವುಗಳಲ್ಲಿ ಕೆರೂರ ಹಾಗೂ ದಿಗ್ಗೇವಾಡಿ ಶಾಖೆಗಳಲ್ಲಿ ಬ್ಯಾಂಕಿನ ಸ್ವಂತ ಕಟ್ಟಡಗಳನ್ನು ಕಟ್ಟಿಸುವ ಮೂಲಕ ಬ್ಯಾಂಕಿನ ಆಸ್ತಿಯನ್ನು ಹೆಚ್ಚಿಸುವಲ್ಲಿ ಕಾರಣವಾಗಿದ್ದಾರೆ.[೨೨]

ಈ ಬ್ಯಾಂಕಿನ ಮೂಲಕ ಗ್ರಾಹಕರಿಗೆ ಒದಗಿಸುತ್ತಿರುವ ಸೌಲಭ್ಯಗಳು ಈ ಕೆಳಗಿನಂತೆ ಇವೆ.

೧. ಜಮೀನಿನ ಸಾಲ, ೨. ನಗದು ಉದ್ದರಿ ಸಾಲ (ಕ್ಯಾಷ್ ಕ್ರೆಡಿಟ್ ಸಾಲ), ೩. ಗೃಹ ಸಾಲ, ೪. ಮಾಧ್ಯಮಾವಧಿ ಸಾಲ, ೫. ವಾಹನಗಳಿಗಾಗಿ ಸಾಲ, ೬. ನೀರಾವರಿ ಹಾಗೂ ಇನ್ನಿತರ ಕೃಷಿ ಉಪಕರಣಗಳ ಮೇಲೆ ದೀರ್ಘಾವಧಿಯ ಸಾಲ, ೭. ಬಂಗಾರ ಅಡವು ಇಟ್ಟು ಪಡೆವ ಸಾಲ. ಠೇವು ಮತ್ತು ಪಿಗ್ಮಿ ಸಾಲ ಇದರಲ್ಲಿ ಬಂಗಾರ ಸಾಲ ಶೇಕಡಾ ೧೨ರಷ್ಟು ಬಡ್ಡಿದರ. ಇನ್ನಿತರ ಸಾಲಗಳ ಮೇಲೆ ನಿಯಮಿತವಾಗಿ ತ್ರೈಮಾಸಿಕ ಬಡ್ಡಿ ಹಾಗೂ ಕಂತು ಕಟ್ಟುವವರೆಗೆ ಶೇ. ೧೫ ವಾರ್ಷಿಕ ಬಡ್ಡಿ ನಿಗದಿಪಡಿಸಿದ್ದಾರೆ. ಇನ್ನು ವಾರ್ಷಿಕ ಬಡ್ಡಿ ಹಾಗೂ ಕಂತು ಕಟ್ಟದವರಿಗೆ ಶೇ. ೧೬ ರಿಯಾಯಿತಿಯ ಬಡ್ಡಿ ದರಗಳ ಮೂಲಕ ಸಾಲ ಒದಗಿಸಿ ಮೂಲಕ ಗ್ರಾಹಕರ ಆರ್ಥಿಕ ಪ್ರಗತಿಗೆ ಅನುಕೂಲ ಒದಗಿಸಿದ್ದಾರೆ.[೨೩]

ಇದಲ್ಲದೆ ಬ್ಯಾಂಕಿನ ಮೂಲಕ ಇನ್ನೂ ಅನೇಕ ವಿಶೇಷವಾದ ಸೌಲಭ್ಯಗಳನ್ನು ಶ್ರೀ ಕೋರೆಯವರು ಒದಗಿಸಿದ್ದಾರೆ. ಈ ಬ್ಯಾಂಕಿನಲ್ಲಿ ತಮ್ಮ ಮನದಾಸೆಯಂತೆ ವಿವಿಧ ರೈತರ, ಬಡವರ ಹಾಗೂ ಹಿಂದುಳಿದ ಅಲ್ಪ ಸಂಖ್ಯಾತರ ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಆರ್ಥಿಕ ಸಹಾಯಕ್ಕಾಗಿ ಹಲವಾರು ವಿನೂತನ ಯೋಜನೆಗಳನ್ನು ಗ್ರಾಹಕರ ಅನುಕೂಲಕ್ಕಾಗಿ ಕಲ್ಪಿಸಿದ್ದಾರೆ. ಅವು ಈ ಕೆಳಗಿನಂತಿವೆ.

೧. ಸುಮಾರು ೨೦ ವರ್ಷಗಳ ಕಾಲ ನಿರಂತರವಾಗಿ ಗ್ರಾಹಕರ ಸೇವೆಯಲ್ಲಿ ಬ್ಯಾಂಕನ್ನು ತೃಪ್ತಿಕರ ಹಾಗೂ ತ್ವರಿತ ಗಣಕೀಕೃತ ಆರ್ಥಿಕ ಸೇವೆಯನ್ನು ಒದಗಿಸಿದ್ದಾರೆ.

೨. ಮುಖ್ಯ ಕಚೇರಿ ಅಂಕಲಿಯಲ್ಲಿ ಗ್ರಾಹಕರ ಹಣಕಾಸಿನ ಭದ್ರತೆಗಾಗಿ ಸುಭದ್ರ ಸೇಫ್ ಡಿಪಾಜಿಟ್ ಲಾಕರ್‌ಗಳ ಸೌಲಭ್ಯವನ್ನು ಅತಿ ಯೋಗ್ಯ ದರದಲ್ಲಿ ಒದಗಿಸಿದ್ದಾರೆ. ಆಕ್ಸಿಸ್ ಬ್ಯಾಂಕ್ ಪಿ.ಟಿ.ಯನ್ನು ಅತಿ ಕಡಿಮೆ ವೆಚ್ಚದಲ್ಲಿ ಗ್ರಾಹಕರಿಗೆ ಲಭ್ಯವಾಗುವಂತೆ ಮಾಡಿದೆ.

೩. ಸದಸ್ಯರು ಮರಣ ಹೊಂದಿದ ನಂತರ ಶವ ಸಂಸ್ಕಾರಕ್ಕಾಗಿ ಸಾವಿರ ರೂಪಾಯಿ ಹಣವನ್ನು ವಾರಸುದಾರರಿಗೆ ತ್ವರಿತವಾಗಿ ಒದಗಿಸಿಕೊಡುವ ವಿಶಿಷ್ಟ ಕಲ್ಯಾಣ ಯೋಜನೆಯನ್ನು ಗ್ರಾಹಕರಿಗೆ ಒದಗಿಸಿದ್ದಾರೆ.

೪. ದಿಗ್ಗೇವಾಡಿ. ಕೆರೂರ. ಅಂಕಲಿ. ಚಂದೂರ ಶಾಖೆಗಳಲ್ಲಿ ಸುಸಜ್ಜಿತವಾದ ಸ್ವಂತ ಕಟ್ಟಡವನ್ನು ಹೊಂದುವಂತೆ ಮಾಡಿ ಸಂಪೂರ್ಣವಾಗಿ ಬ್ಯಾಂಕನ್ನು ಗಣಕೀಕೃತ ವ್ಯವಸ್ಥೆಯನ್ನಾಗಿ ಮಾರ್ಪಡಿಸಿ. ಅವುಗಳಿಗೆ ಆನ್‌ಲೈನ್ ಸೌಲಭ್ಯ ಒದಗಿಸುವ ಮೂಲಕ ಗ್ರಾಹಕರಿಗೆ ತ್ವರಿತ ಸೇವೆ ಸಿಗುವಂತೆ ಮಾಡಿದ್ದಾರೆ.

೫. ಮುಖ್ಯವಾಗಿ ಈ ಬ್ಯಾಂಕಿನ ಮೂಲಕ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೋಸ್ಕರ ಬ್ಯಾಂಕೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು. ಈ ಮೂಲಕ ಸಮಾಜದ ಕೆಳ ವರ್ಗದ, ಜನ ಆರ್ಥಿಕ ಸ್ವಾವಲಂಬನೆಗೆ ಸಹಾಯವನ್ನು ಒದಗಿಸುವುದು ಶ್ರೀ ಕೋರೆಯವರ ಮುಖ್ಯ ಉದ್ದೇಶವಾಗಿದೆ.[೨೪]

ಇಲ್ಲಿಯವರೆಗೂ ಈ ಬ್ಯಾಂಕಿನ ಮೂಲಕ ಅನೇಕ ಜನ ಬಡ, ಮಧ್ಯಮ ವರ್ಗದ ರೈತರು ಸಾಲವನ್ನು ಪಡೆದುಕೊಂಡು ತಮ್ಮ ಜಮೀನುಗಳನ್ನು ನೀರಾವರಿ ಜಮೀನುಗಳನ್ನಾಗಿ ಪರಿವರ್ತಿಸಿಕೊಂಡು ಮತ್ತು ಆಧುನಿಕ ಕೃಷಿ ಸಲಕರಣೆಗಳನ್ನು ಖರೀದಿಸುವ ಮೂಲಕ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ, ಅಂಕಲಿ ಗ್ರಾಮದ ಪಕ್ಕದಲ್ಲಿಯೇ ಕೃಷ್ಣಾ ನದಿ ಹರಿಯುತ್ತಿರುವುದರಿಂದ ಸುತ್ತಲಿನ ಹತ್ತಾರು ಗ್ರಾಮಗಳ ರೈತರು ತಮ್ಮ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಹಣಕಾಸಿನ ನೆರವು ಇಲ್ಲದೆ ಪರದಾಡುವ ಸ್ಥಿತಿಯನ್ನು ಕಂಡು ಈ ಬ್ಯಾಂಕಿನ ಮೂಲಕ ಈ ಮಹತ್ವದ ಕಾರ್ಯಕ್ಕೆ ಸಹಾಯ ಒದಗಿಸುವ ಮೂಲಕ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದ ಕೀರ್ತಿ ಶ್ರೀ ಕೋರೆಯವರದಾಗಿದೆ. ಇದರ ಜೊತೆಗೆ ಕೊಳವೆ ಬಾವಿಯನ್ನು ತೊಡಲು, ಜಮೀನುಗಳಲ್ಲಿ ಬೋರ್‌ವೆಲ್ ಹಾಕಿಸಿಕೊಳ್ಳಲು, ಆಧುನಿಕ ಬೆಳೆಗಳಾದ ದ್ರಾಕ್ಷಿ, ದಾಳಿಂಬೆ ಹಾಗೂ ಹನಿ ನೀರಾವರಿಗೂ ಸಹಾಯ ಕಲ್ಪಿಸಿದ್ದಾರೆ. ಇದರ ಜೊತೆಗೆ ಕೃಷಿ ಸಲಕರಣೆಗಳನ್ನು ಕೊಂಡುಕೊಳ್ಳಲು ಈ ಬ್ಯಾಂಕಿನ ಮೂಲಕ ಹಣಕಾಸಿನ ಸಹಾಯ ಒದಗಿಸಿ ರೈತರ ಬದುಕಿನಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ. ಇದರೊಂದಿಗೆ ನಿರುದ್ಯೋಗಿ ಯುವಕರಿಗೆ ಉದ್ಯೋಗ ಮಾಡಲು ಈ ಬ್ಯಾಂಕಿನ ಮೂಲಕ ಸಾಲ ಸೌಲಭ್ಯ ಒದಗಿಸಿ, ಅವರು ಹೊಸ ಉದ್ಯೋಗಗಳನ್ನು ಪ್ರಾರಂಭಿಸಲು ಆರ್ಥಿಕವಾಗಿ ಸ್ವಾವಲಂಬಿ ಜೀವನ ನಡೆಸಲು ಕಾರಣವಾಗಿದ್ದಾರೆ. ಈ ಜನವರ್ಗದವರಿಗಾಗಿ ಈ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಅವರ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿದ್ದಲ್ಲದೆ ಅವರ ಮಕ್ಕಳ ಶಿಕ್ಷಣಕ್ಕಾಗಿ ಹಣ ಒದಗಿಸಿ ಅವರ ಜೀವನದಲ್ಲಿ ಹೊಸ ಚೈತನ್ಯ ತುಂಬಿ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ, ಇಷ್ಟೆಲ್ಲ ಯೋಜನೆಗಳನ್ನು ಪ್ರಕಟಿಸುವ ಮೂಲಕ ಬ್ಯಾಂಕಿಗೆ ಆಧುನಿಕ ಕಟ್ಟಡ ಹಾಗೂ ವಿಸ್ತರಣಾ ಶಾಖೆಗಳನ್ನು ನಿರ್ಮಿಸಿದ್ದಲ್ಲದೆ, ಸಂಪೂರ್ಣ ಗಣಕೀಕೃತ ವ್ಯವಸ್ಥೆಯನ್ನು ಅಳವಡಿಸಿ ಸುಮಾರು ೫೦೦ಕ್ಕೂ ಹೆಚ್ಚು ಬ್ಯಾಂಕಿನ ಸಿಬ್ಬಂದಿಗಳಿಗೆ ಸರಿಯಾಗಿ ವೇತನ ಕೊಡುವ ಮೂಲಕ ಹಾಗೂ ನಿರಂತರವಾಗಿ ಬ್ಯಾಂಕಿನ ಲಾಭವನ್ನು ಹೆಚ್ಚಿಸುವಂತೆ ಮಾಡಿ, ತಮ್ಮ ಕಾರ್ಯ ದಕ್ಷತೆ ಎಂತಹದು ಎನ್ನುವುದು ತೋರಿಸಿಕೊಟ್ಟಿದ್ದಾರೆ.

ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಶ್ರೀ ಪ್ರಭಾಕರ ಕೋರೆಯವರ ಕೊಡುಗೆ :

ಉತ್ತರ ಕರ್ನಾಟಕದ ಮಹಿಳೆಯರ ಆರ್ಥಿಕ ಸ್ಥಿತಿಗತಿ ಸುಧಾರಿಸಬೇಕು, ಅವರು ಪುರುಷರಂತೆ ಸಮಾಜದಲ್ಲಿ ಸ್ವಾವಲಂಬಿ ಜೀವನ ನಡೆಸಬೇಕು ಎನ್ನುವ ಮಹತ್ವದ ಉದ್ದೇಶವನ್ನು ಹೊಂದಿದ ಶ್ರೀ ಪ್ರಭಾಕರ ಕೋರೆಯವರು ಆ ಕಾರ್ಯಕ್ಕೆ ಅವರ ಧರ್ಮಪತ್ನಿಯಾದ ಶ್ರೀಮತಿ ಆಶಾ ಪಿ. ಕೋರೆಯವರ ಸಂಪೂರ್ಣ ಬೆಂಬಲವನ್ನು ಒದಗಿಸಿ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಮಂಡಳಿಯ ಜೊತೆಗೆ ಹಾಗೂ ತಮ್ಮ ಆಪ್ತರೊಂದಿಗೆ ಸಮಾಲೋಚಿಸಿದ

ಕೋರೆಯವರಿಗೆ ಆಶಾ ಪಿ. ಕೋರೆಯವರು ಪ್ರೇರಣೆಯಾಗಿ ನಿಂತರು. ಅಂದಿನ ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದರ ಅಧ್ಯಕ್ಷತೆಯಲ್ಲಿ ಬೆಳಗಾವಿ ನಗರದಲ್ಲಿ ಬೆಳಗಾವಿ ಜಿಲ್ಲೆಯ ಮಹಿಳೆಯರ ಸಮಾವೇಶವನ್ನು ಶ್ರೀ ಪ್ರಭಾಕರ ಕೋರೆಯವರು ಸಂಘಟಿಸಿದರು.[೨೫] ಮಹಿಳಾ ಬ್ಯಾಂಕನ್ನು ಸ್ಥಾಪಿಸುವ ಉದ್ದೇಶ ಹಾಗೂ ಪ್ರಯೋಜನವನ್ನು ಮಹಿಳೆಯರಿಗೆ ತಿಳಿಪಡಿಸಲು ಜಿಲ್ಲೆಯ ಹಳ್ಳಿಗಳಿಗೆ ಭೆಟ್ಟಿಕೊಟ್ಟು, ಒಟ್ಟು ೩೦೩೭ ಸದಸ್ಯರಿಂದ ೧೯ ಲಕ್ಷ ಶೇರು ಹಣವನ್ನು ಸಂಗ್ರಹಿಸಿದರು. ಹಾಗೂ ೩೨ ಲಕ್ಷ ಬಂಡವಾಳ ರೂಪದಲ್ಲಿ ಹಣ ಸಂಗ್ರಹಿಸಲಾಯಿತು. ಪುರುಷರ ಆಡಳಿತ ಮಂಡಳಿ ಇರುವ ಬ್ಯಾಂಕುಗಳು ಸರಿಯಾಗಿ ನಡೆಯುತ್ತಿಲ್ಲವಾದ್ದರಿಂದ ಈ ಮಹಿಳಾ ಬ್ಯಾಂಕು ಹೇಗೆ ನಡೆಯುತ್ತದೆ ಎನ್ನುವ ಅನುಮಾನ ವ್ಯಕ್ತಪಡಿಸುವವರ ಸಂಖ್ಯೆಗೆ ಏನೂ ಕಡಿಮೆ ಇರಲಿಲ್ಲ. ಆದರೆ ಶ್ರೀ ಪ್ರಭಾಕರ ಕೋರೆಯವರ ಸಾರಥ್ಯ ಎಂದಾಗ ಜನ ಕಣ್ಣು ಮುಚ್ಚಿಕೊಂಡು ಶೇರು ಕೊಡಲು ಮುಂದೆ ಬಂದಿದ್ದು ಶ್ರೀ ಪ್ರಭಾಕರ ಕೋರೆಯವರ ಕಾರ್ಯ ದಕ್ಷತೆಯ ಬಗ್ಗೆ ಜನರು ಹೊಂದಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ.[೨೬]

ಮಹಿಳಾ ಬ್ಯಾಂಕಿನ ಪ್ರಥಮ ಸಭೆಯು ೧೪-೬-೧೯೯೬ರಂದು ಜರುಗಿತು ಅದಕ್ಕೆ ಬೆಳಗಾವಿ ಜಿಲ್ಲಾ "ರಾಣಿಚೆನ್ನಮ್ಮ ಮಹಿಳಾ ಸರಕಾರಿ ಬ್ಯಾಂಕು" ಎಂದು ಹೆಸರನ್ನು ನಾಮಕರಣ ಮಾಡಿದರು. ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ, ದೇಶಕ್ಕಾಗಿ ಹೋರಾಟ ಮಾಡಿದ ಮಹಿಳೆಯರಿಗೆ ಸ್ಫೂರ್ತಿದಾಯಕವಾದ ಈ ಮಹಾನ್ ವೀರ ಮಹಿಳೆಯ ಹೆಸರನ್ನು ಸ್ವತಃ ಕೋರೆಯವರು ಸೂಚಿಸಿದರು. ೧೯೯೬ರಲ್ಲಿ ಒಟ್ಟು ೧೯ ಲಕ್ಷ ಶೇರು ಬಂಡವಾಳ ಹೊಂದಿದ ಈ ಬ್ಯಾಂಕು, ಶ್ರೀ ಪ್ರಭಾಕರ ಕೋರೆಯವರ ಮಾರ್ಗದರ್ಶನದಲ್ಲಿ ಇಂದು ಅದು ೨೬ ಕೋಟಿಯಷ್ಟಾಗಿದೆ. ಬೃಹತ್ ಪ್ರಮಾಣದಲ್ಲಿ ಬೆಳೆದ ಬೆಳಗಾವಿ ಜಿಲ್ಲೆಯ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸೇವೆಯಲ್ಲಿ ನಿರಂತರವಾಗಿದೆ. ಸುಮಾರು ೨೩ ವರ್ಷಗಳಲ್ಲಿ ಬ್ಯಾಂಕು ಸಾಧಿಸಿದ ಪ್ರಗತಿಯನ್ನು ಗುರುತಿಸಿ, ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ೨೦೦೪ರಲ್ಲಿ ಕರ್ನಾಟಕ ಸರಕಾರದಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಬ್ಯಾಂಕ್ ಎಂದು ಪ್ರಶಸ್ತಿಯನ್ನು ಪಡೆದಿದೆ. ೨೦೦೭ರಲ್ಲಿ ಮುಂಬಯಿಯ ಬ್ಯಾಂಕಿಂಗ್ ಫ್ರಂಟಿಯರ್ಸ್ ಈ ಬ್ಯಾಂಕಿಗೆ ಪ್ರಥಮ ಬಹುಮಾನ ನೀಡಿದೆ. ಈ ಶ್ರೇಯಸ್ಸು ಶ್ರೀ ಪ್ರಭಾಕರ ಕೋರೆಯವರ ಮಾರ್ಗದರ್ಶನ, ದೂರದೃಷ್ಟಿ ಹಾಗೂ ಪ್ರಾಮಾಣಿಕ ಪ್ರಯತ್ನಕ್ಕೆ ಸಂದ ವಿಜಯವಾಗಿದೆ. ಅಲ್ಲದೆ, ಈ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀಮತಿ ಆಶಾ ಪಿ. ಕೋರೆಯವರ ಪ್ರಾಮಾಣಿಕತೆ ವ್ಯಾವಹಾರಿಕ ಚತುರತೆ ಹಾಗೂ ಬ್ಯಾಂಕಿನ ಸದಸ್ಯರು ಹಾಗೂ ಸಿಬ್ಬಂದಿಯೊಂದಿಗೆ ಹೊಂದಿರುವ ಅನನ್ಯವಾದ ಸಂಬಂಧವೂ ಸಹ ಕಾರಣವಾಗಿದೆ.[೨೭]

ಈ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರೀ ಪ್ರಭಾಕರ ಕೋರೆಯವರು, ತನ್ನ ಬಿಡುವಿಲ್ಲದ ಕಾರ್ಯಕ್ರಮದ ಮಧ್ಯವೂ ಬ್ಯಾಂಕಿನ ಆಗುಹೋಗುಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ಪ್ರಗತಿಯನ್ನು ಪರಿಶೀಲಿಸಿ, ತಮ್ಮ ಅನುಭವವನ್ನು ಹಂಚಿಕೊಂಡು ಅವಶ್ಯವಿರುವ ಮಾರ್ಗದರ್ಶನ ಮಾಡುತ್ತಾ ಬಂದಿರುತ್ತಾರೆ. ಒಂದು ಉದಾಹರಣೆ

ಎಂದರೆ ೨೦೦೮ರಲ್ಲಿ ಶ್ರೀ ಪ್ರಭಾಕರ ಕೋರೆಯವರು ಕೂಡಲ ಸಂಗಮದ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಅಂದಿನ ದಿನಪತ್ರಿಕೆಯಲ್ಲಿ ಭಾರತ ಸರ್ಕಾರವು ಮಹಿಳೆಯರ ಆರ್ಥಿಕ ಸಬಲತೆಗೆ ಯೋಜನೆಯೊಂದನ್ನು ಪ್ರಕಟಿಸಿತು. ಅದನ್ನು ಓದಿದ ಶ್ರೀ ಕೋರೆಯವರು ಅಲ್ಲಿಂದಲೇ ದೂರವಾಣಿಯಿಂದ ಸಂಪರ್ಕಿಸಿ, ಆ ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳಲು ಬ್ಯಾಂಕಿನ ವ್ಯವಸ್ಥಾಪಕರಿಗೆ ಸಲಹೆಯನ್ನು ನೀಡಿದರು. ಹೀಗೆ ಸದಾ ಬ್ಯಾಂಕಿನ ಅಭಿವೃದ್ಧಿಗಾಗಿ ಯೋಚಿಸುವ ಶ್ರೀ ಪ್ರಭಾಕರ ಕೋರೆಯವರು ಆ ಮೂಲಕ ಬೆಳಗಾವಿ ಜಿಲ್ಲೆಯ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸಹಾಯ ಮಾಡುತ್ತಲೇ ಬಂದಿದ್ದಾರೆ.[೨೭] ಇವರ ಪ್ರಯತ್ನದ ಫಲವಾಗಿ ಇಂದು ಬ್ಯಾಂಕು ಎನ್.ಪಿ.ಎ. ಕಾಯ್ದಿರಿಸಿರುವ ಮೂಲಕ ಕರ್ನಾಟಕ ರಾಜ್ಯಾದ್ಯಂತ ಬ್ಯಾಂಕಿನ ಶಾಖೆಗಳನ್ನು ತೆರೆಯಲು ಸನ್ನದ್ಧವಾಗಿದೆ. ಈಗಾಗಲೇ ಈ ವರ್ಷಗಳಲ್ಲಿ ಬ್ಯಾಂಕು ಬೆಳಗಾವಿಯ ಮುಖ್ಯ ಕಛೇರಿಯನ್ನು ಒಳಗೊಂಡು, ಹೊಸದಾಗಿ ೮ ಶಾಖೆಗಳನ್ನು ತೆಗೆದಿದೆ. ಸವದತ್ತಿ, ನೆಹರುನಗರ ಬೆಳಗಾವಿ, ದಂತವಿಜ್ಞಾನ ಕಾಲೇಜಿನ ಆವರಣ ಬೆಳಗಾವಿ, ಗೋಕಾಕ, ಅಂಕಲಿ, ಚಿಕ್ಕೋಡಿ, ನಿಪ್ಪಾಣಿ, ಹುಬ್ಬಳ್ಳಿಗಳಲ್ಲಿಯೂ ಬ್ಯಾಂಕು ತನ್ನ ಶಾಖೆಗಳನ್ನು ತೆಗೆಯುವ ಮೂಲಕ ಬ್ಯಾಂಕನ್ನು ವಿಸ್ತರಿಸಿದ ಕೀರ್ತಿ ಶ್ರೀ ಕೋರೆಯವರದ್ದಾಗಿದೆ.

ಇದಲ್ಲದೆ ಬ್ಯಾಂಕಿನ ಮುಖ್ಯ ಕಛೇರಿ ಒಳಗೊಂಡಂತೆ, ಇತರ ಶಾಖೆಗಳಲ್ಲಿ ಆನ್‌ಲೈನ್ ಸೌಲಭ್ಯವನ್ನು ಹಾಗೂ ಮಹಿಳೆಯರ ಆಭರಣಗಳ ಸುರಕ್ಷತೆಗಾಗಿ ಬ್ಯಾಂಕಿನಲ್ಲಿ ಸೇಫ್ ಡಿಪಾಜಿಟ್ ಲಾಕರ್‌ನ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಬ್ಯಾಂಕಿನಲ್ಲಿ ಮಹಾನಗರ ಸಭೆಯ ಜನರು ಸುಲಭವಾಗಿ ಕರಗಳನ್ನು ತುಂಬಲು ಅನುಕೂಲ ಒದಗಿಸಿದ್ದಾರೆ. ಆರೋಗ್ಯ ಮತ್ತು ಸಾಮಾನ್ಯ ವಿಮಾ ಸೇವಾ ಸೌಲಭ್ಯವನ್ನು ಒದಗಿಸಿದರಲ್ಲದೆ; ಅತ್ಯಂತ ಕಡಿಮೆ ದರದಲ್ಲಿ ಗೃಹ ಹಾಗೂ ವಾಹನ ಸಾಲ ಸೌಲಭ್ಯಗಳನ್ನು ಪೂರೈಸಿದ್ದಾರೆ.[೨೮] ನಗುಮುಖದ ಸೇವೆಯೊಂದಿಗೆ ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಬ್ಯಾಂಕು ಕಾರ್ಯನಿರ್ವಹಿಸುವಂತೆ ಮಾಡಿದ್ದಾರೆ. ಈ ಬ್ಯಾಂಕು ನಿರಂತರವಾಗಿ ಲಾಭದಾಯಕವಾಗಿ ಹೊರಹೊಮ್ಮುತ್ತಿರುವುದು ಶ್ರೀ ಪ್ರಭಾಕರ ಕೋರೆಯವರ ಸೂಕ್ತವಾದ ಮಾರ್ಗದರ್ಶನದ ಜೊತೆಗೆ ಈ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಆಶಾದೇವಿ ಪಿ. ಕೋರೆಯವರ ಪ್ರಾಮಾಣಿಕ ಕಾರ್ಯನಿರ್ವಹಣೆಯು ಒಂದು ಪ್ರಮುಖ ಕಾರಣವಾಗಿದೆ. ಇದಲ್ಲದೆ ಬ್ಯಾಂಕು ತನ್ನ ಆದ್ಯತಾರಂಗಕ್ಕೆ ಶೇ. ೭೪.೧೨ ರಷ್ಟು ಸಾಲಗಳನ್ನು ದುರ್ಬಲ ವರ್ಗದ ಹಾಗೂ ಮಹಿಳೆಯರಿಗಾಗಿ ಶೇ. ೬೦.೭೫ರಷ್ಟು ಸಾಲಗಳನ್ನು ಕೊಡುವ ಮೂಲಕ ಈ ವರ್ಗದ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಶ್ರಮಿಸಿ ಈ ಯೋಜನೆಗಳಲ್ಲದೆ ಬಡ ಮಹಿಳೆಯರ ಹೃದಯ ಶಸ್ತ್ರಚಿಕಿತ್ಸೆಗೆ ಅನುಕೂಲವಾಗಲಿ ಎನ್ನುವ ಉದ್ದೇಶವನ್ನು ಇರಿಸಿಕೊಂಡು ಕೆ.ಎಲ್.ಇ. ಡಾ. ಪ್ರಬಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಹಾರ್ಟ್ ಫೌಂಡೇಶನ್‌ಗೆ ೧ ಲಕ್ಷ ರೂಪಾಯಿಗಳನ್ನು ಪ್ರತಿವರ್ಷ ದಾನವಾಗಿ ನೀಡುತ್ತಿದ್ದಾರೆ. ಮಹಿಳಾ ಬ್ಯಾಂಕು ಬಡವರ್ಗದ ಮಹಿಳೆಯರ ಹೃದಯದ ಶಸ್ತ್ರಚಿಕಿತ್ಸೆಗೆ ಧನ ಸಹಾಯವನ್ನು ಒದಗಿಸುವ ಮೂಲಕ ಕೇವಲ ಮಹಿಳೆಯರ ಆರ್ಥಿಕ ಸುಧಾರಣೆಗಾಗಿಯಷ್ಟೇ ಕಾರ್ಯ ಮಾಡದೆ, ಬಡ ವರ್ಗದ ಮಹಿಳೆಯರ ಆರೋಗ್ಯದ ಸುಧಾರಣೆಯತ್ತಲೂ ಗಮನ ಹರಿಸಿದ ರಾಜ್ಯದ ಏಕಮಾತ್ರ ಮಹಿಳಾ ಬ್ಯಾಂಕು ಎಂಬ ಶ್ರೇಯಸ್ಸಿಗೆ ಪಾತ್ರವಾಗಿದೆ.

ಇದಲ್ಲದೆ ಈ ಬ್ಯಾಂಕು ೨೦೦೭–೨೦೦೮ನೇ ಸಾಲಿನಲ್ಲಿ ಒಟ್ಟು ೩೮,೧೮,೮೨೭–೪೫ರಷ್ಟು ನಿವ್ವಳ ಲಾಭವನ್ನು ಗಳಿಸಿದೆಯಲ್ಲದೇ ಬ್ಯಾಂಕಿನ ಸದಸ್ಯರಿಗೆ ಶೇ. ೧೦ರಷ್ಟು ಲಾಭಾಂಶವನ್ನು ಕೂಡಾ ವಿತರಿಸಲಾಗಿದೆ. ಇವತ್ತು ಈ ಬ್ಯಾಂಕಿನ ಒಟ್ಟು ವಾರ್ಷಿಕ ವಹಿವಾಟು ೯೩.೨ ಕೋಟಿಗಳಿಗೇರಿದೆ. ಸುಮಾರು ೧೨ ವರ್ಷಗಳ ಈ ಅಲ್ಪ ಅವಧಿಯಲ್ಲಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಈ ಮಹಿಳಾ ಬ್ಯಾಂಕು ಬೆಳೆದು ನಿಲ್ಲಬೇಕಾದರೆ ಅದಕ್ಕೆ ಶ್ರೀ ಪ್ರಭಾಕರ ಕೋರೆಯವರಂತಹ ಮಾರ್ಗದರ್ಶನ ಮತ್ತು ಶ್ರೀಮತಿ ಆಶಾದೇವಿ ಪಿ. ಕೋರೆಯವರ ನಿಸ್ವಾರ್ಥ ಸೇವೆಯೇ ಪ್ರಮುಖ ಕಾರಣವಾಗಿದೆ.[೨೯]

ಹೀಗೆ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಇಂದು ಬೆಳಗಾವಿ ಜಿಲ್ಲೆಯಲ್ಲಿ ಶ್ರೀ ರಾಣಿಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕು ಒಂದು ಹೊಸ ಭರವಸೆಯನ್ನು ಮೂಡಿಸುತ್ತ, ಯಶಸ್ಸಿನ ಶಿಖರವನ್ನು ಏರುತ್ತಿದೆ. ಸಹಸ್ರಾರು ಮಹಿಳೆಯರು ಆರ್ಥಿಕವಾಗಿ ಲಾಭ ಪಡೆದು ತಮ್ಮ ಜೀವನದಲ್ಲಿ ಸುಧಾರಣೆಯನ್ನು ಕಂಡುಕೊಳ್ಳುವಂತೆ ಮಾಡಿದ ಶ್ರೀ ಪ್ರಭಾಕರ ಕೋರೆಯವರು, ಜಿಲ್ಲೆಯ ಮಹಿಳೆಯರ ಬಗ್ಗೆ ಹಾಗೂ ಅವರ ಆರ್ಥಿಕ ಸಬಲೀಕರಣಕ್ಕಾಗಿ ಮತ್ತು ಬೆಳಗಾವಿ ಜಿಲ್ಲೆಯ ಮಹಿಳೆಯರ ಅಭಿವೃದ್ಧಿಗಾಗಿ ಮಾಡುತ್ತಿರುವ ಅವರ ಕೆಲಸ ಕಾರ್ಯಗಳಿಂದ ಗೊತ್ತಾಗುವ ಅಂಶವೆಂದರೆ, ಕೇವಲ ಮಹಿಳೆಯರ ಸಧೃಡತೆಯ ಬಗ್ಗೆ ಮಾತನಾಡುವ ರಾಜಕೀಯ ನಾಯಕರ ಸಾಲಿನಲ್ಲಿ ಶ್ರೀಯುತರು ನಿಲ್ಲದೆ, ನೈಜವಾಗಿ ಮಹಿಳೆಯರ ಬಗ್ಗೆ ಕಳಕಳಿಯನ್ನು ಹೊಂದಿದ ನಾಯಕರ ಸಾಲಿನಲ್ಲಿ ನಿಲ್ಲುತ್ತಾರೆ. ಈ ಬ್ಯಾಂಕಿನ ಮೂಲಕ ಸಹಸ್ರಾರು ಮಹಿಳೆಯರು ಆರ್ಥಿಕವಾಗಿ ಲಾಭವನ್ನು ಪಡೆದುಕೊಳ್ಳುತ್ತಿರುವುದಕ್ಕೆ ಶ್ರೀ ಪ್ರಭಾಕರ ಕೋರೆಯವರು ಈ ಬ್ಯಾಂಕನ್ನು ಸ್ಥಾಪಿಸಿರುವುದು ಹಾಗೂ ಅದರ ಬೆಳವಣಿಗೆಗೂ ಶ್ರಮಿಸುತ್ತಿರುವುದು ಅವರ ನಿಸ್ವಾರ್ಥ ಸೇವೆಯ ದ್ಯೋತಕವಾಗಿದೆ.

ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ, ಹಾಗೆಯೇ ಬೆಳೆಸುವುದರಲ್ಲಿ ಸಹಕಾರಿ ರಂಗದ ಪಾತ್ರ ಗೌಣ್ಯ. ಅವರು ಸಹಕಾರಿ ರಂಗದಿಂದ ಪಡೆದಿದ್ದು ಕಿಂಚಿತ್ತಾದರೂ ಅವರು ಈ ರಂಗಕ್ಕೆ ಕೊಟ್ಟ ಕೊಡುಗೆ ಅಪಾರ. ಶ್ರೀ ಪ್ರಭಾಕರ ಕೋರೆಯವರು ಚಿಕ್ಕೋಡಿ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಿದ್ದು, ಅಂಕಲಿ ಅರ್ಬನ್ ಕೋ– ಬ್ಯಾಂಕ್ ಹಾಗೂ ಬೆಳಗಾವಿ ಜಿಲ್ಲಾ ರಾಣಿ ಚನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕುಗಳ ಮೂಲಕ ಈ ಭಾಗದ ದುರ್ಬಲ ವರ್ಗದ ಜನರ ಆರ್ಥಿಕ ಸಧೃಡತೆಗಾಗಿ ಸಲ್ಲಿಸಿದ ಸೇವೆ, ಮುಂದಿನ ಪೀಳಿಗೆಗೆ ದಾರೀದೀಪ. ಈ ಸಂಸ್ಥೆಗಳಲ್ಲದೇ ಜಿಲ್ಲೆಯ ಅನೇಕ ಕಷ್ಟದಲ್ಲಿರುವ ಸಹಕಾರಿ ಸಂಘಗಳನ್ನು ಪುನಃಶ್ಚೇತನಗೊಳಿಸಿದ್ದಾರೆ. ನವದೆಹಲಿಯ ಅಖಿಲ ಭಾರತ ಸಹಕಾರಿ ಸಕ್ಕರೆ ಕಾರ್ಖಾನೆಯ ಮಹಾಮಂಡಲದ ನಿರ್ದೇಶಕರಾಗಿ ಸದ್ಯ ಅದರ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆ ಮೂಲಕ ಲಕ್ಷಾಂತರ ಜನರಿಗೆ ಆರ್ಥಿಕ ಸಹಾಯ ದೊರೆಯಲು ಕಾರಣರಾದರು. ತಾವು ಕಾರ್ಖಾನೆಯ ಅಧ್ಯಕ್ಷರಾಗದೆ ಮತ್ತು ಅಂಕಲಿ ಅರ್ಬನ್ ಬ್ಯಾಂಕ್‌ನ ಅಧ್ಯಕ್ಷರಾಗದೆ, ಯುವ ಸಹಕಾರಿಗಳ ಪಡೆಯನ್ನು ಬೆಳೆಸುತ್ತಿರುವುದು ಒಂದು ಆದರ್ಶ. ಸಹಕಾರಿ ಸಂಘಗಳ ಉಳಿವಿಗಾಗಿ ತಮ್ಮ ಸ್ವಂತದ ಆಸ್ತಿಯನ್ನು ಅಡವಿಡುವ ಮೂಲಕ ಸಹಕಾರಿ ರಂಗದಲ್ಲಿಯೇ ಒಂದು ಹೊಸ ಆದರ್ಶ ಪರಂಪರೆಗೆ ನಾಂದಿ ಹಾಡಿದ್ದಾರೆ. ಶ್ರೀ

ಪ್ರಭಾಕರ ಕೋರೆಯವರು ಸಹಕಾರಿ ರಂಗದ ಮೇರು ನಾಯಕರು ಎನ್ನುವುದು ಅವರ ಸಹಕಾರಿ ರಂಗದ ಕೊಡುಗೆಗಳಿಂದ ಸ್ಪಷ್ಟವಾಗುತ್ತದೆ.

ಕೇವಲ ರಾಜಕೀಯ ರಂಗದಲ್ಲಿ ಇರದೆ, ಇತರ ಸಹಕಾರಿ ರಂಗದ ಮೂಲಕವೂ ಸಾಮಾನ್ಯ ಜನರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಪ್ರಭಾಕರ ಕೋರೆಯವರು ಯುವ ರಾಜಕಾರಣಿಗಳಿಗೆ ಆದರ್ಶಪ್ರಾಯರೆನಿಸಿದ್ದಾರೆ.

ಡಾ. ಪ್ರಭಾಕರ ಕೋರೆ ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು :

ಆರೋಗ್ಯವಂತ ಮನುಷ್ಯ ಮತ್ತು ಆರೋಗ್ಯವಂತ ಸಮಾಜ ಸದೃಢವಾದ ದೇಶವನ್ನು ನಿರ್ಮಾಣಮಾಡಬಲ್ಲನು ಎನ್ನುವ ಮಾತಿನಂತೆ ಶ್ರೀ ಪ್ರಭಾಕರ ಕೋರೆಯವರು ಜನಸಾಮಾನ್ಯರ ಆರೋಗ್ಯದ ಬಗ್ಗೆ ತೀವ್ರ ಕಳಕಳಿಯನ್ನು ಹೊಂದಿದ್ದಾರೆ. ಕೋರೆಯವರ ಸಾಧನಾ ಕ್ಷೇತ್ರಗಳು ಹಲವು. ಒಬ್ಬ ರಾಜಕೀಯ ನಾಯಕರಾಗಿ ಆರೋಗ್ಯ ಕ್ಷೇತ್ರದಲ್ಲಿನ ಅವರ ಸಾಧನೆಯು ದೇಶ ವಿದೇಶಗಳಿಗೂ ಹಬ್ಬಿದೆ. ಶ್ರೀ ಕೋರೆಯವರು ಈ ಕ್ಷೇತ್ರದಲ್ಲಿ ಸಾಧಿಸಿದ ಅಮೋಘವಾದ ಸಾಧನೆಯನ್ನು ಕಂಡು ಜನ ಮುಕ್ತವಾಗಿ ಪ್ರಶಂಸಿಸುತ್ತಾರೆ.

ಒಂದು ಕಾಲವಿತ್ತು, ಉತ್ತರ ಕರ್ನಾಟಕದ ಜನ ತಮ್ಮ ಆರೋಗ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ದೂರದ ಪೂಣೆ, ಮುಂಬಯಿ, ಮಿರಜ ಮುಂತಾದ ಊರುಗಳಿಗೆ ತೆರಳಬೇಕಾಗಿತ್ತು. ಇದನ್ನು ಮನಗಂಡ ಶ್ರೀ ಕೋರೆಯವರು ಬೆಳಗಾವಿಯಲ್ಲಿಯೇ ಅಂತಾರಾಷ್ಟ್ರೀಯ ಮಟ್ಟದ ಅತ್ಯಾಧುನಿಕ ಸೌಲಭ್ಯಗಳ ಒಂದು ಬೃಹತ್ ಆಸ್ಪತ್ರೆಯನ್ನು ನಿರ್ಮಾಣ ಮಾಡಿ, ಈ ಭಾಗದ ಜನರಿಗೆ ಆರೋಗ್ಯದಭಾಗ್ಯವನ್ನು ಕಲ್ಪಿಸಿದ್ದಾರೆ. ಜನ ತಮ್ಮ ಆರೋಗ್ಯದ ಸಮಸ್ಯೆಗಳನ್ನು ಇಲ್ಲಿಯೇ ಪರಿಹರಿಸಿಕೊಳ್ಳಬೇಕು ಅದಕ್ಕಾಗಿ ದೂರದ ಊರುಗಳಿಗೆ ಹೋಗಿ ಅಧಿಕ ಹಣ ಖರ್ಚು ಮಾಡುವುದನ್ನು ತಪ್ಪಿಸಬೇಕು ಎಂದು ನಿರ್ಣಯಿಸಿ, ಕೆ.ಎಲ್.ಇ. ಸಂಸ್ಥೆಯ ೩೦೦ ಹಾಸಿಗೆಗಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ವಿಶ್ವ ದರ್ಜೆಯ ಉನ್ನತ ಮಟ್ಟದ ಹೈಟೆಕ್ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕು ಎನ್ನುವ ದೃಢ ಸಂಕಲ್ಪದೊಂದಿಗೆ ಕಾರ್ಯ ಪ್ರವೃತ್ತರಾದರು. ಈ ಕಾರ್ಯಕ್ಕಾಗಿ ದೇಶಗಳಿಗೆ ಅಂದರೆ ಅಮೇರಿಕಾ, ಇಂಗ್ಲಂಡ್, ಜರ್ಮನಿ, ಸ್ವಿಡ್ಜರ್‌ಲ್ಯಾಂಡ್ ಅಲ್ಲದೇ ದೇಶದ ವಿವಿಧ ಬೃಹತ್ ಆಸ್ಪತ್ರೆಗಳನ್ನು ಪದೇ ಪದೇ ಭೇಟಿ ನೀಡಿದರು. ಅಲ್ಲಿ ಆಸ್ಪತ್ರೆಗಳ ಗುಣಮಟ್ಟ ಕಟ್ಟಡ ವಿನ್ಯಾಸ, ಅಲ್ಲಿ ಇರುವ ಆಧುನಿಕ ಸೌಲಭ್ಯಗಳನ್ನು ಸ್ವತಃ ಪರಿಶೀಲಿಸಿ, ಅವುಗಳಿಗೆ ಕಡಿಮೆ ಇಲ್ಲದಂತೆ ಅವುಗಳಿಗಿಂತ ವಿಶೇಷವಾಗಿ ನಿರ್ಮಾಣ ಮಾಡಬೇಕು ಎಂದು ತೀರ್ಮಾನಿಸಿದರು. ತಕ್ಷಣ ಕರ್ನಲ್ ಎ. ಕೆ. ಸಿಂಗ್ ಅವರ ಸೂಕ್ತ ಮಾರ್ಗದರ್ಶನದಲ್ಲಿ ಆಸ್ಪತ್ರೆಯ ನಿರ್ಮಾಣ ಕಾರ್ಯಕ್ಕೆ ಚಾಲನೆಯಿತ್ತರು.[೩೦]

ಈ ಭಾಗದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿಯೇ ಒಂದು ಬೃಹತ್ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕು ಎಂದು ಶ್ರೀ ಪ್ರಭಾಕರ ಕೋರೆಯವರು ೧೯೮೬ರಲ್ಲಿಯೇ ತೀರ್ಮಾನಿಸಿ, ೩೦೦ ಹಾಸಿಗೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರವನ್ನು ಆಗಿನ ಭಾರತದ ರಾಷ್ಟ್ರಪತಿಗಳಾದ ಶ್ರೀ ಗ್ಯಾನಿ ಜೇಲ್‌ಸಿಂಗ್‌ರನ್ನು ಆಮಂತ್ರಿಸಿ ಕರ್ನಾಟಕ ರಾಜ್ಯದ ಆಗಿನ ಮುಖ್ಯಮಂತ್ರಿಯಾದ ಶ್ರೀ ರಾಮಕೃಷ್ಣ ಹೆಗಡೆಯವರ ಉಪಸ್ಥಿತಿಯಲ್ಲಿ ಆಸ್ಪತ್ರೆ

ಹಾಗೂ ಸಂಶೋಧನಾ ಕೇಂದ್ರವನ್ನು ಲೋಕಕ್ಕೆ ಅರ್ಪಿಸಿದರು. ಅಂದಿನ ಐತಿಹಾಸಿಕ ಸಮಾರಂಭಕ್ಕೆ ಉಪಸ್ಥಿತರಿದ್ದ ಸಹಸ್ರಾರು ಜನರು ಸಾಕ್ಷಿಯಾದರು.

ಶ್ರೀ ಪ್ರಭಾಕರ ಕೋರೆಯವರ ನಿರಂತರ ಶ್ರಮ, ಪ್ರಾಮಾಣಿಕತೆಯ ದೃಢಸಂಕಲ್ಪ, ಇಚ್ಛಾಶಕ್ತಿಯ ಪ್ರತೀಕವಾಗಿ ೧೯೯೬ರ ಹೊತ್ತಿಗೆ ಒಂದು ಸುಂದರ ವಿನ್ಯಾಸದ ಬೃಹತ್ ಅತ್ಯಾಧುನಿಕ ಆಸ್ಪತ್ರೆ ಬೆಳಗಾವಿಯಲ್ಲಿ ರೂಪುಗೊಂಡಿತು. ಬೆಂಗಳೂರು ಪೂಣಾ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ, ಸುಮಾರು ೧೭ ಎಕರೆ ವಿಸ್ತಾರದ ಪ್ರದೇಶಗಳಲ್ಲಿ ಕೋರೆಯವರ ಕನಸಿನಂತೆ ೧೦೦೦ ಹಾಸಿಗೆಯ ಬೃಹತ್ ಪ್ರಮಾಣದ ಆಸ್ಪತ್ರೆಯನ್ನು ಸುಮಾರು ೧೨೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣಗೊಂಡು ಆರೋಗ್ಯ ಸೇವಾ ಕ್ಷೇತ್ರಕ್ಕೆ ತನ್ನ ಅಮೋಘವಾದ ಕಾರ್ಯ ಸಾಧನೆ ಸಲ್ಲಿಸುತ್ತಿದೆ. ಇದರ ಹಿಂದಿನ ಶಕ್ತಿ ಕೋರೆಯವರೆಂಬುದನ್ನು ಮರೆಯಲಾಗದು.[೩೧]

ಬೆಳಗಾವಿಯಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಆಸ್ಪತ್ರೆಯ ಅವಶ್ಯಕತೆ ಇಲ್ಲವೆಂದು ಮೂಗು ಮುರಿಯುವ ಜನರು ಕಡಿಮೆ ಇರಲಿಲ್ಲ. ಇಷ್ಟು ಹಣ ಖರ್ಚುಮಾಡಿ ಆಸ್ಪತ್ರೆ ನಿರ್ಮಾಣ ಮಾಡುವುದು ಕಠಿಣವಾದ ಕೆಲಸವೆಂದು ಕೆಲ ಅಪಸ್ವರಗಳು ಹುಟ್ಟಿದ್ದವು. ಶ್ರೀ ಕೋರೆಯವರು ಇದಕ್ಕೆಲ್ಲ ತಲೆಕೆಡಿಸಿಕೊಳ್ಳದೆ ಬಂದ ತೊಂದರೆಗಳನ್ನು ಪ್ರೇರಿತವಾಗಿ ಇಂದು ಎಲ್ಲರೂ ಹೆಮ್ಮೆ ಪಡುವಂತೆ ಈ ಆಸ್ಪತ್ರೆಯನ್ನು ನಿರ್ಮಿಸಿದ್ದಾರೆ. ಅಪಸ್ವರ ಎತ್ತಿದವರಿಗೆ ಪ್ರತಿ ಉತ್ತರ ನೀಡದೇ, ಕಾರ್ಯಸಾಧನೆಯ ಮೂಲಕವೇ ಉತ್ತರಿಸಿದ್ದಾರೆ. ಜೂನ್ ೧೦, ೧೯೯೬ರಂದು ಅಂದಿನ ಭಾರತ ಸರ್ಕಾರದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಪಿ. ವಿ. ನರಸಿಂಹರಾವರಿಂದ, ಈ ಆಸ್ಪತ್ರೆಯನ್ನು ದೇಶದ ಆರೋಗ್ಯ ಸೇವೆಗೆ ಸಮರ್ಪಿಸಿದ ಶ್ರೀ ಪ್ರಭಾಕರ ಕೋರೆಯವರು, ಐತಿಹಾಸಿಕ ಕಾರ್ಯಸಾಧನೆ ಮಾಡಿದ ಶ್ರೇಯಸ್ಸಿಗೆ ಪಾತ್ರರಾದರು. ಈ ಸುವರ್ಣ ಘಳಿಗೆಯನ್ನು ಸಾಕ್ಷೀಕರಿಸಲು ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ. ದೇವೇಗೌಡರು, ಅಂದಿನ ಕೇಂದ್ರ ಸಚಿವರಾದ ಶ್ರೀ ಬಿ. ಶಂಕರಾನಂದರು ಅಲ್ಲದೇ ಸಂಸದ ಶ್ರೀ ಎಸ್. ಬಿ. ಸಿದ್ನಾಳ, ಸಚಿವರಾದ ಶ್ರೀ ಶಿವಾನಂದ ಕೌಜಲಗಿ, ಶಾಸಕರಾದ ಶ್ರೀ ಪ್ರಕಾಶ ಹುಕ್ಕೇರಿ ಮತ್ತಿತರರು ವೇದಿಕೆಯನ್ನು ಹಂಚಿಕೊಂಡರು.[೩೨]

ಶ್ರೀ ಪ್ರಭಾಕರ ಕೋರೆಯವರು, ಸುಂದರ ವಿನ್ಯಾಸದ ಆಧುನಿಕ ಆಸ್ಪತ್ರೆಯನ್ನು ನಿರ್ಮಾಣ ಮಾಡುವ ಮೂಲಕ ಉತ್ತರ ಕರ್ನಾಟಕದ ಜನರಿಗೆ ಆರೋಗ್ಯಭಾಗ್ಯ ಕಲ್ಪಿಸಿದರು. ಬೆಳಗಾವಿ ನಗರಕ್ಕೆ ಈ ಆಸ್ಪತ್ರೆಯು ಭೂಷಣವಾಗುವ ರೀತಿಯಲ್ಲಿ ರೂಪಿಸಿದ ಶ್ರೇಯಸ್ಸು ಇವರದು. ಹೀಗೆ ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಕಟ್ಟಡವನ್ನು ಸುಮಾರು ೧೭ ಎಕರೆ ಪ್ರದೇಶದ ಜಾಗದಲ್ಲಿ ಒಟ್ಟು ೮.೪೬ ಲಕ್ಷ ಸ್ಕ್ವೇರ್ ಫೀಟ್‌ನಲ್ಲಿ ಭವ್ಯವಾದ ಕಟ್ಟಡವನ್ನು ಸುಮಾರು ೧೨೦ ಕೋಟಿ ರೂಪಾಯಿ ವೆಚ್ಚದಲ್ಲಿ ೧೦೦೦ ಹಾಸಿಗೆಯ, ದೇಶದಲ್ಲಿಯೇ ಎರಡನೆಯ ಆಧುನಿಕ ಆಸ್ಪತ್ರೆಯೆನ್ನಿಸಿಕೊಂಡು ತಲೆ ಎತ್ತಿ ನಿಲ್ಲುವಂತೆ ಮಾಡಿದರು.[೩೩]

ಪ್ರಸ್ತುತ ಈ ಆಸ್ಪತ್ರೆಯನ್ನು ಶ್ರೀ ಕೋರೆಯವರು ೧೯೯೦ ಹಾಸಿಗೆಗೆ ವಿಸ್ತಾರಗೊಳಿಸಿದ್ದಾರೆ. ಇವುಗಳಲ್ಲಿ ೨೨ ಆಪರೇಷನ್ ಕೊಠಡಿಗಳು ಇವೆ. ಸುಮಾರು ೨೦೮೦ ಸಿಬ್ಬಂದಿಯೊಂದಿಗೆ ಈ ಆಸ್ಪತ್ರೆಯು ಜನರ ಸೇವೆಯಲ್ಲಿ

ನಿರತವಾಗಿದೆ.[೩೪] ಕೆ.ಎಲ್.ಇ ಸಂಸ್ಥೆಯ ಈ ಬೃಹತ್ ಆಸ್ಪತ್ರೆ ೧೯೯೬ರಿಂದ ಆರೋಗ್ಯ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಸೇವೆಯನ್ನು ನೀಡುತ್ತಿದೆ. ಇದು ಉತ್ತರ ಕರ್ನಾಟಕದ ವೈದ್ಯಕೀಯ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆಗೆ ನಾಂದಿ ಹಾಡಿತು. ಬೆಂಗಳೂರು, ಪುಣೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಈ ಆಸ್ಪತ್ರೆಯ ವಿನ್ಯಾಸ ಅದ್ಭುತವಾಗಿದೆ. ಸುಂದರ ಹೂದೋಟ, ವಿಶಾಲ ಹುಲ್ಲುಹಾಸಿಗೆ ಮತ್ತು ಗಿಡಮರಗಳು ರೋಗಿಯ ಮನಸ್ಸಿಗೆ ಹಿತನೀಡುತ್ತಿವೆ. ನಿಸರ್ಗಮಯ ಹೋರನೋಟವಿದೆ, ಆಸ್ಪತ್ರೆಯ ಒಳಗೆ ಗಾಳಿ ಮತ್ತು ಬೆಳಕು ಧಾರಾಳವಾಗಿ ಬೀರುವಂತೆ ಮಾಡಿದ್ದಾರೆ. ಸ್ವಚ್ಛತೆಗೆ ನೀಡುವ ಆದ್ಯತೆ ಅಚ್ಚರಿ ಮೂಡಿಸುತ್ತದೆ.[೩೫]

ಪ್ರತಿವರ್ಷ ಸುಮಾರು ೫೦ ಸಾವಿರ ಒಳ ಹಾಗೂ ಹೊರ ರೋಗಿಗಳು ಈ ಆಸ್ಪತ್ರೆಯ ಮೂಲಕ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಾರೆ. ಹೀಗೆ ಉತ್ತರ ಕರ್ನಾಟಕದ ಜನರಿಗೆ ಆರೋಗ್ಯದ ಸೇವೆಯನ್ನು ಮನೆಯ ಬಾಗಿಲಿಗೆ ತಲುಪುವಂತೆ ಮಾಡಿದ ಶ್ರೀ ಕೋರೆಯವರು, ಈ ಆಸ್ಪತ್ರೆಯನ್ನು ಅತ್ಯಂತ ಯೋಜನಾಬದ್ಧವಾಗಿ ನಿರ್ಮಿಸುತ್ತದೆ. ಇವರು ಜನರಿಗೆ ಆರೋಗ್ಯ ಭಾಗ್ಯ ಕಲ್ಪಿಸಿದ ಪುಣ್ಯ ಪುರುಷರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿದ್ದಾರೆ. ತಜ್ಞ ವೈದ್ಯರನ್ನು ನೇಮಿಸಿ ಎಂಥ ಕಠಿಣ ಆರೋಗ್ಯದ ಸಮಸ್ಯೆಗಳನ್ನೂ ಸುಲಭವಾಗಿ ಗುಣಪಡಿಸುವ ಮೂಲಕ ದೇಶ–ವಿದೇಶಗಳಲ್ಲಿ ಕೂಡಾ ಈ ಆಸ್ಪತ್ರೆಯ ಕೀರ್ತಿ ಹಬ್ಬುವಂತೆ ಶ್ರಮಿಸಿದ್ದಾರೆ.

ಈ ಆಸ್ಪತ್ರೆಯು ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡುವ ಉದ್ದೇಶದೊಂದಿಗೆ ಸೇವೆ ಸಲ್ಲಿಸುತ್ತಿದೆ. ಮತ್ತು ರೋಗಿಗಳ ಕಾಳಜಿ ವಹಿಸುವುದು ಆರೈಕೆ ಮಾಡುವುದು ಮುಖ್ಯ ಧ್ಯೇಯ ಸಮರ್ಪಣ ಭಾವದಿಂದ ಸಹಾನುಭೂತಿ ಉಚಿತ ವೈದ್ಯಕೀಯ ಸೇವೆ ಒದಗಿಸುವ ಉದ್ದೇಶವನ್ನು ಇರಿಸಿಕೊಂಡು, ಕಾರ್ಯ ನಿರ್ವಹಿಸುವಂತೆ ಮಾಡಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ. ಈ ರೀತಿಯ ಘನವಾದ ಧ್ಯೇಯ ಹಾಗೂ ಉದ್ದೇಶದೊಂದಿಗೆ ಜನರಿಗೆ ಆರೋಗ್ಯ ಸೇವೆ ಒದಗಿಸಲು ಈ ಆಸ್ಪತ್ರೆಯನ್ನು ಅಣಿಗೊಳಿಸಿದ್ದಾರೆ. ಶ್ರೀ ಪ್ರಭಾಕರ ಕೋರೆಯವರ ನಿರಂತರ ಪ್ರಯತ್ನದ ಫಲವಾಗಿ ಇಂದು ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರವು ಬೃಹದಾಕಾರವಾಗಿ ಬೆಳೆದು ನಿಂತಿದೆ. ಇಂದು ಈ ಆಸ್ಪತ್ರೆಯಲ್ಲಿ ಒದಗಿಸುತ್ತಿರುವ ಉತ್ತಮ ಗುಣಾತ್ಮಕ ಸೇವೆಯಿಂದ ಲಕ್ಷಾಂತರ ಜನರಿಗೆ ಅನುಕೂಲವಾಗಿದೆ. ಅವರ ಈ ಸೇವೆಯ ಸ್ಮರಣೆಗಾಗಿ ಸಂಸ್ಥೆ 'ಡಾ. ಪ್ರಭಾಕರ ಕೋರೆ ಆಸ್ಪತ್ರೆ' ಎಂದು ೨೦೦೭ ಅಗಸ್ಟ್ ೧ ರಂದು ಪುನರ್ನಾಮಕರಣ ಮಾಡಿದರು.[೩೬]

ಪ್ರಭಾಕರ ಕೋರೆಯವರು ಮಾನವೀಯತೆ ಹೊಂದಿರುವ ಮೇರು ನಾಯಕರು. ಬಡವರ, ಅಲ್ಪಸಂಖ್ಯಾತರ ಹಿಂದುಳಿದ ವರ್ಗದ ಹಾಗೂ ಇತರ ರೈತ ಸಮುದಾಯದವರ ಬಗ್ಗೆ ವಿಶೇಷ ಕಳಕಳಿಯನ್ನು ಹೊಂದಿದವರು. ಅಂಥ ಜನರು ಆರ್ಥಿಕ ಸಮಸ್ಯೆಯಿಂದಾಗಿ ತಮ್ಮ ಆರೋಗ್ಯದ ಸಮಸ್ಯೆಗಳನ್ನು ಇಂದಿನ ವೆಚ್ಚದಾಯಕ ವೈದ್ಯಕೀಯ ಜಗತ್ತಿನಲ್ಲಿ ಬಗೆಹರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಗ್ರಹಿಸಿ ಕೋರೆಯವರು, ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆಯಲ್ಲಿಯೇ ಒಂದು ಉಚಿತ ಧರ್ಮಾರ್ಥ (ಚಾರಿಟೇಬಲ್) ಆಸ್ಪತ್ರೆಯನ್ನು ಪ್ರಾರಂಭಿಸಿ, ದುರ್ಬಲ ವರ್ಗದ

ಜನರಿಗೆ ಅನುಕೂಲ ಕಲ್ಪಿಸಲು ನಿರ್ಧರಿಸಿದರು. ೨೦೦೪ರಲ್ಲಿ ೩೦೦ ಹಾಸಿಗೆಯ ಉಚಿತ ಆಸ್ಪತ್ರೆಯನ್ನು ಪ್ರಾರಂಭಿಸಿದರು. ಆ ಮೂಲಕ ದೇಶದ ಇತಿಹಾಸದಲ್ಲಿ ಅಗ್ರ ಸ್ಥಾನದಲ್ಲಿ ಶ್ರೀ ಕೋರೆಯವರು ಅಗ್ರಸ್ಥಾನವನ್ನು ಪಡೆದಿದ್ದಾರೆ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರಕ್ಕೆ ಹೊಂದಿಕೊಂಡಂತೆ ಒಟ್ಟು ೨.೩೫ ಲಕ್ಷ ಸ್ಕ್ವೇರ್‌ಫೀಟ್ ಜಾಗದಲ್ಲಿ ಸುಮಾರು ೧೨.೫ ಕೋಟಿ ಹಣವನ್ನು ಖರ್ಚು ಮಾಡಿ, ಸುಸಜ್ಜಿತ ಆಸ್ಪತ್ರೆ ನಿರ್ಮಿಸಿದರು. ಇದನ್ನು ೫–೦೮–೨೦೦೮ರಂದು ಅಂದಿನ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೈ. ಎಸ್. ರಾಜಶೇಖರ ರೆಡ್ಡಿ ಅವರಿಂದ ಲೋಕಕ್ಕೆ ಅರ್ಪಿಸಿದರು. ಈಗ ಈ ಆಸ್ಪತ್ರೆಯಲ್ಲಿ ೯೯೦ ಹಾಸಿಗೆಯ ಉಚಿತ ಸೌಲಭ್ಯ ವಿಸ್ತರಿಸುವ ಮೂಲಕ ಬಡವರ ಆರೋಗ್ಯಕ್ಕಾಗಿ ಮಹತ್ವದ ಸಾಧನೆಯನ್ನು ಮಾಡಿದ ಹೆಗ್ಗಳಿಕೆ ಪಡೆದರು[೩೭]

ಇದರಲ್ಲಿ ೧೦ ಹವಾನಿಯಂತ್ರಿತ ಶಸ್ತ್ರ ಚಿಕಿತ್ಸಾ (I.C.U) ಕೊಠಡಿಗಳ ಸೌಲಭ್ಯಗಳನ್ನು ಒದಗಿಸಿದ್ದಾರೆ. ೩೦೦ ಹಾಸಿಗೆಯ ಆಸ್ಪತ್ರೆಯಲ್ಲಿ ಮಹಿಳೆಯರ ಹಾಗೂ ಮಕ್ಕಳಿಗಾಗಿ ಪ್ರತ್ಯೇಕವಾದ ವಿಭಾಗವನ್ನು ತೆರೆದು ಉಚಿತ ಚಿಕಿತ್ಸೆಯ ಅನುಕೂಲ ಕಲ್ಪಿಸಿದ್ದಾರೆ. ಈ ಆಸ್ಪತ್ರೆಯು ಉಚಿತ ಔಷಧಿಗಳನ್ನು ರೋಗಿಗಳಿಗೆ ಒದಗಿಸುತ್ತದೆ. ಆರೋಗ್ಯ ತಪಾಸಣೆ, ಶಸ್ತ್ರಚಿಕಿತ್ಸೆ, ಪ್ರಸವ ಶಾಸ್ತ್ರ, ಇ.ಎನ್.ಡಿ Peadiatrics Skin and V.D, T.B. ಮತ್ತು ಹೃದಯ ರೋಗಗಳು, ಮನೋರೋಗ ಚಿಕಿತ್ಸೆ ಇಂಥ ಅನೇಕ ರೋಗಿಗಳಿಗೆ ಉಚಿತ ಸೌಲಭ್ಯಗಳನ್ನು ಸಹ ಒದಗಿಸಿದ್ದಾರೆ. ಇವುಗಳಲ್ಲದೆ ೧೯೦ ಹವಾನಿಯಂತ್ರಿತ ಹಾಸಿಗೆಯ ಸೌಕರ್ಯಗಳನ್ನು ಒದಗಿಸಿದ್ದಾರೆ.[೩೮] ಈ ಆಸ್ಪತ್ರೆಯಲ್ಲಿ ಇಲ್ಲಿಯವರೆಗೆ ಸುಮಾರು ೯೦ ಸಾವಿರ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗಿದೆ. ಹಾಗೂ ಒಟ್ಟು ೨೬೭೯೦ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ, ಇದರಲ್ಲಿ ೧೧,೦೨೩ ಹೆರಿಗೆಗಳನ್ನು ಉಚಿತವಾಗಿ ಮಾಡಲಾಗಿದೆ. ಅವುಗಳಲ್ಲಿ ೬ ಸಾವಿರಕ್ಕೂ ಹೆಚ್ಚು ಹೆರಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ. ೨೦೦೦ಕ್ಕೂ ಹೆಚ್ಚು ನವಜಾತ ಶಿಶುಗಳಿಗೆ NICUನಲ್ಲಿ ಉಚಿತ ಚಿಕಿತ್ಸೆಯನ್ನು ನೀಡಲಾಗಿದೆ. ಇಲ್ಲಿಯವರೆಗೆ ಸುಮಾರು ೯,೧೦,೧೦೦ ಹೊರರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ನೀಡಿರುವುದು ಒಂದು ದಾಖಲೆಯೇ ಸರಿ. ಶ್ರೀ ಕೋರೆಯವರ ಪುಣ್ಯದ ಫಲವಾಗಿ ಉಚಿತ ಆರೋಗ್ಯ ಸೇವೆಯ ಅನುಕೂಲತೆಯನ್ನು ಪಡೆದು, ಸಹಸ್ರಾರು ರೋಗಿಗಳು ರೋಗಮುಕ್ತರಾಗಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯ, ದಂತ ವಿಜ್ಞಾನ ಮಹಾವಿದ್ಯಾಲಯ ಹಾಗೂ ಗೋಕಾಕ, ಜಮಖಂಡಿ, ಅಂಕೋಲಾ, ಗಡಹಿಂಗ್ಲಜಗಳಲ್ಲಿಯೂ ಸಹ ಉಚಿತ ಆರೋಗ್ಯ ಸೇವೆಗಾಗಿ ಪ್ರತಿ ವರ್ಷ ೨೫ ಲಕ್ಷ ರೂಪಾಯಿಗಳನ್ನು ಶ್ರೀ ಕೋರೆಯವರು ಕೆ.ಎಲ್.ಇ. ಉಚಿತ ಆಸ್ಪತ್ರೆಯ ಮೂಲಕ ಖರ್ಚು ಮಾಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.[೩೯]

ಶ್ರೀ ಪ್ರಭಾಕರ ಕೋರೆಯವರ ಈ ಕಾರ್ಯವನ್ನು ಮುಕ್ತವಾಗಿ ಜನ ಪ್ರಶಂಸಿಸಿದೆ. ಮನುಷ್ಯ ಹುಟ್ಟಿದಾಗೆಯೇ ಒಂದು ದಿನ ಸಾವನ್ನು ಅಪ್ಪುತ್ತಾನೆ. ಆದರೆ ಹುಟ್ಟು ಮತ್ತು ಸಾವಿನ ಮಧ್ಯ ಸಾಧಿಸಿದ ಸಾಧನೆ ಮತ್ತು ಸಮಾಜಕ್ಕಾಗಿ ಮಾಡಿದ ಕಾರ್ಯಗಳು ಶಾಶ್ವತವಾಗಿರುತ್ತದೆ. ಆ ನಿಟ್ಟಿನಲ್ಲಿ ಶ್ರೀ ಪ್ರಭಾಕರ ಕೋರೆಯವರು ಬಡ ಜನರ ಆರೋಗ್ಯಕ್ಕಾಗಿ ಮಾಡಿದ ಕಾರ್ಯ ಮಾತ್ರ ಜಗತ್ತಿನ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಿಂದ ದಾಖಲಿಸುವಂತಹದ್ದಾಗಿದೆ.[೪೦]

ಅಂತೆಯೇ ಮುಂದಿನ ತಲೆಮಾರಿನ ಜನಾಂಗಕ್ಕೂ ಮಾದರಿಯೆನಿಸಿದೆ.

ಬಡಜನತೆಗಾಗಿ ಉಚಿತ ಆಸ್ಪತ್ರೆಯನ್ನು ಅಷ್ಟೇ ಅಲ್ಲ ಅಲ್ಲಿ ಅವರಿಗಾಗಿ ಉಚಿತ ಉಟೋಪಚಾರದ ವ್ಯವಸ್ಥೆಯನ್ನೂ ಕಲ್ಪಿಸಿದ್ದಾರೆ. ಅಷ್ಟಕ್ಕೂ ತೃಪ್ತಿಯಾಗದೆ, ಆ ರೋಗಿಗಳ ಜೊತೆಗೆ ಆಸ್ಪತ್ರೆಗೆ ಬರುವ ಅವರ ಸಂಬಂಧಿಗಳಿಗೂ ಅನುಕೂಲವಾಗಲೆಂದು ಚಿಂತನೆ ಮಾಡಿದ ಕೋರೆಯವರು, ಆಸ್ಪತ್ರೆಗೆ ಹೊಂದಿಕೊಂಡಂತೆ ಸುಮಾರು ೦.೩೦ ಲಕ್ಷ ಚ.ಘೂ. ಜಾಗದಲ್ಲಿ ಧರ್ಮ ಶಾಲೆಯನ್ನು ನಿರ್ಮಾಣ ಮಾಡಿದರು.[೪೧]

ಅತೀ ಕಡಿಮೆ ದರದಲ್ಲಿ ವಾಸ್ತವ್ಯ ಅನುಕೂಲ ಕಲ್ಪಿಸಿದರು. ಆ ಮೂಲಕ ವಿಧಾಯಕ ಕಾರ್ಯವನ್ನು ಮಾಡಿ ಕೀರ್ತಿಗೆ ಪಾತ್ರರಾದರು.

ರೋಗಿಯು ಬೇಗ ಗುಣಮುಖವಾಗಲು ಅವರ ಸಂಬಂಧಿಗಳು ಜೊತೆಯಲ್ಲಿಯೇ ಇರಬೇಕು ಎನ್ನುವ ಉದ್ದೇಶ ಶ್ರೀ ಕೋರೆಯವರದ್ದು. ದುಬಾರಿ ಬೆಲೆಯ ವಸತಿ ನಿಲಯಗಳಿಂದ ದೂರದ ಬಡ ರೋಗಿಗಳ ಜೊತೆಗೆ ಬರುವ ಸಂಬಂಧಿಗಳು ಇಳಿದುಕೊಳ್ಳುವುದು ಕಷ್ಟದ ಹಾಗೂ ವೆಚ್ಚದಾಯಕವೆಂದು ತಿಳಿದು ಶ್ರೀ ಕೋರೆಯವರು ಈ ಧರ್ಮಶಾಲೆಯನ್ನು ನಿರ್ಮಿಸಿ ಲೋಕಕಲ್ಯಾಣ ಕಾರ್ಯಗೈದರು.

ಈ ಧರ್ಮಶಾಲೆಯನ್ನು ೧೫ ಅಕ್ಟೋಬರ್ ೨೦೦೪ರಂದು ಅಂದಿನ ಭಾರತದ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ ಅಬ್ದುಲ್ ಕಲಾಂರಿಂದ ಭವ್ಯ ಸಮಾರಂಭವನ್ನು ಸಂಘಟಿಸಿ ಸಮಾಜಕ್ಕೆ ಅರ್ಪಿಸಿದ ಕೀರ್ತಿ ಶ್ರೀ ಕೋರೆಯವರದ್ದಾಗಿದೆ. ಈ ಧರ್ಮಶಾಲೆಯನ್ನು ಉದ್ಘಾಟಿಸಿ ಮಾತನಾಡಿದ ಅಂದಿನ ರಾಷ್ಟ್ರಪತಿಗಳು "ಬಡವರಿಗಾಗಿ ಶ್ರೀ ಕೋರೆಯವರು ಕೆ.ಎಲ್.ಇ. ಸಂಸ್ಥೆಯ ಮೂಲಕ ಮಾಡುತ್ತಿರುವ ಕಾರ್ಯವನ್ನು ಶ್ಲಾಘಿಸಿದರು. ಈ ಕಾರ್ಯವು ಇತರ ರಾಜಕೀಯ ಹಾಗೂ ಸಾಮಾಜಿಕ ರಂಗದ ಹಲವು ಮುಖಂಡರಿಗೆ ಆದರ್ಶವಾಗಲಿಯೆಂದು ಹಾರೈಸಿದರು". ಇದೇ ಸಂದರ್ಭದಲ್ಲಿ ಅಂದಿನ ಕರ್ನಾಟಕದ ಮುಖ್ಯಮಂತ್ರಿಗಳಾದ ಎನ್. ಧರ್ಮಸಿಂಗ್‌ರವರು, ಶ್ರೀ ಕೋರೆಯವರು ಆರೋಗ್ಯ ಕ್ಷೇತ್ರದಲ್ಲಿ ಮಿನುಗುತ್ತಿರುವ ನಕ್ಷತ್ರವೆಂದು ಬಣ್ಣಿಸಿ, ಬಡ ಜನರ ಆರೋಗ್ಯದ ಬಗ್ಗೆ ವಹಿಸುತ್ತಿರುವ ಅವರ ಕಳಕಳಿ ಶ್ರೇಷ್ಠವಾದುದೆಂದು ಪ್ರಶಂಸಿಸಿದರು. ಅದು ಶ್ರೀ ಪ್ರಭಾಕರ ಕೋರೆಯವರನ್ನು ವಿಶಿಷ್ಟ ವ್ಯಕ್ತಿತ್ವದ ಮೇರು ನಾಯಕರ ಸಾಲಿನಲ್ಲಿ ನಿಲ್ಲುವಂತೆ ಮಾಡಿತು. ಇಂದು ಅನೇಕ ರಾಜಕೀಯ ನಾಯಕರು ಬರೀ ಬಡವರ ಬಗ್ಗೆ ಕೃತಕ ಕಾಳಜಿಯನ್ನು ತೋರಿಸುತ್ತಾ, ಸುಳ್ಳು ಆಶ್ವಾಸನೆಗಳ ಮಹಾಪೂರವನ್ನೇ ಹರಿಸುತ್ತಾರೆ. ಆದರೆ ಇದಕ್ಕೆ ಭಿನ್ನವಾಗಿ ಶ್ರೀ ಕೋರೆಯವರು ಬಡವರಿಗಾಗಿ ಮಾಡಿದ ಕಾರ್ಯಗಳಿಂದ ನಿಜವಾದ ಕಳಕಳಿ ಹೊಂದಿರುವ ರಾಜಕೀಯ ನಾಯಕರೆನ್ನುವುದನ್ನು ಸ್ಪಷ್ಟಪಡಿಸುತ್ತದೆ.[೪೨]

ಶ್ರೀ ಪ್ರಭಾಕರ ಕೋರೆಯವರು ಈ ಆಸ್ಪತ್ರೆಯನ್ನು ಪ್ರತಿಷ್ಠಿತ ಕೆ.ಎಲ್.ಇ. ವೈದ್ಯಕೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಸಂಶೋಧಕರಿಗೂ ಅನುಕೂಲವಾಗುವಂತೆ ಎಲ್ಲ ಸೌಲಭ್ಯಗಳು ದೊರೆಯುವಂತೆ ಮಾಡಿದ್ದಾರೆ. ಈ ಆಸ್ಪತ್ರೆಯಲ್ಲಿ ಅತ್ಯಾಧುನಿಕ ವೈದ್ಯಕೀಯ

ಉಪಕರಣಗಳಾದ ಸಿ.ಟಿ. ಸ್ಕ್ಯಾನ್, ಎಂ.ಆರ್.ಆಯ್ ೮೦೦ ಎಂ.ಎ. ಎಕ್ಸರೇ ವಿವಿಧ ತರಹದ ಎಂಡೋಸ್ಕೋಪಿ ಉಪಕರಣಗಳು ಅಲ್ಟ್ರಾಸೋನೊಗ್ರಾಫಿ ಇತ್ಯಾದಿ ಸೌಲಭ್ಯಗಳಿದ್ದು, ಇದರೊಂದಿಗೆ ಇತ್ತೀಚೆಗೆ ಟೇಲಿ ಮೆಡಿಸಿನ್ ಹಾಗೂ ಟ್ರೋಮಾಕೇರ್ ಮತ್ತು ಇ.ಎಮ್.ಎಸ್. ಸೌಕರ್ಯಗಳಲ್ಲದೆ "ಡಿಜಿಟಲ್ ಕ್ಯಾಥಲ್ಯಾಬ್" ಮೊದಲಾದ ಅನೇಕ ಉಪಯುಕ್ತ ಆಧುನಿಕ ವೈದ್ಯಕೀಯ ಸೌಕರ್ಯಗಳನ್ನು ಒದಗಿಸಿ ಆಸ್ಪತ್ರೆಯನ್ನು ವಿಶ್ವದ ಗಮನ ಸೆಳೆಯುವಂತೆ ಅಭಿವೃದ್ಧಿಪಡಿಸಿದ್ದಾರೆ.[೪೩]

ಅಲ್ಲದೆ ಹೊರರೋಗಿಗಳ ಸೇವೆಗಾಗಿ ಹುಬ್ಬಳ್ಳಿ, ಜಮಖಂಡಿ, ಗೋಕಾಕ, ಮಹಾರಾಷ್ಟ್ರದ ಗಡಹಿಂಗ್ಲಜಗಳಲ್ಲಿ ತೆರೆಯಲಾಗಿದ್ದು, ಮೂಲ ಆಸ್ಪತ್ರೆಯೊಂದಿಗೆ ದೂರ ಸಂಪರ್ಕ ಮಾಧ್ಯಮದಿಂದ ಸೇವೆ ಸಲ್ಲಿಸಲಾಗುತ್ತಿದೆ. ದೂರದ ಪಟ್ಟಣಗಳಲ್ಲಿನ ರೋಗಿಗಳು ಪ್ರತಿದಿನ ೫೦ ರಿಂದ ೧೦೦ ಜನ ಇದರ ಉಪಯೋಗವನ್ನು ಪಡೆಯುವಂತೆ ಮಾಡಿದ್ದಾರೆ.[೪೪] ಬೆಳಗಾವಿಯ ಈ ಆಸ್ಪತ್ರೆಯಲ್ಲಿ ನೇತ್ರ ಚಿಕಿತ್ಸಾ ಕುರಿತಾದ ಲೇಸರ್ ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವ ಮೂಲಕ ವಿನೂತನ ಹೆಜ್ಜೆಯನ್ನು ಇರಿಸಿದ್ದಾರೆ.[೪೫]

ದಿನದ ೨೪ ಗಂಟೆಗಳ ಕಾಲ ತುರ್ತು ಸೇವಾ ಹೈಟೆಕ್ ಹವಾನಿಯಂತ್ರಿತ ವಾಹನಗಳನ್ನು ಗ್ರಾಮೀಣ ಪ್ರದೇಶ ಹಾಗೂ ನಗರಗಳಲ್ಲಿ ಉಚಿತವಾಗಿ ಸೇವೆ ಸಲ್ಲಿಸುವಂತೆ ಮಾಡಿದ್ದಾರೆ. ಇಸ್ರೋ ಸಂಸ್ಥೆಯ ಸಹಭಾಗಿತ್ವದಲ್ಲಿ ಗ್ರಾಮೀಣ ದೂರ ಸಂಪರ್ಕ ಆಧಾರಿತ ಆರೋಗ್ಯ ಸೇವೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮೊಬೈಲ್ ಆಧಾರಿತ ವಾಹನ ಸೇವೆ ಮತ್ತು ತುರ್ತು ವೈದ್ಯಕೀಯ ಸೇವೆ ಈ ಆಸ್ಪತ್ರೆಯಲ್ಲಿ ಲಭ್ಯವಿರುವಂತೆ ಮಾಡಿದ್ದಾರೆ. ಹೈಟೆಕ್ ಅಂಬ್ಯುಲೆನ್ಸ್ ಇಸ್ರೋ ಸಹಭಾಗಿತ್ವದಲ್ಲಿ ಪ್ರಾರಂಭಿಸುವ ಮೂಲಕ ಗ್ರಾಮೀಣ ಪ್ರದೇಶದ ರೋಗಿಗಳ ಹಾಗೂ ಆಸ್ಪತ್ರೆಯಲ್ಲಿನ ದೂರಗಾಮಿಯ ಹಲವಾರು ಹೊಸ ವೈದ್ಯಕೀಯ ಸೌಕರ್ಯಗಳನ್ನು ಕಲ್ಪಿಸಿರುವುದು ಶ್ರೀ ಕೋರೆಯವರ ದೂರದೃಷ್ಟಿಯ ಫಲಶ್ರುತಿಯಾಗಿದೆ. ಇದಲ್ಲದೆ ಹೊರ ರಾಜ್ಯದ ರೋಗಿಗಳಿಗೆ ಅನುಕೂಲವಾಗುವಂತೆ ಹೆಲಿಕ್ಯಾಪ್ಟರ್ ಸೌಲಭ್ಯವನ್ನು ಒದಗಿಸಿ ದೇಶದ ಬೃಹತ್ ಆಧುನಿಕ ಸೌಲಭ್ಯಗಳನ್ನುಳ್ಳ ಆಸ್ಪತ್ರೆ ಎಂಬ ನಾಮಧೇಯ ಇದಕ್ಕೆ ಬರಲು ಶ್ರೀ ಕೋರೆಯವರು ಕಾರಣವಾಗಿದ್ದಾರೆ.[೪೬]

ಆಸ್ಪತ್ರೆಗೆ ಬೇಕಾಗುವ ಎಲ್ಲ ತರಹದ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಸುಮಾರು ೪೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒದಗಿಸುವ ಮೂಲಕ ರೋಗಿಗಳ ರೋಗವನ್ನು ಶೀಘ್ರವಾಗಿ ಪತ್ತೆ ಹಚ್ಚಲು ಹಾಗೂ ಶೀಘ್ರವಾಗಿ ಗುಣಪಡಿಸಲು ಅನುಕೂಲವನ್ನು ಕಲ್ಪಿಸಿದ್ದಾರೆ. ಶ್ರೀ ಕೋರೆಯವರು ಕೇವಲ ಶೈಕ್ಷಣಿಕ, ಸಹಕಾರ, ರಾಜಕೀಯ ಕ್ಷೇತ್ರವಷ್ಟೇ ಅಲ್ಲದೆ ವೈದ್ಯಕೀಯ ಕ್ಷೇತ್ರದ ಅನರ್ಘ್ಯ ರತ್ನವೆನಿಸಿದ್ದಾರೆ.

ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಸಂಕ್ಷಿಪ್ತ ಪರಿಚಯ ಏನಾದರೆ, ಈ ಆಸ್ಪತ್ರೆಯಲ್ಲಿ ೨೨ ವಿಶಿಷ್ಟ ವಿಭಾಗಗಳಿದ್ದು, ಅವುಗಳ ಸಂಕ್ಷಿಪ್ತ ವಿವರಣೆ ಹೀಗಿದೆ.

೧. **ಮೂತ್ರಪಿಂಡ ವಿಭಾಗ (Nephrology) :** ಸುಸಜ್ಜಿತ ಹೊರರೋಗಿ ಚಿಕಿತ್ಸಾ ಘಟಕವನ್ನು ಹೊಂದಿದ ಈ ವಿಭಾಗದಲ್ಲಿ, ಆಧುನಿಕ ಹಿಮೋ ಡಯಾಲಿಸಿಸ್ ಸೌಲಭ್ಯವಿದೆ. ಸಧ್ಯಕ್ಕೆ ಎಂಟು ಡೈಯಲಾಯಜರ್ ಇದ್ದು ಇನ್ನೂ

ಹೆಚ್ಚಿನ ವಿಸ್ತರಣೆಯೊಂದಿಗೆ ಮೂತ್ರಕೋಶ ವಿಭಾಗದ ಸಹಕಾರದೊಂದಿಗೆ ಈ ವಿಭಾಗದಲ್ಲಿ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಕೂಡಾ ಮಾಡಲಾಗುತ್ತದೆ. ಕಿಡ್ನಿ ಟಾನ್ಸ್‌ಪ್ಲಾಂಟ್ ನಂತರ ಚಿಕಿತ್ಸೆಗೆ ಅವಶ್ಯವಿರುವ ಎಲ್ಲ ಸೌಲಭ್ಯಗಳನ್ನು ಈ ವಿಭಾಗವು ಹೊಂದಿದ್ದು. ಇಲ್ಲಿ ಡಾ. ಮಲ್ಲಿಕಾರ್ಜುನ ಬಾಗಾಪೇಟ್‌ರಂತಹ ನುರಿತ ವೈದ್ಯರನ್ನು ನಿಯೋಜಿಸಿದ್ದಾರೆ. ಇದುವರೆಗೆ ಅನೇಕ ರೋಗಿಗಳು ಇದರ ಸದುಪಯೋಗ ಪಡೆದಿದ್ದಾರೆ.[೪೭]

೨. ಮೂತ್ರಕೋಶ (Urology) : ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ಕಿಡ್ನಿ ಪ್ರತಿಷ್ಠಾನ ತನ್ನದೇ ಆದ ಸ್ವತಂತ್ರ ಆಸ್ಪತ್ರೆ ಹೊಂದಿದ ವಿಭಾಗವಾಗಿದ್ದು, ಸುಸಜ್ಜಿತ ಹೋರರೋಗಿ ಚಿಕಿತ್ಸಾ ಘಟಕವನ್ನೊಳಗೊಂಡಿದೆ. ಇಲ್ಲಿ ಈ ರೋಗದ ಸಮಗ್ರ ಪರಿಶೀಲನೆ ಮತ್ತು ಚಿಕಿತ್ಸೆಗಳನ್ನು ಪೂರೈಸಲು ಎಲ್ಲ ಸೌಲಭ್ಯಗಳಿವೆ. ಹೋರರೋಗಿ ವಿಭಾಗದಲ್ಲಿ ಯುರೇಡೈನಾಮಿಕ್ಸ ಪ್ರಯೋಗವಿದ್ದು, ವಿವಿಧ ತರಹದ ಎಂಡೋಸ್ಕೋಪಿ ಸೌಲಭ್ಯಗಳು ಲಭಿಸಿವೆ. TURP (ಟ್ರಪ್), P.C.N.L. (ಪಿ.ಸಿ.ಎನ್.ಎಲ್) ಮುಂತಾದ ರೋಗ ಚಿಕಿತ್ಸೆಗಳನ್ನು ದಿನನಿತ್ಯ ತಪಾಸನೆ ಮಾಡಲಾಗುತ್ತಿದೆ. ಬಡ ಹಾಗೂ ಗ್ರಾಮೀಣ ಪ್ರದೇಶದ ರೋಗಿಗಳಿಗೆ ಅನುಕೂಲ ಕಲ್ಪಿಸಲು ಈ ವಿಭಾಗದಲ್ಲಿ ಸಂಚಾರಿ ಲಿಟ್ರೋ ಟ್ರಿಪ್ಸ್ ಮುಖಾಂತರ ರೋಗಿಗಳು ಇರುವ ಸ್ಥಳಕ್ಕೆ ಹೋಗಿ ಮೂತ್ರ ಹರಳುಗಳ ಚಿಕಿತ್ಸೆ ನೀಡುವ ವ್ಯವಸ್ಥೆ ಇದೆ. ಇ.ಎಸ್.ಡಬ್ಲ್ಯೂ.ಎಲ್.ದಂತಹ ಉಪಕರಣಗಳನ್ನು ಒಳಗೊಂಡ ಆಸ್ಪತ್ರೆಯು ಇಲ್ಲಿಯವರೆಗೆ ಸುಮಾರು ೧.೨೦೦ರಷ್ಟು ಶಸ್ತ್ರ ಚಿಕಿತ್ಸೆಯನ್ನು ಕೈಗೊಂಡು ಈ ಆಸ್ಪತ್ರೆಯು ಜನರ ವಿಶ್ವಾಸಕ್ಕೆ ಪಾತ್ರರಾವಾಗಿದೆ. ಈ ವಿಭಾಗದಲ್ಲಿ ಡಾ. ಸಿದ್ಧೇಶ್ವರ ನೂಲಿ ಮೊದಲಾದ ತಜ್ಞ ವೈದ್ಯರನ್ನು ನೇಮಿಸಿ, ಕರ್ನಾಟಕ ರಾಜ್ಯದ ಕಿಡ್ನಿ ಆಸ್ಪತ್ರೆಗಳಲ್ಲಿಯೇ ಮಹತ್ವದ ಇದು ಸಾಧನೆಯತ್ತ ಮುನ್ನುಗ್ಗುವಂತೆ ಮಾಡಲು ಹಲವಾರು ಅನುಕೂಲತೆಯನ್ನು ಕಲ್ಪಿಸಿದ್ದಾರೆ.[೪೮] ಈ ವಿಭಾಗವನ್ನು ಅತ್ಯಂತ ಆಧುನಿಕ ಹವಾನಿಯಂತ್ರಿತ ಕಿಡ್ನಿ ಡಯಾಲಾಸಿಸ್ ವಿಭಾಗವನ್ನಾಗಿ ಮಾರ್ಪಡಿಸಿ (KINDNEY DIALYSICS UNIT) ರೋಗಿಗಳಿಗೆ ಶೀಘ್ರವಾಗಿ ಗುಣಮುಖವಾಗುವ ಎಲ್ಲ ಸೌಲಭ್ಯಗಳನ್ನು ಒದಗಿಸುವ ಮೂಲಕ ಕಡಿಮೆ ವೆಚ್ಚದಲ್ಲಿ ಮೂತ್ರಕೋಶ ಶಸ್ತ್ರ ಚಿಕಿತ್ಸೆಯನ್ನು ಮಾಡುವ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಈ ಭಾಗದ ಮೂತ್ರಕೋಶಕ್ಕೆ ಸಂಬಂಧಿಸಿದ ರೋಗಿಗಳಿಗೆ ಈ ಆಸ್ಪತ್ರೆಯು "ವರ"ವಾಗಿ ಪರಿಣಮಿಸಿದೆ.

೩. ಹೃದಯರೋಗ ವಿಭಾಗ (ಹಾರ್ಟ್ ಫೌಂಡೇಶನ್) : ಕೆ.ಎಲ್.ಇ. ಸಂಸ್ಥೆಯ ಪ್ರಭಾಕರ ಕೋರೆ ಆಸ್ಪತ್ರೆಯಲ್ಲಿರುವ ಅತಿ ವಿಶಿಷ್ಟ ವಿಭಾಗ ಇದಾಗಿದ್ದು, ಇಲ್ಲಿಯವರೆಗೆ ಸುಮಾರು ೯,೫೦೦ಕ್ಕಿಂತ ಹೆಚ್ಚು ತೆರೆದ ಹಾಗೂ ಮುಚ್ಚಿದ ಹೃದಯ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ಹೃದಯಕ್ಕೆ ಸಂಬಂಧಿಸಿದಂತೆ ಇತರ ಶಸ್ತ್ರ ಚಿಕಿತ್ಸೆಗಳು ದಿನನಿತ್ಯ ನಡೆಯುತ್ತಿದ್ದು, ರೋಗಿಗಳು ಇದರ ಪ್ರಯೋಜನ ಪಡೆದುಕೊಳ್ಳಬಹುದು. ಈ ಎಲ್ಲ ಚಿಕಿತ್ಸೆಗಳ ಯಶಸ್ಸಿನ ಅನುಪಾತ ಈ ಜಗತ್ತಿನಲ್ಲಿ ಯಾವುದೇ ಪ್ರಖ್ಯಾತ ಚಿಕಿತ್ಸಾಲಯಗಳಲ್ಲಿನ ಅನುಪಾತಕ್ಕೆ ಸರಿದೂಗಿಸುವುದಾಗಿದೆ. ಆರ್ಥಿಕವಾಗಿ ದುರ್ಬಲವಾಗಿರುವಂಥ ಹೃದಯ ರೋಗಿಗಳಿಗೆ ಒಂದು ವಿಶೇಷ ಯೋಜನೆಯನ್ನು ಸಿದ್ಧಪಡಿಸಿದ್ದು. ಇದರ ಲಾಭವನ್ನು ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯದ ರೋಗಿಗಳು ಪಡೆದುಕೊಳ್ಳುತ್ತಿದ್ದಾರೆ. ಇಂಥ ಕ್ಲಿಷ್ಟಕರವಾದ ಹೃದಯ

ಸಂಬಂಧಿ ಸಮಸ್ಯೆಗಳಿಗೆ ಸರಿಯಾದ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುವಂತಹ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದುವಂತೆ ಮಾಡಿದ್ದಾರೆ. ಅವುಗಳಿಗೆ ಬೇಕಾಗುವ ಅತ್ಯಾಧುನಿಕ ಉಪಕರಣಗಗಳಿವೆ. ಬಿರ್ಲಾ ಹಾರ್ಟ್ ಸೆಂಟರ್ ಕಲ್ಕತ್ತಾ ಮತ್ತು ಮದ್ರಾಸ್ ಮೆಡಿಕಲ್ ಮಿಷನ್‌ಗಳಂತಹ ಪ್ರಖ್ಯಾತ ಕೇಂದ್ರಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯನ್ನು ಮತ್ತು ನುರಿತ ತಜ್ಞ ವೈದ್ಯರನ್ನು ನಿಯೋಜಿಸಲಾಗಿದೆ. ಹೀಗೆ ಈ ಘಟಕವು ಯಶಸ್ವಿಯಾಗಿ ಜನರ ವಿಶ್ವಾಸವನ್ನು ಹಾಗೂ ನಂಬಿಕೆಯನ್ನು ಪಡೆಯುವಂತೆ ಮಾಡಿದ್ದಾರೆ. ಈ ಕಾರಣಕ್ಕಾಗಿಯೇ ಕರ್ನಾಟಕ, ಗೋವಾ, ಮಹಾರಾಷ್ಟ್ರ ಸರಕಾರವು ಅಧಿಕೃತವಾಗಿ ಮನ್ನಿಸಿ, ಸಣ್ಣ ನೌಕರ ವರ್ಗದವರು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅನುಕೂಲ ಮಾಡಿಕೊಟ್ಟಿವೆ. ಅದೇ ರೀತಿಯಾಗಿ ವಿವಿಧ ಉದ್ದಿಮೆಗಳಾದ SESA, MPTL, INDAL, WEST-COAST. PAPER MILL ಗಳು ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಂಡಿವೆ.[೪೯]

ಈ ಭಾಗದಲ್ಲಿ ಅಷ್ಟೇ ಅಲ್ಲದೆ, ನೆರೆಯ ರಾಜ್ಯ ಹಾಗೂ ಕಂಪನಿಗಳಿಗೂ ಹೃದಯದ ಆರೋಗ್ಯ ಭಾಗ್ಯ ಕಲ್ಪಿಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ. ಈ ವಿಭಾಗದಿಂದ ಪ್ರತಿ ವರ್ಷ ಸರಾಸರಿ ೧.೫೦೦ರಷ್ಟು ಹೃದಯ ಶಸ್ತ್ರ ಚಿಕಿತ್ಸೆಯ ಕಾರ್ಯವನ್ನು ಕೈಗೊಳ್ಳುತ್ತಿದೆ. ಇಂದು ಈ ಕೇಂದ್ರವು ರಾಷ್ಟ್ರದ ಐದು ಪ್ರಮುಖ ಕೇಂದ್ರಗಳಲ್ಲಿ ಒಂದು ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ನವಜಾತ ಶಿಶುವಿನಿಂದ ಹಿಡಿದು, ಹಿರಿಯ ವಯಸ್ಸಿನವರಿಗೆ ಚಿಕಿತ್ಸೆ ನೀಡುತ್ತಿದೆ. ೨೦೦೯ರಲ್ಲಿ ೭೫೦೦ ಕ್ಕಿಂತಲೂ ಹೆಚ್ಚು ರೋಗಿಗಳನ್ನು ಹೊರ ರೋಗಿಗಳಾಗಿ ಪರೀಕ್ಷಿಸಲಾಗಿದೆ. ಇವರು ನೆರೆಯ ರಾಜ್ಯಗಳಿಂದ ಬಂದವರು. ಅಲ್ಲದೆ ಅನೇಕರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಈ ಫೌಂಡೇಶನ್ ೪೨೧೫ ಕ್ಯಾಥ್‌ಲಾಬ್ ಪ್ರೊಸಿಜರ್ಸ್ ೨೮೫೬ ಆಂಜ್ಯೋ ಗ್ರಾಫಿಕ್ಸ್ ಮತ್ತು ೭೪೬ ಆಂಜ್ಯೋ ಪ್ಲ್ಯಾಸ್ಟಿಸ್ ಕಾರ್ಯಗತಗೊಳಿಸಿದ್ದಾರೆ. ಕಾರ್ಡರಿ ಹಾಬ್ ಕೇಂದ್ರವು ಪ್ರಾರಂಭಗೊಂಡಿದ್ದು, ಇಲ್ಲಿ ಶ್ರೀ ಕೋರೆಯವರು ನುರಿತ ಹೃದಯ ಶಸ್ತ್ರ ಚಿಕಿತ್ಸಾ ವೈದ್ಯರನ್ನು ನಿಯೋಜಿಸಿದ್ದಾರೆ. ಅವರಲ್ಲಿ ಡಾ. ಎಂ. ಪಿ. ದೀಕ್ಷಿತ್ ಅವರು ಪ್ರಮುಖರಾಗಿದ್ದಾರೆ. ಜನಸಮುದಾಯದ ಸೇವೆಮಾಡಲು ಈ ಫೌಂಡೇಶನ್‌ದಿಂದ ೩೩ ಶಿಬಿರಗಳನ್ನು ನಡೆಸಿ, ೪೦೦೦ಕ್ಕಿಂತಲೂ ಹೆಚ್ಚು ಹೃದಯ ರೋಗಿಗಳ ಪರಿಕ್ಷೆಯನ್ನು ಮಾಡುವ ಅನುಕೂಲತೆಯನ್ನು ಒದಗಿಸುವ ಮೂಲಕ ಶ್ರೀ ಕೋರೆಯವರು ಜನರ ಹೃದಯಕ್ಕೆ ಮತ್ತಷ್ಟು ಹತ್ತಿರವಾಗಿದ್ದಾರೆ.

೪. ನರರೋಗ ವಿಭಾಗ : ಕೆ.ಎಲ್.ಇ. ಸಂಸ್ಥೆಯ ಪ್ರಭಾಕರ ಕೋರೆ ಆಸ್ಪತ್ರೆಯು ತನ್ನದೇ ಆದ ಸ್ವತಂತ್ರ ಹೊರ ರೋಗಿ ಚಿಕಿತ್ಸಾ ವಿಭಾಗವನ್ನು ಹೊಂದಿದೆ. ಇಲ್ಲಿ ಈ ಚಿಕಿತ್ಸಾ ವಿಧಾನಕ್ಕೆ ಅವಶ್ಯವಿರುವ ಆಧುನಿಕ ಯಂತ್ರೋಪಕರಣಗಳಾದ ಪಾಯ್ ಎಂಡ್ ಸಿಟಿ ಸ್ಕ್ಯಾನ್ M.R.I. ಇ.ಇ.ಜಿ. ಕೆರಾರ್ಡರ್‌ಗಳ ಸೌಲಭ್ಯವುಂಟು. ಈ ಕಾರಣಕ್ಕಾಗಿ ಸೇವಾ ಸೌಲಭ್ಯದ ಜೊತೆಗೆ ಚಿಕಿತ್ಸೆಯನ್ನು ನಿರ್ವಹಿಸಲು ICU ಘಟಕದ ಅನುಕೂಲ ಕಲ್ಪಿಸಲಾಗಿದೆ. ಇಲ್ಲಿ ಇ. ಕೆ. ರವಿಶಂಕರ ಮತ್ತಿತರ ತಜ್ಞ ವೈದ್ಯರ ತಂಡ ಕಾರ್ಯ ನಿರ್ವಹಿಸುತ್ತಿದೆ.

೫. ಕ್ಲಿನಿಕಲ್ ಇಮ್ಯುನಾಲಾಜಿ ಮತ್ತು ರ್‍ಯೂಮ್ಯಾಟೋಲಾಜಿ ವಿಭಾಗ : ವಿಶೇಷ ಮತ್ತು ನೂತನ ಸೇವಾ ಸೌಲಭ್ಯಗಳನ್ನು

ಒದಗಿಸುವ ಗುರಿ ಹೊಂದಿದ ಪ್ರಭಾಕರ ಕೋರೆಯವರು, ಈ ನೂತನ ವಿಭಾಗವನ್ನು ಆರಂಭಿಸುವ ಮೂಲಕ ಸಂಧಿವಾತ ಆಯ್.ಟಿ.ಪಿ. ಮತ್ತು ಏಡ್ಸ್ ಮುಂತಾದ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಸೌಲಭ್ಯವನ್ನು ರೋಗಿಗಳಿಗೆ ಒದಗಿಸಿದ್ದಾರೆ.[೫೦] ಈ ವಿಭಾಗದಲ್ಲಿ ಆಧುನಿಕ ಇಮಾನೊಲೋಜಿ ಪ್ರಯೋಗಾಲಯವನ್ನು ಸಹ ಸ್ಥಾಪಿಸಿ, ತಜ್ಞ ವೈದ್ಯರನ್ನು ನೇಮಿಸಿ ರೋಗಿಗಳ ಆರೋಗ್ಯ ಸೇವೆಗೆ ಸಿದ್ಧಗೊಳಿಸಿದ್ದಾರೆ.

೭. ಇರೊಸರ್ಜರಿ ವಿಭಾಗ : ಈ ವಿಭಾಗವು ಸ್ವತಂತ್ರ ವಿಭಾಗವಾಗಿದ್ದು, ಆಧುನಿಕ ವೈದ್ಯಕೀಯ ಉಪಕರಣಗಳಾದ ಮೈಕ್ರೋ ಇರೊ ಸರ್ಜರಿಯಂತಹ ಸೂಕ್ಷ್ಮ ಸಾಮಗ್ರಿಗಳನ್ನು ಅಳವಡಿಸಲಾಗಿದೆ. ಇರೊ ಸರ್ಜರಿ ಸೂಕ್ಷ್ಮ ಚಿಕಿತ್ಸೆ ನಡೆಯುವಂತೆ ಮಾಡಿದ್ದಾರೆ. ರೋಗಿಗಳ ಹಿತದೃಷ್ಟಿಯಿಂದ ಹಾಗೂ ವೈದ್ಯರ ಸಮಯವನ್ನು ಉಳಿಸುವ ದೃಷ್ಟಿಯಿಂದ ಆಧುನಿಕ "CUSA"ಎಂಬ ಯಂತ್ರವನ್ನು ಅಳವಡಿಸುವ ಯೋಜನೆ ಇದೆ.

೮. ಲ್ಯಾಪ್ರೊಸ್ಕೊಪಿಕ್ ಸರ್ಜರಿ : ಈ ವಿಭಾಗವು ಜನರಲ್ ಸರ್ಜರಿ ವಿಭಾಗದ ಜೊತೆ ಜೊತೆಯಲ್ಲಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಇಲ್ಲಿ ವಿಡಿಯೋ ಲ್ಯಾಪ್ರೊಸ್ಕೊಪಿಕ್‌ನಂತಹ ಆಧುನಿಕ ಉಪಕರಣಗಳ ಮೂಲಕ ವಿವಿಧ ಬಗೆಯ ಖಾಯಿಲೆಗಳಿಗೆ ಚಿಕಿತ್ಸೆ ನೀಡುವ ಅನುಕೂಲತೆಯನ್ನು ಕೋರೆಯವರು ಮಾಡಿಕೊಟ್ಟಿದ್ದಾರೆ.

೯. ಜಾಯಿಂಟ್ ರಿಪ್ಲೇಸ್‌ಮೆಂಟ್ ಅರ್ಥೋಸ್ಕೊಪಿ ವಿಭಾಗ : ಸುಪರ್ ಸ್ಪೆಶಾಲಿಸ್ಟ್ ಸೌಲಭ್ಯಗಳನ್ನು ಹೊಂದಿದ ಆಸ್ಪತ್ರೆಯಲ್ಲಿನ ಈ ವಿಭಾಗವು ಆಸ್ಪತ್ರೆಗೆ ಕಿರೀಟಪ್ರಾಯವಾಗಿದೆ. ಎಲುಬು, ಕೀಲುಗಳ ತೊಂದರೆ ಮತ್ತು ಸಂಧಿವಾತದಿಂದ ಬಳಲುವವರಿಗೆ ಉಪಯುಕ್ತವಾದ ಹಾಗೂ ಕೃತ್ರಿಮ ಕೀಲುಗಳಿಂದ ಸರಿಪಡಿಸುವ ಚಿಕಿತ್ಸೆ ಮಾಡುವ ಸೌಲಭ್ಯ ಇದು ಹೊಂದಿದೆ. ಇಂಗ್ಲೆಂಡ್‌ದಿಂದ ತರಬೇತಿಪಡೆದ ವೈದ್ಯರಾದ ಡಾ. ರಾಜೇಂದ್ರ ಭಂಡಾರಕರವರನ್ನು ಇಲ್ಲಿ ನಿಯೋಜಿಸಿದ್ದಾರೆ ಹಾಗೂ ಸಾಮಾನ್ಯರಿಗೂ ಎಟುಕುವ ದರದಲ್ಲಿ ಸೌಲಭ್ಯ ಪಡೆಯುವ ಅನುಕೂಲ ಕಲ್ಪಿಸಿದ್ದಾರೆ.

೧೦. ನಿಯೋ ಸೆಟೋಲಜಿ (ನವಜಾತ ಶಿಶುಗಳ ವಿಭಾಗ) : ಈ ವಿಭಾಗವು ಸುಪರ್ ಸ್ಪೇಶಾಲಿಟಿ ಸೌಲಭ್ಯಗಳನ್ನು ಒದಗಿಸಿ, ಉತ್ತಮ ಸೇವೆಗಾಗಿ ವಿವಿಧ ಮಾನಿಟರ್, ಜೀವ ರಕ್ಷಣೆ ಉಪಕರಣ ಸಾಮಗ್ರಿಗಳನ್ನು ಒಳಗೊಳ್ಳುವ ಮೂಲಕ, ನವಜಾತ ಶಿಶುವಿನ ಆರೋಗ್ಯ ಸೇವೆಗಳನ್ನು ನೀಡಿ, ಜನರ ವಿಶ್ವಾಸಗಳಿಸಿದೆ.[೫೧]

೧೧. ಪಿಡಿಯಾಟ್ರಿಕ್ ಸರ್ಜರಿ ವಿಭಾಗ : ಜನ್ಮತಃ ಚಿಕ್ಕ ಮಕ್ಕಳಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸುವ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಈ ಸುಪರ್ ಸ್ಪೇಶಾಲಿಸ್ಟ್ ವಿಭಾಗವನ್ನು ಆರಂಭಿಸಲಾಗಿದೆ. ಇಲ್ಲಿ ICU ಹೈಟೆಕ್ ಆಪರೇಷನ್ ಥೇಟರ್‌ಗಳು ಉಚ್ಚ ಗುಣಮಟ್ಟದ ಚಿಕಿತ್ಸೆಯನ್ನು ನೀಡಲು ಅನುಕೂಲ ಕಲ್ಪಿಸಲಾಗಿದೆ. ಚಿಕ್ಕ ಮಕ್ಕಳಲ್ಲಿ ಕಂಡುಬರುವ ಕ್ಯಾನ್ಸರ್ ಮುಂತಾದ ಸಮಸ್ಯೆಗಳನ್ನು ಯಶಸ್ವಿಯಾಗಿ ಗುಣಪಡಿಸುವ ಕಾರ್ಯ ಈ ವಿಭಾಗದ ಮೂಲಕ ಮಾಡಲಾಗುತ್ತದೆ.

೧೨. ಪ್ಲಾಸ್ಟಿಕ್ ಹಾಗೂ ಕನ್‌ಸಕ್ಷನ್ ವಿಭಾಗ : ಈ ವಿಭಾಗವು ಇತರ ವಿಭಾಗದ ಜೊತೆಗೆ ಸುಟ್ಟಗಾಯ ಚಿಕಿತ್ಸಾ ಘಟಕವಾಗಿದ್ದು, ಟ್ರಾಮಾ ಮತ್ತು ಪ್ಲಾಸ್ಟಿಕ್ ಸರ್ಜರಿ ಮಾಡುವ ಮೂಲಕ ಎಲ್ಲ ವ್ಯವಸ್ಥೆಗಳನ್ನು ಇದು ಒಳಗೊಂಡಿದೆ.

ಅಮೇರಿಕೆಯ SMILTRAIN ಎಂಬ ಸರಕಾರೇತರ ಸಂಸ್ಥೆಯು ಈ ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಇದರಡಿ ಇಲ್ಲಿಯವರೆಗೆ ಸುಮಾರು ೩,೮೦೦ಕ್ಕೂ ಹೆಚ್ಚು ಯಶಸ್ವೀ ಇರೋಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡುವ ಮೂಲಕ ಕೆ.ಎಲ್.ಇ. ಸ್ಮೈಲ್‌ಟ್ರೇನ್ ತಂಡವು ತನ್ನ ಕಾರ್ಯವನ್ನು ಜನರು ಮೆಚ್ಚುವಂತೆ ಮಾಡಿದೆ.

೧೩. ಮಧುಮೇಹ ಕೇಂದ್ರ ವಿಭಾಗ : ಸಕ್ಕರೆ ಕಾಯಿಲೆಯಿಂದ ಬಳಲುವ ರೋಗಿಗಳ ಆರೈಕೆಯ ಉದ್ದೇಶವನ್ನು ಇಟ್ಟುಕೊಂಡು ೨೦೦೧ರಲ್ಲಿ ಸ್ಥಾಪಿಸಲಾದ ಈ ಕೇಂದ್ರವನ್ನು ಆಗಿನ ಕರ್ನಾಟಕ ಸರ್ಕಾರದ ರಾಜ್ಯಪಾಲರಾಗಿದ್ದ ಶ್ರೀಮತಿ ರಮಾದೇವಿಯವರು ಉದ್ಘಾಟಿಸಿದರು. ಇಲ್ಲಿ ಬರುವ ಬಡ ರೋಗಿಗಳಿಗೆ ಇನ್ಸುಲಿನ್ ಪೂರೈಸುವ ಪ್ರವಿಧಾನವನ್ನು ಈ ಕೇಂದ್ರವು ಹೊಂದಿದೆ ಹಾಗೂ ಈ ರೋಗದ ತಿಳುವಳಿಕೆಗಾಗಿ ಅನೇಕ ಮ್ಯಾಗಝಿನ್‌ಗಳನ್ನು ಹೊರಡಿಸಲಾಗುತ್ತಿದೆ. ಈ ಕೇಂದ್ರದ ಮುಖ್ಯಸ್ಥರಾಗಿರುವ ಡಾ. ಎಂ. ವಿ. ಜಾಲಿಯವರ ಆದರ್ಶ ಹಾಗೂ ಪ್ರಾಮಾಣಿಕ ಸೇವೆಯ ಫಲವಾಗಿ ಈ ಕೇಂದ್ರವು ಇಂದು ಸಹಸ್ರಾರು ಜನರಿಗೆ ಆರೋಗ್ಯ ಭಾಗ್ಯವನ್ನು ಕಲ್ಪಿಸುವಲ್ಲಿ ಯಶಸ್ವಿಯಾಗಿದೆ. ಈ ವಿಭಾಗವು ಸಕ್ಕರೆ ಕಾಯಿಲೆಯನ್ನು ಗುಣಪಡಿಸುವುದಲ್ಲದೆ, ಅದರ ಬಗ್ಗೆ ತಿಳುವಳಿಕೆಯನ್ನು ಮೂಡಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಿದೆ.[೫೨]

೧೪. ಮಧುಮೇಹಿಗಳ ನೆರವಿಗೆಂದು ಫಂಡ್ಸ್‌ಕ್ಲಬ್ : ಫಂಡ್ಸ್‌ಕ್ಲಬ್ ಸ್ಥಾಪಿಸುವ ಮೂಲಕ ಮಧುಮೇಹಿ ರೋಗಿಗಳು ಹಾಗೂ ಅವರ ಸಂಬಂಧಿಕರು ಈ ಕ್ಲಬ್‌ನ ಸದಸ್ಯತ್ವವನ್ನು ಪಡೆಯಬಹುದು. ಆ ಮೂಲಕ ರೋಗದ ಲಕ್ಷಣ ಹಾಗೂ ಅದನ್ನು ಗುಣಪಡಿಸುವ ವಿಧಾನ ಮುಂತಾದ ಸಂಗತಿಗಳನ್ನು ಡಾ. ಎಂ. ವಿ. ಜಾಲಿಯವರ ದೂರದರ್ಶಿತ್ವ ಮತ್ತು ದಕ್ಷ ಮುಂದಾಳತ್ವದ ಫಲದಿಂದ ಈ ರೋಗವನ್ನು ಗುಣಪಡಿಸುವಲ್ಲಿ ಹೊಸ ಆವಿಷ್ಕಾರಗೊಳಿಸುವತ್ತ ಅಳವಡಿಸುವತ್ತ ಶ್ರೀ ಕೋರೆಯವರು ಆಸಕ್ತಿ ವಹಿಸಿದ್ದಾರೆ.

೧೫. ಬಂಜೆತನ ನಿವಾರಣಾ ಕೇಂದ್ರ : ಕೆ.ಎಲ್.ಇ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಇದು ಹೆಮ್ಮೆ ಪಡುವಂತಹ ವಿಭಾಗವಾಗಿದ್ದು, ಇಲ್ಲಿ ದಂಪತಿಗಳಿಗೆ ಸಂತಾನ ಅಭಿವೃದ್ಧಿಗೆ ಅವಶ್ಯವಿರುವ ಎಲ್ಲ ತರಹದ ಆಧುನಿಕ ಪದ್ಧತಿಯ ಅನುಕೂಲವನ್ನು ಮಾಡಿಕೊಡಲಾಗಿದೆ. ಸಂತತಿ ಪಡೆಯುವ ಇಚ್ಛೆಯುಳ್ಳವರಿಗೆ IUI, IUF, ICFI ಮುಂತಾದ ಸೌಲಭ್ಯಗಳ ಜೊತೆಗೆ ಸರಳ ಸುಲಭ ರೀತಿಯ ತಿಳುವಳಿಕೆಯನ್ನು ನೀಡುವ ಮೂಲಕ ದಂಪತಿಗಳ ಸಂತಾನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಮಹತ್ವದ ಕಾರ್ಯವನ್ನು ಮಾಡುತ್ತಿದೆ.

೧೬. ಪೋರಿಸೋಟಲ್ ಕೇಂದ್ರ : ೨೨-೪-೨೦೦೦ರಂದು ಪ್ರಾರಂಭಗೊಂಡ ಈ ವಿಭಾಗದಲ್ಲಿ ವಿವಿಧ ಘಟಕಗಳಾದ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗ ಪ್ರಿವೆಂಟಿವ್ ಮತ್ತು ಸೋಶಿಯಲ್ ಎಡಿಸನ್ ಪೆಟ್ರಿಯಾಟ್ರಿಕ್ಸ್‌ಗಳಿವೆ. ಸರಕಾರಿ ಹಾಗೂ ಸರಕಾರೇತರ ಸಂಘಗಳೊಂದಿಗೆ ಪ್ರಸವ ನಂತರ ಉಂಟಾಗುವ ತಾಯಿಯ ಮತ್ತು ಮಕ್ಕಳ ಮರಣದಲ್ಲಿನ ಪ್ರಮಾಣವನ್ನು ಕಡಿಮೆಗೊಳಿಸುವುದು. ಗಂಡಾಂತರ ಉಂಟಾಗುವ ಸಂಭವನೀಯ ತಾಯಂದಿರನ್ನು ಗುರುತಿಸುವುದು.

ಗರ್ಭವತಿಯರಿಗೆ ತತ್ಕಾಲದಲ್ಲಿ NICU ಇವರ ಸಹಕಾರದಿಂದ ಆಂಬುಲೆನ್ಸ್ ವಾಹನ ಒದಗಿಸುವುದು. ಈ ತರಹದ ಸೇವೆಯಿಂದ ಅನೇಕ ಸ್ತ್ರೀಯರ ಹಾಗೂ ಮಕ್ಕಳ ಮರಣ ಪ್ರಮಾಣವನ್ನು ಕಡಿಮೆಗೊಳಿಸಿದ ಶ್ರೇಯಸ್ಸು ಈ ವಿಭಾಗದ್ದಾಗಿದೆ.

೧೭. ಚೈಲ್ಡ್ ಡೆವಲಪ್‌ಮೆಂಟ್ ಕ್ಲಿನಿಕ್ : ಈ ವಿಭಾಗದಲ್ಲಿ ಮಾನಸಿಕ ಮತ್ತು ದೈಹಿಕ ದುರ್ಬಲತೆಯಿಂದ ಬಳಲುವ ಚಿಕ್ಕ ಮಕ್ಕಳ ಆರೈಕೆ ಮಾಡಲಾಗುತ್ತದೆ. ಚಿಕ್ಕ ಮಕ್ಕಳ ತಜ್ಞರು, ಮನೋವಿಶ್ಲೇಷಣಾ ತಜ್ಞರು, ಮನೋ ಚಿಕಿತ್ಸಾ ತಜ್ಞರು ಇತರ ತಜ್ಞರ ಸೇವೆಯನ್ನು ಪೂರೈಸುವ ಈ ವಿಭಾಗದ ಮೂಲಕ ಇಲ್ಲಿಯವರೆಗೆ ೨೫೦೦ರಷ್ಟು ಮಕ್ಕಳ ಆರೈಕೆ ಮಾಡಲಾಗಿದೆ. ಈ ವಿಭಾಗದಿಂದ ಉತ್ತರ ಕರ್ನಾಟಕದ ಬಡ ಜನರು ಸಾಕಷ್ಟು ಅನುಕೂಲವನ್ನು ಪಡೆಯುತ್ತಿದ್ದಾರೆ.[೫೩]

೧೮. ಫಿಜಿಯೋಥೆರಪಿ ವಿಭಾಗ : ಈ ವಿಭಾಗದಲ್ಲಿ ಅತ್ಯಂತ ನುರಿತ ವೈದ್ಯರನ್ನು ನೇಮಿಸಿ ಆಧುನಿಕ ಯಂತ್ರ ಸಾಮಗ್ರಿಗಳ ಸೌಲಭ್ಯಗಳನ್ನು ಒದಗಿಸಲಾಗಿದೆ. ಉಪಚಾರದ ಜೊತೆಗೆ ಲೇಜರ್ ಅರೈಕೆ ಹಾಗೂ ಈ ಆರೈಕೆಗಳಿಗೆ ಪೂರಕವಾಗುವಂತಹ ನೂತನ ಶೈಲಿಯ ಜಿಮ್ನೆಶಿಯಮ್ ಕೂಡಾ ಹೊಂದುವಂತೆ ಮಾಡಿದ್ದಾರೆ. ಈ ವಿಭಾಗದ ಸಹಕಾರದೊಂದಿಗೆ ಕೃತ್ರಿಮ ಅಂಗಾಗ ಕೇಂದ್ರ, ಜೈಪುರ ಕೃತಕ ಅಂಗಾಗಳ ಹಾಗೂ ಇತರ ಕೃತಕ ಕೀಲುಗಳ ನಿರ್ಮಾಣ ಮಾಡಲಾಗುತ್ತದೆ. ಹೀಗೆ ರೋಗಿಗಳಿಗೆ ಆಧುನಿಕ ಸೌಲಭ್ಯ ಒದಗಿಸುವ ಮೂಲಕ ದೂರದ ಊರುಗಳಿಗೆ ಹೋಗಿ ವೈದ್ಯಕೀಯ ಉಪಚಾರ ಮಾಡಿಕೊಳ್ಳುವ ರೋಗಿಗಳಿಗೆ ಆಗುತ್ತಿರುವ ತೊಂದರೆಯನ್ನು ಶ್ರೀ ಕೋರೆಯವರು ತಪ್ಪಿಸಿದ್ದಾರೆ.

ಈ ಆಸ್ಪತ್ರೆಯಲ್ಲಿನ ಇತರ ಪ್ರಮುಖ ವಿಭಾಗಗಳೆಂದರೆ, ೧೯. ಅರ್ಥೋಪೆಡಿಕ್ಸ್ ರೇಸಿಲೇಟರ ಮೆಡಿಸನ್, ೨೧. ಮನೋಚಿಕಿತ್ಸಾ ವಿಭಾಗ, ೨೨. ಆಸ್ಪತ್ರೆಯ ಮಾಹಿತಿಗಾಗಿ ಸಾಮಾನ್ಯ ಜನರಿಗೆ ಆಸ್ಪತ್ರೆಯಲ್ಲಿರುವವರಿಗೆ, ಸಾರ್ವಜನಿಕ ಸಂಪರ್ಕ ವಿಭಾಗ ಕಾರ್ಯನಿರ್ವಹಿಸುತ್ತದೆ.

೨೩. ೨೪ ಗಂಟೆಗಳ ತುರ್ತು ಸೇವೆಯ ವಿಭಾಗಗಳಲ್ಲದೆ, ಈ ಮೇಲಿನ ಎಲ್ಲ ವಿಭಾಗಗಳಿಗೆ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದುವಂತೆ ಮಾಡಿದ್ದಾರೆ. ಇತ್ತೀಚೆಗೆ "ಟೆಲಿ ಮೆಡಿಸಿನ್", "ಡಿಜಿಟಲ್ ಕ್ಯಾಥ್‌ಲ್ಯಾಬ್" ಹಾಗೂ ಟ್ರಾಮಾಕೇರ್ ಮತ್ತು EMS ಸೌಕರ್ಯಗಳನ್ನು ಹೊಂದುವಂತೆ ಮಾಡುವ ಮೂಲಕ ರೋಗಿಗಳ ಗುಣಾತ್ಮಕ ಸೇವೆಗೆ ಅಣಿಗೊಳಿಸಿದ್ದಾರೆ.[೫೪]

ಎಲ್ಲ ವಿಭಾಗಗಳಿಗೆ ಅತ್ಯಂತ ನುರಿತ ತಜ್ಞ ವೈದ್ಯರನ್ನು ನೇಮಿಸುವ ಮೂಲಕ ಕಠಿಣವಾದ ರೋಗಗಳನ್ನು ಶೀಘ್ರವಾಗಿ ಪತ್ತೆ ಹಚ್ಚುವ ಅನುಕೂಲತೆಯನ್ನು ಕಲ್ಪಿಸಲಾಗಿದೆ. ರೋಗಿಗಳನ್ನು ಬೇಗನೆ ಗುಣಪಡಿಸುವ ಕಾರ್ಯದಲ್ಲಿಯೂ ಈ ಆಸ್ಪತ್ರೆಯ ಶ್ರಮಿಸುತ್ತಿದೆ.

ಶ್ರೀ ಕೋರೆಯವರು ಒದಗಿಸಿದ ಸೌಕರ್ಯ ಹಾಗೂ ಸೌಲಭ್ಯಗಳೊಂದಿಗೆ ದೇಶದ ಆರೋಗ್ಯ ಕ್ಷೇತ್ರದಲ್ಲಿ ಈ ಆಸ್ಪತ್ರೆಯ ಸಾಧನೆಯನ್ನು ಗುರುತಿಸಿ, ಇಂಗ್ಲೀಷ್ ದಿನ ಪತ್ರಿಕೆ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಹೆಲ್ತ್‌ಕೇರ್ ಮ್ಯಾಗಝೀನ್ ಮಾಡಿದ ಸರ್ವೆ ಪ್ರಕಾರ, "ಈ ಆಸ್ಪತ್ರೆಯು ದಕ್ಷಿಣ ಭಾರತದ ಆಸ್ಪತ್ರೆಗಳಲ್ಲಿಯೇ ಅತಿ ಉತ್ತಮ ಆಸ್ಪತ್ರೆಯೆಂದು ಗುರುತಿಸಲ್ಪಟ್ಟಿದೆ. ಇದು ಶ್ರೀ ಪ್ರಭಾಕರ ಕೋರೆಯವರ ಕಾರ್ಯ ಸಾಧನೆಗೆ ಸಂದ ಗೌರವವಾಗಿದೆ.[೫೫]

ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರವು ಹೊಂದಿರುವ ಇತರ ಸೌಲಭ್ಯಗಳು :

ಒಂದು ಆಸ್ಪತ್ರೆಯ ಹೇಗಿರಬೇಕು ಎನ್ನುವುದಕ್ಕೆ ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರವು ಮಾದರಿಯಾದರೆ, ಆಸ್ಪತ್ರೆಯನ್ನು ಹೇಗೆ ಅಭಿವೃದ್ಧಿ ಪಡಿಸಬೇಕು ಎನ್ನುವುದಕ್ಕೆ ಶ್ರೀ ಪ್ರಭಾಕರ ಕೋರೆಯವರು ಮಾದರಿಯಾಗಿದ್ದಾರೆ. ಅಷ್ಟೊಂದು ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವ ಮೂಲಕ ಈ ಆಸ್ಪತ್ರೆಯನ್ನು ವಿಶ್ವದ ವೈದ್ಯಕೀಯ ಲೋಕವೇ ಇತ್ತ ನೋಡುವಂತೆ, ಮಾಡಿದ್ದಾರೆ.

ಆಸ್ಪತ್ರೆಯಲ್ಲಿ ಅತ್ಯಾಧುನಿಕ ಹಾಗೂ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ವಿವರ ಇಲ್ಲಿದೆ.

ಕ್ಯಾಟ ಮೋನೋನ್ ಮತ್ತು ಇತರ ಅಗತ್ಯವಾದ ಸಲಕರಣೆ

೧. ಕ್ಯಾಂಟ್ ಕಂಪ್ಯೂಟರ್ ಡೇಟಿಲ್‌ಲಗಳು ಓ.ಎಸ್.	–	೨೮೨
೨. ಡಾಂಟ್ ಮಾರ್ಟಿಕ್ಸ್ ಪ್ರಿಂಟರ್ಸ್	–	೬೩
೩. ವೈಜರ್ ಪ್ರಿಂಟರ್	–	೪೬
೪. ಸ್ಕ್ಯಾನಿಂಗ್ ಡಿವೈಸಸ್	–	೦೮
೫. CD / DVD	-	120
೬. ಎಕ್ಸಟಕ್ಸಲ್ ಶೇಡೊ ರಸ್ತ ಡೇವ್ಹಾಸ್	–	೦೨
೭. ಟೇಪ್‌ಡೋನ್	–	೦೧[೫೬]

ಈ ಎಲ್ಲ ಸೌಲಭ್ಯಗಳನ್ನು ಸುಮಾರು ರೂಪಾಯಿ ೪೮ ಕೋಟಿ ವೆಚ್ಚದ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿ ರೋಗಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಗುಣಪಡಿಸಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆಯಲ್ಲಿರುವ ಸಿಬ್ಬಂದಿಯ ಸಂಖ್ಯೆ :

೧. ತಜ್ಞರ ಸಂಖ್ಯೆ	–	೩೭
೨. ತಜ್ಞರಿಗೆ ಬೆಂಬಲಿಗರ ಸಿಬ್ಬಂದಿಯ ಸಂಖ್ಯೆ	–	೨೨೨
೩. ಆರೋಗ್ಯ ಸಹಾಯಕರು ಹಾಗೂ ತಾಂತ್ರಿಕ ಆರೋಗ್ಯ ಸಹಾಯಕರು	–	೧೦೪
೪. ನರಸಿಂಗ್ ಸಿಬ್ಬಂದಿ (ನರ್ಸಿಂಗ್)	–	೫೬೦
೫. ಕ್ಲರಿಕಲ್ ಹಾಗೂ ನೋಂದಾವಣಿ ಸಿಬ್ಬಂದಿ	–	೨೧೪

೬. ಭದ್ರತಾ ಸಿಬ್ಬಂದಿ – ೧೫೦

೭. ಕೋಣೆಗಳ ಸಹಾಯಕರು ಹಾಗೂ ವಾರ್ಡ್ ದಾದಿ – ೪೨೧

೮. ಸಂಪರ್ಕ ಸಿಬ್ಬಂದಿ – ೨೫೦

ಒಟ್ಟು ಸಿಬ್ಬಂದಿ ಸಂಖ್ಯೆ – ೨೦೮೦[೫೭]

ಈ ಆಸ್ಪತ್ರೆಯ ಮೂಲಕ ಕರ್ನಾಟಕ ರಾಜ್ಯ ಲಕ್ಷಾಂತರ ಶ್ರೀಮಂತರು, ಬಡವರೆನ್ನದೇ ಸಮಾಜದ ಎಲ್ಲರಿಗೂ ಆರೋಗ್ಯದ ಭಾಗ್ಯವನ್ನು ಕಲ್ಪಿಸಿದ ಶ್ರೇಯಸ್ಸಿಗೆ ಶ್ರೀ ಕೋರೆಯವರು ಪಾತ್ರರಾಗಿದ್ದಾರೆ.

ಈ ಆಸ್ಪತ್ರೆಯಲ್ಲಿ ೨೦೦೬ರಿಂದ ೨೦೦೯ರ ವರೆಗೆ ಒಟ್ಟು ಶಸ್ತ್ರ ಚಿಕಿತ್ಸೆಯನ್ನು ನಡೆಸಿದ ವಿವರ ಹೀಗಿದೆ. ಈ ದಾಖಲೆಯು ೨೦೦೯ರ ಸೆಪ್ಟೆಂಬರ್‌ವರೆಗೆ ಒಟ್ಟು ೧೦೮೧೬ ಮೇಜರ ೮೯೯೩ ಮೈನರ ಶಸ್ತ್ರಚಿಕಿತ್ಸೆಯನ್ನು ನಡೆಸಲಾಗಿದ[೫೮].

ಇಲ್ಲಿಯವರೆಗೂ ಅತ್ಯಂತ ಕಠಿಣವಾದಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿ, ದೇಶಾದ್ಯಂತ ಹೆಸರು ಪಡೆದ ಈ ಆಸ್ಪತ್ರೆಯು, ಶ್ರೀ ಪ್ರಭಾಕರ ಕೋರೆಯವರು ಸಹೋದರ ಸಂಬಂಧಿ ಗುಂಡಿನ ಏಟಿನಿಂದ ತೀವ್ರವಾದ ಗಾಯದಿಂದ ಸಾವು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದಾಗ, ಕೆ.ಎಲ್.ಇ. ಆಸ್ಪತ್ರೆಯ ತಜ್ಞ ವೈದ್ಯರೇ ಯಶಸ್ವಿ ಶಸ್ತ್ರ ಚಿಕಿತ್ಸೆಯನ್ನು ನಡೆಸಿ ಜೀವ ಉಳಿಸಿದರು. ಇದಕ್ಕಿಂತ ಮೊದಲು ಬಿ.ಜೆ.ಪಿ.ಯ ಹಿರಿಯ ಮುಖಂಡರಾಗಿದ್ದ ಪ್ರಮೋದ್ ಮಹಾಜನ್‌ರು ಕೂಡಾ ಇಂತಹದೇ ಘಟನೆಗೆ ಒಳಗಾಗಿ ಮುಂಬೈಯ ಹಿಂದೂಜಾ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಚಿಕಿತ್ಸೆಯ ಫಲ ನೀಡದೇ ಮರಣ ಹೊಂದಿದ್ದರು. ಈ ಹಿನ್ನೆಲೆಯಲ್ಲಿ ಶ್ರೀ ಕೋರೆಯವರನ್ನು ಬದುಕಿಸಿದ ಈ ಆಸ್ಪತ್ರೆಯ ಕಾರ್ಯವೈಖರಿಯನ್ನು ಪ್ರಧಾನಿ ಡಾ. ಮನಮೋಹನ್‌ಸಿಂಗ್‌ರು ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧಿನಾಯಕಿಯಾದ ಶ್ರೀಮತಿ ಸೋನಿಯಾಗಾಂಧಿಯವರಲ್ಲದೇ, ದೇಶದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿನ ವೈದ್ಯರು ಕೆ.ಎಲ್.ಇ ಆಸ್ಪತ್ರೆಯ ವೈದ್ಯರ ಸಾಧನೆಯನ್ನು ಕಂಡು ನಿಬ್ಬೆರಗಾಗಿದ್ದು ಉಂಟು. ೨೦೦೯ರ ವರ್ಷದಲ್ಲಿ ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಕಳೆದ ವರ್ಷಕ್ಕಿಂತ ಈ ವರ್ಷವೂ ಹೆಚ್ಚು ರೋಗಿಗಳ ತಪಾಸಣೆ ನಡೆಸಿದೆ. ಅದು ಶೇಕಡಾ ೮ರಷ್ಟು ಒಳ ರೋಗಿಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಮುಂದಾಗಿದೆ. ಈ ವರ್ಷ ಅಂದರೆ. ೨೦೦೯ ಮತ್ತು ೧೦ನೆ ಸಾಲಿನಲ್ಲಿ ೪೫.೭೪೮ಕ್ಕೂ ಹೆಚ್ಚು ರೋಗಿಗಳಿಗೆ ಪ್ರವೇಶ ನೀಡಿದೆ. ಇದರಲ್ಲಿ ಮಹಾರಾಷ್ಟ್ರದ ೩೨೪೫ ಮತ್ತು ಗೋವಾ ರಾಜ್ಯದ ೧೨೦೯ ರೋಗಿಗಳು ಒಳಗೊಂಡಿದ್ದಾರೆ. ೨೦೦೯ ರಲ್ಲಿ ೪.೦೩.೨೪೩ ರೋಗಿಗಳನ್ನು ಪರೀಕ್ಷಿಸಲಾಗಿದ್ದು, ೧೦ ವರ್ಷಗಳಲ್ಲಿ ೨೪.೮೨.೮೪೨ ರೋಗಿಗಳು ಈ ಆಸ್ಪತ್ರೆಯ ಲಾಭಪಡೆದುಕೊಂಡಿದ್ದು ಒಂದು ದಾಖಲೆಯೇ ಸರಿ. ಭಾರತದಲ್ಲಿ ಹಲವಾರು ಹೃದಯ ಪ್ರತಿಷ್ಠಾನಗಳಿದ್ದು, ಅವುಗಳಲ್ಲಿ ಕೆ.ಎಲ್.ಇ. ಹೃದಯ ಪ್ರತಿಷ್ಠಾನವು ಮೊದಲ ಸ್ಥಾನದಲ್ಲಿದ್ದು, ಪ್ರತಿ ವರ್ಷ ಸುಮಾರು ೧೫೦೦ ಹೃದಯ ಶಸ್ತ್ರಕ್ರಿಯೆಗಳನ್ನು ನೆರವೇರಿಸುತ್ತಿದೆ. ಇದು ಈ ಕೋರೆಯವರ ಪ್ರಯತ್ನದ ಫಲ.[೫೯]

ಹೀಗೆ ರಾಜ್ಯದ ರೋಗಿಗಳಿಗಲ್ಲದೆ, ಹೊರ ರಾಜ್ಯದ ರೋಗಿಗಳು ಆರೋಗ್ಯ ಸೇವೆಯನ್ನು ಪಡೆಯುವಂತೆ ಮಾಡಿದ ಶ್ರೀ ಕೋರೆಯವರು, ಆ ಮೂಲಕ ಜನರ ಪಾಲಿಗೆ ಆರೋಗ್ಯ ಭಾಗ್ಯ ಕಲ್ಪಿಸಿದ ಪುಣ್ಯಜೀವಿ ಎನಿಸಿದ್ದಾರೆ.

ಕೆ.ಎಲ್.ಇ. ಆಸ್ಪತ್ರೆಯ ಮೂಲಕ ಶ್ರೀ ಕೋರೆಯವರು ಮಾಡಿದ ಸಾಮಾಜಿಕ ಕಾರ್ಯಗಳು :

ಕೆ.ಎಲ್.ಇ. ಆಸ್ಪತ್ರೆಯು ಸಮಾಜದಲ್ಲಿ ಕಷ್ಟಕ್ಕೆ ಸಿಲುಕಿದ ಜನರಿಗಾಗಿ ಹಾಗೂ ಆಯಾ ಪ್ರದೇಶದ ಜನರ ಸಮಸ್ಯೆಗಳ ಪರಿಹಾರಕ್ಕೆ ಒತ್ತು ನೀಡುವಂತೆ ಶ್ರೀ ಕೋರೆಯವರು ಮಾಡಿದ್ದಾರೆ. ೨೦೦೫ರಲ್ಲಿ ಚಿಕ್ಕೋಡಿ, ಅಥಣಿ, ರಾಯಬಾಗ ತಾಲೂಕಿನಲ್ಲಿ ಪ್ರವಾಹದಿಂದಾಗಿ ಅನೇಕ ಹಳ್ಳಿಗಳ ಜನರು ನಿರಾಶ್ರಿತರಾದಾಗ ಕೆ.ಎಲ್.ಇ. ಆಸ್ಪತ್ರೆಯ ವೈದ್ಯರ ತಂಡವು ನಿರಾಶ್ರಿತ ಪ್ರದೇಶದ ಜನರಿಗೆ ಉಚಿತ ಆರೋಗ್ಯ ಹಾಗೂ ಔಷಧೋಪಚಾರ ಮಾಡುವ ಮೂಲಕ ಮಾನವೀಯತೆಯನ್ನು ಮೆರೆದಿದೆ. ಹಾಗೆಯೆ ೨೦೦೯ರಲ್ಲಿ ಉತ್ತರ ಕರ್ನಾಟಕದಲ್ಲಿ ಬಿದ್ದಭಾರೀ ಮಳೆಯಿಂದಾಗಿ ತೀವ್ರ ತೊಂದರೆಗೆ ಒಳಗಾದ ಜನರಿಗೆ ಉಚಿತ ಆರೋಗ್ಯ ಸೇವೆಯನ್ನು ನಿರಾಶ್ರಿತ ಪ್ರದೇಶದ ಜನರಿಗೆ ನೀಡಲು ಆಸ್ಪತ್ರೆ ಸಂತ್ರಸ್ತರ ಶಿಬಿರಗಳನ್ನು ತೆರೆಯಿತು. ಆರೋಗ್ಯ ಸೇವೆಯನ್ನು ಒದಗಿಸಿತು. ಆ ಮೂಲಕ ಸಮಾಜದಲ್ಲಿ ನೊಂದ ಜನಸಮುದಾಯದ ಆರೈಕೆ ಮಾಡಿದ ಶ್ರೇಯಸ್ಸಿಗೆ ಪಾತ್ರವಾಯಿತು. ಸ್ವತಃ ಶ್ರೀ ಕೋರೆಯವರೇ ಮುಂದೆನಿಂತು ಈ ಜನರಿಗೆ ಉಚಿತ ಔಷಧಿ ಹಾಗೂ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆಯನ್ನು ಕೊಡಿಸುವ ಕಾರ್ಯವನ್ನು ಸಮಾಜದ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಹಾಗೂ ಗ್ರಾಮೀಣ ಭಾಗದಲ್ಲಿ ಅನೇಕ ಶಿಬಿರಗಳನ್ನು ತೆರೆದು ಗ್ರಾಮೀಣ ಪ್ರದೇಶದ ಜನರಿಗಾಗಿ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ನೀಡಲು ವಿಶೇಷ ಆಸಕ್ತಿ ವಹಿಸಿದರು.[೬೦]

ಸಮಾಜದಲ್ಲಿ ಒಮ್ಮಿಂದೊಮ್ಮೆಲೆ ಹಬ್ಬಿಕೊಳ್ಳುವ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಹಾಗೂ ರೋಗಗಳ ಬಗ್ಗೆ ಜನಜಾಗ್ರತಿಯನ್ನು ಮೂಡಿಸುವಲ್ಲಿ ಈ ಆಸ್ಪತ್ರೆಯು ಪ್ರಾಮಾಣಿಕ ಕಾರ್ಯ ಮಾಡುತ್ತಾ ಬಂದಿದೆ. ೨೦೦೯ರಲ್ಲಿ ರಾಜ್ಯದಲ್ಲಿ ಉದ್ಭವಿಸಿದ ಡೆಂಗ್ಯೂ ಜ್ವರದ ರೋಗವನ್ನು ಒಂದು ಸವಾಲಾಗಿ ಸ್ವೀಕರಿಸಿದ ಈ ಆಸ್ಪತ್ರೆಯು, ಒಟ್ಟು ೬೮೭ ವಯಸ್ಕ ರೋಗಿಗಳಲ್ಲದೆ, ೧,೦೩೨ ಚಿಕ್ಕ ಮಕ್ಕಳು ಸೇರಿದಂತೆ ೧೭೧೯ ಡೆಂಗೂ ಜ್ವರದ ರೋಗಿಗಳಿಗೆ ಆರೈಕೆ ಮಾಡುವ ಮೂಲಕ, ಆ ರೋಗದ ಬಗ್ಗೆ ಜನರಲ್ಲಿ ಹುಟ್ಟಿಕೊಂಡ ಆತಂಕವನ್ನು ದೂರಮಾಡಿದೆ. ರೋಗದ ಬಗ್ಗೆ ಸಾಕಷ್ಟು ಜನಜಾಗ್ರತಿಯನ್ನು ಮೂಡಿಸುವಲ್ಲಿ ಈ ಆಸ್ಪತ್ರೆಯು ಯಶಸ್ವಿಯಾಗಿದೆ ಹುಬ್ಬಳ್ಳಿ, ಕೊಲ್ಲಾಪುರ, ಬಿಜಾಪುರ ಮತ್ತಿತರ ಕಡೆಗಳಿಂದ ಬಂದ ರೋಗಿಗಳು ಈ ಆಸ್ಪತ್ರೆಯಲ್ಲಿ ಗುಣಮುಖವಾಗಿರುವುದು ಅಲ್ಲಿನ ವೈದ್ಯರ ಕಾರ್ಯವೈಖರಿಗೆ ಸಾಕ್ಷಿಯಾಗಿದೆ. ಈ ಆಸ್ಪತ್ರೆಯು ಉತ್ತಮವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಹಿಡಿದ ಕನ್ನಡಿಯಾಗಿದೆ.[೬೧]

೨೦೦೯ರಲ್ಲಿ ಸಮಾಜವನ್ನು ಆತಂಕಕ್ಕೀಡು ಎಡೆ ಮಾಡಿದ ಮಾರಣಾಂತಿಕ ರೋಗವಾದ ಹಂದಿಜ್ವರದ (H_1N_1)ರೋಗವನ್ನು ನಿಯಂತ್ರಿಸಲು ಹಾಗೂ ಅದರ ಬಗ್ಗೆ ಜಾಗೃತಿಯನ್ನು ಮೂಡಿಸಲು, ಆ ರೋಗಿಗಳ ಆರೈಕೆ ಮಾಡಿದ ತಜ್ಞವೈದ್ಯರ ತಂಡವನ್ನು ತಕ್ಷಣ ರಚಿಸುವಂತೆ ಶ್ರೀ ಕೋರೆಯವರು ಆಸ್ಪತ್ರೆಯ ನಿರ್ದೇಶಕರಾದ ಡಾ. ಎಂ. ವಿ. ಜಾಲಿಯವರಿಗೆ ಮಾರ್ಗದರ್ಶನ ನೀಡಿದರು. ಹಂದಿ ಜ್ವರಕ್ಕೆ ತುತ್ತಾದವರ ಸಲುವಾಗಿ ಪ್ರತ್ಯೇಕ ವಾರ್ಡಗಳನ್ನು

ಸಿದ್ಧಗೊಳಿಸಿದರು. ರೋಗಿಗಳ ಉತ್ತಮ ಆರೈಕೆ ಮಾಡುವ ಮೂಲಕ ಸಮಾಜದ ಜನರಲ್ಲಿ ಮೂಡಿದ ಆತಂಕವನ್ನು ಕಡಿಮೆ ಮಾಡಿತು. ಇದರ ಸಲುವಾಗಿ ಎರಡು ವಿದೇಶಿ ಕಂಪನಿಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡು, ಈ ರೋಗವನ್ನು ನಿಯಂತ್ರಿಸಿ ರೋಗಿಗಳು ಆರಾಮವಾಗಿ ಮನೆಗೆ ಮರಳುವಂತೆ ಮಾಡುವಲ್ಲಿ ಈ ಆಸ್ಪತ್ರೆಯ ಕಾರ್ಯವು ಅಮೋಘವಾಗಿದೆ.[೬೨]

ಆಸ್ಪತ್ರೆಯು ಟೆಲಿಮೆಡಿಸನ್ ಮೊಬೈಲ್ ವಾಹನದ ಮೂಲಕ ಈ ಭಯಾನಕ ರೋಗದ ಬಗ್ಗೆ ಜಾಗ್ರತಿಯನ್ನುಂಟು ಮಾಡಿ, ಜನರ ವಿಶ್ವಾಸಕ್ಕೆ ಪಾತ್ರವಾಯಿತು. ಕೋರೆಯವರು ಜನತೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಸಾಮಾನ್ಯ ಜನರಿಗೆ ವರದಾನವಾಗಿ ಪರಿಣಮಿಸುವಂತೆ ಮಾಡಿದ್ದಾರೆ. ಆಧುನಿಕವಾದ ಸಾಕಷ್ಟು ಯಂತ್ರೋಪಕರಣಗಳನ್ನು ಹೊಂದುವಂತೆ ಮಾಡಿದ್ದಾರೆ. ದುಬಾರಿ ಔಷಧಿಗಳಿಂದ ಜನರು ಹಣಕಾಸಿನ ತೊಂದರೆಯಿಂದ ಬಳಲಬಾರದೆಂದು ಚಿಂತನೆ ಮಾಡಿದ ಇವರ ದೂರದೃಷ್ಟಿ ಹಾಗೂ ಮಾರ್ಗದರ್ಶನ ಪ್ರಶಂಸನೀಯ ೨೦೦೪ರಲ್ಲಿ ಶ್ರೀ ಕೋರೆಯವರು ಕೆ.ಎಲ್.ಇ. ಆಸ್ಪತ್ರೆಯಲ್ಲಿ ಆರೋಗ್ಯ ಸೇವಾ ಕೇಂದ್ರವನ್ನು ಸ್ಥಾಪಿಸಿ ಜನರ ಪ್ರೀತೆಗೆ ಪಾತ್ರರಾಗಿದ್ದಾರೆ.

೧. **ಜನತಾ ಆರೋಗ್ಯ ಯೋಜನೆ :** ಸಹಕಾರ ಕ್ಷೇತ್ರದ ಸದಸ್ಯರಿಗಾಗಿ ಹಾಗೂ ರೈತರ ಸಲುವಾಗಿ, ಅವರ ನೇರ ನೆರವಿಗಾಗಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದು ಆಸ್ಪತ್ರೆಯ ಎಲ್ಲ ಖರ್ಚುಗಳನ್ನು ಭರಿಸುತ್ತದೆ. ಅಂದರೆ ಶಸ್ತ್ರಚಿಕಿತ್ಸೆಯ ಎಲ್ಲ ವೆಚ್ಚಗಳು ಇದರ ವ್ಯಾಪ್ತಿಗೆ ಬರುತ್ತವೆ.

೨. **"ವೈದಶ್ರೀ" :** ಕೆ.ಎಲ್.ಇ ಸಿಬ್ಬಂದಿ ಹಾಗೂ ಕುಟುಂಬದ ಸದಸ್ಯರ ಸಮಗ್ರವಾದ ಆರೋಗ್ಯವನ್ನು ಈ ಯೋಜನೆ ಒಳಗೊಂಡಿದೆ.

೩. **ವಿದ್ಯಾರ್ಥಿ ಪ್ಲಸ್ :** ಈ ಯೋಜನೆಯನ್ನು ಮುಖ್ಯವಾಗಿ ತಾಂತ್ರಿಕ ಕೋರ್ಸ್‌ಗಳನ್ನು ಪಡೆಯುತ್ತಿರುವವರಿಗಾಗಿ ರೂಪಿಸಲಾಗಿತ್ತು. ನಂತರದ ದಿನಗಳಲ್ಲಿ ಶ್ರೀ ಕೋರೆಯವರು ಎಲ್ಲ ವಿಭಾಗಗಳಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗಾಗಿ ಯೋಜನೆಯನ್ನು ವಿಸ್ತರಿಸಿ ಅದರ ಲಾಭ ದೊರಕುವಂತೆ ಮಾಡಿದ್ದಾರೆ. ದಂತ ಚಿಕಿತ್ಸೆಯನ್ನು ಯಾವುದೇ ವೆಚ್ಚವಿಲ್ಲದೆ ಪಡೆಯುವ ಸೌಲಭ್ಯವನ್ನು ಒದಗಿಸಿದ್ದಾರೆ.[೬೩]

ಶ್ರೀ ಪ್ರಭಾಕರ ಕೋರೆಯವರು ತಮ್ಮ ಜನ್ಮದಿನವಾದ ಆಗಸ್ಟ್ ೧ರಂದು ಬಡ ರೋಗಿಗಳಿಗೆ ಉಚಿತವಾಗಿ ತೆರೆದ ಹೃದಯ ಚಿಕಿತ್ಸೆಯನ್ನು ಕಲ್ಪಿಸುವ ಮೂಲಕ ಬಡ ಜನರ ಹೃದಯಲ್ಲಿ ಉಳಿದಿದ್ದಾರೆ. ಇದಲ್ಲದೆ ಅಂಧ ಮಕ್ಕಳ ಹಾಗೂ ಅಂಗವಿಕಲ ಮಕ್ಕಳ ಶಾಲೆಗಳಿಗೆ ಪ್ರತಿ ವರ್ಷ ೨೫ ಸಾವಿರ ರೂಪಾಯಿ ದೇಣಿಗೆಯನ್ನು ನೀಡಿ ಅವರ ಶಿಕ್ಷಣಕ್ಕಾಗಿ ಸಹಾಯವನ್ನು ಒದಗಿಸಿದ್ದಾರೆ.[೬೪]

ಕರ್ನಾಟಕ, ಗೋವಾ ರಾಜ್ಯ ಸರ್ಕಾರಗಳು ಈ ಆಸ್ಪತ್ರೆಯ ಸಾಧನೆಯಿಂದ ತೃಪ್ತಿಗೊಂಡು, ತಮ್ಮ ತಮ್ಮ ಸರಕಾರಿ ನೌಕರಿಗಾಗಿ ಶ್ರೀ ಕೋರೆಯವರು ಆಸ್ಪತ್ರೆಯಲ್ಲಿ 'ಯಶಸ್ವಿ ಆರೋಗ್ಯ ಭಾಗ್ಯ', ಕೆ.ಎಲ್.ಇ. ಆರೋಗ್ಯ ವಿಮೆ,

ನಿವೃತ್ತ ಸೈನಿಕರ ಯೋಜನೆಗಳನ್ನು ನೌಕರರ ವರ್ಗದವರಿಗೆ ಒದಗಿಸಿ, ಪ್ರತಿ ವರ್ಷ ಸಾವಿರಾರು ನೌಕರರು ಈ ಆರೋಗ್ಯ ಸೇವೆಗಳ ಭಾಗ್ಯ ಪಡೆಯುವಂತೆ ಮಾಡಿದ್ದಾರೆ.

ಹೀಗೆ ಒಂದು ಆಸ್ಪತ್ರೆಯನ್ನು ಲಾಭದಾಯಕವಾಗಿ ಮಾಡುವ ಹಾಗೂ ದುಬಾರಿ ಆರೋಗ್ಯದ ಶುಲ್ಕವನ್ನು ವಿಧಿಸುವ ಮನೋಭಾವದ ಜನರಿರುವ ಈ ಕಾಲದಲ್ಲಿ ಜನಸಾಮಾನ್ಯರ ಹಾಗೂ ಬಡವರ, ಸಮಾಜದ ಎಲ್ಲ ವರ್ಗದ ಜನರ ಅನುಕೂಲಕ್ಕಾಗಿ ಕಡಿಮೆ ವೆಚ್ಚದಲ್ಲಿ ಹಾಗೂ ಉಚಿತ ವೈದ್ಯಕೀಯ ಸೇವೆಗಳ ಯೋಜನೆಗಳನ್ನು ಈ ಆಸ್ಪತ್ರೆಯಲ್ಲಿ ಜಾರಿಗೊಳಿಸುವ ಮೂಲಕ ಶ್ರೀ ಕೋರೆಯವರು ಸಮಾಜಕ್ಕಾಗಿ ಸಲ್ಲಿಸುತ್ತಿರುವ ಸೇವೆಯು ಶ್ರೇಷ್ಠವಾದುದು.

ಕೆ. ಎಲ್. ಇ. ಆಸ್ಪತ್ರೆಯನ್ನು ಒಂದು ಉತ್ಕೃಷ್ಟವಾದ ಆಸ್ಪತ್ರೆಯನ್ನಾಗಿಸುವ ಮೂಲಕ ಒಂದು ಶ್ರೇಷ್ಠ ಸಂಶೋಧನಾ ಕೇಂದ್ರವನ್ನಾಗಿಯೂ ಶ್ರೀ ಕೋರೆಯವರು ಪರಿವರ್ತಿಸಿದ್ದಾರೆ. ವಿದೇಶಗಳ ಅನೇಕ ಸಂಶೋಧನಾ ಕೇಂದ್ರಗಳು (ವೈದ್ಯಕೀಯ) ಕೆ.ಎಲ್.ಇ. ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಹಾಗೂ ವಿವಿಧ ಬಗೆಯ ವೈದ್ಯಕೀಯ ಸಂಶೋಧನೆಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸುತ್ತಿವೆ. ಅವುಗಳು ಈ ಸಂಶೋಧನಾ ಕೇಂದ್ರಗಳೊಂದಿಗೆ ಒಪ್ಪಂದಮಾಡಿಕೊಂಡು ಸಾಧಿಸುತ್ತಿರುವ ಸಾಧನೆ ಅಭಿಮಾನದ ಸಂಗತಿಯಾಗಿದೆ.

ಅಮೇರಿಕಾ, ಇಂಗ್ಲೆಂಡ್, ಮಲೇಶಿಯಾ, ಜಾಂಬಿಯಾ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿನ ಪ್ರತಿಷ್ಠಿತ ವೈದ್ಯಕೀಯ ವಿಶ್ವವಿದ್ಯಾಲಯಗಳು ಈ ಸಂಶೋಧನ ಕೇಂದ್ರದೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ದೇಶವೇ ಹೆಮ್ಮೆಪಡುವ ಸಂಗತಿಯಾಗಿದೆ. ಅಲ್ಲದೆ ಅನೇಕ ವಿದೇಶಿ ತಜ್ಞರು ಖ್ಯಾತನಾಮ ವೈದ್ಯಕೀಯ ಸಂಶೋಧಕರು ಈ ಕೆ.ಎಲ್.ಇ. ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ, ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿರುವುದು ಶ್ರೀ ಕೋರೆಯವರ ಕಾರ್ಯ ಸಾಮರ್ಥ್ಯ(ಸಾಧನೆ)ಕ್ಕೆ ಸಂದ ಗೌರವ.

ಈ ಸಂಶೋಧನ ಕೇಂದ್ರವು ಪರಿಣಾಮಕಾರಿಯಾಗಿ ಸಂಶೋಧನೆಯನ್ನು ಕೈಗೊಳ್ಳಲು ವಿದ್ಯಾರ್ಥಿಗಳಿಗಾಗಿ ಆಧುನಿಕ ಸೌಲಭ್ಯಗಳನ್ನು ಒದಗಿಸಿದೆ. ಅದೆ ಸಾವಿರ ಹಾಸಿಗೆಯ ಆಸ್ಪತ್ರೆಯ ಜೊತೆಗೆ ಉಚಿತ ೯೯೦ ಹಾಸಿಗೆಯ ಆಸ್ಪತ್ರೆಯ ದಂತ ವಿಜ್ಞಾನ ಆಸ್ಪತ್ರೆಗಳು, ಆಯುರ್ವೇದ ಆಸ್ಪತ್ರೆಗಳು ಈ ಸಂಶೋಧನಾ ಕೇಂದ್ರಕ್ಕೆ ಸಾಕಷ್ಟು ಪ್ರಯೋಜನಗಳನ್ನು ಒದಗಿಸುತ್ತವೆ. ಈ ಆಸ್ಪತ್ರೆಯಲ್ಲಿ ಸುಮಾರು ಜಿ. ಟೆಕ್ ಬಯೋ ಮೆಡಿಕಲ್ ವಿಭಾಗದ ಮೂಲಕ (J - tech - Bio MEDICAL SCIENCE) ವಿವಿಧ ರೋಗಗಳ ಚಿಕಿತ್ಸೆಗಾಗಿ ಹಾಗೂ ಅವುಗಳನ್ನು ಗುಣಪಡಿಸುವ ಹೊಸ ಔಷಧಿಗಳನ್ನು ಕಂಡುಹಿಡಿಯಲು ಅನುಕೂಲವಾಗುವಂತೆ ಜಗತ್ತಿನ ವೈದ್ಯಕೀಯ ಕ್ಷೇತ್ರದಲ್ಲಿನ ಹೊಸ ಆವಿಷ್ಕಾರಗಳನ್ನು ಅಳವಡಿಸಿದ್ದಾರೆ. ಪ್ರಗತಿಯನ್ನು ಕ್ಷಣಮಾತ್ರದಲ್ಲಿಯೇ ಕಂಡುಕೊಳ್ಳಲು ವಿಚಾರ ವಿನಿಮಯ ನಡೆಸಲು ಅನುಕೂಲವಾಗುವಂತೆ ಅಂತರ್‌ಜಾಲದ ಮೂಲಕ ಜಗತ್ತಿನ ಪ್ರತಿಷ್ಠಿತ ವೈದ್ಯಕೀಯ ಪತ್ರಿಕೆಗಳು ಹಾಗೂ ಲೇಖನಗಳು ಲಭ್ಯವಾಗುವಂತೆ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಜಗತ್ತಿನಲ್ಲಿ ನಡೆಯುವ ಸಂಶೋಧಕರ ಪ್ರಗತಿಯನ್ನು ತಿಳಿದುಕೊಳ್ಳಲು ಈ ಕೆಳಗಿನ ಸೌಕರ್ಯಗಳನ್ನು ಶ್ರೀ ಕೋರೆಯವರು ಒದಗಿಸಿದ್ದಾರೆ.

೧. ಟೆಬಲ್ ಆಫ್ ಕನ್ಸಟೆಷಟ್ರಮ್ ೧೭೮೦ + E ಜನರಲ್ ಆನ್‌ಲೈನ್ ಪತ್ರಿಕೆಗಳು.

೨. ೧೧೮೨ ಓನ್ಲಿ ಒನ್‌ಲೈನ್ ಜನರಲ್ (ONLY ONE LINE JARNALS PAPER)

೩. ೪೫೧೦ + ಓಪನ್ ಎಕ್ಸಸ್ ಒನ್‌ಲೈನ್ ಫ್ರಿ ಜರ್‌ನಲ್ಸ್

೪. ಸಂಪರ್ಕ ಟಾಪ್ಸ್ ಸಂಪಾದಕರು ೪೭೮೨ + ಪ್ರಕಾಶನಕಾರರು.

೫. ಟೆಬಲ್ ಆಫ್ ಕಂಟಾಸಕ್ ಮತ್ತು ಡಾಟ್‌ಬೋಸ್ ಅಲಾಸಸ್ ಮೇರಿಯಸ್ ರಿಸರ್ಚ್ ಅಪ್ಲಿಕೇಶನ್ ಫಾರ ವೀಜರ್ ಟನ್ಸ್ ಮೊವೇರ್.[೬೫]

ಈ ಆಸ್ಪತ್ರೆಯಲ್ಲಿ ಪತ್ರಿಕೆಗಳು, ಲೇಖನ ಹಾಗೂ ಸಂಪಾದಕರ ಮೂಲಕ ವೈದ್ಯಕೀಯ ಕ್ಷೇತ್ರದ ಹೊಸ ಸಂಗತಿಗಳನ್ನು ತಿಳಿದುಕೊಂಡು ಈ ಮೂಲಕ ಸಂಶೋಧನೆಯನ್ನು ಕೈಗೊಳ್ಳಲು ಹಾಗೂ ವಿವಿಧ ಪ್ರಕಾರದ ರೋಗಗಳನ್ನು ಯಾವ ತೆರನಾಗಿ ಬೇಗನೆ ಗುಣಪಡಿಸಕೊಳ್ಳಬಹುದು ಎನ್ನುವುದನ್ನು ಕುರಿತು ಅಂತರ್‌ಜಾಲದ ಮೂಲಕ ಮಾಹಿತಿ ಪಡೆಯುವ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಅಂತರ್ರಾಷ್ಟ್ರೀಯ ವೈದ್ಯಕೀಯ ಕ್ಷೇತ್ರಕ್ಕೂ ಆಸ್ಪತ್ರೆಯ ಹಾಗೂ ಸಂಶೋಧನಾ ಕ್ಷೇತ್ರದ ವ್ಯಾಪ್ತಿಯನ್ನು ಹೊಂದುವಂತೆ ಮಾಡಿದ್ದಾರೆ. ತ್ವರಿತವಾಗಿ ವಿಷಯ ಸಂಗ್ರಹಣೆಗೆ ಸಂಶೋಧನ ನಿರತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಿದ್ದಾರೆ. ಅಲ್ಲದೆ ಮಾನವನನ್ನು ಕಾಡುತ್ತಿರುವ ಭಯಾನಕ ರೋಗ ಏಡ್ಸ್ ಮಹಾಮಾರಿಗೆ ಔಷಧಿಯನ್ನು ಕಂಡುಹಿಡಿಯುವ ಒಂದು ಪ್ರತ್ಯೇಕ ಸಂಶೋಧನ ಕೇಂದ್ರವನ್ನು ಸ್ಥಾಪಿಸುವ ಮೂಲಕ ಕಾರ್ಯ ಮಾಡುತ್ತಿರುವುದು ಈ ಕೇಂದ್ರದ ಹೆಗ್ಗಳಿಕೆ. ಇದಲ್ಲದೆ ಸಾಮಾನ್ಯಜನರಿಗೂ ಈ ಆಸ್ಪತ್ರೆಯ ಮೂಲಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಸಲುವಾಗಿ "ಷೊಕಸ್" ಎಂಬ ನಿಯತಕಾಲಿಕೆಯನ್ನು ಪ್ರತಿ ತಿಂಗಳು ಹೊರಡಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರ ಜೊತೆಗೆ ಮಧುಮೇಹ ರೋಗದ ತಿಳುವಳಿಕೆಗಾಗಿ "ಮಧುಮೇಹ ವೈದ್ಯ" ಎಂಬ ಮಾಸಿಕ ಪತ್ರಿಕೆಯನ್ನು ಹೊರಡಿಸುವ ವ್ಯವಸ್ಥೆಯನ್ನು ಮಾಡಿದ್ದರಲ್ಲದ್ದೇ "ಹೊಲಿಸ್ಟಿಕ್ ಮೆಡಿಸಿನ್" ಎಂಬ ಪತ್ರಿಕೆ ಮತ್ತು ಕೆ.ಎಲ್.ಇ. ಕೈಪಿಡಿಯಂಥ ಹಲವಾರು ಪತ್ರಿಕೆಗಳನ್ನು ಆಸ್ಪತ್ರೆಯು ಹೊರಡಿಸುವ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ.[೬೬] ವೈದ್ಯರಿಗೆ, ವೈದ್ಯಕೀಯ ಸಂಶೋಧಕರಿಗಾಗಿ ಹಾಗೂ ವೈದ್ಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹವಾನಿಯಂತ್ರಿತ ಅಂತರ್‌ಜಾಲದ ಆಧುನಿಕ ಗ್ರಂಥಾಲಯ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಇದರ ಪಕ್ಕದಲ್ಲಿಯೆ ಉಪಾಹಾರಮಂದಿರ ಮತ್ತು ಅಡುಗೆ ತಯಾರಿಕೆಗಾಗಿ ಪ್ರತ್ಯೇಕ ವಿಭಾಗಗಳನ್ನು ನಿರ್ಮಿಸಿ ರೋಗಿಗಳ ಮತ್ತು ಅವರ ಸಂಬಂಧಿಕರಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ.

ಆಸ್ಪತ್ರೆಯಲ್ಲಿ ಹೆಚ್ಚಿನ ಶಿಸ್ತು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ಇದೊಂದು ಮಾದರಿಯನ್ನಾಗಿಸಿದ್ದಾರೆ. ಕೆಲವು ಪ್ರಮುಖ ಸಮಿತಿಗಳನ್ನು ರಚಿಸಿ ಮತ್ತಷ್ಟು ಪರಿಣಾಮಕಾರಿಯಾಗಿ ಆರೋಗ್ಯ ಸೇವೆಯನ್ನುಗೈಯಲು ಆಸ್ಪತ್ರೆಯನ್ನು ಅಣಿಗೊಳಿಸಿದ್ದಾರೆ. ಆಸ್ಪತ್ರೆಯ ಮೂರನೇ ಅಂತಸ್ತಿನಲ್ಲಿ ಓಪಿಡಿ ಬ್ಲಾಕ್ (ಮಲಪ್ರಭಾ) ಯೋಜನೆ ಮುಕ್ತಾಯದ

ಹಂತದಲ್ಲಿದೆ. ಆಸ್ಪತ್ರೆಯ ೫ನೇ ಅಂತಸ್ತಿನಲ್ಲಿ ೬೫ ಹಾಸಿಗೆಗಳ ತೀವ್ರ ನಿಗಾ ಘಟಕದ ಕಟ್ಟಡ ಕಾಮಗಾರಿಯ ಅತ್ಯಂತ ವೇಗವಾಗಿ ನಡೆಯುತ್ತಿದೆ. ಈ ಹೊಸ ಕಾಮಗಾರಿಗಳಿಗೆ ಕೊಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ. ಹೊಸ ವಿಭಾಗಗಳಿಗೆ ಅನೂಕೂಲ ಒದಗಿಸಿ, ಆಸ್ಪತ್ರೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಶ್ರೀ ಕೋರೆಯವರ ಶ್ರಮದ ಅರಿವು ಆಗದೆ ಇರದು. ಆಸ್ಪತ್ರೆಯು ಇಂದು ವಿಶ್ವದ ಗಮನ ಸೆಳೆಯುವಂತೆ ಅಭಿವೃದ್ಧಿಪಡಿಸಿದ ಶ್ರೀ ಕೋರೆಯವರ ಕಾರ್ಯದಕ್ಷತೆಯನ್ನು ಈ ದೇಶದ ರಾಷ್ಟ್ರಪತಿಗಳು ಪ್ರಧಾನ ಮಂತ್ರಿಗಳು ಅನೇಕ ಮುಖ್ಯ ಮಂತ್ರಿಗಳು ಹಾಗೂ ವಿದೇಶದ ಗಣ್ಯರು ವೈದ್ಯಕೀಯ ಕ್ಷೇತ್ರದಲ್ಲಿನ ದಿಗ್ಗಜರು ಈ ಆಸ್ಪತ್ರೆಗೆ ಭೇಟಿಕೊಟ್ಟು ಮುಕ್ತವಾಗಿ ಪ್ರಶಂಸಿಸಿದ್ದಾರೆ.[೬೭]

ಅಮೇರಿಕದ ವೈದ್ಯಕೀಯ ಕ್ಷೇತ್ರದಲ್ಲಿ ಸಿಗುವ ಎಲ್ಲ ಆಧುನಿಕ ಸೌಲಭ್ಯಗಳು ನಮ್ಮ ಉತ್ತರ ಕರ್ನಾಟಕದ ಜನತೆಗೆ ಸಿಗಬೇಕು ಎನ್ನುವುದು ಕೋರೆಯವರ ಹೆಬ್ಬಯಕೆ. ಇಂದು ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರದಲ್ಲಿ ಅವು ಲಭ್ಯ. ದೇಶದಲ್ಲಿ ಬೃಹತ್ ಆಸ್ಪತ್ರೆಯನ್ನು ನಿರ್ಮಿಸಿ ದೇಶದ ವೈದ್ಯಕೀಯ ಕ್ಷೇತ್ರವೇ ಅಚ್ಚರಿಪಡುವಂತೆ ಅದನ್ನು ಅಭಿವೃದ್ಧಿಪಡಿಸುವ ಮೂಲಕ ವಿಶ್ವದ ಗಮನ ಸೆಳೆಯುವಂತೆ ಮಾಡಿದ ಶ್ರೀ ಪ್ರಭಾಕರ ಕೋರೆಯವರ ಸಾಧನೆ ಮುಂದಿನ ಜನಾಂಗಕ್ಕೂ ಆದರ್ಶವಾಗಿ ನಿಲ್ಲುವಂತಹದ್ದು. ದೇಶದಲ್ಲಿಯೇ ಬೃಹತ್ ಪ್ರಮಾಣದಲ್ಲಿ ಬಡ ಜನತೆಗಾಗಿ ೯೯೦ ಹಾಸಿಗೆಗಳ ಆಸ್ಪತ್ರೆಯನ್ನು ನಿರ್ಮಾಣಮಾಡಿ, ಮಾನವೀಯತೆಯ ಉನ್ನತ ಶಿಖರವನ್ನು ತಲುಪಿದ್ದಾರೆ. ಆ ಮೂಲಕ ಕರ್ನಾಟಕದ ಜನತೆಯ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಒಂದು ದಿವ್ಯ ಸಂಜೀವಿನಿಯಂತೆ ಈ ಆಸ್ಪತ್ರೆಯನ್ನು ನಿರ್ಮಾಣಮಾಡಿ, ಆರೋಗ್ಯ ಕ್ಷೇತ್ರಕ್ಕೆ ಅಮೋಘ ಕೊಡುಗೆಯನ್ನು ನೀಡಿದ್ದಾರೆ. ಈ ಆಸ್ಪತ್ರೆಯ ಮೂಲಕ ಇಂದು ಲಕ್ಷಾಂತರ ಜನ ರೋಗಿಗಳು ಆರೋಗ್ಯಭಾಗ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಇದು ಕೋರೆಯವರು ಆರೋಗ್ಯ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆಯಾಗಿದೆ.

ಶ್ರೀ ಪ್ರಭಾಕರ ಕೋರೆಯವರು ಒಬ್ಬ ಅದ್ಭುತ ಕನಸುಗಾರರು. ಆ ಕನಸುಗಳನ್ನು ನನಸಾಗಿಸಲು ನಿರಂತರ ಪ್ರಯತ್ನಿಸಿ, ದೃಢವಾದ ನಿರ್ಧಾರಗಳಿಂದ ಕಾರ್ಯವನ್ನು ಸಾಧಿಸುವ ಜಾಯಮಾನ ಅವರದು. ಆರೋಗ್ಯ ಕ್ಷೇತ್ರದ ಮೂಲಕ ಸಮಾಜಕ್ಕೆ ನೀಡಬೇಕಾದ ಕೊಡುಗೆ ಹಾಗೂ ಸಲ್ಲಿಸಬೇಕಾದ ಸೇವೆಯನ್ನು ಮತ್ತಷ್ಟು ವಿಸ್ತರಿಸಬೇಕು ಎಂದು ನಿರ್ಣಯಿಸಿದ ಇವರು, ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆ ಮುಖ್ಯ ಕೇಂದ್ರವನ್ನಾಗಿಸಿ, ಜಮಖಂಡಿ, ಮಹಾರಾಷ್ಟ್ರದ ಗಡಹಿಗ್ಲಂಜ, ಗೋಕಾಕ, ಹುಬ್ಬಳ್ಳಿಯಲ್ಲಿ ಹೊಸದಾಗಿ ಆಸ್ಪತ್ರೆಯನ್ನು ಪ್ರಾರಂಭಿಸುವ ಮೂಲಕ ಆ ಭಾಗದ ಜನರ ಆರೋಗ್ಯದ ಸಮಸ್ಯೆಗಳ ಪರಿಹಾರಕ್ಕೆ ಅಮೂಲ್ಯವಾದ ಕಾರ್ಯವನ್ನು ಮಾಡಿದ್ದಾರೆ. ಜಮಖಂಡಿಯಲ್ಲಿ ೩೦೦ ಹಾಸಿಗೆಯ ಸಾಮರ್ಥ್ಯದ ಅತ್ಯಾಧುನಿಕ ಸೌಲಭ್ಯಗಳುಳ್ಳ ಆಸ್ಪತ್ರೆಯನ್ನು ಸ್ಥಾಪಿಸುವ ಮೂಲಕ ಆ ಭಾಗದ ಜನರ ಆರೋಗ್ಯದ ಸಮಸ್ಯೆಗಳನ್ನು ಪರಿಹರಿಸಲು ಕಾರಣವಾಗಿದ್ದಾರೆ. ಹಾಗೆಯೇ ಗೋಕಾಕ ನಗರದಲ್ಲಿಯೂ ಆಸ್ಪತ್ರೆಯನ್ನು ಸ್ಥಾಪಿಸುವ ಮೂಲಕ ಅಲ್ಲಿ ೫೦೦ ಎಂ. ಎ. X-ray ಮತ್ತು ಭಾರವಿಲ್ಲದ ೧೦೦ಎಂ.ಎ. ಹಾಸಿಗೆಯ X-ray ಜೊತೆಗೆ ೨೪ ಗಂಟೆಗಳ ತುರ್ತು ಸೇವೆಯು ಜನರಿಗೆ ಸಿಗುವಂತೆ ಮಾಡಿದ್ದಾರೆ. ಇದರ ಜೊತೆಗೆ ವಿಷಧಿಯ ಪ್ರಯೋಗಾಲಯದ

ಮೂಲಕ ರೋಗಿಗಳ ಆರೈಕೆ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ.

ಹುಬ್ಬಳ್ಳಿ ನಗರದ ಸುತ್ತಲಿನ ಜನರ ಸತತ ಬೇಡಿಕೆಯಿಂದಾಗಿ ಹುಬ್ಬಳ್ಳಿ ನಗರದಲ್ಲಿ ರೂಪಾಯಿ ೬ ಕೋಟಿ ವೆಚ್ಚದ ಹೃದಯ ಶಸ್ತ್ರ ಚಿಕಿತ್ಸಾ ಘಟಕವನ್ನು ಪ್ರಾರಂಭಿಸುವ ಮೂಲಕ, ಜನರ ಭಾವನೆಗಳಿಗೆ ತೀವ್ರ ಸ್ಪಂದಿಸಿದ್ದಾರೆ. ಅಂಕೋಲಾದಲ್ಲಿರುವ ಕಮಲ್ ಆಸ್ಪತ್ರೆ ಹಾಗೂ ಸಂಶೋಧ ಕೇಂದ್ರಕ್ಕೂ ಎಲ್ಲ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ್ದಾರೆ. ಹುಬ್ಬಳ್ಳಿ ಆಸ್ಪತ್ರೆಯನ್ನು ಉತ್ತಮ ಗುಣಮಟ್ಟದ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಅಲ್ಲಿ ಹೃದಯರೋಗ, ರಕ್ತನಾಳ ವಿಭಾಗ, ನರರೋಗ, ಶ್ವಾಸಕೋಶ, ಗ್ಲಾಸ್ಟೋ ಇನ್ ಟಾಯಿಸಿನ್ ರೋಗ ಮತ್ತು ಸಾನೆ ರೋಗಿಗಳ ಚಿಕಿತ್ಸೆಯನ್ನು ಕೈಗೊಳ್ಳಲು ಅತ್ಯಾಧುನಿಕ ವೈದ್ಯಕೀಯ ಉಪಕರಣಗಳಾದ ಕ್ಯಾಥಲ್ಯಾಬ್ ಇನ್ ಫರ್ಟಿಲಿಟಿಯಿಟಿಯ ಬಗೆಗೆ ಅಬ್‌ಸ್ಟ್ರಾಯಿಟಿಕ್ ಮತ್ತು ಗಾಯನೋಯೊಕೊಲಾಜಿ ಮುಂತಾದ ವಿಭಾಗದವರು ಶಿಬಿರಗಳನ್ನು ಏರ್ಪಡಿಸಿದ್ದಾರೆ. ICU ಒಂದು EMT ಮಶಿನ್ ಕೂಡಿಸಿ ಇಕೊಕಾಡಿಯಾಯೊಗ್ರಫಿ ಹಾಗೂ ಅಲ್ಟ್ರಾಸೌಂಡ್ ಮಶಿನ್‌ಗಳಲ್ಲದೆ, ನಾನ್– ಇನ್ ವಯಸಿಸ್ ವೆಂಟಿಲೇಟ್, ಬ್ಲಡ್‌ಗ್ಯಾಸ್ ವಿಶ್ಲೇಷಕ ಹಾಗೂ ಡಯಾಲಿಸ್ ಮಶಿನ್, ಅಲ್ಲದೆ ಆಧುನಿಕ ತುರ್ತು ಮೊಬೈಲ್ ಅಂಬೂಲೆನ್ಸ್, ಸೆಟಲೈಟ್ ಲಿಂಕ್ ಸೇವೆಗಳು ಮೂಲ ಆಸ್ಪತ್ರೆಯೊಂದಿಗೆ ಸಂಪರ್ಕ ಹೊಂದುವಂತೆ ಮಾಡಿದ್ದಾರೆ.

ರೋಗಿಗಳಿಗೆ ಶೀಘ್ರ ಹಾಗೂ ಪರಿಣಾಮಕಾರಿ ಚಿಕಿತ್ಸೆಯ ಸೌಲಭ್ಯವನ್ನು ಕಡಿಮೆ ದರದಲ್ಲಿ ಒದಗಿಸುವ ವ್ಯವಸ್ಥೆಯನ್ನು ಮಾಡಿ ಆರೋಗ್ಯ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ವಿಸ್ತರಿಸಿ ಆಸ್ಪತ್ರೆಗಳ ಮೂಲಕ ಸಮಾಜಕ್ಕೆ ಉಪಯುಕ್ತ ಕೊಡುಗೆ ಸಲ್ಲಿಸುತ್ತಿದ್ದಾರೆ. ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಬಿ. ಎಂ. ಕಂಕಣವಾಡಿ ಆಯುರ್ವೇದಿಕ್ ಮಹಾವಿದ್ಯಾಲಯವನ್ನು ವಿಶ್ವದರ್ಜೆಯ ಮಹಾವಿದ್ಯಾಲಯವನ್ನಾಗಿ ಪರಿವರ್ತಿಸಲು ನಿರ್ಧರಿಸಿದ ಶ್ರೀ ಕೋರೆಯವರು, ಸುಮಾರು ೧೩ ಕೋಟಿ ರೂ. ಹಣವನ್ನು ವೆಚ್ಚಮಾಡಿ, ಅತ್ಯಾಧುನಿಕ ಆಸ್ಪತ್ರೆಯನ್ನು ನಿರ್ಮಿಸಿ ಆ ಮೂಲಕ ವಾರ್ಷಿಕ ಸುಮಾರು ೨೫ ಸಾವಿರಕ್ಕೂ ಅಧಿಕ ಜನ ರೋಗಿಗಳ ಆರೈಕೆಗೆ ಅನುಕೂಲ ಕಲ್ಪಿಸಿ ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಗಣನೀಯವಾದ ಕೊಡುಗೆಯನ್ನು ನೀಡಿ ಸಮಾಜದ ಬಹುದೊಡ್ಡ ಆಸ್ತಿ ಎನಿಸಿದ್ದಾರೆ.[೬೮]

ಹುಬ್ಬಳ್ಳಿಯಲ್ಲಿ ೨೫ ಎಕರೆ ನಿವೇಶನ ಬೆಂಗಳೂರಿನಲ್ಲಿಯೂ ನಿವೇಶನ ಗುರ್ತಿಸಿ ಕಾರ್ಯ ಪ್ರಾರಂಭಿಸಿದ್ದಾರೆ. ಗೋವಾ ರಾಜ್ಯದ ಪಣಜಿಯಲ್ಲಿಯೂ ಕೆ.ಎಲ್.ಇ. ಆಸ್ಪತ್ರೆಯ ಶಾಖೆಯನ್ನು ಆರಂಭಿಸಿ, ವೈದ್ಯಕೀಯ ಕ್ಷೇತ್ರದಲ್ಲಿ ಕೆ.ಎಲ್.ಇ. ಸೇವಾಕ್ಷೇತ್ರದ ವಿಸ್ತರಣೆಗೆ ಕಾರಣರಾಗಿದ್ದಾರೆ. ಈಗಾಗಲೇ ಜಾರಿಯಲ್ಲಿರುವ ಟೆಲಿಮೆಡಿಸನ್ ಸೇವಾ ಸೌಲಭ್ಯಗಳನ್ನು ಹೆಚ್ಚು ಪ್ರಚಾರಗೊಳಿಸಿ, ಅದರ ಸೇವೆಯ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವ ಗುರಿ ಹೊಂದಿದ್ದಾರೆ.[೬೯]

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೀ ಕೋರೆಯವರ ಭವಿಷ್ಯತ್ತಿನ ಯೋಜನೆಗಳು :

ಶ್ರೀ ಪ್ರಭಾಕರ ಕೋರೆಯವರ ವಿಚಾರಗಳು ನಿಂತ ನೀರಲ್ಲ. ಅವು ಸದಾ ಹರಿಯುವ ನೀರಿನಂತೆ. ಅವರು ಸಮಾಜಕ್ಕಾಗಿ ಮಾಡಬೇಕಾದ ಸೇವೆಗೆ ಕೊನೆ ಎಂಬುದಿಲ್ಲ. ನಿರಂತರವಾಗಿ ಮಾಡುತ್ತಲೆ ಇರಬೇಕೆನ್ನುವ

ಜಾಯಮಾನದವರು. ಕೆ.ಎಲ್.ಇ. ಸಂಸ್ಥೆ ಆರೋಗ್ಯ ಕ್ಷೇತ್ರದಲ್ಲಿ ಇನ್ನಷ್ಟು ಸೇವೆಯನ್ನು ಸಮಾಜಕ್ಕೆ ನೀಡಬೇಕೆನ್ನುವುದು ಶ್ರೀ ಕೋರೆಯವರ ಹಂಬಲ. ಅದಕ್ಕಾಗಿಯೇ ಮುಂಬೈ ನಗರದಲ್ಲಿ ಇರುವ "ಟಾಟಾ ಮೆಮೊರಿಯಲ್" ಆಸ್ಪತ್ರೆಯ ಮಾದರಿಯಲ್ಲಿ ಬೆಳಗಾವಿಯಲ್ಲಿ ವಿಶ್ವದರ್ಜೆಯ ಬೃಹತ್ ಕ್ಯಾನ್ಸರ್ ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆನ್ನುವ ಕನಸು ಅವರದಾಗಿದೆ. ಕರ್ನಾಟಕ ರಾಜ್ಯದಲ್ಲಿನ ಕ್ಯಾನ್ಸರ್ ರೋಗಿಗಳಿಗೆ ಅನುಕೂಲ ಕಲ್ಪಿಸಬೇಕೆಂಬುದು ಅವರ ಹೆಬ್ಬಯಕೆ. ಆ ನಿಟ್ಟಿನಲ್ಲಿ ಈಗ ಕಾರ್ಯಪ್ರವೃತ್ತರಾಗಿದ್ದಾರೆ. ಹುಬ್ಬಳ್ಳಿ, ಬೆಂಗಳೂರು, ಪುಣೆ, ಗೋವಾದಲ್ಲಿಯೂ ಆಸ್ಪತ್ರೆಗಳನ್ನು ನಿರ್ಮಿಸಿ, ಸಂಸ್ಥೆಯ ವೈದ್ಯಕೀಯ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ಆಲೋಚನೆಯಲ್ಲಿದ್ದಾರೆ.

ನಮ್ಮವರು ಹಾಗೂ ವಿದೇಶಿಗರು ಈ ಆಸ್ಪತ್ರೆಗೆ ಆಗಮಿಸಿ, ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಪ್ರಸ್ತುತ ೨೦೦೯ರಲ್ಲಿ ಸಾಂಪ್ರದಾಯಿಕ ಮತ್ತು ಒಂದು ಒಡೆತನದ ಹಕ್ಕಿನ ಉತ್ಪನ್ನಗಳಾದ "ಸುವರ್ಣಬಿಂದು ಪ್ರಾಶನ" ತಯಾರಿಸುವ ಔಷಧಿ ಲೈಸೆನ್ಸನ್ನು ಬೆಂಗಳೂರಿನ ಆಯುಷ್ ಪ್ರಾಧಿಕಾರದಿಂದ ಪಡೆದಿದೆ. ಇಂಗ್ಲೆಂಡ್‌ನ ಮಿಡ್ಲಸೆಕ್ಸ್ ವಿಶ್ವವಿದ್ಯಾಲಯದ ನಿಯೋಗವು ಇತ್ತೀಚೆಗೆ ಭೇಟಿ ನೀಡಿ, ಶುಶ್ರೂಷೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿ ಆಯುರ್ವೇದದ ಮಹತ್ವವನ್ನು ಜಾಗತಿಕ ಮಟ್ಟಕ್ಕೆ ಏರಿಸುವುದರ ಮೂಲಕ ಈ ಆಸ್ಪತ್ರೆಯ ಆಧುನೀಕರಣದ ಶಿಲ್ಪಿ ಎನಿಸಿದ್ದಾರೆ. ಇಂಗ್ಲೆಂಡ್‌ನ ೧೨ ಜನ ವಿದ್ಯಾರ್ಥಿಗಳು ಈ ಆಸ್ಪತ್ರೆಯ ಮೂಲಕ ತರಬೇತಿಯನ್ನು ಹೊಂದಿರುವರಲ್ಲದೇ, ಯು.ಕೆ. ವಿ.ವಿಯ ಉಪಕುಲಪತಿ ಮತ್ತು ಡೀನ್‌ರಾದ ಜಾನ್ ವಿಲಿಯಮ್ಸ್‌ರ ನೇತೃತ್ವದಲ್ಲಿ ಅನೇಕರು ಈ ಆಸ್ಪತ್ರೆಗೆ ಭೇಟಿ ನೀಡಿ, ಇಲ್ಲಿಯ ಸೌಲಭ್ಯಗಳನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತಮ್ಮ ವಿಶ್ವ ವಿದ್ಯಾಲಯವನ್ನು ಕೆ.ಎಲ್.ಇ. ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರದೊಂದಿಗೆ ಒಪ್ಪಂದಕ್ಕೆ ಮುಂದಾಗಿರುವುದು, ಈ ಆಸ್ಪತ್ರೆಯ ಸಾಧನೆಗೆ ಹಿಡಿದ ಕನ್ನಡಿಯಾಗಿದೆ. ಅಲ್ಲದೇ ದಕ್ಷಿಣ ಆಫ್ರಿಕಾದ ರೋಡ್ಸ್ ವಿಶ್ವವಿದ್ಯಾಲಯದ ನಿಯೋಗಗಳು ಆಸ್ಪತ್ರೆಗೆ ಭೇಟಿ ನೀಡಿ, ಇಲ್ಲಿನ ಸೌಲಭ್ಯಗಳು, ನಡೆಯುತ್ತಿರುವ ಸಂಶೋಧನೆಗಳು ಹಾಗೂ ಇಲ್ಲಿನ ಬೋಧನಾ ವಿಧಾನಗಳನ್ನು ಕಂಡು ಮುಕ್ತವಾಗಿ ಪ್ರಶಂಸಿಸಿವೆ.

ಈ ಆಯುರ್ವೇದ ಮಹಾವಿದ್ಯಾಲಯದಲ್ಲಿ ಪ್ರತಿ ವರ್ಷ ಒಂದು ಲಕ್ಷಕ್ಕೂ ಅಧಿಕ ಪ್ರಮಾಣದಲ್ಲಿ ರೋಗಿಗಳು ಆಯುರ್ವೇದ ಚಿಕಿತ್ಸೆಯ ಪ್ರಯೋಜನ ಪಡೆಯುತ್ತಿದ್ದಾರೆ. ಇದರ ಜೊತೆಗೆ ಉಚಿತವಾದ ಉಪಚಾರ ಪಡೆಯುವ ವ್ಯವಸ್ಥೆಯನ್ನು ಶ್ರೀ ಕೋರೆಯವರು ಕಲ್ಪಿಸುವ ಮೂಲಕ ಮಾನವೀಯತೆಯನ್ನು ಮೆರೆದಿದ್ದಾರೆ. ೨೦೦೯ರಲ್ಲಿ ಪಂಚಕರ್ಮ ಥೆರಪಿಯ ಪ್ರಯೋಜನವನ್ನು ೪೫,೦೦೦ ರೋಗಿಗಳು ಪಡೆದಿದ್ದಾರೆ. ಇದರ ಜೊತೆಗೆ ಹೈ-ಟೆಕ್-ಪಂಚಕರ್ಮ ಯಂತ್ರೋಪಕರಣವಾದ ಸ್ವಯಂ ಚಾಲಿತ ಶಿರೋಧರ ಯಂತ್ರದ ಉಪಚಾರವನ್ನು ಪಡೆಯುತ್ತಿದ್ದಾರೆ. ಸುಮಾರು ೭೪ ಶಿಬಿರಗಳನ್ನು ನಡೆಯಿಸಿ, ಅಧಿಕ ಸಂಖ್ಯೆಯ ಜನರು ಇದರ ಲಾಭವನ್ನು ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಈ ಆಸ್ಪತ್ರೆಯು 'ಸುವರ್ಣಬಿಂದು' ಕಾರ್ಯಕ್ರಮದ ಅಡಿಯಲ್ಲಿ. ೫ ವರ್ಷದ ಒಳಗಿನ ೫೦ ಸಾವಿರ ಮಕ್ಕಳಿಗೆ ಮಾನಸಿಕ ಬುದ್ಧಿಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಲಸಿಕೆಯನ್ನು ಹಾಕುವ ಮೂಲಕ ನೂತನವಾದ ದಾಖಲೆಯನ್ನು ಸ್ಥಾಪಿಸಿದೆ. ಇದರ ಜೊತೆಗೆ ಆಯುರ್ವೇದ ಸಂಶೋಧನ ಕೇಂದ್ರವನ್ನು ಸ್ಥಾಪಿಸಿ, ಅತ್ಯಾಧುನಿಕ ೮ ಸ್ನಾತಕೋತ್ತರ

ವಿಭಾಗಗಳನ್ನು ಆರಂಭಿಸಿದ್ದಾರೆ. ಈ ಭಾಗದ ಆಯುರ್ವೇದ ಮಹಾವಿದ್ಯಾಲಯಗಳಲ್ಲಿ ಶ್ರೇಷ್ಠವಾದ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರವನ್ನಾಗಿಸಿ ಅಭಿವೃದ್ಧಿಪಡಿಸಿ ಲಕ್ಷಾಂತರ ರೋಗಿಗಳಿಗೆ ನೆರವನ್ನು ಒದಗಿಸಿದ್ದಾರೆ. ದೇಶ ವಿದೇಶಗಳ ಸಹಸ್ರಾರು ವಿದ್ಯಾರ್ಥಿಗಳು ಆಯುರ್ವೇದದಲ್ಲಿ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಅನುಕೂಲ ಕಲ್ಪಿಸುವ ಮೂಲಕ ಅವರ ಭವಿಷ್ಯವನ್ನು ರೂಪಿಸಿದ ಹೆಗ್ಗಳಿಕೆ ಶ್ರೀ ಕೋರೆಯವರದು.

ರಾಜ್ಯದ ಬೇರೆ ಬೇರೆ ಭಾಗವಲ್ಲದೇ, ಗೋವಾ ಹಾಗೂ ಮಹಾರಾಷ್ಟ್ರ ರಾಜ್ಯದಲ್ಲಿಯೂ ಕೆ.ಎಲ್.ಇ. ಸಂಸ್ಥೆಯ ಆರೋಗ್ಯ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಿ ಸಾಕಷ್ಟು ಜನರಿಗೆ ಸೇವೆಯನ್ನು ಸಲ್ಲಿಸುವ ಅವಕಾಶವನ್ನು ಕಲ್ಪಿಸಿದ್ದಾರೆ. ಈ ಆಸ್ಪತ್ರೆಗಳ ಮೂಲಕ ಬಡ ಜನತೆಗಾಗಿ ಉಚಿತ ವೈದ್ಯಕೀಯ ಸೇವೆ ಶಸ್ತ್ರಚಿಕಿತ್ಸೆಯನ್ನು ಪರಿಣಾಮಕಾರಿ ಶಸ್ತ್ರ ಚಿಕಿತ್ಸೆ ಶೀಘ್ರವಾಗಿ ದೊರೆಯುವಂತೆ ಮಾಡಿದ ಶ್ರೀ ಕೋರೆಯವರು ಆ ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕೆ.ಎಲ್.ಇ. ವಿಶ್ವವಿದ್ಯಾಲಯದ ಸ್ಥಾನಮಾನ ದೊರಕಿಸುವಲ್ಲಿ ಶ್ರೀ ಕೋರೆಯವರ ಪಾತ್ರ :

೧೯೬೩ ರಲ್ಲಿ ಕೆ.ಎಲ್.ಇ. ಸಂಸ್ಥೆಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯವನ್ನು ಅತ್ಯಂತ ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ, ಈ ಕಾಲಕ್ಕೆ ಅಗತ್ಯವಿರುವ ಹೊಸ ವೈದ್ಯಕೀಯ ಶಿಕ್ಷಣದ ವಿಭಾಗಗಳನ್ನು ಆರಂಭಿಸಿ, ಗುಣಮಟ್ಟದ ಶಿಕ್ಷಣಕ್ಕೂ ಆದ್ಯತೆಯನ್ನು ನೀಡಿ, ದೇಶ ವಿದೇಶಗಳಲ್ಲಿ ಈ ಮಹಾವಿದ್ಯಾಲಯದ ಕೀರ್ತಿ ಹೆಚ್ಚಿಸುವಂತೆ ಶ್ರೀ ಕೋರೆಯವರು ಪ್ರಯತ್ನಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯೇ ಪ್ರಥಮವಾಗಿ ಯು.ಜಿ.ಸಿ. ನವದೆಹಲಿಯಿಂದ ಸ್ವಾಯತ್ತ ಸ್ಥಾನಮಾನವನ್ನು (ಡೀಮ್ಡ್) ಪಡೆದುಕೊಳ್ಳುವಂತೆ ಮಾಡಿದ್ದಾರೆ. ದೂರದೃಷ್ಟಿ ಹಾಗೂ ನಿರಂತರ ಪರಿಶ್ರಮ ಅಗತ್ಯಕ್ಕೆ ತಕ್ಕಂತೆ ಒದಗಿಸಿದ ಸೌಲಭ್ಯಗಳ ಫಲವಾಗಿ ಇಂದು ಈ ಮಹಾವಿದ್ಯಾಲಯವು ಸ್ವತಂತ್ರ ವಿಶ್ವವಿದ್ಯಾಲಯದ ಸ್ಥಾನಮಾನ ಹೊಂದಿದೆ. ಅನೇಕ ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳು ಕೆ.ಎಲ್.ಇ. ವೈದ್ಯಕೀಯ ವಿದ್ಯಾಲಯದದೊಂದಿಗೆ ಮಾಡಿಕೊಂಡಿವೆ.[೨೦]

ಶ್ರೀ ಪ್ರಭಾಕರ ಕೋರೆಯವರು ಒಬ್ಬ ರಾಜಕೀಯ ನಾಯಕರಲ್ಲದೇ, ವೈದ್ಯಕೀಯ ಹಾಗೂ ಆರೋಗ್ಯ ಕ್ಷೇತ್ರದಲ್ಲೂ ತಜ್ಞರೆನಿದ್ದಾರೆ. ಜಗತ್ತಿನ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸುವ ಅವರು, ತಕ್ಷಣ ಕಾರ್ಯ ಪ್ರವೃತ್ತರಾಗಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ, ಈಗಿನ ವೈದ್ಯಕೀಯ ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ಆಸಕ್ತಿಯನ್ನು ಹೊಂದಿರುತ್ತಾರೋ, ಆ ಕೋರ್ಸ್‌ಗಳು ಲಭಿಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದಾರೆ. ಹಾಗೆಯೇ ಅವುಗಳನ್ನು ಪ್ರಾರಂಭಿಸುವ ಮೂಲಕ ಹೊಸ ವೈದ್ಯಕೀಯ ಸಂಶೋಧನಾ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಲು ಅನುಕೂಲ ಕಲ್ಪಿಸಿದ್ದಾರೆ. ಉದಾಹರಣೆಗೆ ಇತ್ತೀಚೆಗೆ ಕೆ.ಎಲ್.ಇ. ವಿಶ್ವವಿದ್ಯಾಲಯ ಅನೇಕ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿ. ಎಮ್.ಎಸ್.ಸಿ. ಯಿಕೊಕಾರ್ಡಿಯೊಗ್ರಾಫಿ ಫೆಲೋಶಿಪ್‌ನ ಕಾರ್ಡಿಯೊಲಾಜಿ ಕ್ಲಿನಿಕಲ್ ಪೆಡಿಯಾಟ್ರಿಕ್, ಕಾರ್ಡಿಯೊಲಾಜಿ ಪಿಡಿಯಾಟ್ರಿಕ್ ಯುರೋಲಾಜಿ, ಮೈಕ್ರೋ ಇಯರ್ ಸರ್ಜರಿ ಸ್ಪೋರ್ಟ್ಸ್ ಮೆಡಿಸಿನ್, ಕ್ಲಿಷ್ಟ ಮತ್ತು ಕಾರ್ನಿಯೊಪೊಲಿಶಿಯಲ್ ಸರ್ಜರಿ. ಪಿ.ಜಿ. ಡಿಪ್ಲೋಮಾ ಕೋರ್ಸ್‌ಸ್ ಇನ್ ಸ್ಮಾಲ್ ಇನ್‌ಸಿಸನ್

ಕ್ಯಾಟರಾಕ್ಟ ಸರ್ಜರಿ ಮತ್ತು ಓಕಲ್ ಮತ್ತು ಪೆರಕ್ಯೂಸನ್ ಸಂಗೀತ, ಅಲ್ಲದೇ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆಯಲ್ಲಿ ಆಧುನಿಕ ಜಗತ್ತಿನ ವೈದ್ಯಕೀಯ ಕ್ಷೇತ್ರದ ಅವಶ್ಯಕತೆಗಳಿಗೆ ಅನುಗುಣವಾಗಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ಹೊಸ ಇತಿಹಾಸದ ಮೈಲುಗಲ್ಲುಗಳನ್ನು ಸ್ಥಾಪಿಸಿದ ಕೀರ್ತಿ ಶ್ರೀ ಕೋರೆಯವರದ್ದಾಗಿದೆ.[೭೧]

ದೇಶ ವಿದೇಶಗಳಲ್ಲಿನ ವಿಶ್ವವಿದ್ಯಾಲಯಗಳು ಈ ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿರುವ ಸೌಲಭ್ಯ ಹಾಗೂ ಕಾರ್ಯಚಟುವಟಿಕೆಯಿಂದ ಪ್ರಭಾವಿತವಾಗಿ ತಮ್ಮ ದೇಶಗಳಿಗೂ ಕೆ.ಎಲ್.ಇ. ವೈದ್ಯಕೀಯ ಶಿಕ್ಷಣದ ನೆರವು ಬೇಕು ಎಂದು ಅಹವಾಲುಗಳನ್ನು ಸಲ್ಲಿಸುತ್ತಿರುವುದು ಶ್ರೀ ಕೋರೆಯವರ ಶ್ರಮಕ್ಕೆ ಸಂದ ಗೌರವವಾಗಿದೆ. ಇದು ಇಡೀ ದೇಶವೇ ಹೆಮ್ಮೆಯಿಂದ ಬೀಗುವಂತಹ ಸಂಗತಿ. ಈ ಹಿನ್ನೆಲೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯದ ಕಾರ್ಯಚಟುವಟಿಕೆಗಳಿಂದ ಪ್ರಭಾವಿತವಾಗಿ, ೧೯೯೮ರಲ್ಲಿ ಅಮೇರಿಕೆಯ ಇಲಿನಾಯ್ಸ್ ವಿಶ್ವವಿದ್ಯಾಲಯವು ವೈದ್ಯಕೀಯ ಕ್ಷೇತ್ರದಲ್ಲಿ ಶೈಕ್ಷಣಿಕ ಸಹಯೋಗವನ್ನು ಸಾಧಿಸುವ ಒಪ್ಪಂದ ಮಾಡಿಕೊಂಡಿರುವುದು ಒಂದು ಐತಿಹಾಸಿಕ ಸಾಧನೆಯಾಗಿದೆ.

೨೦೦೦ದಲ್ಲಿ ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯ ಮತ್ತು ಸಂಡರ್‌ಲ್ಯಾಂಡ್ (ಯು.ಕೆ.) ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಸಹಯೋಗವನ್ನು ಸಾಧಿಸಿರುವುದು ಈ ಸಂಸ್ಥೆಯ ಹೆಮ್ಮೆಯಾಗಿದೆ. ೨೦೦೨ರಲ್ಲಿ ಕೆ.ಎಲ್.ಇ. ಸಂಸ್ಥೆಯು ಮಲೇಷಿಯಾದ ಪೆರಿಕ್ ರಾಜ್ಯದ ಜೊತೆಗೆ ವೈದ್ಯಕೀಯ ಕ್ಷೇತ್ರದ ಅಭಿವೃದ್ಧಿಗಾಗಿ ಒಪ್ಪಂದ ಮಾಡಿಕೊಂಡಿರುವುದು ಈ ವೈದ್ಯಕೀಯ ಮಹಾವಿದ್ಯಾಲಯದ ಘನತೆಗೆ ಸಾಕ್ಷಿಯಾಗಿದೆ.[೭೨]

ಬೆಳಗಾವಿ ಜಿಲ್ಲೆಯ ಹಳ್ಳಿಗಳಲ್ಲಿ ನಡೆಯುವ ಶಿಶುಹತ್ಯೆ, ಭ್ರೂಣಹತ್ಯೆಗಳ ಮೇಲೆ ಸಂಶೋಧನೆಯನ್ನು ನಡೆಸಿ, ಅದಕ್ಕೆ ಕಡಿವಾಣ ಹಾಕಿಸುವಲ್ಲಿಯೂ ಯಶಸಾಧಿಸಿದ್ದಾರೆ. ಅಮೇರಿಕಾದ ೬ ಆರೋಗ್ಯ ವಿಶ್ವವಿದ್ಯಾಲಯಗಳ ಜೊತೆಗೆ ಕೆ.ಎಲ್.ಇ. ಆರೋಗ್ಯ ಸಂಶೋಧನ ಕೇಂದ್ರವು ಕಾರ್ಯನಿರತವಾಗಿದೆ. ಅಮೆರಿಕಾ ಮತ್ತು ಜಾಗತಿಕ ಆರೋಗ್ಯ ಸಂಸ್ಥೆಯಿಂದ ಅನುದಾನವನ್ನು ಪಡೆಯುತ್ತಿರುವ ಸಂಶೋಧನ ಕೇಂದ್ರವು ಭಾರತದ ಕೆಲವೇ ಕೇಂದ್ರಗಳಲ್ಲಿ ಒಂದಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ವಿಶ್ವವಿಖ್ಯಾತ, ಸಂಶೋಧನ ಅಭ್ಯರ್ಥಿಗಳು ಈ ಸಂಶೋಧನ ಕೇಂದ್ರಕ್ಕೆ ಭೇಟಿ ಕೊಟ್ಟಿದ್ದಾರೆ. ಡಾ. ಮಿಸ್ ಲಿಂಡಾ ರೈಸ್, ಡೆಪ್ಯುಟಿ ಡೈರೆಕ್ಟರ್ ಮಹಿಳಾ ಮತ್ತು ಆರೋಗ್ಯ ಸಂಶೋಧನೆಯ ಮಾನವ ಅಭಿವೃದ್ಧಿ ಕುರಿತಾದ ರಾಷ್ಟ್ರೀಯ ಸಂಸ್ಥೆ ಅಮೇರಿಕಾ, ಇವರು ಭೇಟಿ ನೀಡಿ ಪ್ರಶಂಸಿಸಿದ್ದಾರೆ. ಹಾಗೆಯೇ ಮಿಚಿಗನ್‌ನ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್‌ದ ಪ್ರೊ. ಕೆನ್ನಿಥ್ ವಾರ್ನರ್, ಡೀನ್ ಅವರಲ್ಲದೇ ಡಾ. ಮಾರ್ಕ್ ವಿಲ್ಸನ್ ಅಮೇರಿಕಾದವರಾದ ಇವರ ಜೊತೆಗೆ ರಿಪಬ್ಲಿಕ್ ಆಫ್ ಜಾಂಬಿಯಾದ ಉಪಾಧ್ಯಕ್ಷರಾದ ರೂಪಿಯಾ ಬಂಡಾ ಹಾಗೂ ಆ ದೇಶದ ಶಿಕ್ಷಣ ಸಚಿವರಾದ ಶ್ರೀ ಲುಂಗ್ ವಾಂಗ್ವ ಭೇಟಿ ನೀಡಿ, ನಮ್ಮ ದೇಶದಲ್ಲಿ ಕೆ.ಎಲ್.ಇ. ವಿಶ್ವವಿದ್ಯಾಲಯವು ತನ್ನ ಸೇವೆಯನ್ನು ನೀಡಬೇಕು ಎಂದು ಮನವಿ ಮಾಡಿಕೊಂಡಿರುವುದು ಕೆ.ಎಲ್.ಇ. ವಿಶ್ವವಿದ್ಯಾಲಯಕ್ಕೆ ತಕ್ಕುದಾದ ಗೌರವವಾಗಿದೆ. ಅದೇ ರೀತಿ ಚೀನಾ ದೇಶದ ಶೇನ್ ವಿಹಿಂಗ್ ಭೇಟಿನೀಡಿ. ಈ ವೈದ್ಯಕೀಯ ವಿಶ್ವವಿದ್ಯಾಲಯದ ಕಾರ್ಯವನ್ನು

ಶ್ಲಾಘಿಸಿ, ತಮ್ಮ ದೇಶದಲ್ಲಿಯೂ ಶಾಖೆಗಳನ್ನು ಪ್ರಾರಂಭಿಸುವಂತೆ ಆಹ್ವಾನಿಸುವ ಮೂಲಕ, ಕೆ.ಎಲ್.ಇ. ಸಂಸ್ಥೆಯ ಇತಿಹಾಸವನ್ನು ವಿದೇಶಗಳಿಗೂ ಹಬ್ಬಿಸಿದ ಶ್ರೇಯಸ್ಸು ಕೋರೆಯವರದ್ದಾಗಿದೆ.[೭೩]

ಜೆ.ಎನ್.ಎಂ.ಸಿ. ಮಹಿಳಾ ಮತ್ತು ಮಕ್ಕಳ ಆರೋಗ್ಯ ಸಂಶೋಧ ಘಟಕದ ಪರಿಶ್ರಮದ ಫಲವಾಗಿ, ಅಂತರಾಷ್ಟ್ರೀಯ ಅಣುಶಕ್ತಿ ಏಜನ್ಸಿ ಮತ್ತು ಅಮೇರಿಕಾದ ಮೆಲಿಟಾಗೋಟ್ಸ್ ಅಕಾಡೆಮಿಗಳು ಈ ಯೋಜನೆಗೆ ಆರ್ಥಿಕ ನೆರವು ನೀಡಲು ಮುಂದಾಗಿದ್ದು, ಈ ಸಂಸ್ಥೆಯ ಮಹತ್ತರವಾದ ಸಾಧನೆಯಾಗಿದೆ. ಅಮೇರಿಕಾದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯು, ಈ ಸಂಶೋಧನ ಸಂಸ್ಥೆಗಳ ಕಾರ್ಯ ಸಾಧನೆಗಳನ್ನು ಮೆಚ್ಚಿ, ಡಾ. ಪ್ರಭಾಕರ ಕೋರೆ, ಕುಲಾಧಿಪತಿಗಳು ಕೆ.ಎಲ್.ಇ. ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಇದರ ಕುಲಪತಿಗಳಾದ ಡಾ. ಚಂದ್ರಕಾಂತ ಕೋಕಾಟೆ ಇವರನ್ನು ಜೂನ್ ೨೦೦೯ರಲ್ಲಿ ಅಮೇರಿಕದ ವಾಷಿಂಗ್ಟನ್‌ದಲ್ಲಿ ಜರುಗಿದ ಮಹಿಳಾ ಮತ್ತು ಮಕ್ಕಳ ಆರೋಗ್ಯ ಸಂಶೋಧನೆಯ ಸ್ಥಾಯಿ ಸಮಿತಿಯ ನಿರ್ದೇಶನಾಲಯದ ಸಮಿತಿಯ ಸಮಾರಂಭವನ್ನು ಉದ್ದೇಶಿಸಿ ಮಾತನಾಡಲು ಆಹ್ವಾನಿಸಿದರು. ಈ ಸಂದರ್ಭದಲ್ಲಿ ಕೆ.ಎಲ್.ಇ. ವಿಶ್ವವಿದ್ಯಾಲಯ ಮತ್ತು ಬರ್ಮಿಂಗ್ ಹ್ಯಾಮ್‌ನ ಅಲಿಬಾವು ವಿಶ್ವವಿದ್ಯಾಲಯದ ಜೊತೆ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ಒತ್ತು ಕೊಡಲು ನಿರ್ಧರಿಸಲಾಗಿದೆ. ಕೆ.ಎಲ್.ಇ. ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಪ್ರಭಾಕರ ಕೋರೆಯವರು ವಿಶ್ವದ ಪ್ರಸಿದ್ಧ ಸಂಶೋಧಕರೊಂದಿಗೆ ಸಂವಾದವನ್ನು ನಡೆಸಿ, ಭಾರತದ ಗ್ರಾಮೀಣ ಪ್ರದೇಶದಲ್ಲಿನ ಹೆರಿಗೆ ಮತ್ತು ನವಜಾತ ಶಿಶುಗಳ ಆರೈಕೆ ಕುರಿತು ಸಮುದಾಯ ಆಧಾರಿತ ಸಂಶೋಧನೆಯನ್ನು ನಡೆಸುವುದಾಗಿ ಆಶ್ವಾಸನೆಯಿತ್ತರು. ಇದು ಭಾರತದ ಗ್ರಾಮೀಣ ಭಾಗದ ಹೆಣ್ಣು ಮಕ್ಕಳ ಹಾಗೂ ಶಿಶುಗಳ ಬಗೆಗಿನ ವಿಶೇಷವಾದ ಕಳಕಳಿಯನ್ನು ಸಾಬೀತುಪಡಿಸುತ್ತದೆ. ಭಾರತದ ಕೀರ್ತಿಯನ್ನು ಹೆಚ್ಚಿಸುವ ಕಾರ್ಯವನ್ನು ಶ್ರೀ ಕೋರೆಯವರು ಜಾಗತಿಕ ಮಟ್ಟದಲ್ಲಿ ಭಾರತದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ಮೂಲಕ ಮಾಡುತ್ತಿರುವುದು ಹೆಮ್ಮೆಯನ್ನು ತರುವ ಕಾರ್ಯವಾಗಿದೆ.

ಕೆ.ಎಲ್.ಇ. ಸಂಸ್ಥೆ ಬೆಳಗಾವಿ ಮತ್ತು ಮಲೇಷಿಯಾದ ವಿದ್ಯಾರ್ಥಿಗಳಿಗೆ, ಯು.ಎಸ್.ಎಂ ವೈದ್ಯಕೀಯ ವಿಜ್ಞಾನ ಪಠ್ಯಕ್ರಮದಲ್ಲಿ ತರಬೇತಿ ನೀಡುವ ಗುರಿಯನ್ನು ಹೊಂದಿದೆ. ಪ್ರತಿ ವರ್ಷ ೧೦೦ ವಿದ್ಯಾರ್ಥಿಗಳಿಗೆ ಜೂನ್ ೨೦೧೦ರಿಂದ ಕೆ.ಎಲ್.ಇ. ಸಂಸ್ಥೆಯು ತರಬೇತಿ ನೀಡಲು ಒಪ್ಪಿಕೊಂಡಿದೆ. ಮಲೇಷಿಯಾ ಸರಕಾರದ ನೆರವಿನೊಂದಿಗೆ ಯು.ಎಸ್.ಎಂ. ವಿಶ್ವವಿಶ್ವವಿದ್ಯಾಲಯ ಪದವಿ ಪ್ರದಾನ ಮಾಡುವುದು.[೭೪] ಬೆಳಗಾವಿ ಕೆ.ಎಲ್.ಇ ಮತ್ತು ದಕ್ಷಿಣ ಆಫ್ರಿಕಾ ದೇಶದ ರೋಡ್ಸ್ ವಿಶ್ವವಿದ್ಯಾಲಯಗಳ ಮಧ್ಯೆ (ಎಂ.ಓ.ಯು) ಒಪ್ಪಂದವನ್ನು ಶ್ರೀ ಪ್ರಭಾಕರ ಕೋರೆಯವರು ಹಾಗೂ ದಕ್ಷಿಣ ಆಫ್ರಿಕಾ ದೇಶದ ಪರವಾಗಿ ಡಾ. ಸಲೀಮ್ ಬಾದಲ್, ವೈಸ್ ಚಾನ್ಸಲರ್ ಇವರಿಬ್ಬರು ಮಾಡಿಕೊಂಡಿರುವುದು ಗಮನಾರ್ಹ.

ಬೆಳಗಾವಿಯಲ್ಲಿ ಶ್ರೀ ಕೋರೆಯವರು HIV (ಏಡ್ಸ್) ಪೀಡಿತ ಮಹಿಳೆಯರ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಕ್ಯಾನ್ಸರ್ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಆ ರೋಗಗಳು ಬರದಂತೆ ತಡೆಯುವ ಸಂಶೋಧನೆಗೆ ಅನುದಾನವ

ಸಹಾಯದಿಂದ ಕೆ.ಎಲ್.ಇ. ಡಾ. ಪ್ರಭಾಕರ ಕೋರೆಯವರ ಆಸ್ಪತ್ರೆಯಲ್ಲಿ Preventive Gynecologic ಘಟಕವನ್ನು ಪ್ರಾರಂಭಿಸಿದರು. ಈ ಕೇಂದ್ರವು ಶ್ರಮಿಕರ (ಕೆಲಸಗಾರರ) ಕ್ಯಾನ್ಸರ್‌ನ್ನು ತಡೆಯುವ ಮತ್ತು ಚಿಕಿತ್ಸೆಯನ್ನು ನೀಡುವ ಕಾರ್ಯವನ್ನು ಹೊಂದಿದೆ.[೭೫]

ಕೆ.ಎಲ್.ಇ. ಮಕ್ಕಳ ಮತ್ತು ಮಹಿಳೆಯರ ಆರೋಗ್ಯದ ಸಂಶೋಧನಾ ಘಟಕವು, ರಾಷ್ಟ್ರೀಯ ಆರೋಗ್ಯ ಸಂಸ್ಥೆ ಮತ್ತು ಮಾನವ ಅಭಿವೃದ್ಧಿ ಸಲುವಾಗಿ, ಯು.ಎಸ್.ಎ ಅನುದಾನಿತ "First Breath Community Based Training and Intervention in Neonated Resuscition"ದ ಮೂಲಕ ಒಂದು ಪರಿವೀಕ್ಷಣೆಯು ದಕ್ಷಿಣ ಏಷ್ಯಾದ ಆಫ್ರಿಕಾ ಕೇಂದ್ರ ಮತ್ತು ದಕ್ಷಿಣ ಅಮೇರಿಕೆದ ಜೊತೆಗೆ ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯವು ಕೂಡಾ ಸಂಲಗ್ನಗೊಂಡಿದೆ. ಬೆಳಗಾವಿ ಜಿಲ್ಲೆಯ ೨೬ ಸಮುದಾಯಗಳು, ಬಾಲ್ಯದಲ್ಲಿಯೇ ಶಿಶುಮರಣ ಪ್ರಮಾಣವನ್ನು ತಡೆಯುವ ಕುರಿತು ಅಧ್ಯಯನ ಮಾಡಿದವು. ಎರಡುವರೆ ವರ್ಷದ ಅವಧಿಯಲ್ಲಿ ಬೆಳಗಾವಿಯಾದ್ಯಂತ ೨೯೮ ಹಳ್ಳಿಗಳಲ್ಲಿ ವಾಸಿಸುವ ೮,೯೦,೦೦೦ ಜನರಿಗೆ ೨೬,೦೦೦ ಜನನ ಪ್ರಮಾಣವನ್ನು ಹೊಂದಿದೆ. ೧೧.೦೦೦ ಶುಶ್ರೂಷಕರು ಸಾಂಪ್ರದಾಯಿಕ ದಾದಿಯರಿಗೆ ಮಗುವಿನ ಜನನದ ಕುರಿತು ತರಬೇತಿ ನೀಡಿದರು. ಇದಕ್ಕೆ ಬೇಕಾದ ೧,೧೦೦ ಶುಶ್ರೂಷಕರು ಸಾಂಪ್ರದಾಯಿಕ ದಾದಿಯರಿಗೆ ಮಗುವಿನ ಜನನದ ಕುರಿತು ತರಬೇತಿಯನ್ನು ನೀಡಿದರು. ಇದಕ್ಕೆ ಬೇಕಾದ ಎಲ್ಲ ಸೌಲಭ್ಯ ಮತ್ತು ಸೌಕರ್ಯಗಳನ್ನು ಹಳ್ಳಿಗಳಿಗೆ ಒದಗಿಸಿದ ಶ್ರೀ ಕೋರೆಯವರು ಹಳ್ಳಿಗರಿಗೆ ಹಲವಾರು ರೀತಿಯ ಪ್ರಯೋಜನವಾಗುವಂತೆ ಅದಕ್ಕೆ ಈ ಅನುಕೂಲವನ್ನು ಕಲ್ಪಿಸಿದರು.[೭೬]

ಉಸಿರುಗಟ್ಟುವಿಕೆಯ ತೊಂದರೆಯಿಂದ ಬಳಲುತ್ತಿದ್ದ, ಹಲವಾರು ನವಜಾತ ಶಿಶುಗಳಿಗೆ ಚಿಕಿತ್ಸೆಯನ್ನು ನೀಡಲಾಗಿದೆ. ಮಕ್ಕಳ ದೈಹಿಕ, ಮಾನಸಿಕ ಅಭಿವೃದ್ಧಿಗೊಳಿಸುವುದಕ್ಕಾಗಿ, ಹಳ್ಳಿಯ ದಾದಿಯರು, ತಾಯಂದಿರಿಗೆ ಮಕ್ಕಳ ಸುರಕ್ಷತೆಯ ಬಗ್ಗೆ ತರಬೇತಿ ನೀಡುತ್ತಿದ್ದಾರೆ. ಅದಕ್ಕಾಗಿ ೧೬೦೦ ಶಿಶುಗಳ ಮೇಲ್ವಿಚಾರಣೆ ಮಾಡಲಾಗಿದೆ. ಈ ಸಂಶೋಧನ ಘಟಕವು ಇದರ ಇನ್ನೊಂದು ಮಹತ್ತರವಾದ ಕಾರ್ಯ ಘಟಕವಾದ H1 N1 ಜಾಗತಿಕ ಪರಿವೀಕ್ಷಣೆಯ ಭಾಗವಾಗಿ ಬೆಳಗಾವಿ ಜಿಲ್ಲೆಯ ೨೦೦ ಹಳ್ಳಿಗಳಲ್ಲಿ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳುವಂತೆ ಶ್ರೀ ಕೋರೆಯವರು ವ್ಯವಸ್ಥೆಮಾಡಿದ್ದಾರೆ. ಅದೇ ಪ್ರಕಾರವಾಗಿ ಈ ಸಂಶೋಧನ ಕೇಂದ್ರದ ಮೂರನೇ ಹಂತದಲ್ಲಿ ಕಾರ್ಮಿಕರಿಗೆ ಉಪಯುಕ್ತ ಮಾಹಿತಿ, ಜೊತೆಗೆ ಆರೋಗ್ಯದ ಸಲಹೆಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಸದರ ಕಾರ್ಯವನ್ನು ವಿಶ್ವ ಆರೋಗ್ಯ ಸಂಸ್ಥೆ (WHO) ಮುಕ್ತವಾಗಿ ಪ್ರಶಂಸಿಸಿದೆ. ಅಲ್ಲದೆ ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ಸಂಶೋಧನ ಕೇಂದ್ರಕ್ಕೆ ವಿಶ್ವಸಂಸ್ಥೆಯು ಮಹಿಳೆಯರ ಯೋಗಕ್ಷೇಮ, ತರಬೇತಿ ಹಾಗೂ ಚಿಕಿತ್ಸೆಯನ್ನು ನೀಡಲು೧೨ ತಿಂಗಳ ಮಟ್ಟಿಗೆ ನೇಮಕವನ್ನು ವಿವಿಧ ದೇಶಗಳಲ್ಲಿ ನೇಮಿಸಿತು. ಆ ದೇಶಗಳೆಂದರೆ ಅರ್ಜೆಂಟೈನಾ, ಈಜಿಪ್ಟ್, ಇಂಡಿಯಾ, ಕೀನ್ಯಾ, ಫಿಲಿಪೈನ್ಸ್, ದಕ್ಷಿಣ ಆಫ್ರಿಕಾ, ಥಾಯ್‌ಲ್ಯಾಂಡ್ ಮತ್ತು ಉಗಾಂಡದಂತಹ ಹಿಂದುಳಿದ ದೇಶದ ಮಹಿಳೆಯರ ಆರೋಗ್ಯ ಸುಧಾರಣೆಗಾಗಿ ಕೆ.ಎಲ್.ಇ. ಸಂಸ್ಥೆಯು ಸುಮಾರು ೨೫,೦೦೦ ಸಾವಿರ ಮಹಿಳೆಯರಿಗೆ ಚಿಕಿತ್ಸೆ ನೀಡಿ ಅವರ ಬದುಕು ಸಹಜ ಸ್ಥಿತಿಗೆ ತರಲು ಕಾರಣವಾದರು. ಬಡ ಹಾಗೂ ಹಿಂದುಳಿದ ರಾಷ್ಟ್ರಗಳ ಆರೋಗ್ಯಕ್ಕಾಗಿ ವಿಶ್ವ

ಆರೋಗ್ಯ ಸಂಘಟನೆಯ ಮೂಲಕ ಡಾ. ಕೋರೆಯವರು ಕಾರ್ಯ ಮಾಡಿ, ಈ ಸಂಶೋಧನಾ ಕೇಂದ್ರದ ಮೂಲಕ ಜಾಗತಿಕ ಆರೋಗ್ಯ ಸೌಕರ್ಯ ಒದಗಿಸುವ ಕಾರ್ಯವನ್ನು ಮಾಡಿರುವುದು; ಅದು ಅಲ್ಲದೆ, ಈ ಮೇಲಿನ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಾಗಿದ್ದು, ಈ ರಾಷ್ಟ್ರಗಳಲ್ಲಿನ ಜನರ ಆರೋಗ್ಯಕ್ಕಾಗಿ ಕೆ.ಎಲ್.ಇ. ವೈದ್ಯಕೀಯ ವಿಶ್ವವಿದ್ಯಾಲಯವು ಶ್ರಮಿಸುತ್ತಿರುವುದು ಮಹತ್ತರವಾದ ಕಾರ್ಯಸಾಧನೆಯಾಗಿದೆ.

ಈ ಮಹತ್ವದ ಕಾರ್ಯದ ಫಲವಾಗಿ ಈ ಯೋಜನೆಯಲ್ಲಿಯೇ ಕೆ.ಎಲ್.ಇ. ಆಸ್ಪತ್ರೆಯಿಂದ ಮೂರು ಆರೋಗ್ಯ ಕೇಂದ್ರಗಳು ಕಿಣಯೇ, ಹಂದಿಗನೂರು ಮತ್ತು ವಂಟಮುರಿಗಳಲ್ಲಿ ಅಸ್ತಿತ್ವಕ್ಕೆ ಬಂದವು. ಆಡಳಿತ ೩೦೦ ಮಹಿಳೆಯರ ತೆಗೆದುಕೊಂಡು, ಆರೈಕೆಯನ್ನು ಇದರಡಿ ಮಾಡಲಾಗಿದೆ. ಹಾಗೆಯೇ ಬಿಲ್ ಮತ್ತು ಮಿಲಿಂಡಾಗೇಟ್ಸ್ ಫೌಂಡೆಶನ್‌ದವರು ಈ ಸಂಸ್ಥೆಯ ಪೋಸ್ಟಪಾರ್ಟಿವಲ್ ಹೆಮೋಕ್ರೆಜ್ ಸಂಬಂಧಿತ ಸಂಶೋಧನೆಗಳನ್ನು ಕೆ.ಎಲ್.ಇ. ಸಂಸ್ಥೆಯ ಕಾರ್ಯಗಳನ್ನು ಗಮನಿಸಿ, ಅಕ್ಸಿಟೀಸಿಸ್ ಪ್ರಾರಂಭಿಕ ಯೋಜನೆಗಳನ್ನು ಈ ಸಂಸ್ಥೆಗೆ ಕೋಡಮಾಡಿರುವುದು ಶ್ರೀ ಕೋರೆಯವರ ನಿರಂತರ ಪ್ರಯತ್ನ ಹಾಗೂ ಸಂಸ್ಥೆಯ ಶ್ರೇಷ್ಠ ಆರೋಗ್ಯ ಸಂಶೋಧನೆಯ ಕಾರ್ಯಫಲ ಎನ್ನಬಹುದು. ಈ ಯೋಜನೆಯ ಬಾಗಲಕೋಟೆ ಜಿಲ್ಲೆಯಲ್ಲಿ PATH U.S.A. ದ ಜಾನ್ ಹೇಪಕಿನ್ಸ್ ಬ್ಲುವಬರ್ಗ್ ಸಾರ್ವಜನಿಕ ಆರೋಗ್ಯ ಶಾಲೆಗಳ ಜೊತೆಗೂಡಿ ಜಾರಿಗೊಳಿಸಲಾಗಿದೆ. ಇದರ ಪ್ರಯೋಜನ ಸಾಕಷ್ಟು ಜನರಿಗೆ ಲಭ್ಯವಾಗುವಂತೆ ಮಾಡಿದ್ದಾರೆ.[೨೨]

ಕೆ.ಎಲ್.ಇ. ಸಂಸ್ಥೆ ವೈದ್ಯಕೀಯ ಮಹಾವಿದ್ಯಾಲಯದ ಮಹಿಳಾ ಹಾಗೂ ಮಕ್ಕಳ ಆರೋಗ್ಯ ಸಂಶೋಧನ ಕೇಂದ್ರವನ್ನು ಜಾಗತಿಕ ಸಂಶೋಧನ ಕೇಂದ್ರವನ್ನಾಗಿಸಿ ಮಾಡಿದೆ. ಶ್ರೀ ಕೋರೆಯವರು ಆ ಮೂಲಕ ಕರ್ನಾಟಕ ರಾಜ್ಯದ ಮಹಿಳೆಯರ ಮತ್ತು ಮಕ್ಕಳ, ಕಾರ್ಮಿಕರ ರೈತರ ವರ್ಗದವರಿಗಾಗಿ ಹರಡುವ ರೋಗಗಳು ಹಾಗೂ ಅವುಗಳನ್ನು ಗುಣಪಡಿಸುವ ವಿಧಾನಗಳ ಬಗ್ಗೆ ಸಂಶೋಧನೆ ಕೈಗೊಳ್ಳಲು ಇದನ್ನು ಉತ್ಕೃಷ್ಟ ಕೇಂದ್ರವನ್ನಾಗಿ ಮಾಡಿದ್ದಾರೆ. ಆ ಮೂಲಕ ಈ ವರ್ಗಗಳ ಜನರಿಗೆ ತಿಳುವಳಿಕೆಯನ್ನು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲದೆ, ದೇಶದ ಹಾಗೂ ವಿಶ್ವದ ಆರೋಗ್ಯ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳ ಸಂಯೋಗದೊಂದಿಗೆ ಮುಂದುವರಿದ ಹಿಂದುಳಿದ ದೇಶಗಳಲ್ಲಿ ವೈದ್ಯಕೀಯ ಸೇವೆ ಶಿಕ್ಷಣ, ತರಬೇತಿ, ರೋಗಿಗಳ ಆರೈಕೆಯಂತಹ ಕಾರ್ಯಕ್ರಮಗಳನ್ನು ಒದಗಿಸಿದ್ದಾರೆ. ಇದರಿಂದ ಕೆ.ಎಲ್.ಇ. ವಿಶ್ವವಿದ್ಯಾಲಯವವನ್ನು ಜಾಗತಿಕ ನಕ್ಷೆಗೆ ಸೇರಿಸುವ ಕಾರ್ಯ ಮಾಡಿದ್ದು, ಶ್ರೀ ಕೋರೆಯವರ ಕತೃತ್ವ ಶಕ್ತಿಗೆ ಸಾಕ್ಷಿಯಾಗಿದೆ.

ಈ ಕೆ.ಎಲ್.ಇ. ವಿಶ್ವವಿದ್ಯಾಲಯ ಹಾಗೂ ಸಂಶೋಧನ ಕೇಂದ್ರಗಳ ವೈದ್ಯಕೀಯ ಶಿಕ್ಷಣ ಸಂಶೋಧನೆಯ ಕಾರ್ಯಗಳನ್ನು ಮೆಚ್ಚಿ, ಈ ಕೆಳಗಿನ ವಿಶ್ವದ ಆರೋಗ್ಯ ಸಂಘಟನೆಗಳು ಈ ಸಂಸ್ಥೆಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿವೆ. ವಿಶ್ವ ಆರೋಗ್ಯ ಸಂಘಟನೆ (WHO) U.S.A.ದ ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ಆಸ್ಟ್ರಿಯಾದ ವಿಯನ್ನಾದಲ್ಲಿರುವ ಅಂತರಾಷ್ಟ್ರೀಯ ಅಣುಶಕ್ತಿ ನಿಯೋಗ ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ

ಸಮಿತಿಗಳ ಸಹಾಯವನ್ನು ಈ ವಿಶ್ವವಿದ್ಯಾಲಯವು ಸಂಶೋಧನೆಗಾಗಿ ಪಡೆಯುತ್ತಿದೆ.

ಈ ಸಂಶೋಧನಾ ಘಟಕವು U.S.A.ದ ವಿಶ್ವವಿದ್ಯಾಲಯಗಳೊಂದಿಗೆ ಕೈ ಜೋಡಿಸಿದೆ. ಚಿಕ್ಯಾಗೋದ ಇಲಿನಾಯ್ಸ್ ವಿಶ್ವವಿದ್ಯಾಲಯ, ಕಾನ್ಸಸ್ ನಗರದ ಮಿಸ್ಸೂರಿ ವಿಶ್ವವಿದ್ಯಾಲಯ, ಬರ್ಮಿಂಗ್ ಹ್ಯಾಮದ ಅಲ್‌ಬಾಮಾ ವಿಶ್ವವಿದ್ಯಾಲಯ, ಕೋಲ್‌ರಾಡೋದ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಮತ್ತು ಕ್ರಿಸ್ಸೆನಿಯಾದ ಆರೋಗ್ಯ ಸಂಸ್ಥೆಗಳು ಅಲ್ಲದೆ, ಜಾಂಬಿಯಾ, ಮಲೇಸಿಯಾ, ಥಾಯ್‌ಲ್ಯಾಂಡ್, ಯು.ಕೆ.ಯ ಸಂಡರ್‌ಲ್ಯಾಂಡ್ ವಿಶ್ವವಿದ್ಯಾಲಯಗಳ ಸಹಯೋಗವನ್ನು ಸಾಧಿಸಿವೆ.[೨೮]

ಕರ್ನಾಟಕ ಏಡ್ಸ್ ನಿಯಂತ್ರಣ ಸಂಸ್ಥೆ (KSAPS) ಮತ್ತು ಭಾರತ ಸರ್ಕಾರದ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಘಟನೆ (NACO)ಯ ಚರ್ಮ ಮತ್ತು UD ವಿಭಾಗವು ಮೇಲಿನ ಸಂಘಟನೆಗಳಿಗೆ 'The voluntcry Counselling and Testing Centre (UCTC) ಇದರ ಮೇಲ್ವಿಚಾರಣೆಯನ್ನು ನಡೆಸುತ್ತವೆ. ಕರ್ನಾಟಕ ಸರ್ಕಾರದ ಆರೋಗ್ಯ ಸಚಿವಾಲಯವು ಮರುನಿರ್ಮಿತ ರಾಷ್ಟ್ರೀಯ ಟಿ. ಬಿ. (ಟ್ಯುಬರ್‌ಕ್ಯುಲೇಸಿಸ್) ನಿಯಂತ್ರಣ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ "Pulmonary" ಔಷಧಿ ವಿಭಾಗದೊಂದಿಗೆ ಕೆಲಸನಿರ್ವಹಿಸುತ್ತದೆ.

ಕರ್ನಾಟಕ ಸರ್ಕಾರದ ಆರೋಗ್ಯ ಸಚಿವಾಲಯದ ತರಬೇತಿ ಕೇಂದ್ರ ಅನೆಸ್ಥೇಲಜಿ ವಿಭಾಗವು ಗುರುತಿಸಿಕೊಂಡು "Lite Saving Avaesthetic Skills for Medical Officers" ಎಂಬ ಪರಿವೀಕ್ಷಣೆಯನ್ನು ನಡೆಸಿತು. ಕೆ.ಎಲ್.ಇ. ಸಂಸ್ಥೆಯ ಮೇಲಿನ ಸಂಸ್ಥೆಗಳು, ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ವಿಶ್ವವಿದ್ಯಾಲಯದ ಅಂಗ ಸಂಸ್ಥೆಗಳು ಸಂಶೋಧನ ಕೇಂದ್ರ ಮತ್ತು ಆಸ್ಪತ್ರೆಗಳು ಪರಿಣಾಮಕಾರಿ ಸಂಶೋಧನೆ ಹಾಗೂ ಆರೈಕೆ, ಗುಣಮಟ್ಟದ ಸೇವೆಗಳನ್ನು ಗುರುತಿಸಿ ದೇಶೀಯ ಹಾಗೂ ವಿದೇಶಗಳ ಆರೋಗ್ಯ ಸಂಸ್ಥೆಗಳ ಸಂಯೋಗದೊಂದಿಗೆ ಕಾರ್ಯವನ್ನು ನಿರ್ವಹಿಸುತ್ತಿರುವುದು ಪ್ರಥಮ ವೈದ್ಯಕೀಯ ವಿಶ್ವವಿದ್ಯಾಲಯ ಭಾರತಲ್ಲಿ ಇದೊಂದೇ ಎನ್ನುವ ಶ್ರೇಯಸ್ಸಿಗೆ ಕೆ.ಎಲ್.ಇ. ಸಂಸ್ಥೆಯದು. ಇದಕ್ಕೆ ಕಾರಣ ಕೋರೆಯವರು ಪಟ್ಟ ಶ್ರಮ, ಗುಣಮಟ್ಟಕ್ಕೆ ನೀಡಿರುವ ಆದ್ಯತೆ, ಹಾಗೂ ಒದಗಿಸುತ್ತಿರುವ ಆಧುನಿಕ ಸೌಲಭ್ಯಗಳು ಹಾಗೂ ಆಸ್ಪತ್ರೆಯಲ್ಲಿನ ತಜ್ಞರ ತಂಡದ ನಿಯೋಜನೆ, ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನುರಿತ ಪ್ರಾಧ್ಯಾಪಕರ ನಿರಂತರ ಸೇವೆ ಇದರ ಫಲ ಇಂದು ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ಸಂಸ್ಥೆಗಳು ಜಾಗತಿಕ ನಕ್ಷೆಯಲ್ಲಿ ಮಿನುಗಲು ಕಾರಣವಾಗಿದೆ.[೨೯]

ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಹಾಗೂ ಪ್ರಾಧ್ಯಾಪಕರಿಗಾಗಿ ಮತ್ತು ಸಂಶೋಧಕರಿಗಾಗಿ ಈ ವಿಶ್ವವಿದ್ಯಾಲಯವು ಅನೇಕ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟದ ಸಮ್ಮೇಳನ ಹಾಗೂ ಉಪನ್ಯಾಸಗಳನ್ನು ಏರ್ಪಡಿಸಿದೆ. ಸಮಾಜಕ್ಕೆ ಆತಂಕವಾಗಿರುವ ರೋಗಗಳನ್ನು ಗುಣಪಡಿಸಲು ಸಂಶೋಧನೆಗೆ ಅಗತ್ಯವಾಗಿ ಬೇಕಾಗಿರುವ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗಿದೆ. ಈ ಕಾರ್ಯಾಗಾರ ಉಪನ್ಯಾಸಗಳಲ್ಲಿ ವಿದೇಶದ ವೈದ್ಯಕೀಯ ಜಗತ್ತಿನ ಶ್ರೇಷ್ಠ ತಜ್ಞರನ್ನು ಆಹ್ವಾನಿಸಿ, ಪ್ರತಿ ವರ್ಷ ಈ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ನಡೆಯುವಂತೆ ಮಾಡಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ತಜ್ಞವೈದ್ಯರು

ಹಾಗೂ ಪ್ರಾಧ್ಯಾಪಕರು ಹಲವು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಹಾಗೂ ಕಾರ್ಯಾಗಾರದಲ್ಲಿ ಭಾಗವಹಿಸಿ, ಶ್ರೇಷ್ಠ ಮಟ್ಟದ ಉಪನ್ಯಾಸಗಳನ್ನು ನೀಡುವುದರ ಮೂಲಕ, ಈ ವಿಶ್ವವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಜೆ.ಎನ್.ಎಂ.ಸಿಯ ಪ್ರಾಚಾರ್ಯರಾದ ಶ್ರೀ ವಿ. ಡಿ. ಪಾಟೀಲರ ನಿರಂತರ ಶ್ರಮವೂ ಪ್ರಮುಖವಾದ ಇದಕ್ಕೆ ಪೂರಕವಾದ ಕೆಲವು ಉದಾಹರಣೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿ ಕೊಡಲಾಗಿದೆ. ೨೨ ಸೆಪ್ಟಂಬರ್ ೨೦೦೯ರಂದು ಶರೀರ ಶಾಸ್ತ್ರ ವಿಭಾಗವು ಸಿ. ಎಂ. ಇ. ೨೦೦೯ "ಪೂರ್ವ ಬಾಲ್ಯಾವಸ್ಥೆಯಲ್ಲಿ ನರಕೋಶದ ಅವ್ಯವಸ್ಥೆ" ಎಂಬುದರ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಡಾ. ಮಿಸ್ ಲಿಂಡಾ ರೈಸ್ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಆರೋಗ್ಯ ಸಂಶೋಧನೆ, ಮಾನವ ಅಭಿವೃದ್ಧಿ ಕುರಿತು ರಾಷ್ಟ್ರೀಯ ಸಂಸ್ಥೆ ಅಮೇರಿಕಾ ಇವರು ೨೩ ಸೆಪ್ಟೆಂಬರ್ ೨೦೦೮ರಂದು "ಮಹಿಳಾ ಮತ್ತು ಮಕ್ಕಳ ಆರೋಗ್ಯ ಸಂಶೋಧನೆಯ ಅಭಿವೃದ್ಧಿ"ಯಲ್ಲಿ ಗ್ಲೋಬಲ್ ನೆಟ್‌ವರ್ಕ್‌ದ ಅವಕಾಶ ಹಾಗೂ ಚಟುವಟಿಕೆಯ ಕುರಿತು ಉಪನ್ಯಾಸ ನೀಡಿದರು. ಮಧುಮೇಹ, ಹೃದಯ ಶಸ್ತ್ರಚಿಕಿತ್ಸೆ, ಕ್ಯಾನ್ಸರ್ ಹಾಗೂ ಎಲುಬು, ಕೀಲು ರೋಗಗಳು ಅಲ್ಲದೇ, ಮೂತ್ರಕೋಶ, ಮೂತ್ರಪಿಂಡ, ಪ್ಲಾಸ್ಟಿಕ್ ಸರ್ಜರಿ ಹೀಗೆ ಅನೇಕ ವಿಭಾಗಗಳಿಂದ ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳನ್ನು ಏರ್ಪಡಿಸುವ ಮೂಲಕ, ಗುಣಮಟ್ಟದ ವೈದ್ಯಕೀಯ ಶಿಕ್ಷಣ ನೀಡಲು ಆದ್ಯತೆ ನೀಡುತ್ತಿರುವುದು ಶ್ರೀ ಕೋರೆಯವರ ಕಾರ್ಯವೈಖರಿಗಳಿಗೆ ಉತ್ತಮ ನಿದರ್ಶನಗಳಾಗಿವೆ.[೮೦]

ವಿದ್ಯಾರ್ಥಿಗಳ ಅಧ್ಯಯನಕ್ಕೆ ಉತ್ತಮವಾದ ಪರಿಸರ ಅಷ್ಟೇ ಮಹತ್ವವಾದದ್ದು. ಹೀಗಾಗಿ ಶ್ರೀ ಕೋರೆಯವರು ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಮತ್ತು ಸಂಶೋಧಕರಿಗಾಗಿ ಅತ್ಯಾಧುನಿಕವಾದ, ಸುಸಜ್ಜಿತವಾದ ವಸತಿ ನಿಲಯ, ವ್ಯಾಯಾಮ ಮಂದಿರಗಳು ಹಾಗೂ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹವಾನಿಯಂತ್ರಿತ, ಅಂತರ್‌ಜಾಲದ ಸಂಪರ್ಕ ಬೋಧನಾ ಕೊಠಡಿಗಳು ಅತ್ಯಾಧುನಿಕ ಪ್ರಯೋಗಾಲಯಗಳು ಅಲ್ಲದೆ ವಿಶ್ವವಿದ್ಯಾಲಯದ ಆವರಣದಲ್ಲಿ ಸುಂದರವಾದ ಹೂದೋಟ, ಉದ್ಯಾನವನ ಲೈಟಿಂಗ್, ಸಂಗೀತ ಕಾರಂಜಿಗಳು ಹೀಗೆ ಎಲ್ಲ ಆಧುನಿಕ ಸೌಲಭ್ಯಗಳನ್ನು ಒದಗಿಸುವ ಮೂಲಕ ವಿದೇಶಿ ಉನ್ನತ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಕಡಿಮೆ ಇಲ್ಲದಂತೆ ಅಭಿವೃದ್ಧಿ ಪಡಿಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ.

ಕೆ.ಎಲ್.ಇ. ವಿಶ್ವವಿದ್ಯಾಲಯವು ಮೆಡಿಕಲ್ ಮತ್ತು ಡೆಂಟಲ್, (ವೈದ್ಯಕೀಯ ಮತ್ತು ದಂತ ವೈದ್ಯಕೀಯ) ಹಾಗೂ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕಾಗಿ PGAIET ಯಶಸ್ವಿ ಅಭ್ಯರ್ಥಿಗಳಾಗಿ ಪಾರದರ್ಶಕತೆಯ ಕೌನ್ಸಲಿಂಗ್ ಮೂಲಕ ಪ್ರವೇಶ ನೀಡುವ ವ್ಯವಸ್ಥೆಯನ್ನು ಕಲ್ಪಿಸಿದೆ.

ವೈದ್ಯಕೀಯ ಹಾಗೂ ದಂತ ವೈದ್ಯಕೀಯ ವಿದ್ಯಾರ್ಥಿಗಳು ಪದವಿಪೂರ್ವ ಪ್ರವೇಶಕ್ಕಾಗಿ, ದೇಶದ ೧೧ ಪ್ರಮುಖ ಸ್ಥಳಗಳಲ್ಲಿ ಪ್ರವೇಶ ಪರೀಕ್ಷೆಯನ್ನು ಪ್ರತಿ ವರ್ಷವೂ ಅತ್ಯಂತ ಪಾರದರ್ಶಕ ಹಾಗೂ ಸುವ್ಯವಸ್ಥಿತವಾಗಿ ನಡೆಸುತ್ತಿರುವುದರ ಮೂಲಕ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯ ಎನ್ನುವ ನಾಮಾಂಕಿತ ಬರುವಂತೆ ಶ್ರೀ ಕೋರೆಯವರು

ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಆ ಮೂಲಕ ದೇಶಾದ್ಯಂತ ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಕ್ಕೆ ಮುಕ್ತ ಹಾಗೂ ಪಾರದರ್ಶಕತೆಯ ಪ್ರವೇಶಗಳಿಂದಾಗಿ ಈ ವಿಶ್ವವಿದ್ಯಾಲಯವು ಹೆಸರು ಗಳಿಸುವಂತೆ ಮಾಡಿದ್ದಾರೆ.[೮೧]

ಈ ಮೇಲಿನ ಅತ್ಯಾಧುನಿಕ ಸೌಲಭ್ಯಗಳು ಗುಣಮಟ್ಟದ ವೈದ್ಯಕೀಯ ಆರೋಗ್ಯ ಶಿಕ್ಷಣವನ್ನು ನೀಡುತ್ತಿರುವ ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಯು.ಜಿ.ಸಿ. ನವದೆಹಲಿ ತಂಡವು ಭೇಟಿ ನೀಡಿ, ಇಲ್ಲಿ ಪಾರದರ್ಶಕತೆ ಹಾಗೂ ಗುಣಮಟ್ಟದ ಅತ್ಯಾಧುನಿಕ ಸೌಲಭ್ಯಗಳ ವೈದ್ಯಕೀಯ ಶಿಕ್ಷಣ ನೀಡುತ್ತಿರುವುದನ್ನು ಗುರುತಿಸಿ, ಈ ಮಹಾವಿದ್ಯಾಲಯಕ್ಕೆ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ನೀಡಿದೆ. ಕೆ.ಎಲ್.ಇ. ಸಂಸ್ಥೆಯ ಶ್ರೀ ಪ್ರಭಾಕರ ಕೋರೆಯವರ ಸಾರ್ಥಕ ಶ್ರಮದ ಫಲಕ್ಕೆ ಸಿಕ್ಕ ಬಹುದೊಡ್ಡ ಮನ್ನಣೆ ಇದಾಗಿದೆ. ಸಂಸ್ಥೆಯ ಗುಣಮಟ್ಟದ ಶಿಕ್ಷಣಕ್ಕೂ ಒಂದು ಕಳಶಪ್ರಾಯವಾದ ಗೌರವ. ೨೦೦೯ರಲ್ಲಿ ಕೆ.ಎಲ್.ಇ. ಆರೋಗ್ಯ ವಿಶ್ವವಿದ್ಯಾಲಯಕ್ಕೆ ಮತ್ತೆ ಭೇಟಿ ನೀಡಿದ ಯು.ಜಿ.ಸಿ. ತಂಡವು ಕೆ.ಎಲ್.ಇ. ವಿಶ್ವವಿದ್ಯಾಲಯಕ್ಕೆ ಜೆ.ಎನ್.ಎಂ.ಸಿ. ವೈದ್ಯಕೀಯ ಹಾಗೂ ದಂತ ವಿಜ್ಞಾನ ಮಹಾವಿದ್ಯಾಲಯ ಬೆಳಗಾವಿ, ಇಂತಹ ೬ ಅಂತರ್‍ರಾಷ್ಟ್ರೀಯ ಮಟ್ಟದ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಇದರ ವ್ಯಾಪ್ತಿಗೆ ಸೇರಿಸಲು ಒಪ್ಪಿಗೆ ಸೂಚಿಸಿರುವುದರ ಮೂಲಕ ಈ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.

೧. ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯ, ಬೆಳಗಾವಿ (ಫಾರ್ಮಸಿ).

೨. ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯ, ಹುಬ್ಬಳ್ಳಿ.

೩. ಕೆ.ಎಲ್.ಇ. ಸಂಸ್ಥೆಯ ಫಿಜಿಯೊಥೆರಾಪಿ ಕಾಲೇಜು, ಬೆಳಗಾವಿ.

೪. ಕೆ.ಎಲ್.ಇ. ಸಂಸ್ಥೆಯ ಔಷಧ ಮಹಾವಿದ್ಯಾಲಯ, ಬೆಂಗಳೂರು.

೫. ಕೆ.ಎಲ್.ಇ. ಸಂಸ್ಥೆಯ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸಾಯನ್ಸ್, ಬೆಳಗಾವಿ.

೬. ಕೆ.ಎಲ್.ಇ. ಸಂಸ್ಥೆಯ ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯ, ಬೆಳಗಾವಿ.[೮೨]

ಹೀಗೆ ಶ್ರೀ ಪ್ರಭಾಕರ ಕೋರೆಯವರ ದೂರದೃಷ್ಟಿ, ನಿರಂತರ ಪ್ರಯತ್ನದ ಫಲವಾಗಿ ಕೇವಲ ೨೫ ವರ್ಷಗಳ ಅವಧಿಯಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಅವರು ಸಾಧಿಸಿದ ಸಾಧನೆ ರೋಮಾಂಚನವನ್ನು ಉಂಟುಮಾಡುತ್ತದೆ. ಒಬ್ಬ ರಾಜಕೀಯ ನಾಯಕರಾಗಿ ಅವರು ಆರೋಗ್ಯ ಕ್ಷೇತ್ರದ ಮುಖಾಂತರ ಜನಸಾಮಾನ್ಯರ ಬಗ್ಗೆ, ಬಡವರ ಬಗ್ಗೆ ಅನುಕಂಪ ಹೊಂದಿ ಸಾಮಾಜಿಕ ಕಾರ್ಯದ ಜೊತೆಗೆ ಅವರ ಆರೋಗ್ಯ ಸುಧಾರಣೆಗಾಗಿ ಅವರು ಕಟ್ಟಿದ ಆಸ್ಪತ್ರೆಯ ಇಂದು ಜಗತ್ತಿನಾದ್ಯಂತ ಹೆಸರುವಾಸಿಯಾಗಿದೆ. ಅಲ್ಲದೆ ಬಡಜನರಿಗೆ ೯೯೦ ಹಾಸಿಗೆಯ ಉಚಿತ ಆಸ್ಪತ್ರೆ ಹಾಗೂ ವೈದ್ಯಕೀಯ ಸೇವೆಯಲ್ಲದೇ, ಅವರಿಗೆ ಉಚಿತ ಉಟೋಪಹಾರ, ಅವರ ಸಂಬಂಧಿಗಳಿಗೆ ಆಸ್ಪತ್ರೆಯಲ್ಲಿಯೇ ರಿಯಾಯಿತಿ ದರದಲ್ಲಿ ಉಳಿದುಕೊಳ್ಳುವಂತೆ ಮಾಡಿದ ಶ್ರೀ ಕೋರೆಯವರ ಪ್ರಯತ್ನ ಅವಿಸ್ಮರಣೀಯ. ವೈದ್ಯಕೀಯ

ಮಹಾವಿದ್ಯಾಲಯವನ್ನು ಉಚ್ಚ ದರ್ಜೆಯ ಸಂಸ್ಥೆಯನ್ನಾಗಿಸಿ ಪರಿವರ್ತಿಸಿ ಅದಕ್ಕೆ ವಿಶ್ವವಿದ್ಯಾಲಯದ ಸ್ಥಾನ ದೊರಕುವಂತೆ ಮಾಡಿದ್ದಾರೆ. ಗಮನವನ್ನು ಸೆಳೆಯುವ ದಿಶೆಯಲ್ಲಿ ಉಚ್ಚ ಮಟ್ಟದ ಸಂಶೋಧನ ಕೇಂದ್ರವನ್ನಾಗಿಸಿ, ಅಭಿವೃದ್ಧಿಪಡಿಸಿ, ಜಗತ್ತಿನ ಹಲವಾರು ದೇಶಗಳು ಈ ಸಂಸ್ಥೆಯೊಂದಿಗೆ ಸಹಯೋಗ ಸ್ಥಾಪಿಸುವಂತೆ ಮಾಡಿದ ಕಾರ್ಯವು ಇಡೀ ದೇಶವೇ ಹೆಮ್ಮೆಪಡುವಂತಹದಾಗಿದೆ.

ಅಲ್ಲದೆ ನರ್ಸಿಂಗ್, ಔಷಧ ಮಹಾವಿದ್ಯಾಲಯಗಳನ್ನು ಅತ್ಯಾಧುನಿಕ, ಸಕಲ ಸೌಲಭ್ಯಗಳುಳ್ಳ ಮಹಾವಿದ್ಯಾಲಯಗಳಾಗಿ ಪರಿವರ್ತಿಸುವ ಮೂಲಕ ವೈದ್ಯಕೀಯ ಕ್ಷೇತ್ರದ ಇತಿಹಾಸದಲ್ಲಿ ಮಹತ್ವದ ಕಾರ್ಯವನ್ನು ಮಾಡಿದ್ದಾರೆ. ಈ ಮಹಾವಿದ್ಯಾಲಯಗಳನ್ನು ದೇಶ, ವಿದೇಶಗಳ ವಿದ್ಯಾರ್ಥಿಗಳನ್ನು ಆಕರ್ಷಿಸುವಂತೆ ಅವುಗಳಿಗೆ ಭವ್ಯವಾದ ಕಟ್ಟಡ, ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸಿತು. ನುರಿತ ತಜ್ಞ, ಪ್ರಾಧ್ಯಾಪಕರ ನಿಯೋಜನೆ, ಅಷ್ಟೇ ಅಲ್ಲದೆ ಅವರಲ್ಲಿನ ವಿಶಿಷ್ಟ ಶಕ್ತಿಯನ್ನು ಗುರುತಿಸಿ, ಪ್ರೋತ್ಸಾಹಿಸುವ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ. ಈ ಮೂಲಕ ಮತ್ತಷ್ಟು ಸಾಧಿಸುವ ಉತ್ಸಾಹ ಮೂಡುವಂತೆ ಮಾಡಿ, ಆ ಸಿಬ್ಬಂದಿಗಳ ಪರಿಶ್ರಮದ ಫಲವಾಗಿ ಜಾಗತಿಕ ಮಟ್ಟದಲ್ಲಿ ಈ ಸಂಸ್ಥೆಯ ಹೆಸರು ಬರುವಂತೆ ಮಾಡಿದ ನಿಪುಣ, ಜಾಣ್ಮೆಯ ಆಡಳಿತಗಾರರೆನಿಸಿದ್ದಾರೆ. ವೈದ್ಯರನ್ನು, ಪ್ರಾಧ್ಯಾಪಕರನ್ನು ಹಾಗೇ ಇತರ ಸಿಬ್ಬಂದಿಗಳನ್ನು ಅತ್ಯಂತ ಕಾಳಜಿಯಿಂದ ಕಾಣುವ ಮೂಲಕ ಅವರಲ್ಲಿ ಅಡಗಿರುವ ಶಕ್ತಿಯನ್ನು ಹೊರತೆಗೆಯುವ ಅಗತ್ಯವಾದ ಸಂಶೋಧನೆಯನ್ನು ಕೈಗೊಳ್ಳಲು ಹಣಕಾಸಿನ ಜೊತೆಗೆ ಎಲ್ಲ ನೆರವನ್ನು ಒದಗಿಸುವ ಮೂಲಕ, ಇನ್ನಷ್ಟು ವೈದ್ಯಕೀಯ ಸಂಶೋಧನೆಗಳನ್ನು ಕೈಗೊಳ್ಳಲು ಸ್ಫೂರ್ತಿಯನ್ನು ತುಂಬುತ್ತ ಬಂದಿರುವ ಶ್ರೀ ಕೋರೆಯವರು ಇದರ ಫಲವಾಗಿ ಕೆ.ಎಲ್.ಇ. ಆಸ್ಪತ್ರೆಯು ಇಂದು ಜಾಗತಿಕ ಮಟ್ಟದ ಅನೇಕ ವಿಚಾರ ಸಂಕಿರಣಗಳಲ್ಲಿ ಇಲ್ಲಿನ ಸಿಬ್ಬಂದಿವರ್ಗದವರು ಭಾಗವಹಿಸಿ, ತಮ್ಮ ಅಮೋಘವಾದ ವಿದ್ವತ್ತನ್ನು ಪ್ರದರ್ಶಿಸಿ, ಈ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಕಠಿಣವಾದ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರೈಸುವ ಸಾಮರ್ಥ್ಯದ ಮೂಲಕ ದೇಶ ವಿದೇಶಿ ದೇಶಗಳು ಅಚ್ಚರಿಪಡುವಂತೆ ಇಲ್ಲಿಯ ವೈದ್ಯರು ಸಾಧನೆಮಾಡಿ ತೋರಿಸಿದ್ದಾರೆ.

ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ದೂರದ ದೇಶಗಳಿಗೆ ಹೋಗುವ ಬದಲಾಗಿ, ಇಲ್ಲಿಯೇ ತಮ್ಮ ಆಸಕ್ತಿಯ ವೈದ್ಯಕೀಯ ವಿಷಯಗಳಲ್ಲಿ ಅಧ್ಯಯನ ನಡೆಸಲು ಹಾಗೂ ಸಂಶೋಧನೆಗಳನ್ನು ಕೈಗೊಳ್ಳಲು ಅನುಕೂಲ ಕಲ್ಪಿಸುವ ಮೂಲಕ ಈ ಭಾಗದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣವನ್ನೂ ಸುಲಭವನ್ನಾಗಿಸುವ ಕಾರ್ಯವನ್ನು ಮಾಡಿ, ಇಂದು ಸಹಸ್ರಾರು ವಿದ್ಯಾರ್ಥಿಗಳ ಬಾಳು ಬೆಳಗಿಸಿದ ಕೀರ್ತಿ ಕೋರೆಯವರದ್ದಾಗಿದೆ. ಹಾಗೆಯೇ ಈ ಭಾಗದ ಜನರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಕಡಿಮೆ ಖರ್ಚಿನಲ್ಲಿಯೇ ಗುಣಪಡಿಸಿಕೊಳ್ಳುವ ಅವಕಾಶವನ್ನು ಒದಗಿಸಿಕೊಡುವ ಮೂಲಕ ಜನರ ಆರೋಗ್ಯದ ಸುಧಾರಣೆಗಾಗಿ ಶ್ರೀ ಕೋರೆಯವರು ಮಾಡಿದ ಕಾರ್ಯವು ನೈಜವಾದ ಜನಸಾಮಾನ್ಯರ ದೃಷ್ಟಿಯ ದ್ಯೋತಕವೆನಿಸಿದೆ.

ಹೀಗೆ ಎಲ್ಲ ಪ್ರಕಾರದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವಂತೆ ಮಾಡಿದ ಇವರ ಪ್ರಯತ್ನದ ಫಲವಾಗಿ ಇಂದು ಈ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ, ಕೆ.ಎಲ್.ಇ. ವಿಶ್ವವಿದ್ಯಾಲಯದ ಅಡಿಯಲ್ಲಿ ಒಂದಾಗಿ, ಆರೋಗ್ಯ, ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಶಕೆಯನ್ನು ಆರಂಭಿಸಿದೆ. ಇಲ್ಲಿ ಗಮನಿಸುವ ಸಂಗತಿಯೆಂದರೆ, ಶ್ರೀ ಕೋರೆಯವರು ಈ ಕಡಿಮೆ ಅವಧಿಯಲ್ಲಿ ಸಾಧಿಸಿದ ಜಾಗತಿಕ ಮಟ್ಟದ ಖ್ಯಾತಿಯು ಆರೋಗ್ಯ ಕ್ಷೇತ್ರದಲ್ಲಿ ಅವರ ಸಾಧನೆಯ ಹಿಂದೆ ಅಡಗಿರುವ ಅದಮ್ಯ ವಿಶ್ವಾಸ, ದೃಢವಾದ ನಿಲುವು, ಸಮಯಕ್ಕೆ ಅವರು ನೀಡುತ್ತಿರುವ ಮಹತ್ವ, ಜಗತ್ತಿನಲ್ಲಿನ ಬದಲಾವಣೆಗೆ ತೀವ್ರವಾಗಿ ಸ್ಪಂದಿಸುವ ಅವರ ಗುಣ, ಹಿಡಿದ ಕಾರ್ಯವನ್ನು ಸಾಧಿಸುವ ಛಲ ಹಾಗೂ ಪ್ರಾಮಾಣಿಕತೆ ಈ ಎಲ್ಲ ಅಂಶಗಳನ್ನು ನಾವು ಅವರಲ್ಲಿ ಗುರುತಿಸಬಹುದಾಗಿದೆ.

ಕೇವಲ ಆಸ್ಪತ್ರೆಯನ್ನು ನಿರ್ಮಾಣ ಮಾಡಿದರೆ ಸಾಲದು, ಅದಕ್ಕೆ ಅಗತ್ಯವಾಗಿ ಬೇಕಾದ ನುರಿತ ತಜ್ಞ ವೈದ್ಯರು, ಸಿಬ್ಬಂದಿ, ಅವರಿಗೆ ಅಗತ್ಯವಾಗಿ ಬೇಕಾದ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ ಈ ಮೂಲಕ ಎಂತಹ ದೊಡ್ಡದಾದ ಶಸ್ತ್ರಚಿಕಿತ್ಸೆಯನ್ನೂ ಸುಲಭವಾಗಿ ಮಾಡಲು ಅನುಕೂಲ ಒದಗಿಸಿರುವುದು, ಇವರ ದೂರದೃಷ್ಟಿ ಹಾಗೂ ಆಧುನಿಕ ಬದಲಾವಣೆಗೆ ಸ್ಪಂದಿಸುವ ನೈಜ ಮುಖದ ದರ್ಶನವಾಗುತ್ತದೆ.

ಇಂದು ಜಾಗತೀಕರಣದ ಪ್ರಭಾವಳಿಯಲ್ಲಿ ವಿದೇಶಗಳ ಶೈಕ್ಷಣಿಕ ಸಂಸ್ಥೆಗಳು ಒಡ್ಡುತ್ತಿರುವ ನೂತನ ಸವಾಲುಗಳನ್ನು ಸ್ವೀಕರಿಸಿ, ಅವುಗಳ ಮಟ್ಟಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ, ಮುಂದುವರಿದ ದೇಶಗಳು ಸಹ ಕೆ.ಎಲ್.ಇ. ವಿಶ್ವವಿದ್ಯಾಲಯದೊಂದಿಗೆ ಸಹಯೋಗವನ್ನು ಕೋರುತ್ತಿರುವುದು ಶ್ರೀ ಕೋರೆಯವರ ಸಾಧನೆಗೆ ಕಿರೀಟಪ್ರಾಯವಾಗಿದೆ.

ಅವರು ಕನಸು ಕಂಡಂತೆ ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರ ಹಾಗೂ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಇತರ ವೈದ್ಯಕೀಯ ವಿಶ್ವವಿದ್ಯಾಲಯಗಳು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿವೆ. ಹಾಗೆಯೇ ಗ್ರಾಮೀಣ ಪ್ರದೇಶದ ಜನರಿಗೆ ಶೀಘ್ರ ಹಾಗೂ ಉಚಿತ ವೈದ್ಯಕೀಯ ಸೇವೆಯನ್ನು ಸಲ್ಲಿಸುವಂತೆ ಮಾಡಿದ ಅವರ ಸಾಧನೆ ರೋಮಾಂಚಕಾರಿಯಾಗಿದೆ. ರಾಜ್ಯ, ರಾಷ್ಟ್ರ, ಅಷ್ಟೇ ಅಲ್ಲದೆ ವಿದೇಶಗಳಲ್ಲಿ ತಮ್ಮ ಆರೋಗ್ಯ ಕ್ಷೇತ್ರದ ಸಾಧನೆಗಳಿಂದ ತಮ್ಮ ವ್ಯಕ್ತಿತ್ವದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಶ್ರೀ ಕೋರೆಯವರು ಆರೋಗ್ಯ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾದದ್ದು. ಮುಂದಿನ ಪೀಳಿಗೆಗೆ ದಾರಿದೀಪವಷ್ಟೆ ಅಲ್ಲ ಅವುಗಳು ಶ್ರೀ ಕೋರೆಯವರ ಕಾರ್ಯಸಾಧನೆಯ ಜೀವಂತ ಸ್ಮಾರಕ ಇವು ಸಮಾಜಮುಖಿವಾಗಿ ನಿಂತು ಕಂಗೊಳಿಸುತ್ತದೆ. ಅವರ ಕಾರ್ಯ ಇತರ ರಾಜಕೀಯ ಮುಖಂಡರಿಗೆ ಖಂಡಿತವಾಗಿಯೂ ಒಂದು ದಿವ್ಯ ಸಂದೇಶ. ಇವತ್ತು ಶ್ರೀ ಕೋರೆಯವರು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣದಲ್ಲಿ ಸಾಧಿಸಿದ ಸಾಧನೆಗಳನ್ನು ಒಂದು ಮಾದರಿಯನ್ನಾಗಿ ಇಟ್ಟುಕೊಂಡು. ಅನೇಕ ರಾಜ್ಯದ. ರಾಷ್ಟ್ರದ. ಪರದೇಶದ ಸಂಸ್ಥೆಗಳು ಅಭಿವೃದ್ಧಿ ಹೊಂದುತ್ತಿರುವುದು ಶ್ರೀ ಕೋರೆಯವರ ಸಾಧನೆಗೆ ಸಾಕ್ಷಿ. ಇಂದು ದೇಶದ ಯಾವುದೇ ರಾಜಕೀಯ ನಾಯಕರು ಸಾಧಿಸದ ಅಮೋಘ ಸಾಧನೆಯನ್ನು ಆರೋಗ್ಯ ಕ್ಷೇತ್ರದಲ್ಲಿ ಸಾಧಿಸುವ ಮೂಲಕ ಈ ಕ್ಷೇತ್ರದಲ್ಲಿ ಹೊಸ ಚಿಂತನೆಗಳಿಗೆ ದಾರಿ ತೋರುವ ಮೂಲಕ ಸಮಾಜಕ್ಕೆ ಅಮೂಲ್ಯವಾದ ಸೇವೆಯನ್ನು

ಸಲ್ಲಿಸುತ್ತಿದ್ದಾರೆ.

ಅಮೇರಿಕಾ ದೇಶದ ವೈದ್ಯಕೀಯ ಕ್ಷೇತ್ರದಲ್ಲಿ ಸಿಗುವ ಎಲ್ಲ ಆಧುನಿಕ ಸೌಲಭ್ಯಗಳು ನಮ್ಮ ಕರ್ನಾಟಕದ ಜನರಿಗೆ ಸಿಗಬೇಕು ಎನ್ನುವುದು ಕೋರೆಯವರ ಹೆಬ್ಬಯಕೆ. ಇಂದು ಅವು ಕೆ.ಎಲ್.ಇ. ಡಾ. ಕೋರೆ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರದಲ್ಲಿ ಲಭ್ಯ ಎನ್ನುವುದು ಕೂಡಾ ಅಷ್ಟೇ ನಿಜ. ಜಗತ್ತಿನಲ್ಲಿ ಒಂದು ಪ್ರತಿಷ್ಠಿತ ವೈದ್ಯಕೀಯ ವಿಶ್ವವಿದ್ಯಾಲಯವನ್ನಾಗಿಸಿ, ಎಲ್ಲ ಹೊಸ ಕೋರ್ಸುಗಳು ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಸಿಗಬೇಕು ಎನ್ನುವುದು ಅವರ ಆಶೆ. ಹೀಗೆ ತಾವು ಕಂಡ ಕನಸುಗಳನ್ನು ತಮ್ಮ ಜೀವಿತ ಅವಧಿಯಲ್ಲಿ ಸಾಕಾರಗೊಳ್ಳುವಂತೆ ಮಾಡಿದ ನಾಯಕರು ವಿರಳ. ಅದಕ್ಕೆ ತದ್ವಿರುದ್ಧವಾದ ವ್ಯಕ್ತಿತ್ವವು ಶ್ರೀ ಪ್ರಭಾಕರ ಕೋರೆಯವರದ್ದಾಗಿದೆ. ಇವರು ೨೦ ವರ್ಷಗಳಲ್ಲಿ ಸಾಧಿಸಿದ್ದರ ಎರಡು ಪಟ್ಟು ಮುಂದಿನ ೧೦ ವರ್ಷಗಳಲ್ಲಿ ಸಾಧಿಸಬೇಕು ಎನ್ನುವ ಅವರಲ್ಲಿನ ಅದಮ್ಯ ಉತ್ಸಾಹ ಅನನ್ಯ. ಅದನ್ನು ಸಮಾಜಕ್ಕೆ ಅರ್ಪಿಸಬೇಕು ಎನ್ನುವ ಅವರ ಮನೋಭಾವ ಮುಂದಿನ ಜನಾಂಗ ಅನುಕರಿಸುವಂತದ್ದು.[೮೩]

ಶ್ರೀ ಕೋರೆಯವರ ಕಾರ್ಯಸಾಧನೆಯ ಮನೋಬಲ, ಇಚ್ಛಾ ಶಕ್ತಿಯನ್ನು ನಾವು ಮನಗಾಣಬಹುದಾಗಿದೆ. ವಯಸ್ಸು ಎಷ್ಟಾಯಿತು ಎಂದುಕೊಳ್ಳದೆ ಇರುವ ಸಮಯವನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕು ಎನ್ನುವ ಇವರ ಮನೋಭಾವನೆಯ ಅವರ ವ್ಯಕ್ತಿತ್ವದ ಒಂದು ಮುಖ. ಇಂದು ಕರ್ನಾಟಕ ಮಾತ್ರವಲ್ಲ ದೇಶದ ಹಾಗೂ ಜಗತ್ತಿನ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಶ್ರೀ ಕೋರೆಯವರು ಸಾಧಿಸಿದ ಸಾಧನೆ ಸಮಾಜಕ್ಕೆ ಅವರು ಈ ಕ್ಷೇತ್ರದ ಮೂಲಕ ನೀಡಿರುವ ಕೊಡುಗೆ ಅನನ್ಯ.

ಕೋರೆಯವರ ಸಾಧನೆಯನ್ನು ಅವಲೋಕಿಸಿದಾಗ ಈ ತರಹದ ಕಾರ್ಯಗಳನ್ನು ಮಾಡುವ ಆಲೋಚನೆಯು ದೇಶದ ಇತರ ರಾಜಕೀಯ ನಾಯಕರಲ್ಲಿ ಹಾಗೂ ಬಂಡವಾಳ ಶಾಹಿಗಳಲ್ಲಿ ಬರಬೇಕಾದ ಅಗತ್ಯವಿದೆ ಎನಿಸುತ್ತದೆ.

ಕಲೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಶ್ರೀ ಕೋರೆಯವರ ಕೊಡುಗೆಗಳು :

ಶ್ರೀ ಪ್ರಭಾಕರ ಕೋರೆಯವರು ಬಾಲ್ಯದಿಂದಲೇ ಕಲೆ, ನಾಟಕ, ಸಾಹಿತ್ಯಕ ಕ್ಷೇತ್ರದ ಬಗ್ಗೆ ವಿಶೇಷ ಒಲವನ್ನು ಹೊಂದಿರುವರು. ಶ್ರೀ ಕೋರೆಯವರು ಅಕ್ಷರ ಕೃತಿ ರಚಿಸದಿದ್ದರೂ, ಅವರದ್ದು ಕವಿ ಹೃದಯ. ಸಾಹಿತಿಯಲ್ಲದಿದ್ದರೂ, ಸಾಹಿತ್ಯದ ಸಾಂಗತ್ಯವನ್ನು ಇಟ್ಟುಕೊಂಡಿದ್ದಾರೆ. ಕವಿಗಳು, ಕಲಾವಿದರ ಬಗ್ಗೆ ಅಪಾರ ಗೌರವ ಹೊಂದಿರುವರು, ಬದುಕಿಗೆ ಪ್ರೇರಣೆ ನೀಡಿದ್ದು ಸಾಹಿತ್ಯದ ಬಗ್ಗೆ ಇವರಿಗೆ ಪ್ರೀತಿಯಿದೆ. ಆದ್ದರಿಂದ ಗಡಿಭಾಗದಲ್ಲಿ ಕನ್ನಡ ಭಾಷೆಯ ಹಾಗೂ ಸಾಹಿತ್ಯದ ಚಟುವಟಿಕೆಗಳು ನಡೆದು ಬರಲು ಮತ್ತು ಶ್ರೇಷ್ಠವಾದ ಸಾಹಿತ್ಯಗಳಿಂದ ಅಮೂಲ್ಯವಾದ ಕೃತಿಗಳ ರಚನೆಗೆ ಕೋರೆಯವರು ಸ್ಫೂರ್ತಿಯಾಗಿ ನಿಲ್ಲುವ ಮೂಲಕ ಸಾಹಿತ್ಯಿಕ ಕ್ಷೇತ್ರದ ಬೆಳವಣಿಗೆಯಲ್ಲಿ ವಿಶೇಷವಾದ ಕಾಣಿಕೆ ಇವರಿಂದಲೂ ಸಂದಿದೆ.

ಕೆ.ಎಲ್.ಇ. ಸಂಸ್ಥೆಯಲ್ಲಿ ಪ್ರಸಾರಾಂಗವನ್ನು ಪ್ರಾರಂಭ ಮಾಡಿದ ಶ್ರೀ ಕೋರೆಯವರು, ಅದಕ್ಕೆ ಸೂಕ್ತ ವ್ಯಕ್ತಿಯಾದ ಶ್ರೀ ಬಿ. ಎಸ್. ಗವಿಮಠರನ್ನು ನಿರ್ದೇಶಕರನ್ನಾಗಿ ಮಾಡಿ, ಪ್ರೊ. ಎಸ್. ಎಸ್. ಬಸವನಾಳರ ಜೀವನ ಮತ್ತು ಸಾಧನೆ ಎಂಬ ಮಹಾ ಪ್ರಬಂಧವನ್ನು ಪ್ರಕಟಿಸಲು ನೆರವಾದರು. ಲಿಂ. ಅರಟಾಳ ರುದ್ರಗೌಡರ ಜೀವನ ಚರಿತ್ರೆಯನ್ನು ಪ್ರೊ. ಎಸ್.ಎನ್. ಹಿರೇಮಠರಿಂದ ಮರಾಠಿಗೆ ಅನುವಾದ ಮಾಡಿಸಿ ಹಾಗೆಯೇ ಸಪ್ತರ್ಷಿಗಳ ನೆನಪಿಗಾಗಿ 'ಯುಗ ಪುರುಷ' ಎಂಬ ಕೃತಿಯನ್ನು ಪ್ರಕಟಿಸುವ ಮೂಲಕ, ಈ ಮಹಾನ್ ವ್ಯಕ್ತಿಗಳ ಬದುಕು, ಆದರ್ಶಗಳನ್ನು ಯುವ ಜನಾಂಗಕ್ಕೆ ತಿಳಿಸಿ ಕೊಡಲು ಅನುಕೂಲ ಕಲ್ಪಿಸಿದ್ದಾರೆ. ಡಾ. ವ್ಹಿ. ವ್ಹಿ. ಹೆಬ್ಬಳ್ಳಿಯವರಿಂದ "ಲಾಂಛನಕೆ ಶರಣಂಬೆ" ಎಂಬ ಕೃತಿಯನ್ನು ಬರೆಯಿಸಿ ಕೆ.ಎಲ್.ಇ. ಸಂಸ್ಥೆಯ ಲಾಂಛನದ ಇತಿಹಾಸವನ್ನು ತಿಳಿದುಕೊಳ್ಳಲು ಕಾರಣವಾಗಿದ್ದಾರೆ. ಹಾಗೂ ಸಂಸ್ಥೆಯ ಪ್ರತಿ ಅಂಗ ಸಂಸ್ಥೆಯ ಮೂಲಕ ಯುವ ಉದಯೋನ್ಮುಖ ಬರಹಗಾರ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಬೆಳಕಿಗೆ ಬರಲು ವೇದಿಕೆಯನ್ನು ಒದಗಿಸಿದ್ದಾರೆ. ಉದಾಹರಣೆಗೆ : ಲಿಂಗರಾಜ ಮಹಾವಿದ್ಯಾಲಯದಿಂದ ಪ್ರತಿವಾರ ಹೊರಬರುತ್ತಿರುವ "ಲಿಂಗರಾಜವಾಣಿ", ಅಥಣಿ ಮಹಾವಿದ್ಯಾಲಯದಿಂದ ಪ್ರತಿ ವರ್ಷವೂ ಹೊರಬರುತ್ತಿರುವ 'ಯೋಗಿ' ವಾರ್ಷಿಕ ಪತ್ರಿಕೆಯನ್ನು ಪ್ರಕಟಿಸಲು ಅನುಕೂಲ ಕಲ್ಪಿಸಿದ್ದಾರೆ. ಆ ಮೂಲಕ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ಸಾಹಿತ್ಯಕ ಆಸಕ್ತಿಯನ್ನು ಬೆಳೆಸಲು ಇವುಗಳು ಸಾಕಷ್ಟು ಉಪಯುಕ್ತವಾಗಿವೆ. ಅಧ್ಯಾಪಕರು ಸಹ ಇವುಗಳಲ್ಲಿ ಲೇಖನಗಳನ್ನು ಬರೆಯುವ ಮೂಲಕ ಸಾಹಿತ್ಯ ಸೃಷ್ಟಿಗೆ ಉತ್ತಮವಾದ ವೇದಿಕೆಯನ್ನು ಒದಗಿಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ. ಶ್ರೀ ಕೋರೆಯವರು ಲೇಖಕರಲ್ಲದಿದ್ದರೂ, ನಾಡಿನ ಮಹಾನ್ ಲೇಖಕರ ಗಾಢ ಪರಿಚಯವನ್ನು ಹೊಂದಿದ್ದಾರೆ. ಖ್ಯಾತ ಬರಹಗಾರರಾದಿಯಾಗಿ ಉದಯೋನ್ಮುಖ ಬರಹಗಾರರು ಹಾಗೂ ಸಾಹಿತಿಗಳನ್ನು ಶ್ರೀ ಕೋರೆಯವರು ಸದಾ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ.[೮೪]

ಕೋರೆಯವರ ಸಂಪರ್ಕದ ಸಾಹಿತಿಗಳೆಂದರೆ ನಾಡೋಜ ಪಾಟೀಲ ಪುಟ್ಟಪ್ಪನವರು, ಡಾ. ಜಿ. ಎಸ್. ಶಿವರುದ್ರಪ್ಪನವರು, ಕವಿ ಚನ್ನವೀರ ಕಣವಿಯವರು ಖ್ಯಾತ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್, ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ಮನೋಜಗೌಡ ಪಾಟೀಲ, ಕನ್ನಡ ಪ್ರಭಾ ಪತ್ರಿಕೆಯ ಸಂಪಾದಕರಾದ ಶ್ರೀ ಎಚ್. ರಂಗನಾಥ, ಪ್ರಜಾವಾಣಿಯ ಗೋಪಾಲ ಹೆಗ್ಗಡೆ ಅವರಲ್ಲದೆ, ಹಾಯ್ ಬೆಂಗಳೂರು ಪತ್ರಿಕೆ ಸಂಪಾದಕರಾದ ಶ್ರೀ ರವಿ ಬೆಳಗೆರೆ ಹೀಗೆ ಅನೇಕ ನಾಡಿನ ಹೆಸರಾಂತ ಅನೇಕ ಸಾಹಿತಿಗಳು. ಪತ್ರಿಕಾ ಲೇಖಕರು ಹಾಗೂ ಸಂಪಾದಕರೊಂದಿಗೆ ಕೂಡ ಉತ್ತಮ ಬಾಂಧವ್ಯವನ್ನು ಶ್ರೀಯುತರು ಹೊಂದಿದ್ದಾರೆ. ಕೆ.ಎಲ್.ಇ. ಸಂಸ್ಥೆಯ ಅನೇಕ ಸಭೆ-ಸಮಾರಂಭಗಳಿಗೆ ಅವರನ್ನು ಆಮಂತ್ರಿಸಿ, ಆ ಮೂಲಕ ವಿದ್ಯಾರ್ಥಿಗಳಿಗೆ ಅವರಿಂದ ಸ್ಫೂರ್ತಿಯನ್ನು ನೀಡುವ ಕಾರ್ಯವನ್ನು ಶ್ರೀ ಕೋರೆಯವರು ಮಾಡುತ್ತಿದ್ದಾರೆ.[illegible]

ಬೆಳಗಾವಿ ಕವಿಗಳನ್ನು ಹಾಗೂ ಸಾಹಿತಿಗಳನ್ನು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಅವರಲ್ಲಿ ಕವಿ ಡಾ. ಬಿ. ಎ. ಸನದಿ ಸರಜೂ ಕಾಟ್ಕರ್, ಪ್ರೊ. ಡಿ. ಸೆ. ಚೌಗಲೆ ಡಾ. ಅನಿಲ್ ಕಮತಿ, ಪ್ರೊ. ಬಿ. ಎಸ್. ಗವಿಮಠ, ಡಾ. ಬಸವರಾಜ ಜಗಜಂಪಿ, ಡಾ. ಗುರುದೇವಿ ಹುಲೆಪ್ಪನವರಮಠ ಅವರನ್ನು ಪ್ರೋತ್ಸಾಹಿಸಲು ಶ್ರೀ ಕೋರೆಯವರು ಮರೆಯುವುದಿಲ್ಲ. ಗಡಿನಾಡು ಬೆಳಗಾವಿಯಲ್ಲಿ ಕನ್ನಡದ ಧ್ವಜವನ್ನು ಎತ್ತಿ ಹಿಡಿಯುವ ಕೆಲಸದಲ್ಲಿ ಸದಾ ಮುಂಚೂಣಿಯಲ್ಲಿ ನಿಂತು ಕಾರ್ಯವನ್ನು ಮಾಡುವ ಮೂಲಕ, ಭಾಷೆಯ ಹಾಗೂ ನಾಡಿನ ಪ್ರೇಮವನ್ನು ಮೆರೆದಿದ್ದಾರೆ. ೨೦೦೩ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿ ಈ ಸಮ್ಮೇಳನವನ್ನು ಅತ್ಯಂತ ಅದ್ಧೂರಿಯಾಗಿ ಸಂಘಟಿಸುವ ಮೂಲಕ, ಆಗಮಿಸಿದ ಸಾಹಿತ್ಯಾಸಕ್ತರು ಹಾಗೂ ಸಾಹಿತಿಗಳು ಇಲ್ಲಿಯ ಅಚ್ಚುಕಟ್ಟುತನ, ಶಿಸ್ತು ಸೇವಾ ಮನೋಭಾವವನ್ನು ಕಂಡು ಮುಕ್ತವಾಗಿ ಪ್ರಶಂಸಿಸಿದರು. ಆ ಮೂಲಕ ಗಡಿನಾಡಿನ ಸಾಹಿತ್ಯ ಸಮ್ಮೇಳನವನ್ನು ಕನ್ನಡ ಸಾರಸ್ವತ ಲೋಕದ ದಿಗ್ಗಜರು ಅಭಿಮಾನ ಪಡುವಂತೆ ಮಾಡಿದರು. ಕನ್ನಡ ಭಾಷೆಯ ಬಗ್ಗೆ ಗಡಿಭಾಗಗಳಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯ ಮಾಡಿದ್ದು ಶ್ರೀ ಕೋರೆಯವರ ಸಾಹಿತ್ಯಕ ಅಭಿರುಚಿ ಎಂತಹದು ಎನ್ನುವುದನ್ನು ತಿಳಿಯಬಹುದಾಗಿದೆ. ಹಾಗೆಯೇ ೨೦೦೧ರಲ್ಲಿ ಕೊಣ್ಣೂರು ನಾಟಕ ಕಂಪನಿಯ ಶತಮಾನೋತ್ಸವವನ್ನು ಸ್ವತಃ ಮುಂದೆ ನಿಂತು ಯಶಸ್ವಿಗೊಳಿಸಿದರು.

೨೦೦೬ರಲ್ಲಿ ಏಳು ಜಿಲ್ಲೆಗಳ ಕವಿವಿದ ಕನ್ನಡ ಅಧ್ಯಾಪಕರ ಸಮಾರಂಭವನ್ನು ಆಯೋಜಿಸುವಲ್ಲಿ ನೆರವು ನೀಡಿದರು. ೧೯೯೯ರಲ್ಲಿ ಅಭಿಲ ಭಾರತ ೫ನೇ ಶರಣ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸಿದ ಇವರು, ೧೯೯೨ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಅತ್ಯಂತ ಅದ್ದೂರಿಯಾಗಿ ಅಂದಿನ ಉಪರಾಷ್ಟ್ರಪತಿಗಳಾಗಿದ್ದ ಡಾ. ಶಂಕರದಯಾಳ ಶರ್ಮರನ್ನು ಆಮಂತ್ರಿಸಿ, ತಮ್ಮ ಘನ ಕಾರ್ಯಾಧ್ಯಕ್ಷತೆಯಲ್ಲಿ ಸಂಘಟಿಸಿದ್ದು ಮೂಲಕ ಇವರ ಸಾಹಿತ್ಯ ಹಾಗೂ ಕಲಾ ಪ್ರೇಮಕ್ಕೆ ಸಾಕ್ಷಿಯಾಗಿದೆ.[೮೫] ಬೆಳಗಾವಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವ ಕಾರ್ಯಾಧ್ಯಕ್ಷರಾಗಿರುವ ಶ್ರೀ ಕೋರೆಯವರು ೨೦೧೦ರಲ್ಲಿ ಅದನ್ನು ಅದ್ಧೂರಿಯಾಗಿ ಸಂಘಟಿಸುವ ಆಲೋಚನೆಯಲ್ಲಿದ್ದಾರೆ. ದಿನಾಂಕ ೧೨-೪-೨೦೧೦ರಂದು ಬಾದಾಮಿಯ ಶಿವಯೋಗ ಮಂದಿರದ ಶತಮಾನೋತ್ಸವಕ್ಕೆ ತಮ್ಮ ಪೂರ್ಣ ಸಹಕಾರವನ್ನು ನೀಡುವ ಮೂಲಕ ಸಮ್ಮೇಳನ ಯಶಸ್ವಿಯಾಗಲು ಸಹಕರಿಸಿದ್ದಾರೆ.[೮೬]

ಸಾಹಿತ್ಯ ಕ್ಷೇತ್ರದ ಬೆಳವಣಿಗೆಗೆ ಹಾಗೂ ಸಾಹಿತಿಗಳನ್ನು ಪ್ರೋತ್ಸಾಹಿಸುವ ಮತ್ತು ಸಮ್ಮೇಳನಗಳನ್ನು ಸಂಘಟಿಸುವ ಮೂಲಕ, ನಾಡಿನ ಸಾಹಿತ್ಯಕ ಕ್ಷೇತ್ರಕ್ಕೆ ಶ್ರೀ ಕೋರೆಯವರು ತಮ್ಮ ವಿಶಿಷ್ಟ ಕೊಡುಗೆಯನ್ನು ನೀಡುತ್ತಲೇ ಬಂದಿದ್ದಾರೆ.

ಕಲೆ, ನಾಟಕ ಮತ್ತು ಸಿನಿಮಾ ಹಾಗೂ ಕ್ರೀಡಾ ಕ್ಷೇತ್ರಗಳಿಗೆ ಶ್ರೀ ಪ್ರಭಾಕರ ಕೋರೆಯವರ ಕೊಡುಗೆಗಳು :

ಶ್ರೀ ಕೋರೆಯವರು ಕಲಾವಿದರಲ್ಲದಿದ್ದರೂ, ಕಲಾವಿದರ ಜೊತೆಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಬಾಲ್ಯದಿಂದಲೂ ಕಲಾ ಪ್ರೇಮವನ್ನು ಬೆಳೆಸಿಕೊಂಡು ಬಂದ ಕುಟುಂಬದ ಹಿನ್ನೆಲೆ ಶ್ರೀ ಕೋರೆಯವರಿಗೆ ಇದೆ.

ಅವರು ನಾಟಕ ಮತ್ತು ಸಂಗೀತಗಳ ಹುಚ್ಚು ಹಚ್ಚಿಕೊಂಡವರು. ಚಿತ್ರಕಲಾವಿದರೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಅದರಲ್ಲಿ ಗ್ರಾಮೀಣ ಪ್ರದೇಶದ ಕಲಾವಿದರು, ಸಂಗೀತಗಾರರನ್ನು ಅಕ್ಕರೆಯಿಂದ ಕಾಣುತ್ತಾರೆ. ಪ್ರೀತಿಯ ಅಭಿಮಾನ ತೋರುತ್ತಾರೆ. ಇಂತಹವರನ್ನು ಕಂಡರೆ ಸಣ್ಣವರು, ದೊಡ್ಡವರು ಎಣಿಸದೆ ಸಮಾನ ಗೌರವವನ್ನು ತೋರುತ್ತಾರೆ. ನಾಟ್ಯಭೂಷಣ ಏಣಗಿ ಬಾಳಪ್ಪನವರು, ಗಾನ ವಿದೂಷಿ ಡಾ. ಗಂಗೂಬಾಯಿ ಹಾನಗಲ್, ಖ್ಯಾತ ಚಿತ್ರ ನಿರ್ದೇಶಕರಾದ ನಾಗತೀಹಳ್ಳಿ ಚಂದ್ರಶೇಖರ, ಪದ್ಮಭೂಷಣ ಡಾ. ರಾಜಕುಮಾರವರ ಪರಿವಾರ, ಡಾ. ವಿಷ್ಣುವರ್ಧನ್ ಮತ್ತು ಭಾರತಿ ಬಹು ಭಾಷೆಯ ತಾರೆ ಜಯಪ್ರದಾ ಅಲ್ಲದೇ ಹಿಂದಿ ಚಲನಚಿತ್ರ ರಂಗದ ಶ್ರೀ ಅಮಿತಾಬ್ ಬಚ್ಚನ್‌ರೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿರುವರು. ಹಾಗೆಯೇ ಸ್ಥಳೀಯ ಕಲಾವಿದರನ್ನು ಮರೆಯದೇ ಪ್ರೋತ್ಸಾಹಿಸುತ್ತ ಬಂದಿದ್ದಾರೆ ಅಂಕಲಿಯ ಪಂಡಿತ ಶಿವಾನಂದ ಪಾಟೀಲರಲ್ಲದೆ, ಚಿಂಚಲಿಯ ಚಿತ್ರಕಲಾವಿದರಾದ ಶ್ರೀ ಮಠದ ಹಾಗೂ ಬಾಳು ಸದಲಗೆ ಅವರನ್ನು ಪ್ರೋತ್ಸಾಹಿಸಿದ್ದಾರೆ. ಚಿಕ್ಕೋಡಿಯ ರಂಗಕರ್ಮಿಗಳಾದ ಶ್ರೀಮತಿ ಸೋನುಬಾಯಿ ದೊಡ್ಡಮನಿಯನ್ನು ಕೂಡಾ ಗೌರವಿಸಿದ್ದಾರೆ.[೮೭] ಇವು ಶ್ರೀ ಕೋರೆಯವರ ಕಲಾ ಪ್ರೇಮವನ್ನು ಎತ್ತಿ ತೋರಿಸುತ್ತವೆ.

ಕೆ.ಎಲ್.ಇ. ವಿಶ್ವವಿದ್ಯಾಲಯದಲ್ಲಿ ಸಂಗೀತ ವಿದ್ಯಾಲಯವನ್ನು ಪ್ರಾರಂಭಿಸುವ ಮೂಲಕ, ಉತ್ತರಕರ್ನಾಟಕದ ಪ್ರತಿಭಾವಂತ ಸಂಗೀತಕಾರರು ಬೆಳೆದುಬರಲಿಕ್ಕೆ ವೇದಿಕೆಯನ್ನು ಒದಗಿಸುವ ಕಾರ್ಯವನ್ನು ಮಾಡಿದ್ದಾರೆ. ಇವರು ಬಾಲ್ಯದಿಂದಲೂ ಸಿನಿಮಾದ ಗೀಳು ಹಚ್ಚಿಕೊಂಡವರು. ೧೯೭೩ರಲ್ಲಿ ಅಂಕಲಿಯಲ್ಲಿಯೇ ಮಯೂರ ಚಿತ್ರ ಮಂದಿರದ ನಿರ್ಮಾಣ ಮಾಡಿರುವರಲ್ಲದೇ, ಉತ್ತರಕರ್ನಾಟಕದ ಚಲನಚಿತ್ರ ಪ್ರದರ್ಶಕರ ವೇದಿಕೆಗೆ ಸಕ್ರಿಯ ಸದಸ್ಯರಾಗಿರುವುದು ಇವರ ಕಲಾಪ್ರೇಮಕ್ಕೆ ಸಾಕ್ಷಿ. ಆ ಮೂಲಕ ಈ ಕ್ಷೇತ್ರಕ್ಕೆ ತಮ್ಮದೇ ಆದ ವಿಶೇಷವಾದ ಕೊಡುಗೆಯನ್ನು ಶ್ರೀ ಕೋರೆಯವರು ನೀಡುತ್ತಿದ್ದಾರೆ.[೮೮] ಹಾಗೆಯೇ ಕ್ರೀಡಾ ಕ್ಷೇತ್ರದ ಬಗ್ಗೆಯೂ ವಿಶೇಷವಾದ ಕಾಳಜಿಯನ್ನು ತೋರುವ ಶ್ರೀ ಕೋರೆಯವರು 'ಸದೃಢ ಮನಸ್ಸು ಹಾಗೂ ದೇಹಗಳು ಯುವ ಜನಾಂಗಕ್ಕೆ ಅಗತ್ಯವಾಗಿದೆ ಎಂದು ಅವರು ತಮ್ಮ ಕೆ.ಎಲ್.ಇ. ಸಂಸ್ಥೆಯ ಎಲ್ಲ ಅಂಗ ಸಂಸ್ಥೆಗಳಲ್ಲಿ ಸುಸಜ್ಜಿತವಾದ ಕ್ರೀಡಾಂಗಣವನ್ನು ನಿರ್ಮಾಣಮಾಡಿ, ಅದಕ್ಕೆ ಒಳಾಂಗಣ ಕ್ರೀಡಾಂಗಣವಲ್ಲದೇ, ವ್ಯಾಯಾಮ ಸಾಮಗ್ರಿಗಳನ್ನು ಒದಗಿಸಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಪ್ರತಿಭಾವಂತ ಕ್ರೀಡಾಪಟುಗಳು ಬೆಳೆದು ಬರಲಿಕ್ಕೆ ಎಲ್ಲ ನೆರವುಗಳನ್ನು ಒದಗಿಸಿ ಸ್ಫೂರ್ತಿ ತುಂಬಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿ, ರಾಷ್ಟ್ರಮಟ್ಟದ ಖ್ಯಾತನಾಮ ಕ್ರೀಡಾಪಟುಗಳನ್ನು ಸಂಸ್ಥೆಗೆ ಆಹ್ವಾನಿಸಿ ಯುವ ಕ್ರೀಡಾಪಟುಗಳಿಗೆ ಅವರಿಂದ ಸ್ಫೂರ್ತಿ ತುಂಬುವ ಕಾರ್ಯ ಮಾಡುತ್ತಿದ್ದಾರೆ. ಉದಾ. ೨೦೦೮ರಲ್ಲಿ ಕೆ.ಎಲ್.ಇ. ವಿಶ್ವವಿದ್ಯಾಲಯದ ಸಮಾರಂಭಕ್ಕೆ ಖ್ಯಾತ ಕ್ರಿಕೆಟಿಗ ಶ್ರೀ ಅನಿಲ ಕುಂಬ್ಳೆ ಹಾಗೂ ಚಲನಚಿತ್ರ ನಟ, ರಾಜಕಾರಣಿ ಕುಮಾರ ಬಂಗಾರಪ್ಪನವರನ್ನು ಆಹ್ವಾನಿಸಿದ್ದರು.[೮೯] ಈ ಭಾಗದ ಕ್ರೀಡಾಪಟುಗಳು ಬೆಳೆದುಬರಲಿಕ್ಕೆ ಪ್ರೋತ್ಸಾಹ ಒದಗಿಸುವ ಮೂಲಕ ತಮ್ಮ ಸೇವೆಯನ್ನು ಈ ಕ್ಷೇತ್ರಕ್ಕೂ ಸಲ್ಲಿಸುತ್ತಿದ್ದಾರೆ. ಶ್ರೀ ಪ್ರಭಾಕರ ಕೋರೆಯವರು ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳು ಕೂಡಾ ಉನ್ನತ ಸಾಧನೆಯನ್ನು ಗೈಯಲು ಅನುಕೂಲ ಕಲ್ಪಿಸಿಕೊಡುವ ಮೂಲಕ ಕ್ರೀಡಾ ಪ್ರೇಮವನ್ನು ಮೆರೆಯುತ್ತಿದ್ದಾರೆ.

ಶ್ರೀ ಪ್ರಭಾಕರ ಕೋರೆಯವರ ಧಾರ್ಮಿಕ ಹಾಗೂ ಸಾಮಾಜಿಕ ಕೊಡುಗೆಗಳು ಮತ್ತು ಸಾಧನೆಗಳು :

ಶ್ರೀ ಕೋರೆಯವರು ತುಂಬಾ ಸುಸಂಸ್ಕೃತ ಕುಟುಂಬದ ಹಿನ್ನೆಲೆಯನ್ನು ಹೊಂದಿದವರು. ಅವರ ತಂದೆ-ತಾಯಿ ಧಾರ್ಮಿಕರು. ಮಠಗಳ ಹಾಗೂ ಸ್ವಾಮೀಜಿಗಳ ಬಗ್ಗೆ ಅಪಾರವಾದ ನಂಬಿಕೆ ಹಾಗೂ ಗೌರವವನ್ನು ಹೊಂದಿದವರು. ಈ ಹಿನ್ನೆಲೆಯಲ್ಲಿ ಶ್ರೀ ಪ್ರಭಾಕರ ಕೋರೆಯವರು ಬಾಲ್ಯದಿಂದಲೇ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದು ಬಂದವರು. ಶ್ರೀ ಕೋರೆಯವರು ಮಠಮಾನ್ಯಗಳ ಬಗ್ಗೆ, ಮಠಾಧೀಶರ ಬಗ್ಗೆ ಅಪಾರ ಗೌರವ ಹೊಂದಿದವರು. ಹಿಂದೂ ಧರ್ಮದ ದೇವರುಗಳನ್ನು ಹಾಗೂ ಮಠಮಾನ್ಯಗಳನ್ನು ಗೌರವಿಸುವುದರ ಜೊತೆಗೆ ಮುಸ್ಲಿಂ, ಕ್ರೈಸ್ತ, ಜೈನ ಧರ್ಮದ ಬಗ್ಗೆ ಹಾಗೂ ಧರ್ಮಗುರುಗಳ ಬಗ್ಗೆ ಅಪಾರವಾದ ಗೌರವವನ್ನು ಹೊಂದುವ ಮೂಲಕ ತಮ್ಮ ಜಾತ್ಯಾತೀತ ವ್ಯಕ್ತಿತ್ವವನ್ನು ಉಳಿಸಿ, ಬೆಳೆಸಿಕೊಂಡವರು. ಅಲ್ಲದೇ ಬಸವಾದಿ ಶಿವಶರಣರ ತತ್ವಗಳನ್ನು ಶ್ರದ್ಧೆಯಿಂದ ಮೈಗೂಡಿಸಿಕೊಂಡು ಬಂದವರು. ಆ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸುತ್ತಿದ್ದಾರೆ.

ಇವತ್ತಿಗೂ ಅಂಕಲಿಯ ಶ್ರೀ ಕೋರೆಯವರ ಮನೆ ಹಾಗೂ ಅವರ ನಂದಿಕುರಳಿ ತೋಟವು ಯತಿವರ್ಯರ ಪೂಜೆ, ಪ್ರವಚನಕ್ಕೆ ಸದಾ ಸಿದ್ಧವಾಗಿರುತ್ತದೆ. ನಾಡಿನ ಪ್ರಮುಖ ಮಠಗಳು ಹಾಗೂ ಮಠಾಧೀಶರೊಂದಿಗೆ ಅನ್ಯೋನ್ಯವಾದ ಸಂಬಂಧವನ್ನು ಹೊಂದಿರುವ ಶ್ರೀ ಕೋರೆಯವರು, ಅದರಲ್ಲೂ ತ್ರಿವಿಧ ದಾಸೋಹಿ ಕರ್ನಾಟಕ ರತ್ನ ಡಾ. ಶಿವಕುಮಾರ ಸ್ವಾಮೀಜಿ ಸಿದ್ಧಗಂಗಾ ಮಠ ತುಮಕೂರು, ವಿಜಾಪೂರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಆದಿಚುಂಚನಗಿರಿಯ ಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳು, ಜಿಡಗಾ ಮುಗಳಖೋಡ ಮಠಗಳ ಶ್ರೀಗಳು, ಇಲಕಲ್ಲಿನ ಮಹಾಂತಪ್ಪಗಳು, ಕಾಶಿ, ಕೇದಾರ, ಶ್ರೀಶೈಲ, ಉಜ್ಜಯಿನಿ, ರಂಭಾಪುರಿ ಜಗದ್ಗುರುಗಳು, ಬಾಗಲಕೋಟೆ, ಹರಿಹರ ಪಂಚಮಸಾಲಿ ಪೀಠದ ಜಗದ್ಗುರುಗಳು, ಮೈಸೂರಿನ ಸುತ್ತೂರು ದೇಶಿಕೇಂದ್ರದ ಶ್ರೀಗಳು ಅಲ್ಲದೆ, ಬೆಳಗಾವಿಯ ನಾಗನೂರು ಮಠದ ಶ್ರೀ ಸಿದ್ಧರಾಮಶ್ರೀಗಳು, ಯಡೂರು ನಿಡಸೋಸಿ ಮಠದ ಶ್ರೀಗಳಲ್ಲದೆ, ಚಿಂಚಣಿ ಶ್ರೀಮಠ, ಅಥಣಿ ಮೋಟಗಿ ಮಠ ಹಾಗೂ ಅಥಣಿಯ ಗಚ್ಚಿನಮಠ, ಧಾರವಾಡದ ಮುರುಘಾ ಮಠ, ಹುಬ್ಬಳ್ಳಿಯ ಮೂರು ಸಾವಿರ ಮಠಗಳಲ್ಲದೆ, ಗದುಗಿನ ತೋಟದ ಸಿದ್ಧಲಿಂಗ ಸ್ವಾಮಿಗಳು, ಹಾನಗಲ್‌ನ ಕುಮಾರೇಶ್ವರ ಮಠ, ಮುಂಡರಗಿಯ ಅನ್ನದಾನೀಶ್ವರ ಮಠ, ಗದುಗಿನ ಪುಟ್ಟರಾಜ ಗವಾಯಿಗಳು ಕನಮಡಿಯ ಧರಿದೇವರು ಹಾಗೂ ಅಂಕಲಿಯ ಶ್ರೀ ಸಿದ್ಧೇಶ್ವರ ದೇವರ ಆರಾಧ್ಯ ಭಕ್ತರಾಗಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗಡೆ, ಪತಂಜಲಿ ಯೋಗ ಪೀಠದ ಡಾ. ಬಾಬಾ ರಾಮದೇವಜಿ ಮಹಾರಾಜರುಗಳಲ್ಲದೆ, ಹೀಗೆ ನಾಡಿನ ಹಾಗೂ ದೇಶದ ಹಲವಾರು ಪ್ರಸಿದ್ಧ ಮಠಗಳ ಆರಾಧಕರಾಗಿರುವ ಶ್ರೀ ಕೋರೆಯವರು ಈ ಮಠಗಳಲ್ಲಿ ಕೆಲ ಮಠಗಳ ಜೀರ್ಣೋದ್ಧಾರಕ್ಕಾಗಿ ಆರ್ಥಿಕ ಸಹಾಯವನ್ನು ಒದಗಿಸುವ ಮೂಲಕ ಮಠಗಳಿಗೆ ಮತ್ತಷ್ಟು ಸಮಾಜ ಸೇವೆಯನ್ನು ಸಲ್ಲಿಸುವ ಅವಕಾಶ ದೊರೆತಿದೆ. ಈ ಮಠಗಳು ಹಾಗೂ ಮಠಾಧೀಶರೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡು, ಸಂಸ್ಥೆಯ ವಿವಿಧ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿಸುವ ಮೂಲಕ

ಶ್ರೀ ಕೋರೆಯವರು ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಮಾರ್ಗದರ್ಶನ ಮಾಡಿಸುತ್ತಾರೆ. ಈ ಎಲ್ಲ ಶ್ರೀಗಳು ಶ್ರೀ ಪ್ರಭಾಕರ ಕೋರೆಯವರು ಕರ್ನಾಟಕ ಜನರಿಗೆ ನೀಡುತ್ತಿರುವ ಶಿಕ್ಷಣ, ಆರೋಗ್ಯ ಸೇವೆಗಳ ಮೂಲಕ ಸಮಾಜಕ್ಕೆ ಅವರು ಸಲ್ಲಿಸುತ್ತಿರುವ ಸೇವೆಯನ್ನು ಮುಕ್ತವಾಗಿ ಪ್ರಶಂಸಿಸಿ ಆಶೀರ್ವದಿಸಿದ್ದಾರೆ. ಶ್ರೀ ಕೋರೆಯವರು ಮಠಗಳಲ್ಲಿ ಹಾಗೂ ಮಠಾಧೀಶರುಗಳ ಮಧ್ಯ ಇರುವ ವ್ಯಾಜ್ಯಗಳನ್ನು ಬಗೆಹರಿಸುವ ಮೂಲಕ ಮಹತ್ತರವಾದ ಕಾರ್ಯವನ್ನು ಮಾಡಿದ್ದಾರೆ. ಈಗಲೂ ಈ ದಿಸೆಯಲ್ಲಿ ಕಾರ್ಯವನ್ನು ಮಾಡುತ್ತಿದ್ದಾರೆ. ಹಾಗೆಯೇ ಮಠಗಳ ಧಾರ್ಮಿಕ ಕಾರ್ಯಕ್ರಮಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಿದ್ದಾರೆ. ಇನ್ನು ಕೆಲ ಮಠಗಳ ಜೀರ್ಣೋದ್ಧಾರ ಮಾಡಿ, ಭಕ್ತರ ಸೇವೆಗಾಗಿ ಅರ್ಪಿಸಿದ್ದಾರೆ.[೯೦] ಅವುಗಳಲ್ಲಿಯ ಕೆಲವು ಉದಾಹರಣೆಗಳನ್ನು ಇಲ್ಲಿ ಅಧ್ಯಯನದ ದೃಷ್ಟಿಯಿಂದ ನೋಡಲಾಗಿದೆ.

ಸುಪ್ರಸಿದ್ಧ ಯಡೂರಿನ ಕಾಡಸಿದ್ಧೇಶ್ವರ ಮಠದ ಶ್ರೀ ಸಿದ್ಧಲಿಂಗ ಪಟ್ಟ ಚರಮೂರ್ತಿ ಸ್ವಾಮಿಗಳು ಲಿಂಗೈಕ್ಯರಾದಾಗ, ಈ ಪೀಠವನ್ನು ವಹಿಸಿಕೊಳ್ಳುವಂತೆ ಭಕ್ತರು ಶ್ರೀ ಷ. ಬ್ರ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳನ್ನು ಕೇಳಿಕೊಂಡರು, ಸ್ವಾಮಿಗಳು ಈ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಇರುವ ತಕರಾರು, ಕೋರ್ಟ್, ಕಛೇರಿ, ಕೇಸು, ವಾದ-ವಿವಾದಗಳಿರುವುದರಿಂದ ದಯವಿಟ್ಟು ಬೇರೆಯಾರನ್ನಾದರೂ ನೋಡಿಕೊಳ್ಳಿ ಎಂದು ನಿರಾಕರಿಸಿದರು. ಆಗ ಭಕ್ತರು ಶ್ರೀ ಪ್ರಭಾಕರ ಕೋರೆಯವರಿಗೆ ವಿಷಯವನ್ನು ತಿಳಿಸಿದಾಗ, ಅವರು ಸ್ವಾಮಿಗಳೊಂದಿಗೆ ಮಾತನಾಡಿ ಎಲ್ಲ ವ್ಯಾಜ್ಯಗಳನ್ನು ನಾನು ಬಗೆಹರಿಸಿಕೊಡುತ್ತೇನೆ, ತಾವುಗಳು ಪೀಠವನ್ನು ಅಲಂಕರಿಸಬೇಕು ಎಂದು ಕೇಳಿದಾಗ, ಶ್ರೀಗಳು ಕೋರೆಯವರ ಮಾತಿನಂತೆ ಪೀಠವನ್ನು ಅಲಂಕರಿಸಲು ಒಪ್ಪಿಕೊಂಡರು. ಯಡೂರಿನ ವೀರಭದ್ರ ದೇವಸ್ಥಾನವು ಲಕ್ಷಾಂತರ ಜನ ಭಕ್ತರ ಶ್ರದ್ಧೆಯ ಕೇಂದ್ರವಾದ ಈ ಕೇಂದ್ರವು ಹಲವಾರು ವ್ಯಾಜ್ಯಗಳಿಂದ ಕೂಡಿದ್ದು, ಸರಕಾರದ ಸ್ವಾಧೀನವಾಗುವ ಸ್ಥಿತಿಯು ನಿರ್ಮಾಣವಾದಾಗ, ಈ ದೇವಸ್ಥಾನವು ಸಮಾಜಕ್ಕೆ ಉಳಿಯಬೇಕೆಂದು ನಿರ್ಣಯಿಸಿದ ಶ್ರೀಗಳು, ಶ್ರೀ ಕೋರೆಯವರನ್ನು ಸಂಪರ್ಕಿಸಿದರು. ಆಗ ಕೋರೆಯವರು ಅಲ್ಲಿಯ ಸಮಸ್ಯೆಯನ್ನು ಬಗೆಹರಿಸಿದರು. ಆಗ ಹಲೋ ಸಾಹುಕಾರರೇ ಎಂದು ಶ್ರೀಗಳು ಸಂಬೋಧನೆ ಮಾಡಿದಾಗ, ಶ್ರೀ ಕೋರೆಯವರು ನಿಮ್ಮ ಮುಂದ ನಾ ಎಂಥ ಸಾಹುಕಾರ ನಾ ಎಂಥಾ ಸಾಹೇಬ ನಾ ನಿಮ್ಮ ಭಕ್ತ ಅದೀನ್ರಿ ಎಂದು ಶ್ರೀ ಕೋರೆಯವರು ಹೇಳಿದಾಗ, ಒಂದು ಕ್ಷಣ ಶ್ರೀಗಳು ಬೆರಗಾದರು. ಎಂಥಾ ದೊಡ್ಡ ವ್ಯಕ್ತಿತ್ವ! ಆದರೆ ಅದೆಷ್ಟು ವಿನಯ, ಬಸವಣ್ಣನವರ ವಾಣಿಯಂತೆ ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎನ್ನುವಂತೆ ಶ್ರೀ ಕೋರೆಯವರು ಮಠಗಳ ಹಾಗೂ ಮಠಾಧೀಶರನ್ನು ಹೇಗೆ ಗೌರವದಿಂದ ಕಾಣುತ್ತಾರೆ ಎನ್ನುವುದಕ್ಕೆ ಒಂದು ಉತ್ತಮ ನಿದರ್ಶನವಾಗಿದೆ.

ನಂತರ ಮಠದ ವಿಷಯದಲ್ಲಿ ಆಸಕ್ತಿ ವಹಿಸಿದ ಶ್ರೀ ಕೋರೆಯವರು, ಅತ್ಯಂತ ಮುತುವರ್ಜಿಯಿಂದ ಮತ್ತು ಕಾಳಜಿಪೂರ್ವಕವಾಗಿ ಶ್ರಮವಹಿಸಿ, ಸರ್ಕಾರದ ಸ್ವಾಧೀನ ಪಟ್ಟಿಯಿಂದ ಈ ದೇವಸ್ಥಾನವನ್ನು ಕೈ ಬಿಡುವಂತೆ ಮಾಡಿದರು. ಸರಕಾರದ ಗೆಜೆಟ್ ಆದೇಶ ಪತ್ರವನ್ನು ತಂದು ಶ್ರೀಗಳಿಗೆ ಕೊಟ್ಟಾಗ, ಸಮಾಜದ ಎಲ್ಲ ಜನರ ಮುಂದೆ ಶ್ರೀಗಳು ಕೃತಜ್ಞತಾ ಪರವಾದ ಮಾತುಗಳನ್ನು ಆಡಿದರು. ಶ್ರೀ ಕೋರೆಯವರು ಪ್ರತಿಯಾಗಿ "ಗುರುಗಳೇ ! ಈ ಕೆಲಸದ

ಹಿಂದೆ ನನ್ನ ಸಾಧನೆಯೇನೂ ಇಲ್ಲ. ಶ್ರೀ ವೀರಭದ್ರನಿಗೆ ಸರಕಾರದ ಅಧೀನದಲ್ಲಿ ಇರಬೇಕೆನ್ನುವ ಇಚ್ಛೆ ಇದ್ದರೆ ನಾವೇನು ಮಾಡಿದರೂ ಈ ಕೆಲಸ ಕೈಗೂಡುತ್ತಿರಲಿಲ್ಲ. ಅವನಿಗೆ ಸರಕಾರಕ್ಕಿಂತ ಸಮಾಜದ ಸಂಪತ್ತಾಗಿ ಉಳಿಯಬೇಕು ಎನ್ನುವ ಇಚ್ಛೆಯಿಂದ ನನ್ನ ಮೂಲಕ ಈ ಕಾರ್ಯವನ್ನು ಮಾಡಿಸಿದ್ದಾನೆ" ಎಂದು ಈಗಿನ ರಾಜಕಾರಣಿಗಳು ಕೆಲಸ ಮಾಡದೇ ಯಾರೋ ಮಾಡಿದ ಕೆಲಸವನ್ನು ತಾವು ಮಾಡಿದ್ದು ಎಂದು ಹೇಳಿಕೊಳ್ಳುತ್ತ ಪ್ರಚಾರ ಪಡೆಯುತ್ತಾರೆ. ಈ ಆದರೆ ಮಹತ್ವದ ಕಾರ್ಯವನ್ನು ಶ್ರೀ ಕೋರೆಯವರು ಮಾಡಿದರೂ. ಮಾಡದಂಥ ವಿನಯವಂತಿಕೆ ಕಂಡ ಜನತೆ ಅಂತೆಯೇ ಅಭಿಮಾನದಿಂದ ಶ್ರೀ ಕೋರೆಯವರಿಗೆ ಜಯಕಾರ ಹಾಕಿದ್ದರು. ನೂರಾರು ವರ್ಷಗಳಿಂದ ಇದ್ದ ಮಠದ ವ್ಯಾಜ್ಯ, ತಕರಾರುಗಳನ್ನು ಬಗೆಹರಿಸಿ ಇದಕ್ಕೆಲ್ಲ ಕ್ಷಣ ತಮ್ಮ ಪಾದಗಳ ಪ್ರಭಾವವೇ ಕಾರಣ ಎಂದು ಶ್ರೀ ಕೋರೆಯವರು ಅತ್ಯಂತ ವಿನಮ್ರವಾಗಿ ನುಡಿದರು. ಇದು ಅವರಲ್ಲಿರುವ ಸೌಜನ್ಯ ಮತ್ತು ಸಮಾಜದ ಬಗ್ಗೆ ಹೊಂದಿರುವ ಕಳಕಳಿ ಎಂತಹುದು ಎನ್ನುವುದನ್ನು ತೋರಿಸುತ್ತದೆ.[೯೧] ಈ ದೇವಸ್ಥಾನ ಕಾರ್ಯಗಳಿಗೆ ಕೆ.ಎಲ್.ಇ. ಸಂಸ್ಥೆಯ ಮೂಲಕ ಹಾಗೂ ವೈಯಕ್ತಿಕವಾಗಿ ಆರ್ಥಿಕ ಸಹಾಯ ನೀಡಿ ಆಹಾರ ಧಾನ್ಯಗಳನ್ನು ಅರ್ಪಿಸಿ ಭಕ್ತಿಯನ್ನು ಮೆರೆದವರು.

ಶ್ರೀ ಕೋರೆಯವರು ತಮ್ಮ ಮನೆಯ ದೇವರಾದ ಬಿಜಾಪುರ ಜಿಲ್ಲೆಯ ಕನಮಡಿಯ ಧರಿದೇವರ ದೇವಸ್ಥಾನ ವ್ಯಾಜ್ಯಗಳಿಂದ ಅಭಿವೃದ್ಧಿಯನ್ನು ಹೊಂದದೆ, ಅವಸಾನದ ಅಂಚಿನಲ್ಲಿ ಇರುವುದನ್ನು ಕಂಡು ಮರುಗಿದರು. ಈ ಇತಿಹಾಸ ಪ್ರಸಿದ್ಧವಾದ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲು ಮನಸ್ಸು ಮಾಡಿದರು. ಅದನ್ನು ಒಂದು ಸುಂದರ ತಾಣವನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ನಿರ್ಣಯಿಸಿ ಕಾರ್ಯಪ್ರವೃತ್ತರಾಗಿ, ಸುಮಾರು ಒಂದು ಕೋಟಿ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಿ, ಆ ದೇವಾಲಯದ ಗರ್ಭಗುಡಿಯ ಅಲಂಕಾರದ ಜೊತೆಗೆ, ತಮ್ಮ ಕುಟುಂಬದವರ ಖರ್ಚಿನಲ್ಲಿಯೇ ಭಕ್ತಾದಿಗಳ ಅನುಕೂಲಕ್ಕಾಗಿ ಸುಸಜ್ಜಿತ ಅತಿಥಿ ಗೃಹದ ನಿರ್ಮಾಣದ ಕಾರ್ಯವನ್ನು ಪ್ರಾರಂಭಿಸಿದರು. ಉಚಿತ ಪ್ರಸಾದ ನಿಲಯ, ಕಲ್ಯಾಣ ಮಂಟಪ, ಭಕ್ತಾದಿಗಳಿಗೆ ಸ್ನಾನಗೃಹ, ಶೌಚಾಲಯದ ವ್ಯವಸ್ಥೆಗಳಲ್ಲದೇ, ದೇವಾಲಯದ ಪುನರ್ ನವೀಕರಣದ ಕಾಮಗಾರಿಗಳನ್ನು ಮಾಡಲು ಕೆ.ಎಲ್.ಇ. ಸಂಸ್ಥೆಯ ಕಟ್ಟಡ ನಿರ್ಮಾಣ ವಿಭಾಗದವರನ್ನು ಸ್ವತಃ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ಸ್ಥಳವನ್ನು ಪರಿಶೀಲನೆ ಮಾಡಿ ಐತಿಹಾಸಿಕ ದೇವಾಲಯದ ಪರಿಸರವನ್ನು ಸುಂದರ ತಾಣವಾಗಿ ಅಭಿವೃದ್ಧಿಪಡಿಸಲು ಸಲಹೆ ನೀಡಿದರು. ಒಂದು ನೀಲನಕ್ಷೆಯನ್ನು ತಯಾರಿಸಿ, ತಮ್ಮ ಸಂಸದರ ಅನುದಾನದಲ್ಲಿ ೧೦ ಲಕ್ಷ ರೂಪಾಯಿಗಳನ್ನು ತ್ವರಿತವಾಗಿ ಕಾಮಗಾರಿಯನ್ನು ಪ್ರಾರಂಭಿಸಲು ನೀಡಿದರು. ನಂತರ ೧ ಕೋಟಿ ರೂಪಾಯಿ ವೆಚ್ಚದಲ್ಲಿ ದೇವಾಲಯದಲ್ಲಿನ ವಿವಿಧ ಯೋಜನೆಗಳನ್ನು ಪೂರೈಸಲು ಒದಗಿಸಲಾಗುವುದು ಎಂದು ಘೋಷಣೆಯನ್ನು ಮಾಡಿದರು.[೯೨] ಈ ಯೋಜನೆಯ ಕಾಮಗಾರಿಗೆ ಭೂಮಿ ಪೂಜೆಯನ್ನು ಸ್ವತಃ ಅವರೇ ನೆರವೇರಿಸಿದರು. ಆ ಮೂಲಕ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳ ಅಪಾರ ಪ್ರಮಾಣದ ಭಕ್ತರನ್ನು ಹೊಂದಿರುವ ಈ ಐತಿಹಾಸಿಕ ದೇವಾಲಯವನ್ನು ಅಭಿವೃದ್ಧಿಪಡಿಸುವ ಶ್ರೇಷ್ಠ ಕಾರ್ಯವನ್ನು ಕೈಗೊಂಡರು.[೯೩] ಈ ದೇವಾಲಯಕ್ಕೆ ಪ್ರತಿ ವರ್ಷ ತಮ್ಮ ಹುಟ್ಟುಹಬ್ಬದ ದಿನ ಮತ್ತು ದೇವರ ಜಾತ್ರೆಗೆ

ತಪ್ಪದೇ ಕುಟುಂಬ ಸಮೇತ ಆಗಮಿಸುವ ಶ್ರೀ ಕೋರೆಯವರು, ತಮ್ಮ ಮನೆಯ ದೇವರ ಆಶೀರ್ವಾದವನ್ನು ಪಡೆಯುತ್ತಾರೆ. ಈ ದೇವಾಲಯವು ಗ್ರಾಮದ ಮುಖಂಡರ ವೈಮನಸ್ಸಿನಿಂದ ಅಭಿವೃದ್ಧಿಯಾಗದೆ, ಇತ್ತೀಚೆಗೆ ನಿರ್ಲಕ್ಷಕ್ಕೆ ಒಳಗಾಗಿತ್ತು. ಅದಕ್ಕೆ ಪ್ರಮುಖ ಕಾರಣವೆಂದರೆ ಕನಮಡಿ ಗ್ರಾಮದ ಪ್ರಸಿದ್ಧ ಗೌಡಕಿ ಮನೆತನದ ಶ್ರೀ ರುದ್ರಗೌಡರಿಗೆ ಈ ದೇವಾಲಯದ ಆಡಳಿತದ ಜವಾಬ್ದಾರಿಯು ಪಾರಂಪರಿಕವಾಗಿತ್ತು. ಇವರ ಇಬ್ಬರು ಮಕ್ಕಳು ಬಿ. ಆರ್. ಪಾಟೀಲ (ಮಾಜಿ ಸಂಸದರು) ಹಾಗೂ ಸುಭಾಷಗೌಡ ಪಾಟೀಲರಿಗೆ ಈ ಹೊಣೆಗಾರಿಕೆ ಆದರೆ ದಿ. ರುದ್ರಗೌಡರು ಅದರ ಜವಾಬ್ದಾರಿಯನ್ನು ಹಠಮಾರಿತನದಿಂದ ಬೇರೆ ಒಬ್ಬ ವ್ಯಕ್ತಿಗೆ ವಹಿಸಿದ್ದೇ ಈ ಸಮಸ್ಯೆಗೆ ಕಾರಣ. ಆದರೆ ಕನಮಡಿಯಲ್ಲಿ ದಿ. ಬಿ. ಆರ್. ಪಾಟೀಲ ಹಾಗೂ ಸುಭಾಷಗೌಡ ಪಾಟೀಲರು ಗ್ರಾಮದ ಪ್ರಮುಖರಾಗಿದ್ದು, ಸಹಜವಾಗಿ ಗ್ರಾಮಸ್ಥರಲ್ಲೂ ಈ ಬಗ್ಗೆ ಅಸಮಾಧಾನವಿತ್ತು. ಹೀಗಾಗಿ ಜನ ಗೌಡರ ಆಜ್ಞೆಯಂತೆ ದೇವಸ್ಥಾನಕ್ಕೆ ಹೋಗುವುದನ್ನು ಬಹಳಷ್ಟು ಕಡಿಮೆ ಮಾಡಿದರು. ಮೊದಲು ವಿಜೃಂಭಣೆಯಿಂದ ಜಾತ್ರೆ ನಡೆಯುತ್ತಿತ್ತು. ಈಗ ಆ ವಿಜೃಂಭಣೆ ಕಡಿಮೆಯಾಗಿತ್ತು. ಅದನ್ನು ಮನಗಂಡ ಶ್ರೀ ಕೋರೆಯವರು ಆ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿದ್ದಾರೆ. ಬಹುಶಃ ಈ ದೇವಸ್ಥಾನದ ಮೊದಲಿನ ಪರಂಪರೆಯಂತೆಯೇ ಸುಭಾಷಗೌಡ ಪಾಟೀಲ ಇಲ್ಲವೆ ದಿ. ಬಿ. ಆರ್. ಪಾಟೀಲರ ಮಕ್ಕಳಿಗೆ ವಹಿಸುವುದು ಸೂಕ್ತ ಎನ್ನುವುದು ಬಹುತೇಕ ಗ್ರಾಮಸ್ಥರ ಆಸೆಯಾಗಿದೆ.[೬೪] ಹೀಗೆ ಶ್ರೀ ಕೋರೆಯವರು ಕನಮಡಿ ಧರಿದೇವರ ದೇವಾಲಯವನ್ನು ಹಾಗೂ ಅದಕ್ಕೆ ಬೇಕಾದ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಸುಮಾರು ೧ ಕೋಟಿ ರೂಪಾಯಿಗಳಷ್ಟು ಹಣವನ್ನು ಈ ದೇವಾಲಯಕ್ಕೆ ನೀಡಿ ಪರಿಸರವನ್ನು ಅಭಿವೃದ್ಧಿಪಡಿಸಲು ಮುಂದಾಗಿರುವುದು ಅವರ ಭಕ್ತಿ ಎಂತಹುದು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಅಂತೆಯೇ ಅಂಕಲಿಯಲ್ಲಿ ಶಿವಮಂದಿರ ಹಾಗೂ ಮುಸ್ಲಿಂ ಧರ್ಮದ ಪ್ರಾರ್ಥನಾ ಮಂದಿರ ನಿರ್ಮಾಣಕ್ಕೆ ಹಣಕಾಸಿನ ಸಹಾಯ ಒದಗಿಸುವ ಮೂಲಕ ಮಠ ಮಂದಿರ, ಮಸೀದಿಗಳ ಜೀರ್ಣೋದ್ಧಾರ ಹಾಗೂ ನಿರ್ಮಾಣಕ್ಕಾಗಿ ಮಾಡುತ್ತಿರುವ ಸೇವೆಯನ್ನು ಇಲ್ಲಿ ಉದಾಹರಿಸಲಾಗಿದೆ. ಇನ್ನು ಅನೇಕ ದೇವಾಲಯ, ಮಠ, ಮಂದಿರ, ಮಸೀದಿಗಳು ಹಾಗೂ ಚರ್ಚುಗಳಲ್ಲದೇ, ಜೈನ ಬಸದಿಗಳ ನಿರ್ಮಾಣಕ್ಕಾಗಿ ಹಾಗೂ ಅವುಗಳ ನವೀಕರಣಕ್ಕಾಗಿ ಶ್ರೀ ಕೋರೆಯವರು ಹಣಕಾಸಿನ ಸಹಾಯವನ್ನು ಒದಗಿಸಿ ಅವುಗಳ ಅಭಿವೃದ್ಧಿಗೆ ಕಾರಣವಾಗಿದ್ದಾರೆ. ಅಂತೆಯೇ ಅನೇಕ ದೇವಾಲಯಗಳಲ್ಲಿನ ವಿವಾದಗಳನ್ನು ಬಗೆಹರಿಸಿ, ಅವುಗಳನ್ನು ಭಕ್ತರ ಸೇವೆಗೆ ಸಿದ್ಧಗೊಳಿಸಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ, ಕೇವಲ ಹಿಂದೂ ದೇವಾಲಯಗಳಲ್ಲದೆ ಮುಸ್ಲಿಂ, ಕ್ರೈಸ್ತ ಹಾಗೂ ಜೈನ ಧರ್ಮೀಯರ ದೇವಾಲಯಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಸಹಾಯ ಸಲ್ಲಿಸುವ ಶ್ರೀ ಕೋರೆಯವರು ಕೋಮು ಸೌಹಾರ್ದತೆಯ ಸಂಕೇತವೆನಿಸಿದ್ದಾರೆ.[೬೫]

ಹೀಗೆ ನಾಡಿನ ಹೆಸರಾಂತ ಮಠಗಳಿಗೆ ಸಹಾಯವನ್ನು ಒದಗಿಸುತ್ತಿರುವುದಲ್ಲದೇ. ಮಠಗಳ ಹಾಗೂ ಮಠಾಧೀಶರು ನಡೆಸುವ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಗೆ ಸಹಾಯ ಒದಗಿಸುತ್ತಾ ಬಂದಿದ್ದಾರೆ. ಮಠಗಳಲ್ಲಿ ನಡೆಯುವ

ಧಾರ್ಮಿಕ, ಸಾಹಿತ್ಯಕ, ಲೋಕ ಕಲ್ಯಾಣದ ವಿವಿಧ ಕಾರ್ಯಕ್ರಮಗಳನ್ನು ಸ್ವತಃ ಮುಂದೆನಿಂತು ಯಶಸ್ವಿಯಾಗುವಂತೆ ಮಾಡಿದ್ದಾರೆ. ಮಠಗಳಿಂದ ಪ್ರಕಟಗೊಳ್ಳುವ ಗ್ರಂಥಗಳಿಗೂ ಆರ್ಥಿಕ ಸಹಾಯ ಒದಗಿಸಿದ್ದಾರೆ. ಇದರಲ್ಲಿ ಬೆಳಗಾವಿಯ ನಾಗನೂರ ಶ್ರೀ ಮಠದ ಮಹತ್ವದ ಸಾಮಾಜಿಕ ಕಾರ್ಯವನ್ನು ಸದಾ ಬೆಂಬಲಿಸುತ್ತಾ ಬಂದಿದ್ದಾರೆ. ಹೀಗೆ ಶ್ರೀ ಕೋರೆಯವರು ಮಠಗಳ ಹಾಗೂ ಮಠಾಧೀಶರನ್ನು ಗೌರವದಿಂದ ಕಾಣುವ ಮೂಲಕ ಧಾರ್ಮಿಕ ಕ್ಷೇತ್ರದ ಬೆಳವಣಿಗೆಗೆ ತಮ್ಮದೇಯಾದ ವಿಶಿಷ್ಟ ಭಕ್ತಿಪೂರ್ವಕ ಕೊಡುಗೆಗಳನ್ನು ಸಲ್ಲಿಸುತ್ತಾ ಬಂದಿದ್ದಾರೆ.

ಕೃತಕ, ಢಾಂಭಿಕ ಧಾರ್ಮಿಕ ನಿಷ್ಠೆಯನ್ನು ತೋರುವ ರಾಜಕೀಯ ಮುಖಂಡರಿಗೆ ಪ್ರತಿಯಾಗಿ ನಿಸ್ವಾರ್ಥ ಧಾರ್ಮಿಕ ಸೇವೆಯನ್ನು ಸಲ್ಲಿಸುತ್ತಿರುವ ಶ್ರೀ ಕೋರೆಯವರು ವಿಶಿಷ್ಟ ವ್ಯಕ್ತಿಯೆನಿಸಿದ್ದಾರೆ.

ಶ್ರೀ ಕೋರೆಯವರು ಸಾಮಾಜಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ :

ಶ್ರೀ ಪ್ರಭಾಕರ ಕೋರೆಯವರು ಜನರ ಸೇವೆಗಾಗಿ ಸದಾ ಸಮಾಜದ ಜನರ ಒಳತಿಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವರು. ರಾಜಕೀಯ ಶೈಕ್ಷಣಿಕ, ಆರೋಗ್ಯ, ಧಾರ್ಮಿಕ, ಸಾಹಿತ್ಯಕ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಸಮಾಜದ ಜನರು ಸಂಕಷ್ಟಕ್ಕೆ ಸಿಲುಕಿದಾಗ ಆ ಜನರ ಸಲುವಾಗಿ ಮನಮಿಡಿದು ತಕ್ಷಣ ಅವರ ಸೇವೆಯನ್ನು ಮಾಡಲು ಮುಂದಾಗಿ ಆ ಜನರ ಪಾಲಿಗೆ ಆಪತ್ಭಾಂದವರಂತೆ ಧಾವಿಸಿ ನೆರವು ನೀಡಿ ಮಾನವೀಯತೆಯನ್ನು ತೋರುತ್ತಾರೆ.

೧. ೧೯೯೯ರಲ್ಲಿ ಕಾರ್ಗಿಲ್ ಯುದ್ಧ ಘೋಷಣೆ ಮಾಡಿದಾಗ ಸ್ವಂತ ಹಣದ ಜೊತೆಗೆ ಕೆ.ಎಲ್.ಇ. ಸಂಸ್ಥೆಯ ಸಿಬ್ಬಂದಿ ಹಾಗೂ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಿ ಅದನ್ನು ಕಾರ್ಗಿಲ್ ಯುದ್ಧ ಪರಿಹಾರದ ನಿಧಿಗೆ ಅರ್ಪಿಸಿ ದೇಶ ಪ್ರೇಮವನ್ನು ಮೆರೆದಿದ್ದಾರೆ. ೨೦೦೨ರಲ್ಲಿ ಭೀಕರ ಭೂಕಂಪದಿಂದ ತತ್ತರಿಸಿದ ಗುಜರಾತ ರಾಜ್ಯಕ್ಕೆ ಶ್ರೀ ಕೋರೆಯವರು ಕೆ.ಎಲ್.ಇ. ಸಂಸ್ಥೆಯ ಸಿಬ್ಬಂದಿಯನ್ನು ಕಳಿಸಿ ತಮ್ಮ ಸ್ವಂತ ಹಣವನ್ನು ಆಗಿನ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಅರ್ಪಿಸಿ ಸಂತ್ರಸ್ತರ ನೆರವಿಗೆ ಧಾವಿಸಿದರು. ಭೂಕಂಪಪೀಡಿತ ಜನರ ಕಷ್ಟಕ್ಕೆ ಶೀಘ್ರವಾಗಿ ಸ್ಪಂದಿಸಿ ಮಾನವೀಯತೆಯನ್ನು ತೋರಿದ ಶ್ರೀ ಕೋರೆಯವರನ್ನು ಆಗಿನ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಅಭಿನಂದನೆ ಹಾಗೂ ಮೆಚ್ಚುಗೆಯನ್ನು ಗಳಿಸಿದರು.

೨. ೨೦೦೫ರಲ್ಲಿ ಭಾರತದ ಅನೇಕ ರಾಜ್ಯಗಳು ಸುನಾಮಿ ಅಲೆಯಿಂದಾಗಿ ವಿಪರೀತ ಹಾನಿಯನ್ನು ಅನುಭವಿಸಿದಾಗಲೂ.ಶ್ರೀ ಕೋರೆಯವರು ಹಾನಿಗೆ ಒಳಗಾದ ಪ್ರದೇಶಗಳ ಜನರಿಗಾಗಿ ಹಣಕಾಸಿನ ನೆರವನ್ನು ಪ್ರಧಾನಿ ಡಾ. ಮನಮೋಹನ್ ಸಿಂಗರಿಗೆ ಅರ್ಪಿಸಿದರು. ಸುನಾಮಿಯ ಭೀಕರತೆಯಿಂದ ತೊಂದರೆಗೆ ಒಳಗಾದ ಜನರ ಕಷ್ಟಕ್ಕೆ ಸ್ಪಂದಿಸಿದ ಶ್ರೀ ಕೋರೆಯವರ ಈ ಕಾರ್ಯವನ್ನು ಪ್ರಧಾನ ಮಂತ್ರಿಗಳು ಮುಕ್ತವಾಗಿ ಪ್ರಶಂಸಿಸಿದರು.

೩. ೨೦೦೪ ಮತ್ತು ೨೦೦೫ರಲ್ಲಿ ಕೃಷ್ಣಾ ನದಿಯ ಪ್ರವಾಹದಿಂದ ನದಿ ಪಕ್ಕದ ಹತ್ತಾರು ಊರುಗಳು ನೆರೆ ಹಾವಳಿಗೆ

ಸಿಲುಕಿದಾಗ ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ಜನರ ಸಹಾಯಕ್ಕೆ ಧಾವಿಸಿದರು. ತಮ್ಮ ಸ್ವಂತ ಊರಾದ ಅಂಕಲಿಯ 'ಮಯೂರ' ಚಿತ್ರ ಮಂದಿರ ಹಾಗೂ ತಮ್ಮ ಮನೆಯಲ್ಲಿ ಹಾಗೂ ಅದರ ವಿಶಾಲ ಬಯಲಿನಲ್ಲಿ ಸ್ವಂತ ಖರ್ಚಿನಿಂದ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನು ಕಲ್ಪಿಸಿ, ಜನರಿಗೆ ಉಚಿತ ಆಹಾರ, ಬಟ್ಟೆಗಳಲ್ಲದೆ, ಚಾದರ ಹಾಗೂ ಬೆಡ್‌ಶೀಟ್‌ಗಳನ್ನು ಉಚಿತವಾಗಿ ನೀಡಿದರು. ಕೆ.ಎಲ್.ಇ. ಆಸ್ಪತ್ರೆಯ ವೈದ್ಯರನ್ನು ಕಳುಹಿಸಿ ಸಂತ್ರಸ್ತರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ಔಷಧೋಪಚಾರ ವ್ಯವಸ್ಥೆಯನ್ನು ನಿರಂತರವಾಗಿ ಒಂದು ತಿಂಗಳ ಕಾಲ ಮಾಡಿದರು. ಸರ್ಕಾರ ಒದಗಿಸುತ್ತಿರುವ ಸೌಕರ್ಯಗಳಿಗೆ ಕಡಿಮೆ ಇಲ್ಲದಂತೆ ಸಂತ್ರಸ್ತರೊಂದಿಗೆ ಇದ್ದು, ದಾಸೋಹವನ್ನು ನೀಡಿದರು. ಇಂದು ಅಧಿಕಾರಹೊಂದಿರುವವರು ಇಂತಹ ಸಮಯದಲ್ಲಿ ನಿರ್ಲಕ್ಷ ವಹಿಸುತ್ತಿರುವ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಇಂತಹ ಸಂದರ್ಭದಲ್ಲಿ ವೈಯುಕ್ತಿಕವಾಗಿ ಆರ್ಥಿಕ ನೆರವು ನೀಡಿದ್ದಾರೆ. ಒಂದು ತಿಂಗಳ ಕಾಲ ಎಲ್ಲ ಸೌಕರ್ಯಗಳನ್ನು ಪೂರೈಸಿದ ನೈಜ ಜನಪರ ಕಾಳಜಿಯುಳ್ಳ ನಾಯಕರು ಎನಿಸಿದರು.[೬೭]

ಹಾಗೆಯೇ ೨೦೦೫, ೨೦೦೭ ಮತ್ತು ೨೦೦೮ರಲ್ಲಿನ ಕೃಷ್ಣಾ ನದಿ ಪ್ರವಾಹದ ಸಂತ್ರಸ್ತರಿಗೆ ನಿರಂತರವಾಗಿ ಸಹಾಯ ಸಲ್ಲಿಸಿದರು. ಸಮಾಜದಲ್ಲಿ ತೊಂದರೆಗೆ ಸಿಲುಕಿದ ಜನರಿಗಾಗಿ ಮಾನವೀಯತೆಯ ಕಾರ್ಯಗಳನ್ನು ಮಾಡುತ್ತಲೇ ಬಂದಿದ್ದಾರೆ.[೬೮]

ಜುಲೈ, ಆಗಸ್ಟ್ ೨೦೦೯ರ ಸಮಯದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹಿಂದೆ ಎಂದೂ ಕಂಡರಿಯದ ವಿಪರೀತ ಮಳೆ ಹಾಗೂ ನೆರೆ ಹಾವಳಿಯಿಂದಾಗಿ ಲಕ್ಷಾಂತರ ಜನರು ತಮ್ಮ ಮನೆ ಮಠಗಳನ್ನು ಕಳೆದುಕೊಂಡರಲ್ಲದೇ, ಸುಮಾರು ೧೫೦ಕ್ಕೂ ಅಧಿಕ ಜನ ಪ್ರಾಣವನ್ನು ಕಳೆದುಕೊಂಡರು. ಕೆಲ ಗ್ರಾಮ:ಗಳಂತೂ ಸಂಪೂರ್ಣವಾಗಿ ವರುಣನ ಆರ್ಭಟಕ್ಕೆ ಒಳಗಾಗಿ, ಕರಾಳ ಸ್ಥಿತಿ ನಿರ್ಮಾಣವಾದಾಗ ಸ್ಥಿತಿಯನ್ನು ಕಂಡು ಮನಕರಗಿ ಈ ಜನರ ಕಷ್ಟಕ್ಕೆ ಸ್ಪಂದಿಸಬೇಕು, ಆ ಜನರು ಪುನಃ ಬದುಕು ಕಟ್ಟಿಕೊಳ್ಳಲು ಸಹಾಯಹಸ್ತ ನೀಡಬೇಕು ಎಂದು ನಿರ್ಧರಿಸಿದರು. ೫೧ ಲಕ್ಷ ರೂ. ಮೊತ್ತವನ್ನು ಕೆ.ಎಲ್.ಇ. ಸಂಸ್ಥೆಯ ಮೂಲಕ ಮುಖ್ಯಮಂತ್ರಿಯವರ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಮುಖ್ಯಮಂತ್ರಿ ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೆ ಸಲ್ಲಿಸಿದರು. ಈ ಕಾರ್ಯವನ್ನು ಮೆಚ್ಚಿದ ಮುಖ್ಯಮಂತ್ರಿಗಳು ಪ್ರಥಮ ಕಂತಿನಲ್ಲಿಯೇ ಇಷ್ಟೊಂದು ಮೊತ್ತವನ್ನು ನೀಡಿದ್ದನ್ನು ಶ್ಲಾಘಿಸಿದರು. ನೆರೆ ಸಂತ್ರಸ್ತರ ಪುನರ್ ವಸತಿಗಾಗಿ ಶ್ರೀ ಕೋರೆಯವರ ನೇತೃತ್ವದ ಕೆ.ಎಲ್.ಇ. ಸಂಸ್ಥೆಯ ಈ ಕೊಡುಗೆ ಇತರ ಸಂಸ್ಥೆಗಳಿಗೆ ಮಾದರಿಯಾಗಲಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.[೬೯] ಹೀಗೆ ಸದಾ ಸಮಾಜದ ಜನರು ಸಂಕಷ್ಟಕ್ಕೆ ಸಿಲುಕಿದಾಗ ಅಗತ್ಯವ ನೆರವನ್ನು ಒದಗಿಸಿ ಶ್ರೀ ಪ್ರಭಾಕರ ಕೋರೆಯವರು ಈ ಜನರ ಕಣ್ಣೀರು ಒರೆಸುವ ಕಾರ್ಯಕ್ಕೆ ಸಹಾಯ ಸಲ್ಲಿಸಿ ಇತರ ರಾಜಕೀಯ ನಾಯಕರಿಗೆ ಆದರ್ಶಪ್ರಾಯರಾಗಿದ್ದಾರೆ.

ವೀರಶೈವ ಕಲ್ಯಾಣ ಕೇಂದ್ರದ ರೂವಾರಿ :

೧೯೯೨ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ೨೧ನೇ ಮಹಾ ಅಧಿವೇಶನದ

ನಿರ್ಣಯದಂತೆ, ಬೆಳಗಾವಿಯಲ್ಲಿ ವೀರಶೈವ ಸಮಾಜದವರ ಅನುಕೂಲಕ್ಕಾಗಿ ವಧು–ವರ ಕೇಂದ್ರವನ್ನು ಸ್ಥಾಪಿಸಬೇಕು ಎಂಬ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸಿದ ಶ್ರೀ ಕೋರೆಯವರು, ಅದಕ್ಕಾಗಿ ತಮ್ಮ ಕೆ.ಎಲ್.ಇ. ಸಂಸ್ಥೆಯ ಕಿಂಡರ್ ಗಾರ್ಡನ್ ಕಟ್ಟಡದ ಕೆಳಭಾಗದಲ್ಲಿ ಕೇಂದ್ರ ಕಾರ್ಯಾಲಯವನ್ನು ನಡೆಸಲು ಅನುಮತಿಯನ್ನು ನೀಡಿದರು. ಅದಕ್ಕೆ ಬೇಕಾದ ಪೀಠೋಪಕರಣ, ದೂರವಾಣಿ ಸಂಪರ್ಕವನ್ನು ತಮ್ಮ ಸಂಸದರ ಕೋಟಾದಡಿಯಲ್ಲಿ ಕಲ್ಪಿಸಿಕೊಟ್ಟರು. ತಮ್ಮ ಪ್ರಭಾವದಿಂದ ೫೦ ಸಾವಿರ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸಿ, ಅದನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟು ಅದರ ಮೇಲಿನ ಬಡ್ಡಿಯ ಹಣದಲ್ಲಿಯೇ ಕೇಂದ್ರವು ಕಾರ್ಯವನ್ನು ನಿರ್ವಹಿಸುವಂತೆ ಅನುಕೂಲ ಕಲ್ಪಿಸಿದರು. ಈ ಕಾರ್ಯಕ್ಕೆ ವಿ. ಎಸ್. ಬಾಗಿ, ಎಸ್. ವಿ. ಬೆಂಬಳಗಿ, ಎಂ. ಎಸ್. ಮುಗಳಿ ಕೈ ಜೋಡಿಸಿದರು. ಇಂದು ಈ ಕೇಂದ್ರದ ನೆರವಿನಿಂದ ೪೦ಕ್ಕೂ ಅಧಿಕ ವಧು–ವರ ಸಮಾವೇಶಗಳನ್ನು ನಡೆಯಿಸಿ, ನೂರಾರು ವಿವಾಹಗಳು ಜರುಗಲಿಕ್ಕೆ ಕಾರಣವಾದರು. ಈ ಕೇಂದ್ರಕ್ಕೆ ಕಂಪ್ಯೂಟರನ್ನು ಒದಗಿಸಿ, ಅಂತರ್‌ಜಾಲದ ಸಂಪರ್ಕ ಹೊಂದುವಂತೆ ಮಾಡಿದ ಇವರು, ದೂರದ ಊರಿನ ಜನರಿಗೆ ಸುಲಭವಾಗಿ ಮಾಹಿತಿಯ ವಿನಿಮಯಕ್ಕೆ ಅವಕಾಶ ಕಲ್ಪಿಸಿದ್ದಾರೆ. ಇಂದಿನ ಆಧುನಿಕ, ಔದ್ಯೋಗಿಕ ಯುಗದಲ್ಲಿ ವಧು – ವರಗಳನ್ನು ಹುಡುಕಿಕೊಳ್ಳುವ ಸಲುವಾಗಿ ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿರುವ ವೀರಶೈವ ಸಮಾಜದವರಿಗೆ ಈ ಕೇಂದ್ರದ ಮೂಲಕ ಆ ತೊಂದರೆಯನ್ನು ನೀಗಿಸಿದ ಶ್ರೇಯಸ್ಸು ಶ್ರೀ ಕೋರೆಯವರದ್ದಾಗಿದೆ.”

ಇದಲ್ಲದೇ ಅನೇಕ ಬಡ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ವೆಚ್ಚವನ್ನು ಸ್ವತಃ ಕೋರೆಯವರು ಒದಗಿಸಿ, ಆ ಬಡ ಜನರ ಮಕ್ಕಳು ವಿದ್ಯಾವಂತರಾಗಲು ಸಾಕಷ್ಟು ನೆರವನ್ನು ಒದಗಿಸುತ್ತಾ ಬಂದಿದ್ದಾರೆ. ಈ ಮೂಲಕ ಸಮಾಜದ ಬಡ ಜನರ ಕುಟುಂಬಗಳ ಮಕ್ಕಳು ಉನ್ನತ ಶಿಕ್ಷಣ ಹೊಂದಿ, ಒಳ್ಳೆಯ ಹುದ್ದೆಗಳನ್ನು ಪಡೆದು, ತಮ್ಮ ಕುಟುಂಬವನ್ನು ಆರ್ಥಿಕ ಕಷ್ಟದಿಂದ ಪಾರು ಮಾಡಲು ಸಹಾಯ ಒದಗಿಸುವ ಮೂಲಕ ಸಹಸ್ರಾರು ಜನರ ಬಾಳು ಬೆಳಗಿದ್ದಾರೆ.

ಬಡ ಜನರ ಹೃದಯದ ಚಿಕಿತ್ಸೆಗೆ ಜನ್ಮದಿನವಾದ ಆಗಸ್ಟ್ ೧ರಂದು ಶ್ರೀ ಕೋರೆಯವರು ೧ ಲಕ್ಷ ರೂಪಾಯಿಯ ಉಚಿತ ಹೃದಯ ಶಸ್ತ್ರಚಿಕಿತ್ಸೆಯಲ್ಲದೆ, ೨೫ ಸಾವಿರ ರೂಪಾಯಿಗಳನ್ನು ಅಂಗವಿಕಲ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡುವ ಮೂಲಕ ಸಮಾಜದ ಕೆಳಸ್ತರದ ಜನರಿಗೆ ಸಹಾಯವನ್ನು ಒದಗಿಸಿದ್ದಾರೆ. ಈ ಮೊದಲು ನೋಡಿದಂತೆ ಕೆ.ಎಲ್.ಇ. ಸಂಸ್ಥೆಯ ಮೂಲಕ ಬಡಜನರ ಮಕ್ಕಳ ಶಿಕ್ಷಣಕ್ಕಾಗಿ ಹಾಗೂ ಬಡಜನರ ಆರೋಗ್ಯದ ಉಚಿತ ಚಿಕಿತ್ಸೆಗಾಗಿ ಉಚಿತ ಧರ್ಮಾರ್ಥ ಆಸ್ಪತ್ರೆಯನ್ನು ಸ್ಥಾಪಿಸಿರುವುದು ಹಾಗೂ ಆ ರೋಗಿಗಳಿಗೆ ಆಹಾರ ಹಾಗೂ ವೈದ್ಯಕೀಯ ಉಚಿತ ಸೇವೆಗೆ 'ಅನ್ನಪೂರ್ಣೇಶ್ವರಿ ನಿಧಿ'ಯನ್ನು ಸ್ಥಾಪಿಸಿ ಸಹಸ್ರಾರು ಬಡಜನರಿಗೆ ಉಚಿತ ಸೇವೆಗಳನ್ನು ಕಲ್ಪಿಸಿದ್ದಾರೆ. ಸಮಾಜದ ಜನರಿಗೆ ಸಾಕಷ್ಟು ಉಪಯುಕ್ತ ಸೇವೆಗಳನ್ನು ಸಲ್ಲಿಸುತ್ತಾ ಬಂದಿರುವ ಶ್ರೀ ಕೋರೆಯವರು ಆ ಮೂಲಕ ಸಮಾಜದ ಋಣದೊಡ್ಡ ಆಸ್ತಿಯೆನಿಸಿದ್ದಾರೆ.

ಬೆಳಗಾವಿ ಜನರಿಗೆ ಯೋಗದ ಭಾಗ್ಯವನ್ನು ಕಲ್ಪಿಸಿದ ಶ್ರೇಯಸ್ಸು ಶ್ರೀ ಕೋರೆಯವರದು.

ಭಾರತೀಯ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಉದ್ದೇಶದಿಂದ ದೇಶ ಸುತ್ತುತ್ತಿರುವ ಹರಿದ್ವಾರದ ಪತಂಜಲಿ ಯೋಗ ಪೀಠದ ಯೋಗಋಷಿ ಪೂಜ್ಯ ರಾಮದೇವಜಿ ಮಹಾರಾಜರು ೨೦೧೦ರಲ್ಲಿ ಯೋಗ ಶಿಬಿರಗಳನ್ನು ಸಂಘಟಿಸುವುದಿಲ್ಲ ಎಂದು ನಿರ್ಧರಿಸಿದ್ದಾರೆ ಎಂಬ ವಿಷಯ ತಿಳಿದ ಕೋರೆಯವರು ದೂರದ ಹರಿದ್ವಾರಕ್ಕೆ ಹೋಗಿ ನಮ್ಮ ಬೆಳಗಾವಿ ನಗರದ ಜನ ಯೋಗದ ಹಾಗೂ ಪತಂಜಲಿ ಯೋಗ ಪೀಠದ ಔಷಧಿಗಳನ್ನು ಪಡೆಯುವುದು, ಕಷ್ಟವೆಂದು ಅವರಲ್ಲಿ ತಿಳಿದು ಶೀಘ್ರವಾಗಿ ಶಿಬಿರಗಳನ್ನು ಸಂಘಟಿಸಬೇಕು ಎಂದು ತೀರ್ಮಾನಿಸಿ, ಕಾರ್ಯಕರ್ತರನ್ನು ಸಂಘಟಿಸಿ, ಪ್ರೇರಣೆ ತುಂಬಿದರು. ನಿಧಿ ಸಂಗ್ರಹವನ್ನು ಮಾಡಿ ಜನವರಿ ೩, ೨೦೦೯ರಿಂದ ಜನವರಿ ೮, ೨೦೦೯ರವರೆಗೆ ಶ್ರೀ ರಾಮದೇವಜಿ ಮಹಾರಾಜರು ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಿ ಲಕ್ಷಾಂತರ ಜನರು ಈ ಶಿಬಿರದ ಮೂಲಕ ಪ್ರಯೋಜನ ಪಡೆದುಕೊಳ್ಳಲಿಕ್ಕೆ ಕಾರಣವಾದರು.[೧೦೦]

ಈ ನಿಟ್ಟಿನಲ್ಲಿ ಬೆಳಗಾವಿಯ ಹಾಗೂ ಸುತ್ತಲಿನ ಜನರಿಗೆ ಸಮೀಪದಲ್ಲಿ ಯೋಗ ಗುರು ರಾಮದೇವಜಿ ಮಹಾರಾಜರನ್ನು ಕಂಡು, ಅವರ ಉಪನ್ಯಾಸದಿಂದ ಸಾಕಷ್ಟು ಪ್ರಯೋಜನ ಪಡೆದುಕೊಳ್ಳುವ ಸೌಭಾಗ್ಯ ಬೆಳಗಾವಿ ನಗರದ ಹಾಗೂ ಸುತ್ತಲಿನ ಗ್ರಾಮದವರಿಗೆ ಒದಗಿಸಿದ ಶ್ರೀ ಕೋರೆಯವರ ಈ ಕಾರ್ಯವನ್ನು ಜನ ಮೆಚ್ಚಿಕೊಂಡಿದ್ದಾರೆ. ಅವರಲ್ಲಿಯ ಕೆಲವು ಜನರ ಅಭಿಪ್ರಾಯವನ್ನು ಇಲ್ಲಿ ಕೊಡಲಾಗಿದೆ.

೧. ಡಾ. ಪ್ರಮೋದ ಹುರಕಡ್ಲಿ : "ಕೋರೆಯವರ ಕೊಡುಗೆ ಸಾಮಾನ್ಯವಲ್ಲ", ೨. ಶಶಿಕಲಾ ಮೇಲಿನಮನಿ ಇವರ ಅನಿಸಿಕೆಯಂತೆ "ಶ್ರೀ ಕೋರೆಯವರು ದೂರದ ಹರಿದ್ವಾರದ ರಾಮದೇವ ಮಹಾರಾಜರನ್ನು ಕರೆಯಿಸಿ, ಈ ಭಾಗದ ಜನತೆಗೆ ಆರೋಗ್ಯ ಸೇವೆಯನ್ನು ನೀಡಿದ್ದಾರೆ. ಅವರ ಈ ಕೆಲಸಕ್ಕೆ ಶಿಬಿರಾರ್ಥಿಗಳು ಚಿರಋಣಿ", ೩. ಈ ಯೋಗ ಶಿಬಿರದ ಪ್ರಯೋಜನ ಪಡೆದ ಶಶಿಕಲಾ ಕದಂ ಅವರು 'ನವಚೈತನ್ಯ ಮೂಡಿದೆ' ಅಂದರೆ ಕಾಲು ನೋವಿನಿಂದ ಬಳಲುತ್ತಿದ್ದ ನನಗೆ ನೋವು ನಿವಾರಣೆ ಆಗಿದೆ ಎನ್ನುತ್ತಾರೆ ಶ್ರೀಮತಿ ರಾಜಶ್ರೀ ರಮೇಶ ಡವಳ. ಪ್ರಾಣಾಯಾಮ ಪರಿಣಾಮಕಾರಿ ಎಂದು ಶ್ರೀಮತಿ ವಂದನಾ ಪಾಟೀಲ ತಿಳಿಸಿದರೆ, ಈ ಶಿಬಿರ ಬೆಳಗಾವಿಯಗರ ಸೌಭಾಗ್ಯ ಎಂದು ಇದನ್ನು ನಡೆಸಿದ ಡಾ. ಪ್ರಭಾಕರ ಕೋರೆಯವರು ಇಲ್ಲಿನ ಜನತೆಗೆ ಬಹಳಷ್ಟು ಉಪಕಾರ ಮಾಡಿದ್ದಾರೆ ಎನ್ನುತ್ತಾರೆ. ಶ್ರೀಮತಿ ಎಂ. ಐ. ಅಂಕಲಿಯವರು. ಹೀಗೆ ಸಾಕಷ್ಟು ಜನ ಈ ಶಿಬಿರದಿಂದ ಪ್ರಯೋಜನ ಪಡೆದು ತಮ್ಮ ಅನಿಸಿಕೆಯನ್ನು ಹಂಚಿಕೊಂಡರಲ್ಲದೆ[೧೦೧] ಈ ಶಿಬಿರವನ್ನು ಸಂಘಟಿಸಿ ಸಾಕಷ್ಟು ಜನರಿಗೆ ಯೋಗ ಶಿಬಿರದ ಪ್ರಯೋಜನ ಪಡೆಯುವ ಅವಕಾಶ ಕಲ್ಪಿಸುವ ಮೂಲಕ ಜನರ ಪ್ರೀತಿ ಅಭಿಮಾನಕ್ಕೆ ಕೋರೆಯವರು ಪಾತ್ರರಾದರು.

ಈ ಶ್ರೀ ಕೋರೆಯವರು ತಮ್ಮ ೩೭ ವರ್ಷಗಳ ಸಾಮಾಜಿಕ ಸೇವೆಯಲ್ಲಿ ಆರೋಗ್ಯ, ಸಹಕಾರ, ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲದೆ ನಾಡು-ನುಡಿಯ ವಿಷಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಂಡು

ಮಾಡಿದ ಈ ಸಾಧನೆಗಳನ್ನು ಕಂಡಾಗ, ಒಬ್ಬ ರಾಜಕೀಯ ನಾಯಕರು ವಿವಿಧ ಈ ಕ್ಷೇತ್ರಗಳಲ್ಲಿ ಇಷ್ಟೊಂದು ಸಾಧಿಸಿ ಸಮಾಜಕ್ಕೆ ಸಾಕಷ್ಟು ಉಪಯುಕ್ತ ಕೊಡುಗೆಗಳನ್ನು ನೀಡಲು ಸಾಧ್ಯವೇ? ಎನ್ನುವ ಪ್ರಶ್ನೆ ಸಹಜ. ಅಂತೆಯೇ ಜಾಗತಿಕ ರಾಜಕೀಯ ಪುಟದಲ್ಲಿ ಶ್ರೀ ಕೋರೆಯವರು ಶ್ರೇಷ್ಠ ಸ್ಥಾನವನ್ನು ಪಡೆಯುತ್ತಾರೆ. ರಾಜಕೀಯ ನಾಯಕರಿಗೆ ಶ್ರೀ ಕೋರೆಯವರ ಈ ಸಾಧನೆಗಳು ಹೊಸ ಚಿಂತನೆಗೆ ಎಡೆ ಮಾಡಿಕೊಡುತ್ತವೆ. ಕೇವಲ ಅಧಿಕಾರ ಇದ್ದರೆ ಮಾತ್ರ ಸೇವೆಯನ್ನು ಮಾಡಲು ಸಾಧ್ಯ ಎನ್ನುವುದಕ್ಕೆ ಪ್ರತಿಯಾಗಿ ಒಂದು ಸಂಸ್ಥೆಯ ಮೂಲಕ ಬೃಹತ್ ಪ್ರಮಾಣದಲ್ಲಿ ಸಾಮಾನ್ಯ ಜನರಿಗೆ ಅನುಕೂಲ ಕಲ್ಪಿಸಬಹುದು ಎನ್ನುವುದನ್ನು ಶ್ರೀ ಕೋರೆಯವರು ಈ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಗಳಿಂದ ತಿಳಿದುಬರುತ್ತದೆ.

'ಆಡುಮುಟ್ಟದ ಗಿಡವಿಲ್ಲ' ಎನ್ನುವಂತೆ ಶ್ರೀ ಕೋರೆಯವರು ಸಾಧನೆಯ ಕ್ಷೇತ್ರಗಳು ಹಲವು. ಆ ದಿಸೆಯಲ್ಲಿ ಶ್ರೀ ಕೋರೆಯವರು ಬರೀ ರಾಜಕೀಯ ನಾಯಕರಲ್ಲಿ, ಸಾಮಾಜಿಕ, ಶೈಕ್ಷಣಿಕ, ಸಹಕಾರ, ಆರೋಗ್ಯ, ಧಾರ್ಮಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳ ಮೇರು ಪುರುಷರು ಹೌದು.

ಅಡಿ ಟಿಪ್ಪಣಿಗಳು :

೧. ಶ್ರೀ ಕೃಷ್ಣಾ ಧೂದಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಚಿಕ್ಕೋಡಿ, ವಾರ್ಷಿಕ ವರದಿ – ೧೯೯೯.

೨. ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ, ನಿ. ಚಿಕ್ಕೋಡಿ, ವಾರ್ಷಿಕ ವರದಿ–೨ ಮತ್ತು ೩.

೩. ಅದೇ ಪುಟ–೩

೪. ಅದೇ ಪುಟ–೪

೫. ಅದೇ ಪುಟ–೫

೬. ೨೦೦೪–೨೦೦೫ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪುಟ ೫.

೭. ಶ್ರೀ ಆರ್. ಆರ್. ಗುಂಡಕಲ್ಲೆ ವ್ಯವಸ್ಥಾಪಕ ನಿರ್ದೇಶಕರು ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ, ಚಿಕ್ಕೋಡಿ, ದಿನಾಂಕ ೩೦–೧–೨೦೦೮ರಂದು ಸಂದರ್ಶನದಲ್ಲಿ ನೀಡಿದ ಮಾಹಿತಿ.

೮. ಶ್ರೀ ಕೃಷ್ಣ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಚಿಕ್ಕೋಡಿ, ಇದರ ೨೦೦೭ ಮತ್ತು ೨೦೦೮ನೇ ಸಾಲಿನ ವಾರ್ಷಿಕ ವರದಿ, ಪುಟ–೭.

೯. ಶ್ರೀ ಕೃಷ್ಣ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಚಿಕ್ಕೋಡಿ, ಇದರ ೨೦೦೭ ಮತ್ತು ೨೦೦೮ನೇ ಸಾಲಿನ ವಾರ್ಷಿಕ ವರದಿ, ಪುಟ–೮.

೧೦. ಎಸ್. ಬಿ. ಉಮರಾಣಿ, ವ್ಯವಸ್ಥಾಪಕರು, ಶ್ರೀ ಕೃಷ್ಣಾ ಧೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ, ಚಿಕ್ಕೋಡಿ, ದಿನಾಂಕ ೩೦–೨–೨೦೦೯ರಂದು ಸಂದರ್ಶನದಲ್ಲಿ ಹೇಳಿದ್ದು.

೧೧. ೨೦೦೭–೨೦೦೮ನೇ ಸಾಲಿನ ಕಾರ್ಖಾನಯ ವಾರ್ಷಿಕ ವರದಿ, ಪುಟ ೭.

೧೨. ೨೦೦೭–೨೦೦೮ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪುಟ ೮.

೧೩. ೨೦೦೭–೨೦೦೮ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪುಟ ೯.

೧೪. ೨೦೦೭–೨೦೦೮ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪುಟ ೧೦.

೧೫. ೨೦೦೮–೨೦೦೯ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪುಟ ೧೧.

೧೬. ೨೦೦೯ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪು. ೧೧.

೧೭. ಡಾ. ಅನಿಲ ಕಮತಿ 'ಸಹದಾರಿ ರತ್ನ', ಲೇಖನ, ವಿಜಯಕರ್ನಾಟಕ ಕನ್ನಡ ದಿನಪತ್ರಿಕೆ. ದಿನಾಂಕ ೧–೭–೨೦೦೮, ಪು. ೩.

೧೮. ೨೦೦೯ನೇ ಸಾಲಿನ ಕಾರ್ಖಾನೆಯ ವಾರ್ಷಿಕ ವರದಿ, ಪು. ೩.

೧೯. ಶ್ರೀ ಕಲ್ಲಪ್ಪ, ಕೃಷ್ಣಪ್ಪ ಮೈಶಾಳೆ, ಅಧ್ಯಕ್ಷರು ಶ್ರೀ ಪ್ರಭಾಕರ ಕೋರೆ ಸೌಹಾರ್ದ ಕ್ರೆಡಿಟ್ ಬ್ಯಾಂಕ್ ನಿಯಮಿತ ಅಂಕಲಿ. ದಿನಾಂಕ ೨೮–೨–೨೦೦೮ ರಂದು ಸಂದರ್ಶನದಲ್ಲಿ ಹೇಳಿದ್ದು.

೨೦. ಡಾ. ಪ್ರಕಾರ ಕೋರೆ ಕ್ರೆಡಿಟ್ ಸಾಹಾರ್ದ ಸಹಕಾರಿ ಬ್ಯಾಂಕ್ ನಿ ಅಂಕಲಿ. ಇದರ ೨೦ನೇ ವಾರ್ಷಿಕ ವರದಿ. ೨೦೦೭–೨೦೦೮, ಪುಟ ೧.

೧. ಡಾ. ಪ್ರಕಾರ ಕೋರೆ ಕ್ರೆಡಿಟ್ ಸಾಹಾರ್ದ ಸಹಕಾರಿ ಬ್ಯಾಂಕ್ ನಿ ಅಂಕಲಿ, ಇದರ ೨೦ನೇ ವಾರ್ಷಿಕ ವರದಿ, ೨೦೦೭-೨೦೦೮, ಪುಟ ೩.

೨. ಈ ದಾಖಲೆಯನ್ನು ೩೧-೩-೦೮ರ ವರೆಗಿನ ಬ್ಯಾಂಕಿನ ಪ್ರಗತಿಯ ವರದಿಯನ್ನು ಆಧರಿಸಿ ಈ ಮಾಹಿತಿಯನ್ನು ಕೊಡಲಾಗಿದೆ.

೩. ಈ ದಾಖಲೆಯನ್ನು ೩೧-೩-೦೮ರ ವರೆಗಿನ ಬ್ಯಾಂಕಿನ ಪ್ರಗತಿಯ ವರದಿಯನ್ನು ಆಧರಿಸಿ ಈ ಮಾಹಿತಿಯನ್ನು ಕೊಡಲಾಗಿದೆ.

೪. ದಿನಾಂಕ ೨೦-೪-೨೦೦೮ರಂದು ಶ್ರೀ ಆನಂದ ಕೆ. ಪುರಾಣಿಕ್, ಮುಖ್ಯ ಕಾರ್ಯನಿರ್ವಾಹಕರು, ರಾಣಿಚನ್ನಮ್ಮ ಮಹಿಳಾ ಬ್ಯಾಂಕು, ನಿ. ಬೆಳಗಾವಿ ಇವರು ಸಂದರ್ಶನದಲ್ಲಿ ಹೇಳಿದ್ದು.

೫. ಬೆಳಗಾವಿ ಜಿಲ್ಲೆ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕು, ನಿಯಮಿತ ಬೆಳಗಾವಿ, ಇದರ ೧೧ನೇ ವಾರ್ಷಿಕ ವರದಿ ೨೦೦೬-೨೦೦೭, ಪು. ೨.

೬. ಜಿಲ್ಲಾ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್ ನಿಯಮಿತ, ಬೆಳಗಾವಿ, ಇದರ ಹನ್ನೊಂದನೆ ವಾರ್ಷಿಕ ವರದಿ, ೨೦೦೭ ಮತ್ತು ೨೦೦೮, ಪುಟ - ೧, ೩.

೭. ದಿನಾಂಕ ೨೧-೦೮-೨೦೦೮ರಂದು ಶ್ರೀ ಆನಂದ ಕೆ. ಪುರಾಣಿಕ್, ವ್ಯವಸ್ಥಾಪಕರು, ಬೆಳಗಾವಿ ಜಿಲ್ಲೆ ರಾಣಿ ಚೆನ್ನಮ್ಮ ಮಹಿಳಾ ಬ್ಯಾಂಕು ನಿ. ಬೆಳಗಾವಿ, ಸಂದರ್ಶನದಲ್ಲಿ ಹೇಳಿದ್ದು.

೮. ಬೆಳಗಾವಿಯ ರಾಣಿಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕು ನಿ. ಬೆಳಗಾವಿ ಇದರ ೨೦೦೭-೨೦೦೮ನೇ ಸಾಲಿನ ೧೨ನೇ ವಾರ್ಷಿಕ ವರದಿ, ಪುಟ ೧-೪.

೯. ಬೆಳಗಾವಿಯ ರಾಣಿಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕು ನಿ. ಬೆಳಗಾವಿ ಇದರ ೨೦೦೭-೨೦೦೮ನೇ ಸಾಲಿನ ೧೨ನೇ ವಾರ್ಷಿಕ ವರದಿ, ಪುಟ ೧-೪.

೦. ದಿನಾಂಕ ೭-೧-೨೦೦೯ ವಿಜಯ ಕರ್ನಾಟಕ ದಿನಪತ್ರಿಕೆ, ಪುಟ-೪.

೧. ಡಾ. ಎಂ. ಪಿ. ಜಾಲಿ, ನಿರ್ದೇಶಕರು ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ದಿನಾಂಕ ೬-೯-೨೦೦೯, ಪುಟ-೧.

೨. ಕೆ.ಎಲ್.ಇ., ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕ ವರದಿ, ದಿನಾಂಕ ೯-೬-೨೦೦೯, ಪುಟ ೧.

೩. ಕೆ.ಎಲ್.ಇ., ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕ ವರದಿ, ದಿನಾಂಕ ೯-೬-೨೦೦೯, ಪುಟ ೭.

೪. ದಿನಾಂಕ ೨೨-೮-೨೦೦೮ ಕನ್ನಡ ಪ್ರಭ ದಿನ ಪತ್ರಿಕೆ, ಪುಟ ೩.

೫. ಕೆ.ಎಲ್.ಇ. ಸಂಸ್ಥೆ ಆಸ್ಪತ್ರೆಯ ಕೈಪಿಡಿ ೨೦೦೮, ಪುಟ ೩.

೬. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರ ವರದಿ. ದಿನಾಂಕ ೬-೯-೨೦೦೯. ಪುಟ-೪.

೭. ಕೆ.ಎಲ್.ಇ. ಸಂಸ್ಥೆಯ ಚಾರಿಟೇಬಲ್ ಆಸ್ಪತ್ರೆಯ ವರದಿ. ೨೦೦೯. ಪು. ೨.

೮. ಕೆ.ಎಲ್.ಇ. ಸಂಸ್ಥೆಯ ಚಾರಿಟೇಬಲ್ ಆಸ್ಪತ್ರೆಯ ವರದಿ. ೨೦೦೯. ಪು. ೨.

೯. ಕೆ.ಎಲ್.ಇ. ಸಂಸ್ಥೆಯ ಚಾರಿಟೇಬಲ್ ಆಸ್ಪತ್ರೆಯ ವರದಿ. ೨೦೦೯. ಪು. ೩.

೦. ಅದೇ ಪುಟ-೪.

೪೧. ಕೆ.ಎಲ್.ಇ. ಸಂಸ್ಥೆ ಆಸ್ಪತ್ರೆಯ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ, ೨೦೦೬, ಪುಟ ೩.

೪೨. ದಿನಾಂಕ ೧೫-೬-೨೦೦೪ ವಿಜಯ ಕರ್ನಾಟಕ, ಕನ್ನಡ ದಿನಪತ್ರಿಕೆ, ಪುಟ ೧.

೪೩. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ, ೨೦೦೯, ಪು. ೩.

೪೪. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ೨೦೦೯, ಪುಟ ೩.

೪೫. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೮, ಪುಟ ೩.

೪೬. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ೨೦೦೯, ಪುಟ ೨

೪೭. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ೨೦೦೮, ಪುಟ ೨.

೪೮. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೯, ಪುಟ ೮೦.

೪೯. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಹಾರ್ಟ್ ಫೌಂಡೇಷನ್‌ದ ವಾರ್ಷಿಕ ವರದಿ, ೨೦೦೯, ಪುಟ ೨.

೫೦. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಹಾರ್ಟ್ ಫೌಂಡೇಷನ್‌ದ ವಾರ್ಷಿಕ ವರದಿ, ೨೦೦೯, ಪುಟ ೨.

೫೧. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ೨೦೦೯, ಪುಟ ೧೦.

೫೨. ಸಂಪಾದಕರು ಡಾ. ಎಂ. ವಿ. ಜಾಲಿ ಮತ್ತು ಡಾ. ಜಿ. ಗುರುಪಾದಪ್ಪ, ಕೆ.ಎಲ್.ಇ. ಫೋಕಸ್, ವ್ಯಾಲ್ಯೂಮ್ ೨, ಆಗಸ್ಟ್ ೯, ಪುಟ ೫.

೫೩, ಸಂಪಾದಕರು ಡಾ. ಎಂ. ವಿ. ಜಾಲಿ ಮತ್ತು ಡಾ. ಜಿ. ಗುರುಪಾದಪ್ಪ, ಕೆ.ಎಲ್.ಇ. ಫೋಕಸ್, ವ್ಯಾಲ್ಯೂಮ್ ೨, ಆಗಸ್ಟ್ ೯, ಪುಟ ೧೨

೫೪. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ೨೦೦೯, ಪುಟ ೧೦.

೫೫. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವರದಿ, ೨೦೦೯, ಪುಟ ೨.

೫೬. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರ ವರದಿ, ದಿನಾಂಕ ೬-೯-೨೦೦೯, ಪುಟ-೬.

೫೭. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರ ವರದಿ, ೬-೯-೨೦೦೯, ಪುಟ ೬.

೫೮. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೯, ಪುಟ ೬.

೫೯. ಸಂಪಾದಕರು ಡಾ. ಎಂ. ಪಿ. ಜಾಲಿ ಮತ್ತು ಡಾ. ಗುರುಪಾದಪ್ಪ 'ಫೋಕಸ್'. ಸಂಪುಟ – ೨. ಸಂಚಿಕೆ – ೧, ಪುಟ ೪, ಏಪ್ರಿಲ್ – ೨೦೦೯.

೬೦. ಸಂಪಾದಕರು ಡಾ. ಎಂ. ಪಿ. ಜಾಲಿ ಮತ್ತು ಡಾ. ಗುರುಪಾದಪ್ಪ 'ಫೋಕಸ್'. ಸಂಪುಟ – ೨. ಸಂಚಿಕೆ – ೧, ಪುಟ ೪.

೬೧. ಸಂಪಾದಕರು ಡಾ. ಎಂ. ಪಿ. ಜಾಲಿ ಮತ್ತು ಡಾ. ಗುರುಪಾದಪ್ಪ 'ಫೋಕಸ್'. ಸಂಪುಟ – ೨. ಸಂಚಿಕೆ – ೧, ಪುಟ ೧೦.

೬೨. ದಿನಾಂಕ ೨೯-೮-೨೦೦೯, ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಪುಟ ೬

೬೩. ಕೆ.ಎಲ್.ಇ. ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ, ೨೦೦೬, ಪುಟ ೪

೬೪. ದಿನಾಂಕ ೨೨-೧೧-೨೦೦೮, ಕನ್ನಡಪ್ರಭಾ ದಿನಪತ್ರಿಕೆ, ಪುಟ ೩.

೬೫. ಕೆ.ಎಲ್.ಇ. ಆಸ್ಪತ್ರೆಯ ವಾರ್ಷಿಕ ವರದಿ, ದಿನಾಂಕ ೯-೬-೨೦೦೯, ಪುಟ ೬.

೬೬. ಸಂಪಾದಕರು ಡಾ. ಎಂ. ವಿ. ಜಾಲಿ "ಹೊಲಿಸ್ಟಿಕ್ ಮೆಡಿಸಿನ್" ಪ್ರಕಾಶನ, ಕೆ.ಎಲ್.ಇ. ಆಸ್ಪತ್ರೆ, ಬೆಳಗಾವಿ ೨೦೦೩, ಪುಟ ೪.

೬೭. ಕೆ.ಎಲ್.ಇ. ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಎಂ. ವಿ. ಜಾಲಿ ಇವರು ದಿನಾಂಕ ೨೦-೧೧-೨೦೦೧ರಂದು ಸಂದರ್ಶನದಲ್ಲಿ ಹೇಳಿದ್ದು.

೬೮. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆಗಳ ವರದಿ, ೨೦೦೯, ಪುಟ ೧೦.

೬೯. ಕೆ.ಎಲ್.ಇ. ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದಿಕ್ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ ೨೦೦೯, ಪುಟ ೨.

೭೦. ಕೆ.ಎಲ್.ಇ. ಸಂಸ್ಥೆಯ ಜವಾಹರಲಾಲ್ ನೆಹರು ವೈದ್ಯಕೀಯ ಮಹಾವಿದ್ಯಾಲಯದ ವಾರ್ಷಿಕ ವರದಿ, ೨೦೦೬, ಪುಟ ೧.

೭೧. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಎಂ. ವಿ. ಜಾಲಿಯವರು ದಿನಾಂಕ ೧೧-೧೨-೨೦೦೯ರಂದು ಸಂದರ್ಶನದಲ್ಲಿ ಹೇಳಿದ್ದು.

೭೨. ಕೆ.ಎಲ್.ಇ. ವೈದ್ಯಕೀಯ ವಿಶ್ವವಿದ್ಯಾಲಯದ ವಾರ್ಷಿಕ ವರದಿ ೨೦೦೯, ಪುಟ ೬೬.

೭೩. ಕೆ.ಎಲ್.ಇ. ಸಂಸ್ಥೆಯ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವಾರ್ಷಿಕ ವರದಿ ೨೦೦೯, ಪುಟ ೨.

೭೪. ಕೆ.ಎಲ್.ಇ. ಸಂಸ್ಥೆಯ ಮಕ್ಕಳ ಹಾಗೂ ಮಹಿಳೆಯರ ಸಂಶೋಧನಾ ಕೇಂದ್ರದ ವರದಿ ೨೦೦೮, ಪುಟ ೨.

೭೫. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೯, ಪುಟ ೩.

೭೬. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೯, ಪುಟ ೩.

೭೭. ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ವರದಿ ೨೦೦೯, ಪುಟ ೬೮.

೭೮. ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ವರದಿ ೨೦೦೮-೨೦೦೯, ಪುಟ ೨.

೭೯. ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ವರದಿ ೨೦೦೮-೨೦೦೯, ಪುಟ ೪.

೮೦. ಕೆ.ಎಲ್.ಇ. ಸಂಸ್ಥೆಯ ವೈದ್ಯಕೀಯ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ವರದಿ ೨೦೦೮-೨೦೦೯, ಪುಟ ೪.

೮೧. ಸಂಪಾದಕರು ಡಾ. ಎಂ. ವಿ. ಜಾಲಿ ಮತ್ತು ಡಾ. ಆರ್. ಗುರುಪಾದಪ್ಪ, "ಕೆ.ಎಲ್.ಇ. ಫೋಕಸ್", ಸಂಚಿಕೆ-

೩, ಸಂಪುಟ–೧, ಪುಟ ೫.

೮೨. ಕೆ.ಎಲ್.ಇ. ವೈದ್ಯಕೀಯ ವಿಶ್ವವಿದ್ಯಾಲಯದ ವಾರ್ಷಿಕ ವರದಿ ೨೦೦೯, ಪುಟ ೩.

೮೩. ಸಂಪಾದಕರು ಡಾ. ಎಂ. ವಿ. ಜಾಲಿ ಮತ್ತು ಡಾ. ಗುರುಪಾದಪ್ಪ 'ಫೋಕಸ್', ಸಂಪುಟ – ೩, ಸಂಚಿಕೆ – ೧, ಪುಟ ೫,

೮೪. ಡಾ. ಪ್ರಭಾಕರ ಕೋರೆಯವರು ದಿನಾಂಕ ೨೦–೧೦–೨೦೦೮ರಂದು ಸಂದರ್ಶನದಲ್ಲಿ ಹೇಳಿದ್ದು.

೮೫. ವಿಜಯಕರ್ನಾಟಕ ಪತ್ರಿಕೆ (ಉಕ್ಕಿನ ಮನುಷ್ಯ ವಿಶೇಷ ಅಂಕಣ ಪ್ರಜಾವಾಣಿ) ದಿನಾಂಕ ೧–೭–೨೦೦೮, ಪುಟ ೩.

೮೬. ಅದೇ ಪುಟ ೩.

೮೭. ವಿಜಯಕರ್ನಾಟಕ ದಿನಪತ್ರಿಕೆ, ದಿನಾಂಕ ೧೩–೪–೨೦೧೦, ಪುಟ ೫.

೮೮. ದಿನಾಂಕ ೨೦–೧–೨೦೧೦ ರಂದು ಡಾ. ಬಸವರಾಜ ಜಗಜಂಪಿ ಅಧ್ಯಕ್ಷರು ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಇವರು ಸಂದರ್ಶನದಲ್ಲಿ ಹೇಳಿದ್ದು.

೮೯. ಶ್ರೀ ಸದಾನಂದ ಚಿಕ್ಕಲಿ ಸಾ. ಅಂಕಲಿ ದಿನಾಂಕ ೨೧–೧–೨೦೧೦ರಂದು ಸಂದರ್ಶನದಲ್ಲಿ ಹೇಳಿದ್ದು.

೯೦. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ ೨೦೦೮, ಪುಟ ೩.

೯೧. ಶ್ರೀ ಸಿದ್ಧರಾಮ ಸ್ವಾಮಿಗಳು, ನಾಗನೂರ ರುದ್ರಾಕ್ಷಿ ಮಠ, ಬೆಳಗಾವಿ ದಿನಾಂಕ ೧೨–೧೦–೨೦೦೯ ರಂದು ಸಂದರ್ಶನದಲ್ಲಿ ಹೇಳಿದ ಮಾಹಿತಿ.

೯೨. ಪ್ರಾಚಾರ್ಯ ಬಿ. ಎಸ್. ಗವಿಮಠ, ನಿರ್ದೇಶಕರು, ಕೆ.ಎಲ್.ಇ. ಪ್ರಸಾರಂಗ ಬೆಳಗಾವಿ, ದಿನಾಂಕ ೧೩–೧೦–೨೦೦೯ ರಂದು ಸಂದರ್ಶನದಲ್ಲಿ ಹೇಳಿದ್ದು.

೯೩. ವಿಜಯಕರ್ನಾಟಕ ದಿನಪತ್ರಿಕೆ, ದಿನಾಂಕ ೧೮–೧೧–೨೦೦೯, ಪುಟ ೩.

೯೪. ಸಂಯುಕ್ತ ಕರ್ನಾಟಕ ದಿನಪತ್ರಿಕೆ, ದಿನಾಂಕ ೧೮–೧೧–೨೦೦೯, ಪುಟ ೩.

೯೫ ದಿನಾಂಕ ೧೭–೧೧–೨೦೦೯ರಂದು ವಿಜಾಪೂರ ಜಿಲ್ಲೆಯ ಕನಮಡಿ ಗ್ರಾಮಕ್ಕೆ ಸಂಶೋಧನಾ ಕ್ಷೇತ್ರಕಾರ್ಯವನ್ನು ನಡೆಸಿ, ಗ್ರಾಮದ ಸ್ಥಳೀಯ ಜನರಿಂದ ಪಡೆದ ಮಾಹಿತಿ.

೯೬. ದಿನಾಂಕ ೨೦–೧೦–೨೦೦೮ರಂದು ಪ್ರೋ. ಅಶೋಕ ಘೋರ್ಪಡೆ ಸರ್, ಜಾದವ ನಗರ, ಬೆಳಗಾವಿ, ಸಂದರ್ಶನದಲ್ಲಿ ಹೇಳಿದ್ದು.

೯೭. ಕೆ.ಎಲ್.ಇ. ಸಂಸ್ಥೆಯ ಡಾ. ಪ್ರಭಾಕರಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ನಿರ್ದೇಶಕರ ವರದಿ, ದಿನಾಂಕ ೦೬–೯–೨೦೦೯, ಪುಟ ೧೧.

೯೮. ಕೆ.ಎಲ್.ಇ. ಸಂಸ್ಥೆಯ ವಾರ್ಷಿಕ ವರದಿ, ೨೦೦೫, ಪುಟ ೭.

೯೯. ವಿಜಯ ಕರ್ನಾಟಕ ಪತ್ರಿಕೆ, ದಿನಾಂಕ ೧–೭–೨೦೦೭, ಪುಟ ೩.

೧೦೦. ಸಂಯುಕ್ತ ಕರ್ನಾಟಕ ಪತ್ರಿಕೆ, ದಿನಾಂಕ ೭–೧೦–೨೦೦೯, ಪುಟ ೪.

೧೦೧. ಕನ್ನಡಪ್ರಭ ದಿನಪತ್ರಿಕೆ, ದಿನಾಂಕ ೪–೧–೨೦೦೯, ಪುಟ ೫.

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ರಾಜಕೀಯ, ಸಾಮಾಜಿಕ ನಾಯಕರ ವ್ಯಕ್ತಿತ್ವ, ಜೀವನ ಹಾಗೂ ಸಾಧನೆಗಳನ್ನು ಮೌಲ್ಯಮಾಪನ ಮಾಡುವುದು ಕಷ್ಟಕರ. ಅದೊಂದು ವೈಶಿಷ್ಟ್ಯಪೂರ್ಣ ಕಾರ್ಯ. ನ್ಯಾಯವಾದದ್ದನ್ನು ಮಾಡುವುದೇ ರಾಜನೀತಿಯ ಪರಮಗುರಿ ಎಂಬುದು ಒಂದು ಕಾಲದಲ್ಲಿ ಸತ್ಯವಾಗಿತ್ತು. ಆದರೆ ಇಂದಿನ ರಾಜಕಾರಣದಲ್ಲಿ ಹಲವಾರು ರಾಜಕೀಯ ನಾಯಕರು ಸ್ವಾರ್ಥಿಗಳು, ಭ್ರಷ್ಟಾಚಾರಿಗಳು ಹಾಗೂ ಜಾತಿವಾದಿಗಳಾಗಿದ್ದಾರೆ. ಇದರಿಂದ ರಾಜಕಾರಣಿಗಳ ಹಾಗೇ ಸಮಾಜ ಸುಧಾರಕರ ಬಗ್ಗೆ ಪ್ರೀತಿ – ವಿಶ್ವಾಸ, ಗೌರವ ಭಾವನೆಗಳು ಜನರಲ್ಲಿ ಕಡಿಮೆಯಾಗಿ 'ರಾಜಕಾರಣಕ್ಕೆ' ಕೆಟ್ಟದಾದ ಹೆಸರು ಅಂಟಿಕೊಂಡಿರುವುದು ಸರ್ವಸಾಮಾನ್ಯವಾಗಿದೆ. ಇವೆಲ್ಲವುಗಳನ್ನು ಬದಿಗೊತ್ತಿ 'ಜನಸೇವೆಯೇ ಜನಾರ್ಧನ ಸೇವೆ' ಎಂಬ ತಾತ್ವಿಕ ನೆಲೆಗಟ್ಟಿನ ಮೇಲೆ ತಮ್ಮ ಅಮೂಲ್ಯವಾದ ಜೀವನವನ್ನು ಜನತೆಯ ಸೇವೆಗಾಗಿಯೇ ಮುಡುಪಾಗಿಟ್ಟ ರಾಜಕೀಯ ನಾಯಕರ ಆದರ್ಶಗಳನ್ನು ನೀಡಿದ ಸ್ಮರಣೀಯ ಕೊಡುಗೆಗಳನ್ನು ಕಂಡುಕೊಳ್ಳುವುದು ಔಚಿತ್ಯಪೂರ್ಣವಾಗಿದೆ.

ಮಹಾತ್ಮಾ ಗಾಂಧೀಜಿಯವರ ಅನಿಸಿಕೆಯಂತೆ "ರಾಜಕೀಯ ನಾಯಕರ ಮೌಲ್ಯಮಾಪನವನ್ನು ಅವರ ರಾಜಕೀಯ ಜೀವನ ಹಾಗೂ ಸಾಧನೆಗಳ ಆಧಾರದ ಮೇಲೆ ಮಾಡಲಾಗುತ್ತಿದೆಯೆಂಬುದು ನಿಜ ಸಂಗತಿಯಾದರೂ, ನಮ್ಮ ರಾಜಕೀಯ ಸಾಮಾಜಿಕ ನಾಯಕರ ಜೀವನದ ಆದರ್ಶಗಳು ಬೇರೊಬ್ಬರು ಗುರುತಿಸುವರೆಗೂ ನಮಗೆ ಗೋಚರವಾಗುವುದಿಲ್ಲ ಎಂಬ ಅಭಿಪ್ರಾಯ ಇದೆ." ಇದು ಸತ್ಯವೋ, ಅಸತ್ಯವೋ ಎಂದು ನಿಖರವಾಗಿ ಹೇಳುವುದು ಕಷ್ಟಕರ ಆದರೂ ಈ ಹೇಳಿಕೆಯು ಪ್ರಸ್ತುತ ಅಧ್ಯಯನದ ಜನಪ್ರಿಯ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಯ ಕ್ಷೇತ್ರದ ನಾಯಕ ಡಾ. ಪ್ರಭಾಕರ ಕೋರೆಯವರಿಗೆ ಹೆಚ್ಚು ಅನ್ವಯವಾಗುತ್ತದೆ. ಅವರು ೧೯೮೩ರಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಪ್ರವೇಶ ಮಾಡಿ ೨೦೦೮ರ ವರೆಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ, ರಾಜ್ಯಸಭಾ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದವರು. ಪಕ್ಷವಹಿಸಿದ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಪಕ್ಷದ ಪ್ರಭಾವಿ ನಾಯಕರಾಗಿದ್ದವರು. ೨೦೦೮ರಲ್ಲಿ ಭಾರತೀಯ ಜನತಾಪಕ್ಷ ಸೇರಿ ಎರಡನೇ ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಆ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಆ ಪಕ್ಷಕ್ಕೆ ಆನೆ ಬಲ ತಂದುಕೊಟ್ಟರು. ಅಖಿಲಭಾರತ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದ ಅಧ್ಯಕ್ಷರಾಗಿ ರಾಜಕೀಯದಲ್ಲಿ ನ್ಯಾಯಯುತವಾದದ್ದನ್ನು ಮಾಡಲು ಹೋರಾಟ ಮಾಡುತ್ತಿರುವ ರಾಜಕಾರಣಿಯಾಗಿದ್ದಾರೆ.

ಬಹುಮುಖಿ ವ್ಯಕ್ತಿತ್ವವುಳ್ಳ ಡಾ. ಪ್ರಭಾಕರ ಕೋರೆಯವರು ತಮ್ಮ ಸಾರ್ವಜನಿಕ ಬದುಕಿನ ಪ್ರಾರಂಭದಿಂದ

ಇಲ್ಲಿಯವರೆಗೆ ಜನ ಉಪಯೋಗಿ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕುವುದರಲ್ಲಿ ನಿಸ್ಸೀಮರೆನಿಸಿದ್ದಾರೆ ಮತ್ತು ಅವುಗಳ ನೇತೃತ್ವವಹಿಸಿ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ. ಹಾಗೆಯೇ ಈ ಮೊದಲು ಅಸ್ತಿತ್ವದಲ್ಲಿದ್ದಂತಹ ಪ್ರತಿಷ್ಠಿತ ಸಂಸ್ಥೆಗಳ ನೇತೃತ್ವವನ್ನು ವಹಿಸಿ ತಮ್ಮ ನಿರ್ಮಲವಾದ ಮನಸ್ಸು, ದೃಢವಾದ ಕಾರ್ಯಸಾಧಿಸುವ ಅದಮ್ಯ ಉತ್ಸಾಹ, ಪ್ರಾಮಾಣಿಕತೆ ಹಾಗೂ ದೂರದೃಷ್ಟಿಯ ಮೂಲಕ ಸಮಾಜದಲ್ಲಿ ಬಹುಬೇಗನೆ ಬೆಳಕಿಗೆ ಬರಲು ಕಾರಣವಾದರು. ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಒಬ್ಬ ಸತ್ವಯುತ, ಯಶಸ್ವಿ ನಾಯಕರಾಗಲು ಅವರು ಕುಟುಂಬದ ಪ್ರಭಾವಲಯದಲ್ಲಿ ಬಾಲ್ಯದಿಂದಲೇ ರೂಢಿಸಿಕೊಂಡು ಬಂದ ಶಿಸ್ತುಬದ್ಧ ಜೀವನ, ಸಚ್ಚಾರಿತ್ರ್ಯ ಹಾಗೂ ನಿಸ್ವಾರ್ಥಸೇವಾ ಕಾರ್ಯಗಳು ಪ್ರಮುಖ ಅಂಶಗಳಾಗಿವೆ. ಶ್ರೀ ಪ್ರಭಾಕರ ಕೋರೆಯವರು ತಮ್ಮ ಸಾರ್ವಜನಿಕ ಜೀವನದ ಆರಂಭದಲ್ಲಿ ಮಹಾತ್ಮಾ ಗಾಂಧೀಜಿಯವರ ಆದರ್ಶ ಅನುಸರಿಸಿದರು ಸ್ವಾತಂತ್ರ್ಯ ಹೋರಾಟಗಾರರಾದ ಅವರ ತಂದೆ ಲಿಂಗೈಕ್ಯ ಬಸವಪ್ರಭು ಕೋರೆ ಹಾಗೂ ತಾಯಿ ಶಾರದಾದೇವಿಯವರ ಆದರ್ಶಗಳಲ್ಲದೆ ಬಸವಾದಿ ಶಿವಶರಣರ ವಿಚಾರಗಳಲ್ಲಿ ನಂಬಿಕೆ ಹೊಂದಿ ಮುನ್ನಡೆದವರು. ಚಿಕ್ಕೋಡಿ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಆಧುನೀಕರಣಗೊಳಿಸಿ ಪರ್ಯಾಯ ಆದಾಯ ಮೂಲಗಳನ್ನು ಕಾರ್ಖಾನೆಯಲ್ಲಿ ಸ್ಥಾಪಿಸಿ ಕಾರ್ಖಾನೆಯ ಲಾಭವನ್ನು ಹೆಚ್ಚಿಸುವುದರೊಂದಿಗೆ ರೈತರಿಗೆ ಅನೂಕೂಲ ಕಲ್ಪಿಸುವ ಮೂಲಕ ಅದಕ್ಕೆ ಕಾಯಕಲ್ಪ ಕಲ್ಪಿಸಿದರು. ನಷ್ಟದಲ್ಲಿರುವ ಕಾರ್ಖಾನೆಯನ್ನು ಲಾಭದಾಯಕವಾಗಿ ಪರಿವರ್ತಿಸುವಲ್ಲಿ ಇವರ ಪಾತ್ರ ಮಹತ್ತರವಾದದ್ದು, ಆ ಮೂಲಕ ಇತರೆ ಕಾರ್ಖಾನೆಗಳಿಗೂ ಈ ನಿಟ್ಟಿನಲ್ಲಿ ಸುಧಾರಣೆ ಹೊಂದಲು ಇವರು ನೀಡಿದ ಪ್ರೇರಣೆ ಆದರ್ಶಪ್ರಾಯವಾಗಿದೆ. ತಂದೆಯವರಂತೆಯೇ ಇವರು ಕೂಡಾ ಅಪಾರ ರಾಷ್ಟ್ರಭಕ್ತಿ ಹೊಂದಿದವರಾಗಿದ್ದಾರೆ.

ಶ್ರೀ ಪ್ರಭಾಕರ ಕೋರೆಯವರು ಸಾರ್ವಜನಿಕ ರಂಗದಲ್ಲಿ ಒಬ್ಬ ಶ್ರೇಷ್ಠ ನಾಯಕರೆನಿಸಿದ್ದಾರೆ. ಪ್ರತಿಷ್ಠಿತ ಕೆ. ಎಲ್. ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ, ತಮ್ಮ ನೇತೃತ್ವದಲ್ಲಿ ಬೆಳಗಾವಿಯಲ್ಲಿ ವೀರಶೈವ ೨೧ನೇ ಮಹಾ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸುವ ಮೂಲಕ ಗಮನ ಸೆಳೆದರು. ವೀರಶೈವ ಕಲ್ಯಾಣ ಕೇಂದ್ರವನ್ನು ಸ್ಥಾಪಿಸಿ ಸಮಾಜದ ಜನರಿಗೆ ಅನುಕೂಲ ಕಲ್ಪಿಸಿದ್ದಾರೆ. ಬೆಳಗಾವಿಯಲ್ಲಿಯೇ ಉಚಿತ (ಚಾರಿಟೇಬಲ್) ಆಸ್ಪತ್ರೆಯನ್ನು ಸ್ಥಾಪಿಸುವ ಮೂಲಕ ಸಮಾಜದ ಬಡವರ್ಗದ ಜನರಿಗೆ ಆರೋಗ್ಯ ಸೇವೆಯ ಭಾಗ್ಯ ದೊರಕುವಂತೆ ಮಾಡಿದರು. ಆ ನಿಟ್ಟಿನಲ್ಲಿ ಅವರು ಮಾಡಿದ ಪ್ರಯತ್ನಗಳು ಫಲಪ್ರದವಾಗಿ ಅವರು ಹೆಸರು ಶಾಶ್ವತವಾಗಿ ಉಳಿಯುವಂತಾಗಿದೆ.

ಅಧ್ಯಯನದ ಫಲಿತಗಳು :

ಮೊದಲನೆಯದಾಗಿ ಪ್ರಬಲ ರಾಜಕೀಯ ನಾಯಕರು ತಮ್ಮ ಪ್ರದೇಶಗಳ ಅಭಿವೃದ್ಧಿಗಾಗಿ ಮಹಾ ಅಧಿವೇಶನಗಳನ್ನು ಸಂಘಟಿಸುವಲ್ಲಿ ಪ್ರಭಾವವನ್ನು ಬೀರುತ್ತಾರೆ. ಆ ಮೂಲಕ ತಮ್ಮ ಪ್ರದೇಶದ ಅಭಿವೃದ್ಧಿಗೆ ಹೊಸ ಆಯಾಮ ಒದಗಿಸುತ್ತಾ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಹಾಗೇ ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯನ್ನು ಉತ್ತೇಜಿಸುವಲ್ಲಿ ನಿರ್ಣಾಯಕ ಪಾತ್ರವನ್ನುವಹಿಸುತ್ತಾರೆ ಎಂಬ ಊಹೆಯನ್ನು ಅಧ್ಯಯನದಲ್ಲಿ ಸಿದ್ಧಗೊಳಿಸಲಾಗಿದೆ.

ಶ್ರೀ ಪ್ರಭಾಕರ ಕೋರೆಯವರು ಒಬ್ಬ ತತ್ವನಿಷ್ಠ ರಾಜಕಾರಣಿ. ಹಿಡಿದ ಕೆಲಸವನ್ನು ಸಾಧಿಸುವ ಛಲಗಾರಿಕೆ ಅವರದು. ತಮ್ಮ ರಾಜಕೀಯ ಜೀವನದಲ್ಲಿ ರಾಜ್ಯ ಸಭಾ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಸಂಸದರಾಗಿ ಜನ ಮೆಚ್ಚುವ ಕಾರ್ಯಗಳನ್ನು ಮಾಡಿದ್ದಾರೆ. ಈಗಲೂ ಈ ದಿಸೆಯಲ್ಲಿ ಮುಂದುವರೆದಿದ್ದಾರೆ. ತಮ್ಮ ಪ್ರದೇಶದ ಅಭಿವೃದ್ಧಿಗಾಗಿ ಮತ್ತು ಜನರನ್ನು ಸಂತೃಪ್ತಗೊಳಿಸುವಲ್ಲಿ ಮಾತ್ರ ಆಸಕ್ತಿಯನ್ನು ತೋರ್ಪಡಿಸುವ ಹಲವು ರಾಜಕೀಯ ನಾಯಕರನ್ನು ಗಮನಿಸಿದಾಗ ಶ್ರೀ ಪ್ರಭಾಕರ ಕೋರೆಯವರು ಭಿನ್ನರಾಗಿ ಕಾಣುತ್ತಾರೆ. ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ, ಸರ್ಕಾರದ ವಿವಿಧ ಹುದ್ದೆಗಳನ್ನು ವಹಿಸಿಕೊಂಡು ಇಲ್ಲಿಯವರೆಗೆ ಚಿಕ್ಕೋಡಿ ಭಾಗದ ಅಭಿವೃದ್ಧಿಗಾಗಿ ಮಾತ್ರವಲ್ಲದೇ ಸಮಗ್ರ ಬೆಳಗಾವಿ ಜಿಲ್ಲೆಯ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಯ ಕಡೆಗೆ ಗಮನಹರಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆಯನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಅವರು ಮಾಡಿದ ಪ್ರಾಮಾಣಿಕ ಪ್ರಯತ್ನಗಳು ಸ್ತುತ್ಯಾರ್ಹವಾದವು. ಹಾಗೂ ರಾಜ್ಯದ ಹಲವಾರು ಪ್ರಮುಖ ರಾಜಕೀಯ ನಾಯಕರಿಗೆ ಮಾದರಿಯಾಗಿವೆ. ಬೆಳಗಾವಿ ನಗರದ ಒಳಚರಂಡಿ ವ್ಯವಸ್ಥೆ, ಚಿಕ್ಕೋಡಿ ಪಟ್ಟಣದ ಕುಡಿಯುವ ನೀರಿನ ಯೋಜನೆ, ಚಿಕ್ಕೋಡಿಯ ಸರ್ಕಾರಿ ದವಾಖಾನೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಯನ್ನಾಗಿ ಮೇಲ್‌ದರ್ಜೆಗೆ ಏರಿಸಿದ್ದು, ಅಂಕಲಿ ಗ್ರಾಮದ ಕುಡಿಯುವ ನೀರಿನ ಯೋಜನೆ ಹಾಗೂ ಗ್ರಾಮಗಳ ರಸ್ತೆಗಳ ಸುಧಾರಣೆಗೆ ಶ್ರಮಿಸಿದ್ದು, ಅವರ ಸಾಧನೆಯ ಮೈಲಿಗಲ್ಲುಗಳು. ಬೆಳಗಾವಿ ನಗರದ ರಸ್ತೆಗಳ ದುರಸ್ತಿಗಾಗಿ ಪರಿಶ್ರಮ ಪಟ್ಟಿದ್ದಾರೆ. ಬೆಳಗಾವಿ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಗಮನ ಹರಿಸಿದ್ದಾರೆ. ಬೆಳಗಾವಿಯಲ್ಲಿಯೇ ಐತಿಹಾಸಿಕ ವಿಧಾನ ಮಂಡಳ ಅಧಿವೇಶನವನ್ನು ನಡೆಸಲು ಕೋರೆಯವರು ಪಟ್ಟಶ್ರಮ ಕಣ್ಮುಂದಿದೆ. ಈ ಅಧಿವೇಶನಗಳಲ್ಲಿ ತಮ್ಮ ಪ್ರಭಾವವನ್ನು ಬಳಸಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸುಮಾರು ೧೪೦೦ ಹಣವನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದಿಂದ ಬಿಡುಗಡೆಗೊಳಿಸಿರುವರು. ೨೦೦೯ರ ಬೆಳಗಾವಿ ವಿಧಾನ ಮಂಡಲದ ಅಧಿವೇಶನದಲ್ಲಿಯೂ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರುವಲ್ಲಿ ಸಫಲರಾಗಿ ಬೆಳಗಾವಿ ನಗರದ ಅಭಿವೃದ್ಧಿಗೆ ಸುಮಾರು ೨೫೦ ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸಿರುವರು. ಬೆಳಗಾವಿ ಜಿಲ್ಲೆಯ ಹಲವು ಸಮಸ್ಯೆಗಳಿಗೆ ಒಟ್ಟು ೫೦೦ ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಬಿಡುಗಡೆಗೊಳಿಸಿ ಜಿಲ್ಲೆಯ ಹಲವು ಸಮಸ್ಯೆಗಳ ಪರಿಹಾರಕ್ಕೆ ಮುಕ್ತಿ ದೊರಕಿಸಲು ಶ್ರೀ ಪ್ರಭಾಕರ ಕೋರೆಯವರು ಪಟ್ಟಶ್ರಮ ಸ್ಪಷ್ಟವಾಗುತ್ತದೆ. ಬೆಳಗಾವಿಯಲ್ಲಿಯೇ ಶಾಶ್ವತ ವಿಧಾನ ಮಂಡಲ ಅಧಿವೇಶನ ನಡೆಸಬೇಕು ಎಂದು ಸತತವಾಗಿ ಅವರು ಪ್ರಯತ್ನಿಸಿದ ಫಲವಾಗಿ ಸರ್ಕಾರ ೧೧೦ ಕೋಟಿಯನ್ನು 'ಸುವರ್ಣಸೌಧ' ನಿರ್ಮಾಣಕ್ಕೆ ಬಿಡುಗಡೆಗೊಳಿಸಿದೆ. ಈ ಕಾರ್ಯವನ್ನು ಪ್ರಾರಂಭಿಸುವ ಮೂಲಕ ಬೆಳಗಾವಿ ನಗರಕ್ಕೆ ರಾಜ್ಯದ ಎರಡನೆಯ ರಾಜಧಾನಿಯ ಗೌರವ ದಕ್ಕಿದೆ. ಪ್ರಬಲ ನಾಯಕರ ಪ್ರಯತ್ನದಿಂದ ನಡೆದ ಈ ಮಹಾ ಅಧಿವೇಶನಗಳ ಪರಿಣಾಮ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೊಸ ಆಯಾಮ ಒದಗಿಸಿರುವುದನ್ನು ಈ ಅಧ್ಯಯನ ಅನಾವರಣಗೊಳಿಸುತ್ತದೆ.

ಈ ಸಂಶೊಧನೆಯ ಎರಡನೆಯ ಊಹೆಯ ಪ್ರಕಾರ ನಾಯಕರ ಜಾತ್ಯಾತೀತ ನಿಲುವು ಇತರರನ್ನು ಪ್ರಭಾವಿಸುತ್ತವೆ. ಮತ್ತು ನಾಯಕರು ದ್ವಿತೀಯ ಹಂತದ ನಾಯಕರ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತಾರೆ. ನಾಯಕರ ವ್ಯಕ್ತಿತ್ವ ಹಾಗೂ ಅವರ ಪ್ರವೃತ್ತಿ ಉತ್ತಮ ಆಡಳಿತವನ್ನು ಹೇಗೆ ಪ್ರಭಾವಿಸುತ್ತದೆ ಎಂಬುದು ಇದರಿಂದ ತಿಳಿಯುತ್ತದೆ. ಅಲ್ಲದೇ ಪ್ರಬಲ ನಾಯಕತ್ವದಿಂದ ಮಹಾ ಅಧಿವೇಶನಗಳು ಯಶಸ್ವಿಯಾಗಿ ಸಂಘಟಿತಗೊಳ್ಳುತ್ತವೆ. ಕೋರೆಯವರ ಯಶಸ್ಸಿಗೆವರ ಜಾತ್ಯತೀತ ನಿಲುವು ಕಾರಣವಾಗಿದೆಯೆಂಬುದನ್ನು ಅಧ್ಯಯನ ಶೋಧಿಸಿದೆ.

ಡಾ. ಪ್ರಭಾಕರ ಕೋರೆಯವರು ತಮ್ಮ ರಾಜಕೀಯ ಜೀವನದಲ್ಲಿ ತಮ್ಮ ಜಾತ್ಯತೀತ ತತ್ವಗಳನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡಿರಲಿಲ್ಲ. ಧರ್ಮ ನಿರಪೇಕ್ಷತೆ ಅವರ ಸಹಜ ನಿಲುವುವಾಗಿದೆ. ಅವರು ತಮ್ಮ ಧರ್ಮ, ಜಾತಿ, ಸಮುದಾಯ ಹಾಗೂ ಪಂಗಡಗಳ ಜೊತೆ ಉತ್ತಮವಾದ ಸಂಬಂಧವನ್ನು ಹೊಂದಿರುವರು. ಎಲ್ಲರನ್ನು ಪ್ರೀತಿ ವಿಶ್ವಾಸಗಳಿಂದ ಕಾಣುತ್ತಾ ಬಂದವರು ಜಾತಿಯ ತಾರತಮ್ಯವನ್ನು ಎಂದು ಮಾಡದೇ ಎಲ್ಲರೂ 'ನಮ್ಮವರೇ' ಎಂಬ ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದಾರೆ. ಹೀಗಾಗಿ ಎಲ್ಲ ಧರ್ಮ, ಜಾತಿಯ ಜನರು ಕೋರೆಯವರನ್ನು ಪ್ರೀತಿಯಿಂದ ಕಾಣುತ್ತಾರೆ.

ರಾಜಕೀಯ ನಾಯಕರ ವ್ಯಕ್ತಿತ್ವ ಹಾಗೂ ಆಚರಣೆ ಉತ್ತಮ ಆಡಳಿತಕ್ಕೆ ಕಾರಣವಾಗುತ್ತದೆ. ಶ್ರೀ ಪ್ರಭಾಕರ ಕೋರೆಯವರು ತಮ್ಮ ಅನುಕರಣೀಯವಾದ ವ್ಯಕ್ತಿತ್ವದ ಪ್ರಭಾವದಿಂದ ತಾವು ವಹಿಸಿಕೊಂಡಿರುವ ಹುದ್ದೆಗಳನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸುವ ಮೂಲಕ ರಾಜಕೀಯ ಚರಿತ್ರೆಗೆ ವಸ್ತುವಾದರು.

ಶ್ರೀ ಪ್ರಭಾಕರ ಕೋರೆಯವರು ಕರ್ನಾಟಕದಲ್ಲಿ ಉತ್ತಮ ರಾಜಕೀಯ ನಾಯಕತ್ವವನ್ನು ಬೆಳೆಸಬೇಕು ಎಂಬ ಹಂಬಲವನ್ನು ಹೊಂದಿರುವರು. ಆ ನಿಟ್ಟಿನಲ್ಲಿ ಎಲ್ಲ ಹಂತಗಳಲ್ಲಿ ಎಲ್ಲ ಜಾತಿಯ ಯುವನಾಯಕರನ್ನು ಬೆಂಬಲಿಸಿ ಮೇಲಕ್ಕೆತ್ತುವಲ್ಲಿ (ಪ್ರೋತ್ಸಾಹಿಸಿ) ಸದಾ ಪ್ರಯತ್ನವನ್ನು ನಡೆಸುತ್ತಾ ಬಂದಿದ್ದಾರೆ. ಅವರು ಬೆಳೆಸಿದ ಹಲವಾರು ದ್ವಿತೀಯ ಹಂತದ ನಾಯಕರು ವಿವಿಧ ಜಾತಿಗಳಿಗೆ ಸೇರಿದವರಾಗಿದ್ದಾರೆ. ಅವರು ಇಂದು ರಾಷ್ಟ್ರ ಹಾಗೂ ರಾಜ್ಯದ ರಾಜಕೀಯದಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ಇನ್ನು ಕೆಲವರು ಬೆಳೆಯುತ್ತಿದ್ದಾರೆ. ಅವರನ್ನು ಸಂದರ್ಶಿಸಿದಾಗ ಅವರು ಶ್ರೀ ಕೋರೆಯವರನ್ನು 'ಗಾಥಪಾದರ' ಅಥವಾ ಗುರುಗಳೆಂದು ಪರಿಗಣಿಸುತ್ತೇವೆ ಎಂದು ಹೇಳುವರು. ಎರಡನೆಯ ಹಂತದ ನಾಯಕರನ್ನು ರಾಜಕೀಯಕ್ಕೆ ತರಲು ಹಾಗೂ ತಮ್ಮ ಪ್ರಬಲ ನಾಯಕತ್ವದಿಂದ ಉತ್ತಮ ಆಡಳಿತವನ್ನು ನೀಡಿರುವುದು ಈ ಸಂಶೋಧನೆಯ ಎರಡನೆಯ ಊಹೆಯನ್ನು ಈ ಮೇಲಿನ ಅಂಶಗಳು ಸ್ಪಷ್ಟಪಡಿಸುತ್ತವೆ.

ಮೂರನೇ ಊಹೆಯ ಪ್ರಕಾರ ರಾಜಕೀಯದಿಂದ ಸಾಮಾಜಿಕ, ಸಹಕಾರ, ಆರೋಗ್ಯ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಕ ಕ್ಷೇತ್ರಗಳಲ್ಲಿ ಬದಲಾವಣೆ ಕಾಣುತ್ತದೆ. ಕೋರೆಯವರು ಶೈಕ್ಷಣಿಕ ಹಾಗೂ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ ತೋರುವ ದೃಢ ಸಂಕಲ್ಪವನ್ನು ಈ ಅಧ್ಯಾಯ ತಿಳಿಸುವುದು. ಈ ಅಧ್ಯಯನದ ಮೂರನೇ ಊಹೆ ಕೂಡಾ ಅತ್ಯಂತ ಸಮರ್ಥನೀಯವಾದದ್ದು. ಏಕೆಂದರೆ ಪ್ರಜಾಪ್ರಭುತ್ವದ ಯಶಸ್ಸು ಜನರ ಶಿಕ್ಷಣ ಹಾಗೂ ಜಾಣತನದ ನಿರ್ಧಾರಗಳ

ಮೇಲೆ ಅವಲಂಬಿತವಾಗಿದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಶಿಕ್ಷಣ ಪ್ರಸಾರದಂತಹ ಹಾಗೂ ಅದಮ್ಯ ಸೇವೆಯಂತಹ ಮಹೋನ್ನತ ಕಾರ್ಯಗಳಲ್ಲಿ ನಿರತರಾಗಿರುವ ರಾಜಕೀಯ ನಾಯಕರಿಗೆ ಹೆಚ್ಚು ಜನ ಬೆಂಬಲ ದೊರೆಯುತ್ತದೆ. ಜನಹಿತ ಕಾರ್ಯಸಾಧನೆಗಳಲ್ಲಿ ದೃಢಸಂಕಲ್ಪ ಹೊಂದಿರುವ ರಾಜಕೀಯ ನಾಯಕರು ಜನಪ್ರಿಯತೆಗಳ ಕಡೆ ಗಮನ ಹರಿಸದೇ ಕೇವಲ ಗುರಿ ಸಾಧನೆಯೇ ಅವರ ಮುಖ್ಯ ಧ್ಯೇಯವಾಗಿರುತ್ತದೆ.

ಶ್ರೀ ಪ್ರಭಾಕರ ಕೋರೆಯವರು ಒಬ್ಬ ರಾಜಕೀಯ ನಾಯಕರಾಗಿದ್ದರೂ ಅವರ ಕೊಡುಗೆ ಶೈಕ್ಷಣಿಕ, ಆರೋಗ್ಯ, ಸಹಕಾರ, ಧಾರ್ಮಿಕ, ಸಾಹಿತ್ಯಕ, ಸಾಮಾಜಿಕ ರಂಗಗಳಲ್ಲಿ ಅಮೂಲ್ಯವಾಗಿದೆ. ಅವರ ದೂರದೃಷ್ಟಿಯಿಂದಲೇ ಬೆಳಗಾವಿಯ ಕೆ. ಎಲ್. ಇ. ಸಂಸ್ಥೆಯನ್ನು ಒಂದು ಬೃಹತ್ ಸಂಸ್ಥೆಯಾಗಿ ಬೆಳೆಯಿತು. ಕೋರೆಯವರು ಈ ಸಂಸ್ಥೆಯ ನೇತೃತ್ವವಹಿಸುವುದಕ್ಕಿಂತ ಪೂರ್ವದಲ್ಲಿ ೩೮ ಅಂಗ ಸಂಸ್ಥೆಗಳನ್ನು ಹೊಂದಿತ್ತು. ಇಂದು ೨೧೧ ಅಂಗಸಂಸ್ಥೆಗಳಲ್ಲಿ ವಿಸ್ತರಿಸಿದ್ದಲ್ಲದೇ ದೇಶದ ಇತರ ರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ದೆಹಲಿಗಳಲ್ಲಿ ಅಂಗಸಂಸ್ಥೆಗಳು ತಲೆಯೆತ್ತಿವೆ. ಮಲೇಶಿಯಾ ದೇಶಗಳಿಗೂ ವಿಸ್ತರಿಸುವ ಮೂಲಕ ಸಂಸ್ಥೆಗೆ ಜಾಗತಿಕ ಮನ್ನಣೆ ದೊರಕುವಂತೆ ಮಾಡಿದರು. 'ಫ್ರೀ ಬ್ಯಾನಿಯನ್' ಹಂತದಿಂದ ಸ್ನಾತ್ತಕೋತ್ತರ ಹಂತದವರೆಗೆ ಶಿಕ್ಷಣವನ್ನು ನಗರ ಮತ್ತು ಗ್ರಾಮೀಣ ಪ್ರದೇಶದವರಿಗೆ ಸುಲಭವಾಗಿ ಸಿಗುವಂತೆ ಮಾಡಿದ ಇವರ ಸಾಧನೆ ರೋಮಾಂಚನವನ್ನು ಉಂಟು ಮಾಡುವಂತಹದು.

ಕೆ. ಎಲ್. ಇ. ಸಂಸ್ಥೆಗೆ ವಿಶ್ವವಿದ್ಯಾಲಯದ ಸ್ಥಾನಮಾನ ಸಿಗುವಂತೆ ಆಧುನಿಕ ಸೌಲಭ್ಯಗಳನ್ನು ಒದಗಿಸಿದ ಶ್ರೀ ಕೋರೆಯವರು ಹಲವಾರು ಹೊಸ ವೃತ್ತಿ ಆಧಾರಿತ ವಿಭಾಗಗಳನ್ನು (ಕೋರ್ಸುಗಳನ್ನು) ಹಾಗೂ ವೈದ್ಯಕೀಯ ಶಿಕ್ಷಣದ ಎಲ್ಲ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಮೂಲಕ ವಿವಿಧ ದೇಶಗಳನ್ನು ಆಕರ್ಷಿಸುವಲ್ಲಿ ಶ್ರೀ ಪ್ರಭಾಕರ ಕೋರೆಯವರು ಯಶ ಸಾಧಿಸಿರುವುದು ದೇಶವೇ ಹೆಮ್ಮೆ ಪಡುವಂತಹ ಸಾಧನೆಯಾಗಿದೆ. ಇದರಿಂದಲೂ ಕರ್ನಾಟಕದ ಶೈಕ್ಷಣಿಕ ರಂಗದಲ್ಲಿ ಹೊಸ ಶಕೆ ಪ್ರಾರಂಭಗೊಳ್ಳಲು ಅದು ಕಾರಣವಾಗಿದೆ.

ಉತ್ತರ ಕರ್ನಾಟಕದ ಜನರ ಆರೋಗ್ಯದ ಸಮಸ್ಯೆಗಳ ಪರಿಹಾರಕ್ಕಾಗಿ ಕೋರೆಯವರು ಕೆ. ಎಲ್. ಇ. ಸಂಸ್ಥೆಯ ೧೦೦೦ ಹಾಸಿಗೆಯ ಆಧುನಿಕ ಸೌಲಭ್ಯಗಳ ಆಸ್ಪತ್ರೆಯನ್ನು ೧೯೯೬ರಲ್ಲಿ ನಿರ್ಮಿಸಿದರು. ೧೯೯೦ ಹಾಸಿಗೆಗೆ ವಿಸ್ತರಿಸಿ ಬಡವರಿಗೆ ಉಚಿತ ಆರೋಗ್ಯ ಸೇವೆ ಒದಗಿಸಬೇಕೆಂದು ನಿರ್ಣಯಿಸಿದ್ದು ಶ್ರೀ ಪ್ರಭಾಕರ ಕೋರೆಯವರು ಬಡವರ ಬಗ್ಗೆ ಹೊಂದಿರುವ ನೈಜ ಕಳಕಳಿ ಎಂತಹದು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಇದರಿಂದ ಲಕ್ಷಾಂತರ ಜನ ರೋಗಿಗಳು ನೆರವನ್ನು ಪಡೆಯುತ್ತಿದ್ದಾರೆ.

ಅವಶ್ಯಕತೆಗೆ ಅನುಗುಣವಾಗಿ ಶೈಕಣಿಕ. ವೈದ್ಯಕೀಯ ಅಂಗಸಂಸ್ಥೆಗಳನ್ನು ಸ್ಥಾಪಿಸಿ ಅವುಗಳನ್ನು ವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಹೋಗುತ್ತಿರುವ ದೃಢಸಂಕಲ್ಪವನ್ನು ಗಮನಿಸಿದಾಗ ಶ್ರೀ ಪ್ರಭಾಕರ ಕೋರೆಯವರು ಕೇವಲ ಒಬ್ಬ ರಾಜಕೀಯ ನಾಯಕರಾಗಿರದೆ. ಶಿಕ್ಷಣ ಪ್ರೇಮಿ. ಶಿಕ್ಷಣತಜ್ಞ ಹಾಗೂ ಸಮರ್ಥ ಆಡಳಿತಗಾರ ಎಂಬುದು ಸ್ಪಷ್ಟವಾಗುತ್ತದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ. ರಾಣಿ ಕಿತ್ತೂರ ಚೆನ್ನಮ್ಮ ವಿಶ್ವವಿದ್ಯಾಲಯಗಳನ್ನು ಬೆಳಗಾವಿಗೆ ತಂದವರು

ಕೋರೆ. ಮೇಲಿನ ಈ ಎಲ್ಲಾ ವಿಷಯಗಳನ್ನು ಗಮನಿಸಿದಾಗ ಡಾ. ಪ್ರಭಾಕರ ಕೋರೆಯವರು 'ಆಧುನಿಕ ಕೆ.ಎಲ್.ಇ. ಶಿಲ್ಪಿ' ಎಂಬುದು ಸಿದ್ಧವಾಗುತ್ತದೆ.

೫೫ ಕೋಟಿ ರೂಪಾಯಿ ವೆಚ್ಚದಲ್ಲಿ ವಿದ್ಯುತ್ ಉತ್ಪಾದನಾ ಘಟಕ ಹಾಗೂ ಸ್ಪಿರಿಟ್ ತಯಾರಿಕೆಯ ಘಟಕಗಳನ್ನು ಸ್ಥಾಪಿಸಿ ದೂಧಗಂಗಾ ಕಾರ್ಖಾನೆಯ ಲಾಭ ಹೆಚ್ಚಿಸುವುದರ ಜೊತೆಗೆ ಕಾರ್ಖಾನೆಯನ್ನು ನಂಬಿ ಜೀವನ ಸಾಗಿಸುತ್ತಿರುವ ಕಾರ್ಮಿಕರಿಗೆ ಹಾಗೂ ರೈತರಿಗೆ ಅನುಕೂಲ ಕಲ್ಪಿಸಿರುವರು.

ಶ್ರೀ ಪ್ರಭಾಕರ ಕೋರೆಯವರು ಬಸವಾದಿ ಶಿವಶರಣರ ತತ್ವಗಳಲ್ಲಿ ನಂಬಿಕೆ ಇಟ್ಟವರು. ಧಾರ್ಮಿಕ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟವಾದ ಸೇವೆಯ ರೂಪದಲ್ಲಿ ಕೊಡುಗೆಯನ್ನು ಸಲ್ಲಿಸಿದವರು. ಕನಮಡಿಯ ಐತಿಹಾಸಿಕ ಧರಿದೇವರ ದೇವಾಲಯದ ಪುನರ್ ನವೀಕರಣಕ್ಕಾಗಿ ಹಾಗೂ ದೇವಾಲಯದ ಸಮಗ್ರ ಅಭಿವೃದ್ಧಿಗಾಗಿ ೧ ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಸಾದ ನಿಲಯ, ಕಲ್ಯಾಣ ಮಂಟಪ, ಯಾತ್ರಾ ನಿಲಯಗಳಲ್ಲದೆ ಸುಸಜ್ಜಿತ ಪ್ರವಾಸಿ ಮಂದಿರ ಹಾಗೂ ದೇವಾಲಯದ ಗರ್ಭಗುಡಿಯ ಕಾಮಗಾರಿಗಳನ್ನು ಕೈಗೊಳ್ಳುವುದರ ಮೂಲಕ ದೇವಾಲಯದ ಅಭಿವೃದ್ಧಿಗೆ ಶ್ರೀಕಾರ ಹಾಕಿರುವರು. ಅನೇಕ ಮಠ, ಮಸೀದೆ, ಮಂದಿರಗಳಿಗೆ ಆರ್ಥಿಕ ಸಹಾಯ ಒದಗಿಸಿದ್ದಾರೆ. ಹಲವು ದೇವಾಲಯಗಳ ವಿವಾದಗಳನ್ನು ಬಗೆಹರಿಸಿದ್ದಾರೆ. ನಾಡಿನ ವಿವಿಧ ಧರ್ಮ, ಜಾತಿಯ ಮಠಗಳು ಹಾಗೂ ಮಠಾಧೀಶರ ಬಗ್ಗೆ ಅಪಾರವಾದ ಗೌರವ ಹೊಂದಿದ ಕೋರೆಯವರ ಧಾರ್ಮಿಕ ಸಾಧನೆಗಳಿಂದ ಸ್ಪಷ್ಟವಾಗುತ್ತದೆ.

ಗಡಿಭಾಗದಲ್ಲಿ ಕಲೆ, ಸಾಹಿತ್ಯ, ನಾಡು ನುಡಿಯ ಸೇವೆ ಮಾಡುತ್ತ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೂ ಕೋರೆಯವರು ತಮ್ಮದೆ ಆದ ವಿಶೇಷವಾದ ಕೊಡುಗೆಗಳನ್ನು ಸಲ್ಲಿಸಿರುವುದು ಸ್ಪಷ್ಟವಾಗುತ್ತದೆ. ೨೦೦೩ರಲ್ಲಿ ೭೦ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿ ಕನ್ನಡ ಸಾಹಿತ್ಯ ಜಾತ್ರೆಯನ್ನು ಗಡಿಭಾಗದ ಬೆಳಗಾವಿಯಲ್ಲಿ ಅದ್ದೂರಿಯಾಗಿ ಸಂಘಟಿಸುವ ಮೂಲಕ ಗಡಿಭಾಗದಲ್ಲಿ ಕನ್ನಡ ಬಾವುಟವನ್ನು ಎತ್ತಿಹಿಡಿದರು. ಹಾಗೆಯೇ ಕೆ. ಎಲ್. ಇ. ಸಂಸ್ಥೆಯ ಪ್ರಸಾರಾಂಗವನ್ನು ಸ್ಥಾಪಿಸಿ, ವ್ಯಕ್ತಿಗಳ ಸಾಧನೆ ಮತ್ತು ಜೀವನ ಚರಿತ್ರೆಯನ್ನು ನಾಡಿನ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವ ಕಾರ್ಯಮಾಡಿ ಯುವಪೀಳಿಗೆ ಈ ಮಹಾನ್ ವ್ಯಕ್ತಿಗಳ ಆದರ್ಶ ಜೀವನ ತಿಳಿದುಕೊಳ್ಳುವ ಅವಕಾಶ ಒದಗಿಸಿರುವರು. ನಾಡಿನ ಸಾಹಿತಿ, ಕಲಾವಿದರನ್ನು ಪ್ರೋತ್ಸಾಹಿಸುವ ಮೂಲಕ ನಾಡಿನ ಸಾಹಿತ್ಯಕ ಹಾಗೂ ಕಲಾಕ್ಷೇತ್ರಗಳಿಗೆ ಕೋರೆಯವರು ತಮ್ಮದೆ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿರುವುದು ಸ್ಪಷ್ಟವಾಗುತ್ತದೆ.

ಹಾಗೆಯೇ ನೈಸರ್ಗಿಕ ಪ್ರಕೋಪಗಳಿಗೆ ತುತ್ತಾದ ಜನರ ಕಷ್ಟಗಳಿಗೆ ಕೋರೆಯವರು ಶೀಘ್ರವಾಗಿ ಸ್ಪಂದಿಸುವ ಮೂಲಕ ಮಾನವೀಯತೆಯನ್ನು ಮೆರೆದಿರುವುದು ಎದ್ದು ಕಾಣುತ್ತದೆ. ೨೦೦೫ರಲ್ಲಿ ಕೃಷ್ಣಾ ನದಿಯ ಪ್ರವಾಹಕ್ಕೆ ಸಿಲುಕಿದ ಹತ್ತಾರು ಹಳ್ಳಿಯ ಜನರಿಗೆ ಆಶ್ರಯ ಒದಗಿಸಿ ಉಚಿತ ಆಹಾರ, ವಸತಿ, ಬಟ್ಟೆ, ಹಾಗೂ ಔಷದೋಪಚಾರ ವ್ಯವಸ್ಥೆಯನ್ನು ಕಲ್ಪಿಸಿ, ನಿರಾಶ್ರಿತರ ನೆರವಿಗೆ ಸ್ಪಂದಿಸುವ ಕಾರ್ಯ ಮಾಡಿದ್ದಾರೆ. ೨೦೦೯ರಲ್ಲಿ ನೆರೆ ಹಾವಳಿಯಿಂದ

ಉತ್ತರ ಕರ್ನಾಟಕದ ಜನ ಸಂಕಷ್ಟಕ್ಕೆ ಸಿಲುಕಿದಾಗ ಕೆ. ಎಲ್. ಇ. ಸಂಸ್ಥೆಯ ಪರವಾಗಿ ೫೧ ಲಕ್ಷ ರೂಪಾಯಿಗಳನ್ನು ನಿರಾಶ್ರಿತರ ಪುನರ್ ವಸತಿಗಾಗಿ ಉದಾರವಾಗಿ ದಾನ ನೀಡುವ ಮೂಲಕ ಮಾನವೀಯತೆಯನ್ನು ಮೆರೆದಿದ್ದಾರೆ. ನಿಸರ್ಗ ವಿಕೋಪದಿಂದ ತೊಂದರೆಗೆ ಒಳಗಾದ ಜನರಿಗೆ ಸಹಾಯ ಒದಗಿಸುವ ಮೂಲಕ ಶ್ರೀ ಪ್ರಭಾಕರ ಕೋರೆಯವರು ಇತರರಿಗೆ ಮಾದರಿಯೆನಿಸುವ ಕಾರ್ಯ ಮಾಡಿರುವುದು ಸ್ಪಷ್ಟವೆನಿಸುತ್ತದೆ.

ರಾಜಕೀಯ ನಾಯಕರಾಗಿ ಶ್ರೀ ಪ್ರಭಾಕರ ಕೋರೆಯವರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಇತರ ರಾಜಕೀಯ ನಾಯಕರಿಗೆ ಮಾದರಿಯಾಗುತ್ತದೆ. ಶ್ರೀ ಪ್ರಭಾಕರ ಕೋರೆಯವರು ಈ ಕ್ಷೇತ್ರಗಳಿಗೆ ನೀಡಿರುವ ಕೊಡುಗೆಗಳಿಂದ ಅವರೊಬ್ಬ ರಾಜಕೀಯ ನಾಯಕರಷ್ಟೇ ಅಲ್ಲದೇ ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದ ನಾಯಕರೂ ಹೌದು ಎನ್ನುವ ಅಂಶವು ಸ್ಪಷ್ಟವಾಗುತ್ತದೆ.

ಈ ಅಂಶಗಳಿಂದ ಡಾ. ಪ್ರಭಾಕರ ಕೋರೆಯವರು ಕರ್ನಾಟಕ ಕಂಡ ವಿಶಿಷ್ಟ ರಾಜಕೀಯ ನಾಯಕರು ಎನ್ನುವ ಗೌರವಕ್ಕೆ ಪಾತ್ರರಾಗಿದ್ದಾರೆ.

ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳು:

೧) ರಾಜಕೀಯ ನಾಯಕರು ಬೆಳೆದು ಬರಲು ಅವರು ಬೆಳೆದು ಬಂದ ಪ್ರದೇಶದ ಸಾಮಾಜಿಕ, ಐತಿಹಾಸಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳು ತಕ್ಕಮಟ್ಟಿಗೆ ಪ್ರಭಾವವನ್ನು ಬೀರುತ್ತವೆ.

೨) ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ನಾಯಕರು ಬೆಳೆಯಲು ಅವರ ಕುಟುಂಬದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಹಿನ್ನೆಲೆಗಳು ಮಹತ್ವದ ಪಾತ್ರವನ್ನು ವಹಿಸುತ್ತದೆ.

೩) ಕೆಲವೊಮ್ಮೆ ಆಕಸ್ಮಿಕ ಘಟನೆಗಳಿಂದ ಜನರ ಒತ್ತಾಯ ಹಾಗೂ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ರಾಜಕೀಯ ಕ್ಷೇತ್ರಕ್ಕೆ ಧುಮುಕಿ, ಅಸಾಧ್ಯವಾದುದನ್ನು ಸಾಧಿಸುತ್ತಾರೆ. ಆ ಮೂಲಕ ತಮ್ಮ ಪ್ರಭಾವವನ್ನು ಜನಸಾಮಾನ್ಯರ ಮೇಲೆ ಹೊಂದಿರುತ್ತಾರೆ.

೪) ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ರಾಜಕೀಯ ನಾಯಕರು ಹೆಚ್ಚು ಜನಸಂಪರ್ಕದಲ್ಲಿದ್ದುಕೊಂಡು ಸಾರ್ವಜನಿಕರ ಸಾಮಾಜಿಕ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕಾಗುತ್ತದೆ. ಇದರಿಂದ ರಾಜಕೀಯ ನಾಯಕರಿಗೆ ಜನರ ವಿಶ್ವಾಸವನ್ನು ಗಳಿಸಲು ಹಾಗೂ ಜನರ ಬೆಂಬಲವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

೫) ಶಿಕ್ಷಣವು ಆಧುನಿಕ ಜೀವನದ ಅವಶ್ಯಕತೆಗಳಲ್ಲೊಂದು. ಭಾರತದಲ್ಲಿ ಶಿಕ್ಷಣವನ್ನು ಪಡೆಯುವುದು ನಾಗರಿಕರ ಮೂಲಭೂತ ಹಕ್ಕಾಗಿದೆ. ಆದ್ದರಿಂದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು ಶಿಕ್ಷಣದ ಗುಣಮಟ್ಟ ಕಾಪಾಡಿಕೊಳ್ಳುವುದು, ಆ ಮೂಲಕ ಯುವ ಜನಾಂಗಕ್ಕೆ ಉದ್ಯೋಗ ಒದಗಿಸುವುದು ರಾಜಕಾರಣಿಗಳ ಕರ್ತವ್ಯವಾಗಿದೆ.

೬) ಸಾರ್ವಜನಿಕ ಹಾಗೂ ಖಾಸಗೀ ವಲಯದಲ್ಲಿ ಜನರು ಅಪೇಕ್ಷಿಸುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಹಾಗೆ ವಿವಿಧ ಬಗೆಯ ಅಭಿವೃದ್ದಿ ಕಾರ್ಯಗಳನ್ನು ನೆರವೇರಿಸುವ ನಾಯಕರು ಜನಪ್ರಿಯವಾಗುತ್ತಾರೆ. ಹಾಗೆಯೇ ತಮ್ಮ ಪ್ರದೇಶಗಳ ಬಹುದಿನಗಳಿಂದ ನೆನೆಗುದಿಗೆ ಬಿದ್ದಂತಹ ಅಭಿವೃದ್ಧಿ ಕಾರ್ಯಗಳಿಗಾಗಿ ಪ್ರಯತ್ನಿಸುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ.

೭) ರಾಜಕೀಯ ನಾಯಕರು ರಾಜಕೀಯದ ಮೂಲಕ ಸಾಮಾಜಿಕ, ಆರೋಗ್ಯ, ಸಾಹಿತ್ಯಕ, ಸಹಕಾರ, ಧಾರ್ಮಿಕ ರಂಗಗಳಲ್ಲಿಯೂ ತಮ್ಮದೇ ಆದ ಮಹತ್ವದ ಕೊಡುಗೆಗಳನ್ನು ನೀಡಬಹುದಾಗಿದೆ. ರಾಜಕೀಯ ನಾಯಕರು ಮನಸ್ಸು ಮಾಡಿದರೆ, ಈ ರೀತಿಯ ವಿವಿಧ ಕ್ಷೇತ್ರಗಳಲ್ಲಿ ಅಮೋಘವಾದ ಸಾಧನೆಗಳನ್ನು ಸಾಧಿಸಲು ಸಾಧ್ಯ ಎನ್ನುವುದನ್ನು ಇದು ಸಾಬೀತುಪಡಿಸುತ್ತದೆ.

೮) ಪ್ರಭಾವಿ ರಾಜಕೀಯ ನಾಯಕರು ಸಾರ್ವಜನಿಕ ಚುನಾವಣೆಯಲ್ಲಿ ಭಾಗವಹಿಸುವುದರಿಂದ ಪ್ರಜಾಪ್ರಭುತ್ವ ಗಟ್ಟಿಗೊಳ್ಳುತ್ತದೆ.

೯) ಪ್ರಬಲ ರಾಜಕೀಯ ನಾಯಕರು ತಾವು ಇರುವ ಪಕ್ಷಗಳಿಗೆ ಒಂದು ಪ್ರಬಲ ಶಕ್ತಿಯನ್ನು ಒದಗಿಸುತ್ತಾರೆ.

೧೦) ಮಾನವೀಯತೆ ನಾಯಕರ ಭವಿಷ್ಯವನ್ನು ಕಟ್ಟುತ್ತದೆ.

೧೧) ತಮ್ಮ ರಾಜಕೀಯ ಜೀವನದಲ್ಲಿ ಮಹತ್ತರವಾದ ಸ್ಥಾನಗಳನ್ನು ಪಡೆಯುವ ಅರ್ಹತೆಯನ್ನು ಹೊಂದಿದ್ದರೂ ಅದನ್ನು ಸಾಮಾಜಿಕ, ಶೈಕ್ಷಣಿಕ, ಆರೋಗ್ಯ, ಸಹಕಾರ, ಧಾರ್ಮಿಕ ಕ್ಷೇತ್ರಗಳ ಸೇವೆಗಾಗಿ ತ್ಯಾಗ ಮಾಡಿದ ಅಪರೂಪದ ನಾಯಕರು ಆದರ್ಶದ ಹಾದಿಯನ್ನು ಅನುಸರಿಸುವ ಮೂಲಕ ಜನರಿಗೆ ಹೆಚ್ಚು ಹತ್ತಿರವಾಗುತ್ತಾರೆ.

೧೨) ಭಾರತ ಸಂವಿಧಾನದ ಪೀಠಿಕೆಯಲ್ಲಿ ಜಾತ್ಯತೀತ ತತ್ವಗಳನ್ನು ಅಳವಡಿಸಲಾಗಿದೆ. ಜಾತ್ಯಾತೀತ ತತ್ವವನ್ನು ಮೈಗೂಡಿಸಿಕೊಂಡು ಅದನ್ನು ಅನುಸರಿಸುವ ಮೂಲಕ ನಾಯಕರು ಹೆಚ್ಚು ಜನಪ್ರಿಯರಾಗುತ್ತಾರೆ. ಎಲ್ಲಾ ಜಾತಿ ಸಮುದಾಯಗಳ ಜನರ ಬೆಂಬಲದೊಂದಿಗೆ ಉತ್ತಮವಾದ ಆಡಳಿತ ಸಾಮರ್ಥ್ಯವನ್ನು ಪಡೆದುಕೊಂಡು ತಮ್ಮ ನಾಯಕತ್ವದಲ್ಲಿಯೇ ದ್ವಿತೀಯ ಹಂತದ ನಾಯಕತ್ವವು ಬೆಳೆದು ಬರಲು ಕಾರಣವಾಗುತ್ತಾರೆ.

೧೩) ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ರಾಜಕೀಯ ಬದಲಾಣೆಗಳಾದಾಗ ನಾಯಕರ ವರ್ಚಸ್ಸು ಪಕ್ಷದ ಸಿದ್ಧಾಂತಗಳಿಂದ ನಿರ್ಧರಿತವಾಗದೆ ನಾಯಕರ ರಾಜಕೀಯ ಸಾಮರ್ಥ್ಯ ದೃಢಸಂಕಲ್ಪ ಹಾಗೂ ಪ್ರಭಾವದ ಮೇಲೆ ನಿರ್ಧರಿತವಾಗುತ್ತದೆ.

೧೪) ಪ್ರಬಲ ರಾಜಕೀಯ ನಾಯಕರು ಜನಸಮೂಹವನ್ನು ಚಲನಶೀಲಗೊಳಿಸುತ್ತಾರೆ. ತಾವು ಕೈಗೊಳ್ಳುವ ನಿರ್ಧಾರಗಳ ಮೂಲಕ ಜನರ ಮೇಲೆ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿ ಚುನಾವಣೆಯ ಫಲಿತಾಂಶದ ಮೇಲೆ ಪ್ರಭಾವ ಬೀರುತ್ತಾರೆ.

೧೫) ಪ್ರಭಾವಿ ನಾಯಕರು ತಮ್ಮ ರಾಜಕೀಯ ಪಕ್ಷದ ಮೇಲೆ ವಿಶೇಷ ಪ್ರಭಾವ ಹೊಂದಿರುತ್ತಾರೆ.

೧೬) ಇನ್ನೊಂದು ಪ್ರಮುಖ ವಿಷಯವೆಂದರೆ ಕೆಲವು ಸಮಯಗಳಲ್ಲಿ ರಾಜಕೀಯ ನಾಯಕರನ್ನು ತೆರೆಯ ಮರೆಯಲ್ಲಿ ಹಾಗೂ ಬಹಿರಂಗವಾಗಿ ವಿರೋಧಿಸುವ ಜನರು ಇದ್ದರೂ ಕೂಡಾ ಉತ್ತಮ ನಾಯಕರಾದವರು ಅವರನ್ನು ಸಮರ್ಥವಾಗಿ ಎದುರಿಸಿ ಜನಪ್ರಿಯ ನಾಯಕರಾಗಿ ಹೊರಹೊಮ್ಮುತ್ತಾರೆ.

೧೭) ರಾಜಕೀಯ ನಾಯಕರು ಧಾರ್ಮಿಕ ಕ್ಷೇತ್ರದಲ್ಲೂ ತಮ್ಮ ವಿಶೇಷವಾದ ಕಾರ್ಯಸೇವೆಯಿಂದ ಪ್ರಭಾವವನ್ನು ಹೊಂದಿದವರಾಗಿರುತ್ತಾರೆ. ಕೆಲ ವಿಷಯದಲ್ಲಿ ರಾಜಕೀಯ ನಾಯಕರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸಾಧನೆಗಳಿಂದ ವಿಶಿಷ್ಟ ರಾಜಕೀಯ ನಾಯಕರಾಗಿ ಗೋಚರಿಸುತ್ತಾರೆ.

೧೮) ಇನ್ನೊಂದು ಪ್ರಮುಖ ಸಂಗತಿಯೆಂದರೆ ರಾಜಕೀಯ ನಾಯಕರು ತಮ್ಮ ನಾಡು ನುಡಿಯ ಪ್ರೇಮವನ್ನು ಮೆರೆದು ನಾಡಿನ ಕಲಾ ಹಾಗೂ ಸಾಹಿತ್ಯಕ ಕ್ಷೇತ್ರದ ಬೆಳವಣಿಗೆಗೂ ಕಾರಣವಾಗುತ್ತಾರೆ.

೧೯) ರಾಜಕೀಯ ನಾಯಕರು ತಾವುಗಳು ಸ್ಥಾಪಿಸಿದ ಹಾಗೂ ತಮ್ಮ ನೇತೃತ್ವದ ಸಂಘಸಂಸ್ಥೆಗಳ ಮೂಲಕ ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸುತ್ತಾರೆ.

೨೦) ರಾಜಕೀಯ ನಾಯಕರು ತಮ್ಮ ಸಾಮರ್ಥ್ಯದ ಮೂಲಕ ಎಂತಹ ಮಹಾ ಸಮ್ಮೇಳನಗಳನ್ನು ಸಂಘಟಿಸಿ ಯಶಸ್ವಿಗೊಳಿಸುತ್ತಾರೆ.

೨೧) ದೂರದೃಷ್ಟಿತ್ವದ ದೃಢ ಮನಸ್ಸಿನ ಕಾರ್ಯಸಾಧನೆಯ ಛಲಗಾರಿಕೆಯುಳ್ಳ ಒಂದು ಸಂಸ್ಥೆಯನ್ನು ಬೃಹತ್ ಪ್ರಮಾಣದಲ್ಲಿ ಇಂದಿನ ಜಗತ್ತಿಗೆ ಅನುಗುಣವಾಗಿ ಬೆಳೆಸುತ್ತಾರೆ. ಆ ಮೂಲಕ ಜನರಿಗೆ ಅನುಕೂಲ ಒದಗಿಸುತ್ತಾರೆ ಎನ್ನುವುದು ಈ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶವಾಗಿದೆ.

೨೨) ಈ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶವೆಂದರೆ ಸಾಕಷ್ಟು ಜನಸಾಮಾನ್ಯರ ಹಾಗೂ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸಿದ ನಾಯಕರನ್ನು ಸಾರ್ವಜನಿಕ ಚುನಾವಣೆಯಲ್ಲಿ ಜನರು ಗುರುತಿಸದೆ ಇರುವುದು ಒಂದು ದುರದೃಷ್ಟಕರ ಅಂಶವೆಂದು ತಿಳಿಯುತ್ತದೆ. ಇಂತಹ ನಾಯಕರಿಗೆ ಜನರು ಸಾರ್ವಜನಿಕ ಚುನಾವಣೆಗಳಲ್ಲಿ ಮತ ನೀಡದೆ ಇರುವುದು ಉತ್ತಮ ಪ್ರಜಾಪ್ರಭುತ್ವ ತತ್ವಕ್ಕೆ ಹಿನ್ನೆಡೆ. ಈ ನಿಟ್ಟಿನಲ್ಲಿ ಇಂತಹ ನಾಯಕರನ್ನು ಜನರು ಗುರುತಿಸುವುದು ಇಂದಿನ ರಾಜಕೀಯದಲ್ಲಿ ಬಹಳಷ್ಟು ಅಗತ್ಯವಿದೆ. ಈ ಕಾರಣಕ್ಕಾಗಿಯೇ ಎಂತಹ ಪ್ರಬಲ ನಾಯಕರಾಗಿದ್ದರೂ ಸಾಕಷ್ಟು ಅರ್ಹತೆಗಳನ್ನು ಹೊಂದಿದ್ದರೂ ರಾಜಕೀಯದಲ್ಲಿ ಉನ್ನತಸ್ಥಾನ ಪಡೆಯದೇ ಇರುವುದು ಬೇಸರವನ್ನು ಮೂಡಿಸುವ ಅಂಶವೆನ್ನುವುದು ಸ್ಪಷ್ಟವಾಗುತ್ತದೆ.

೨೩) ವಿಶಾಲ ಮನೋಭಾವದ ನಾಯಕರು ಪಕ್ಷಾತೀತ ವ್ಯಕ್ತಿತ್ವವನ್ನು ಹೊಂದಿರುತ್ತಾರೆ ಹಾಗೂ ರಾಜಕೀಯದಲ್ಲಿ ತಮ್ಮ ಪ್ರದೇಶದ ಅಭಿವೃದ್ಧಿಗಾಗಿ ಎಂತಹ ತ್ಯಾಗಕ್ಕೂ ಸಿದ್ಧರಿರುತ್ತಾರೆ. ಎಲ್ಲ ಪಕ್ಷದ ನಾಯಕರೊಂದಿಗೆ ಆತ್ಮೀಯ

ಸಂಬಂಧ ಹೊಂದಿರುವುದರ ಮೂಲಕ ತಮ್ಮ ರಾಜಕೀಯ ಸ್ಥಾನಮಾನವನ್ನು ತ್ಯಾಗ ಮಾಡಿ ತಾವು ನೇತೃತ್ವವಹಿಸಿದ ಸಂಸ್ಥೆಗಳ ಬೆಳವಣಿಗೆಗೆ ಹಾಗೂ ತಮ್ಮ ಪ್ರದೇಶದ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂಬುವುದು ಈ ಅಧ್ಯಯನದಿಂದ ತಿಳಿಯುವುದು.

೨೪) ರಾಜಕೀಯ ಇಚ್ಛಾ ಶಕ್ತಿಯುಳ್ಳ ನಾಯಕರಿಂದ ಮಹತ್ವದ ಸಾಧನೆಗಳು ಸಾಧ್ಯವೆಂಬುದಕ್ಕೆ ಬೆಳಗಾವಿಯ ವಿಶೇಷ ಅಧಿವೇಶನವೇ ಒಂದು ಉತ್ತಮ ನಿದರ್ಶನ ಹಲವು ದಶಕಗಳಿಂದ ಹಿಂದುಳಿದ ಭಾಗದ ಜನರ ಸಮಸ್ಯೆಗಳಿಗೆ ಈ ಅಧಿವೇಶನಗಳು ಪರಿಹಾರ ಒದಗಿಸಬಲ್ಲವು. ಈ ಅಧಿವೇಶನದ ಪರಿಣಾಮವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಹೊಸ ದಿಸೆಯನ್ನು ಕೋರೆಯವರು ಒದಗಿಸಿರುವುದು ಸ್ಪಷ್ಟವಾಗುತ್ತದೆ.

ಈ ಅಧ್ಯಯನದಿಂದ ಸ್ಪಷ್ಟಪಡಿಸುವ ವಿಷಯವೆಂದರೆ ಕೆಲವೊಂದು ವಿಶಿಷ್ಟವಾದ ತತ್ವಗಳು ಹಾಗೂ ಆದರ್ಶಗಳನ್ನು ಅನುಸರಿಸುತ್ತ ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವವರು ನಾಯಕರಾಗಿ ಹೊರಹೊಮ್ಮುತ್ತಾರೆ.

ಸಲಹೆಗಳು (Suggestions) :

೧) ಕೆ. ಎಲ್. ಇ. ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರ ಮತ್ತು ಕೆ.ಎಲ್.ಇ. ಆರೋಗ್ಯ ಸೇವೆಯ ಕುರಿತು ಹೆಚ್ಚಿನ ಅಧ್ಯಯನಗಳಾಗಬೇಕು ಹಾಗೂ ಗ್ರಂಥಗಳು ಪ್ರಕಟಗೊಳ್ಳಬೇಕು.

೨) ಡಾ. ಪ್ರಭಾಕರ ಕೋರೆಯವರು ೧೯೮೪ರಿಂದ ಇಲ್ಲಿಯವರೆಗೆ ಕೆ. ಎಲ್. ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ರಾಜ್ಯಾದ್ಯಂತ ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದರ ಜೊತೆಗೆ ಹೊರ ರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ದೆಹಲಿಗಳಲ್ಲಿ ಸಂಸ್ಥೆಗಳ ಶಾಖೆಗಳನ್ನು ವಿಸ್ತರಿಸಿದರು. ವಿದೇಶಿ ನೆಲೆಗಳಾದ ಚೀನ, ಅಮೇರಿಕಾ, ಮಲೇಶಿಯಾಗಳಲ್ಲಿ ಸಂಸ್ಥೆಯ ಸಾಮ್ರಾಜ್ಯ ವಿಸ್ತರಿಸಿದ ಅವರು ಸಹಸ್ರಾರು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದಾರೆ. ಅವುಗಳ ಮೇಲೆ ಸಮಗ್ರವಾದ ಅಧ್ಯಯನಗಳು ನಡೆಯಬೇಕು.

೩) ಡಾ. ಪ್ರಭಾಕರ ಕೋರೆಯವರ ಸಾಧನೆಯ ಕ್ಷೇತ್ರಗಳು ಹಲವು. ಅವುಗಳಲ್ಲಿ ಪ್ರಮುಖವಾಗಿ ಸಹಕಾರಿ ಕ್ಷೇತ್ರಗಳಲ್ಲಿ ಅವರು ಸಾಧಿಸಿದ ಸಾಧನೆಯು ಪ್ರಮುಖವಾಗಿರುತ್ತದೆ. ಚಿಕ್ಕೋಡಿಯ ಶ್ರೀ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಶ್ರೀ ಕೋರೆಯವರು ಆಧುನೀಕರಣಗೊಳಿಸಿದ ಸಾಧನೆ ಹಾಗೂ ಅವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಅಂಕಲಿ ಅರ್ಬನ್ ಬ್ಯಾಂಕ್ ಬೆಳಗಾವಿ ಜಿಲ್ಲಾ ರಾಣಿ ಚೆನ್ನಮ್ಮ ಮಹಿಳಾ ಬ್ಯಾಂಕು ಸ್ಥಾಪನೆಯ ಮೂಲಕ ಶ್ರೀ ಪ್ರಭಾಕರ ಕೋರೆಯವರು ಕೈಗೊಂಡ ಸಹಕಾರಿ ರಂಗದ ಚಟುವಟಿಕೆಗಳ ಮೇಲೆ ಸಮಗ್ರವಾದ ಅಧ್ಯಯನಗಳು ನಡೆಯಬೇಕು.

೪) ತಾವು ಸಂಜಿವ ರಾಜಕೀಯ ಪಕ್ಷವನ್ನು ಕಟ್ಟುವಲ್ಲಿ ಹಾಗೂ ಎರಡನೆಯ ಹಂತದ ನಾಯಕರನ್ನು ಬೆಳೆಸುವಲ್ಲಿ

ವಿಶಿಷ್ಟ ನೀತಿಗಳಿಂದ ಚುನಾವಣೆಗಳಲ್ಲಿ ಪಕ್ಷದ ಉತ್ತಮ ಸಾಧನೆಗೆ ಕಾರಣವಾಗಿರುವುದರಲ್ಲಿ ಶ್ರೀ ಪ್ರಭಾಕರ ಕೋರೆಯವರ ಚಾಣಾಕ್ಷತನವನ್ನು ಹಾಗೂ ದೂರದೃಷ್ಟಿಯನ್ನು ಹೊಂದಿದವರು. ಅವರ ಈ ಪ್ರಯತ್ನದ ಫಲವಾಗಿ ಬೆಳೆದ ನಾಯಕರನ್ನು ಸಂಪರ್ಕಿಸಿ ಹೆಚ್ಚು ಹೆಚ್ಚು ಅಭಿಪ್ರಾಯಗಳನ್ನು ಸಂಗ್ರಹಿಸಿ ಶ್ರೀ ಪ್ರಭಾಕರ ಕೋರೆಯವರ ಮಾದರಿ ವ್ಯಕ್ತಿತ್ವದ ಪರಿಚಯ ಯುವಪೀಳಿಗೆಗೆ ಮಾಡಿಕೊಡುವ ಪ್ರಯತ್ನಗಳಾಗಬೇಕು.

೫) ಭವಿಷ್ಯದಲ್ಲಿ ಬೆಳಗಾವಿ ನಗರ ಎರಡನೆಯ ರಾಜ್ಯಧಾನಿಯಾಗಲಿದೆ. ಬೆಳಗಾವಿಯಲ್ಲಿ 'ಸುವರ್ಣಸೌಧ' ನಿರ್ಮಾಣದ ಕಾರ್ಯವು ಪ್ರಾರಂಭವಾಗುವ ನಿಟ್ಟಿನಲ್ಲಿ ಶ್ರೀ ಪ್ರಭಾಕರ ಕೋರೆಯವರು ಪಟ್ಟಶ್ರಮ ಅಧಿಕವಾಗಿದೆ. ಈ ನಿಟ್ಟಿನಲ್ಲಿ ಇದರ ಪ್ರಯೋಜನವನ್ನು ಸಮರ್ಪಕವಾಗಿ ಪಡೆಯುವ ಜವಾಬ್ದಾರಿಯು ಉತ್ತರ ಕರ್ನಾಟಕದ ಎರಡನೆಯ ಹಂತದ ನಾಯಕರದ್ದು. ಕೋರೆಯವರ ಈ ಕಾರ್ಯಗಳನ್ನು ಈ ಎರಡನೆಯ ಹಂತದ ನಾಯಕರನ್ನು ಮಾದರಿಯಾಗಿ ಇಟ್ಟುಕೊಂಡು ಸಮಗ್ರ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕು.

೬) ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿನ ದೋಷಗಳು ಚುನಾವಣೆಯಲ್ಲಿ ನಡೆಯುವ ಅಕ್ರಮಗಳ ನಿವಾರಣೆಗೆ ಶ್ರೀ ಪ್ರಭಾಕರ ಕೋರೆಯವರಂತಹ ಆದರ್ಶ ನಾಯಕರ ಅಭಿಪ್ರಾಯಗಳನ್ನು ವ್ಯಾಪಕವಾಗಿ ಪ್ರಚಾರಗೊಳಿಸಬೇಕು. ಅವುಗಳ ಬಗ್ಗೆ ಒಂದು ಸಮಗ್ರವಾದ ಚಿಂತನೆಯನ್ನು ನಡೆಸಿ ಪ್ರಸ್ತುತ ರಾಜಕೀಯದಲ್ಲಿ ಕಡಿಮೆಯಾಗುತ್ತಿರುವ ಮೌಲ್ಯಗಳನ್ನು ಎತ್ತಿಹಿಡಿಯಲು ಇವರನ್ನು ಬಳಸಿಕೊಳ್ಳಬೇಕು. ರಾಜಕೀಯದ ಪುನರ್‌ಸ್ಥಾಪನೆಗೆ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವಂತೆ ಮಾಡಲು ಇವರ ಆಲೋಚನೆಗಳು, ಚಿಂತನೆಗಳು ಸಾಕಷ್ಟು ಉಪಯುಕ್ತವಾದವುಗಳಾಗಿವೆ. ಇವರ ಚಿಂತನೆಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯ ರಾಜಕೀಯ ವ್ಯವಸ್ಥೆಗೆ ಇದೆ.

೭) ಪ್ರತಿಯೊಂದು ರಾಜ್ಯದಲ್ಲಿ ಶ್ರೀ ಪ್ರಭಾಕರ ಕೋರೆಯವರ ರಾಜಕೀಯ ನಾಯಕರು ಇರುತ್ತಾರೆ. ಆ ನಾಯಕರ ವ್ಯಕ್ತಿತ್ವವನ್ನು ಪರಿಚಯಿಸುವ, ಅವರು ವಿವಿಧ ಕ್ಷೇತ್ರಗಳಲ್ಲಿ ನೀಡಿದ ಮಹತ್ತರವಾದ ಕೊಡುಗೆಗಳನ್ನು ವಿವರಿಸುವ ಕೃತಿಗಳನ್ನು ಹೊರತರಲು ರಾಜ್ಯ ಸರ್ಕಾರಗಳು ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳು ಪ್ರಯತ್ನಿಸಬೇಕು.

ಆಧಾರ ಗ್ರಂಥಗಳು

ಕನ್ನಡ ಗ್ರಂಥಗಳು

1) ಹಿರೇಮಠ ವಿ. ಬಿ. (ಸಂ), 'ಪ್ರಭಾಂಕಲಿ' ಶ್ರೀ ಪ್ರಭಾಕರ ಕೋರೆಯವರ ಅಭಿನಂದನಾಗ್ರಂಥ ಶ್ರೀ ಪ್ರಭಾಕರ ಅಭಿನಂದನಾ ಸಮಿತಿ ಚಿಕ್ಕೋಡಿ, 1999.

2) ಗವಿಮಠ ಬಿ. ಎಸ್. (ಸಂ) 'ಸ್ಪಂದನ' ಕೋರೆಯವರ ಅರವತ್ತರ ಅಭಿನಂದನಾಗ್ರಂಥ ಶ್ರೀ ಪ್ರಭಾಕರ ಕೋರೆಯವರ 60ನೇ ವರ್ಷದ ಆಚರಣಾ ಸಮಿತಿ ಬೆಳಗಾವಿ, 2007.

3) ಗವಿಮಠ ಬಿ. ಎಸ್. ಮತ್ತು ಪಾಟೀಲ ಎ. ಆರ್. (ಸಂ), 'ಕೆ. ಎಲ್. ಇ. ಸೊಸೈಟಿ', ಸಂಪುಟ–1, ಕೆ. ಎಲ್. ಇ. ಪ್ರಸಾರಾಂಗ, ಬೆಳಗಾವಿ, 2002.

4) ಗವಿಮಠ ಬಿ. ಎಸ್. (ಸಂ), 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ', (ಕಿರುಹೊತ್ತಿಗೆ) ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, 1995.

5) ಹೆಬ್ಬಳ್ಳಿ ವ್ಹಿ. ವ್ಹಿ., 'ಲಾಂಛನಕ್ಕೆ ಶರಣೆಂಬೆ' ಪ್ರಸಾರಾಂಗ ಕೆ.ಎಲ್. ಇ. ಸಂಸ್ಥೆ, ಬೆಳಗಾವಿ, 2007.

6) ಚಿಂತಾಮಣಿ ಮಹೇಶ, "ಶಿ. ಶಿ. ಬಸವನಾಳರ ಜೀವನ ಮತ್ತು ಸಾಧನೆ", ಪ್ರಸಾರಾಂಗ ಕೆ. ಎಲ್. ಇ. ಸಂಸ್ಥೆ, 1998.

7) ಪಾಟೀಲ. ಎ. ಆರ್., ಗವಿಮಠ ಬಿ. ಎಸ್. 'ಯುಗ ಪುರುಷ', ಕೆ. ಎಲ್. ಇ. ಪ್ರಸಾರಾಂಗ, ಬೆಳಗಾವಿ, 2009.

8) ಹಿರೇಮಠ ಬಸಯ್ಯಾ ಹಾಗೂ ಕಲಬುರ್ಗಿ ಎಂ. ಎಂ. 'ಅರಟಾಳ ರುದ್ರಗೌಡರ ಚರಿತ್ರೆ', ಪ್ರಸಾರಾಂಗ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ, 2002.

9) ಕಟ್ಟಿಮನಿ ಎಚ್. ಎಚ್. ವಿರೂಪಾಕ್ಷನ ಎಂ. ಜಿ. (ಸಂ) 'ಬಸವನಾಳ ಸ್ಮರಣ ಸಂಪುಟ', ಬಸವನಾಳ ಸ್ಮರಣ ಸಮಿತಿ, ಧಾರವಾಡ, 1956.

10) ಪಾಲಿ. ಎಂ. ಎಸ್. (ಸಂ) 'ಹುಟ್ಟು ಹೋರಾಟಗಾರರು' ಭುವನೇಶ್ವರಿ ಪ್ರಕಾಶನ, ಬಿಜಾಪೂರ, 2006.

11) ಸರೋಜಿನಿ. ಶಿಂತ್ರಿ ಮತ್ತು ರಾಘವೇಂದ್ರರಾವ್ (ಸಂ) "ದಿ ಐರನ್ ಮ್ಯಾನ ಆರ್ಫ ಕರ್ನಾಟಕ" ಹಳ್ಳಿಕೇರಿ ಗುದ್ಲೆಪ್ಪ, "ದಕ್ಷಿಣ ಭಾರತ ಹಿಂದಿ ಪ್ರಸಾರ ಸಭಾ", ಧಾರವಾಡ, 2000.

12) ಕಲಾಂ ಅಬ್ದುಲ್ ಎ. ಪಿ. ಜೆ. ಇಂಡಿಯಾ 2020, 'ಎ. ವಿಜಿನ್ ಫಾರ್ ದಿ ನ್ಯೂ ಮಿಲೇನಿಯಂ, ಪೆಂಗ್ವಿನ ಬುಕ್ಸ ಲಿ.' ನವದೆಹಲಿ, 1998.

13) ಬಿರಾದಾರ. ಎ. ಆರ್. (ಸಂ), ಕರ್ನಾಟಕ ಸರ್ಕಾರ ಪಟೇಲ್, ಚೆನ್ನಬಸಪ್ಪ ಅಂಬಲಿ, ಉದಯ ವಿಜಾಪೂರ, 2001.

14) ಗುಂಜಾಳ. ಎಸ್. ಆರ್. (ಸಂ), 'ಬೆಳಗಾವಿಯ ಬೆಳಕು', ಸ್ಮರಣ ಸಂಪುಟ 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ, ಬೆಳಗಾವಿ.

15) ಚಂದ್ರಶೇಖರ. ಟಿ. ಆರ್. 'ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ' ಮತ್ತು ಉನ್ನತಾಧಿಕಾರಿಗಳ ಸಮಿತಿ ವರದಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಂಪುಟ ಮಾಲೆ 152, 2008.

16) ಅಂಗಡಿ ಎಸ್. ಎಂ. (ಸಂ), 'ಶತಮಾನೋತ್ಸವ ಸ್ಮರಣ ಸಂಚಿಕೆ', ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, 1989.

17) ಕುಲಕರ್ಣಿ ವಿ. ಡಿ. (ಸಂ), ಲಿಂಗರಾಜ ಕಾಲೇಜು, ರಜತೋತ್ಸವ ಸ್ಮರಣ ಸಂಚಿಕೆ, ಕೆ. ಎಲ್. ಇ. ಸಂಸ್ಥೆಯ ಲಿಂಗರಾಜು ಕಾಲೇಜು, ರಜತೋತ್ಸವ ಸಮಿತಿ, ಬೆಳಗಾವಿ, 1961.

18) ತೆಗ್ಗಿನಮನಿ, ವಿ. ವಿ. (ಸಂ), 'ಕೆ. ಎಲ್. ಇ. ಸೊಸೈಟಿಯ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ', ಕೆ. ಎಲ್. ಇ. ಸಂಸ್ಥೆ, ಬೆಳಗಾವಿ, 1966.

19) ಜಾಲಿ ಎಂ. ವಿ. (ಸಂ), 'ಆಸ್ಪತ್ರೆಯ ಕೈಪಿಡಿ (ಕಿರು ಹೊತ್ತಿಗೆ) ಕೆ. ಎಲ್. ಇ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ಬೆಳಗಾವಿ, 2008.

20) ಜಾಲಿ ಎಂ. ವ್ಹಿ. (ಸಂ) : "ಹೋಲಿಸ್ಟಿಕ್ ಮೆಡಿಸಿನ್" ಕೆ.ಎಲ್.ಇ. ಆಸ್ಪತ್ರೆ೦ಯ ವೈದ್ಯಕೀ೦ಯ ಶಿಕ್ಷಣ ಹಾಗೂ ಪ್ರಸಾರಣಾ ವಿಭಾಗ, ಬೆಳಗಾವಿ, 2003.

21) ಫಾಲಾಕ್ಷ, ಕರ್ನಾಟಕ ಇತಿಹಾಸ ಪರಿಚಯ, ಶಶಿ ಪ್ರಕಾಶನ 16ನೇ ಮುದ್ರಣ ಮೈಸೂರು.

22) ಶಿವರುದ್ರಪ್ಪಸ್ವಾಮಿ ಎಸ್. ಎನ್., ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ; ಪಾರಸ್ತ ಪ್ರಕಾಶನ, ತಿಪಟೂರು, 2000.

ಆಂಗ್ಲ ಗ್ರಂಥಗಳು

23) Ghurye G. S. Indian Recreates Democreacy, Popular Prakashan, Bombay, 1977.

24) Ghurye. G. S., Caste and Race in India, Popular Prakashan Bombay, 2004.

25) Fidler F., A Theory of Leadership Effectiveness, Macgraw Hill Fidler Company, New York, 1967.

26) Edwards Michael, Nehru; A Political Biography, Pragati Publishers, New York, 1971.

27) Ebenstein William; Great Political Thinkers, IBH Publishing Company, New York, 1975.

28) Debey S. N., Political Ideas of the Early Leaders of Indian National Congress, University of Agra, 1956.

29) Dhanapala. D. B., Eminent Indian's Nalanda Publishers, Bombay, 1947.

30) David Easton, The Political System, Alfred A Knopt Inc, New York, 1953.

31) Cooper J. B. and Mac Gaugh, Leadership Intergration Principles of Social Psychology in Leadership, Penguin Book, Ltd, Baltimore, 1969.

32) Clay Henry, Lindgren, Effective Leadership in Human Relations, Thomas Nelson and Sons, Newyork, 1954.

33) Chaudhary Nisha, Rural Power Structure in India, Krishna Publishers, New Delhi, 2005.

34) Chahar S. S., Governance at Grass root level in India Krishna Publications Ansari Road, New Delhi, 2005.

35) Campbell A. and others, The Victor Decides, Row Patterson Press, New York, 1954.

36) Brecher Michael Pt. Nehru; A Political Biography, Oxford University Press, London, 1959.

37) Borgadas, Leradership and leadership, Ashish Publishing House, New Delhi, 1979.

38) Blakely R. J., Strategies of Leadership in Human relations, Thomas Nelson and Sons Company, New York, 1954.

39) Kothari Rajani, Politics in India, Orient Longman Ltd, New Delhi.

40) Klitgard, Robart E., Controlling Corruption, Chetan Publication, New Delhi, 1975.

41) Khan Mohad. Akbar Ali and Muttalib M. A., The Theory of Local Government, Sterling Publishers Pvt. Ltd., New Delhi, 1983.

42) Khan A.M., Leader by Merit, Indian Printing works, Lahore, 1946.

43) Kalam A. P. J., India 2002, A Vision for new millennium, Penguin Book Ltd., New Delhi, 1998.

44) Kalam A. P.J., and Pillai A. S. Envisioning an Empowered Nation, MCGraw Hill Company Ltd., New Delhi, 2004.

45) Jennings E. E., An Anatomy of Ledership, Harper & Company, New York, 1960.

46) Inchal S. D., Seveye Pooje, a collection of Poems, Prabhankali, Yarbal Press, Hubli, 1999.

47) Horst Hartman, Political Parties in India, Meenakshi Prakashan, Meerut, 1982.

48) Hollander E. P., Leadership Dynamics; A Pratical Guide to Effective Relationships, The Freee Press, a Division of Macmillan Publishing Company, New York, 1978.

49) Henry Nicholas, Public Administration and Public Affacirs, Prentice Hall India, New Delhi, 1998.

50) Halappa. G. S., Dilemmas of democratic Politics in India, Manakatlas Ltd., Bombay, 1966.

51) Galton. F., Hereditary Genius; An Inquiry into its Law and Consequences, Macmillan Company, New York, 1962, Goel M. L., Political Participation in a Developing Nationa, India Asia Publishing House, Bombay, 1974.

52) Ginne M. C. and Elliot C. Social Behaviour, Hangton Mifflin Company, U.S.A., 1970.

53) Muller Edward N., Aggressive Political Particicpation, Princeton University Press, New Jersey, 1979.

54) Muddebihal R.C., Nadeda Hejjegalu, Collection of Poems, Bijapur, 2001.

55) Mittal Sheetal, Indian Politics Then and Now, Bharat Bhushan Publication, New Delhi, 2006.

56) Mathew K.M., Chief editor, Manorama Year Book, Manorama Press, Kerala, 1997.

57) Mangalamurthy S., Indian Constitution, Human Rights and Enviornment, Lakshmi Printing House, Mysore, 2004.

58) Mahajan V. D., Leaders of Nationalist Movement, Sterling Publishers, New Delhi, 1975.

59) Luthans F., Organizational Behaviour, 5th edition, Macgraw Hill Book Company, Singapur, 1989.

60) Lorenzen David, Who Invented Hinduism? Yoda Press, Cannaught Circle, New Delhi, 2006.

61) Lipset S.M., Political Man, Arnold, Heinmann Publishers, India, 1973.

62) Lane Robert E., Political Life, Why and How People Get Involved in Politics, The free Press, New York, 1959.

63) Kulkarni V. B., The Indian Triumuvirate, A Political Biography of Gandhi, Patel, Nehru, Bharatiya Vidya Bhavan, Bombay, 1969.

64) Kulkarni V.B., Problems of Indian Democracy, Bharatiya Vidya Bhavan, Bombay, 1972.

65) Krishnamani P. N., Elections Candidates and Voters, Sterling Publishers, New Delhi, 1971.

ಕೆ. ಎಲ್. ಇ. ಸಂಸ್ಥೆಯ ವರದಿಗಳು, ನಿಯತಕಾಲಿಕೆಗಳು ಹಾಗೂ ಪತ್ರಿಕೆಗಳು:

1) ಕೆ. ಎಲ್. ಇ. ಸಂಸ್ಥೆಯ ವಾರ್ತಾಪತ್ರಿಕೆಗಳು, 2000 ವರ್ಷದಿಂದ 2009 ರವರೆಗೆ ಒಟ್ಟು 09.

2) ಕೆ. ಎಲ್. ಇ. ಸಂಸ್ಥೆಯ ವಾರ್ಷಿಕ ವರದಿಗಳು, 2000–2009 ರ ವರೆಗೆ ಒಟ್ಟು 09.

3) ಕೆ. ಎಲ್. ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ಬೆಳಗಾವಿ, ವಾರ್ಷಿಕ ವರದಿಗಳು 2004 ರಿಂದ 2009 ರವರೆಗೆ ಒಟ್ಟು 5.

4) ಕೆ. ಎಲ್. ಇ. ಸಂಸ್ಥೆಯ ಉಚಿತ ಆಸ್ಪತ್ರೆಯು (ಚಾರಿಟೇಬಲ್) ಬೆಳಗಾವಿ, ವಾರ್ಷಿಕ ವರದಿಗಳು 2004 ರಿಂದ 2009 ರವರೆಗೆ ಒಟ್ಟು 5.

5) ಕೆ. ಎಲ್. ಇ. ಸಂಸ್ಥೆಯ ಡಾ. ಬಿ. ಎಂ. ಕಂಕಣವಾಡಿ ಆಯುರ್ವೇದ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಬೆಳಗಾವಿ, ವರದಿ 2006 ರಿಂದ 2009ರವರೆಗೆ ಒಟ್ಟು – 05.

6) ಕೆ. ಎಲ್. ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಮಾಹಾವಿದ್ಯಾಲಯ ಬೆಂಗಳೂರು, ವಾರ್ಷಿಕ ವರದಿಗಳು, 2007 ರಿಂದ 2009 ರವರೆಗೆ ಒಟ್ಟು 05.

7) ಕೆ.ಎಲ್. ಇ. ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಬೆಳಗಾವಿ, 2006 ರಿಂದ 2009 ರ ವರೆಗಿನ ವರದಿಗಳು 5.

8) ಕೆ. ಎಲ್. ಇ. ಸಂಸ್ಥೆಯ ಮಕ್ಕಳ ಹಾಗೂ ಮಹಿಳೆಯರ ಸಂಶೋಧನಾ ಕೇಂದ್ರ ಬೆಳಗಾವಿ, ವರದಿಗಳು 2006 ರಿಂದ 2009 ರವರೆಗೆ.

9) ಕೆ. ಎಲ್. ಇ. ಸಂಸ್ಥೆಯ ಬಿ. ವ್ಹಿ. ಭೂಮರೆಡ್ಡಿ ತಾಂತ್ರಿಕ ಮಹಾವಿದ್ಯಾಲಯ ಹುಬ್ಬಳ್ಳಿ, ವರದಿ – 2008 ರಿಂದ ಮತ್ತು 2009 ಒಟ್ಟು 2.

10) ಕೆ. ಎಲ್. ಇ. ಸಂಸ್ಥೆಯ ಇಂಜನೀಯರಿಂಗ್ ಮಹಾವಿದ್ಯಾಲಯ ಚಿಕ್ಕೋಡಿ ವಾರ್ಷಿಕ 2008 ಮತ್ತು 2009 ಒಟ್ಟು 2.

11) ಕೆ. ಎಲ್. ಇ. ಸಂಸ್ಥೆಯ ಆಂಗ್ಲ ಮಾಧ್ಯಮಿಕ ಶಾಲೆ, ಜುಳೆ ಸೋಲಾಪೂರ (ಮಹಾರಾಷ್ಟ್ರ ರಾಜ್ಯ) ವಾರ್ಷಿಕ ವರದಿ, 2008, 1.

12) ಕೆ. ಎಲ್. ಇ. ಸಂಸ್ಥೆಯ ಬಸವಶ್ರೀ ಇಂಟರ ನ್ಯಾಶನಲ್ ಸ್ಕೂಲ್ ದೆಹಲಿ, ವಾರ್ಷಿಕ ವರದಿ, 2008, ಒಟ್ಟು 01.

13) ಕೆ. ಎಲ್. ಇ. ಸಂಸ್ಥೆಯ ಎಸ್. ಎಮ್. ಎಸ್. ಮಹಾವಿದ್ಯಾಲಯ ಅಥಣಿ, ವಾರ್ಷಿಕ ವರದಿ, 2006 ರಿಂದ 2008 ರವರೆಗೆ ಒಟ್ಟು 3.

14) ಕೆ. ಎಲ್. ಇ. ಸಂಸ್ಥೆಯ ಸಂಸ್ಥೆಯು ಕಾನೂನು ಮಹಾವಿದ್ಯಾಲಯ, ಬೆಂಗಳೂರು ವಾರ್ಷಿಕ ವರದಿ 2006, ಒಟ್ಟು 1.

15) ಕೆ. ಎಲ್. ಇ. ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, ಬೆಂಗಳೂರು, ವಾರ್ಷಿಕ ವರದಿಗಳು, 2008 ಮತ್ತು 2009, ಒಟ್ಟು 02.

16) ಕೆ. ಎಲ್. ಇ. ಸಂಸ್ಥೆಯ ಔಷಧಿ ಮಹಾವಿದ್ಯಾಲಯ, ನಿಪ್ಪಾಣಿ ವಾರ್ಷಿಕ ವರದಿ, 2006, ಒಟ್ಟು 01.

17) ಕೆ. ಎಲ್. ಇ. ಸಂಸ್ಥೆಯ ಜೆ. ಟಿ. ಮಹಾವಿದ್ಯಾಲಯ ಗದಗ, ವಾರ್ಷಿಕ ವರದಿ 2006 ಮತ್ತು 2007 ಒಟ್ಟು 02.

18) ಕೆ. ಎಲ್. ಇ. ಸಂಸ್ಥೆಯ ಬಸವಪ್ರಭು ಕೋರೆ ಮಹಾವಿದ್ಯಾಲಯ ಚಿಕ್ಕೋಡಿಯ ವಾರ್ಷಿಕ ವರದಿ 2008 ಮತ್ತು 2009, ಒಟ್ಟು 2.

19) ಕೆ. ಎಲ್. ಇ. ಸಂಸ್ಥೆಯ ಲಿಂಗರಾಜ ಸ್ವಾಯತ್ತ ಮಹಾವಿದ್ಯಾಲಯದ ವಾರ್ಷಿಕ ವರದಿಗಳು 2006 ರಿಂದ 2009ರವರೆಗೆ, ಒಟ್ಟು 5.

20) ಕೆ. ಎಲ್. ಇ. ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರ ವರದಿ, ದಿನಾಂಕ 9–6–2009.

21) ಕೆ. ಎಲ್. ಇ. ಸಂಸ್ಥೆಯ ಹಾರ್ಟ ಪೌಂಡೇಶನ ವಾರ್ಷಿಕ ವರದಿಗಳು, 2008 ರಿಂದ 2009, ಒಟ್ಟು 2.

22) ಶ್ರೀ ಕೃಷ್ಣಾ ದೂಧಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಚಿಕ್ಕೋಡಿ ವಾರ್ಷಿಕ ವರದಿಗಳು 1990 ರಿಂದ 2009 ರವರೆಗೆ ಒಟ್ಟು 15.

23) ಶ್ರೀ ಪ್ರಭಾಕರ ಕೋರೆ ಕ್ರೇಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ಅಂಕಲಿ ಇದರ 20ನೇ ವಾರ್ಷಿಕ ವರದಿ 2007 ರಿಂದ 2008, ಒಟ್ಟು 1.

24) ಶ್ರೀ ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ ನಿಯಮಿತ ಅಂಕಲಿ ಅಡಿಟ್ ವರದಿ.
ಶ್ರೀ. ವ್ಹಿ. ಆಯ್. ಕರಾಡರ ಮತ್ತು ಸಿಬ್ಬಂದಿ ಚಾರ್ಟರ ಅಕೌಟಂಟ, ಬೆಳಗಾವಿ 2007 – 2008 ಇವರ ವರದಿ.

25) ಬೆಳಗಾವಿ ಜಿಲ್ಲಾ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ ನಿಯಮಿತ ಬೆಳಗಾವಿ 12ನೇ ವಾರ್ಷಿಕ ವರದಿ ಮತ್ತು ಅಡಾವೆ ಪತ್ರಿಕೆ 2007 ಮತ್ತು 2008.

26) ಬೆಳಗಾವಿ ಜಿಲ್ಲಾ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ ನಿಯಮಿತ ಬೆಳಗಾವಿ 13ನೇ ವಾರ್ಷಿಕ ವರದಿ ಮತ್ತು ಅಡಾವೆ ಪತ್ರಿಕೆ 2008 ಮತ್ತು 2009.

27) ಕೆ. ಎಲ್. ಇ. ಸಂಸ್ಥೆಯ ಕೃಷಿ ಹಾಗೂ ಸಂಶೋಧನಾ ಕೇಂದ್ರ ಬೆಳಗಾವಿ. ವಾರ್ಷಿಕ ವರದಿಗಳು. 2004 ರಿಂದ 2009 ರವರೆಗೆ ಒಟ್ಟು 5.

28) ಕೆ. ಎಲ್. ಇ. ಸಂಸ್ಥೆಯ ಔಷಧಿ ಮಹಾವಿದ್ಯಾಲಯ, ಗದಗ. ಇದರ ವಾರ್ಷಿಕ ವರದಿ 2009.

ನಿಯತಕಾಲಿಕೆಗಳು ಮತ್ತು ದಿನ ಪತ್ರಿಕೆಗಳು :

1) ಸಂಯುಕ್ತ ಕರ್ನಾಟಕ (ಕನ್ನಡ ದಿನಪತ್ರಿಕೆ) ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗ.

2) ವಿಜಯ ಕರ್ನಾಟಕ (ಕನ್ನಡ ದಿನಪತ್ರಿಕೆ) ಬೆಂಗಳೂರು, ಹುಬ್ಬಳ್ಳಿ, ಬಾಗಲಕೋಟ, ಗುಲ್ಬರ್ಗಾ, ದಾವಣಗೆರೆ.

3) ಪ್ರಜಾವಾಣಿ (ಕನ್ನಡ ದಿನಪತ್ರಿಕೆ) ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ.

4) ಕನ್ನಡ ಪ್ರಭ (ದಿನಪತ್ರಿಕೆ ಪ್ರಕಟಣೆ) ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ.

5) ಲೋಕದರ್ಶನ (ಕನ್ನಡ ದಿನಪತ್ರಿಕೆ) ಬೆಳಗಾವಿ.

6) ಕರ್ನಾಟಕ ಟೈಮ್ಸ್ (ದಿನಪತ್ರಿಕೆ) ಗೋಕಾಕ.

7) ಕನ್ನಡಮ್ಮ (ದಿನಪತ್ರಿಕ) ಬೆಳಗಾವಿ.

8) ಹಸಿರು ಕ್ರಾಂತಿ (ಕನ್ನಡ ದಿನಪತ್ರಿಕೆ) ಬೆಳಗಾವಿ.

9) ನಾಡೋಜ ಕನ್ನಡ ದಿನಪತ್ರಿಕೆ ಪ್ರಕಟಣೆ, ಬೆಳಗಾವಿ.

10) ಸಕಾಳ (ಮರಾಠಿ ದಿನಪತ್ರಿಕೆ) ಬೆಳಗಾವಿ.

11) ಪುಡಾರಿ (ಮರಾಠಿ ದಿನ ಪತ್ರಿಕೆ) ಬೆಳಗಾವಿ.

12) ಹಾಯ್ ಬೆಂಗಳೂರು (ವಾರ ಪತ್ರಿಕೆ) ಬೆಂಗಳೂರು.

13) ಲಂಕೇಶ (ವಾರ ಪತ್ರಿಕೆ) ಬೆಂಗಳೂರು.